# ಕರ್ನಾಟಕ ವಿಧಾನ ಪರಿಷತ್ತು

## ಬುಧವಾರ 31ನೇ ಜುಲೈ 2013

**ಸದನವು ವಿಧಾನಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು**

**ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

# 1) ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ವನ ಮಹೋತ್ಸವ ಆಚರಣೆ

### 801; ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)

ಅ) ಕ್ಷೀಣಿಸುತ್ತಿರುವ ಅರಣ್ಯ ಸಂಪತ್ತು ನಮ್ಮೆಲ್ಲರಿಗೂ ಸಮಸ್ಯೆ ಒಡ್ಡಿದರೂ, ಅರಣ್ಯ ಇಲಾಖೆಯು ವನಮಹೋತ್ಸವ ಆಚರಿಸುವ ಸಂದರ್ಭದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಗಿಡಗಳನ್ನು ನೆಡುವಾಗ, ಮೇಲೆ ಹಾದುಹೋಗುತ್ತಿರುವ ವಿದ್ಯುತ್ ತಂತಿಯನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದನ್ನು ತಡೆಗಟ್ಟಲು ಸರ್ಕಾರ ಹೊಸ ಮಾನದಂಡಗಳನ್ನು ರಚಿಸಿ, ಒಮ್ಮೆ ನೆಟ್ಟ ಗಿಡಗಳು ಸೊಂಪಾಗಿ ಬೆಳೆದು ಮರವಾಗಲು ಅನುಕೂಲವಾಗುವಂತೆ ವಿದ್ಯುತ್ ಇಲಾಖೆಯ ಸಹಯೋಗದೊಂದಿಗೆ ಶೀಘ್ರ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ?

### ಶ್ರೀ ಬಿ. ರಮಾನಾಥ್‌ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಅರಣ್ಯ ಇಲಾಖೆಯು ವನಮಹೋತ್ಸವ ಆಚರಿಸುವ ಸಂದರ್ಭದಲ್ಲಿ ಶಾಲಾ ಮಕ್ಕಳು ಮತ್ತು ಸಾರ್ವಜನಿಕರಲ್ಲಿ ಅರಣ್ಯದ ಬಗ್ಗೆ ಅರಿವು ಮೂಡಿಸಲು ಸಸಿಗಳನ್ನು ನೆಡುವ ಕಾರ್ಯ ಕ್ರಮಗಳನ್ನು ಇಲಾಖಾ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ. ಅಂತಹ ಸಂದರ್ಭಗಳಲ್ಲಿ ರಸ್ತೆ ಇಕ್ಕೆಲಗಳಲ್ಲಿ ಗಿಡಗಳನ್ನು ನೆಡುವಾಗ ಆದಷ್ಟು ವಿದ್ಯುತ್ ತಂತಿ ಹಾದು ಹೋಗದೆ ಇರುವ ಪ್ರದೇಶಗಳಲ್ಲಿ ಗಿಡಗಳನ್ನು ನೆಡಲಾಗುತ್ತಿದೆ. ಒಂದು ವೇಳೆ ರಸ್ತೆಯ ಎರಡು ಕಡೆಗಳಲ್ಲಿ ವಿದ್ಯುತ್ ತಂತಿ ಹಾದು ಹೋಗಿದ್ದಲ್ಲಿ ಇಂತಹ ಸ್ಥಳಗಳಲ್ಲಿ ಎತ್ತರವಾಗಿ ಬೆಳೆಯದ ಗಿಡ್ಡ (Dwarf Species) ಗಿಡಗಳನ್ನು ಮಾತ್ರ ನೆಡಲಾಗುತ್ತಿದೆ.

**ಆ)** ರಸ್ತೆಯ ಎರಡೂ ಕಡೆಗಳಲ್ಲಿ ವಿದ್ಯುತ್ ತಂತಿ ಹಾದು ಹೋದ ಸ್ಥಳಗಳಲ್ಲಿ ಕಡಿಮೆ ಎತ್ತರಕ್ಕೆ ಬೆಳೆಯುವ ಜಾತಿಯ (Dwarf Species) ಗಿಡಗಳನ್ನು ಮಾತ್ರ ನೆಡಲಾಗುತ್ತಿದೆ ಹಾಗೂ ವಿದ್ಯುತ್ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ, ಗಿಡ ಮರಗಳಿಲ್ಲದ ಕಡೆ ಅಥವಾ ಗಿಡಗಳಿಂದ ಇಂತಿಷ್ಟು ದೂರದಲ್ಲಿ ವಿದ್ಯುತ್ ಲೈನ್ ಎಳೆಯುವಂತೆ ಅವರ ಮನವೊಲಿಸಿ ಗಿಡ ಮರಗಳಿಗೆ ಹಾನಿ ಆಗದಂತೆ ಎಚ್ಚರ ವಹಿಸಲಾಗಿದೆ. ವಿದ್ಯುತ್ ತಂತಿಗಳನ್ನು ಅವಶ್ಯವಿರುವ ಕಡೆಗಳಲ್ಲಿ ವೈಜ್ಞಾನಿಕವಾಗಿ ಭೂಮಿಯೊಳಗೆ ಹಾದುಹೋಗುವಂತೆ ವ್ಯವಸ್ಥೆ ಮಾಡಲು ವಿದ್ಯುತ್ ಇಲಾಖೆಯವರ ಗಮನಕ್ಕೆ ತರಲಾಗುತ್ತಿದೆ. ರಸ್ತೆ ಬದಿಗಳಲ್ಲಿ ಗಿಡಗಳನ್ನು ನೆಡುವಾಗ ವಿದ್ಯುತ್ ಇಲಾಖೆಯವರ ಸಹಾಯವನ್ನು ಪಡೆದುಕೊಂಡು ಸಸಿ ಅಭಿವೃದ್ಧಿ ಕಾರ್ಯವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಕ್ಯಾಪ್ಟನ್ ಗಣೇಶ್‌ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ನಮ್ಮ ದೇಶದಲ್ಲಿ 33 ಪರ್ಸೆಂಟ್ ಇದ್ದ ಕಾಡು ಪ್ರದೇಶ ಈಗ 11 ಪರ್ಸೆಂಟ್‌ಗೆ ಇಳಿದಿದೆ ಎನ್ನುವುದನ್ನು ಕೇಳಿದ್ದೇನೆ. ನಾವು ಪ್ರತಿ ವರ್ಷ ವನಮಹೋತ್ಸವ ಆಚರಣೆ ಮಾಡುತ್ತೇವೆ. ಮರ-ಗಿಡಗಳ ಬಗ್ಗೆ ಸಮಾಜದಲ್ಲಿ ಜಾಗೃತಿಯುಂಟು ಮಾಡಬೇಕು, ವಿದ್ಯಾರ್ಥಿಗಳಲ್ಲಿ ಇದರ ಬಗ್ಗೆ ಪ್ರೀತಿ ಉಂಟಾಗಬೇಕೆಂದು ಈ ಆಚರಣೆ ಮಾಡುತ್ತೇವೆ. ಹಿಂದಿನ ಕಾಲದಲ್ಲಿ ನೆಟ್ಟ ಮರಗಳನ್ನು ಯಾವುದೋ ಕಾರಣಕ್ಕೆ ಕಡಿಯುತ್ತಾರೆ. ಆದರೆ ಇತ್ತೀಚಿಗೆ ವನಮಹೋತ್ಸವದ ಸಂದರ್ಭದಲ್ಲಿ ರಸ್ತೆಗಳ ಅಕ್ಕ-ಪಕ್ಕ ಗಿಡ ನೆಡಬೇಕಾದರೆ ಮೇಲಗಡೆ ಹಾದು ಹೋಗುವ ವಿದ್ಯುತ್ ತಂತಿ ಕಡೆ ಗಮನ ಕೊಡುವುದಿಲ್ಲ. ಅದರ ಕೆಳಗೆ ಬಹಳ ಎತ್ತರಕ್ಕೆ ಬೆಳೆಯುವ ಮರಗಳನ್ನು ನೆಡುತ್ತಿದ್ದಾರೆ. ಆ ಮರ 10-20 ಅಡಿ ಬೆಳೆದರೆ ಪ್ರತಿವರ್ಷ ಕೆಇಬಿಯವರು ಬಂದು ಆ ಮರಗಳನ್ನು ಕಡಿಯುತ್ತಾರೆ. ಇದೇ ಅವರ ಕೆಲಸವಾಗಿರುತ್ತದೆ. ಸ್ವಲ್ಪ ಆಕಡೆ-ಈಕಡೆ ಪ್ಲ್ಯಾನ್ ಮಾಡಿಕೊಂಡರೆ ಅಥವಾ ಕೆಇಬಿ ಮತ್ತು ಅರಣ್ಯ ಇಲಾಖೆ ಹೊಂದಾಣಿಕೆ ಮಾಡಿಕೊಂಡರೆ ಇಂತಹ ಪರಿಸ್ಥಿತಿ ಬರದ ಹಾಗೆ ಮಾಡಬಹುದು. ಮರ-ಗಿಡಗಳನ್ನು ಕಡೆದರೆ ವನಮಹೋತ್ಸವದ ಉದ್ದೇಶ ಈಡೇರುವುದಿಲ್ಲ. ಇದನ್ನು ಏಕೆ ಉಲ್ಲೇಖ ಮಾಡಿದೆ ಎಂದರೆ, ಮಂಗಳೂರಿನ ಗುರುಪುರದ ಗಂಜಿಮಠದ ಹತ್ತಿರ ಹೊಸ

ಕೈಗಾರಿಕಾ ಪ್ರದೇಶ ನಿರ್ಮಾಣವಾಗಿದೆ. ಅದ್ಭುತವಾದ ಚತುಷ್ಪಥ ರಸ್ತೆ ಮಾಡಿದ್ದಾರೆ. ಆ ರಸ್ತೆಯ ಬದಿಯಲ್ಲಿ ನೆಟ್ಟಿರುವ ಗಿಡಗಳು ಕನಿಷ್ಠ 30–35 ಅಡಿ ಎತ್ತರ ಬೆಳೆಯುತ್ತವೆ. ನೀವು ಬೇಕಾದರೆ ಹೋಗಿ ವೀಕ್ಷಣೆ ಮಾಡಿಕೊಂಡು ಬನ್ನಿ. ಸರಿಯಾಗಿ ಪವರ್‌ಲೈನ್ ಪಾಸಾಗುವ ತಂತಿ ಕೆಳಗೆ ಗಿಡಗಳನ್ನು ನೆಟ್ಟಿದ್ದಾರೆ. ಇದು ಕೇವಲ ಒಂದು ಉದಾಹರಣೆ ಅಷ್ಟೆ. ಇನ್ನು ಮುಂದಾದರೂ ಕೂಡ ಕೇವಲ ವನ ಮಹೋತ್ಸವವಲ್ಲ, ಉಳಿದ ಸಮಯದಲ್ಲಿ ಗಿಡಗಳನ್ನು ನೆಡಬೇಕಾದರೆ ಮತ್ತೆ ಮತ್ತೆ ಅವುಗಳನ್ನು ಕಡಿಯುವ ಪರಿಸ್ಥಿತಿ ನಿರ್ಮಾಣ ಆಗದ ಹಾಗೆ ಕಾರ್ಯಕ್ರಮ ರೂಪಿಸಬೇಕು ಎನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಬಿ. ರಮಾನಾಥ್ ರೈ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಹೇಳಿರತಕ್ಕಂಥ ಮಾತನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಅವರು ನಿರ್ದಿಷ್ಟವಾದ ಒಂದು ಉದಾಹರಣೆಯನ್ನು ನಮಗೆ ಕೊಟ್ಟಿದ್ದಾರೆ. ಬಹುಶಃ ಅಲ್ಲಿ Export Promotion Industrial Park (E.P.I.P.) ಮಾಡಬೇಕೆಂದು, ಅದು ನನ್ನ ಹಳೆಯ ಕ್ಷೇತ್ರ ಕೂಡ ಆಗಿದೆ. ಅಲ್ಲಿ ಗಿಡ ನೆಟ್ಟಿರತಕ್ಕಂಥದ್ದರ ಮೇಲೆ ವಿದ್ಯುತ್ ಲೈನ್ ಹಾದು ಹೋಗಿರುತ್ತದೆ ಎಂಬುದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಸಾಮಾನ್ಯವಾಗಿ ನಾವು ಗಿಡಗಳನ್ನು ನೆಡತಕ್ಕಂಥ ಸಂದರ್ಭದಲ್ಲಿ ವಿದ್ಯುತ್ ಲೈನ್ ಹೋಗದಂತಹ ಪ್ರದೇಶ ಮತ್ತು ಮರಗಳು ಎತ್ತರಕ್ಕೆ ಬೆಳೆಯುವುದಕ್ಕೆ ಅವಕಾಶ ಆಗಿರುವ ಜಾಗದಲ್ಲಿ ಮಾಡುತ್ತೇವೆ. ಆದರೆ, ಕೆಲವು ಕಡೆ ತಪ್ಪಾಗಿ ಗಿಡಗಳನ್ನು ನೆಟ್ಟಿರುವಂಥದ್ದು ಇರಬಹುದು. ಆದರೆ, ಎತ್ತರಕ್ಕೆ ಬೆಳೆಯದಂತಹ ಗಿಡಗಳನ್ನು ನೆಡುವುದಕ್ಕೆ ನಾವು ಈಗಾಗಲೇ ಇಲಾಖೆಗೆ ಸೂಚನೆಯನ್ನು ಕೊಟ್ಟಿದ್ದೇವೆ. ಅವರು ಹೇಳಿರತಕ್ಕಂಥ ಮಾತನ್ನು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಈ ವಿದ್ಯುತ್ ಲೈನ್ ಹೋಗಿರುವಂತಹ ಪ್ರದೇಶದಲ್ಲಿ ಗಿಡಗಳನ್ನು ನೆಡದಂತೆ ನಾವು ಸೂಕ್ತವಾದ ಸೂಚನೆಯನ್ನು ಕೊಡುತ್ತೇವೆ ಮತ್ತು ಏನಾದರೂ ಮರಗಳು ಎತ್ತರಕ್ಕೆ ಬೆಳೆದಿದ್ದರೆ ವಿದ್ಯುತ್ ಇಲಾಖೆಯವರ ಜೊತೆಯಲ್ಲಿ ಸಂಪರ್ಕ ಮಾಡಿ ಆ ಕಡೆ ಈ ಕಡೆ ಲೈನ್ ಹಾಕುವುದಕ್ಕೆ ಅವರಿಗೆ ಸೂಚನೆ ಕೊಡುತ್ತೇವೆ.

**ಮೀನು ಕೃಷಿಕರಿಂದ ಮೀನು ಮರಿ ಖರೀದಿ**

**1172; ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಶಿವಮೊಗ್ಗ ಜಿಲ್ಲೆಯ ನೋಂದಾಯಿತ ಬಡ ಮೀನು ಕೃಷಿಕರಲ್ಲಿ 2012–13ನೇ ಸಾಲಿಗೆ ಸುಮಾರು 2 ಕೋಟಿ ಮೀನುಮರಿಗಳಿದ್ದು ಸರಾಸರಿ 80 ರಿಂದ 100 ಎಂ.ಎಂ. ಗಾತ್ರದ ಮೀನುಮರಿಗಳನ್ನು ಖರೀದಿಸಿ ಜಿಲ್ಲೆಯ ಜಲಾಶಯ ಮತ್ತು ನದಿಭಾಗಗಳಲ್ಲಿ ದಾಸ್ತಾನು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಸದರಿ ಮೀನುಮರಿಗಳನ್ನು ಖರೀದಿಸಿ ದಾಸ್ತಾನು ಮಾಡದಿರಲು ಕಾರಣವೇನು; (ವಿವರ ನೀಡುವುದು)

ಇ) ಸದರಿ ಮೀನುಮರಿಗಳನ್ನು ಯಾವಾಗ ಖರೀದಿಸಲಾಗುವುದು? (ನಿಗದಿತ ಅವಧಿ ಸಹಿತ ವಿವರ ನೀಡುವುದು)

**ಶ್ರೀ ಕೆ. ಅಭಯ ಚಂದ್ರ (ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರು)**

ಅ) ಹೌದು.

ಆ) ಮೀನುಮರಿ ದಾಸ್ತಾನು ಮಾಡುವ ಬಗ್ಗೆ 2012–13ನೇ ಸಾಲಿನವರೆಗೆ ರಾಜ್ಯ ವಲಯದಲ್ಲಿ ಯಾವುದೇ ಯೋಜನೆ ಇರುವುದಿಲ್ಲ ಆದಾಗ್ಯೂ, ಮೀನುಗಾರರಿಗೆ ಅನುಕೂಲವಾಗುವಂತೆ ವಿಶೇಷವಾಗಿ ಡಿಸೆಂಬರ್ 2012ರಲ್ಲಿ ಶಿವಮೊಗ್ಗ ಜಿಲ್ಲೆಯ ಮೀನು ಕೃಷಿಕರಿಂದ ಎನ್.ಎಫ್.ಡಿ.ಬಿ. ಯೋಜನೆಯಡಿ 50.67 ಲಕ್ಷ ಹಾಗೂ ಜಿಲ್ಲಾ ಪಂಚಾಯತ್ ಯೋಜನೆಯಡಿ 4.22 ಲಕ್ಷ ಬಲಿತ ಬಿತ್ತನೆ ಮೀನುಮರಿಗಳನ್ನು ಖರೀದಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಜಲಾಶಯಗಳಲ್ಲಿ ಮೀನುಮರಿಗಳನ್ನು ₹ 2.00 ಕೋಟಿ ವೆಚ್ಚದಲ್ಲಿ ಬಿತ್ತನೆ ಮಾಡಲಾಗುವುದು ಎಂದು ಘೋಷಿಸಲಾಗಿದೆ. ಆದ್ದರಿಂದ, ಸದರಿ

ಹೊಸ ಯೋಜನೆಗೆ ಮಂಜೂರಾತಿ ದೊರೆತ ನಂತರ ಲಭ್ಯವಿರುವ ಮೀನುಮರಿಗಳನ್ನು ಖರೀದಿಸಲು ಕ್ರಮವಹಿಸಲಾಗುವುದು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1172ರ**

**ಅನುಬಂಧ**

**2012–13ನೇ ಸಾಲಿನಲ್ಲಿ ಎನ್‌ಎಫ್‌ಡಿಬಿ ಅನುದಾನದಿಂದ ಬಲಿತ ಮೀನುಮರಿ ಖರೀದಿಸಿ ದಾಸ್ತಾನು ಮಾಡಿರುವ ವಿವರಗಳು**

| ಜಲಾಶಯ/ಕೆರೆ ವಿವರ | ಶಿವಮೊಗ್ಗ ಜಿಲ್ಲೆ ಮೀನು ಕೃಷಿಕರಿಂದ | ಇತರೆ ಜಿಲ್ಲೆಗಳ ಮೀನು ಕೃಷಿಕರಿಂದ | ಒಟ್ಟು |
|---|---|---|---|
| ಕೆ.ಆರ್. ಸಾಗರ | 1473000 | 150000 | 1623000 |
| ತಿಪ್ಪಗೊಂಡನಹಳ್ಳಿ | 252183 | – | 252183 |
| ಹಾರಂಗಿ | 400000 | – | 400000 |
| ಯಗಚಿ | 358000 | – | 358000 |
| ಅಲಮಟ್ಟಿ | 641000 | 1272914 | 1913914 |
| ಬೆಣ್ಣೆತೊರಾ | – | 605000 | 605000 |
| ಹೇಮಾವತಿ | 962000 | – | 962000 |
| ನುಗು | 708000 | – | 708000 |
| ಕೆರೆಗಳು (5) | 272949 | – | 272949 |
| **ಒಟ್ಟು** | **5067132** | **2027914** | **7095046** |

## 2012–13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಯೋಜನೆಯಡಿ ಬಲಿತ ಮೀನುಮರಿ ಖರೀದಿಸಿ ದಾಸ್ತಾನು ಮಾಡಿರುವ ವಿವರಗಳು

| ಜಲಾಶಯ | ಶಿವಮೊಗ್ಗ ಜಿಲ್ಲೆ ಮೀನು ಕೃಷಿಕರಿಂದ | ಒಟ್ಟು |
|---|---|---|
| ಮದಗಾ | 76000 | 76000 |
| ಅಂಜನಾಪುರ | 146000 | 146000 |
| ತುಂಗಾ | 200000 | 200000 |
| **ಒಟ್ಟು** | **422000** | **422000** |

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆಯ ನೋಂದಾಯಿತ ಬಡ ಮೀನು ಕೃಷಿಕರಲ್ಲಿ 2012–13ನೇ ಸಾಲಿಗೆ ಸುಮಾರು 2 ಕೋಟಿ ಮೀನುಮರಿಗಳಿದ್ದು, ಶಿವಮೊಗ್ಗ ಜಿಲ್ಲೆಯ ವಿಶೇಷ ಏನೆಂದರೆ, ಒಂದಷ್ಟು ನಿರುದ್ಯೋಗಿ ಯುವಕರುಗಳಿಗೆ ತರಬೇತಿ ಕೊಡತಕ್ಕಂಥ ಪ್ರಯತ್ನ ಮೀನುಗಾರಿಕೆ ಇಲಾಖೆಯಿಂದ ಆಗಿದೆ. ಅದರಲ್ಲೂ ವಿಶೇಷವಾಗಿ ಮೀನುಮರಿಗಳನ್ನು ಸಾಕುವಂಥದ್ದು. ಇದಕ್ಕೆ ಸುಮಾರು ನೋಂದಾಯಿತವಾಗಿರತಕ್ಕಂಥ ತರಬೇತಿ ಪಡೆದಂತಹ ನಿರುದ್ಯೋಗಿ ಯುವಕರ ಸಂಖ್ಯೆ ಸುಮಾರು 180 ಆಗಿದ್ದು ಇವರುಗಳು ಶಿವಮೊಗ್ಗ ಮತ್ತು ಭದ್ರಾವತಿ ಈ ಎರಡು ತಾಲ್ಲೂಕುಗಳಿಂದ ಇದ್ದಾರೆ. ಕಳೆದ ವರ್ಷ ಅವರು ತಯಾರು ಮಾಡಿದಂತಹ ಮೀನುಮರಿಗಳ ಸಂಖ್ಯೆ ಸುಮಾರು ಎರಡು ಕೋಟಿಗಿಂತ ಜಾಸ್ತಿ ಇದೆ. ಈಗ ಮತ್ತೆ ಅವರು ಪಡೆದಂತಹ ತರಬೇತಿಯ ಆಧಾರದ ಮೇಲೆ ಇಲಾಖೆಯಿಂದ ಸಿಗತಕ್ಕಂಥ ಸಹಕಾರದ ಆಧಾರದ ಮೇಲೆ ಮೀನುಮರಿಗಳನ್ನು ಸಾಕಿದ್ದಾರೆ. ಆದರೆ, ಮೀನುಮರಿಗಳ ಬೇಡಿಕೆ ಇರುವುದರಿಂದ ಸರ್ಕಾರದ ಕಡೆಯಿಂದಲೇ ಮೀನುಮರಿಗಳ ಖರೀದಿ ಆಗಬೇಕಾಗಿರತಕ್ಕಂಥದ್ದು. ಬೇರೆ ಕಡೆ ಅದಕ್ಕೆ ಸಿಗಬೇಕಾಗಿರತಕ್ಕಂಥ ಮಾರುಕಟ್ಟೆ ಇಲ್ಲದಂತಹ ಸಂದರ್ಭದಲ್ಲಿ 2012–13 ರಲ್ಲಿ ಸುಮಾರು 50 ಲಕ್ಷ ಮೀನುಮರಿಗಳನ್ನು ಸರ್ಕಾರ ಖರೀದಿ ಮಾಡಿದೆ, ಇಲ್ಲ ಎಂದೇನೂ ಅಲ್ಲ. ಆದರೆ, ಈಗಾಗಲೇ ಸುಮಾರು 2 ಕೋಟಿಗಿಂತಲೂ ಜಾಸ್ತಿ ಮೀನುಮರಿಗಳಿವೆ. 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಎರಡು ಕೋಟಿ

ರೂಪಾಯಿಗಳು ಮೀನುಮರಿಗಳನ್ನು ದಾಸ್ತಾನು ಮಾಡುವುದಕ್ಕೋಸ್ಕರ ಪ್ರಸ್ತಾಪ ಆಗಿದೆ ಎನ್ನುವುದನ್ನು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ, ಈ ಎರಡು ಕೋಟಿ ರೂಪಾಯಿಗಳು ಈ ಎರಡು ತಾಲ್ಲೂಕುಗಳಿಗೇ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿಗೆ ಸರ್ಕಾರದ ಇಲಾಖೆಯ ಕಡೆಯಿಂದ ಕೊಂಡುಕೊಳ್ಳುವುದಕ್ಕೆ ಆಗುತ್ತದೆಯೇ? ಕೊಂಡುಕೊಳ್ಳುವುದಕ್ಕೆ ಆಗದಿದ್ದರೆ ಅವರೆಲ್ಲರಿಗೂ ಕೂಡ ಒಂದು ರೀತಿಯಾಗಿ ಆ ಉದ್ಯೋಗದ ಮೇಲೆಯೇ ನಿರಾಸೆ ಆಗುವಂತಹ ಸಂದರ್ಭ ಇದೆ. ಈಗ ತಮ್ಮ ಸಣ್ಣ ಜಮೀನುಗಳಲ್ಲೇ ಕೊಳಗಳನ್ನು ಮಾಡಿಕೊಂಡು ಅವರು ಕೊಡತಕ್ಕಂಥ ಮೀನುಮರಿಗಳನ್ನು ಸಾಕುತ್ತಿದ್ದಾರೆ. ಮೀನುಮರಿಗಳನ್ನು ಸರ್ಕಾರದ ಕಡೆಯಿಂದಲೇ ಜಾಸ್ತಿ ಖರೀದಿ ಮಾಡುವಂಥದ್ದಾಗಬೇಕಾಗುತ್ತದೆ. ಬೇಡಿಕೆ ಎಲ್ಲಿದೆ ಎಂಬುದು ಅವರಿಗೆ ಗೊತ್ತಿಲ್ಲ. ಹಾಗಾಗಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಕೊಡತಕ್ಕಂಥ 2 ಕೋಟಿ ರೂಪಾಯಿಗಳು ಯಾವುದೇ ಕಾರಣಕ್ಕೂ ಸಾಕಾಗುವುದಿಲ್ಲ.

**ಶ್ರೀ ಕೆ. ಅಭಯಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಣ್ಣನವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ, ಕಳೆದ ವರ್ಷ ಸುಮಾರು 55 ಲಕ್ಷ ರೂಪಾಯಿಗಳನ್ನು ಮಾತ್ರ ಕೊಡಲಾಗಿತ್ತು. ಈ ವರ್ಷ ನಮ್ಮ ಹೊಸ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಎರಡು ಕೋಟಿ ರೂಪಾಯಿಗಳನ್ನು additional ಆಗಿ ಮೀನುಮರಿಗಳ ಖರೀದಿಗಾಗಿ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಅದನ್ನು ಹೆಚ್ಚಿಸಲಾಗುವುದು. ಆದರೆ, ಕಳೆದ ಸಲಕ್ಕಿಂತ ಈ ಸಲ ಮೂರು ಪಟ್ಟು ಹೆಚ್ಚು ಕೊಟ್ಟಿದ್ದಾರೆ. ಅದರಲ್ಲಿ ಅವರ ಎರಡು ತಾಲ್ಲೂಕುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಕೆಲಸ ಮೀನುಗಾರಿಕೆ ಇಲಾಖೆಯಿಂದ ಮಾಡುತ್ತೇವೆ ಎಂಬುದನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೇ, ನಮ್ಮ ಆತಂಕವೇನೆಂದರೆ, ಈಗ ಆಯವ್ಯಯ ಭಾಷಣದಲ್ಲಿ ಪ್ರಸ್ತಾಪ ಮಾಡಿರತಕ್ಕಂಥದ್ದು ಕೇವಲ ಎರಡು ಕೋಟಿ ರೂಪಾಯಿಗಳು ಮಾತ್ರ. ಆ

ಎರಡು ಕೋಟಿ ರೂಪಾಯಿಗಳು ಇಡೀ ರಾಜ್ಯಕ್ಕೆ ಪ್ರಸ್ತಾಪವಾಗಿರುವಂಥದ್ದು. ಸರ್ಕಾರ ಕೊಟ್ಟಿರುವ ಈ ಹಣ ಎರಡು ತಾಲ್ಲೂಕುಗಳಿಗೇ ಸಾಕಾಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅದನ್ನು ಸ್ವಲ್ಪ ನೋಡಿ.

**ಶ್ರೀ ಕೆ. ಅಭಯಚಂದ್ರ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಚರ್ಚಿಸುತ್ತೇವೆ.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಂದಿಲ್ಲ.

**ಸಭಾಪತಿಯವರು:–** ನಾನು ನಿಮ್ಮ ಪ್ರಶ್ನೆ ಬಂದಾಗ ನಿಮ್ಮನ್ನು ಕರೆಯುತ್ತೇನೆ. List ಮಾಡಿಕೊಂಡಿದ್ದೇನೆ. ನಿಮ್ಮ ಹೆಸರು ಬಂದಾಗ ಕರೆಯುತ್ತೇನೆ, ಕುಳಿತುಕೊಳ್ಳಿ.

**ಚಿಕ್ಕೋಡಿ ಹಾಗು ಹುಕ್ಕೇರಿ ತಾಲ್ಲೂಕಿನ ಕೆರೆಗಳಿಗೆ ನೀರು**

**198(774); ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥ.ಸಂ. ಕ್ಷೇತ್ರ)**

**ಅ)** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಹಾಗೂ ಹುಕ್ಕೇರಿ ತಾಲ್ಲೂಕಿನ ಕೆರೆಗಳಿಗೆ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಳ್ಳುವ ವಿಚಾರ ಸರ್ಕಾರದ ಮುಂದಿದೆಯೇ;

**ಆ)** ಹಾಗಿದ್ದಲ್ಲಿ, ಸದರಿ ಯೋಜನೆಗಳಿಗೆ ತಗಲುವ ಅಂದಾಜು ವೆಚ್ಚ ಎಷ್ಟು;

**ಇ)** ಪ್ರಸಕ್ತ ಆಯವ್ಯಯದಲ್ಲಿ ಸದರಿ ಯೋಜನೆಗೆ ಹಣ ತೆಗೆದಿರಿಸಲಾಗಿದೆಯೇ?

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

**ಅ)** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 4 ಕೆರೆಗಳು ಮತ್ತು ಹುಕ್ಕೇರಿ ತಾಲ್ಲೂಕಿನ 18 ಕೆರೆಗಳು (ಒಟ್ಟು 22 ಕೆರೆಗಳು) – ಇವುಗಳಿಗೆ ಹಿರಣ್ಯಕೇಶಿ ನದಿಯಿಂದ ನೀರು ತುಂಬಿಸುವ ಪ್ರಸ್ತಾವನೆ ಇದ್ದು, ಸರ್ಕಾರದ ಆದೇಶ ಸಂಖ್ಯೆ:ಜಸಂಇ/39/ವಿಬ್ಯಾಇ/2013 ಬೆಂಗಳೂರು,

ದಿನಾಂಕ: 19–03–2013 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

**ಚಿಕ್ಕೋಡಿ ತಾಲ್ಲೂಕಿನ 4 ಕೆರೆಗಳ ವಿವರ:–** 1) ವಡ್ರಾಳ ಕೆರೆ. 2) ಜೈನಾಪೂರ ಕೆರೆ. 3) ಮುಗಳಿ ಕೆರೆ. 4) ಮಜಲಟ್ಟಿ ಕೆರೆ

**ಹುಕ್ಕೇರಿ ತಾಲ್ಲೂಕಿನ 18 ಕೆರೆಗಳ ವಿವರ:–** 1) ಕರಜಗಾ ಇಂಗು ಕೆರೆ 2) ಬೋರಗಲ್ ಇಂಗು ಕೆರೆ 3) ಹರಗಾಪೂರ ಇಂಗು ಕೆರೆ 4) ಹಿಟ್ನಿ ಇಂಗು ಕೆರೆ 5) ಅಮ್ಮಣಗಿ ಇಂಗು ಕೆರೆ 6) ಮತ್ತಿವಾಡ ಕೆರೆ 7) ಯಲಿಮುನವಳ್ಳಿ ಕೆರೆ 8) ನಾಗನೂರು ಸಣ್ಣ ನೀರಾವರಿ ಕೆರೆ 9) ಬೆಳವಿ ಇಂಗು ಕೆರೆ 10) ಕಮತನೂರು ಸಣ್ಣ ನೀರಾವರಿ ಕೆರೆ 11) ಕೇಸ್ತಿ ಇಂಗು ಕೆರೆ 12) ಭೈರಾಪೂರ ಸಣ್ಣ ನೀರಾವರಿ ಕೆರೆ 13) ಕಣಗಲಾ ಇಂಗು ಕೆರೆ 14) ಅಂಕಲಿ–ಸೈಟ–II ಸಣ್ಣ ನೀರಾವರಿ ಕೆರೆ 15) ರಾಶಿಂಗ ಸಣ್ಣ ನೀರಾವರಿ ಕೆರೆ 16) ಸಾರಾಪೂರ ಇಂಗು ಕೆರೆ 17) ಬೆಲ್ಲದ ಬಾಗೇವಾಡಿ ಸಣ್ಣ ನೀರಾವರಿ ಕೆರೆ 18) ಯಲಿಮುನವಳ್ಳಿ ಇಂಗು ಕೆರೆ (ಹಂಜ್ಯಾನಟ್ಟಿ).

**ಆ)** ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚ ₹ 49.50 ಕೋಟಿ

**ಇ)** ಪ್ರಸಕ್ತ 2013–14ನೇ ಸಾಲಿನ ಆಯವ್ಯಯದಲ್ಲಿ ಸದರಿ ಯೋಜನೆ ₹ 2.00 ಕೋಟಿಗಳನ್ನು ತೆಗೆದಿರಿಸಲಾಗಿರುತ್ತದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ 4 ಕೆರೆಗಳು ಮತ್ತು ಹುಕ್ಕೇರಿ ತಾಲ್ಲೂಕಿನ 18 ಕೆರೆಗಳು, ಇವುಗಳಿಗೆ ಹಿರಣ್ಯಕೇಶಿ ನದಿಯಿಂದ ನೀರು ತುಂಬಿಸುವ ಪ್ರಸ್ತಾವನೆ ಇದ್ದು, ಸರ್ಕಾರ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಕೈಗೆತ್ತಿಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಮತ್ತು ಉತ್ತರ ಕರ್ನಾಟಕದ ಜೀವ ನದಿ ಆಗಿರುವ ಕೃಷ್ಣೆಯಿಂದ ಚಿಕ್ಕೋಡಿ, ಅಥಣಿ ಮತ್ತು ರಾಯಬಾಗ ತಾಲ್ಲೂಕುಗಳಲ್ಲೂ ಕೂಡ ಇಂತಹ ಪ್ರಸ್ತಾವನೆಗಳು

ಸರ್ಕಾರದ ಮುಂದೆ ಇವೆ. ಸನ್ಮಾನ್ಯ ಸಚಿವರು ಉತ್ತರ ಕರ್ನಾಟಕ ಭಾಗದಿಂದ ಬಂದಿರುವವರು. ಅವರಿಗೆ ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಮೇಲೆ ಪ್ರೀತಿ. ನಾನು ಅವರಿಗೆ ತಮ್ಮ ಮುಖಾಂತರ ವಿನಂತಿ ಮಾಡುತ್ತಿದ್ದೇನೆ. ಇವತ್ತು ತಾವೆಲ್ಲರೂ ನೋಡುತ್ತಿದ್ದೀರಿ, ಮಹಾರಾಷ್ಟ್ರದಲ್ಲಿ ಮಳೆಯಾದರೆ ಕೃಷ್ಣೆಗೆ ನೀರು ಹರಿದು ಬರುವುದು. ಪ್ರತಿ ವರ್ಷ ಆ ನೀರು ಅನೇಕ ಸಂದರ್ಭಗಳಲ್ಲಿ ಸಮುದ್ರದ ಪಾಲಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬೆಳಗಾವಿ ಜಿಲ್ಲೆಯಲ್ಲಿ ಮಳೆಯಾಗದಿದ್ದರೂ ಕೂಡ ಕೃಷ್ಣಾ ನದಿಗೆ ಪ್ರವಾಹ ಬರುವುದು ಮಾತ್ರ ಯಾವಾಗಲೂ ತಪ್ಪಿಲ್ಲ. ಇಂತಹ ಸಂದರ್ಭದಲ್ಲಿ ವಿಶೇಷವಾಗಿರತಕ್ಕಂಥ ಕೃಷ್ಣಾ ನದಿಯ ನೀರನ್ನು ವ್ಯವಸ್ಥಿತವಾಗಿ ಬಳಕೆ ಮಾಡುವಂತಹ ಯೋಜನೆಗಳನ್ನು ಸರ್ಕಾರ ರೂಪಿಸಬೇಕು. ವಿಶೇಷವಾಗಿ ಚಿಕ್ಕೋಡಿ, ಅಥಣಿ ಮತ್ತು ರಾಯಬಾಗ ತಾಲ್ಲೂಕುಗಳಲ್ಲಿ ಈ ನೀರಾವರಿ ಯೋಜನೆಗಳು ಅಂದರೆ ಕೆರೆಗಳನ್ನು ತುಂಬಿಸುವಂತಹ ಯೋಜನೆಯನ್ನು ಹೆಚ್ಚು ತ್ವರಿತಗತಿಯಲ್ಲಿ ಮಾಡಿದರೆ ಇವತ್ತು ಮಳೆಗಾಲದಲ್ಲಿ ಮಹಾರಾಷ್ಟ್ರದಿಂದ ಹರಿದು ಬರುವಂತಹ ನೀರು ಸಮುದ್ರ ಸೇರುವುದನ್ನು ತಪ್ಪಿಸಬಹುದು ಮತ್ತು ನೀರಾವರಿ ಕ್ಷೇತ್ರಕ್ಕೆ ಒಳಪಡದೆ ಇರುವಂತಹ ಅನೇಕ ತಾಲ್ಲೂಕುಗಳಿಗೆ ಇಂತಹ ಯೋಜನೆಗಳಿಂದ ಜನರಿಗೆ ಉಪಯೋಗವಾಗುತ್ತದೆ. ಇಂತಹ ಯೋಜನೆಗಳಿಗೆ ವಿಶೇಷ ಗಮನ ಕೊಟ್ಟು ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮುಖಾಂತರ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕವಟಗಿಮಠರವರು ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ನಾವು ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಸುಮಾರು 49.50 ಕೋಟಿ ರೂಪಾಯಿ ಆಗಿದೆ. ಪ್ರಸಕ್ತ 2013-14ನೇ ಸಾಲಿನ ಆಯವ್ಯಯದಲ್ಲಿ ಸದರಿ ಯೋಜನೆಗೆ ಎರಡು ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿರುತ್ತದೆ. ಈಗಾಗಲೇ survey and investigation ಗೆ ಟೆಂಡರ್‌ನ್ನು ಕರೆದಿದ್ದೇವೆ. Vedic Consultants ರವರಿಗೆ ಎರಡು ವಾರಗಳ ಹಿಂದೆ ಕೊಟ್ಟಿದ್ದೇವೆ. ಅವರಿಗೆ ಮೂರು ತಿಂಗಳ ಕಾಲಾವಧಿ ಇದೆ. ಅವರು ನಿರ್ದಿಷ್ಟ

ಪ್ರಶ್ನೆಯನ್ನು ಕೇಳಿರುವುದನ್ನು ನಾವು ಮಾಡುತ್ತೇವೆ. ಅದಲ್ಲದೆ, ಅವರ ಸಲಹೆ ಏನಿದೆ, ಇವತ್ತು ಕೃಷ್ಣಾ ನದಿಯಲ್ಲಿ, ಅವರು ಹೇಳಿರುವುದು ಸತ್ಯ ಇದೆ. ಅಲ್ಲಿ ನೂರಾರು ಟಿಎಂಸಿ ನೀರು ವ್ಯರ್ಥವಾಗಿ ಹರಿದು ಹೋಗುತ್ತಿದೆ. ಕೃಷ್ಣಾ ನ್ಯಾಯಾಧೀಕರಣ ಬ್ರಿಜೇಶ್ ಕುಮಾರ್‌ರವರ ಎರಡನೇ ತೀರ್ಪು ಬಂತು. ಆ ತೀರ್ಪಿನಲ್ಲಿ ಹೆಚ್ಚುವರಿ ನೀರಿನಲ್ಲಿ ನಮಗೆ 177 ಟಿಎಂಸಿ ನೀರು ಏನು ಬಂದಿದೆ, ನಮ್ಮ ಸರ್ಕಾರದ ಆದ್ಯತೆ ಏನೆಂದರೆ, ಐದು ವರ್ಷದ ಕಾಲಾಮಿತಿಯಲ್ಲಿ ಆಲಮಟ್ಟಿ ಎತ್ತರವನ್ನು 519 ರಿಂದ 524.246 ಗೆ ಏರಿಸಬೇಕು. ನಮ್ಮ ಪಾಲಿನ ನೀರನ್ನು ನಾವು ಸಂಪೂರ್ಣವಾಗಿ ಹಿಡಿದುಕೊಂಡು ಅದನ್ನು ಬಳಸಿಕೊಳ್ಳಬೇಕು ಎನ್ನುವುದು ಈ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಾವು ಗಂಭೀರವಾಗಿ ಚಿಂತನೆ ಮಾಡುತ್ತಿದ್ದೇವೆ. ಆ ನಿಟ್ಟಿನಲ್ಲಿ ನಾವು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಎಲ್ಲೆಲ್ಲಿ ಈ ರೀತಿಯ ಕೆರೆಗಳಿಗೆ ಮತ್ತು ಇನ್ನಿತರ ಕೆರೆಗಳಿಗೆ ನೀರು ಹಿಡಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಆ ಎಲ್ಲಾ ಯೋಜನೆಗಳನ್ನು ನಾವು ಇವತ್ತು ಗಂಭೀರವಾಗಿ ಪರಿಗಣಿಸುತ್ತೇವೆ. ಎಲ್ಲಿಂದ ಬೇಡಿಕೆ ಬರುತ್ತದೆ ಅವೆಲ್ಲಾ ನಾವು ಸರ್ವೆ ಮಾಡಿ investigate ಮಾಡಿ ಆ project report ನ್ನು ತೆಗೆದುಕೊಂಡು ಸಾಧ್ಯತೆಯನ್ನು ಪರಿಶೀಲಿಸಿ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಚುಕ್ಕೆ ಪ್ರಶ್ನೆ 958**

**(ಮಾನ್ಯ ಸದಸ್ಯರಾದ ಡಿ.ಎಸ್. ವೀರಯ್ಯನವರು ಸದನದಲ್ಲಿ ಗೈರುಹಾಜರಾಗಿದ್ದರು)**

**11.30 ಗಂಟೆ**

**ಅಸಂಘಟಿತ ಕ್ಷೇತ್ರಗಳಲ್ಲಿನ ಕಾರ್ಮಿಕರ ಕ್ಷೇಮಾಭಿವೃದ್ಧಿ**

**1136; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಅಸಂಘಟಿತ ಕ್ಷೇತ್ರಗಳಲ್ಲಿರುವ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನು:

ಆ) ಈ ವರ್ಗದ ಜನರ ಆರೋಗ್ಯ ರಕ್ಷಣೆಗಾಗಿ ಸರ್ಕಾರವು ಹೆಚ್ಚಿನ ಆದ್ಯತೆ ನೀಡುವುದೇ; ಹಾಗಿದ್ದಲ್ಲಿ, ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು;

ಇ) ಬಾಲ ಕಾರ್ಮಿಕರನ್ನು ರಕ್ಷಿಸಲು ಸರ್ಕಾರವು ಕೈಗೊಳ್ಳುತ್ತಿರುವ ವಿಶೇಷ ಕ್ರಮಗಳೇನು?

**ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)**

ಅ)

1. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು, ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ಅನ್ನು ಜಾರಿಗೆ ತಂದಿರುತ್ತದೆ ಹಾಗೂ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಗಳು 2009 ನ್ನು ರಚಿಸಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿರುತ್ತದೆ.
2. ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೇಂದ್ರ ಸರ್ಕಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ನ್ನು ಜಾರಿಗೆ ತಂದಿದ್ದು, ರಾಜ್ಯ ಸರ್ಕಾರವು 2006ರಲ್ಲಿ ನಿಯಮಗಳನ್ನು ರೂಪಿಸಿ ಕಾಯ್ದೆಯನ್ನು ಜಾರಿಗೆ ತಂದಿರುತ್ತದೆ.

ಅಸಂಘಟಿತ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುತ್ತದೆ.

ಅ) ಎನ್‌ಪಿಎಸ್ ಲೈಟ್ – ಸ್ವಾವಲಂಭನ್ ಪಿಂಚಣಿ ಯೋಜನೆ

ಆ) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ

ಇ) ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರಿಗೆ ಕಲ್ಯಾಣ ಯೋಜನೆಗಳನ್ನು ಒದಗಿಸಲು ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ರಚಿಸಿದ್ದು, ಮಂಡಳಿ ವತಿಯಿಂದ 12 ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

ಆ) ಹೌದು ಅಸಂಘಟಿತ ವಲಯದ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಮತ್ತು ಈ ವರ್ಗದ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಈಗಾಗಲೇ 17.45 ಲಕ್ಷ ಫಲಾನುಭವುಗಳನ್ನು ಯೋಜನೆಯಡಿ ನೋಂದಾಯಿಸಿ ಆರೋಗ್ಯ ಸೌಲಭ್ಯ ಕಲ್ಪಸಲಾಗಿದೆ. ಪ್ರಸ್ತುತ ಆರ್ಥಿಕ ಸಾಲಿನಲ್ಲಿ 43 ಲಕ್ಷ ಫಲಾನುಭವಿಗಳನ್ನು ನೋಂದಾಯಿಸಲು ಕ್ರಮ ವಹಿಸಲಾಗುತ್ತಿದೆ.

ನೋಂದಾಯಿತ ಕಟ್ಟಡ ಮತ್ತು ಇತರೆ ಕಾರ್ಮಿಕರಿಗೆ ಆರೋಗ್ಯ ಸೌಲಭ್ಯಗಳನ್ನೂ ಸಹ ಒದಗಿಸಲಾಗುತ್ತಿದೆ.

ಇ) ಬಾಲ ಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿಗಾಗಿ ಕಾರ್ಮಿಕ ಇಲಾಖೆಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಬಾಲಕಾರ್ಮಿಕರನ್ನು ಪತ್ತೆಹಚ್ಚುವ ಮತ್ತು ಪುನರ್ವಸತಿಗೊಳಿಸುವ ಸಲುವಾಗಿ ನಿಯಮಿತವಾಗಿ ತಪಾಸಣೆಗಳನ್ನು

ನಡೆಸಲಾಗುತ್ತಿರುವುದಲ್ಲದೆ, ಅನಿರೀಕ್ಷಿತ ತಪಾಸಣೆಗಳನ್ನು ಸಹ ನಡೆಸಲಾಗುತ್ತಿದೆ.

2) ಕೆಲಸದಿಂದ ಬಿಡುಗಡೆಗೊಳಿಸಿದ ಬಾಲಕಾರ್ಮಿಕರಿಗೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಬಾಲ–ಕಾರ್ಮಿಕ ಯೋಜನೆ (ಎನ್‌ಸಿಎಲ್‌ಪಿ) ಮತ್ತು ರಾಜ್ಯ ಸರ್ಕಾರದ ರಾಜ್ಯ ಬಾಲಕಾರ್ಮಿಕ ಯೋಜನೆ (ಎಸ್‌ಸಿಎಲ್‌ಪಿ) ಯಡಿಯಲ್ಲಿ ವಿಶೇಷ ವಸತಿ ಶಾಲೆಗಳನ್ನು ನಡೆಸುವುದರ ಮೂಲಕ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ.

3) ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಪುನರ್ವಸತಿ ಸೊಸೈಟಿಗಳನ್ನು ಸ್ಥಾಪಿಸಿದ್ದು, ಜಿಲ್ಲಾಧಿಕಾರಿಗಳ ಮೂಲಕ ಬಾಲಕಾರ್ಮಿಕರ ಪುನರ್ವಸತಿ ಮತ್ತು ಇತರೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

4) ಅಪಾಯಕಾರಿ ಸಂಸ್ಥೆಗಳಲ್ಲಿ ಬಾಲಕಾರ್ಮಿಕರನ್ನು ನೇಮಕ ಮಾಡಿಕೊಂಡಿರುವ ಮಾಲೀಕರಿಂದ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಪ್ರಕಾರ ₹ 20,000/– ಗಳ ಪರಿಹಾರವನ್ನು ವಸೂಲಿ ಮಾಡಿ ಬಾಲಕಾರ್ಮಿಕರ ಪುನರ್ವಸತಿ ಮತ್ತು ಕಲ್ಯಾಣ ನಿಧಿಯನ್ನು ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.

5) ಬಾಲಕಾರ್ಮಿಕರ ಬಗ್ಗೆ ದೂರು ನೀಡಲು, ದೂರವಾಣಿ ನಿಯಂತ್ರಣ ಕೇಂದ್ರವನ್ನು ಕೇಂದ್ರ ಕಛೇರಿಯಲ್ಲಿ ಸ್ಥಾಪಿಸಲಾಗಿದೆ. ಆನ್‌ಲೈನ್ ಮೂಲಕ ದೂರುಗಳನ್ನು ದಾಖಲಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

6) ಮಹಿಳಾ ಮತ್ತು ಮಕ್ಕಳ ಇಲಾಖೆಯ '1098' (ಉಚಿತ ದೂರವಾಣಿ) ಮಕ್ಕಳ ಸಹಾಯವಾಣಿ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ

7) ಪತ್ತೆಹಚ್ಚಲಾದ ಬಾಲಕಾರ್ಮಿಕರ ಬಗ್ಗೆ ನಿಗಾವಹಿಸುವ ಸಲುವಾಗಿ ಅಂತರ್ಜಾಲ ಆಧಾರಿತ ಬಾಲಕಾರ್ಮಿಕ ನಿಗಾ ವ್ಯವಸ್ಥೆ (Web Based Child Labour Tracking System) ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ಎಲ್ಲ ಜಿಲ್ಲೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

(11.30 ಘಂಟೆ)

**(ಸಭಾಪತಿಯವರ ಉಪಸ್ಥಿತಿ)**

**(ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ಪರವಾಗಿ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಪ್ರಶ್ನೆಯನ್ನು ಕೇಳಿದರು)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅಸಂಘಟಿತ ಕಾರ್ಮಿಕರಿಗೆ ಕೇಂದ್ರ ಸರ್ಕಾರ ಸಾಮಾಜಿಕ ಭದ್ರತಾ ಕಾಯಿದೆ 2008 ಮತ್ತು ಕರ್ನಾಟಕ ನಿಯಮಗಳು 2009 ರ ಪ್ರಕಾರ ರಚನೆ ಮಾಡಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿರುತ್ತದೆ ಎಂದು ತಿಳಿಸಿದ್ದೀರಿ. ಅಸಂಘಟಿತ ಕಾರ್ಮಿಕರ ಕ್ಷೇಮಭಿವೃದ್ಧಿಗಾಗಿ 12 ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದ್ದೀರಿ. ಅವು ಯಾವ್ಯಾವ ಯೋಜನೆಗಳು ಎಂಬುದನ್ನು ಹೇಳಿಲ್ಲ. ಎರಡನೆಯದಾಗಿ, ತಾಲ್ಲೂಕು ಮಟ್ಟದಲ್ಲಿರತಕ್ಕಂತಹ ತಮ್ಮ ಇಲಾಖೆಯ ಸಿಬ್ಬಂದಿಗಳು ಏನು ಇದ್ದಾರೆ ಅವರು ಒಬ್ಬರೋ ಇಬ್ಬರೋ ಇರುತ್ತಾರೆ. ಅದರಲ್ಲಿ ಒಬ್ಬರು ರಜೆ ಹೋದರೆ ಮತ್ತೊಬ್ಬರು ಬಾಗಿಲು ಹಾಕಿ ಹೋಗತಕ್ಕಂತಹ ಪರಿಸ್ಥಿತಿ ಬಹುತೇಕ ತಾಲ್ಲೂಕುಗಳಲ್ಲಿ ಇದೆ. ಯಾವ ಉದ್ದೇಶಕ್ಕಾಗಿ ಈ ಯೋಜನೆಯನ್ನು ಮತ್ತು ಅಸಂಘಟಿತ ಕಾರ್ಮಿಕರಿಗೆ ಭದ್ರತೆಯನ್ನು ತರಬೇಕೆಂಬ ದೃಷ್ಟಿ ಇಟ್ಟುಕೊಂಡಿದ್ದೀರಿ ಅದಕ್ಕೆ ಪೂರಕವಾಗಿ ಈ ಸಿಬ್ಬಂದಿಗಳನ್ನು ತುಂಬತಕ್ಕಂತಹ ಕೆಲಸ ನಿಮ್ಮಿಂದ ಆಗಬೇಕಾಗಿದೆ.

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್:–** ಮಾನ್ಯ ಸಭಾಪತಿಯವರೆ, ಮಾನ್ಯ ಮತ್ತಿಕಟ್ಟಿಯವರ ಪರವಾಗಿ ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅಸಂಘಟಿತ ಕಾರ್ಮಿಕರ ಕಲ್ಯಾಣವನ್ನು ಗಮನದಲ್ಲಿ ಇಟ್ಟುಕೊಂಡು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೋಸ್ಕರ 12 ಯೋಜನೆಗಳನ್ನು ಸರ್ಕಾರ ಜಾರಿಗೆ ತಂದಿದೆ. ಈ ಕಾರ್ಮಿಕರು ಆಸ್ಪತ್ರೆಗಳಲ್ಲಿ ಒಳ ರೋಗಿಯಾಗಿ ಆಸ್ಪತ್ರೆ ಸೇರಿದರೆ ಅವರಿಗೆ ಧನಸಹಾಯವನ್ನು ಕೊಡುತ್ತಿದ್ದೇವೆ.

ಅಪಘಾತವಾದರೆ ಅವರಿಗೆ ಪರಿಹಾರವನ್ನು ಕೊಡತಕ್ಕಂತಹ ಪ್ರಮುಖ ಕೆಲಸವನ್ನು ಮಾಡುತ್ತಿದ್ದೇವೆ. ಮತ್ತು ದೊಡ್ಡ ದೊಡ್ಡ ಖಾಯಿಲೆಗಳು ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಜೋಡಣೆ, ಕಣ್ಣಿನ operation, ಮೂಳೆ operation, ಪಾರ್ಶ್ವವಾಯು ಚಿಕಿತ್ಸೆ, ಗರ್ಭಕೋಶದ operation, ಅಸ್ತಮಾ ಚಿಕಿತ್ಸೆ ಮುಂತಾದ ಪ್ರಮುಖ ಖಾಯಿಲೆಗಳಿಗೆ ಚಿಕಿತ್ಸೆ ಮಾಡುವುದಕ್ಕೆ ನಮ್ಮಲ್ಲಿ ಅವಕಾಶ ಇದೆ. ಇದರ ಜೊತೆಗೆ ಅಂಗವಿಕಲತೆ ಆದರೆ ಅವರಿಗೆ ಪಿಂಚಣಿಯನ್ನು ಕೊಡುವ ಯೋಜನೆಯೂ ಇದರಲ್ಲಿ ಸೇರಿದೆ. ಮತ್ತು ಆ ಕಾರ್ಮಿಕರು ಸತ್ತರೆ ಅವರ ಅಂತ್ಯಕ್ರಿಯೆಗಾಗಿ ಅವರ ಕುಟುಂಬ ವರ್ಗದವರಿಗೆ 4000 ರೂಪಾಯಿ ಕೊಡುವ ಯೋಜನೆ ಇದೆ. ಮತ್ತು ಅವರ ಕುಟುಂಬ ವರ್ಗದವರಿಗೆ 50,000 ರೂಪಾಯಿಗಳನ್ನು ಧನ ಸಹಾಯವಾಗಿ ಕೊಡುವ ಯೋಜನೆಯೂ ಕೂಡ ಇದೆ. ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯವನ್ನು ಕೊಡುವ ಯೋಜನೆ ಕೂಡ ಜಾರಿಯಲ್ಲಿ ಇದೆ. ಮೊದಲ ಎರಡು ಹೆರಿಗೆಗೆ 15,000 ರುಪಾಯಿಗಳ ಸಹಾಯಧನವನ್ನು ಕೊಡುವ ಯೋಜನೆ ನಮ್ಮ ಇಲಾಖೆಯಲ್ಲಿ ಇದೆ. ಇದೆಲ್ಲದರ ಜೊತೆಯಲ್ಲಿ ಶೈಕ್ಷಣಿಕ ಧನಸಹಾಯವನ್ನು ಮಾಡುತ್ತಿದ್ದೇವೆ. ಇಬ್ಬರು ಮಕ್ಕಳಿಗೆ ಸೀಮಿತವಾಗಿ ಅವರ ವಿದ್ಯಾಭ್ಯಾಸಕ್ಕೋಸ್ಕರವಾಗಿ ಸೀಮಿತವಾಗಿ ಅವರಿಗೆ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಧನ ಸಹಾಯವನ್ನು ನೀಡುವ ಕೆಲಸವನ್ನು ಮಾಡುತ್ತಿದ್ದೇವೆ. ಜೊತೆಗೆ ಕಾರ್ಮಿಕರ ಮಕ್ಕಳ ಮದುವೆಗೆ 50,000 ರೂಪಾಯಿ ಧನಸಹಾಯವನ್ನು ನಮ್ಮ ಮಂಡಳಿಯ ವತಿಯಿಂದ ಕೊಡುವ ಯೋಜನೆ ಇದೆ. ಇದೆಲ್ಲದರ ಜೊತೆಗೆ ಉಪಕರಣಗಳ ಧನ ಸಹಾಯವಾಗಿ 5 ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಹಾಗೂ 50 ವರ್ಷ ಪೂರೈಸಿದ ಮಹಿಳೆಗೆ ಹಾಗೂ 55 ವರ್ಷ ಪೂರೈಸಿದ ಪುರುಷ ಫಲಾನುಭವಿಗಳಿಗೆ ಮಾನಸಿಕವಾಗಿ 500 ರೂಪಾಯಿ ಪಿಂಚಣಿ ಕೊಡುವ ವ್ಯವಸ್ಥೆ ಇದೆ. ಮುಂದಿನ ದಿನಗಳಲ್ಲಿ ಇದನ್ನು ಹೆಚ್ಚು ಮಾಡುವ ಆಲೋಚನೆ ಸರ್ಕಾರದ ಮುಂದೆ ಇದೆ. ಮುಂದಿನ ದಿನಗಳಲ್ಲಿ ಇದನ್ನು ಹೆಚ್ಚು ಮಾಡುತ್ತೇವೆ. ಇವೆಲ್ಲದರ ಜೊತೆಗೆ ಅವರು ಮನೆ ಕಟ್ಟುವುದಕ್ಕೆ ಇಲ್ಲವೇ ಮನೆ

ಖರೀದಿ ಮಾಡುವುದಕ್ಕೆ ಮುಂದೆ ಬಂದರೆ 50,000 ಧನಸಹಾಯ ಮಾಡತಕ್ಕಂತಹ ಕಾರ್ಯಕ್ರಮ ನಮ್ಮಲ್ಲಿ ಇದೆ. ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತಿದೆ. Ex-gratia ಎನ್ನುವಂತಹ ಪರಿಹಾರಧನವನ್ನು ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತಿದೆ. ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರು ಕಟ್ಟಡ ಕುಸಿತದಿಂದ ಮೃತರಾದರೆ ಅವರ ಅವಲಂಬಿತರಿಗೆ 50,000 ರೂಪಾಯಿ ಪರಿಹಾರವನ್ನು ನೀಡಲಾಗುತ್ತಿದೆ. ಇಂತಹುದೇ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಲ್ಲಿ 10,000 ರೂಪಾಯಿ Ex-gratia ಅನ್ನು ನೀಡಲಾಗುತ್ತಿದೆ. ಈ 12 ಯೋಜನೆಗಳನ್ನು ರೂಪಿಸುವ ಮೂಲಕ ನಮ್ಮ ಕಾರ್ಮಿಕರ ಹಿತವನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಇದನ್ನು ಮಾಡುತ್ತಿದೆ. ತಾಲ್ಲೂಕು ಮಟ್ಟದಲ್ಲಿ ನಿಮ್ಮ ಇಲಾಖೆಯಿಂದ ಒಬ್ಬರು ಇಲ್ಲವೇ ಇಬ್ಬರು ಅಲ್ಲಿನ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಇರುತ್ತಾರೆ. ಇಬ್ಬರ ಪೈಕಿ ಒಬ್ಬರು ರಜೆಯ ಮೇಲೆ ತೆರಳಿದರೆ ಆ ಬಡ ಕಾರ್ಮಿಕರ ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಖಾಲಿ ಇರತಕ್ಕಂತಹ ಹುದ್ದೆಗಳಿಗೆ ಭರ್ತಿ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆದು ಅದನ್ನು ಭರ್ತಿ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

**ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ**

**1081: ಡಾ|| ಎ.ಹೆಚ್. ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ)**

**ಅ)** ಹಿಂದಿನ ಸರ್ಕಾರ ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣದ ಬಗ್ಗೆ ಘೋಷಿಸಿದ್ದು, ಇದನ್ನು ಅನುಷ್ಠಾನಕ್ಕೆ ತರಲಾಗಿದೆಯೇ;

**ಆ)** ಅನುಷ್ಠಾನಕ್ಕೆ ತರದಿದ್ದಲ್ಲಿ, ಕಾರಣಗಳೇನು ಮತ್ತು ಯಾವಾಗ ಅನುಷ್ಠಾನಕ್ಕೆ ತರಲಾಗುವುದು;

ಇ) ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ಯಾವಾಗ ಕಲ್ಪಿಸಲಾಗುವುದು?

**ಶ್ರೀ ಕೆ. ಅಭಯ ಚಂದ್ರ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು)**

ಅ) ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣದ ಬಗ್ಗೆ ಹಿಂದಿನ ಸರ್ಕಾರ ಘೋಷಿಸಿರುವುದು ನಿಜ. ಈ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿನಾಂಕ: 18–10–2012ರಲ್ಲಿ ದಾವಣಗೆರೆ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ.

ಆ) ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿಗೆ ಅಂದಾಜು ಪಟ್ಟಿ, ನೀಲಿ ನಕ್ಷೆಯೊಂದಿಗೆ ಪೂರ್ಣ ಪ್ರಮಾಣದ ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ, ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

ಇ) ಬಂದಿದೆ

ಈ) ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಪ್ರಸ್ತಾವನೆ ಬಂದ ನಂತರ, ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

**ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ದಾವಣೆಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ Synthetic Track ನಿರ್ಮಾಣದ ಬಗ್ಗೆ ತಮಗೂ ಕೂಡ ಗೊತ್ತಿದೆ. ಹಿಂದೆ ಮಂತ್ರಿಗಳಾಗಿದ್ದ ಮಾನ್ಯ ಗೂಳಿ ಹಟ್ಟಿ ಶೇಖರ್ ಅವರು ಅಲ್ಲಿಗೆ ಬಂದಿದ್ದಾಗ ಈ Synthetic Track ನಿರ್ಮಾಣ ಮಾಡುತ್ತೇವೆಂಬ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ತಮ್ಮ ಉತ್ತರದಲ್ಲಿ ದಿನಾಂಕ 18–10–2012 ರಲ್ಲಿ ದಾವಣಗೆರೆ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಪತ್ರವನ್ನು ಬರೆಯಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದಷ್ಟು ಬೇಗನೆ

ಅವರಿಂದ ವರದಿಯನ್ನು ತರಿಸಿಕೊಂಡು ಈ Synthetic Track ಅನ್ನು ಕಾಲಮಿತಿಯೊಳಗೆ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿರತಕ್ಕಂತಹ ಮೂಲಭೂತ ಸೌಲಭ್ಯಗಳ ಬಗ್ಗೆ ದಿನಾಂಕ 12–10–2012 ರಂದು ಅಂದಿನ ಕ್ರೀಡಾ ಸಚಿವರಾಗಿದ್ದಂತಹ ಮಾನ್ಯ ಅಪ್ಪಚ್ಚು ರಂಜನ್ ಅವರು ಅಲ್ಲಿಗೆ ಬಂದಿದ್ದಾಗ ಅದನ್ನೆಲ್ಲಾ ವೀಕ್ಷಣೆ ಮಾಡಿ ಅಲ್ಲಿ ಗ್ಯಾಲರಿ ಮತ್ತು ಉಳಿದ ಮೂಲಭೂತ ಸೌಕರ್ಯಕ್ಕೆ ನೀವು ವರದಿಯನ್ನು ಕಳಿಸಿಕೊಡಿ ಎಂದು ಹೇಳಿದರು. ಅಲ್ಲಿನ ಲೋಕಸಭಾ ಸದಸ್ಯರಾದ ಮಾನ್ಯ ಸಿದ್ದೇಶ್ವರ ಅವರು ಮಾನ್ಯ ಸಚಿವರಿಗೆ ಪತ್ರವನ್ನು ಕೂಡ ಬರೆದಿದ್ದರು. ಅದರ ಹಿನ್ನೆಲೆಯೊಳಗೆ 25ನೇ ತಾರೀಖು . . . .

**ಸಭಾಪತಿಯವರು:–** ನೀವು ಮುಂದುವರೆಸಿ.

**(ಈ ಹಂತದಲ್ಲಿ ಮಾನ್ಯ ನಾಣಯ್ಯನವರು suit ನಲ್ಲಿ ತಮ್ಮ ಸ್ಥಳಕ್ಕೆ ಬಂದರು)**

**ಶ್ರೀ ಕೆ. ಗೋವಿಂದರಾಜ್:–** ಇಂದು ನಮ್ಮ ಸಭಾ ನಾಯಕರಾದ ಎಸ್.ಆರ್. ಪಾಟೀಲ್ ಅವರ ಹುಟ್ಟಿದ ಹಬ್ಬ. ಅದಕ್ಕೋಸ್ಕರ ನಮ್ಮ ವಿರೋಧ ಪಕ್ಷದ ಇಬ್ಬರು ನಾಯಕರು suit ನಲ್ಲಿ ಸದನಕ್ಕೆ ಬಂದಿದ್ದಾರೆ.

**ಸಭಾಪತಿಯವರು:–** ಅದಕ್ಕೇ ನಾನು ಆಮೇಲೆ ಹೇಳುತ್ತೇನೆಂದು ಹೇಳಿದ್ದು.

**ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ:–** 2012ರ ಅಕ್ಟೋಬರ್ 25ನೇ ತಾರೀಖು ಈ ಬಗ್ಗೆ ತಮಗೆ ವರದಿ ಬಂದಿದೆ. ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಪ್ರಸ್ತಾವನೆ ಬಂದ ನಂತರ ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಮ್ಮ ಉತ್ತರದಲ್ಲಿ ಇದೆ. 25ನೇ ತಾರೀಖಿನಂದು ತಮಗೆ ಕಳಿಸಿರುವ ವರದಿಯಲ್ಲಿ ಈ ಗ್ಯಾಲರಿಯನ್ನು ನಿರ್ಮಾಣ ಮಾಡುವುದಕ್ಕೆ ಒಂದು ಕೋಟಿ ರೂಪಾಯಿ ಬೇಕಾಗಿದೆ ಎಂದು ನಿರ್ಮಿತಿ ಕೇಂದ್ರದಿಂದ ವರದಿಯನ್ನು ತರಿಸಿಕೊಂಡು ತಮಗೆ ಕಳಿಸಿಕೊಟ್ಟಿದ್ದೇವೆ. ಆ ಗ್ಯಾಲರಿ 615 ಮೀಟರ್ ಆಗತಕ್ಕಂಥಾದ್ದು ಇದೆ. ಅದರಲ್ಲಿ ನಮ್ಮ ಹಿಂದಿನ ಸಚಿವರು, ಶಾಸಕರು, ಸಂಸತ್ ಸದಸ್ಯರು ಎಲ್ಲರೂ

ಕೂಡ ಅನುದಾನವನ್ನು ನೀಡಿ ನಾವು 100 ಮೀಟರ್ ಅನ್ನು ನಿರ್ಮಾಣ ಮಾಡಿದ್ದೇವೆ. ಉಳಿದಂತಹದ್ದನ್ನು ಮಾಡುವ ಸಲುವಾಗಿ ತಾವು ಹಣವನ್ನು ಬಿಡುಗಡೆ ಮಾಡುವುದರ ಬಗ್ಗೆ ಒಂದು ಭರವಸೆಯನ್ನು ಕೊಡಬೇಕೆಂದು ವಿನಂತಿ.

**ಶ್ರೀ ಕೆ. ಅಭಯಚಂದ್ರ:–** ಮಾನ್ಯ ಸಭಾಪತಿಯವರೆ, ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ Synthetic Track ನಿರ್ಮಾಣದ ಬಗ್ಗೆ ಹಿಂದಿನ ಸರ್ಕಾರ ಘೋಷಿಸಿರುವುದು ನಿಜ. ಈ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿನಾಂಕ 18–10–2012ರಲ್ಲಿ ದಾವಣಗೆರೆ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಪತ್ರವನ್ನು ಬರೆಯಲಾಗಿದೆ. Synthetic Athletic Track ನಿರ್ಮಾಣ ಕಾಮಗಾರಿಗೆ ಅಂದಾಜು ಪಟ್ಟಿ, ನೀಲಿ ನಕ್ಷೆಯೊಂದಿಗೆ ಪೂರ್ಣ ಪ್ರಮಾಣದ ಪ್ರಸ್ತಾವನೆ ಸರ್ಕಾರಕ್ಕೆ ಬಂದ ನಂತರ ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಇವತ್ತು ಹಣದ ಕೊರತೆ ಕೂಡ ಇದೆ. ಜಿಲ್ಲಾ ಕೇಂದ್ರಗಳಲ್ಲಿ ಮಾಡುವುದು ಬಹಳ ಅವಶ್ಯಕತೆ ಇದೆ. ಇದನ್ನು ಕೇಂದ್ರ ಸರ್ಕಾರದ ಯೋಜನೆಗೆ ಈ ವರ್ಷ ಸೇರ್ಪಡೆ ಮಾಡಿ Synthetic Track ಮಾಡುವ ಕೆಲಸವನ್ನು ಮಾಡುತ್ತೇವೆ. ಗ್ಯಾಲರಿ ಬಗ್ಗೆ ಕೇಳಿದ್ದೀರಿ. ಹಣದ ಲಭ್ಯತೆಯ ಮೇರೆಗೆ ಮಾಡುವ ಕೆಲಸವನ್ನು ಮಾಡುತ್ತೇವೆ.

**ಡಾ॥ ಎ.ಹೆಚ್. ಶಿವಯೋಗಿ ಸ್ವಾಮಿ:–** ಇನ್ನೊಂದು ವಿಚಾರದ ಬಗ್ಗೆ ಮಾತ್ರ ಹೇಳುತ್ತೇನೆ. ಮಾನ್ಯ ಸಚಿವರು ಈ ಸದನದಲ್ಲಿ ಉತ್ತರವನ್ನು ಕೊಡಬೇಕಾದರೆ, ಇಂಗ್ಲೀಷಿನಲ್ಲಿ ಒಂದು ರೀತಿ ಕನ್ನಡದಲ್ಲಿ ಒಂದು ರೀತಿ ಇರುತ್ತದೆ. ಈ ರೀತಿ ಇದ್ದರೆ ತಪ್ಪಾಗುತ್ತದೆ. ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇಲಾಖೆಯಲ್ಲಿ ಏಕೆ ಈ ರೀತಿ ಆಗುತ್ತದೆಯೋ ಗೊತ್ತಿಲ್ಲ. ಒಂದು ವಿಚಾರವನ್ನು ನಾನು ಇಲ್ಲಿ ಓದುತ್ತೇನೆ. ಕನ್ನಡದಲ್ಲಿ ಉತ್ತರ ಕೊಟ್ಟಿದ್ದಿದ್ದರೆ ತೊಂದರೆ ಇರುತ್ತಿರಲಿಲ್ಲ. ನನ್ನ ಪ್ರಶ್ನೆಯಲ್ಲಿ "Has Government noticed that there is lack in infrastructural facilities at Davanagere District Stadium" ಎಂದರೆ "Yes" ಎಂದು ಹೇಳಿದ್ದೀರಿ. "If it is not, when it will be provided?" ಅಂದರೆ ಏನು? "Has Government noticed..."

ಎಂದು ಕೇಳಿದಾಗ "Yes" ಎಂದು ಹೇಳುತ್ತಾರೆ. "If it is not..." ಎಂದರೆ whether the Government did not notice ಅದು ಎಂತಲಾ? ಅದಕ್ಕೆ ಉತ್ತರ ಏನು ಕೊಟ್ಟಿದ್ದೀರಿ ಎಂದು ನೋಡಿ – "The proposal will be send..." ಅದು 'sent' ಆಗಬೇಕಾಗಿತ್ತು ಆದರೆ ಇಲ್ಲಿ 'send' ಎಂದು ಆಗಿದೆ. ಅದು typing mistake ಇರಬಹುದು. "The proposal will be send to Government for the administrative approval after receiving the detailed proposal" ಎಂದು ಬರೆದು ಮಾನ್ಯ ಸಚಿವರು ಅದರಲ್ಲಿ ಸಹಿ ಮಾಡುತ್ತಾರೆ.

**ಸಭಾಪತಿಯವರು:–** ಅಂದರೆ ಯಾರಿಗೆ ಯಾರು ಬರೆದು ಉತ್ತರವನ್ನು ಕೊಡುತ್ತಾರೆ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ಇದರಲ್ಲಿ ನಿಮ್ಮ ಸಹಿಯೇ ಇದೆ. ನೀವು ಈ ರೀತಿ ಉತ್ತರ ಕೊಡುವುದು ಇದೆಯಲ್ಲ ತಾವು ಸ್ವಲ್ಪ ಕರೆಕ್ಷನ್‌ಗಳನ್ನು ಗಮನಿಸಬೇಕು.

**ಶ್ರೀ ಕೆ. ಅಭಯಚಂದ್ರ:–** ಮಾನ್ಯ ಸಭಾಪತಿಯವರೆ, ಸರಿ ಮಾಡಲಾಗುವುದು.

## ಕೆನರಾ ವೃತ್ತದಲ್ಲಿ ಲಾಗಿಂಗ್ ಕಾಮಗಾರಿಗಳನ್ನು ಕೂಲಿಗಾರ ಸಹಕಾರ ಸಂಘಗಳಿಗೆ ವಹಿಸುವುದು

**201(1089); ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಉತ್ತರ ಕನ್ನಡ ಜಿಲ್ಲೆಯ (ಅರಣ್ಯ ಇಲಾಖೆಯ) ಕೆನರಾ ವೃತ್ತದ ಅರಣ್ಯದಲ್ಲಿ ಸತ್ತುಒಣಗಿದ ಹಾಗೂ ಬಿದ್ದ ಮರ ಮುಟ್ಟುಗಳಿಗೆ ನಾಟಾ ಎಳೆ ಮತ್ತು ಉರುವಲು ಕಟ್ಟಿಗೆಯನ್ನು ತಯಾರಿಸಿ ಅವುಗಳನ್ನು ನಿಗದಿತ ಸರ್ಕಾರಿ ಮರಮುಟ್ಟು ಸಂಗ್ರಹಾಲಯಕ್ಕೆ ಸಾಗಿಸಿ ದಾಸ್ತಾನು ಮಾಡುವ ಕೆಲಸವನ್ನು ಮಾಡುತ್ತಿರುವ ಉತ್ತರ ಕನ್ನಡ ಜಿಲ್ಲಾ ಕೂಲಿಕಾರ ಸಂಘ ಅಸ್ತಿತ್ವದಲ್ಲಿರುವುದು ಸರ್ಕಾರದ ಗಮನಕ್ಕೆ

ಬಂದಿರುತ್ತದೆಯೇ; (ಈ ಕೂಲಿಕಾರರ ಸಂಘವು ಕಾರ್ಯ ನಿರ್ವಹಿಸುವಾಗ ಸರ್ಕಾರಕ್ಕೆ ಆಗಿರುವ ಲಾಭ ಈಗ ಇಲಾಖೆಯಿಂದ ಕೆ.ಎಸ್.ಎಫ್.ಸಿ ಮುಖಾಂತರ ಆಗಿರುವ ಲಾಭದ ವಿವರ ನೀಡುವುದು)

ಆ) ಈಗಾಗಲೇ ಕೆನರಾ ವೃತ್ತದ ಅರಣ್ಯ ಪ್ರದೇಶದಲ್ಲಿ ಒಣಗಿ ನಿಂತ ಮತ್ತು ಬಿದ್ದ ಬೆಲೆ ಬಾಳುವ ಮರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ತಪ್ಪಿಸಲು ಸರ್ಕಾರ ಈ ಹಿಂದೆ ಇದನ್ನು ತೆಗೆದು ಸಾಗಿಸಲು ಕೂಲಿಕಾರರ ಸಂಘಕ್ಕೆ ನೀಡಿದ್ದನ್ನು ಈಗ ಮತ್ತೆ ನೀಡುವ ವಿಚಾರ ಸರ್ಕಾರದ ಗಮನದಲ್ಲಿ ಇರುತ್ತದೆಯೇ?

**ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಹೌದು, ಉತ್ತರ ಕನ್ನಡ ಜಿಲ್ಲಾ ಕೂಲಿಕಾರರ ಸಂಘಗಳಿಗೆ ಅಥವಾ ಕೆ.ಎಸ್.ಎಫ್.ಐ.ಸಿ. ರವರಿಗೆ ಕಾಮಗಾರಿ ನಿರ್ವಹಣೆಗಾಗಿ ಆಯಾ ವರ್ಷಗಳಲ್ಲಿ ಚಾಲ್ತಿಯಲ್ಲಿರುವ ಎಸ್.ಎಸ್.ಆರ್ ದರ ಹಾಗೂ ಶೇ 10ರ ಮೇಲ್ವಿಚಾರಣ ವೆಚ್ಚದೊಂದಿಗೆ ಲಾಗಿಂಗ್ ನಿರ್ವಹಣಾ ವೆಚ್ಚ ಪಾವತಿಸಲಾಗುತ್ತದೆ. ಆದುದರಿಂದ ಸರ್ಕಾರಕ್ಕೆ ನಷ್ಟ ಅಥವಾ ಲಾಭದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 2005–06ನೇ ಸಾಲಿನವರೆಗೆ ಕೆನರಾ ವೃತ್ತದ ಅರಣ್ಯ ಪ್ರದೇಶದಲ್ಲಿ ಒಣಗಿ ನಿಂತ ಮತ್ತು ಕಿತ್ತು ಬಿದ್ದ ಬೆಲೆ ಬಾಳುವ ಮರಗಳನ್ನು ತೆಗೆದು ಸಾಗಿಸಲು ಉತ್ತರ ಕನ್ನಡ ಜಿಲ್ಲಾ ಕೂಲಿಕಾರರ ಸಹಕಾರಿ ಸಂಘ ಹಾಗೂ ಕೆ.ಎಸ್.ಎಫ್.ಐ.ಸಿ ಇವರಿಗೆ 50:50 ಅನುಘಾತದಲ್ಲಿ ಲಾಗಿಂಗ್ ಕಾಮಗಾರಿಗಳನ್ನು ಅನುಮೋದಿತ ಕಾರ್ಯಯೋಜನೆ ಪ್ರಕಾರ (ಸರ್ಕಾರದ ಆದೇಶದನ್ವಯ) ಹಂಚಿಕೆ ಮಾಡಲಾಗುತ್ತಿತ್ತು. ಆದರೆ, ಸರ್ಕಾರದ ಬದಲಾದ ನಿಲುವಿನಿಂದ ಅರಣ್ಯ ಕೂಲಿಕಾರರ ಸಂಘಕ್ಕೆ ಕೇವಲ ಬಿದ್ದ ಅಥವಾ ಸತ್ತ ಮರಗಳನ್ನು ಕಡಿದು ರಸ್ತೆ ಬದಿಗೆ ಸಾಗಿಸಲು ಮಾತ್ರ ಅವಕಾಶ ನೀಡಿ, ಸದರಿ ಕತ್ತರಿಸಿದ ಮರವನ್ನು ಅಲ್ಲಿಂದ ಡಿಪೋಗೆ ಸಾಗಿಸಲು ಸಾಗಾಣಿಕೆ ಪ್ರಕ್ರಿಯೆಯನ್ನು

ಹಿಂತೆಗೆದುಕೊಳ್ಳಲಾಗಿದೆ. ಸಾಗಾಣಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಕರ್ನಾಟಕ ಪಾರದರ್ಶಕ ಕಾಯ್ದೆ ಪ್ರಕಾರ ಟೆಂಡರ್ ಕರೆಯುವುದು ಅನಿವಾರ್ಯವಾಗಿದ್ದು, ಕೂಲಿಕಾರರ ಸಂಘಕ್ಕೆ ಕೇವಲ Labour Component ಕೆಲಸ ನೀಡಿ ಉಳಿದ ಸಾಗಾಣಿಕೆ (Transportation) ಕಾಮಗಾರಿಯನ್ನು ಟೆಂಡರ್ ಮುಖಾಂತರ ನೆರವೇರಿಸಲು ಸರ್ಕಾರ ನಿಲುವು ತೆಗೆದುಕೊಂಡಿರುವುದರಿಂದ, ಈ ಆದೇಶಕ್ಕೆ ಕೂಲಿಕಾರರ ಸಂಘವು ಒಪ್ಪದೇ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಪ್ರಕರಣದಲ್ಲಿ ಸರ್ಕಾರದ ಪರವಾಗಿ ಆದೇಶ ನೀಡಿರುತ್ತದೆ. ಈ ತೀರ್ಪನ್ನು ಪ್ರಶ್ನಿಸಿ ಅರಣ್ಯ ಕೂಲಿಕಾರರ ಸಂಘದವರು ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿದ್ದು, ಪ್ರಕರಣವು ಇನ್ನು ಬಾಕಿ ಉಳಿದಿರುತ್ತದೆ. ಆದ್ದರಿಂದ ಕೆನರಾ ವೃತ್ತದಲ್ಲಿ ಸತ್ತ ಮತ್ತು ಒಣಗಿ ಬಿದ್ದ ಮರಗಳ ಲಾಗಿಂಗ್ ಕಾಮಗಾರಿಯಲ್ಲಿ ಹಿನ್ನಡೆಯಾಗಿದ್ದು, ಈಗ ಕೇವಲ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ, ನಿಯಮಿತ ಇವರು ಮಾತ್ರ ಲಾಗಿಂಗ್ ಕೆಲಸ ಮಾಡುತ್ತಿರುವುದರಿಂದ (ಸರ್ಕಾರದ ಆದೇಶದ ಪ್ರಕಾರ) ಇಲ್ಲಿಯವರೆಗೆ ಒಟ್ಟು ಟಿಂಬರ್ 21,225 ಕ್ಯೂಬಿಕ್ ಮೀಟರ್ ಮತ್ತು 86,278 ಕ್ಯೂಬಿಕ್ ಮೀಟರ್ ಉರುವಲು ಸೌದೆಯ, 282 ಕೂಪುಗಳಲ್ಲಿ ಲಾಗಿಂಗ್ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ಇರುವುದರಿಂದ ನಿರೀಕ್ಷಿತ ಪ್ರಮಾಣದ ಸತ್ತು ಮತ್ತು ಒಣಗಿ ಬಿದ್ದ ಮರಗಳು ಅರಣ್ಯದಲ್ಲೆ ಇರುತ್ತದೆ.

ಈ ಲಾಗಿಂಗ್ ಕಾಮಗಾರಿ ತೆಗೆದುಕೊಳ್ಳುವ ಕುರಿತು ಅರಣ್ಯ ಕೂಲಿಕಾರರ ಸಂಘದವರು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ನ್ಯಾಯಾಲಯದ ತೀರ್ಪಿನ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬಹುದಾಗಿರುತ್ತದೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಕರ್ನಾಟಕದಲ್ಲಿ ಅರಣ್ಯ ಇದೆ ಅಂದರೆ ಅದು ಉತ್ತರ ಕನ್ನಡ ಜಿಲ್ಲೆಯಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಿಯೂ ಸಹ ಆನೆ ಹಾವಳಿ, ಕರಡಿ ಹಾವಳಿ, ಕಾಡುಕೋಣ ಹಾವಳಿ, ಹಂದಿ ಹಾವಳಿ ಎಲ್ಲಾ ಹಾವಳಿಗಳು ಅಲ್ಲಿಯೇ ಇವೆ. ಅಲ್ಲಿ ಈ ಹಾವಳಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಅರಣ್ಯ ಪ್ರದೇಶದಲ್ಲಿ dead and fallen trees ಪ್ರದೇಶ ಏನಿತ್ತು ಸುಟ್ಟು ಹೋಗುತ್ತವೆಂದು ಯಾವ ಮರಗಳು ಬಿದ್ದು ಹೋಗಿವೆ, ಯಾವ ಮರಗಳು ಒಣಗಿ ಬಿದ್ದು ಹೋಗಿವೆ ಆ ಗಿಡಗಳನ್ನು ಆರ್.ಎಂ.ರೇ ಎನ್ನುವ ಅಧಿಕಾರಿಯವರು ಆ ಗಿಡಗಳನ್ನು ಕಡಿದು ಅವುಗಳನ್ನು ಡಿಪೋಗೆ ಸಾಗಿಸುತ್ತಿದ್ದರು. ಕೋಟ್ಯಾಂತರ ರೂಪಾಯಿಯ ನಾಟಾಗಳನ್ನು ಅಲ್ಲಿ ಸಾಗಿಸುತ್ತಿದ್ದರು. ಅದರಿಂದ ಸರ್ಕಾರಕ್ಕೆ ಆದಾಯ ಬರುತ್ತಿತ್ತು. ಆದರೆ ಇತ್ತೀಚೆಗೆ ಸರ್ಕಾರ ಅದನ್ನು KSFIC (Karnataka State Forest Industries Corporation) ಯವರಿಗೆ ಕೊಟ್ಟಿದೆ. ಅವರಿಗೆ ಕೊಟ್ಟಿರುವುದನ್ನು ನಾವು ವಿರೋಧ ಮಾಡುವುದಿಲ್ಲ. ಆದರೆ KSFIC ಯವರು ತಾವು ಸ್ವತಃ ಮಾಡುವುದಿಲ್ಲ. ಅವರು ಸಬ್-ಕಾಂಟ್ರ್ಯಾಕ್ಟ್ ಅನ್ನು ಬೇರೆಯವರಿಗೆ ಕೊಡುತ್ತಾರೆ. ಅದರಿಂದ ಕೂಲಿಕಾರ ಸಂಘದವರಿಗೆ ಕೊಡುತ್ತಿರುವ ಲಾಗಿಂಗ್ ಕೋಟಾ ಅನ್ನು ನಿಲ್ಲಿಸಿಬಿಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲಾ ಕೂಲಿಕಾರರ ಸಹಕಾರಿ ಸಂಘ ಹಾಗೂ KSFIC ಇವರಿಗೆ 50:50 ಅನುಪಾತದಲ್ಲಿ ಲಾಗಿಂಗ್ ಕಾಮಗಾರಿಗಳನ್ನು ಕೊಡಬೇಕೆಂದು ಕೋರ್ಟ್ ಆದೇಶ ಇದ್ದರೂ ಕೂಡ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದನ್ನು ಈಗ ಕಡಿಯುವುದು ಒಬ್ಬರಿಗೆ, ಟ್ರಾನ್ಸ್‌ಪೋರ್ಟ್ ಮಾಡುವುದು ಒಬ್ಬರಿಗೆ ಕೊಟ್ಟಿದ್ದಾರೆ. ಅದೂ ಅಲ್ಲದೆ ಕಡಿದಂಥ ಮರಗಳನ್ನು ರಸ್ತೆಗೆ ತಂದು ಕೊಡುವಂಥ ಜವಾಬ್ದಾರಿ ಕೂಡ ಮತ್ತೊಬ್ಬರಿಗೆ ಇದೆ. ಮೊದಲು ಮರಗಳನ್ನು ಕಡಿಯುವುದು, ಹಾಗೂ ಟ್ರಾನ್ಸ್‌ಪೋರ್ಟ್ ಮಾಡುವುದು ಅವರಿಗೆ ಇರುತ್ತಿತ್ತು. ಇದನ್ನು ಬೇರ್ಪಡಿಸಿ ಈ ರೀತಿ ಮಾಡಿರುವುದನ್ನು ಉತ್ತರ ಕನ್ನಡ ಜಿಲ್ಲಾ ಕೂಲಿಕಾರರ ಸಹಕಾರಿ ಸಂಘದವರು ಒಪ್ಪಲಿಲ್ಲ. ಆಮೇಲೆ ಹೈಕೋರ್ಟಿಗೆ ಹೋದರೆ ಇವರ ಹಾಗೆ

ಆಗಿದೆ. ಈ ಲಾಗಿಂಗ್‌ದಿಂದ ಮೊದಲು ಸರ್ಕಾರಕ್ಕೆ ಎಷ್ಟು ಉತ್ಪನ್ನ ಬರುತ್ತಿತ್ತು. ಮತ್ತು ಈಗ ಎಷ್ಟು ಉತ್ಪನ್ನ ಬರುತ್ತಿದೆ ಎಂದು ಕೇಳಿದ್ದೇನೆ. ಆದರೆ ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಈ ಲಾಗಿಂಗ್‌ದೊಳಗೆ dead and fallen trees ತೆಗೆದರೆ ಕೋಟಿಗಟ್ಟಲೆ ಎಲ್ಲಾ ಸುಟ್ಟು ಹೋಗುತ್ತಿದೆ. ಅದನ್ನು ಸರಿಯಾಗಿ ತೆಗೆಯುವುದಿಲ್ಲ. ಬೇಕಾದರೆ ಅದರ ಸಲುವಾಗಿ Conservator of Forest, Sirsi ಯವರು, KSFIC ಯವರು ಮರಗಳನ್ನು ತೆಗೆಯದ ಕಾರಣ ಇಷ್ಟು ಮರಗಳು ಉಳಿದಿವೆ ಒಂದು ವರದಿಯನ್ನು ಸಹ ಕೊಟ್ಟಿದ್ದಾರೆ. ಅವು ವರ್ಷೆ ವರ್ಷೆ ಸುಟ್ಟು ಹೋಗುತ್ತವೆ. ಟೀಕ್‌ವುಡ್‌ನಲ್ಲಿ ದಾಂಡೇಲಿ ಫೇಮಸ್ ಇದೆ. ಆದರೆ ಈಗ ಅಲ್ಲಿ ಟೀಕ್ ಡಿಪೋಗೆ ಬರುವುದು ಕೂಡ ಕಡಿಮೆಯಾಗಿದೆ. ಅದಕ್ಕೆ ಮುಖ್ಯ ಕಾರಣವೇನೆಂದರೆ KSFIC ಯವರು ಸರಿಯಾಗಿ ಲಾಗಿಂಗ್ ಅನ್ನು ಮಾಡುತ್ತಿಲ್ಲ ಮತ್ತು ಡಿಪೋಗೆ ಸಾಗಿಸುತ್ತಿಲ್ಲ. ಏಕೆಂದರೆ ಅವರು ಕ್ಲೀನ್ ಏರಿಯಾದ ಟೀಕ್‌ವುಡ್ ಮಾತ್ರ ತೆಗೆಯುತ್ತಾರೆ. ದುರ್ಗಮ ಪ್ರದೇಶದಲ್ಲಿ ಟೀಕ್‌ವುಡ್ ಅನ್ನು ಅವರು ತೆಗೆಯುವುದಕ್ಕೆ ಹೋಗುವುದೇ ಇಲ್ಲ. ಈ ಹಿಂದೆ ಉತ್ತರ ಕನ್ನಡ ಜಿಲ್ಲಾ ಕೂಲಿಕಾರರ ಸಹಕಾರಿ ಸಂಘದವರು ತೆಗೆದಾಗ ಎಷ್ಟು ಉತ್ಪನ್ನ ಬರುತ್ತಿತ್ತು ಮತ್ತು ಈಗ ಎಷ್ಟು ಉತ್ಪನ್ನ ಬರುತ್ತಿದೆ ಎಂಬುದರ ಬಗ್ಗೆ ಕೇಳಿದ್ದೇನೆ ಅದಕ್ಕೆ ಸಚಿವರು ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:–** ಮೊದಲು ತಾವು ಕೇಳಿರುವ ಪ್ರಶ್ನೆಗೆ ಸಚಿವರು ಉತ್ತರವನ್ನು ಕೊಡಲಿ. ನಂತರ ಮತ್ತೆ ತಮಗೆ ಅವಕಾಶವನ್ನು ಕೊಡುತ್ತೇನೆ. ಬಹಳ ಉದ್ದ ಪ್ರಶ್ನೆ ಅಥವಾ ಹೆಚ್ಚಿನ ಪ್ರಶ್ನೆಗಳು ಇದ್ದರೆ ಉತ್ತರ ಸಿಗುವುದಿಲ್ಲ. ಮೊದಲು ನೀವು ಕೇಳಿದ ಪ್ರಶ್ನೆಗೆ ಅವರು ಉತ್ತರ ನೀಡಲಿ. ನಂತರ ಪುನಃ ತಾವು ಪ್ರಶ್ನೆಯನ್ನು ಕೇಳಲು ಅವಕಾಶ ಕೊಡುತ್ತೇನೆ.

**ಶ್ರೀ ರಮಾನಾಥ್ ರೈ:–** ಮಾನ್ಯ ಸಭಾಪತಿಯವರೆ, ಕೆನರಾ ವೃತ್ತದ ಅರಣ್ಯ ಪ್ರದೇಶದಲ್ಲಿ ಒಣಗಿ ನಿಂತ ಮತ್ತು ಕಿತ್ತು ಬಿದ್ದ ಬೆಲೆ ಬಾಳುವ ಮರಗಳನ್ನು ತೆಗೆದು ಸಾಗಿಸಲು ಉತ್ತರ ಕನ್ನಡ ಜಿಲ್ಲಾ ಕೂಲಿಕಾರರ ಸಹಕಾರಿ ಸಂಘ ಹಾಗೂ KSFIC ಇವರಿಗೆ 50:50 ಅನುಪಾತದಲ್ಲಿ ಲಾಗಿಂಗ್ ಕಾಮಗಾರಿಗಳನ್ನು ಅನುಮೋದಿತ ಕಾರ್ಯಯೋಜನೆ ಪ್ರಕಾರ (ಸರ್ಕಾರದ

ಆದೇಶದನ್ವಯ) ಹಂಚಿಕೆ ಮಾಡಲಾಗುತ್ತಿತ್ತು. ಆದರೆ, ಸರ್ಕಾರದ ಬದಲಾದ ನಿಲುವಿನಿಂದ ಅರಣ್ಯ ಕೂಲಿಕಾರರ ಸಂಘಕ್ಕೆ ಕೇವಲ ಬಿದ್ದ ಅಥವಾ ಸತ್ತ ಮರಗಳನ್ನು ಕಡಿದು ರಸ್ತೆ ಬದಿಗೆ ಸಾಗಿಸಲು ಮಾತ್ರ ಅವಕಾಶ ನೀಡಿ, ಸದರಿ ಕತ್ತರಿಸಿದ ಮರವನ್ನು ಅಲ್ಲಿಂದ ಡಿಪೋಗೆ ಸಾಗಿಸಲು ಸಾಗಾಣಿಕೆ ಪ್ರಕ್ರಿಯೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಸಾಗಾಣಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಕರ್ನಾಟಕ ಪಾರದರ್ಶಕ ಕಾಯ್ದೆ ಪ್ರಕಾರ ಟೆಂಡರ್ ಕರೆಯುವುದು ಅನಿವಾರ್ಯವಾಗಿದ್ದು, ಕೂಲಿಕಾರರ ಸಂಘಕ್ಕೆ ಕೇವಲ labour component ಕೆಲಸ ನೀಡಿ ಉಳಿದ ಸಾಗಾಣಿಕೆ transportation ಕಾಮಗಾರಿಯನ್ನು ಟೆಂಡರ್ ಮುಖಾಂತರ ನೆರವೇರಿಸಲು ಸರ್ಕಾರ ನಿಲುವು ತೆಗೆದುಕೊಂಡಿದೆ. ಕೂಲಿಕಾರರ ಸಹಕಾರ ಸಂಘ ಶೇಕಡ 50:50 ಅನುಪಾತದ ವಿರುದ್ಧ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಮಾನ್ಯ ಉಚ್ಚನ್ಯಾಯಾಲಯವು ಪ್ರಕರಣದಲ್ಲಿ ಸರ್ಕಾರದ ಪರವಾಗಿ ಆದೇಶ ನೀಡಿದೆ. ಸರ್ಕಾರ ಏನು ವಾದ ಮಾಡಿದೆ ಅದರ ಪರವಾಗಿ ಆದೇಶ ಆಗಿದೆ. ಅದರ ಮೇಲೆ ಕೂಲಿಕಾರರ ಸಹಕಾರ ಸಂಘ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲ್ ಮಾಡಿದ್ದಾರೆ. ಅದು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಈ ಒಂದು ಸಂದರ್ಭದಲ್ಲಿ ನಾವು ನ್ಯಾಯಾಲಯದ ತೀರ್ಪು ಬಂದ ನಂತರವೇ ಏನಾದರೊಂದು ಕ್ರಮವನ್ನು ಕೈಗೊಳ್ಳಬಹುದು. ಕೈಗೊಳ್ಳುವಂಥದ್ದಿದ್ದರೂ ಕೂಡ ಬಹುಶಃ ನಾವು ಈ ಲಾಗಿಂಗ್ ಕಾಮಗಾರಿ ಮಾಡತಕ್ಕಂಥ ಕೆಲಸವನ್ನು ಕೂಲಿ ಕಾರ್ಮಿಕ ಸಂಘಕ್ಕೆ ಕೊಟ್ಟು ಉಳಿದ transportation ಮಾಡತಕ್ಕಂಥದ್ದಕ್ಕೆ ಟೆಂಡರ್ ಮಾಡುವುದಕ್ಕೆ ಅವರು ಒಪ್ಪಿಗೆ ಕೊಟ್ಟರೆ, ಮತ್ತು ಕೋರ್ಟಿನ ದಾವೆಯನ್ನು ಅವರು ವಾಪಸ್ಸು ತೆಗೆದುಕೊಂಡರೆ ನಾವು ಪರಿಶೀಲನೆ ಮಾಡಿ ಏನು ಮಾಡಬೇಕು ಆ ಕ್ರಮವನ್ನು ಕೈಗೊಳ್ಳಬಹುದು. ಈಗ ಸಧ್ಯಕ್ಕೆ ಅವರು ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಒಂದು ವೇಳೆ ದಾವೆಯನ್ನು ವಾಪಸ್ಸು ಪಡೆದುಕೊಂಡರೆ ಬಹುಶಃ ನಾವು ಈ ಒಂದು ಪಾರದರ್ಶಕ ಕಾಯಿದೆಯ ಕಾರಣಕ್ಕಾಗಿ ಟೆಂಡರ್ ಮಾಡಬೇಕಾದ ಅನಿವಾರ್ಯತೆ ಇರುವುದರಿಂದಾಗಿ ಆ

ರೀತಿ ಮಾಡಲಾಗಿದೆ. ಅವರು ಒಂದು ವೇಳೆ ಕೋರ್ಟಿನಿಂದ ದಾವೆಯನ್ನು ಹಿಂದಕ್ಕೆ ಪಡೆದರೆ ನಾವು ಪರಿಶೀಲನೆ ಮಾಡಬಹುದು.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೆ, ಈ ಪ್ರಕರಣ ಕೋರ್ಟಿನಲ್ಲಿರುವುದರಿಂದ ನಾವು ಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದಾಗಿ ಸುಮಾರು ಆರು ಸಾವಿರ ಕುಟುಂಬಗಳಿಗೆ ತೊಂದರೆಯಾಗಿದೆ. ಕೂಲಿ ಕಾರ್ಮಿಕರು ಕರೆಕ್ಟ್ ಆಗಿ ಕೆಲಸ ಮಾಡಿದ ದಾಖಲೆಗಳಿವೆ. ಅದರಿಂದಾಗಿ ಕೋಟ್ಯಾಂತರ ಹಣ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ನೀವು ನಿಮ್ಮ ಅಧಿಕಾರಿಗಳ ಜೊತೆಗೆ ಸಭೆಯನ್ನು ಮಾಡಿ ಯಾವುದು ಸೂಕ್ತ ಎಂದು ನೀವು ನಿರ್ಣಯ ತೆಗೆದುಕೊಂಡರೆ ನಾವೆಲ್ಲರೂ ಬದ್ಧರಾಗಿದ್ದೇವೆ. ನಾನು ಕೂಲಿ ಸಹಕಾರ ಸಂಘದ ಪರವಾಗಿ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು open offer ಕೊಟ್ಟಿದ್ದಾರೆ. ಈಗ ಸರ್ಕಾರ ಸ್ಪಂದಿಸಬೇಕು.

**ಶ್ರೀ ರಮಾನಾಥ್ ರೈ:–** ಮಾನ್ಯ ಸಭಾಪತಿಯವರೆ, ನಾನು ಉತ್ತರವನ್ನು ಕೊಟ್ಟಾಗ ಹೇಳಿದ್ದೇನೆ. ಅವರು ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಅವರು ಅದನ್ನು ವಾಪಸ್ಸು ಪಡೆದುಕೊಳ್ಳಲಿ ಹಾಗೂ ಪಾರದರ್ಶಕ ಕಾಯಿದೆ ಏನಿದೆ ಅದರ ಪ್ರಕಾರ ನಾವು ನಡೆಯುತ್ತಿದ್ದೇವೆ. ಪಾರದರ್ಶಕ ಕಾಯಿದೆಯನ್ವಯ ನಾವು ಟೆಂಡರ್ ಕರೆದು ಮಾಡಬೇಕಾಗಿದೆ. ಆದ್ದರಿಂದ ನೀವು ದಾವೆಯನ್ನು ವಾಪಸ್ಸು ಪಡೆದುಕೊಂಡ ನಂತರ ನಾವು ಏನಾದರು ಮಾತುಕತೆ ಮಾಡಲು ಸಾಧ್ಯವಿದೆ. ಈಗ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಅದನ್ನು ಅವರು ವಾಪಸ್ಸು ಪಡೆದುಕೊಂಡರೆ ನಾವು ಮಾತುಕತೆ ಮಾಡಿ ಕಾನೂನಿನ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡೋಣ. ಆ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡಲು ಬಯಸುತ್ತೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೆ, ಈಗ logging contract ಅನ್ನು ಫಾರೆಸ್ಟ್‌ನವರು ಮಾಡುತ್ತಿದ್ದಾರೆ. Plantation ಅನ್ನು ಕೂಡ ಫಾರೆಸ್ಟ್‌ನವರೆ ಮಾಡುತ್ತಿದ್ದಾರೆ. Trench ಹೊಡೆಯುವುದನ್ನು ಕೂಡ ಫಾರೆಸ್ಟ್‌ನವರೆ ಮಾಡುತ್ತಿದ್ದಾರೆ. ಕೂಲಿ ಕಾರ್ಮಿಕರು ಏನು ಮಾಡಬೇಕು? ಇಷ್ಟು ದೊಡ್ಡ ಅರಣ್ಯವನ್ನು ಕಾಯುವುದು ಅಲ್ಲಿಯ ಸಿದ್ಧಿ ಜನಾಂಗ ಹಾಗೂ ಕುಣಬಿ ಜನಾಂಗ. ಅವರಿಗೆ ಕೆಲಸ ಇಲ್ಲ. ನಾನು ಮಾನ್ಯ ಸಚಿವರಲ್ಲಿ ಬಹಳಷ್ಟು ಆಸೆಯನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ಸಚಿವರು ಒಳ್ಳೆಯವರು ಕೂಡ ಇದ್ದಾರೆ. ಅವರು ಮಾಡಿ ಕೊಡುತ್ತಾರೆಂದು ಎಲ್ಲರಿಗೂ ಗೊತ್ತಿದೆ.

**ಸಭಾಪತಿಯವರು:-** ಈಗ ಸಚಿವರ ಮೇಲೆ ಭಾರ ಜಾಸ್ತಿ ಹಾಕುತ್ತಿದ್ದಾರೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೆ, ನಮಗೆ ಸಚಿವರ ಮೇಲೆ ಬಹಳ ಭರವಸೆ ಇದೆ. ನಾವು ಬಹಳ ಕಳಕಳಿಯನ್ನು ಇಟ್ಟುಕೊಂಡಿದ್ದೇವೆ. ಆ ಬಡ ಕಾರ್ಮಿಕರಿಗೆ ಒಂದು ವರ್ಷ ಕೊಟ್ಟು ನೋಡಿ.

**ಶ್ರೀ ರಮಾನಾಥ್ ರೈ:-** ಮಾನ್ಯ ಸಭಾಪತಿಯವರೆ, ಈಗ ಏನು ಸುಪ್ರೀಂ ಕೋರ್ಟಿನಲ್ಲಿ ದಾವೆ ಹಾಕಿದ್ದಾರೆ ಅದನ್ನು ವಾಪಸ್ಸು ಪಡೆದುಕೊಳ್ಳುವುದರ ಬಗ್ಗೆ ಮಾತುಕತೆಯನ್ನು ಮಾಡಿಕೊಂಡು, ದಾವೆಯನ್ನು ವಾಪಸ್ಸು ಪಡೆದುಕೊಂಡರೆ ಮುಂದಕ್ಕೆ ಯಾವ ರೀತಿಯಾಗಿ ಸರಿಪಡಿಸಬೇಕು ಅದನ್ನು ಮಾಡೋಣ. ಈ ಪ್ರಕರಣ ಸುಪ್ರೀಂ ಕೋರ್ಟಿನಲ್ಲಿರುವುದರಿಂದ ನಾವು ನೇರವಾಗಿ ಏನು ಮಾತನಾಡುವುದಕ್ಕಾಗುವುದಿಲ್ಲ. ಕೋರ್ಟಿನಲ್ಲಿರುವ ಪ್ರಕರಣವಾಗಿರುವುದರಿಂದ ನಾವು ಇಲ್ಲಿ ಉತ್ತರವನ್ನು ಕೂಡ ಕೊಡುವುದಕ್ಕೆ ಕಷ್ಟವಾಗುತ್ತದೆ. ದಾವೆಯನ್ನು ವಾಪಸ್ಸು ತೆಗೆದುಕೊಂಡ ಮೇಲೆ ಬೇಕಾದರೆ ಕಾನೂನು ಪ್ರಕಾರವಾಗಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಮಾತುಕತೆ ಮಾಡಿ ದಾವೆಯನ್ನು ತೆಗೆದುಕೊಳ್ಳಲಿ ಅದನ್ನು ಸರಿಪಡಿಸುವಂತಹ ಪ್ರಯತ್ನವನ್ನು ಮಾಡೋಣ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ, ಈಗ ಏನು ಕೊಡಲಾಗುತ್ತಿದೆ ಅದಕ್ಕಿಂತಲೂ 5% ಕಡಿಮೆ ಹಣವನ್ನು ಕೊಡಿ. ಒಂದು ವರ್ಷದಲ್ಲಿ ಎಷ್ಟು ಉತ್ಪನ್ನ ಬರುತ್ತದೆಂದು ನೋಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಇದರ ಬಗ್ಗೆ ಸಚಿವರು ಕುಳಿತುಕೊಂಡು ಮಾತನಾಡೋಣ ಎಂದು ಹೇಳುತ್ತಿದ್ದಾರೆ.

**ಶ್ರೀ ರಮಾನಾಥ್ ರೈ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮತ್ತು ಸಂಬಂಧಪಟ್ಟವರೆಲ್ಲರೂ ಕುಳಿತುಕೊಂಡು ಮಾತುಕತೆ ಮಾಡಿ ತೀರ್ಮಾನವನ್ನು ಮಾಡೋಣ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೆ, ಈಗ ಉರುವಲು ಕಟ್ಟಿಗೆಯೇ ಸಿಗುವುದಿಲ್ಲ. ಇವರುಗಳ ಸೇವೆಯನ್ನು ನಿಲ್ಲಿಸಿದ್ದರಿಂದ ಶವ ಸಂಸ್ಕಾರಕ್ಕೂ ಕೂಡ ಉರುವಲು ಕಟ್ಟಿಗೆ ಸಿಗುತ್ತಿಲ್ಲ. ಶವಗಳನ್ನು ಅಲ್ಲಿಟ್ಟು ಪ್ರತಿಭಟನೆಯನ್ನು ಮಾಡಿದ್ದಾರೆ.

**ಶ್ರೀ ರಮಾನಾಥ್ ರೈ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡು ಏನು ಸಮಸ್ಯೆ ಇದೆ ಅದನ್ನು ಪರಿಹಾರ ಮಾಡುವುದಕ್ಕೆ ಸಾಧ್ಯತೆ ಇದೆಯೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೆ, ಈಗ ಶವ ಸಂಸ್ಕಾರಕ್ಕೂ ಉರುವಲು ಕಟ್ಟಿಗೆ ಸಿಗುತ್ತಿಲ್ಲ. ಶವವನ್ನು ಇಟ್ಟುಕೊಂಡು ಪ್ರತಿಭಟನೆ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಸಾಮಾನ್ಯ ಜನರ ಸಮಸ್ಯೆಯನ್ನು ಪ್ರಸ್ತಾಪ ಮಾಡಿದ್ದಾರೆ. ತಾವು ಅವರನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದೀರಿ. ಅಲ್ಲಿಗೆ ಮುಗಿಯಿತು.

**ಶ್ರೀ ರಮಾನಾಥ್ ರೈ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅಲ್ಲಿಯ ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ. ಅದುದರಿಂದ ಮಾನ್ಯ ಸದಸ್ಯರ ಪ್ರಶ್ನೆ ಸೂಕ್ತವಾದ ಪ್ರಕ್ರಿಯೆಯನ್ನು ನೀಡುತ್ತೇವೆ. ಅದಕ್ಕೆ ಸಂಬಂಧಪಟ್ಟಂತೆ ಏನು ಕೆಲಸವಾಗಬೇಕು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು. ಶ್ರೀ ಅಲ್ಲಮಪ್ರಭು ಪಾಟೀಲ್‌ರೆ ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಟೈಮ್ ಕೇಳಿದ್ದಾರೆ.

**ಶ್ರೀ ಅಲ್ಲಮಪ್ರಭು ಪಾಟೀಲ್:–** ಮಾನ್ಯ ಸಭಾಪತಿಯವರೆ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಏನೆಂದರೆ, ನಾಳೆ ಅಧಿವೇಶನ ಮುಗಿಯುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೆ ಗೌರವನ್ವಿತ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡಿ.

**ಎತ್ತಿನಹೊಳೆ ಯೋಜನೆ ಹಾಗು ಪರಮಶಿವಯ್ಯನವರ ಯೋಜನೆ ಜಾರಿ**

**1119; ಶ್ರೀ ಎಂ.ಡಿ. ಲಕ್ಷ್ಮೀ ನಾರಾಯಣ (ಅಣ್ಣಯ್ಯ)**

**ಅ)** ಎತ್ತಿನಹೊಳೆ ಹಾಗೂ ಪರಮಶಿವಯ್ಯನವರ ನೀರಾವರಿ ಯೋಜನೆಯಿಂದ ತುಮಕೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಅನುಕೂಲವಾಗಲಿದೆ.

**ಆ)** ಈ ಯೋಜನೆಗಳು ಯಾವಾಗ ಕಾರ್ಯಾರಂಭ ಮಾಡಲಾಗುವುದು

**ಇ)** ಪ್ರಸಕ್ತ ಅಯವ್ಯಯದಲ್ಲಿ ಈ ಯೋಜನೆಗಳಿಗೆ ಎಷ್ಟು ಹಣ ಮಂಜೂರು ಮಾಡಲಾಗುವುದು.

**ಈ)** ಎಷ್ಟು ವರ್ಷಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು

**ಉ)** ಯಾವ ಯಾವ ತಾಲ್ಲೂಕಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು.

**ಊ)** ಎಷ್ಟು ಕೆರೆಗಳು ತುಂಬಲು ಈ ಯೋಜನೆ ಸಹಕಾರಿಯಾಗುವುದು.

**ಉ)** ಜಿಲ್ಲೆಯ ಒಟ್ಟು ಎಷ್ಟು ಎಕರೆಗೆ ಈ ನೀರಾವರಿ ಯೋಜನೆ ಪ್ರಯೋಜನವಾಗಲಿದೆ?

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

**ಅ)** ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗುವ ನೀರನ್ನು ಸುರಕ್ಷಿತ ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತಿತರ ಅವಶ್ಯಕತೆ ಇರುವ ಜಿಲ್ಲೆಗಳ ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸಲು ಮತ್ತು ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಿ ಅಂತರ್ಜಲ ಮರುಪೂರಣಗೊಳಿಸಲು ಯೋಜಿಸಲಾಗಿದೆ. ಎತ್ತಿನಹೊಳೆ ಯೋಜನೆಯ ಸಾಗಾಣಿಕೆ ವ್ಯವಸ್ಥೆಯ (conveyance component) ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದ್ದು, ವರದಿ ತಯಾರಿಕೆ ನಂತರ ತಾಲ್ಲೂಕುವಾರು ವಿವರ ಲಭ್ಯವಾಗುವುದು.

ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ವಿವರವಾದ ಯೋಜನಾ ವರದಿ ತಯಾರಿಕೆಯಲ್ಲಿದ್ದು, ಈ ವರದಿ ಅನುಮೋದನೆಯಾದ ನಂತರ ಈ ಯೋಜನೆಯಡಿ ಪ್ರಯೋಜನ ಪಡೆಯಲಿರುವ ತುಮಕೂರು ಜಿಲ್ಲೆಯ ತಾಲ್ಲೂಕುಗಳ ವಿವರ ಲಭ್ಯವಾಗುವುದು.

**ಆ)**

**1. ಎತ್ತಿನಹೊಳೆ ಯೋಜನೆ:**

ಎತ್ತಿನಹೊಳೆ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ತನ್ನ ಆದೇಶ ಸಂ: ಜಸಂಇ 203 ವಿಬ್ಯಾಇ 2012, ಬೆಂಗಳೂರು ದಿನಾಂಕ 13/7/2012ರಲ್ಲಿ ₹ 8323.50 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಹಂತದಲ್ಲಿ ಹರವನಹಳ್ಳಿ ವಿತರಣಾ ಕೇಂದ್ರದವರೆಗಿನ ₹ 3269.50 ಕೋಟಿಗಳ

ಮೊತ್ತ ಏತ ಕಾಮಗಾರಿಗಳನ್ನು (lift components) EPC/Turnkey Tender ಆಧಾರದ ಮೇಲೆ ತೆಗೆದುಕೊಳ್ಳಲು ಮತ್ತು ಈ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯ ಜೊತೆಗೆ ಸಮಾಲೋಚಿಸಿ ಸೂಕ್ತ ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲು ಸೂಚಿಸಿದೆ.

ಇದರನ್ವಯ ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಏತ ಕಾಮಗಾರಿಗಳ ಅನುಷ್ಠಾನಕ್ಕಾಗಿ 5 ಪ್ಯಾಕೇಜುಗಳಲ್ಲಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರುಗಳ ಮೌಲ್ಯಮಾಪನ ವರದಿಯನ್ನು ಮುಂಬರುವ ನಿಗಮದ ತಾಂತ್ರಿಕ ಉಪಸಮಿತಿಯ ಮುಂದೆ ಮಂಡಿಸಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

ಎರಡನೇ ಹಂತದ ನೀರು ಸಾಗಾಣಿಕಾ ವ್ಯವಸ್ಥೆಯ (conveyance component) ತನಿಖೆ, ಸರ್ವೇಕ್ಷಣೆ, ವಿನ್ಯಾಸ, ಯೋಜನಾ ವರದಿ ತಯಾರಿಸಲು ಖಾಸಗಿ ತಾಂತ್ರಿಕ ಸಲಹೆಗಾರರನ್ನು ಟೆಂಡರ್ ಮೂಲಕ ನೇಮಿಸಲಾಗಿದ್ದು, 250.00 ಕಿ.ಮೀ. ಉದ್ದದ ಕಾಲುವೆಗಳ ತನಿಖೆ, ಸರ್ವೇಕ್ಷಣೆ, ಮತ್ತು ದೇವರಾಯನದುರ್ಗದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಸಂಗ್ರಹಣಾ ಜಲಾಶಯದ ಸಾಮರ್ಥ್ಯದ ಸರ್ವೆ ಕೆಲಸ ಪ್ರಗತಿಯಲ್ಲಿದೆ.

**2. ಪರಮಶಿವಯ್ಯ ವರದಿ ಆಧಾರಿತ ಯೋಜನೆ:**

ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ಈಗಾಗಲೇ ವಿವರವಾದ ಯೋಜನಾ ವರದಿ ತಯಾರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:

1. ಮಾಲಾ ಕಾಲುವೆಗಳ ಸರ್ವೆ ಕಾರ್ಯವನ್ನು ಮೆ॥ ಎನ್.ಆರ್.ಎಸ್.ಸಿ ಸಂಸ್ಥೆಯ ಮೂಲಕ ಕೈಗೊಳ್ಳಲಾಗಿದೆ.

2. ಉಳಿಕೆ ಸೇವಾ ಕಾಲುವೆ ಸಮೀಕ್ಷೆ ಮತ್ತು ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾರ್ಯವನ್ನು ನವದೆಹಲಿಯ ಮೆ॥ ಯು.ಆರ್.ಎಸ್. ಸ್ಕಾಟ್ ವಿಲ್ಸನ್ ಇಂಡಿಯಾ ಪ್ರೈ ಲಿಮಿಟೆಡ್ ಸಂಸ್ಥೆಗೆ ಟೆಂಡರ್ ಮೂಲಕ ವಹಿಸಲಾಗಿದೆ. ಸದರಿ ಸಂಸ್ಥೆಯು ಆರಂಭಿಕ ವರದಿಯನ್ನು ನೀಡಿದ್ದು, ಅದನ್ನು ಶ್ರೀ ಜಿಎಸ್. ಪರಮಶಿವಯ್ಯನವರ ಅಧ್ಯಕ್ಷತೆಯ ತಜ್ಞರ ಸಮಿತಿಯ ವತಿಯಿಂದ ಪರಿಶೀಲಿಸಲಾಗುತ್ತಿದೆ.

ಈ ಯೋಜನೆಯ ವಿವರವಾದ ಯೋಜನಾ ವರದಿ ತಯಾರಿಕೆಯ ನಂತರ ಯೋಜನೆಯ ಜಾರಿಗೆ ಅಗತ್ಯ ಕ್ರಮ ಜರುಗಿಸಲಾಗುವುದು.

ಇ) ಇತ್ತೀಚಿಗೆ ಮಂಡಿಸಿದ ರಾಜ್ಯದ 2013–14ನೇ ಸಾಲಿನ ಅಯವ್ಯಯದಲ್ಲಿ ಎತ್ತಿನಹೊಳೆ ಯೋಜನೆಗೆ ₹ 1000.00 ಕೋಟಿಗಳು ಮತ್ತು ಪರಮಶಿವಯ್ಯ ವರದಿ ಆಧಾರಿತ ಯೋಜನೆಗಳ ವಿಸ್ತೃತ ಯೋಜನೆ ವರದಿ ತಯಾರಿಕೆಗಾಗಿ ₹ 50.00 ಕೋಟಿಗಳನ್ನು ಘೋಷಿಸಲಾಗಿದೆ.

**ಈ)** ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಏತ ಕಾಮಗಾರಿಗಳ ಅನುಷ್ಠಾನಕ್ಕಾಗಿ 5 ಪ್ಯಾಕೇಜುಗಳಲ್ಲಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಟೆಂಡರ್ ಅನುಮೋದನೆಯ ನಂತರ, ಈ ಕಾಮಗಾರಿಗಳನ್ನು 5 ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಎರಡನೇ ಹಂತದ ನೀರು ಸಾಗಾಣಿಕಾ ವ್ಯವಸ್ಥೆಯ (conveyance component) ತನಿಖೆ, ಸರ್ವೇಕ್ಷಣೆ, ವಿನ್ಯಾಸ, ಯೋಜನಾ ವರದಿ ತಯಾರಿಸಲು ಖಾಸಗಿ ತಾಂತ್ರಿಕ ಸಲಹೆಗಾರರನ್ನು ಟೆಂಡರ್ ಮೂಲಕ ನೇಮಿಸಲಾಗಿದ್ದು, 250.00 ಕಿ.ಮೀ ಉದ್ದದ ಕಾಲುವೆಗಳ ತನಿಖೆ, ಸರ್ವೇಕ್ಷಣೆ, ಮತ್ತು ದೇವರಾಯನದುರ್ಗದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಸಂಗ್ರಹಣಾ ಜಲಾಶಯದ ಸಾಮರ್ಥ್ಯದ ಸರ್ವೆ ಕೆಲಸ ಪ್ರಗತಿಯಲ್ಲಿದೆ.

ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ, ಯೋಜನೆಯ ಅನುಷ್ಠಾನಕ್ಕಾಗಿ ತಗಲುವ ಅಂದಾಜು ವೆಚ್ಚ ಮತ್ತು ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿಯನ್ನು ನಿರ್ಧರಿಸಬಹುದಾಗಿದೆ.

ಉ) ಎತ್ತಿನಹೊಳೆ ಯೋಜನೆಯಿಂದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತಿತರ ಅವಶ್ಯಕತೆ ಇರುವ ಜಿಲ್ಲೆಗಳ ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸಲು ಮತ್ತು ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಿ ಅಂತರ್‌ಜಲ ಮರುಪೂರಣಗೊಳಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ಏತ ನೀರಾವರಿ ಕಾಮಗಾರಿಗಳಿಗೆ ವಿವರವಾದ ಅಂದಾಜು ಪಟ್ಟಿಗಳನ್ನು ತಯಾರಿಸಿ, ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಯೋಜನೆಯ ಸಾಗಾಣಿಕೆ ವ್ಯವಸ್ಥೆಯ (conveyance component) ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದ್ದು, ವರದಿ ತಯಾರಿಕೆ ನಂತರ ತಾಲ್ಲೂಕುವಾರು ವಿವರ ಲಭ್ಯವಾಗುವುದು.

ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ವಿವರವಾದ ಯೋಜನಾ ವರದಿಯ ತಯಾರಿಕೆಯ ನಂತರ, ಸದರಿ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯುವ ತಾಲ್ಲೂಕುಗಳನ್ನು ನಿರ್ಧರಿಸಬಹುದಾಗಿದೆ.

ಊ) ಎತ್ತಿನಹೊಳೆ ಯೋಜನೆಯಲ್ಲಿ ಕೋಲಾರ ಜಿಲ್ಲೆಯ 139 ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 198 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ. ಆದಾಗ್ಯೂ, ಎತ್ತಿನಹೊಳೆ ಯೋಜನೆಯ ಸಾಗಾಣಿಕೆ ವ್ಯವಸ್ಥೆಯ (conveyance component) ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದ್ದು, ವರದಿ ತಯಾರಿಕೆ ನಂತರ ನಿಖರವಾದ ವಿವರ ಲಭ್ಯವಾಗುವುದು.

ಅದರಂತೆ, ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ಯೋಜನಾ ವರದಿಯ ತಯಾರಿಕೆಯ ನಂತರ, ಈ ಯೋಜನೆಯಡಿಯಲ್ಲಿ ಅಗತ್ಯತೆವಿರುವ ವಿವಿಧ ಜಿಲ್ಲೆಗಳಲ್ಲಿ ಕೆರೆಗಳನ್ನು ತುಂಬಿಸುವ ನಿಖರವಾದ ಮಾಹಿತಿ ದೊರೆಯುವುದು.

**ಋ)** ಎತ್ತಿನಹೊಳೆ ಯೋಜನೆಯಿಂದ ಕುಡಿಯುವ ನೀರು ಮತ್ತು ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸಿ ಅಂತರ್ ಜಲ ಮರುಪೂರಣಗೊಳಿಸಲು ಯೋಜಿಸಲಾಗಿದ್ದು, ನೀರಾವರಿ ಸೌಲಭ್ಯ ಒದಗಿಸಲು ಅವಕಾಶ ಕಲ್ಪಿಸಿರುವುದಿಲ್ಲ.

ಆದರೆ, ಪರಮಶಿವಯ್ಯ ವರದಿ ಆಧಾರಿತ ಯೋಜನೆಯಡಿಯಲ್ಲಿ ಕುಡಿಯುವ ನೀರು ಪೂರೈಕೆ, ಎಲ್ಲಾ ಕೆರೆಗಳನ್ನು ತುಂಬಿಸುವುದನ್ನು ಸಹ ಯೋಜಿಸಲಾಗಿದ್ದು, ನಿಖರವಾದ ಮಾಹಿತಿ ಸದರಿ ಯೋಜನೆಯ ವಿವರವಾದ ಯೋಜನಾ ವರದಿ ತಯಾರಾದ ನಂತರ ಲಭ್ಯವಾಗುವುದು.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಹಿಂದಿನ ಸರ್ಕಾರದಲ್ಲಿ ದಿನಾಂಕ 13.07.2012ರಂದು ಈ ಎತ್ತಿನಹೊಳೆ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿ 3,269 ಕೋಟಿ ರೂಪಾಯಿಗಳ ಏತ ಕಾಮಗಾರಿಗಳನ್ನು ನಾವು ಉಪ ಸಮಿತಿಯ ಜೊತೆಯಲ್ಲಿ ಚರ್ಚಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಲಿಖಿತ ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ. ಏಕೆಂದರೆ ಇದು ಬಹಳ ದೊಡ್ಡ ಯೋಜನೆ. ಸುಮಾರು 5–6 ಜಿಲ್ಲೆಗಳಿಗೆ ಕುಡಿಯುವ ನೀರು ಮತ್ತು ಕೆರೆಗಳನ್ನು ತುಂಬಿಸತಕ್ಕಂತಹ ಯೋಜನೆಯಾಗಿರುವುದರಿಂದ ಕೋಲಾರ ಜಿಲ್ಲೆಯಲ್ಲಿ 139 ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 198 ಕೆರೆ ತುಂಬಿಸತಕ್ಕಂತಹ ಯೋಜನೆ. ನಾನು ಎಲ್ಲವನ್ನೂ ಕೂಡ ಕೇಳಿದ್ದೇನೆ. ತುಮಕೂರು ಜಿಲ್ಲೆಯಲ್ಲಿ ಎಷ್ಟು ಕೆರೆಗಳಿಗೆ ನೀರನ್ನು ತುಂಬಿಸುವುದಕ್ಕೆ ಸಾಧ್ಯವಾಗುತ್ತದೆಂದು ಕೇಳಿದ್ದೇನೆ. ಅದಕ್ಕೆ ಸಚಿವರು

ಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿಲ್ಲ. ಅದರ ಜೊತೆಗೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿ ಒಂದು ವರ್ಷವಾಗಿದ್ದರೂ ಕೂಡ ಇನ್ನು ಕೂಡ ಟೆಂಡರ್ ಕರೆದು ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಇರತಕ್ಕಂತಹ ತೊಂದರೆ ಏನು? ಇದರ ಬಗ್ಗೆ ಮಾನ್ಯ ಸಚಿವರು ಸಮರ್ಪಕವಾಗಿ ಮಾಹಿತಿಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಶ್ರೀ ಎ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಎತ್ತಿನ ಹೊಳೆ ಯೋಜನೆ lift component ಗೆ ಟೆಂಡರ್ ಕರೆದು. ಆ ಟೆಂಡರ್ ಪ್ರಾಜೆಕ್ಟ್ ರಿಪೋರ್ಟ್ ಮತ್ತು ಡಿಟೈಲ್ಡ್ ಎಸ್ಟಿಮೇಟ್ಸ್ ಮಾಡಿ, ಈಗಾಗಲೇ ಈ ಪ್ರಕ್ರಿಯೆ ಪ್ರಾರಂಭವಾಗಿದೆ. ಒಂದು lift component ಎರಡನೆಯದು conveynce component. ಆ lift component ಗೆ ಐದು ಪ್ಯಾಕೇಜ್‌ನಲ್ಲಿ ಟೆಂಡರ್ ಕರೆದಿದ್ದೇವೆ. ಅದು ಈಗ TAC (Technical Advisory Committee) ಮುಂದೆ ಬರುತ್ತದೆ. ಆ TAC evaluation ಮಾಡಿ, ತದನಂತರ ಬೋರ್ಡ್ ಮುಂದೆ ಬರುತ್ತದೆ. ಆಗ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ಸಾರಿಯ ಬಜೆಟ್‌ನಲ್ಲಿ 1,000 ಕೋಟಿ ರೂಪಾಯಿಗಳಿವೆ. ಗೌರವನ್ವಿತ ಸದಸ್ಯರು ಯಾವ್ಯಾವ ಕೆರೆಗಳು ತುಮಕೂರು ಜಿಲ್ಲೆಯಲ್ಲಿ ಬರುತ್ತದೆ ಕೇಳಿದ್ದೆ, ಆದರೆ ಅದಕ್ಕೆ ಸ್ಪೆಸಿಫಿಕ್ ಆಗಿ ಉತ್ತರ ಸಿಕ್ಕಿಲ್ಲವೆಂದು ಹೇಳಿದರು. Conveyance part-2 ಅದು detailed report ಮಾಡುತ್ತಿದ್ದೇವೆ. ಆ Conveyance part-2 ಆದಮೇಲೆ ನಾವು ಯಾವ್ಯಾವ ಕೆರೆಗಳೆಂದು ಹೇಳಬೇಕಾಗುತ್ತದೆ. ಅದರೂ ಕೂಡ ತುಮಕೂರು ಜಿಲ್ಲೆಯಲ್ಲಿ ಪಾವಗಡ, ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳಿಗೆ ನೀರನ್ನು ಒದಗಿಸಲಾಗುತ್ತದೆ. ಮತ್ತು ಇದನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆಂದು ಕೇಳಿದ್ದಾರೆ. ಇದನ್ನು ಟೆಂಡರ್ TAC ಮುಂದೆ ಅತೀ ಶೀಘ್ರದಲ್ಲಿ ಸಭೆ ನಡೆಯುತ್ತದೆ ಅದರ ಮುಂದೆ ಇಡುತ್ತೇವೆ. ಐದು ಪ್ಯಾಕೇಜ್‌ಗಳು ಏನಿದೆ ಅದನ್ನು evaluation ಮಾಡಬೇಕಾಗುತ್ತದೆ. Evaluation ಮಾಡಿ ತದನಂತರ ಬೋರ್ಡ್‌ನಲ್ಲಿ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಐದು ವರ್ಷದ ಕಾಲಮಿತಿಯಲ್ಲಿ ಈ ಯೋಜನೆಗಳನ್ನು ಮುಗಿಸಬೇಕು. ಇದು ಬಹಳ ಮುಖ್ಯವಾದಂತಹ ಯೋಜನೆ. 24 ಟಿಎಂಸಿ ಕೋಲಾರ, ತುಮಕೂರು,

ಚಿಕ್ಕಬಳ್ಳಾಪುರ ಎಲ್ಲಾ ಕಡೆಗೆ ಕುಡಿಯುವ ನೀರು ಮತ್ತು ಅಂತರ್‌ಜಲವನ್ನು ವೃದ್ಧಿ ಮಾಡುವಂತಹ ಯೋಜನೆಯಾಗಿದೆ. ಇದರಲ್ಲಿ ನೀರಾವರಿ ಯೋಜನೆಗಳು ಬರುವುದಿಲ್ಲ. ಆ ಭಾಗದಲ್ಲಿ ಬರುವಂತಹ ಎಲ್ಲಾ ಕೆರೆಗಳು ಏನು possibility ಇದೆ ಆ ಎಲ್ಲಾ ಕೆರೆಗಳಿಗೆ 60% ನೀರು ನಿಲ್ಲುವ ವರೆಗೆ ನಾವು ಕೆರೆಗಳನ್ನು ತುಂಬಬೇಕು. ಮತ್ತು ಕುಡಿಯುವ ನೀರಿನ ಸಲುವಾಗಿ ಈ ಯೋಜನೆಯನ್ನು ಮಾಡುತ್ತಿರುವುದು. ಇದರಲ್ಲಿ ಅವರು ಕೇಳಿದಂತಹ ಯಾವುದೇ ನೀರಾವರಿ ಯೋಜನೆಗಳಾಗುವುದಿಲ್ಲ.

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ:-** ಮಾನ್ಯ ಸಭಾಪತಿಯವರೆ, ಈ ಜಿಲ್ಲೆಗಳ ಜೊತೆಗೆ ಬೇರೆ ಜಿಲ್ಲೆಗಳನ್ನು ಕೂಡ ಜೋಡಿಸಿಕೊಳ್ಳಬೇಕು ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಇವತ್ತು ಕುಡಿಯುವ ನೀರು ಸಮಸ್ಯೆ ಬಹಳ ಇರುವುದರಿಂದ, ಈ ಯೋಜನೆಯನ್ನು ಬೆಂಗಳೂರು ನಗರಕ್ಕೂ ಕೂಡ ಏಕೆ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ? ಇದರ ಬಗ್ಗೆ ಕೂಡ ಸರ್ಕಾರ ಏನಾದರೂ ಚಿಂತನೆಯನ್ನು ಮಾಡುತ್ತದೆಯೇ? ಇನ್ನು ಎರಡು ವರ್ಷಗಳ ನಂತರ ಬೆಂಗಳೂರು ನಗರಕ್ಕೆ ಕುಡಿಯುವ ನೀರೇ ಸಿಗುವುದಿಲ್ಲವೆಂದು ಜನರು ಮಾತನಾಡುತ್ತಿದ್ದಾರೆ.

**ಸಭಾಪತಿಯವರು:-** ಆ ಯೋಜನೆಯಿಂದ ಬೆಂಗಳೂರು ನಗರಕ್ಕೂ ಕುಡಿಯುವ ನೀರನ್ನು ತರುವಂತಹ ಯೋಚನೆ ಇದೆಯೇ ಎಂದು ಕೇಳುತ್ತಿದ್ದಾರೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮೊಟ್ಟ ಮೊದಲನೆಯದಾಗಿ ಈ ಯೋಜನೆಯು ಮುಖ್ಯವಾಗಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಆ ಕಡೆಯಿಂದ ಬರಲಾಗುತ್ತಿದೆ. ಅವತ್ತಿನ ದಿವಸ ಸಭೆಯನ್ನು ಕರೆಯಲಾಗಿತ್ತು. ಸಭೆಗೆ ಗೌರವನ್ವಿತ ಸದಸ್ಯರು ಕೂಡ ಬಂದಿದ್ದರು. ಇದರ ಬಗ್ಗೆ ಮಾತುಕತೆ ಕೂಡ ಆಗಿದೆ. ಇವತ್ತಿನ ದಿವಸ ಮುಖ್ಯವಾಗಿ ಈ ಯೋಜನೆಯ ಉದ್ದೇಶ ಏನಿದೆ ಎಂದರೆ ಕೋಲಾರ, ಚಿಕ್ಕಬಳ್ಳಾಪುರ,

ತುಮಕೂರು ಇಲ್ಲಿಗೆ ಮೊದಲು 24 ಟಿ.ಎಂ.ಸಿ. ನೀರನ್ನು ಅದಕ್ಕೆ ಉಪಯೋಗಿಸಬೇಕು. ಇನ್ನು ಉಳಿದಂತಹ ನಿರನ್ನು ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೆ ಕುಡಿಯುವ ನೀರನ್ನು ಕೊಡಲಾಗುವುದು. ಮಾನ್ಯ ಸದಸ್ಯರು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಈ ಯೋಜನೆಯಿಂದ ಕೊಡಲಾಗುತ್ತದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಕೊಡಲು ಬಹಳಷ್ಟು option ಗಳು ಬೇರೆ ಬೇರೆ ಯೋಜನೆಯಲ್ಲಿದೆ. ಇದರಲ್ಲಿ ಇಲ್ಲ. ಅದರ ಬಗ್ಗೆ ಸೂಕ್ತ ಸಮಯದಲ್ಲಿ ಎಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಈ ಯೋಜನೆಯ ಪ್ರಾಮುಖ್ಯತೆಯು 7 ಜಿಲ್ಲೆಗಳಿಗೆ ಏನು ಅಂತರ್ಜಲ ಕುಸಿದು 1500 ಅಡಿಗಳಷ್ಟು ಅಂತರ್ಜಲ ಕೆಳಗೆ ಹೋಗಿದೆ, ಆ ಜಿಲ್ಲೆಗಳಿಗೆ ನೀರನ್ನು ಒದಗಿಸಬೇಕು. ಇದು ಅಡ್ವಾನ್ಸ್ ಸ್ಟೇಜ್ ಇರುವುದರಿಂದ ಎತ್ತಿನ ಹೊಳೆ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಪರಮಶಿವಯ್ಯನವರ ವಾರಾಹಿ ಯೋಜನೆ ಅದು ಒಂದು concept note ಇದೆ. ಆ concept note ಅನ್ನು DPR (Detailed Project Report) ಆಗಿ ತಯಾರು ಮಾಡುವುದಕ್ಕೆ 50 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಹಣವನ್ನು ಮೀಸಲು ಇಡಲಾಗಿದೆ. ಅದೆಲ್ಲಾ ಬಹಳಷ್ಟು ಇಶ್ಯೂಗಳು ಅದರಲ್ಲಿದೆ. ಅದರಲ್ಲಿ environment concerns, Technical challenges ಇದೆ. ಅದನ್ನೆಲ್ಲಾ ನೋಡಿ ಏನು ವರದಿ ಬರುತ್ತದೆ ಅದನಂತರ Expert Committee ಮುಂದಿಟ್ಟು ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

## ನೀರಾವರಿ ಯೋಜನೆಗಳಿಂದ ಭೂಮಿ ಕಳೆದುಕೊಂಡ ಜನರಿಗೆ ಪರಿಹಾರ

**1037; ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿ.ಸ.ಕ್ಷೇತ್ರ)**

ಅ) ಬೀದರ್ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ವಿವಿಧ ನೀರಾವರಿ ಯೋಜನೆಗಳ ವಿವರಗಳೇನು;

ಆ) ಜಿಲ್ಲೆಯಲ್ಲಿ ಇದರಿಂದ ಎಷ್ಟೆಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯಗಳು ದೊರಕುತ್ತಿವೆ; ಈ ಪ್ರತಿ ಯೋಜನೆಗಳು ಅನುಷ್ಠಾನವಾಗುವವರೆವಿಗೆ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು; ಈ ಪೈಕಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಯೋಜನೆಗಳು ಇನ್ನೂ ಅಪೂರ್ಣವಾಗಿವೆ;

ಇ) ಜಿಲ್ಲೆಯ ನೀರಾವರಿ ಯೋಜನೆಗಳಿಗೆ ಜಮೀನು ಮತ್ತು ಮನೆಮಠಗಳನ್ನು ಕಳೆದುಕೊಂಡಿರುವ ಇನ್ನೂ ಎಷ್ಟು ಜನರಿಗೆ ಸರ್ಕಾರ ಇದುವರೆವಿಗೂ ಎಷ್ಟು ಮೊತ್ತದ ಪರಿಹಾರವನ್ನು ನೀಡುವುದು ಬಾಕಿ ಇದೆ ಹಾಗೂ ಈ ಜನರಿಗೆ ಯಾವ ಯಾವ ಸ್ಥಳಗಳಲ್ಲಿ ಪುನರ್‌ವಸತಿ ಸೌಲಭ್ಯಗಳನ್ನು ಒದಗಿಸಲಾಗಿದೆ ಮತ್ತು ಪುನರ್ವಸತಿ ಸ್ಥಳಗಳಲ್ಲಿರುವ ಜನರಿಗೆ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಹಾಗೂ ಇದಕ್ಕಾಗಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು?

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ವಿವಿಧ ನೀರಾವರಿ ಯೋಜನೆಗಳ ವಿವರಗಳು ಇಂತಿವೆ:

1) **ಕಾರಂಜಾ ನೀರಾವರಿ ಯೋಜನೆ:** ಈ ಯೋಜನೆಗೆ 9.27 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದ್ದು, ಎಡದಂಡೆ ಕಾಲುವೆಯಡಿ 2521 ಹೆ., ಬಲದಂಡೆ ಕಾಲುವೆಯಡಿ 19217 ಹೆ., ಮುಂದಂಡೆ ಏತ ನೀರಾವರಿ ಯೋಜನೆಯಡಿ 3873 ಹೆ.,

ಮತ್ತು ಅತಿವಾಳ ಏತ ನೀರಾವರಿ ಯೋಜನೆಯಡಿ 3616 ಹೆ ಹೀಗೆ ಒಟ್ಟು 29,227 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

2) **ಚುಳಕಿನಾಲಾ ನೀರಾವರಿ ಯೋಜನೆ:** ಈ ಯೋಜನೆಗೆ 1.17 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದ್ದು, ಎಡದಂಡೆ ಕಾಲುವೆಯಡಿ 2226 ಹೆ, ಬಲದಂಡೆ ಕಾಲುವೆಯಡಿ 1821 ಹೆ, ಹೀಗೆ ಒಟ್ಟು 4047 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

3) **ಮುಲ್ಲಾಮಾರಿ ಮೇಲ್ದಂಡೆ ನೀರಾವರಿ ಯೋಜನೆ:** ಈ ಯೋಜನೆಗೆ 1.08 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದ್ದು, ಎಡದಂಡೆ ಕಾಲುವೆಯಡಿ 1255 ಹೆ, ಬಲದಂಡೆ ಕಾಲುವೆಯಡಿ 2024 ಹೆ, ಹೀಗೆ ಒಟ್ಟು 3279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

**ಸರಣಿ ಬ್ರಿಡ್ಜ್ ಕಂ ಬ್ಯಾರೇಜ್:**

ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಮಾಂಜ್ರಾ ನದಿಗೆ ಅಡ್ಡಲಾಗಿ ನಾಲ್ಕು ಸರಣಿ ಬ್ಯಾರೇಜುಗಳನ್ನು ಜೀರಗಿಹಾಳ್, ಮಣಿಕೇಶ್ವರ್, ಹಾಲಹಳ್ಳಿ ಮತ್ತು ಚಂದಾಪುರ ಗಳಿಗೆ 4.80 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದ್ದು, ಕಾಮಗಾರಿಗಳು ಪೂರ್ಣಗೊಂಡಿದ್ದು ಒಟ್ಟು 31,298 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ರೈತರು ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಸೌಲಭ್ಯವನ್ನು ಪಡೆಯಬಹುದಾಗಿದೆ.

**ಸಣ್ಣ ನೀರಾವರಿ ಇಲಾಖೆ:** ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ 117 ಕೆರೆಗಳು, 10 ಏತ ನೀರಾವರಿ ಯೋಜನೆಗಳು ಹಾಗೂ 30 ಅಣೆಕಟ್ಟು/ಪಿಕಪ್/ಬಂದಾರಗಳಡಿ ಒಟ್ಟು 26,297 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ.

ಆ) ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆಯಡಿ 22,113 ಹೆ. ಚುಳಕಿನಾಲಾ ಯೋಜನೆಯಡಿ ಜಲಾಶಯದಲ್ಲಿ ಶೇಖರಣೆಯಾದ ನೀರಿನ ಪರಿಮಾಣಕ್ಕೆ ಅನುಗುಣವಾಗಿ 343 ಹೆ. ಮತ್ತು ಮುಲ್ಲಾಮರಿ ಮೇಲ್ದಂಡೆ ಯೋಜನೆಯಡಿ 1779 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕುತ್ತಿದೆ.

ಕಾರಂಜಾ ಯೋಜನೆಗೆ ಇಲ್ಲಿಯವರೆಗೂ ₹ 560.24 ಕೋಟಿಗಳು, ಚುಳಕಿನಾಲಾ ಯೋಜನೆಗೆ ₹ 74.00 ಕೋಟಿಗಳು ಮತ್ತು ಮುಲ್ಲಾಮಾರಿ ಮೇಲ್ದಂಡೆ ಯೋಜನೆಗೆ ₹ 19.92 ಕೋಟಿಗಳ ವೆಚ್ಚ ಮಾಡಲಾಗಿದೆ.

ಕಾರಂಜಾ ಯೋಜನೆ ಬಹುತೇಕ ಪೂರ್ಣಗೊಂಡಿದ್ದು, ಎಡದಂಡೆ ಕಾಲುವೆ ಪೂರ್ಣಗೊಂಡಿದ್ದು, ಬಲದಂಡೆ ಕಾಲುವೆ ಕಿಮೀ. 131 ರವರೆಗೆ ಪೂರ್ಣಗೊಂಡಿದ್ದು, ತುದಿ ವಿತರಣಾ ಕಾಲುವೆ ಸಂ.107 ರ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂದಂಡೆ ಕಾರಂಜಾ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಯ ಕಿಮೀ. 21.00 ರಿಂದ 24.00 ರವರೆಗೆ ಮತ್ತು ವಿತರಣಾ ಕಾಲುವೆ ಸಂಖ್ಯೆ.ಡಿ.1(ಎ) ಪ್ರಗತಿಯಲ್ಲಿದ್ದು ಉಳಿದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಕಾರಂಜಾ ಸಂತ್ರಸ್ತರ ಬಹುದಿನದ ಬೇಡಿಕೆಯಾದ ಅತಿವಾಳ್ ಏತ ನೀರಾವರಿ ಯೋಜನೆಯನ್ನು ಇತ್ತೀಚೆಗೆ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

ಚುಳಕಿ ನಾಲಾ ಯೋಜನೆಯು ಪೂರ್ಣಗೊಂಡಿರುತ್ತದೆ.

ಮುಲ್ಲಾಮಾರಿ ಮೇಲ್ದಂಡೆ ಯೋಜನೆ ಈಗಾಗಲೇ ಪೂರ್ಣಗೊಂಡಿದ್ದು, ಈಗ ಕೇಂದ್ರ ಸರ್ಕಾರದ ಎಐಬಿಪಿ–ಇಆರ್‌ಎಮ್ ಅಡಿಯಲ್ಲಿ ಕಾಲುವೆಗಳ ಆಧುನೀಕರಣ ಮತ್ತು ಪುನಶ್ಚೇತನ ಕಾಮಗಾರಿಗಳಿಗೆ ಕೇಂದ್ರ ಯೋಜನಾ ಆಯೋಗದಿಂದ ₹ 8.21 ಕೋಟಿಗಳ ಮೊತ್ತಕ್ಕೆ

ಒಪ್ಪಿಗೆ ನೀಡಿದ್ದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಪ್ರಗತಿಯಲ್ಲಿರುತ್ತದೆ.

**ಸಣ್ಣ ನೀರಾವರಿ ಇಲಾಖೆ:**

ಸಣ್ಣ ನೀರಾವರಿ ಅಡಿ ಬೀದರ್ ಜಿಲ್ಲೆಯಲ್ಲಿ 26,297 ಹೆ. (64,981) ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಕಳೆದ ವರ್ಷಗಳಲ್ಲಿ 56 ಸಣ್ಣ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈಗಾಗಲೇ 32 ಯೋಜನೆಗಳನ್ನು ಪೂರ್ಣ ಗೊಳಿಸಲಾಗಿದೆ. ಈ ಯೋಜನೆಗಳಿಗೆ ಇದುವರೆಗೆ ₹ 5,922.05 ಲಕ್ಷ ವೆಚ್ಚ ಮಾಡಲಾಗಿದೆ. ಈ ಯೋಜನೆಗಳಿಂದ 6,131 ಹೆ. (15,150 ಎಕರೆ) ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ.

**ಸರಣಿ ಬ್ರಿಡ್ಜ್ ಕಂ ಬ್ಯಾರೇಜ್:**

ಕೃಷ್ಣಾ ಭಾಗ್ಯ ಜಲ ನಿಗಮದಡಿ ಕೈಗೊಳ್ಳಲಾಗಿರುವ ಮಾಂಜ್ರಾ ನದಿಗೆ ಅಡ್ಡಲಾಗಿ ನಾಲ್ಕು ಸರಣಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳ ಸಿವಿಲ್ ಕಾಮಗಾರಿಗಳು ಮತ್ತು ಗೇಟ್ ಅಳವಡಿಕೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಇಲ್ಲಿಯವರೆಗೂ ₹ 24,194.60 ಲಕ್ಷಗಳ ವೆಚ್ಚ ಮಾಡಲಾಗಿದೆ.

ಇ) ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳಾದ ಕಾರಂಜಾ ಯೋಜನೆ, ಚುಳಕಿನಾಲಾ ಯೋಜನೆ, ಮೇಲ್ದಂಡೆ ಮುಲ್ಲಾಮಾರಿ ಯೋಜನೆಗಳಲ್ಲಿ ಜಮೀನು ಮತ್ತು ಮನೆ ಕಳೆದುಕೊಂಡಿರುವ ಒಟ್ಟು 2617 ಕುಟುಂಬಗಳ ಭೂ ಮಾಲಿಕರಿಗೆ ಇಲ್ಲಿಯವರೆಗೆ ಒಟ್ಟು ₹ 5175.00 ಲಕ್ಷ ಪರಿಹಾರ ಧನ ನೀಡಲಾಗಿದೆ. ಇನ್ನೂ 838 ಕುಟುಂಬಗಳಿಗೆ 21.00 ಕೋಟಿ ಪರಿಹಾರ ಧನ ಪಾವತಿಸುವುದು ಬಾಕಿ ಇರುತ್ತದೆ. ಇದಕ್ಕಾಗಿ ₹ 21.51 ಕೋಟಿಗಳನ್ನು ಸರ್ಕಾರವು ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಭೂಸ್ವಾಧೀನ

ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಪರಿಹಾರ ಧನ ಪಾವತಿಸಲಾಗುವುದು.

ಬೀದರ್ ಜಿಲ್ಲೆಯಲ್ಲಿ ಕಾರಂಜಾ ಯೋಜನೆಯಡಿ ಮನೆಗಳನ್ನು ಕಳೆದುಕೊಂಡವರಿಗ ಬೀದರ್ ತಾಲ್ಲೂಕಿನ ಸಂಗೋಳಗಿ, ನೆಲವಾಡ, ನಿಜಾಂಪುರ, ರಂಜೋಳಖೇಣಿ ಗ್ರಾಮಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ, ಮತ್ತು ಹುಮನಾಬಾದ್ ತಾಲ್ಲೂಕಿನ ಅಮೀರಾಬಾದವಾಡ, ಡಾಕುಳಗಿ, ಅತಿವಾಳ, ಗ್ರಾಮಗಳಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಿ ಪುನರ್ವಸತಿ ಕಲ್ಪಿಸಲಾಗಿದೆ.

**ಚುಳಕಿನಾಲಾ ಯೋಜನೆ:–** ಬಸವಕಲ್ಯಾಣ ತಾಲ್ಲೂಕಿನಲ್ಲಿ ಚುಳಕಿನಾಲಾ ಯೋಜನೆಯಡಿ ಮನೆಗಳನ್ನು ಕಳೆದುಕೊಂಡ ಮಾಲಿಕರಿಗೆ ಧನ್ನೂರ (ಕೆ), ಮುಸ್ತಾಪೂರ ಗ್ರಾಮಗಳಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದೆ.

**ಮುಲ್ಲಾಮಾರಿ ಮೇಲ್ದಂಡೆ ಯೋಜನೆ:–** ಯೋಜನೆ ಅಡಿಯಲ್ಲಿ ಕಿಣ್ಣಿ (ಶರಣ ನಗರ) ಮತ್ತು ಮಶಾಳ ತಾಂಡಾಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ಕಲ್ಪಿಸಲಾಗಿದೆ.

ಮೇಲಿನ ಎಲ್ಲಾ ಯೋಜನೆಗಳ ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳಾದ ಕೂಡು ರಸ್ತೆಗಳು, ಆಂತರಿಕ ರಸ್ತೆಗಳು, ವಿದ್ಯುತ್ ಪೂರೈಕೆ, ನೀರು ಸರಬರಾಜು, ಧಾರ್ಮಿಕ ಕಟ್ಟಡಗಳು ಹಾಗೂ ಸಾರ್ವಜನಿಕ ಕಟ್ಟಡಗಳು ಕಲ್ಪಿಸಲಾಗಿದೆ.

ಕಾರಂಜಾ ಯೋಜನೆಯಡಿ ಪುನರ್ವಸತಿ ಕೇಂದ್ರಗಳನ್ನು ಜಿಲ್ಲಾ ಪಂಚಾಯತಿಗೆ ಹಸ್ತಾಂತರಿಸಲಾಗಿದ್ದು, ರಂಜೋಳಖೇಣಿ ಪುನರ್ವಸತಿ ಕೇಂದ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ ಬಾಕಿ ಇದ್ದು, ಪೂರ್ಣಗೊಳಿಸಿದ ನಂತರ ಜಿಲ್ಲಾ ಪಂಚಾಯಿತಿಗೆ ಹಸ್ತಾಂತರಿಸಲಾಗುವುದು.

ಇತ್ತೀಚೆಗೆ ಸಂತ್ರಸ್ತರ ಬೇಡಿಕೆಗಳನ್ನು ಪರಿಶೀಲಿಸಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ವಯ ಕಾರಂಜಾ ಯೋಜನೆಯ ಪುನರ್ವಸತಿ ಕೇಂದ್ರಗಳಲ್ಲಿ ರಸ್ತೆಯ ಅಭಿವೃದ್ಧಿ ಹಾಗೂ ಚರಂಡಿ ನಿರ್ಮಿಸುವ ಸಲುವಾಗಿ ಸರ್ಕಾರವು ₹ 160.00 ಲಕ್ಷಗಳ ಅನುದಾನ ಒದಗಿಸಿದ್ದು, ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ ಹಾಗೂ ನೀರು ಸರಬರಾಜು ಯೋಜನೆ ಕಲ್ಪಿಸಲು ₹ 88.00 ಲಕ್ಷ ಮೊತ್ತದ ಕಾಮಗಾರಿಯನ್ನು ಜಲ ನಿರ್ಮಲ ಯೋಜನೆ ಅಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಕೈಗೆತ್ತಿಕೊಳ್ಳಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ವೆಚ್ಚ ಮಾಡಿದ ವಿವರ ಈ ಕೆಳಗಿನಂತಿವೆ.

| ಕ್ರ.ಸಂ. | ಯೋಜನೆಯ ಹೆಸರು | ಖರ್ಚು ಮಾಡಿದ ಹಣದ ವಿವರ (₹ ಲಕ್ಷಗಳಲ್ಲಿ) | | |
|---|---|---|---|---|
| | | 2010–11 | 2011–12 | 2012–13 |
| 1 | ಕಾರಂಜಾ ಯೊಜನೆ | – | 108.85 | – |
| 2 | ಚುಳಕಿನಾಲಾ ಯೋಜನೆ | 4.55 | 1.75 | – |
| 3 | ಮುಲ್ಲಾಮಾರಿ ಯೋಜನೆ | 2.95 | 2.70 | – |

**ಸರಣಿ ಬ್ರಿಡ್ಜ್ ಕಂ ಬ್ಯಾರೇಜ್:**

ಸರಣಿ ಬ್ರಿಡ್ಜ್ ಕಂ ಬ್ಯಾರೇಜಿನ ಹಿನ್ನೀರಿನಲ್ಲಿ ಮುಳುಗಡೆಯಾಗುವ ಜಮೀನುಗಳ ಪೈಕಿ 244 ಎಕರೆ 08 ಗುಂಟೆ ಕ್ಷೇತ್ರವನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಅದರಲ್ಲಿ 74 ಎಕರೆ 18 ಗುಂಟೆ ಕ್ಷೇತ್ರಕ್ಕೆ ಭೂಸ್ವಾಧೀನ ಕಾಯ್ದೆ ಕಲಂ 11ರನ್ವಯ ಐತೀರ್ಪು ರಚಿಸಿ ₹ 37,43,080/– ಗಳನ್ನು ಭೂಮಾಲೀಕರಿಗೆ ಪಾವತಿಸಲಾಗಿದೆ ಮತ್ತು 169 ಎಕರೆ 30 ಗುಂಟೆ ಕ್ಷೇತ್ರಕ್ಕೆ ಭೂಸ್ವಾಧೀನ ಕಾಯ್ದೆ ಕಲಂ 4(1) ರ

ಅಧಿಸೂಚನೆ ಹೊರಡಿಸಲಾಗಿದ್ದು, ಸಹ ಮೋಜಣಿ ಕಾರ್ಯ ಪ್ರಗತಿಯಲ್ಲಿದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಬಾಕಿ ಪರಿಹಾರವನ್ನು ಪಾವತಿಸಲಾಗುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೆ, ಬೀದರ್ ಜಿಲ್ಲೆಯಲ್ಲಿರುವಂತಹ ಮೂರು ಪ್ರಮುಖವಾದಂತಹ ನೀರಾವರಿ ಯೋಜನೆಗಳಲ್ಲಿ ಒಂದು ಕಾರಂಜಾ ನೀರಾವರಿ ಯೋಜನೆ, ಚುಳಕಿ ನಾಲಾ ಯೋಜನೆ ಮತ್ತೊಂದು ಮುಲ್ಲಾಮಾರಿ ನೀರಾವರಿ ಯೋಜನೆ. ಕಾರಂಜಾ ವಿಷಯ ಮೊನ್ನೆಯ ದಿವಸ ಬೇರೆ ವಿಷಯದ ಬಗ್ಗೆ ಚರ್ಚೆಗೆ ಬಂದಾಗ ಮಾನ್ಯ ಸಚಿವರು ಈ ಯೋಜನೆಯನ್ನು ಒಂದುವರೆ ವರ್ಷಗಳಲ್ಲಿ ಮುಗಿಸುತ್ತೇನೆಂದು ವಾಗ್ದಾನ ಮಾಡಿದ್ದಾರೆ. ಅಲ್ಲಿರುವಂತಹ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಸ್ವಲ್ಪ ಸಮಸ್ಯೆ ಇದೆ. ಅದನ್ನು ಮುಗಿಸಿ ಭೂ ಮಾಲೀಕರಿಗೆ ಕೊಡಬೇಕಾದಂತಹ ಪರಿಹಾರವನ್ನು ಕೊಟ್ಟು ಬಿಡುತ್ತೇನೆಂದು ಹೇಳಿದ್ದಾರೆ. ಇನ್ನು ಉಳಿದ ಎರಡು ಯೋಜನೆಗಳಿವೆ. ಅದರಲ್ಲಿ ಮಾನ್ಯ ಸಚಿವರು ಹೇಳಿದಂತೆ ಚುಳಕಿ ನಾಲಾ ಯೋಜನೆಯು ಪೂರ್ಣಗೊಂಡಿರುತ್ತದೆ. ಎರಡನೆಯದು ಮುಲ್ಲಾಮಾರಿ ಮೇಲ್ದಂಡೆ ಯೋಜನೆಯು ಈಗಾಗಲೇ ಪೂರ್ಣಗೊಂಡಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಏನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆಂದರೆ, ನಾವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯೋಜನೆಗಳನ್ನು ಮುಗಿಸಿಯಾದ ಮೇಲೆಯೂ ಅವು ಅನುಷ್ಠಾನಕ್ಕೆ ಬರದೇ ರೈತರಿಗೆ ಉಪಯೋಗವಾಗದೇ ಇದ್ದರೆ ಇದರ ಉದ್ದೇಶವೇನು? ಉದಾಹರಣೆಗೆ ಚುಳಕಿ ನಾಲಾ ಯೋಜನೆ ಮಾನ್ಯ ಸಚಿವರು ಹೇಳಿದ ಪ್ರಕಾರವೇ 4,047 ಹೆಕ್ಟೇರ್ ನೀರಾವರಿಯಾಗಬೇಕು.

12–00 ಗಂಟೆ

ಆದರೆ ನೂರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡಿದ ಮೇಲೂ ಈಗ ನೀರಾವರಿಯಾಗುತ್ತಿರುವುದು ಕೇವಲ 343 ಹೆಕ್ಟೇರ್ ಪ್ರದೇಶ

ಮಾತ್ರ. ಹೀಗಾಗಿ ಇನ್ನೂ 3704 ಹೆಕ್ಟೇರ್ ಪ್ರದೇಶ ನೀರಾವರಿಯಾಗದೆ ಬಾಕಿ ಉಳಿದಿದೆ ಎನ್ನುವಂತಹ ಅಂಶ ಸ್ಪಷ್ಟವಾಗುತ್ತಿದೆ. ಅಂದರೆ ಈ ಪ್ರಾಜೆಕ್ಟ್‌ನಿಂದ ಕೇವಲ ಸರಾಸರಿ 12% implement ಆದಂತಾಗಿದೆ.

ಮುಲ್ಲಾಮಾರಿ ಮೇಲ್ದಂಡೆ ನೀರಾವರಿ ಯೋಜನೆ ಮುಖಾಂತರ ತಾಂತ್ರಿಕವಾಗಿ 3279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾಗಿತ್ತು. ಆದರೆ ಈಗ 1779 ಹೆಕ್ಟೇರ್ ಪ್ರದೇಶ ಮಾತ್ರ ನೀರಾವರಿ ಆಗುತ್ತಿದೆ. ಅಂದರೆ 60% project ಅನುಷ್ಠಾನವಾಗಿದ್ದು ಇನ್ನೂ 40% ಅಂದರೆ ಸುಮಾರು 1500 ಎಕರೆ ಪ್ರದೇಶವೇನು ನೀರಾವರಿ ಆಗಬೇಕಾಗಿತ್ತು ಆ ರೈತರು ಇದರಿಂದ ವಂಚಿತರಾಗುತ್ತಿದ್ದಾರೆ.

ಕಾರಂಜಾ ಯೋಜನೆಯಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸುವ ವಿಚಾರದ ಬಗ್ಗೆ ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. 1970ರಲ್ಲಿ ಪ್ರಾರಂಭವಾದಂತಹ ಈ ಪ್ರಾಜೆಕ್ಟ್‌ನಿಂದಾಗಿ ನಿರಾಶ್ರಿತರಾದವರಿಗೆ ಪುನರ್ವಸತಿಯನ್ನು ಕಲ್ಪಿಸಲಾಗಿದೆ ಎಂದು ತಿಳಿಸಲಾಗುತ್ತಿದೆ. ಈ ಯೋಜನೆ ಪ್ರಾರಂಭವಾಗಿ ಸುಮಾರು 40 ವರ್ಷಗಳೇ ಕಳೆದಿವೆ. **‘ಕಾರಂಜಾ ಯೋಜನೆಯಡಿ ಪುನರ್ವಸತಿ ಕೇಂದ್ರಗಳನ್ನು ಜಿಲ್ಲಾ ಪಂಚಾಯಿತಿಗೆ ಹಸ್ತಾಂತರಿಸಲಾಗಿದ್ದು, ರಂಜೋಳಖೇಣಿ ಪುನರ್ವಸತಿ ಕೇಂದ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ ಬಾಕಿ ಇದ್ದು, ಪೂರ್ಣಗೊಳಿಸಿದ ನಂತರ ಜಿಲ್ಲಾ ಪಂಚಾಯತಿಗೆ ಹಸ್ತಾಂತರಿಸಲಾಗುವುದು’** ಎಂದು ಸರ್ಕಾರದ ಉತ್ತರದಲ್ಲಿ ತಿಳಿಸಲಾಗಿದೆ. ಅಲ್ಲಿ ಪುನರ್ವಸತಿ ಯೋಜನೆಯ ಅಡಿಯಲ್ಲಿ ಮನೆಗಳನ್ನೇನೊ ನಿರ್ಮಿಸಿದ್ದಾರೆ, ಆದರೆ ಆ ಮನೆಗಳಿಗೆ ಇದುವರೆಗೂ ಸಹ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜನರು ಅಲ್ಲಿಗೆ ಹೋಗಿ ವಾಸಿಸುವುದಾದರೂ ಹೇಗೆ? ಆ ಮನೆಗಳನ್ನು ಕೇವಲ ಜಾನುವಾರುಗಳಿಗಾಗಿ ಉಪಯೋಗಿಸಲಾಗುತ್ತಿದೆಯೇ ಹೊರತು ಜನರು ಬಂದು ವಾಸಿಸುವಂತಹ ಯಾವುದೇ ಸೌಕರ್ಯಗಳು ಅಲ್ಲಿಲ್ಲ. ಈ ಮೂರು

ಅಂಶಗಳ ಬಗ್ಗೆ ನಾನು ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ಬಯಸುತ್ತಿದ್ದೇನೆ.

ದಯವಿಟ್ಟು ಮಾನ್ಯ ಸಚಿವರು ಆದಷ್ಟು ಬೇಗನೆ ಬೀದರ್‌ಗೆ ಭೇಟಿಕೊಟ್ಟು, ಈ ಯೋಜನೆಗಳಿಂದ ಇಷ್ಟು ಕಡಿಮೆ ಪ್ರಮಾಣದಲ್ಲಿ ನೀರಾವರಿಯಾಗುತ್ತಿರುವುದಕ್ಕೆ ಕಾರಣವೇನೆಂಬುದನ್ನು ಕೂಡ ಪರಿಶೀಲನೆ ಮಾಡಿಸಬೇಕಾಗುತ್ತದೆ. ಕಾರಂಜಾ ಯೋಜನೆಯನ್ನು ಒಂದೂವರೆ ವರ್ಷಗಳಲ್ಲಿ ಮುಗಿಸಲಾಗುತ್ತದೆ ಎಂಬುದಾಗಿ ಮಾನ್ಯ ಸಚಿವರು ಈಗಾಗಲೇ ಏನು ವಾಗ್ದಾನವನ್ನು ಮಾಡಿದ್ದಾರೆ, ಅದನ್ನು ಸಹ ಪೂರ್ಣಗೊಳಿಸಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಎಂ.ಬಿ. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಈ ಕಾರಂಜಾ ಪ್ರಾಜೆಕ್ಟ್ 1970-71ರಲ್ಲಿ 9.90 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬರಪರಿಹಾರ ಕಾಮಗಾರಿಯಾಗಿ ಪ್ರಾರಂಭವಾಯಿತು. ಮುಂದೆ 1995-96ನೇ ಸಾಲಿನಲ್ಲಿ ಈ ಯೋಜನೆಯನ್ನು ₹ 258.17 ಕೋಟಿಗೆ ಮತ್ತು 2008-09ನೇ ಸಾಲಿನಲ್ಲಿ ₹ 564.3 ಕೋಟಿಗಳಿಗೆ ನಿಗದಿಪಡಿಸಲಾಯಿತು. ಮುಂದೆ Central Water Commission ಯವರು under AIBP (Accelerated Irrigation Benefits Programme) ನಲ್ಲಿ ಅಂತಿಮವಾಗಿ ₹ 635.18 ಕೋಟಿಗಳಿಗೆ ನಿಗದಿಪಡಿಸಿರುತ್ತಾರೆ. ಇವೊತ್ತು ಈ ಯೋಜನೆಗೆ ₹ 180.00 ಕೋಟಿಗಳ ಮೊತ್ತದ Benefits Programme grant ಕೂಡ ಸಿಕ್ಕಿದೆ. ಇನ್ನು 74 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಮಾನ್ಯ ಸದಸ್ಯರೇನು ಪ್ಯಾಕೇಜ್ ಬಗ್ಗೆ ತಿಳಿಸಿದ್ದಾರೆ, ಲ್ಯಾಂಡ್‌ಗೆ ಸಂಬಂಧಿಸಿದಂತಹ ಒಂದು ಹೈಕೋರ್ಟ್ ಆದೇಶ ಕೂಡ ಇದೆ, ಇಲಾಖೆಯ ಉಪ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವಂತಹ ₹ 50 ಕೋಟಿಗಳ ಒಂದು ಪ್ಯಾಕೇಜ್ ಕೂಡ ಇದೆ.

ಗೋದಾವರಿ ಬೇಸಿನ್‌ನಲ್ಲಿ, ಕಾರಂಜಾ ಯೋಜನೆಯ ಮುಖಾಂತರ 9.27 ಟಿ.ಎಂ.ಸಿ. ನೀರಿನ ಲಭ್ಯತೆ ಇದೆ. ಒಟ್ಟು 29,227 ಹೆಕ್ಟೇರ್ ಪ್ರದೇಶಕ್ಕೆ

ಈ ಯೋಜನೆಯಿಂದ ನೀರಾವರಿ ಕಲ್ಪಿಸಬಹುದಾಗಿದೆ. ಕಾರಂಜಾ ಯೋಜನೆ ಜೊತೆಗೆ ಕಾರಂಜಾ ಸಂತ್ರಸ್ತರ ಬಹಳ ದಿನಗಳ ಬೇಡಿಕೆಯಾದ **ಅತಿವಾಳ್ ಏತ ನೀರಾವರಿ ಯೋಜನೆ**ಯನ್ನು ಕೂಡ ಇನ್ನು 18 ತಿಂಗಳುಗಳಲ್ಲಿ ಪೂರ್ಣಗೊಳಿಸುತ್ತೇವೆ. ಈ ವಿಚಾರವಾಗಿ ಹಿರಿಯ ಸದಸ್ಯರಾದ ಮಾನ್ಯ ಶಾಣಪ್ಪನವರು ಪ್ರಸ್ತಾಪ ಮಾಡಿದ್ದಾರೆ.

**ಚುಳಕಿನಾಲಾ ನೀರಾವರಿ ಯೋಜನೆ** ಕೂಡ ಗೋದಾವರಿ ಬೇಸಿನ್‌ನಲ್ಲಿ ಬರುವಂತಹ ಒಂದು ಯೋಜನೆಯಾಗಿದ್ದು, 1.17 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದೆ. ಈಗಾಗಲೇ ಆ ಕಾಮಗಾರಿಗಳು ಕೂಡ ಮುಗಿದಿವೆ, ಗೌರವಾನ್ವಿತ ಸದಸ್ಯರು ತಿಳಿಸಿರುವ ಪ್ರಕಾರ ನಾವು originally propose ಮಾಡಿದ್ದು 4047 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕೆಂಬುದಾಗಿತ್ತು, ಆದರೆ ಒಳಹರಿವು ಬಹಳ ಕಡಿಮೆ ಇರುವುದರಿಂದ ಅಥವಾ ಈ ಯೋಜನೆಯನ್ನು ತಯಾರು ಮಾಡುವಾಗ ಒಳಹರಿವಿನ ಪ್ರಮಾಣವನ್ನು ನಿಖರವಾಗಿ ಲೆಕ್ಕಾಚಾರ ಮಾಡದಿರುವುದರಿಂದಾಗಿ ಅಥವಾ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಕೂಡ ಈ ರೀತಿಯ ಪರಿಸ್ಥಿತಿಯಾಗಿದೆ ಎಂಬುದನ್ನು ಕೂಡ ನಾವು ವಿಚಾರ ಮಾಡಬಹುದಾಗಿದೆ. ಹೀಗಾಗಿ ಚುಳಕಿನಾಲಾ ಯೋಜನೆಯಡಿ ಜಲಾಶಯದಲ್ಲಿ ಶೇಖರಣೆಯಾದ ನೀರಿನ ಪರಿಮಾಣಕ್ಕೆ ಅನುಗುಣವಾಗಿ 343 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ದೊರಕುತ್ತಿದೆ.

**ಮುಲ್ಲಾಮಾರಿ ಮೇಲ್ದಂಡೆ ನೀರಾವರಿ ಯೋಜನೆ**ಯು ಕೃಷ್ಣ ಬೇಸಿನ್‌ನಲ್ಲಿ ಬರುತ್ತದೆ. ಈ ಯೋಜನೆಯ ಬಹಳಷ್ಟು ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು 1.08 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಯಿಂದ ಒಟ್ಟು 3279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾಗಿತ್ತು, ಆದರೆ 1779 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. 2014 ರ ಮಾರ್ಚ್-ಏಪ್ರಿಲ್ ತಿಂಗಳೊಳಗಾಗಿ ನಾವು ಇನ್ನುಳಿದ ಭಾಗವನ್ನು ಕೂಡ ನೀರಾವರಿಗೆ ಒಳಪಡಿಸುವಂತಹ ಕೆಲಸವನ್ನು ಮಾಡುತ್ತೇವೆ. ಒಟ್ಟಾರೆ ಈ ಯೋಜನೆಯನ್ನು

ಪೂರ್ಣಗೊಳಿಸಲು ₹ 74.94 ಕೋಟಿಗಳು ಬೇಕಾಗುತ್ತದೆ. ಹೈಕೋರ್ಟ್ ಆದೇಶದಲ್ಲಿ ತಿಳಿಸಿರುವ ಪ್ರಕಾರ R & R improvement ಗೆ ಸುಮಾರು ₹ 55.00 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗಿದೆ. ಈ ಬಗ್ಗೆ ಕಂದಾಯ ಇಲಾಖೆಯಿಂದ ಸಚಿವ ಸಂಪುಟಕ್ಕೆ ಒಂದು ಪ್ರಸ್ತಾವನೆ ಬಂದಿತ್ತು. ಆರ್ಥಿಕ ಇಲಾಖೆಯವರು ಇದನ್ನು ಒಂದು ಪಾಲಿಸಿ ಮಾಡಿಕೊಂಡು ಮತ್ತೆ ಕಳುಹಿಸಿಕೊಡಿ ಎಂದು ತಿಳಿಸಿದ್ದಾರೆ. ಆ ಬಗ್ಗೆ ನಾನು ಸಂಬಂಧಪಟ್ಟವರಿಗೆ ಈಗಾಗಲೇ ಸೂಚನೆಗಳನ್ನು ಸಹ ಕೊಟ್ಟಿದ್ದೇನೆ. ಪಾಲಿಸಿ ಮಾಡಿ ಮತ್ತೆ ಸಚಿವ ಸಂಪುಟದ ಮುಂದೆ ತಂದು ₹ 55.00 ಕೋಟಿ ರೂಪಾಯಿಗಳ R & R Package ಏನಿದೆ ಅದನ್ನು ಸಹ ಬಿಡುಗಡೆಗೊಳಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಅಲ್ಲಿ ಭೂಸ್ವಾಧೀನ ವಿಚಾರದಲ್ಲಿ ಕೂಡ ಬಹಳಷ್ಟು ಸಮಸ್ಯೆಗಳಿವೆ. 973 ಎಕರೆ ಏನು submersion ಆಗುತ್ತದೆ, ಅದಕ್ಕಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಈಗಾಗಲೇ ಬೀದರ್‌ನ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಸರ್ಕಾರ ₹ 21.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ಇತ್ತೀಚೆಗೆ ಈ ಬಗ್ಗೆ ಸಭೆ ನಡೆಸಿದಾಗ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಸ್ಪಷ್ಟೀಕರಣವನ್ನು ಕೇಳಿದ್ದೇವೆ, not fit for appeal cases ಏನಿದೆ ಅವುಗಳನ್ನು ಕಂದಾಯ ಇಲಾಖೆಯ Legal Cell ನಿಂದ ತಕ್ಷಣವೇ ನಮಗೆ ಕಳುಹಿಸಿಕೊಡುವಂತೆ ತಿಳಿಸಿದ್ದು, ಅಲ್ಲಿಂದ ಬಂದ ಕೂಡಲೇ ಅದನ್ನು fallow up ಮಾಡಿ, parsue ಮಾಡುವಂತೆ ನಮ್ಮ ಮುಖ್ಯ ಇಂಜಿನಿಯರ್‌ರವರಿಗೆ ಕೂಡ ತಿಳಿಸಿದ್ದೇವೆ. ಅದಕ್ಕೆ ಬೇಕಾದಂತಹ ಹಣವನ್ನು ಕೂಡ ನಾವು ಬಿಡುಗಡೆ ಮಾಡುತ್ತೇವೆ. ಈಗಾಗಲೇ ಈ ವಿಚಾರವಾಗಿ ನಾನು ಒಂದು ಸಭೆಯನ್ನು ಕೂಡ ಮಾಡಿದ್ದೇನೆ. ಬರುವಂತಹ ದಿನಗಳಲ್ಲಿ ನಾನೇ ಅಲ್ಲಿಗೆ ಖುದ್ದಾಗಿ ಬಂದು, ಸ್ಥಳೀಯರ ಜೊತೆಗೂಡಿ ಸ್ಥಳ ಪರಿಶೀಲನೆ ಮಾಡಿ, ಅವರು ಆ ಸಂದರ್ಭದಲ್ಲಿ ಏನು ಸಲಹೆಗಳನ್ನು ಕೊಡುತ್ತಾರೆ, ಆ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ಯೋಜನೆಗಳನ್ನು ಕಾಲಮಿತಿಯಲ್ಲಿ ಅಂದರೆ 18 ತಿಂಗಳಲ್ಲಿ ಪೂರ್ಣಗೊಳಿಸುವುದಕ್ಕೆ ನಾವು ಶಕ್ತಿಮೀರಿ ಪ್ರಯತ್ನಗಳನ್ನು ನಡೆಸುತ್ತೇವೆ. ಎಲ್ಲಿಯಾದರೂ ಆ

ಯೋಜನೆಯನ್ನು remodeling ಅಥವಾ restructuring ಮಾಡಬೇಕಾಗಿತ್ತು ಅಥವಾ ಒಳಹರಿವಿನ ಪ್ರಮಾಣವೇನು ಕಡಿಮೆಯಾಗಿದೆ ಅದನ್ನು ಹೆಚ್ಚಿಸುವುದಕ್ಕೆ ಸಾಧ್ಯವಿದೆಯೇ ಎನ್ನುವಂತಹ ಅಂಶಗಳನ್ನೆಲ್ಲಾ ಪರಿಶೀಲಿಸಿ ಸೂಕ್ತವಾದಂತಹ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ತಾವು ಕೇಳಿದಂತಹ ಪ್ರಶ್ನೆಗೆ ಸಚಿವರು ಉತ್ತರ ಕೊಟ್ಟಿದ್ದಾರೆ. ಹಾಗೇನಾದರೂ ಬೇರೆ ಪ್ರಶ್ನೆ ಉದ್ಭವಿಸಿದರೆ ನೀವು ಸಚಿವರಿಗೆ ಪತ್ರ ಬರೆಯಿರಿ. ಇದು ಪ್ರಶ್ನೋತ್ತರ ಅವಧಿಯಾಗಿರುವುದರಿಂದ ಈ ಸಂದರ್ಭದಲ್ಲಿ ಇಡೀ ಯೋಜನೆಯ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಿರ್ದಿಷ್ಟ ಅಂಶಗಳ ಬಗ್ಗೆ ಮಾತ್ರ ತಾವು ಪ್ರಶ್ನೆಗಳನ್ನು ಕೇಳಿ ಸಚಿವರಿಂದ ಉತ್ತರವನ್ನು ಪಡೆಯಬೇಕಾಗುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ನಿರ್ದಿಷ್ಟವಾದ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬಂದಿಲ್ಲ. ಈಗಾಗಲೇ ಉತ್ತರದಲ್ಲಿ ತಿಳಿಸಲಾಗಿರುವಂತಹ ವಿಚಾರಗಳನ್ನೇ ಸದಸ್ಯರು ಪುನರುಚ್ಚರಿಸಿದ್ದಾರೆ. ನಾನು ನಿರ್ದಿಷ್ಟವಾದ ಎರಡು ಅಂಶಗಳ ಬಗ್ಗೆ ಸಚಿವರಿಗೆ ಉಪ ಪ್ರಶ್ನೆಗಳನ್ನು ಕೇಳಿದ್ದೇನೆ. ಅವುಗಳಿಗೆ ಸಚಿವರಿಂದ ಉತ್ತರ ಬಂದಿರುವುದಿಲ್ಲ. ಚುಳಕಿನಾಲಾ ನೀರಾವರಿ ಯೋಜನೆಯಲ್ಲಿ ಕೇವಲ ಸರಾಸರಿ 12% ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ, ಅದಕ್ಕೆ ಕಾರಣವೇನು? ಅದನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುತ್ತದೆ? ಅದಕ್ಕೆ ಪುನರ್ ಸರ್ವೆ ಮಾಡಿಸಲಾಗುತ್ತದೆಯೇ? ಈ ಅಂಶಗಳ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕು. ನೂರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ, ಯೋಜನೆ ಮುಗಿದಿದೆ ಎಂದು ಸಚಿವರು ತಾಂತ್ರಿಕವಾಗಿ ತಿಳಿಸುತ್ತಿದ್ದಾರೆ. ಆದರೆ ಅಲ್ಲಿ ನೀರಾವರಿಯ ಫಲಿತಾಂಶ ಕೇವಲ 12% ಮಾತ್ರ. ಮುಲ್ಲಾಮಾರಿ ಮೇಲ್ದಂಡೆ ನೀರಾವರಿ ಯೋಜನೆಯಲ್ಲಿ ಒಟ್ಟು 3279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬೇಕಾಗಿತ್ತು, ಆದರೆ

1779 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ದೊರಕುತ್ತಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದಷ್ಟೇ ನನ್ನ ಪ್ರಶ್ನೆ.

**ಸಭಾಪತಿಯವರು:–** ಇದು ಸುಮಾರು 40 ವರ್ಷಗಳ ಸಮಸ್ಯೆ, 5 ನಿಮಿಷಗಳಲ್ಲಿ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ತಿಳಿಸಿರುವಂತೆ ಒಳಹರಿವು ಅಷ್ಟು ಉತ್ತಮ ಪ್ರಮಾಣದಲ್ಲಿ ಬರುತ್ತಿಲ್ಲ, ಯಾವ ಕಾರಣಕ್ಕಾಗಿ ಒಳಹರಿವಿನ ಪ್ರಮಾಣ ಕಡಿಮೆಯಾಗಿದೆ ಎಂಬುದನ್ನು ನಾನು investigate ಮಾಡಿಸಿ, ಇದಕ್ಕೆ catchment area ದಲ್ಲಿ ಏನಾದರೂ ಸಮಸ್ಯೆ ಇದೆಯೇ, ತಾಂತ್ರಿಕವಾಗಿ ಏನಾದರೂ ಸಮಸ್ಯೆಗಳಿವೆಯೇ ಎಂಬುದನ್ನೆಲ್ಲಾ ನಾವು ಸರಿಯಾದ ರೀತಿಯಲ್ಲಿ investigate ಮಾಡಿಸುತ್ತೇವೆ. ವಿಶೇಷವಾಗಿ ಚುಳಕಿನಾಲಾ ಯೋಜನೆಯಲ್ಲಿ 4047 ಹೆಕ್ಟೇರ್ ಪ್ರದೇಶವೇನು ನೀರಾವರಿಯಾಗಬೇಕಾಗಿತ್ತು, ಅದು ಒಳಹರಿವಿನ ಪ್ರಮಾಣ ಕಡಿಮೆಯಾಗಿರುವುದರಿಂದ ಅದಕ್ಕೆ ಕಾರಣವೇನೆಂಬುದನ್ನು ಸರಿಯಾಗಿ investigate ಮಾಡಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಮುಲ್ಲಾಮಾರಿ ಮೇಲ್ದಂಡೆ ಯೋಜನೆಗೆ 1.08 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದ್ದು, ಒಟ್ಟು 3279 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾಗಿತ್ತು, ಆದರೆ ಈ ಯೋಜನೆಯಡಿ 1779 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ದೊರಕುತ್ತಿದೆ. ಉಳಿದುದನ್ನು ನಾವು ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಪೂರ್ಣಗೊಳಿಸುತ್ತೇವೆ.

## ಆನೆ ಹಾವಳಿಯಿಂದ ಮೃತಪಟ್ಟವರಿಗೆ ಮತ್ತು ಬೆಳೆ ಹಾನಿಗೆ ಪರಿಹಾರ

### 1168; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಆನೆ ಕಾರಿಡಾರ್ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಆನೆ ಹಾವಳಿಯಿಂದ ಮೃತಪಟ್ಟವರಿಗೆ ಮತ್ತು ಬೆಳೆಹಾನಿಗೆ ಸರ್ಕಾರ ಪಾವತಿಸಿರುವ ಮೊಬಲಗೆಷ್ಟು

### ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಸಕಲೇಶಪುರ ಮತ್ತು ಯಸಳೂರು ವಲಯಗಳ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆ ಅಧೀನದಲ್ಲಿರುವ ದಟ್ಟ ಮರಗಳಿಂದ ಕೂಡಿದ ಪ್ರದೇಶ 23,254.24 ಎಕರೆ ಹಾಗೂ ಹಿಡುವಳಿ ಜಮೀನು 2,261.21 ಎಕರೆ ಒಳಗೊಂಡಿರುತ್ತದೆ. ಹೀಗೆ ಒಟ್ಟು 25515.45 ಎಕರೆ ಪ್ರದೇಶವನ್ನು ಆನೆ ಕಾರಿಡಾರ್‌ಗೆ ಗುರುತಿಸಲಾಗಿದೆ. ಈ ಸಂಬಂಧ ಪ್ರಸ್ತಾವನೆಯು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ.

ಹಿಡುವಳಿ ಜಮೀನುಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಛ ನ್ಯಾಯಾಲಯವು ರಚಿಸಿದ ಆನೆ ಕಾರ್ಯಪಡೆಯು ಸಲ್ಲಿಸಿದ್ದ ವರದಿಯಲ್ಲಿ ಹಿಡುವಳಿ ಜಮೀನುಗಳನ್ನು ವಶಪಡಿಸಿಕೊಂಡಲ್ಲಿ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗುವುದರಿಂದ ಹಿಡುವಳಿ ಜಮೀನುಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಕೈಬಿಡಲು ಶಿಫಾರಸ್ಸು ಮಾಡಲಾಗಿದೆ. ಈ ಶಿಫಾರಸ್ಸನ್ನು ಸರ್ಕಾರವು ಒಪ್ಪಿದೆ.

ಆ) ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಆನೆ ಹಾವಳಿಯಿಂದ ಮೃತಪಟ್ಟವರಿಗೆ ಹಾಗೂ ಬೆಳೆಹಾನಿಗೆ ಸರ್ಕಾರ ಪಾವತಿಸಿರುವ ವಿವರ ಕೆಳಕಂಡಂತಿದೆ.

| ವರ್ಷ | ಮಾನವ ಹತ್ಯೆ | | ಬೆಳೆಹಾನಿ | |
|---|---|---|---|---|
| | ಪ್ರಕರಣ | ಮೊತ್ತ (₹ ಲಕ್ಷಗಳಲ್ಲಿ) | ಪ್ರಕರಣ | ಮೊತ್ತ (₹ ಲಕ್ಷಗಳಲ್ಲಿ) |
| 2010–11 | 5 | 8.500 | 2968 | 71.150 |
| 2011–12 | 3 | 15.000 | 2247 | 63.449 |
| 2012–13 | 4 | 20.00 | 2628 | 85.280 |

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನೇನೋ ಒದಗಿಸಿದ್ದಾರೆ, ಆದರೆ ಅದು ಅವರಿಗೆ ಸಮಾಧಾನಕರವಾಗಿದೆಯೇ ಎಂದು ಮೊದಲು ತಿಳಿಸಬೇಕಾಗುತ್ತದೆ. ಏಕೆಂದರೆ ಉತ್ತರದಲ್ಲಿನ ಒಂದೊಂದು ಪ್ಯಾರಾದಲ್ಲಿ ಒಂದೊಂದು ರೀತಿಯ ಉತ್ತರವಿದೆ. **'ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಸಕಲೇಶಪುರ ಮತ್ತು ಯಸಳೂರು ವಲಯಗಳ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆ ಅಧೀನದಲ್ಲಿರುವ ದಟ್ಟ ಮರಗಳಿಂದ ಕೂಡಿದ ಪ್ರದೇಶ 23,254.24 ಎಕರೆ ಹಾಗೂ ಹಿಡುವಳಿ ಜಮೀನು 2,261.21 ಎಕರೆ ಒಳಗೊಂಡಿರುತ್ತದೆ. ಹೀಗೆ ಒಟ್ಟು 25515.45 ಎಕರೆ ಪ್ರದೇಶವನ್ನು ಆನೆ ಕಾರಿಡಾರ್‌ಗೆ ಗುರುತಿಸಲಾಗಿದೆ. ಈ ಸಂಬಂಧ ಪ್ರಸ್ತಾವನೆಯು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ'** ಎಂದು ಮೊದಲನೆಯ ಪ್ಯಾರಾದಲ್ಲಿ ತಿಳಿಸಲಾಗಿದೆ. ಅದೇ ರೀತಿ ಎರಡನೇ ಪ್ಯಾರಾದಲ್ಲಿ ಹಿಡುವಳಿ ಜಮೀನುಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯವು ರಚಿಸಿದ ಆನೆ ಕಾರ್ಯಪಡೆಯು ಸಲ್ಲಿಸಿದ್ದ ವರದಿಯಲ್ಲಿ ಹಿಡುವಳಿ ಜಮೀನುಗಳನ್ನು ವಶಪಡಿಸಿಕೊಂಡಲ್ಲಿ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗುವುದರಿಂದ ಹಿಡುವಳಿ ಜಮೀನುಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಕೈಬಿಡಲು ಶಿಫಾರಸ್ಸು ಮಾಡಲಾಗಿದೆ. ಈ ಶಿಫಾರಸ್ಸನ್ನು ಸರ್ಕಾರವು ಒಪ್ಪಿದೆ ಎಂದು ತಿಳಿಸಿದ್ದಾರೆ. ಆದರೆ ಇಲ್ಲಿ ವಿಚಾರ ವಿಚಿತ್ರವಾಗಿದೆ. ಏನೆಂದರೆ, ಕಾರ್ಯಪಡೆಯು ಸಲ್ಲಿಸಿದ್ದ ವರದಿಯಲ್ಲಿ ಹಿಡುವಳಿ ಜಮೀನುಗಳನ್ನು ವಶಪಡಿಸಿಕೊಂಡಲ್ಲಿ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗುತ್ತದೆ ಎಂದು ಸರ್ಕಾರಕ್ಕೆ ಹೇಳಿದ್ದಾರೆ. ಆನೆಗಳ

ಹಾವಳಿಯಿಂದ ಜನರು ದಿನನಿತ್ಯ ಸಾಯುತ್ತಿದ್ದಾರೆ, ಬೆಳೆ ಕಳೆದುಕೊಳ್ಳುತ್ತಿದ್ದಾರೆ. ಮಾನ್ಯ ಅರಣ್ಯ ಸಚಿವರು ಆನೆಗಳ ಸಮಸ್ಯೆ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಇದೆ ಎಂದು ಹೇಳಿದರು. ಏಳು ಹಳ್ಳಿ ಜನರು ನಾವು ಇಲ್ಲಿ ವಾಸ ಮಾಡುವುದಕ್ಕೆ ಆಗುವುದಿಲ್ಲ, ಊರು ಬಿಟ್ಟು ಹೋಗುವಂತಹ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದಾರೆ. ಅಲ್ಲದೆ ಆನೆ ಕಾರಿಡಾರ್ ಮಾಡಲು ಸರ್ಕಾರಕ್ಕೆ ಬೇಕಾಗಿರುವಂತಹ 2,261,21 ಎಕರೆ ಹಿಡುವಳಿ ಜಮೀನಿನ ಕೊರತೆ ಏನಿದೆ ಅದನ್ನು ನಾವು ಕೊಡುತ್ತೇವೆಂದು ಹೇಳಿದ್ದಾರೆ. ಆದಕಾರಣ ಸರ್ಕಾರ ಈಗಾಗಲೇ ಅವರಿಗೆ ಒಂದು ಎಕರೆ ಜಮೀನಿಗೆ ಇಂತಿಷ್ಟು ಹಣವನ್ನು ಕೊಡುತ್ತದೆ ಎಂದು ಒಂದು ಪತ್ರವನ್ನು ಸಹ ಕಳಿಸಿದೆ. ಕಾರ್ಯಪಡೆಯು ನಿಮಗೆ ಆನೆ ಕಾರಿಡಾರ್ ಮಾಡಬೇಡಿ ಎಂದು ಹೇಳಿಲ್ಲ. ಸರ್ಕಾರಕ್ಕೆ ಹೆಚಿನ ಹೊರೆ ಆಗುತ್ತದೆ ಎಂದು ಹೇಳಿದ್ದಾರೆ ವಿನಃ ಮಾಡಬೇಡಿ ಎಂದು ಹೇಳಿಲ್ಲ. ಇದನ್ನು ಮಾಡದೆ ಹೋದರೆ ಜನರೇ ಕಾನೂನನ್ನು ಕೈಗೆತ್ತಿಕೊಳ್ಳುವಂತಹ ಪರಿಸ್ಥಿತಿ ಉಂಟಾಗುತ್ತದೆ. ಏಕೆಂದರೆ ಅವರು ತಮ್ಮ ಪ್ರಾಣ ರಕ್ಷಣೆ ಮತ್ತು ಬೆಳೆ ರಕ್ಷಣೆ ಮಾಡಿಕೊಳ್ಳಬೇಕೆಂದರೆ ಅವರು ಕಾನೂನನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:–** ಈಗ ನಿಮಗೆ ಏನಾಗಬೇಕು ಎಂಬುದನ್ನು ಕೇಳಿ. ನಿಮ್ಮ ಕಳಕಳಿ ಅರ್ಥವಾಗುತ್ತಿದೆ.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯವಾಗಿಯೇ ಕೆಳಗಿನ ಮನೆಯಲ್ಲಿ ಮೂರ್‍ನಾಲ್ಕು ಸಲ ಚರ್ಚೆ ಆಗಿದೆ, ಅದೇ ರೀತಿ ಮೇಲ್ಮನೆಯಲ್ಲಿಯೂ ಸಹ ವಿಸ್ತೃತವಾದಂತಹ ಚರ್ಚೆ ಆಗಿದೆ. ಇಲ್ಲಿರುವಂತಹ ವಿಷಯವೇನೆಂದರೆ, ಈ ಹಿಂದೆ ಸರ್ಕಾರ ಒಂದು ಆಲೋಚನೆಯನ್ನು ಮಾಡಿತ್ತು. ಏನೆಂದರೆ, ಹಿಡುವಳಿ ಪ್ರದೇಶವನ್ನು ಹೆಚ್ಚು ಕಡಿಮೆ ತೆಗೆದುಕೊಂಡು ಒಂದು ದೊಡ್ಡ ಆನೆ ಕಾರಿಡಾರ್ ಮಾಡಬೇಕೆಂಬ ವಿಚಾರವನ್ನು ಕೈಗೆತ್ತಿಕೊಂಡಿತ್ತು. ನಿಜ ನಾನು ಒಪ್ಪಿಕೊಳ್ಳುತ್ತೇನೆ. ಇಷ್ಟು ದೊಡ್ಡ ಹಿಡುವಳಿಗೆ ಸುಮಾರು 25 ಸಾವಿರ ಎಕರೆ ಭೂಮಿಯನ್ನು ಖರೀದಿ ಮಾಡಬೇಕು, ಅವರನ್ನು ಸ್ಥಳಾಂತರ ಮಾಡಬೇಕು ಮತ್ತೊಂದು ಮಾಡಬೇಕು. ನಾನು ಹೇಳುವಂಥದ್ದು 2,261.21 ಎಕರೆ ಜಮೀನನ್ನು

ತೆಗೆದುಕೊಂಡರೆ ಅದಕ್ಕೆ ಒಂದು ಶಾಶ್ವತ ಪರಿಹಾರ ಸಿಗುತ್ತದೆ. ಅಂದರೆ ಅದಕ್ಕೆ ಬೇಕಾದಂತಹ trenches ಮಾಡುವುದಾಗಲಿ, ಅಥವಾ ಈಗಿನ solar fencing ಮಾಡುವುದಾಗಲಿ ಮಾಡಿದರೆ ಶಾಶ್ವತವಾದಂತಹ ಪರಿಹಾರ ಸಿಗುತ್ತದೆ. ಅಲ್ಲದೆ ಮೂಡಿಗೆರೆ ಕಡೆಗೆ ಆನೆಗಳು ಹೋಗದಂತೆ ತಡೆಯಬಹುದು. ಅದೇ ರೀತಿ ಹಾಸನ, ಸಕಲೇಶಪುರ, ದಕ್ಷಿಣ ಕನ್ನಡ ಜಿಲ್ಲೆಗೆ ಬರುವುದನ್ನು ತಡೆಯಬಹುದು. ನಮ್ಮ ಪಟೇಲರು ಹೇಳಿರುವುದು ಬಹಳ ಸಮಂಜಸವಾಗಿದೆ. 2,261.21 ಎಕರೆ ಪ್ರದೇಶವನ್ನು ಎಷ್ಟೇ ಮೌಲ್ಯವಾದರು, ಸರ್ಕಾರಕ್ಕೆ ಹೆಚ್ಚಿನ ಹೊರೆಯಾದರು ಸಹ ಅದನ್ನು ಸ್ವೀಕಾರ ಮಾಡಿ ದಯವಿಟ್ಟು ಆನೆ ಕಾರಿಡಾರ್ ಮಾಡಿ, ಇದಕ್ಕೆ ಬೇಕಾದಂತಹ trenches, solar fencing etc., ಮಾಡುವಂತಹ ವಿಚಾರದ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕು, ಈಗಾಗಲೇ ಇದನ್ನು ಕೈ ಬಿಡಬೇಕು ಎನ್ನುವಂತಹ ಪ್ರಸ್ತಾಪ ಏನಿದೆ, ಅದನ್ನು ಕೈಬಿಡಬೇಕು ಎಂಬುದು ನನ್ನ ಆಗ್ರಹ.

**ಶ್ರೀ ಬಿ. ರಮಾನಾಥ್ ರೈ:-** ಸನ್ಮಾನ್ಯ ಸಭಾಪತಿಯವರೇ, ಇಲ್ಲಿರುವಂತಹ ಪ್ರಶ್ನೆ ಏನೆಂದರೆ, 2,261.21 ಎಕರೆ ಜಮೀನು ಏನಿದೆ ಅದು ಖಾಸಗಿಯವರ ಜಮೀನು. ಹಾಗೂ 23,254.24 ಎಕರೆ ಉಳಿಕೆ ಜಾಗ ಏನಿದೆ ಅದು ಕಂದಾಯ ಇಲಾಖೆಗೆ ಸೇರಿರುವಂತಹ ಪ್ರದೇಶ. ಇದನ್ನು ಒಟ್ಟಾರೆಯಾಗಿ ತೆಗೆದುಕೊಳ್ಳುವಂತಹ ಒಂದು ವಿಚಾರವಿದೆ. ಆದರೆ ಎಲ್ಲರೂ ಒಟ್ಟಿಗೆ ಸೇರಿ ಕೊಡಬೇಕು. ಅದರ ಜೊತೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತಹ ಎಲ್ಲಾ ಪ್ರದೇಶವನ್ನು ಒಟ್ಟಾರೆ ತೆಗೆದುಕೊಂಡಾಗ ಮಾತ್ರ ಆನೆ ಕಾರಿಡಾರ್ ಮಾಡಬಹುದು ಆನೆಗಳು ಬೇರೆ ಕಡೆಗೆ ಹೋಗದಂತೆ ತಡೆಗಟ್ಟಬಹುದು. ಆನೆ ಕಾರಿಡಾರ್ ಎಂದರೆ ಆನೆಗಳು ಹೋಗುವಂತಹ ದಾರಿ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆನೆ ಕಾರಿಡಾರ್ ಎಂದರೆ ಆನೆಗಳನ್ನು ಒಂದು ಕಡೆ ಇಟ್ಟುಕೊಳ್ಳುವಂತಹ ಪ್ರದೇಶ. ಆದುದರಿಂದ ಈ ಪ್ರದೇಶದ ಎಲ್ಲಾ ಹಿಡುವಳಿದಾರರು ಒಟ್ಟಿಗೆ ಸೇರಿ ಕೊಡಬೇಕು, ಮತ್ತು ಇದರ ಜೊತೆಗೆ ಕಂದಾಯ ಇಲಾಖೆಗೆ ಸೇರಿದಂತಹ ಸುಮಾರು 23 ಸಾವಿರ ಎಕರೆ ಜಮೀನು ಏನಿದೆ ಅವರು ಒಟ್ಟಾರೆಯಾಗಿ ಎಲ್ಲಾ ಜಮೀನನ್ನು ಕೊಡುವುದಾದರೆ ಆನೆ

ಕಾರಿಡಾರ್ ಮಾಡಬಹುದು. ಆದರೆ ಅದರಲ್ಲಿ ಕೆಲವೊಬ್ಬರು ಅಲ್ಲಿಯೇ ಬಾಕಿ ಉಳಿದರೆ ಇನ್ನು ಸಮಸ್ಯೆಗಳಾಗುತ್ತದೆ. ಸಣ್ಣ ಪುಟ್ಟ ಜಮೀನು ಇರುವಂಥವರಿಗೆ ಪರಿಹಾರ ಕೊಟ್ಟು ಕಳಿಸಬಹುದು, ಆದರೆ ಸಂಪೂರ್ಣವಾಗಿ ಎಲ್ಲಾ ಜಮೀನು ನಮಗೆ ಸಿಗಬೇಕು. ಈ ವಿಷಯದ ಬಗ್ಗೆಯೇ ಚರ್ಚೆಗಳು ನಡೆಯುತ್ತಿದೆ, ಬಹುಶಃ ಈ ಸಂಬಂಧವಾಗಿ ಮಾಜಿ ಮುಖ್ಯಮಂತ್ರಿಗಳಾಗದಂತಹ ಶ್ರೀ ಡಿ.ವಿ. ಸದಾನಂದಗೌಡರು ಏನು ಸಲಹೆ ಕೊಟ್ಟಿದ್ದಾರೆ ಇದರ ಬಗ್ಗೆ ನಾವು ಸಂಪೂರ್ಣವಾಗಿ ಎಲ್ಲಾ ಪ್ರದೇಶ ಸಿಗುವುದಾದರೆ ಇದನ್ನು ನಾವು ಮುಂದಿನ ಹಂತದಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಏಕೆಂದರೆ, ಕೆಲವರು ಜಮೀನು ಕೊಟ್ಟು ಇನ್ನು ಕೆಲವರು ಜಮೀನು ಕೊಡದೆ ಇದ್ದರೆ ಸಮಸ್ಯೆಗಳು ಆಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಯಾಗಿದ್ದಾಗ ಆ ಭಾಗದ ಜನರು ಅಂದರೆ 2,261,21 ಎಕರೆ ಜಮೀನು ಹೊಂದಿರುವಂಥವರೆಲ್ಲರೂ ನನ್ನ ಬಳಿ ಬಂದಿದ್ದರು, ಹಾಗೂ ಕಂದಾಯ ಇಲಾಖೆಯವರ ಜೊತೆಯಲ್ಲಿಯೂ ಸಹ ಈ ವಿಷಯದ ಬಗ್ಗೆ ಒಂದು ಸಭೆಯನ್ನು ಸಹ ಮಾಡಲಾಗಿತ್ತು. ಆಗಿನ ಅರಣ್ಯ ಸಚಿವರು ಸಹ ಅಲ್ಲಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡುವಂತಹ ಕೆಲಸ ಕಾರ್ಯಗಳನ್ನು ಒಂದು ಹಂತದಲ್ಲಿ ಮಾಡಿದ್ದಾರೆ. ಆದುದರಿಂದ ಈ ಯೋಜನೆಯನ್ನು ಮುಂದುವರೆಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಪಟೇಲ್ ಶಿವರಾಂ:–** ಸನ್ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸೇರಿ ಜಿಲ್ಲಾಧಿಕಾರಿಗಳ ಜೊತೆ ಅರಣ್ಯ ಭೂಮಿ ಬಗ್ಗೆ, ರೈತರು ಕೊಡುವಂತಹ ಜಮೀನಿನ ಬಗ್ಗೆ ಸಭೆಯನ್ನು ನಡೆಸಿ ಒಂದು ಅಂತಿಮಘಟ್ಟಕ್ಕೆ ಬಂದು ಸರ್ಕಾರಕ್ಕೆ ಒಂದು ವರದಿಯನ್ನು ಸಹ ಕೊಡಲಾಗಿದೆ. ಆದರೆ ಸರ್ಕಾರ ಈ ವಿಷಯದ ಬಗ್ಗೆ ಸರಿಯಾದಂತಹ ನಿಲುವನ್ನು ತಾಳದೆ ಇದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ ಎಂಬ ಭಾವನೆಯನ್ನು ವ್ಯಕ್ತ ಮಾಡಿರುವಂಥದ್ದು ಬಹಳ ವಿಷಾಧಕರವಾದಂತಹ ವಿಚಾರವಾಗಿದೆ.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರು ಹೇಳುತ್ತಿರುವುದೇನೆಂದರೆ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಾವೆಲ್ಲರೂ ಸೇರಿ ಒಂದು ಸಭೆಯನ್ನು ಮಾಡಿದ್ದೆವು ಎಂದು ಹೇಳುತ್ತಿದ್ದಾರೆ ಅದರ ಬಗ್ಗೆ ವಿಚಾರ ಮಾಡಿ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರು ಬಂದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೆ, ಆದರೆ ಅವಕಾಶ ಸಿಗಲಿಲ್ಲ. ನೀವು ರೈತರನ್ನು ಕರೆಸಿ ಮಾತನಾಡಬೇಕು. ಏಕೆಂದರೆ ಈಗಾಗಲೇ ಸರ್ಕಾರ ನಿಗಧಿತವಾಗಿ ಇಂತಿಷ್ಟು ಹಣವನ್ನು ಕೊಡುತ್ತೇವೆಂದು ರೈತರಿಗೆ ಪತ್ರವನ್ನು ಕಳಿಸಿದೆ. ಮಾನ್ಯ ಸಚಿವರು ಕೆಲವು ರೈತರು ಇಲ್ಲಿಯೇ ಉಳಿದುಕೊಂಡರೆ ಆನೆ ಕಾರಿಡಾರ್ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಆದರೆ ಅವರು ಅಲ್ಲಿ ವಾಸ ಮಾಡುವುದಕ್ಕೆ ಆಗುವುದೇ ಇಲ್ಲ. ಏಕೆಂದರೆ ಅಲ್ಲಿ ಊರುಗಳೇ ಉಳಿಯುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ. ಅಂದರೆ ಅಲ್ಲಿ ಆನೆಗಳ ಹಾವಳಿ ಅಷ್ಟಿದೆ. ಅವರನ್ನು ಕರೆಸಿ ಮಾತನಾಡಿದರೆ ಎಲ್ಲವೂ ಸಹ ಪರಿಹಾರವಾಗುವಂತಹ ಸನ್ನಿವೇಶ ಹಾಗೂ ಸಂದರ್ಭ ಇದೆ. ಆನೆ ಕಾರಿಡಾರ್ ಅತಿ ಮುಖ್ಯವಾಗಿದೆ. ಅದೇ ರೀತಿ ಸರ್ಕಾರ ಆನೆ ಹಾವಳಿಯಿಂದ ಮೃತಪಟ್ಟವರಿಗೆ ಮತ್ತು ಬೆಳೆಹಾನಿಗೆ ಸರ್ಕಾರ ಪಾವತಿಸಿರುವ ಮೊತ್ತವೆಷ್ಟು ಎಂಬ ಪ್ರಶ್ನೆಗೆ ಪ್ರತ್ಯೇಕವಾಗಿ ಉತ್ತರವನ್ನು ಕೊಟ್ಟಿಲ್ಲ, ಎರಡನ್ನೂ ಒಟ್ಟಿಗೆ ಸೇರಿಸಿ ಉತ್ತರವನ್ನು ಕೊಡಲಾಗಿದೆ.

**ಶ್ರೀ ಬಿ. ರಮಾನಾಥ್ ರೈ:–** ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸದಸ್ಯರ ಕಾಳಜಿ ಅರ್ಥವಾಯಿತು. ಈಗ ಮಾನ್ಯ ಉಚ್ಛನ್ಯಾಯಾಲಯವು ರಚಿಸಿದ ಆನೆ ಕಾರ್ಯಪಡೆಯು ಸಲ್ಲಿಸಿದ್ದ ವರದಿಯಲ್ಲಿ ಹಿಡುವಳಿ ಜಮೀನುಗಳನನು ವಶಪಡಿಸಿಕೊಂಡಲ್ಲಿ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗುವುದರಿಂದ ಹಿಡುವಳಿ ಜಮೀನುಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯನ್ನು ಕೈಬಿಡಲು ಶಿಫಾರಸು ಮಾಡಲಾಗಿದೆ ಎಂದು ಏನು ವರದಿ ಕೊಟ್ಟಿತ್ತು ಅದನ್ನು ನಾವು ಇಲ್ಲಿ ತಿಳಿಸಿದ್ದೇವೆ. ಇದರ ಮಧ್ಯೆ ಸಂಬಂಧಪಟ್ಟಂತಹ ಆ ಭಾಗದ ರೈತರು ನಮಗೆ ಮನವಿಗಳನ್ನು ಕೊಟ್ಟಿದ್ದಾರೆ

ಅದರ ಬಗ್ಗೆ ಚರ್ಚೆ ಮಾಡಿದ್ದೇನೆ. ಬಹುಶಃ ಇದು ಚರ್ಚೆ ಮಾಡುವಂತಹ ಹಂತದಲ್ಲಿದೆ. ಈಗ ಹೊಸದಾಗಿ ಸರ್ಕಾರ ಬಂದಿದೆ, ನಾವು ಚರ್ಚೆ ಮಾಡುವ ಹಂತದಲ್ಲಿದ್ದೇವೆ, ಚರ್ಚೆ ಮಾಡಿ ಇದರ ಬಗ್ಗೆ ಇರುವಂತಹ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಮಾಡಿ ಸಂಪೂರ್ಣವಾಗಿ ಎಲ್ಲಾ ಜಮೀನು ನಮಗೆ ಸಿಗುವುದಾದರೆ ನಾವು ಪರಿಶೀಲಿಸಬಹುದು. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮಾನ್ಯ ಪಟೇಲ್ ಶಿವರಾಂರವರು ಪರಿಹಾರದ ಬಗ್ಗೆ ಕೇಳುತ್ತಿದ್ದಾರೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಪರಿಹಾರವನ್ನು ಸರಿಯಾಗಿ ಕೊಟ್ಟಿಲ್ಲ.

**ಸಭಾಪತಿಯವರು:–** ಸರ್ಕಾರ ಎಷ್ಟು ಕೊಡಬೇಕೆಂದು ಇದೆಯೋ ಅಷ್ಟು ಕೊಡುತ್ತದೆ. ನೀವು ಪರಿಹಾರವನ್ನು ಜಾಸ್ತಿ ಕೊಡಬೇಕೆಂದು ಕೇಳಿದ್ದೀರಿ, ಆದರೆ ಸದನದಲ್ಲಿ ಆ ರೀತಿ ಎಲ್ಲಾ ಹೇಳುವುದಕ್ಕೆ ಬರುವುದಿಲ್ಲ.

**ಶ್ರೀ ಬಿ. ರಮಾನಾಥ್ ರೈ:–** ಮಾನ್ಯ ಸಭಾಪತಿಯವರೇ, ನಾವು ಪ್ರಾಣಹಾನಿಗೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ಆದರೆ ರೈತರು ಬೆಳೆದಂತಹ ಬೆಳೆ ಹಾನಿಗೆ ಹೆಚ್ಚು ಪರಿಹಾರ ಕೊಡಬೇಕು ಎಂಬ ಬೇಡಿಕೆ ಏನಿದೆ ಅದನ್ನು ಸರ್ಕಾರ ಪರಿಶೀಲಿಸುತ್ತಿದೆ. ಆ ಭಾಗದ ಕೃಷಿ ಇಲಾಖೆ ಅಲ್ಲಿ ಎಷ್ಟು ಬೆಳೆ ನಾಶ ಆಗಿದೆ ಎಂದು ವರದಿ ಏನು ಕೊಡುತ್ತದೆ ಅದರ ಆಧಾರದ ಮೇಲೆ ನಾವು ಹೆಚ್ಚಿಗೆ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮತ್ತು ಅದರ ಬಗ್ಗೆ ಆಲೋಚನೆಯನ್ನು ಮಾಡುತ್ತಿದೆ.

**ಶ್ರೀ ಬಿ.ಬಿ. ಶಿವಪ್ಪ:–** ಮಾನ್ಯ ಸಭಾಪತಿಗಳೇ, ಸಾಧಾರಣವಾಗಿ ನಾನು ಕೆಳಮನೆಯ ಸದಸ್ಯನಾಗಿದ್ದಾಗಲೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆನು. ಮಂತ್ರಿಗಳಿಂದ ನಾವು ಪರಿಶೀಲಿಸುತ್ತೇವೆ, ನೋಡಿ ಸರಿ ಮಾಡುತ್ತೇವೆ ಇದೇ ರೀತಿಯ ಉತ್ತರ ಬರುತ್ತಿದೆ. ಇಲ್ಲಿ 2261 ಎಕರೆ ಸ್ವಂತ ಹಿಡುವಳಿ ಭೂಮಿಯನ್ನು ಏನು ಹೇಳಿದ್ದಾರೆ. ಇದು revenue land ನ

ಪಕ್ಕದಲ್ಲಿದೆ. ಇದನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಇವತ್ತು ಅರಣ್ಯದಲ್ಲಿ ಎಲ್ಲಿ 2-3 ಮನೆಗಳಿವೆ ಅದು ಒಂದು ಊರು. ಇದರಿಂದ 5-10 ಕಿ.ಮೀ ದೂರದಲ್ಲಿ ಮತ್ತೊಂದು ಊರು. ಅವರೆಲ್ಲರೂ ಇವತ್ತು ಆ ಜಾಗವನ್ನು ಬಿಡಲು ತಯಾರಿದ್ದಾರೆ. ಈ ಬಗ್ಗೆ ಚರ್ಚೆ ಮಾಡಲು 3-4 ಸಲ Deputy Commissioner ರವರು ಅವರನ್ನು ಕರೆದಿದ್ದಾರೆ. ಅಲ್ಲಿಯೇ 4-6 ಸಭೆಗಳಾಗಿವೆ. ಆ ಸಭೆಯಲ್ಲಿ ಇವರೆಲ್ಲರೂ ತಮ್ಮ ಭೂಮಿಯನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಆದರೆ ಅಲ್ಲೊಂದು ಸಣ್ಣ ಸಮಸ್ಯೆ ಇದೆ. ಬಹಳ ವರ್ಷಗಳಿಂದಲೂ ಸಹ ಇದು ಒಂದು ದೊಡ್ಡ ಅರಣ್ಯ, ಇದು 23,000 ಎಕರೆ ಅರಣ್ಯಭೂಮಿಯಲ್ಲಿ ಸೇರಿಕೊಂಡಿದೆ. ಆದರೆ ಅಲ್ಲಿ ಒಂದೆರಡು ಮನೆಗಳಿರುತ್ತವೆ. ಅಂತಹ ಕಡೆಗಳಲ್ಲಿ ಆನೆಗಳು ಬಂದು ತಂಗುವುದು ಸಮಾನ್ಯವಾದ ವಿಚಾರ. ಇಲ್ಲಿ ಆಗಿರುವ ತೊಂದರೆ ಏನೆಂದರೆ ಎಕರೆಗೆ ಇಷ್ಟು ಹಣ ಕೊಡುವುದಾಗಿ ಸರ್ಕಾರ ಬಹಳ ಹಿಂದೆಯೇ ನಿರ್ಧಾರ ಮಾಡಿದೆ. ಆದರೆ ರೈತರಿಗೆ 5 ಎಕರೆ ಸ್ವಂತ ಹಿಡುವಳಿ ಇದ್ದು, ಅವರ ಹೆಸರಿನಲ್ಲಿ ಪಹಣಿ ಪಟ್ಟ ಎಲ್ಲಾ ಇರುತ್ತದೆ. ಆದರೆ ಅವರ ಅನುಭವದಲ್ಲಿ 15-20 ಎಕರೆ ಭೂಮಿಯಿದೆ. ಆದರೆ ಸರ್ಕಾರ ದಾಖಲೆ ಇರುವ 5 ಎಕರೆಗೆ ಮಾತ್ರ ಹಣ ಕೊಡುವುದಾಗಿ ಹಾಗೆಯೇ ಉಳಿದಿರುವ 10-15 ಎಕರೆ ಸರ್ಕಾರಿ ಭೂಮಿ ಆಗಿರುವುದರಿಂದ ಅದಕ್ಕೆ ಕೊಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಈ ಗೊಂದಲದಲ್ಲಿ ಇದು ಸ್ವಲ್ಪ ವಿಳಂಬ ಆಗಿದೆ. ಡಿಸಿಯವರ ಕಚೇರಿಯಲ್ಲಿ ಸಭೆ ನಡೆದಾಗ ನಾನು ಈ ವಿಚಾರದಲ್ಲಿ ಒಂದು ಸಲಹೆಯನ್ನು ನೀಡಿದ್ದೆನು. ಈಗಮ ಸರ್ಕಾರ ಎಕರೆಗೆ ನಿಗದಿ ಮಾಡುವ ಬೆಲೆಯನ್ನು ಸ್ವಲ್ಪ ಕಡಿಮೆ ಮಾಡಿ, ರೈತ ನೂರಾರು ವರ್ಷಗಳಿಂದ ಬಂದಿರತಕ್ಕ ಅನುಭವ, ಅಷ್ಟು ಎಕರೆಗೂ ಒಂದು ಬೆಲೆಯನ್ನು ನಿಗಧಿ ಮಾಡಿಕೊಡಬೇಕು ಎನ್ನುವ ವಿಚಾರ ಕೂಡ ಅಲ್ಲಿ ಚರ್ಚೆ ಆಗಿದೆ. ಈ ಸದನದಲ್ಲಿಯೂ ಸಹ ನಾನು ಮತ್ತು ಪಟೇಲ್ ಶಿವರಾಂರವರು ಇದರ ಬಗ್ಗೆ ಚರ್ಚೆಯನ್ನು ಮಾಡಿದೆವು. ಅದಾದ ನಾಲ್ಕು ದಿವಸಕ್ಕೆ ಆನೆ ಒಬ್ಬನನ್ನು ತುಳಿದು ಹಾಕಿತು. ಸನ್ಮಾನ್ಯ ಮಾಜಿ ಪ್ರಧಾನಮಂತ್ರಿಗಳಾದ ದೇವೇಗೌಡರು ಆ ದಿವಸ ಆ ಊರಿಗೆ ಮಳೆಯಲ್ಲಿ

ಬಂದಿದ್ದರು. ಹೀಗೆ ಎಷ್ಟು ಜನರು ಸಾಯಬೇಕು? ಏನು ತಪ್ಪು ಇಲ್ಲದೆ ಪ್ರಾಣ ಕಳೆದುಕೊಳ್ಳಬೇಕಾಗಿದೆ. ಇವತ್ತು ನನ್ನ ಬಳಿಯೂ ಸಹ ಕಾಫಿ ತೋಟ ಇದೆ, ನೀವೆಲ್ಲರೂ ನನ್ನ ಜೊತೆ ಬನ್ನಿ, ಕಾಡಿಗೆ ಹೊಗುವುದು ಬೇಡ, ನನ್ನ ಕಾಫಿ ತೋಟದಲ್ಲಿಯೇ 30 ಆನೆಗಳಿವೆ. 15 ಎಕರೆಗಳ ತನಕ ಆನೆ ಇವೆಯೆಂದು ಯಾರು ಅಲ್ಲಿ ಕೆಲಸ ಮಾಡಲು ಹೋಗುವುದಿಲ್ಲ. ಹೀಗೆ ಯಾರಾದರೂ ಆನೆ ತುಳಿತಕ್ಕೆ ಹಾಳಾದ ಬೆಳೆಗೆ ಸರ್ಕಾರ ನೂರರ ಲೆಕ್ಕದಲ್ಲಿ ಪರಿಹಾರವನ್ನು ನೀಡುತ್ತದೆ, ಸಾವಿರ ಲೆಕ್ಕದಲ್ಲಿ ಕೊಡುವುದಿಲ್ಲ. ಗದ್ದೆ ಹಾಳಾದರೆ 500-600 ರೂಪಾಯಿಗಳ ಪರಿಹಾರ ಕೊಡುತ್ತಾರೆ, ಸಾವಿರ ರೂಪಾಯಿಗಳ ಪರಿಹಾರ ಸಿಕ್ಕಿದ್ದಲ್ಲಿ ಅದು ಆತನ ಪುಣ್ಯ. ನಾವು ವರ್ಷವಿಡಿ ಕಷ್ಟಪಟ್ಟು ದುಡಿಯುವಂತಹದ್ದು ಅದಕ್ಕೆ ಸರ್ಕಾರ ನೀಡುವ ಪರಿಹಾರ ಸಾಲದು. ಈ ಪರಿಹಾರದ ಮೊತ್ತವನ್ನು ಸರ್ಕಾರ ಹೆಚ್ಚು ಮಾಡಬೇಕು. ಆನೆ ತುಳಿತಕ್ಕೆ ಸಿಕ್ಕಿ ಸತ್ತವರಿಗೆ ಪರಿಹಾರವನ್ನು 25 ಸಾವಿರದಿಂದ 5 ಲಕ್ಷಕ್ಕೆ ಏರಿಸಲಾಗಿದೆ. ಇನ್ನು ಎಷ್ಟು ಲಕ್ಷದವರೆಗೆ ಮನುಷ್ಯ ಸಾಯಬೇಕು. ಆದ್ದರಿಂದ ಸರ್ಕಾರ ಆನೆ ಕಾರಿಡಾರ್ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. 23,000 ಎಕರೆ ಅರಣ್ಯಭೂಮಿಯಲ್ಲಿರುವವರು ಇವತ್ತು ಆ ಜಾಗವನ್ನು ಬಿಟ್ಟು ಹೋಗಲು ತಯಾರಿದ್ದಾರೆ. ಅವರ ಜಮೀನಿಗೆ ಸೂಕ್ತ ಪರಿಹಾರವನ್ನು ಕೊಟ್ಟು ಆನೆಗಳು ತಂಗಲಿಕ್ಕೆ ಜಾಗ ಮಾಡಿಕೊಡಬೇಕು. ಕಾಡಿನಲ್ಲಿ ಆನೆಗೆ ಆಹಾರ ಸಿಗುತ್ತಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಹಾರಕ್ಕಾಗಿ ಅದು ಊರಿಗೆ ನುಗ್ಗುತ್ತದೆ. ಇಲ್ಲದಿದ್ದರೆ ಆನೆ ಊರಿಗೆ ಬರುವುದೇ ಇಲ್ಲ. ಆನೆಗಳಿಗೆ ಕಾಡಿನಲ್ಲಿಯೇ ಆಹಾರ ಸಿಗುವ ಹಾಗೆ ಮಾಡಿ ಊರಿಗೆ ಬರುವುದನ್ನು ತಪ್ಪಿಸಿದಲ್ಲಿ ನಾವೆಲ್ಲರೂ ಸುಖವಾಗಿ ಜೀವನ ಮಾಡಬಹುದು. ಕೊಡಗು, ಹಾಸನ, ಬೇಲೂರು, ಮೂಡಿಗೆರೆ ಎಲ್ಲಾ ತಾಲ್ಲೂಕಿನಲ್ಲಿರುವ ಜನರು ಈ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಸರ್ಕಾರ ಆನೆ ಕಾರಿಡಾರ್ ಮಾಡಿ ನಮ್ಮಲ್ಲಿರುವ ಆನೆಗಳನ್ನು ಅದರೊಳಗೆ ಕಳುಹಿಸಿ ಬಿಟ್ಟರೆ ನಾವು ಇನ್ನೂ ಸ್ವಲ್ಪ ದಿವಸ ಸುಖವಾಗಿ ಬದುಕಬಹುದು.

**ಶ್ರೀ ರಮಾನಾಥ್ ರೈ:-** ಮಾನ್ಯ ಸಭಾಪತಿಯವರೇ, ನಮ್ಮ ಸದನದ ಗೌರವಾನ್ವಿತ ಹಿರಿಯ ಸದಸ್ಯರಾದ ಶಿವಪ್ಪನವರು ಆನೆ ಹಾವಳಿ ಬಹಳಷ್ಟು ವರ್ಷಗಳಿಂದ ಇದೆ ಎನ್ನುವ ವಿಚಾರದ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಹಾಗೆಯೇ ಈ ಹಿಂದೆ ಕೇಳಿದ ಪ್ರಶ್ನೆಗೆ ಯಾವ ರೀತಿಯ ಉತ್ತರ ಬಂದಿದೆ ಎನ್ನುವುದರ ಬಗ್ಗೆ ಕೂಡ ಹೇಳಿದರು. ಇಲ್ಲಿ ಹಿಡುವಳಿದಾರರು ಮತ್ತು ಅರಣ್ಯಭೂಮಿಯ ವಿಚಾರದಲ್ಲಿ ಜಿಜ್ಞಾಸೆ ಇದೆ ಎನ್ನುವ ವಿಚಾರವನ್ನು ಸಹ ಹೇಳಿದರು. ಇಲ್ಲಿ ಸಮಸ್ಯೆ ಇರುವುದು ಸಹಜ. ನಾನು ಹೇಳುವುದೇನೆಂದರೆ ಕಂದಾಯ ಇಲಾಖೆಗೆ ಸೇರಿದ ಜಾಗದಲ್ಲಿ ರೈತರು ಉಳುಮೆ ಮಾಡಿದ್ದು ಅದರ ಉಪಯೋಗ ಮಾಡಿಕೊಳ್ಳುತ್ತಿದ್ದಲ್ಲಿ ಆ ಜಾಗ ಮತ್ತು ದಾಖಲೆಗಳಿರುವ ಜಮೀನು ಇವೆರಡಕ್ಕೂ ಬೆಲೆ ನಿಗದಿ ಮಾಡುವ ಬಗ್ಗೆ ನಾವು ನೀವೆಲ್ಲರೂ ಸೇರಿ ಪ್ರಯತ್ನ ಮಾಡೋಣ. ಒಂದು ನಿರ್ದಿಷ್ಟವಾದ ನಿರ್ಧಾರ ತೆಗೆದುಕೊಳ್ಳಬಹುದು. ಇದು ಬಹಳ ವರ್ಷಗಳಿಂದ ಜೀವಂತವಾಗಿರುವ ಸಮಸ್ಯೆ. ಈ ಸಮಸ್ಯೆ ಬಹಳ ವರ್ಷಗಳಿಂದ ಇದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಮಾನ್ಯ ಪಟೇಲ್ ಶಿವರಾಂರವರು ಸಹ ಈ ವಿಚಾರದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಸಚಿವನಾದ ಕೂಡಲೇ ಅಲ್ಲಿನ ಜನ ಕೂಡ ಬಂದು ನನ್ನನ್ನು ಭೇಟಿ ಮಾಡಿದರು, ಆದರೆ ಅಧಿವೇಶನದ ಒತ್ತಡದಲ್ಲಿ ಅವರೊಂದಿಗೆ ಚರ್ಚೆ ಮಾಡಲು ಸಾಧ್ಯವಾಗಲಿಲ್ಲ. ಅಧಿವೇಶನ ಮುಗಿದ ಮೇಲೆ ಇದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ರಾಮಚಂದ್ರಗೌಡ:-** ಇಲ್ಲಿ 2600 ಎಕರೆ ಭೂಮಿಯ ಮಾತ್ರವಲ್ಲ, 8000 ಎಕರೆ ಭೂಮಿ ಇದೆ, ಅದೇ ಈಗ ಸಮಸ್ಯೆಯಾಗಿರುವುದು.

**ಶ್ರೀ ಬಿ.ಬಿ. ಶಿವಪ್ಪ:-** ಹಾಸನದಲ್ಲಿಯೇ ಆ ಭಾಗದ ಜನರನ್ನು ಕರೆದು ಒಂದು ಸಭೆಯನ್ನು ನಡೆಸಬೇಕು.

**ಶ್ರೀ ರಮಾನಾಥ್ ರೈ:-** ಮಾನ್ಯ ಸಭಾಪತಿಗಳೇ, ಈ ವಿಚಾರದ ಬಗ್ಗೆ ಈಗಾಗಲೇ ರೈತರು ಬಂದು ನನ್ನನ್ನು ಭೇಟಿ ಮಾಡಿದ್ದರು. ಅಧಿವೇಶನ

ಮುಗಿದ ಮೇಲೆ ಅವರನ್ನೆಲ್ಲ ಕರೆದು ಸಭೆ ನಡೆಸುತ್ತೇನೆ ಎನ್ನುವ ಭರವಸೆಯನ್ನು ಈಗಾಗಲೇ ಅವರಿಗೆ ನಿಡಿದ್ದೇನೆ. ಇದರ ಸಾಧಕಬಾಧಕಗಳನ್ನು ವಿಮರ್ಶೆ ಮಾಡಿ, ಇದು ಕೇವಲ 2600 ಎಕರೆ ಜಮೀನಿನ ಪ್ರಶ್ನೆಯಲ್ಲ, ಇದರ ಜೊತೆಗೆ ಇನ್ನೂ ಸ್ವಲ್ಪ ಸಾಗುವಳಿ ಮಾಡುತ್ತಿರುವ ಅರಣ್ಯಭೂಮಿಯು ಸಹ ಸೇರಿದೆ. ಇದು ಸರ್ಕಾರಕ್ಕೆ ದೊಡ್ಡ ಹೊರೆ ಆಗತಕ್ಕ ಒಂದು ವಿಚಾರ ಕೂಡ ಆಗಿದೆ. ಈ ಜನರ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ನಾವೆಲ್ಲರೂ ಇದರ ಬಗ್ಗೆ ಚರ್ಚೆ ಮಾಡಿ ಮುಂದಿನ ಕ್ರಮವನ್ನು ಕೈಗೊಳ್ಳೋಣ.

**ಖಾಸಗಿ ವಿದ್ಯಾಸಂಸ್ಥೆಗಳಿಗೆ ಸರ್ಕಾರಿ ಜಮೀನು**

**689; ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)**

**ಅ)** 2012-13 ಹಾಗೂ 2013-14ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಜಮೀನನ್ನು ಮಂಜೂರು ಮಾಡಿಕೊಡುವಂತೆ ಕೋರಲಾಗಿದ್ದ ಖಾಸಗಿ ವಿದ್ಯಾಸಂಸ್ಥೆಗಳು ಯಾವುವು? ಕೋರಲಾಗಿದ್ದ ಜಮೀನಿನ ಪ್ರಮಾಣ ಎಷ್ಟು?

**ಆ)** ಕೋರಿದ್ದ ಸಂಸ್ಥೆಗಳಿಗೆ ಯಾವ ಯಾವ ಸಂಸ್ಥೆಗೆ ಜಾಗ ಮಂಜೂರು ಮಾಡಲಾಗಿದೆ? ಮಾಡಿದ್ದರೆ ಎಕರೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ?

**ಇ)** ನೀಡಿರುವ ಜಾಗಗಳಲ್ಲಿ ವ್ಯಾಜ್ಯದಿಂದ ಕೂಡಿರುವ ಜಾಗಗಳು ಯಾವುವು? ಕಾರಣಗಳೇನು?

**ಈ)** ವ್ಯಾಜ್ಯದಿಂದ ಕೂಡಿರುವ ಜಮೀನನ್ನು ನೀಡಲು ಕಾರಣವೇನು?

**ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

**ಅ)** ಬೆಂಗಳೂರು ನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ 2012-13 ಹಾಗೂ 2013-14ನೇ ಸಾಲಿನಲ್ಲಿ 124 ಎಕರೆ 19 ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನನ್ನು ಮಂಜೂರು ಮಾಡಿಕೊಡುವಂತೆ ಕೋರಿ ಖಾಸಗಿ ವಿದ್ಯಾಸಂಸ್ಥೆಗಳಿಂದ ಒಟ್ಟು 29 ಮನವಿಗಳು ಬಂದಿದ್ದು, ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 2012–13ನೇ ಸಾಲಿನಲ್ಲಿ ವೈ.ಎ.ಎನ್ ಚಾರಿಟಬಲ್ ಟ್ರಸ್ಟ್, ಎಂ.ಎಸ್.ಆರ್.ನಗರ, ಬೆಂಗಳೂರು ಇವರಿಗೆ ಬೆಂಗಳೂರು ಉತ್ತರ [ಅಪರ] ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಸರ್ವೆ ನಂ. 21 ರಲ್ಲಿ 4–24 (ಎ–ಗು) ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 636 ಎಲ್‌ಜಿಬಿ 2011 ದಿನಾಂಕ: 23.02.2012 ರಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ.

ಮಂಜೂರಾತಿಗಾಗಿ ಸದರಿ ಜಮೀನಿನ ಪ್ರಸಕ್ತ ಮಾರ್ಗಸೂಚಿ ಬೆಲೆ ಎಕರೆ ಒಂದಕ್ಕೆ ₹ 25.00 ಲಕ್ಷ ಇದ್ದು ಅದರಲ್ಲಿ ಶೇ. 50 ರಷ್ಟು ದರ ವಿಧಿಸಿ, ಒಟ್ಟು ₹ 57,50,055/– ಗಳನ್ನು ಸರ್ಕಾರಕ್ಕೆ ಪಾವತಿಸಿಕೊಳ್ಳಲಾಗಿದೆ.

ಉಳಿದ ಯಾವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ 2012–13 ಹಾಗೂ 2013–14ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಜಮೀನು ಮಂಜೂರು ಮಾಡಿರುವುದಿಲ್ಲ.

ಇ) ವೈ.ಎ.ಎನ್ ಚಾರಿಟಬಲ್ ಟ್ರಸ್ಟ್, ಎಂ.ಎಸ್.ಆರ್.ನಗರ, ಬೆಂಗಳೂರು ಇವರಿಗೆ ನೀಡಿರುವ ಬೆಂಗಳೂರು ಉತ್ತರ [ಅಪರ] ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಸರ್ವೆ ನಂ. 21 ರಲ್ಲಿ 4–24 (ಎ–ಗು) ಜಮೀನಿನ ಸ್ವಾಧೀನಾನುಭವದ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಿನಾಂಕ: 19.02.2013 ರಂದು ಓ.ಎಸ್.ನಂ:567/2012 ರಂತೆ ದಾವೆ ಹೂಡಲಾಗಿರುತ್ತದೆ.

ಸದರಿ ಸಂಸ್ಥೆಗೆ ಜಮೀನು ಮಂಜೂರು ಮಾಡಿದ ನಂತರ ಸದರಿ ಜಮೀನಿನ 4.00 ಎಕರೆಯಲ್ಲಿ ತಾನು ಸ್ವಾಧೀನಾನುಭವದಲ್ಲಿ ಇರುವುದಾಗಿ ಶ್ರೀ ರಾಮಣ್ಣ ಬಿನ್ ತಿಮ್ಮಪ್ಪ ಎಂಬುವರು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು ನ್ಯಾಯಾಲಯವು ದಿನಾಂಕ: 08.03.2013 ರವರೆಗೆ ಯಥಾಸ್ಥಿತಿ ಕಾಪಾಡಿಕೊಳ್ಳಲು ಆದೇಶ ನೀಡಿರುತ್ತದೆ.

**ಈ)** ಪ್ರಸ್ತಾಪಿತ ಜಮೀನನ್ನು ಮೇಲ್ಕಂಡ ಸಂಸ್ಥೆಗೆ ಮಂಜೂರು ಮಾಡುವ ಮುಂಚೆ ಯಾವುದೇ ತಕರಾರು ಅಥವಾ ವ್ಯಾಜ್ಯಗಳು ಸದರಿ ಜಮೀನಿನ ಮೇಲೆ ಇರುವುದು ವರದಿಯಾಗಿರಲಿಲ್ಲ. ಸದರಿ ಸಂಸ್ಥೆಗೆ ಜಮೀನು ಮಂಜೂರು ಮಾಡಿದ ನಂತರ ಸದರಿ ಜಮೀನಿನಲ್ಲಿ ತಾನು ಸ್ವಾಧೀನಾನುಭವದಲ್ಲಿ ಇರುವುದಾಗಿ ಶ್ರೀ ರಾಮಣ್ಣ ಬಿನ್ ತಿಮ್ಮಪ್ಪ ಎಂಬುವರು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ ನಂತರವಷ್ಟೇ ಈ ವಿಚಾರವು ಬೆಳಕಿಗೆ ಬಂದಿರುತ್ತದೆ.

**ಅನುಬಂಧ**

| ಕ್ರ.ಸಂ. | ತಾಲ್ಲೂಕು | ಜಮೀನು ಮಂಜೂರಾತಿ ಕೋರಿದ್ದ ಖಾಸಗಿ ವಿದ್ಯಾ ಸಂಸ್ಥೆಯ ಹೆಸರು | ವಿಸ್ತೀರ್ಣ (ಎಕರೆ–ಗುಂಟೆ) |
|---|---|---|---|
| 1 | ಬೆಂಗಳೂರು ಪೂರ್ವ | 1. ಬೆಂ.ಪೂರ್ವ ತಾಲ್ಲೂಕು ತಿಗಳರ (ವಹ್ನಿಕುಲ) ಕ್ಷೇಮಾಭಿವೃದ್ಧಿ ಸಂಘದ ವಿದ್ಯಾಸಂಸ್ಥೆ | 4–00 |
| 2 | ಬೆಂಗಳೂರು ಉತ್ತರ | 1. ಲಕ್ಷ್ಮೀನಾರಾಯಣಸ್ವಾಮಿ ಎಜುಕೇಷನ್ ಟ್ರಸ್ಟ್ | 1–00 |
| | | 2. ಲಕ್ಷ್ಮೀನಾರಾಯಣಸ್ವಾಮಿ ಶಿಕ್ಷಣಸಂಸ್ಥೆ ಮತ್ತು ಶ್ರೀ ಗಂಗಾಧರೇಶ್ವರ ವಿದ್ಯಾಸಂಸ್ಥೆ ಟ್ರಸ್ಟ್ | 7–00 |
| | | 3. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವಿದ್ಯಾಸಂಸ್ಥೆ | 15–00 |
| | | 4. ಶ್ರೀ ಶ್ರೀನಿವಾಸ ಎಜುಕೇಷನ್ ಟ್ರಸ್ಟ್ | 4–00 |
| | | 5. ಬುದ್ಧ ಹೋಮಿಯೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ | 4–00 |
| | | 6. ಶ್ರೀ ವಿಜಯೇಶ್ವರಿ ದೇವಿ ಎಜುಕೇಷನಲ್ & ಚಾರಿಟಬಲ್ ಟ್ರಸ್ಟ್ (ರಿ) | 2–00 |
| | | 7. ಅಂಬೇಡ್ಕರ್ ಎಜುಕೇಷನ್ ಟ್ರಸ್ಟ್ | 5–00 |
| | | 8. ಸವಿತಾ ಸಮಾಜದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗಾಗಿ | 3–00 |
| | | 9. ಶ್ರೀ ರಾಮಕೃಷ್ಣ ಪ್ರಥಮ ದರ್ಜೆ ಕಾಲೇಜು | 5–00 |
| 3 | ಬೆಂಗಳೂರು ಉತ್ತರ [ಅಪರ] | 1. ಎಂ.ಎಂ.ಸುಮ ಎಜುಕೇಷನ್ ಟ್ರಸ್ಟ್ | 5–00 |
| | | 2. ಅಂಬೇಡ್ಕರ್ ಎಜುಕೇಷನ್ ಟ್ರಸ್ಟ್ | 5–00 |
| | | 3. ವೈ.ಎನ್.ಎ. ಚಾರಿಟಬಲ್ ಟ್ರಸ್ಟ್ | 4–24 |
| | | 4. ಮಹಾನ್ ಕವಿ ಸರ್ವಜ್ಞ ಮೂರ್ತಿ ಅಧ್ಯಯನ ಪೀಠ, ಕುಂಬಾರರ ಮಹಾಸಂಘ | 10–00 |

| | | | |
|---|---|---|---|
| | | 5. ವಿಜಯೇಶ್ವರಿ ಎಜುಕೇಷನ್ ಟ್ರಸ್ಟ್ & ಚಾರಿಟಬಲ್ ಟ್ರಸ್ಟ್ (ವಿಸ್ತೀರ್ಣ ನಮೂದಿಲ್ಲ)<br>6. ಅನುಶ್ರುತ ಫೌಂಡೇಷನ್ ಟ್ರಸ್ಟ್ (ವಿಸ್ತೀರ್ಣ ನಮೂದಿಸಿಲ್ಲ)<br>7. ಐ.ಎಸ್.ಇ.ಆರ್.ಟಿ. ಅಕಾಡೆಮಿ ಎಜುಕೇಷನ್ ಮತ್ತು ಟ್ರೈನಿಂಗ್ ಸೆಂಟರ್ | –<br>–<br>5–00 |
| 4 | ಬೆಂಗಳೂರು ದಕ್ಷಿಣ | 1. ಅಖಿಲ ಕುಂಚಿಟಿಗರ ಸಾರ್ವಜನಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸೇವಾ ಟ್ರಸ್ಟ್<br>2. ಇಸ್ಲಾಮಿಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ<br>3. ಗೋಪಾಲನ್ ಫೌಂಡೇಷನ್<br>4. ಓಂಕಾರ ಆಶ್ರಮ (ಶೈಕ್ಷಣಿಕ ಉದ್ದೇಶಕ್ಕೆ)<br>5. ಸ್ವಾಮಿ ನಾರಾಯಣ ಮಂದಿರ ಟ್ರಸ್ಟ್ (ವಿಸ್ತೀರ್ಣ ನಮೂದಿಸಿಲ್ಲ)<br>6. ಶ್ರೀ ಮಾರುತಿ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘ<br>7. ಸೈಂಟ್ ಗಾಸ್ಪರ್ ಚಾರಿಟಬಲ್ & ಎಜುಕೇಷನ್ ಟ್ರಸ್ಟ್ (ವಿಸ್ತೀರ್ಣ ನಮೂದಿಸಿಲ್ಲ್ಲ) | 0–30<br>3–20<br>10–00<br>6–00<br>–<br>17–39<br>– |
| 5 | ಆನೇಕಲ್ | 1. ಎ.ಎಂ.ಸಿ. ವಿದ್ಯಾಸಂಸ್ಥೆ, ಪರಮಹಂಸ ಫೌಂಡೇಷನ್ | 1–02 |
| | | 2. ಧರ್ಮಸಾಗರ ವಿದ್ಯಾ ಸಂಸ್ಥೆ, ದೊಮ್ಮಸಂದ್ರ | 0–10 |
| | | 3. ಯಶೋಧ ಕೃಷ್ಣ ವಿದ್ಯಾ ಸಂಸ್ಥೆ (ರಿ) | 3–00 |
| | | 4. ಧರ್ಮಸಾಗರ ವಿದ್ಯಾ ಸಂಸ್ಥೆ, ದೊಮ್ಮಸಂದ್ರ | 2–24 |

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಇಲ್ಲಿರುವ ಸಮಸ್ಯೆ ಏನೆಂದರೆ ಸರ್ಕಾರಿ ಭೂಮಿಯನ್ನು ಯಾರಿಗಾದರೂ ನೀಡುವಾಗ ಅದು ಯಾರಿಗೂ ಬೇಡವಾದ ಜಮೀನು, ಅಥವಾ ಗಲಾಟೆಯಲ್ಲಿರುವ ಜಮೀನು, ಕೋರ್ಟಿನಲ್ಲಿ ಕೇಸು ಹಾಕಿಕೊಂಡಿರುವ ಜಮೀನುಗಳನ್ನು ಏಕೆ ನೀಡಲಾಗುವುದು. ಈಗ ಒಂದು ವಿದ್ಯಾಸಂಸ್ಥೆಗೆ ಜಮೀನು ನೀಡಲು ಸರ್ಕಾರಕ್ಕೆ ಕೊಡುವ ಇಚ್ಛೆ ಇದ್ದಲ್ಲಿ ಸರಿಯಾದ ಜಮೀನನ್ನು ಕೊಡಲಿ, ಒಬ್ಬರಿಗೆ ನೀಡಿದ ಜಮೀನನ್ನು ಮತ್ತೊಬ್ಬರು ಇದು ನನ್ನದು ಎಂದು ಕೋರ್ಟ್‌ಗೆ ಅಲೆಯುವ ಜಮೀನು ನೀಡಿದರೆ, ವಿದ್ಯಾಸಂಸ್ಥೆಯನ್ನು ನಡೆಸುವುದನ್ನು ಬಿಟ್ಟು, ಆತ ಕೋರ್ಟ್‌ಗೆ ತಿರುಗಾಡಬೇಕಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಈ ಜಮೀನನ್ನು ಸಂಸ್ಥೆಗೆ ನೀಡುವ ಸಂದರ್ಭದಲ್ಲಿ ಇದರ ಮೇಲೆ ಲಿಟಿಗೇಷನ್ ಇದೆ ಎನ್ನುವ ಕಲ್ಪನೆ ಸರ್ಕಾರಕ್ಕೆ ಬಂದಿಲ್ಲ. ಯಾರೋ ಒಂದು Original Suit (OS) file ಮಾಡಿದ್ದಾರೆ. ಸಿವಿಲ್ ನ್ಯಾಯಾಲಯದಲ್ಲಿ ಶ್ರೀ ರಾಮಣ್ಣ ಬಿನ್ ತಿಮ್ಮಪ್ಪ ಎನ್ನುವವರು OS 567/2012 ರಲ್ಲಿ ಒಂದು original ದಾವೆಯನ್ನು ದಾಖಲು ಮಾಡಿದ್ದಾರೆ. ಅದರಲ್ಲಿ status quo is to be maintained ಎಂದು ಇಂದು ಮಧ್ಯಂತರ ಆದೇಶ ಬಂದಿದೆ. ಇದು ಯಾವಾಗ ಚಾಲನೆಗೆ ಬರುತ್ತದೆ ಎಂದರೆ when it will be communicated to the concerned authority. ಈಗ ಕೋರ್ಟಿನಲ್ಲಿ ಮಧ್ಯಂತರ ಆದೇಶ ಆಗಿದ್ದು ಕಂದಾಯ ಇಲಾಖೆಯ ಗಮನಕ್ಕೆ ಬಂದೇ ಇಲ್ಲ. ಅದಕ್ಕಿಂತ ಪೂರ್ವದಲ್ಲಿ Original Suit file ಆಗಿದ್ದು ಕೂಡ ಇಲಾಖೆಯ ಗಮನಕ್ಕೆ ಬಾರದೆ ಈ ಜಮೀನು ಗ್ರಾಂಟ್ ಆಗಿದೆ. ಇತ್ತೀಚಿನ ಮಾಹಿತಿ ಪ್ರಕಾರ I.A ನಲ್ಲಿ status quo is to be maintained ಎನ್ನುವ ಒಂದು ಆದೇಶ ಏನು ಮಾಡಲಾಗಿತ್ತು ಅದು vacate ಆಗಿದೆ, ಅದನ್ನು ಓದುತ್ತೇನೆ: **"I.A.No.1 filed by the Plaintiff under Order 39 Rule 1 and 2 of Code of Civil Procedure is hereby dismissed with cost of ₹ 300/-.**

**Consequently, the ex-parte order of status quo is hereby vacated.”** ಇದು ಸ್ಥಿತಿಯನ್ನೇ ಮುಂದುವರೆಸಿಕೊಂಡು ಹೋಗಬೇಕೆನ್ನುವ interlocutory order ಕೂಡ vacate ಆಗಿದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯಸಭಾಪತಿಗಳೇ, ವಿದ್ಯಾಸಂಸ್ಥೆಯವರು ಜಮೀನನ್ನು ಕೇಳಿದ್ದಾರೆ. ಸರ್ಕಾರದಿಂದ ಜಮೀನನ್ನು ಪಡೆಯುವುದು ಎಷ್ಟು ಕಷ್ಟ ಎನ್ನುವುದು ಎಲ್ಲರಿಗೂ ತಿಳಿದಿದೆ. ಕಷ್ಟ ಬಿದ್ದು ಸಂಸ್ಥೆಗೆ ಒಂದು ಜಾಗ ಪಡೆದ ಮೇಲೆ ಅಲ್ಲಿ ಸಂಸ್ಥೆ ನಡೆಸುವುದನ್ನು ಬಿಟ್ಟು ಅದರ ಹಕ್ಕಿಗಾಗಿ ಕೋರ್ಟ್ ಕಚೇರಿ ಅಲೆಯುವುದಾದರೆ ಆತ ತನ್ನ ವಿದ್ಯಾಸಂಸ್ಥೆಯನ್ನು ಸರಿಯಾಗಿ ನಡೆಸಲು ಸಾಧ್ಯವಾಗುವುದಿಲ್ಲ. ಆ ಹಿನ್ನಲೆಯಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದೆನು ಈಗ ಕೋರ್ಟಿನಲ್ಲಿ ತೀರ್ಮಾನ ಆಗಿದೆ. ಆದರೆ ಕೆಲವನ್ನು ತೀರ್ಮಾನ ಮಾಡಿಕೊಳ್ಳಲು ಸಾಧ್ಯ ಆಗುವುದೇ ಇಲ್ಲ. ಹಾಗಾಗಿ ವಿದ್ಯಾಸಂಸ್ಥೆಗಳು ಯಾವುದೇ ಜಾಗವನ್ನು ಪಡೆದ ಮೇಲೆ ಅಲ್ಲಿ ಸಂಸ್ಥೆ ನಡೆಸದೇ ಕೋರ್ಟ್ ಕಚೇರಿ ಅಲೆಯುವಂತಾಗಬಾರದು ಎನ್ನುವ ಹಿನ್ನಲೆಯಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಇಲ್ಲಿ ಸರ್ಕಾರದ ಪ್ರಶ್ನೆ ಬರುವುದಿಲ್ಲ. ಈ ಜಮೀನು ನನ್ನ ಸ್ವಾಧೀನದಲ್ಲಿದೆ ಎಂದು ರಾಮಣ್ಣ ಎನ್ನುವವರು ಒಂದು Suit file ಮಾಡಿದ್ದಾರೆ. ಅದರ ಬಗ್ಗೆ ಒಂದು ಮಧ್ಯಂತರ ಆದೇಶ ಕೂಡ ಆಗಿದೆ.

12–30 ಗಂಟೆ

**ಸಭಾಪತಿಯವರು:–** ಯಾವುದೇ grant ಮಾಡುವಾಗ litigation ಇರುವ ಜಮೀನನ್ನು ಕೊಡಬೇಡಿ ಎಂದು ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಸರ್ಕಾರ ಒಂದು ಜಮೀನನ್ನು grant ಮಾಡಿದ ತಕ್ಷಣ subsequently ಯಾರಾದರು ನ್ಯಾಯಾಲಯಕ್ಕೆ ಹೋದರೆ we cannot expect that. Litigation ಗೆ ಏನೋ ಕಾರಣ ಇಟ್ಟುಕೊಂಡು ಕೋರ್ಟ್‌ಗೆ

ಹೋಗಬಹುದು. ಕೋರ್ಟ್‌ನಲ್ಲಿಯು ಸರಳವಾಗಿ interim stay order ಸಿಗುವ ಪ್ರಸಂಗವು ಉದ್ಭವಿಸುತ್ತವೆ. ಆದ್ದರಿಂದ status quo is to be maintained ಎಂದು ಏನು interim order ಆಗಿತ್ತು ಅದು ಕೂಡ ಈಗ vacate ಆಗಿದೆ. ಯಾವುದೇ ತೊಂದರೆಯಾಗುವುದಿಲ್ಲ ಎನ್ನುವುದು ನನ್ನ ಭಾವನೆ.

**ವರಾಹಿ ನೀರಾವರಿ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳು**

**1161; ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ವಾರಾಹಿ ನೀರಾವರಿ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳು ಉದ್ದವೆಷ್ಟು; ಮತ್ತು ಅವುಗಳನ್ನು ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾದ ಮತ್ತು ಅಂತ್ಯಗೊಂಡ ಕಾಲುವೆಯ ಉದ್ದವೆಷ್ಟು; ಮತ್ತು ಭೂಸ್ವಾಧೀನ ಮಾಡಲು ಬಾಕಿ ಇರುವ ಕಾಲುವೆಯ ಉದ್ದವೆಷ್ಟು; (ಎಡದಂಡೆ ಮತ್ತು ಬಲದಂಡೆ ಪ್ರತ್ಯೇಕ ಕಿಲೋಮೀಟರ್‌ವಾರು ವಿವರ ನೀಡುವುದು).

ಆ) ಈ ರೀತಿ ಭೂಸ್ವಾಧೀನ ಪ್ರಕ್ರಿಯೆ ಮುಗಿದು ಟೆಂಡರ್ ಕರೆಯಲಾದ ಕಾಮಗಾರಿಗಳಾವುವು; ಅವುಗಳಲ್ಲಿ ಪೂರ್ಣಗೊಂಡ, ಪ್ರಗತಿಯಲ್ಲಿರುವ ಮತ್ತು ಟೆಂಡರ್ ಕರೆಯಲು ಬಾಕಿ ಇರುವ ಕಾಮಗಾರಿಗಳಾವುವು; (ಈ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಮಗಾರಿಯ ಪ್ರತ್ಯೇಕ ಕಿಲೋಮೀಟರ್‌ವಾರು ವಿವರ ನೀಡುವುದು)

ಇ) ವಾರಾಹಿ ನೀರಾವರಿ ಯೋಜನೆಯ ಬೇರೆ ಬೇರೆ ಬಾಬ್ತುಗಳಿಗೆ ಈತನಕ ವೆಚ್ಚವಾದ ಅನುದಾನವೆಷ್ಟು; ವಾರಾಹಿ ನೀರಾವರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ವರ್ಷವಾರು ವಿವರ ನೀಡುವುದು)

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

ಅ) ವಾರಾಹಿ ನೀರಾವರಿ ಯೋಜನೆಯ ವಾರಾಹಿ ಬಲದಂಡೆ ಕಾಲುವೆಯ ಹಾಗೂ ಎಡದಂಡೆ ಕಾಲುವೆಯ ಉದ್ದ, ಅವುಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾದ ಮತ್ತು ಅಂತ್ಯಗೊಂಡ ಕಾಲುವೆಯ ಉದ್ದ ಹಾಗೂ ಭೂಸ್ವಾಧೀನ ಮಾಡಲು ಬಾಕಿ ಇರುವ ಕಾಲುವೆಯ ಉದ್ದದ ವಿವರ ಈ ಕೆಳಕಂಡಂತಿರುತ್ತದೆ.

**(ಕಿ.ಮೀ. ವಾರು ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ)**

| ಕಾಲುವೆ | ಒಟ್ಟು ಉದ್ದ (ಕಿ.ಮೀ) | ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಕಾಲುವೆ ಉದ್ದ (ಕಿ.ಮೀ) | ಭೂಸ್ವಾಧೀನ ಪ್ರಕ್ರಿಯೆ ಮಾಡಲು ಬಾಕಿಯಿರುವ ಕಾಲುವೆ ಉದ್ದ (ಕಿ.ಮೀ) |
|---|---|---|---|
| ವಾರಾಹಿ ಬಲದಂಡೆ ಕಾಲುವೆ | 42.73 | 24.00 | 18.73 |
| ವಾರಾಹಿ ಎಡದಂಡೆ ಕಾಲುವೆ | 44.35 | 30.00 | 14.35 |

ಆ) ಭೂಸ್ವಾಧೀನ ಪ್ರಕ್ರಿಯೆ ಮುಗಿದು ಟೆಂಡರ್ ಕರೆಯಲಾದ, ಪೂರ್ಣಗೊಂಡ, ಪ್ರಗತಿಯಲ್ಲಿರುವ ಮತ್ತು ಟೆಂಡರ್ ಕರೆಯಲು ಬಾಕಿ ಇರುವ ಕಾಮಗಾರಿಗಳ ಕಿ.ಮೀ.ವಾರು ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

ಇ) ವಾರಾಹಿ ನೀರಾವರಿ ಯೋಜನೆಯ ಬೇರೆ ಬೇರೆ ಬಾಬ್ತುಗಳಿಗೆ ಈತನಕ ವೆಚ್ಚವಾದ ಅನುದಾನದ ವಿವರಗಳನ್ನು ಅನುಬಂಧ–3 ರಲ್ಲಿ ಲಗತ್ತಿಸಿದೆ. ವಾರಾಹಿ ನೀರಾವರಿ ಯೋಜನೆಯನ್ನು ಕೇಂದ್ರ ಸರ್ಕಾರದ ಎ.ಐ.ಬಿ.ಪಿ ಧನ ಸಹಾಯದಡಿಯಲ್ಲಿ ಕೈಗೆತ್ತಿಕೊಂಡಿದ್ದು, ಭೂಸ್ವಾಧೀನ ಹಾಗೂ ಬಾಕಿ ಕಾಮಗಾರಿಗಳನ್ನು ಕೂಡಲೇ ಕೈಗೊಂಡು, ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

# ಅನುಬಂಧ–1

## ವಾರಾಹಿ ನೀರಾವರಿ ಯೋಜನೆಯ ಬಲದಂಡೆ ಹಾಗೂ ಎಡದಂಡೆ ಕಾಲುವೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಹಾಗೂ ಬಾಕಿ ಯರುವ ಕಾಲುವೆಯ ವಿವರಗಳು

## ವಾರಾಹಿ ಯೋಜನಾ ವಲಯ, ಕನೀನಿನಿ, ಸಿದ್ದಾಪುರ, ಉಡುಪಿ ಜಿಲ್ಲೆ

| ಕ್ರ.ಸಂ. | ಕಾಮಗಾರಿಯ ಹೆಸರು | ಗ್ರಾಮ | ಆವಾರ್ಡ್ ದಿನಾಂಕ | ವಿಸ್ತೀರ್ಣ ಎಕ್ರೆ/ಸೆಂಟ್ಸ್ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| | **ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಕಾಮಗಾರಿಗಳ ವಿವರಗಳು** | | | | |
| | **ವಾರಾಹಿ ಬಲದಂಡೆ ಕಾಲುವೆ** | | | | |
| 1 | ವಾರಾಹಿ ಬಲದಂಡೆ ನಾಲೆಯ ಸರಪಳಿ 0.30 ಕಿ.ಮೀ ರಿಂದ 1.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಹೊಸಂಗಡಿ | 26/04/2007 | 2.71 | ಕಾಮಗಾರಿ ಪೂರ್ಣಗೊಂಡಿದೆ. |
| 2 | ವಾರಾಹಿ ಬಲದಂಡೆ ನಾಲೆಯ ಸರಪಳಿ 1.0 ಕಿ.ಮೀ ರಿಂದ 2.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಹೊಸಂಗಡಿ | 26/04/2007 | | ಕಾಮಗಾರಿ ಪ್ರಗತಿಯಲ್ಲಿದೆ. |
| 3 | ವಾರಾಹಿ ಬಲದಂಡೆ ನಾಲೆಯ ಸರಪಳಿ 2.0 ಕಿ.ಮೀ ರಿಂದ 3.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಉಳ್ಳೂರು–74 | 20/06/2007 | 13.45 | ಕಾಮಗಾರಿ ಪ್ರಗತಿಯಲ್ಲಿದೆ. |
| 4 | ವಾರಾಹಿ ಬಲದಂಡೆ ನಾಲೆಯ ಸರಪಳಿ 3.0 ಕಿ.ಮೀ ರಿಂದ 4.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಉಳ್ಳೂರು–74 | 20/06/2007 ಮತ್ತು 19/03/2009 | | ಕಾಮಗಾರಿ ಪ್ರಗತಿಯಲ್ಲಿದೆ. |
| 5 | ವಾರಾಹಿ ಬಲದಂಡೆ ನಾಲೆಯ ಸರಪಳಿ 4.00 ಕಿ.ಮೀ ರಿಂದ 5.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಉಳ್ಳೂರು–74 | 20/06/2007<br>21/06/2013 | <br>3.19 | ಕಾಮಗಾರಿ ಪ್ರಗತಿಯಲ್ಲಿದೆ. |

| | | | | | |
|---|---|---|---|---|---|
| 6 | ವಾರಾಹಿ ಬಲದಂಡೆ ನಾಲೆಯ ಸರಪಳಿ 5.0 ಕಿ.ಮೀ ರಿಂದ 6.385 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಉಳ್ಳೂರು–74 | 30/05/2007 | 5.26 | ಕಾಮಗಾರಿ ಪೂರ್ಣಗೊಂಡಿದೆ. |
| 7 | ವಾರಾಹಿ ಬಲದಂಡೆ ನಾಲೆಯ ಸರಪಳಿ 6.72 ರಿಂದ 8.10 ಕಿ.ಮೀ ವರೆಗಿನ ಟನಲ್ ಕಾಮಗಾರಿ ಹಾಗೂ ಸರಪಳಿ 6.385 ರಿಂದ 6.72 ಕಿ.ಮೀ ಅಪ್ರೋಚ್ ಹಾಗೂ ಸರಪಳಿ 8.10 ರಿಂದ 8.40 ಕಿ.ಮೀ ವರೆಗಿನ ನಾಲೆಯ ಎಕ್ಸಿಟ್ ಕಾಮಗಾರಿ | ಉಳ್ಳೂರು–74 | | | ಕಾಮಗಾರಿ ಪ್ರಗತಿಯಲ್ಲಿದೆ. |
| 8 | ವಾರಾಹಿ ಬಲದಂಡೆ ನಾಲೆಯ ಸರಪಳಿ 8.40 ಕಿ.ಮೀ ರಿಂದ 9.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಉಳ್ಳೂರು–74 | 22/06/2007 ಮತ್ತು 18/08/2008 | 23.67 | ಕಾಮಗಾರಿ ಪ್ರಗತಿಯಲ್ಲಿದೆ. |
| 9 | ವಾರಾಹಿ ಬಲದಂಡೆ ನಾಲೆಯ ಸರಪಳಿ 9.00 ಕಿ.ಮೀ ರಿಂದ 10.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | | 22/06/2007 | | ಕಾಮಗಾರಿ ಪೂರ್ಣಗೊಂಡಿದೆ. |
| 10 | ವಾರಾಹಿ ಬಲದಂಡೆ ನಾಲೆಯ ಸರಪಳಿ 10.00 ಕಿ.ಮೀ ರಿಂದ 11.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಸಿದ್ಧಾಪುರ | 15/09/2009 | 20.40 | ಕಾಮಗಾರಿ ಪ್ರಗತಿಯಲ್ಲಿದೆ. |
| 11 | ವಾರಾಹಿ ಬಲದಂಡೆ ನಾಲೆಯ ಸರಪಳಿ 11.00 ಕಿ.ಮೀ ರಿಂದ 12.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಸಿದ್ಧಾಪುರ | 15/09/2009 | | ಕಾಮಗಾರಿ ಪ್ರಗತಿಯಲ್ಲಿದೆ. |
| 12 | ವಾರಾಹಿ ಬಲದಂಡೆ ನಾಲೆಯ ಸರಪಳಿ 12.00 ಕಿ.ಮೀ ರಿಂದ 13.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಸಿದ್ಧಾಪುರ | 15/09/2009 | | ಕಾಮಗಾರಿ ಪೂರ್ಣಗೊಂಡಿದೆ. |
| 13 | ವಾರಾಹಿ ಬಲದಂಡೆ ನಾಲೆಯ ಸರಪಳಿ 13.00 ಕಿ.ಮೀ ರಿಂದ 14.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | 14/05/2007 | 8.86 | ಕಾಮಗಾರಿ ಪೂರ್ಣಗೊಂಡಿದೆ. |
| 14 | ವಾರಾಹಿ ಬಲದಂಡೆ ನಾಲೆಯ ಸರಪಳಿ 14.00 ಕಿ.ಮೀ ರಿಂದ 15.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | | | ಕಾಮಗಾರಿ ಪ್ರಗತಿಯಲ್ಲಿದೆ. |
| 15 | ವಾರಾಹಿ ಬಲದಂಡೆ ನಾಲೆಯ ಸರಪಳಿ 15.00 ಕಿ.ಮೀ ರಿಂದ 16.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕುಳ್ಳುಂಜೆ | 21/12/2010 | 59.75 | ಕಾಮಗಾರಿ ಪ್ರಗತಿಯಲ್ಲಿದೆ. |

| | | | | | |
|---|---|---|---|---|---|
| 16 | ವಾರಾಹಿ ಬಲದಂಡೆ ನಾಲೆಯ ಸರಪಳಿ 16.00 ಕಿ.ಮೀ ರಿಂದ 17.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕುಳ್ಳುಂಜೆ | 21/12/2010<br>30/10/2012 | | ಕಾಮಗಾರಿ ಪ್ರಗತಿಯಲ್ಲಿದೆ. |
| 17 | ವಾರಾಹಿ ಬಲದಂಡೆ ನಾಲೆಯ ಸರಪಳಿ 17.00 ಕಿ.ಮೀ ರಿಂದ 18.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕುಳ್ಳುಂಜೆ | 21/12/2010 | | ಕಾಮಗಾರಿ ಪ್ರಗತಿಯಲ್ಲಿದೆ. |
| 18 | ವಾರಾಹಿ ಬಲದಂಡೆ ನಾಲೆಯ ಸರಪಳಿ 18.00 ಕಿ.ಮೀ ರಿಂದ 18.725 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕುಳ್ಳುಂಜೆ | 21/12/2010<br>11-06-2006 | | ಕಾಮಗಾರಿ ಪ್ರಗತಿಯಲ್ಲಿದೆ. |
| 19 | ವಾರಾಹಿ ಬಲದಂಡೆ ನಾಲೆಯ ಸರಪಳಿ 18.419 ಕಿ.ಮೀ ರಿಂದ 19.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | 25/03/2009 | 14.59 | ಟೆಂಡರ್ ಕರೆಯಬೇಕಾಗಿರುತ್ತದೆ. |
| 20 | ವಾರಾಹಿ ಬಲದಂಡೆ ನಾಲೆಯ ಸರಪಳಿ 19.00 ಕಿ.ಮೀ ರಿಂದ 20.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | | | |
| 21 | ವಾರಾಹಿ ಬಲದಂಡೆ ನಾಲೆಯ ಸರಪಳಿ 20.00 ಕಿ.ಮೀ ರಿಂದ 21.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | | | |
| 22 | ವಾರಾಹಿ ಬಲದಂಡೆ ನಾಲೆಯ ಸರಪಳಿ 21.00 ಕಿ.ಮೀ ರಿಂದ 22.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | | | |
| 23 | ವಾರಾಹಿ ಬಲದಂಡೆ ನಾಲೆಯ ಸರಪಳಿ 22.00 ಕಿ.ಮೀ ರಿಂದ 23.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | | | |
| 24 | ವಾರಾಹಿ ಬಲದಂಡೆ ನಾಲೆಯ ಸರಪಳಿ 23.00 ಕಿ.ಮೀ ರಿಂದ 24.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | | | |

| 1 | 2 | 3 | 4 | 5 | 6 |
|---|---|---|---|---|---|
| | **ವಾರಾಹಿ ಎಡದಂಡೆ ಕಾಲುವೆ** | | | | |
| 1 | ವಾರಾಹಿ ಎಡದಂಡೆ ನಾಲೆಯ 0.00 ರಿಂದ 1.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕುಳ್ಳಂಜೆ | 14/02/1998 | 2.45 | ಕಾಮಗಾರಿ ಪೂರ್ಣಗೊಂಡಿದೆ. |
| 2 | ವಾರಾಹಿ ಎಡದಂಡೆ ನಾಲೆಯ 1.00 ರಿಂದ 2.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 3 | ವಾರಾಹಿ ಎಡದಂಡೆ ನಾಲೆಯ 2.00 ರಿಂದ 3.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 4 | ವಾರಾಹಿ ಎಡದಂಡೆ ನಾಲೆಯ 3.00 ರಿಂದ 4.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಹಾಲಾಡಿ–76 | 14/06/1999 | 18.87 | ಕಾಮಗಾರಿ ಪೂರ್ಣಗೊಂಡಿದೆ. |
| 5 | ವಾರಾಹಿ ಎಡದಂಡೆ ನಾಲೆಯ 4.00 ರಿಂದ 5.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 6 | ವಾರಾಹಿ ಎಡದಂಡೆ ನಾಲೆಯ 5.00 ರಿಂದ 6.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 7 | ವಾರಾಹಿ ಎಡದಂಡೆ ನಾಲೆಯ 6.00 ರಿಂದ 7.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 8 | ವಾರಾಹಿ ಎಡದಂಡೆ ನಾಲೆಯ 7.00 ರಿಂದ 8.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |

| | | | | | |
|---|---|---|---|---|---|
| 9 | ವಾರಾಹಿ ಎಡದಂಡೆ ನಾಲೆಯ 8.00 ರಿಂದ 9.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 10 | ವಾರಾಹಿ ಎಡದಂಡೆ ನಾಲೆಯ 9.00 ರಿಂದ 10.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 11 | ವಾರಾಹಿ ಎಡದಂಡೆ ನಾಲೆಯ 10.00 ರಿಂದ 11.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ. | ಹಾಲಾಡಿ–76 | 26/06/1999 | 26.88 | ಕಾಮಗಾರಿ ಪೂರ್ಣಗೊಂಡಿದೆ. |
| 12 | ವಾರಾಹಿ ಎಡದಂಡೆ ನಾಲೆಯ 11.00 ರಿಂದ 12.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 13 | ವಾರಾಹಿ ಎಡದಂಡೆ ನಾಲೆಯ 12.00 ರಿಂದ 13.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 14 | ವಾರಾಹಿ ಎಡದಂಡೆ ನಾಲೆಯ 13.00 ರಿಂದ 14.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ. | ಹಾಲಾಡಿ | 09–11–2000 | 23.95 | ಕಾಮಗಾರಿ ಪೂರ್ಣಗೊಂಡಿದೆ. |
| 15 | ವಾರಾಹಿ ಎಡದಂಡೆ ನಾಲೆಯ 14.00 ರಿಂದ 15.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 16 | ವಾರಾಹಿ ಎಡದಂಡೆ ನಾಲೆಯ 15.00 ರಿಂದ 16.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 17 | ವಾರಾಹಿ ಎಡದಂಡೆ ನಾಲೆಯ 16.00 ರಿಂದ 17.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಹಾಲಾಡಿ–28 | 15/04/1999 | 9.77 | ಕಾಮಗಾರಿ ಪೂರ್ಣಗೊಂಡಿದೆ. |
| 18 | ವಾರಾಹಿ ಎಡದಂಡೆ ನಾಲೆಯ 17.00 ರಿಂದ 18.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |

| | | | | | |
|---|---|---|---|---|---|
| 19 | ವಾರಾಹಿ ಎಡದಂಡೆ ನಾಲೆಯ 18.00 ರಿಂದ 19.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಹಾರ್ದಳ್ಳಿ– ಮಂಡಳ್ಳಿ | 11–04–1998 | 17.76 | ಕಾಮಗಾರಿ ಪೂರ್ಣಗೊಂಡಿದೆ. |
| 20 | ವಾರಾಹಿ ಎಡದಂಡೆ ನಾಲೆಯ 19.00 ರಿಂದ 20.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | | | | ಕಾಮಗಾರಿ ಪೂರ್ಣಗೊಂಡಿದೆ. |
| 21 | ವಾರಾಹಿ ಎಡದಂಡೆ ನಾಲೆಯ 20.00 ರಿಂದ 21.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಹಾರ್ದಳ್ಳಿ– ಮಂಡಳ್ಳಿ | 22/11/2007 | 1.99 | ಕಾಮಗಾರಿ ಪೂರ್ಣಗೊಂಡಿದೆ. |
| 22 | ವಾರಾಹಿ ಎಡದಂಡೆ ನಾಲೆಯ 21.00 ರಿಂದ 22.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಮೊಳಹಳ್ಳಿ | 21/04/2008 | 2.25 | ಕಾಮಗಾರಿ ಪ್ರಗತಿಯಲ್ಲಿದೆ. |
| 23 | ವಾರಾಹಿ ಎಡದಂಡೆ ನಾಲೆಯ 22.00 ರಿಂದ 23.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಮೊಳಹಳ್ಳಿ | 21/04/2008 | 8.83 | ಬಾಕಿ ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಉಪ ಸಮಿತಿಯ ಅನುಮೋದನೆಯಲ್ಲಿದ್ದು, ಟೆಂಡರ್ ಕರೆಯಬೇಕಿದೆ. |
| 24 | ವಾರಾಹಿ ಎಡದಂಡೆ ನಾಲೆಯ 23.00 ರಿಂದ 24.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಮೊಳಹಳ್ಳಿ | 21/04/2008 | 1.48 | ಕಾಮಗಾರಿ ಪೂರ್ಣಗೊಂಡಿದೆ. |
| 25 | ವಾರಾಹಿ ಎಡದಂಡೆ ನಾಲೆಯ 24.00 ರಿಂದ 25.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಯಡ್ಯಾಡಿ– ಮತ್ಯಾಡಿ/ಮೊಳಹಳ್ಳಿ | 21/04/2008 | 0.75 | ಕಾಮಗಾರಿ ಪ್ರಗತಿಯಲ್ಲಿದೆ. |
| | | ಯಡ್ಯಾಡಿ– ಮತ್ಯಾಡಿ | 24/07/2004 | 7.09 | |

| | | | | | |
|---|---|---|---|---|---|
| 26 | ವಾರಾಹಿ ಎಡದಂಡೆ ನಾಲೆಯ 25.00 ರಿಂದ 26.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಯಡ್ಯಾಡಿ– ಮತ್ಯಾಡಿ | 24/07/2004 | 2.79 | ಕಾಮಗಾರಿ ಪೂರ್ಣಗೊಂಡಿದೆ. |
| 27 | ವಾರಾಹಿ ಎಡದಂಡೆ ನಾಲೆಯ 26.00 ರಿಂದ 27.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಮೊಳಹಳ್ಳಿ | 21/04/2008 | 8.18 | ಬಾಕಿ ಕಾಮಗಾರಿಯ ಅಂದಾಜುಪಟ್ಟಿಗೆ ತಾಂತ್ರಿಕ ಉಪ ಸಮಿತಿಯ ಅನುಮೋದನೆಯಲ್ಲಿದ್ದು, ಟೆಂಡರ್ ಕರೆಯಬೇಕಿದೆ. |
| 28 | ವಾರಾಹಿ ಎಡದಂಡೆ ನಾಲೆಯ 27.00 ರಿಂದ 28.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಮೊಳಹಳ್ಳಿ | | | ಕಾಮಗಾರಿ ಪ್ರಗತಿಯಲ್ಲಿದೆ. |
| 29 | ವಾರಾಹಿ ಎಡದಂಡೆ ನಾಲೆಯ 28.00 ರಿಂದ 29.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಹೊಂಬಾಡಿ– ಮಂಡಾಡಿ, | 8–5–2008 | 8.36 | ಕಾಮಗಾರಿ ಪೂರ್ಣಗೊಂಡಿದೆ. |
| | | ಜಪ್ತಿ | 3/06/2006 | 0.8 | |
| 30 | ವಾರಾಹಿ ಎಡದಂಡೆ ನಾಲೆಯ 29.00 ರಿಂದ 30.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಹೊಂಬಾಡಿ– ಮಂಡಾಡಿ, | 05–08–2008 | 10.41 | ಕಾಮಗಾರಿ ಪೂರ್ಣಗೊಂಡಿದೆ. |
| 31 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 1ಎ ನಿರ್ಮಾಣ ಕಾಮಗಾರಿ | ಕುಳ್ಳಂಜೆ | 22/02/1997 | 1.7 | ಕಾಮಗಾರಿ ಪೂರ್ಣಗೊಂಡಿದೆ. |
| 32 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 9ರ ನಿರ್ಮಾಣ ಕಾಮಗಾರಿ | ಹಾಲಾಡಿ–76 | 12/08/2010 | 1.06 | ಕಾಮಗಾರಿ ಪೂರ್ಣಗೊಂಡಿದೆ. |

| | | | | | |
|---|---|---|---|---|---|
| 33 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 11 ರ ನಿರ್ಮಾಣ ಕಾಮಗಾರಿ | ಹಾಲಾಡಿ–76 | 18/01/2010 | 3.94 | ಕಾಮಗಾರಿ ಪ್ರಗತಿಯಲ್ಲಿದೆ. |
| 34 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 12ರ ನಿರ್ಮಾಣ ಕಾಮಗಾರಿ | ಹಾಲಾಡಿ–76 | 29/12/2009 | 2.41 | ಕಾಮಗಾರಿ ಪ್ರಗತಿಯಲ್ಲಿದೆ. |
| 35 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 13ರ ನಿರ್ಮಾಣ ಕಾಮಗಾರಿ | ಹಾಲಾಡಿ–76 | 29/12/2009 | 4.16 | ಕಾಮಗಾರಿ ಪೂರ್ಣಗೊಂಡಿದೆ. |
| 36 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ಮುಖ್ಯ ವಿತರಣಾ ನಾಲೆ ಮತ್ತು ಮೈನರ್ 1,2,3 (ಒಟ್ಟು 27.00 ಕಿ.ಮೀ) | ಕಕ್ಕುಂಜೆ, ವಂಡಾರು, ಬಿಲ್ಲಾಡಿ, ಹಳ್ಳಾಡಿ, ಹರ್ಕಾಡಿ, ಶಿರಿಯಾರ | – | 68.15 | ಅವಾರ್ಡ ಹಂತದಲ್ಲಿರುತ್ತದೆ. ಕಾಮಗಾರಿಯು ಸರ್ಕಾರಿ ಜಮೀನು ಮತ್ತು ರೈತರು ಒಪ್ಪಿ ಬಿಟ್ಟು ಕೊಟ್ಟ ಪಟ್ಟಾ ಜಮೀನುಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. |
| 37 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 19ರ ನಿರ್ಮಾಣ ಕಾಮಗಾರಿ | ಹಾಲಾಡಿ–28 | 18/12/2009 | 3.11 | ಕಾಮಗಾರಿ ಪೂರ್ಣಗೊಂಡಿದೆ. |
| 38 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 21 ರ ನಿರ್ಮಾಣ ಕಾಮಗಾರಿ | ಹಾರ್ದಳ್ಳಿ–ಮಂಡಳ್ಳಿ | 18/12/2009 | 1.01 | ಕಾಮಗಾರಿ ಪೂರ್ಣಗೊಂಡಿದೆ. |
| 39 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 24 ರ ನಿರ್ಮಾಣ ಕಾಮಗಾರಿ | ಹಾರ್ದಳ್ಳಿ–ಮಂಡಳ್ಳಿ | – | 11.37 | ಕಾಮಗಾರಿ ಪ್ರಗತಿಯಲ್ಲಿದೆ. |

| | | | | | |
|---|---|---|---|---|---|
| 40 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 25ರ ಮುಖ್ಯ ವಿತರಣಾ ನಾಲೆ ಮತ್ತು ಮೈನರ್ 1ರ ನಿರ್ಮಾಣ ಕಾಮಗಾರಿ (ಒಟ್ಟು 12.20 ಕಿ.ಮೀ) | ಹಾರ್ದಳ್ಳಿ– ಮಂಡಳ್ಳಿ, ಹಳ್ಳಾಡಿ–ಹರ್ಕಾಡಿ, ಹುಡ್ಯಾಡಿ–ಮತ್ಯಾದಿ | – | 67.30 | ಅವಾರ್ಡ್ ಹಂತದಲ್ಲಿರುತ್ತದೆ. ಕಾಮಗಾರಿಯು ಸರ್ಕಾರಿ ಜಮೀನು ಮತ್ತು ರೈತರು ಒಪ್ಪಿ ಬಿಟ್ಟು ಕೊಟ್ಟ ಪಟ್ಟಾ ಜಮೀನುಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. |
| | **ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಲು ಬಾಕಿಯಿರುವ ಕಾಮಗಾರಿಗಳ ವಿವರಗಳು** | | | | |
| | **ವಾರಾಹಿ ಬಲದಂಡೆ ಕಾಲುವೆ** | | | | |
| 1 | ವಾರಾಹಿ ಬಲದಂಡೆ ನಾಲೆಯ ಸರಪಳಿ 24.00 ಕಿ.ಮೀರಿಂದ 25.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | ಭೂಸ್ವಾಧೀನ ಪ್ರಸ್ತಾವನೆ ಪ್ರಾಥಮಿಕ ಹಂತದಲ್ಲಿರುತ್ತದೆ. |
| 2 | ವಾರಾಹಿ ಬಲದಂಡೆ ನಾಲೆಯ ಸರಪಳಿ 25.00 ಕಿ.ಮೀರಿಂದ 26.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 3 | ವಾರಾಹಿ ಬಲದಂಡೆ ನಾಲೆಯ ಸರಪಳಿ 26.00 ಕಿ.ಮೀರಿಂದ 27.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 4 | ವಾರಾಹಿ ಬಲದಂಡೆ ನಾಲೆಯ ಸರಪಳಿ 27.00 ಕಿ.ಮೀರಿಂದ 28.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |

| | | | | | |
|---|---|---|---|---|---|
| 5 | ವಾರಾಹಿ ಬಲದಂಡೆ ನಾಲೆಯ ಸರಪಳಿ 28.00 ಕಿ.ಮೀರಿಂದ 29.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 6 | ವಾರಾಹಿ ಬಲದಂಡೆ ನಾಲೆಯ ಸರಪಳಿ 29.00 ಕಿ.ಮೀರಿಂದ 30.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 7 | ವಾರಾಹಿ ಬಲದಂಡೆ ನಾಲೆಯ ಸರಪಳಿ 30.00 ಕಿ.ಮೀರಿಂದ 31.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 8 | ವಾರಾಹಿ ಬಲದಂಡೆ ನಾಲೆಯ ಸರಪಳಿ 31.00 ಕಿ.ಮೀರಿಂದ 32.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 9 | ವಾರಾಹಿ ಬಲದಂಡೆ ನಾಲೆಯ ಸರಪಳಿ 32.00 ಕಿ.ಮೀರಿಂದ 33.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 10 | ವಾರಾಹಿ ಬಲದಂಡೆ ನಾಲೆಯ ಸರಪಳಿ 33.00 ಕಿ.ಮೀರಿಂದ 34.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಶಂಕರನಾರಾಯಣ | – | | |
| 11 | ವಾರಾಹಿ ಬಲದಂಡೆ ನಾಲೆಯ ಸರಪಳಿ 34.00 ಕಿ.ಮೀರಿಂದ 35.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | ಪ್ರಾಥಮಿಕ ಹಂತದಲ್ಲಿರುತ್ತದೆ. |

| | | | | | |
|---|---|---|---|---|---|
| 12 | ವಾರಾಹಿ ಬಲದಂಡೆ ನಾಲೆಯ ಸರಪಳಿ 35.00 ಕಿ.ಮೀರಿಂದ 36.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |
| 13 | ವಾರಾಹಿ ಬಲದಂಡೆ ನಾಲೆಯ ಸರಪಳಿ 36.00 ಕಿ.ಮೀರಿಂದ 37.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |
| 14 | ವಾರಾಹಿ ಬಲದಂಡೆ ನಾಲೆಯ ಸರಪಳಿ 37.00 ಕಿ.ಮೀರಿಂದ 38.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |
| 15 | ವಾರಾಹಿ ಬಲದಂಡೆ ನಾಲೆಯ ಸರಪಳಿ 38.00 ಕಿ.ಮೀರಿಂದ 39.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |
| 16 | ವಾರಾಹಿ ಬಲದಂಡೆ ನಾಲೆಯ ಸರಪಳಿ 39.00 ಕಿ.ಮೀರಿಂದ 40.00 ಕಿ.ಮೀ, ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |
| 17 | ವಾರಾಹಿ ಬಲದಂಡೆ ನಾಲೆಯ ಸರಪಳಿ 40.00 ಕಿ.ಮೀರಿಂದ 41.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |
| 18 | ವಾರಾಹಿ ಬಲದಂಡೆ ನಾಲೆಯ ಸರಪಳಿ 41.00 ಕಿ.ಮೀರಿಂದ 42.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | ಪ್ರಾಥಮಿಕ ಹಂತದಲ್ಲಿರುತ್ತದೆ. (ಸರ್ಕಾರಿ ಜಮೀನು) |
| 19 | ವಾರಾಹಿ ಬಲದಂಡೆ ನಾಲೆಯ ಸರಪಳಿ 42.00 ಕಿ.ಮೀರಿಂದ 42.73 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಅಂಪಾರು | – | | |

| | | | | | |
|---|---|---|---|---|---|
| 20 | ವಾರಾಹಿ ಬಲದಂಡೆ ಕಾಲುವೆಯ 32.979 ಕಿ.ಮೀಯಲ್ಲಿನ ವಿತರಣಾ ನಾಲೆ–1ರ ಸರಪಳಿ 0.056 ಕಿ.ಮೀ ಯಿಂದ 1.37 ಕಿ.ಮೀ. | ಶಂಕರನಾರಾಯಣ | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 21 | ವಾರಾಹಿ ಬಲದಂಡೆ ಕಾಲುವೆಯ 36.686 ಕಿ.ಮೀಯಲ್ಲಿನ ವಿತರಣಾ ನಾಲೆ–2ರ ಸರಪಳಿ 0.063 ಕಿ.ಮೀ ಯಿಂದ 1.998 ಕಿ.ಮೀ. | ಅಂಪಾರು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 22 | ವಾರಾಹಿ ಬಲದಂಡೆ ಕಾಲುವೆಯ 36.686 ಕಿ.ಮೀಯಲ್ಲಿನ ವಿತರಣಾ ನಾಲೆ–2ರ ಸರಪಳಿ 1.998 ಕಿ.ಮೀ ಯಿಂದ 4.103 ಕಿ.ಮೀ. | ಕಾವ್ರಾಡಿ | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 23 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1 ಸರಪಳಿ 0.088 ಕಿ.ಮೀ. ಯಿಂದ 1.383 ಕಿ.ಮೀ ಹಾಗೂ ಸರಪಳಿ 1.974 ಕಿ.ಮೀ ಯಿಂದ 2.109 ಕಿ.ಮೀ | ಅಂಪಾರು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 24 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1 ಸರಪಳಿ 1.383 ಕಿ.ಮೀ. ಯಿಂದ 1.732 ಕಿ.ಮೀ, ಸರಪಳಿ 2.714 ಕಿ.ಮೀ ಯಿಂದ 2.794 ಕಿ.ಮೀ ಹಾಗೂ ಸರಪಳಿ 5.115 ಕಿ.ಮೀ ಯಿಂದ 5.175 ಕಿ.ಮೀ, | ಕಾವ್ರಾಡಿ | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 25 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1 ಸರಪಳಿ 2.966 ಕಿ.ಮೀ. ಯಿಂದ 5.115 ಕಿ.ಮೀ | ಹಳ್ನಾಡು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 26 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1ರ ಸಬ್ ಮೈನರ್–1 ಸರಪಳಿ 0.025 ಕಿ.ಮೀ. ಯಿಂದ 1.005 ಕಿ.ಮೀ | ಅಂಪಾರು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |

| | | | | | |
|---|---|---|---|---|---|
| 27 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್2 ಸರಪಳಿ 0.020 ಕಿ.ಮೀ. ಯಿಂದ 1.238 ಕಿ.ಮೀ | ಅಂಪಾರು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 28 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1ರ ಸಬ್ ಮೈನರ್–3 ಸರಪಳಿ 0.047 ಕಿ.ಮೀ. ಯಿಂದ 1.127 ಕಿ.ಮೀ | ಅಂಪಾರು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 29 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1ರ ಸಬ್ ಮೈನರ್–3 ಸರಪಳಿ 0.146 ಕಿ.ಮೀ. ಯಿಂದ 0.407 ಕಿ.ಮೀ ಹಾಗೂ ಸರಪಳಿ 1.127 ಕಿ.ಮೀ. ಯಿಂದ 2.545 ಕಿ.ಮೀ | ಹಳ್ನಾಡು | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |
| 30 | ವಾರಾಹಿ ಬಲದಂಡೆ ವಿತರಣಾ ನಾಲೆ–2ರಲ್ಲಿನ ಮೈನರ್–1ರ ಸಬ್ ಮೈನರ್–4 ಸರಪಳಿ 0.130 ಕಿ.ಮೀ. ಯಿಂದ 1.10 ಕಿ.ಮೀ | ಕಾವ್ರಾಡಿ | – | | ಪ್ರಾಥಮಿಕ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. |

| 1 | 2 | 3 | 4 | 5 | 6 |
|---|---|---|---|---|---|
| | **ವಾರಾಹಿ ಎಡದಂಡೆ ಕಾಲುವೆ** | | | | |
| 1 | ವಾರಾಹಿ ಎಡದಂಡೆ ನಾಲೆಯ 30.00 ರಿಂದ 31.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಹೊಂಬಾಡಿ– ಮಂಡಾಡಿ, | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 2 | ವಾರಾಹಿ ಎಡದಂಡೆ ನಾಲೆಯ 31.00 ರಿಂದ 32.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕಾಳಾವರ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 3 | ವಾರಾಹಿ ಎಡದಂಡೆ ನಾಲೆಯ 32.00 ರಿಂದ 33.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕಾಳಾವರ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 4 | ವಾರಾಹಿ ಎಡದಂಡೆ ನಾಲೆಯ 33.00 ರಿಂದ 34.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕಾಳಾವರ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 5 | ವಾರಾಹಿ ಎಡದಂಡೆ ನಾಲೆಯ 34.00 ರಿಂದ 35.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕಾಳಾವರ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 6 | ವಾರಾಹಿ ಎಡದಂಡೆ ನಾಲೆಯ 35.00 ರಿಂದ 36.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕಾಳಾವರ ಅಸೋಡು | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 7 | ವಾರಾಹಿ ಎಡದಂಡೆ ನಾಲೆಯ 36.00 ರಿಂದ 37.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಅಸೋಡು | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 8 | ವಾರಾಹಿ ಎಡದಂಡೆ ನಾಲೆಯ 37.00 ರಿಂದ 38.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕಾಳಾವರ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 9 | ವಾರಾಹಿ ಎಡದಂಡೆ ನಾಲೆಯ 38.00 ರಿಂದ 39.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ವಕ್ವಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 10 | ವಾರಾಹಿ ಎಡದಂಡೆ ನಾಲೆಯ 39.00 ರಿಂದ 40.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ವಕ್ವಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 11 | ವಾರಾಹಿ ಎಡದಂಡೆ ನಾಲೆಯ 40.00 ರಿಂದ 41.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ವಕ್ವಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |

| | | | | | |
|---|---|---|---|---|---|
| 12 | ವಾರಾಹಿ ಎಡದಂಡೆ ನಾಲೆಯ 41.00 ರಿಂದ 42.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ವಕ್ವಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 13 | ವಾರಾಹಿ ಎಡದಂಡೆ ನಾಲೆಯ 42.00 ರಿಂದ 43.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ಕುಂಭಾಶಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 14 | ವಾರಾಹಿ ಎಡದಂಡೆ ನಾಲೆಯ 43.00 ರಿಂದ 44.30 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ. | ತೆಕ್ಕಟ್ಟೆ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 15 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 26 ರ ಕಿ.ಮೀ. 0.00 ದಿಂದ 8.375 ಕಿ.ಮೀ. ನ ನಿರ್ಮಾಣ ಕಾಮಗಾರಿ | ಮೊಳಹಳ್ಳಿ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 16 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 27 ರ ಕಿ.ಮೀ. 0.00 ದಿಂದ 1.268 ಕಿ.ಮೀ. ನ ನಿರ್ಮಾಣ ಕಾಮಗಾರಿ | ಮೊಳಹಳ್ಳಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 17 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 29 ರ ಕಿ.ಮೀ. 0.00 ದಿಂದ 1.126 ಕಿ.ಮೀ. ನ ನಿರ್ಮಾಣ ಕಾಮಗಾರಿ | ಯಡ್ಯಾಡಿ ಮತ್ಯಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 18 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 29 ರ ಮೈನರ್ –1 ರ ಕಿ.ಮೀ. 0.00 ದಿಂದ 1.355 ಕಿ.ಮೀ. ನ ನಿರ್ಮಾಣ ಕಾಮಗಾರಿ | ಯಡ್ಯಾಡಿ ಮತ್ಯಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 19 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 31 ರ ಕಿ.ಮೀ. 0.00 7.775 ಕಿ.ಮೀ. ನ ನಿರ್ಮಾಣ ಕಾಮಗಾರಿ | ಯಡ್ಯಾಡಿ ಮತ್ಯಾಡಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 20 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 32 ರ ಕಿ.ಮೀ. 0.00 ದಿಂದ 13.380 ಕಿ.ಮೀ. ನ ನಿರ್ಮಾಣ ಕಾಮಗಾರಿ | ಹೊಂಬಾಡಿ ಮಂಡಾಡಿ, ಕೋಣಿ, ಬೇಳೂರು, ಕೆದೂರು | – | | ಪ್ರಾಥಮಿಕ ಹಂತದಲ್ಲಿರುತ್ತದೆ. |

| | | | | | |
|---|---|---|---|---|---|
| 21 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 32 ರ ಮೈನರ್ – 1 ರ ಕಿ.ಮೀ. 0.00 ದಿಂದ 13.325 ಕಿ.ಮೀ. ನ ನಿರ್ಮಾಣ ಕಾಮಗಾರಿ | ಹೊಂಬಾಡಿ ಮಂಡಾಡಿ, ಕೋಣಿ, ಬೇಳೂರು, ಕೆದೂರು | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 22 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 33 ರ ಕಿ.ಮೀ. 0.00 ದಿಂದ 3.385 ಕಿ.ಮೀ. ನ ನಿರ್ಮಾಣ ಕಾಮಗಾರಿ | ಮೊಳಹಳ್ಳಿ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 23 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 34ರ ಕಿ.ಮೀ. 0.00 ದಿಂದ 3.615ನೇ ಕಿ.ಮೀ. ನ ನಿರ್ಮಾಣ ಕಾಮಗಾರಿ | ಜಪ್ತಿ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 24 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 35.ರ ಕಿ.ಮೀ. 0.00 ದಿಂದ 8.825 ಕಿ.ಮೀ. ನ ನಿರ್ಮಾಣ ಕಾಮಗಾರಿ | ಹೊಂಬಾಡಿ, ಮಂಡಾಡಿ, | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 25 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 35 ರ ಮೈನರ್ – 1 ರ ಕಿ.ಮೀ. 0.00 ದಿಂದ 7.618 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಂದಾವರ | – | | ಪ್ರಾಥಮಿಕ ಹಂತದಲ್ಲಿರುತ್ತದೆ. |
| 26 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 35 ರ ಮೈನರ್ – 1 ರ ಸಬ್ ಮೈನರ್ ನ ಕಿ.ಮೀ. 0.00 ದಿಂದ 2.675 ಕಿ.ಮೀ. ನ ನಿರ್ಮಾಣ ಕಾಮಗಾರಿ | ಬಳ್ಳೂರು | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 27 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 35 ರ ಮೈನರ್ –2 ರ ಕಿ.ಮೀ. 0.00 ದಿಂದ 2.565 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಂದಾವರ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 28 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 35 ರ ಮೈನರ್ –3 ರ ಕಿ.ಮೀ. 0.00 ದಿಂದ 2.362 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಂದಾವರ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 29 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 37 ರ ಕಿ.ಮೀ. 0.00 ದಿಂದ 4.425 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಾಳಾವರ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |

| | | | | | |
|---|---|---|---|---|---|
| 30 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 42 ರ ಕಿ.ಮೀ. 0.00 ದಿಂದ 6.670 ಕಿ.ಮೀ. ನ ನಿರ್ಮಾಣ ಕಾಮಗಾರಿ | ಅಸೋಡು | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 31 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 45 ರ ಕಿ.ಮೀ. 0.00 ದಿಂದ 5.150 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಾಳಾವರ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| 32 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 47 ರ ಕಿ.ಮೀ. 0.00 ದಿಂದ 2.200 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕೋಣಿ, ಕೋಟೇಶ್ವರ, ವಕ್ವಾಡಿ | – | | ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |

**ಸಹಿ/–**

ಮುಖ್ಯ ಇಂಜಿನಿಯರ್,
ಕನೀನಿನಿ, ವಾರಾಹಿ ಯೋಜನಾ ವಲಯ,
ಸಿದ್ಧಾಪುರ, ಉಡುಪಿ ಜಿಲ್ಲೆ.

(ಸಿ.ಶ್ರೀನಿವಾಸುಲು)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ–1)
ಜಲಸಂಪನ್ಮೂಲ ಇಲಾಖೆ

## ಅನುಬಂಧ–2

## ವಾರಾಹಿ ಬಲದಂಡೆ ಕಾಲುವೆಯ ಭೂಸ್ವಾಧೀನ ಪ್ರಕ್ರಿಯೆ ಮುಗಿದು ಟೆಂಡರ್ ಕರೆಯಲಾದ ಮತ್ತು ಕರೆಯಲು ಬಾಕಿ ಇರುವ ಕಾಮಗಾರಿಗಳಾ ವಿವರಗಳು

**ವಾರಾಹಿ ಯೋಜನಾ ವಲಯ, ಕನೀನಿನಿ, ಸಿದ್ದಾಪುರ, ಉಡುಪಿ ಜಿಲ್ಲೆ.**

| ಕ್ರ.ಸಂ. | ಕಾಮಗಾರಿಯ ಹೆಸರು | ಷರಾ |
|---|---|---|
| 1 | 2 | 3 |
| ಅ) ಭೂಸ್ವಾಧೀನ ಪ್ರಕ್ರಿಯೆ ಮುಗಿದು ಟೆಂಡರ್ ಕರೆದು ಪೂರ್ಣಗೊಂಡ ಕಾಮಗಾರಿಗಳ ವಿವರಗಳು | | |
| i) | ವಾರಾಹಿ ಬಲದಂಡೆ ಕಾಲುವೆ | |
| 1 | ವಾರಾಹಿ ಬಲದಂಡೆ ನಾಲೆಯ ಸರಪಳಿ 0.30 ಕಿ.ಮೀ ರಿಂದ 1.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 2 | ವಾರಾಹಿ ಬಲದಂಡೆ ನಾಲೆಯ ಸರಪಳಿ 5.0 ಕಿ.ಮೀ ರಿಂದ 6.385 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 3 | ವಾರಾಹಿ ಬಲದಂಡೆ ನಾಲೆಯ ಸರಪಳಿ 9.00 ಕಿ.ಮೀ ರಿಂದ 10.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 4 | ವಾರಾಹಿ ಬಲದಂಡೆ ನಾಲೆಯ ಸರಪಳಿ 12.00 ಕಿ.ಮೀ ರಿಂದ 13.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 5 | ವಾರಾಹಿ ಬಲದಂಡೆ ನಾಲೆಯ ಸರಪಳಿ 13.00 ಕಿ.ಮೀ ರಿಂದ 14.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |

| | | |
|---|---|---|
| **ii)** | **ವಾರಾಹಿ ಎಡದಂಡೆ ಕಾಲುವೆ** | |
| 1 | ವಾರಾಹಿ ಎಡದಂಡೆ ನಾಲೆಯ 0.00 ರಿಂದ 1.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 2 | ವಾರಾಹಿ ಎಡದಂಡೆ ನಾಲೆಯ 1.00 ರಿಂದ 2.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 3 | ವಾರಾಹಿ ಎಡದಂಡೆ ನಾಲೆಯ 2.00 ರಿಂದ 3.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 4 | ವಾರಾಹಿ ಎಡದಂಡೆ ನಾಲೆಯ 3.00 ರಿಂದ 4.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 5 | ವಾರಾಹಿ ಎಡದಂಡೆ ನಾಲೆಯ 4.00 ರಿಂದ 5.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 6 | ವಾರಾಹಿ ಎಡದಂಡೆ ನಾಲೆಯ 5.00 ರಿಂದ 6.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 7 | ವಾರಾಹಿ ಎಡದಂಡೆ ನಾಲೆಯ 6.00 ರಿಂದ 7.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 8 | ವಾರಾಹಿ ಎಡದಂಡೆ ನಾಲೆಯ 7.00 ರಿಂದ 8.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 9 | ವಾರಾಹಿ ಎಡದಂಡೆ ನಾಲೆಯ 8.00 ರಿಂದ 9.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |

| | | |
|---|---|---|
| 10 | ವಾರಾಹಿ ಎಡದಂಡೆ ನಾಲೆಯ 9.00 ರಿಂದ 10.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 11 | ವಾರಾಹಿ ಎಡದಂಡೆ ನಾಲೆಯ 10.00 ರಿಂದ 11.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 12 | ವಾರಾಹಿ ಎಡದಂಡೆ ನಾಲೆಯ 11.00 ರಿಂದ 12.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 13 | ವಾರಾಹಿ ಎಡದಂಡೆ ನಾಲೆಯ 12.00 ರಿಂದ 13.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 14 | ವಾರಾಹಿ ಎಡದಂಡೆ ನಾಲೆಯ 13.00 ರಿಂದ 14.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 15 | ವಾರಾಹಿ ಎಡದಂಡೆ ನಾಲೆಯ 14.00 ರಿಂದ 15.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 16 | ವಾರಾಹಿ ಎಡದಂಡೆ ನಾಲೆಯ 15.00 ರಿಂದ 16.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 17 | ವಾರಾಹಿ ಎಡದಂಡೆ ನಾಲೆಯ 16.00 ರಿಂದ 17.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 18 | ವಾರಾಹಿ ಎಡದಂಡೆ ನಾಲೆಯ 17.00 ರಿಂದ 18.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |

| | | |
|---|---|---|
| 19 | ವಾರಾಹಿ ಎಡದಂಡೆ ನಾಲೆಯ 18.00 ರಿಂದ 19.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 20 | ವಾರಾಹಿ ಎಡದಂಡೆ ನಾಲೆಯ 19.00 ರಿಂದ 20.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 21 | ವಾರಾಹಿ ಎಡದಂಡೆ ನಾಲೆಯ 20.00 ರಿಂದ 21.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 23 | ವಾರಾಹಿ ಎಡದಂಡೆ ನಾಲೆಯ 23.00 ರಿಂದ 24.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 24 | ವಾರಾಹಿ ಎಡದಂಡೆ ನಾಲೆಯ 25.00 ರಿಂದ 26.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 25 | ವಾರಾಹಿ ಎಡದಂಡೆ ನಾಲೆಯ 28.00 ರಿಂದ 29.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 26 | ವಾರಾಹಿ ಎಡದಂಡೆ ನಾಲೆಯ 29.00 ರಿಂದ 30.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| **iii)** | **ವಾರಾಹಿ ಎಡದಂಡೆ ಕಾಲುವೆಯ ವಿತರಣಾ ನಾಲೆ ಕಾಮಗಾರಿಗಳು** | |
| 1 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 1ಎ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 2 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 9 ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |

| | | |
|---|---|---|
| 3 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 13ರ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 4 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ವಿತರಣಾ ನಾಲೆ ಕಿ.ಮೀ. 6.000 ದಿಂದ 7.00 ನೇ ಕಿ.ಮೀ | ಕಾಮಗಾರಿ ಪೂರ್ಣಗೊಂಡಿದೆ. |
| 5 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ಮೈನರ್–1 3.00 ರಿಂದ 5.00ನೇ ಕಿ.ಮೀ.ನ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 6 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 19ರ ಕಿ.ಮೀ. 0 ರಿಂದ 1.000ನೇ ಕಿ.ಮೀ.ನ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 7 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 21 ರ ಕಿ.ಮೀ. 0.00 ದಿಂದ 1.435 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| 8 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 25 ರ ಕಿ.ಮೀ. 0.00 ದಿಂದ 1.000 ಕಿ.ಮೀ. ಹಾಗೂ 4.00 ನಿಂದ 5.00 ನೇ ಕಿ.ಮೀ ನ ನಿರ್ಮಾಣ ಕಾಮಗಾರಿ | ಕಾಮಗಾರಿ ಪೂರ್ಣಗೊಂಡಿದೆ. |
| **ಆ)** | **ಭೂಸ್ವಾಧೀನ ಪ್ರಕ್ರಿಯೆ ಮುಗಿದು ಟೆಂಡರ್ ಕರೆದು ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳು** | |
| **i)** | **ವಾರಾಹಿ ಬಲದಂಡೆ ಕಾಲುವೆ** | |
| 1 | ವಾರಾಹಿ ಬಲದಂಡೆ ನಾಲೆಯ ಸರಪಳಿ 1.0 ಕಿ.ಮೀ ರಿಂದ 2.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 2 | ವಾರಾಹಿ ಬಲದಂಡೆ ನಾಲೆಯ ಸರಪಳಿ 2.0 ಕಿ.ಮೀ ರಿಂದ 3.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |

| | | |
|---|---|---|
| 3 | ವಾರಾಹಿ ಬಲದಂಡೆ ನಾಲೆಯ ಸರಪಳಿ 3.0 ಕಿ.ಮೀ ರಿಂದ 4.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 4 | ವಾರಾಹಿ ಬಲದಂಡೆ ನಾಲೆಯ ಸರಪಳಿ 4.00 ಕಿ.ಮೀ ರಿಂದ 5.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 5 | ವಾರಾಹಿ ಬಲದಂಡೆ ನಾಲೆಯ ಸರಪಳಿ 6.72 ರಿಂದ 8.10 ಕಿ.ಮೀ ವರೆಗಿನ ಟನಲ್ ಕಾಮಗಾರಿ ಹಾಗೂ ಸರಪಳಿ 6.385 ರಿಂದ 6.72 ಕಿ.ಮೀ ಅಪ್ರೋಚ್ ಹಾಗೂ ಸರಪಳಿ 8.10 ರಿಂದ 8.40 ಕಿ.ಮೀ ವರೆಗಿನ ನಾಲೆಯ ಎಕ್ಸಿಟ್ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 6 | ವಾರಾಹಿ ಬಲದಂಡೆ ನಾಲೆಯ ಸರಪಳಿ 8.40 ಕಿ.ಮೀ ರಿಂದ 9.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 7 | ವಾರಾಹಿ ಬಲದಂಡೆ ನಾಲೆಯ ಸರಪಳಿ 10.00 ಕಿ.ಮೀ ರಿಂದ 11.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 8 | ವಾರಾಹಿ ಬಲದಂಡೆ ನಾಲೆಯ ಸರಪಳಿ 11.00 ಕಿ.ಮೀ ರಿಂದ 12.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 9 | ವಾರಾಹಿ ಬಲದಂಡೆ ನಾಲೆಯ ಸರಪಳಿ 14.00 ಕಿ.ಮೀ ರಿಂದ 15.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 10 | ವಾರಾಹಿ ಬಲದಂಡೆ ನಾಲೆಯ ಸರಪಳಿ 15.00 ಕಿ.ಮೀ ರಿಂದ 16.00 ರಲ್ಲಿ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 11 | ವಾರಾಹಿ ಬಲದಂಡೆ ನಾಲೆಯ ಸರಪಳಿ 16.00 ಕಿ.ಮೀ ರಿಂದ 17.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |

| | | |
|---|---|---|
| 12 | ವಾರಾಹಿ ಬಲದಂಡೆ ನಾಲೆಯ ಸರಪಳಿ 17.00 ಕಿ.ಮೀ ರಿಂದ 18.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 13 | ವಾರಾಹಿ ಬಲದಂಡೆ ನಾಲೆಯ ಸರಪಳಿ 18.00 ಕಿ.ಮೀ ರಿಂದ 18.725 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| **ii)** | **ವಾರಾಹಿ ಎಡದಂಡೆ ಕಾಲುವೆ** | |
| 1 | ವಾರಾಹಿ ಎಡದಂಡೆ ನಾಲೆಯ 21.00 ರಿಂದ 22.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ವಾರಾಹಿ ಎಡದಂಡೆ ನಾಲೆಯ 24.00 ರಿಂದ 25.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 3 | ವಾರಾಹಿ ಎಡದಂಡೆ ನಾಲೆಯ 27.00 ರಿಂದ 28.00 ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| **iii)** | **ವಾರಾಹಿ ಎಡದಂಡೆ ಕಾಲುವೆಯ ವಿತರಣಾ ನಾಲೆ ಕಾಮಗಾರಿಗಳು** | |
| 1 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 11 ನಿರ್ಮಾಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 12 ನಿರ್ಮಾಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 3 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ವಿತರಣಾ ನಾಲೆ 0.00 ದಿಂದ 1.00ನೇ ಕಿ.ಮೀ. | ಕಾಮಗಾರಿ ಪ್ರಗತಿಯಲ್ಲಿದೆ. |
| 4 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 25 ರ ಕಿ.ಮೀ 1.000 ದಿಂದ 9.226 ನೇ ಕಿ.ಮೀವರೆಗಿನ ನಿರ್ಮಾಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |

| | | |
|---|---|---|
| 5 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ಮೈನರ್–1 0 ದಿಂದ 3.00ನೇ ಕಿ.ಮೀನ ಕಾಮಗಾರಿ. | ಕಾಮಗಾರಿ ಪ್ರಗತಿಯಲ್ಲಿದೆ. |
| 6 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ಮೈನರ್–1 5 ರಿಂದ 9.41ನೇ ಕಿ.ಮೀ.ನ ಕಾಮಗಾರಿ. | ಕಾಮಗಾರಿ ಪ್ರಗತಿಯಲ್ಲಿದೆ. |
| 7 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ಮೈನರ್–2 ಕಿ.ಮೀ. 0.00 ದಿಂದ 2.47 ನೇ ಕಿ.ಮೀ.ನ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 8 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 16ರ ಮೈನರ್–3 ಕಿ.ಮೀ. 0 ರಿಂದ 1.41ನೇ ಕಿ.ಮೀ.ನ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 9 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 24 ರ ಕಿ.ಮೀ. 0.00 ದಿಂದ 1.185 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| 10 | ವಾರಾಹಿ ಎಡದಂಡೆ ನಾಲೆಯ ವಿತರಣಾ ನಾಲೆ 25 ರ ಮೈನರ್ – 1 ರ ಕಿ.ಮೀ. 0.00 ದಿಂದ 3.000 ಕಿ.ಮೀ. ನ ನಿರ್ಮಾಣ ಕಾಮಗಾರಿ | ಕಾಮಗಾರಿ ಪ್ರಗತಿಯಲ್ಲಿದೆ. |
| ಇ) | **ಭೂಸ್ವಾಧೀನ ಪ್ರಕ್ರಿಯೆ ಮುಗಿದು ಟೆಂಡರ್ ಕರೆಯಲು ಬಾಕಿ ಇರುವ ಕಾಮಗಾರಿಗಳ ವಿವರಗಳು** | |
| 1 | ವಾರಾಹಿ ಬಲದಂಡೆ ನಾಲೆಯ ಸರಪಳಿ 18.419 ಕಿ.ಮೀರಿಂದ 19.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |
| 2 | ವಾರಾಹಿ ಬಲದಂಡೆ ನಾಲೆಯ ಸರಪಳಿ 19.00 ಕಿ.ಮೀರಿಂದ 20.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |
| 3 | ವಾರಾಹಿ ಬಲದಂಡೆ ನಾಲೆಯ ಸರಪಳಿ 20.00 ಕಿ.ಮೀರಿಂದ 21.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |

| | | |
|---|---|---|
| 4 | ವಾರಾಹಿ ಬಲದಂಡೆ ನಾಲೆಯ ಸರಪಳಿ 21.00 ಕಿ.ಮೀರಿಂದ 22.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |
| 5 | ವಾರಾಹಿ ಬಲದಂಡೆ ನಾಲೆಯ ಸರಪಳಿ 22.00 ಕಿ.ಮೀರಿಂದ 23.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |
| 6 | ವಾರಾಹಿ ಬಲದಂಡೆ ನಾಲೆಯ ಸರಪಳಿ 23.00 ಕಿ.ಮೀರಿಂದ 24.00 ಕಿ.ಮೀ, ವರೆಗಿನ ಮಣ್ಣು ಅಗೆತ, ಮತ್ತು ಸಿ.ಸಿ. ಲೈನಿಂಗ್ ಹಾಗೂ ಅಡ್ಡಮೋರಿ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |
| 7 | ವಾರಾಹಿ ಎಡದಂಡೆ ನಾಲೆಯ ಸರಪಳಿ 22.00 ಕಿ.ಮೀರಿಂದ 23.00 ಕಿ.ಮೀ, ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |
| 8 | ವಾರಾಹಿ ಎಡದಂಡೆ ನಾಲೆಯ ಸರಪಳಿ 26.00 ಕಿ.ಮೀರಿಂದ 27.00 ಕಿ.ಮೀ, ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಕಾಮಗಾರಿ | ಟೆಂಡರ್ ಕರೆಯಬೇಕಿದೆ. |

**ಸಹಿ/-**
ಮುಖ್ಯ ಇಂಜಿನಿಯರ್,
ಕನೀನಿನಿ, ವಾರಾಹಿ ಯೋಜನಾ ವಲಯ,
ಸಿದ್ಧಾಪುರ, ಉಡುಪಿ ಜಿಲ್ಲೆ.

(ಸಿ.ಶ್ರೀನಿವಾಸುಲು)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ

ಅನುಬಂಧ-3

ವಾರಾಹಿ ಯೆ ವಲಯದಡಿ ಬೇರೆ ಬೇರೆ ಬಾಬ್ತುಗಳಿಗೆ ಜೂನ್- 2013ರ ಅಂತ್ಯದವರೆಗೆ ವರ್ಷವಾರು ವೆಚ್ಚವಾದ ಅನುದಾನ ವಿವರದ ತಖ್ತೆ

ವಾರಾಹಿ ಯೋಜನಾ ವಲಯ, ಸಿದ್ದಾಪುರ, ಉಡುಪಿ ಜಿಲ್ಲೆ. (ರೂ. ಲಕ್ಷಗಳಲ್ಲಿ)

| ಕ್ರ.ಸಂ. | ವರ್ಷ | [illegible] | [illegible] | [illegible] | [illegible] | [illegible] | [illegible] | [illegible] | [illegible] | [illegible] | [illegible] | [illegible] | [illegible] | [illegible] |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 4.69 | 15 4.69 |
| 1 | 1979-80 | - | - | - | - | - | - | - | - | - | - | - | 1.78 | 15.62 |
| 2 | 1980-81 | - | | - | - | - | - | - | 13.84 | - | - | - | 4.65 | 22.45 |
| 3 | 1981-82 | - | - | - | - | - | - | - | 17.8 | - | - | - | 5.33 | 19.89 |
| 4 | 1982-83 | - | - | - | - | - | - | - | 14.56 | - | - | - | 6.35 | 28.21 |
| 5 | 1983-84 | - | 1.86 | - | - | - | - | - | - | - | - | - | 5.91 | 24.94 |
| 6 | 1984-85 | - | 9.03 | - | - | - | - | - | - | - | - | - | 5.22 | 25.31 |
| 7 | 1985-86 | - | 0.09 | - | - | - | - | - | - | - | - | - | 6.22 | 19.95 |
| 8 | 1986-87 | - | 1.38 | - | - | - | - | - | 2.35 | - | - | - | 5.57 | 10.92 |
| 9 | 1987-88 | - | 5.35 | - | - | - | - | - | - | - | - | - | 10.19 | 21.23 |
| 10 | 1988-89 | - | 1.04 | - | - | - | - | - | - | - | 5.98 | - | 13.10 | 19.08 |
| 11 | 1989-90 | - | - | - | - | - | - | - | - | - | - | - | 12.63 | 42.36 |
| 12 | 1990-91 | - | 20.70 | - | - | - | - | 9.03 | - | - | - | - | 15.17 | 33.65 |
| 13 | 1991-92 | - | 14.08 | - | - | - | - | 4.40 | - | - | - | - | 16.70 | 34.61 |
| 14 | 1992-93 | - | 17.91 | - | - | - | - | - | - | - | - | - | 19.89 | 163.37 |
| 15 | 1993-94 | - | 43.48 | - | - | - | - | - | - | - | - | - | 26.88 | 300.66 |
| 16 | 1994-95 | - | 273.77 | - | - | - | - | - | - | - | - | - | 29.87 | 506.10 |
| 17 | 1995-96 | - | 176.32 | - | - | - | - | - | - | - | - | - | 33.15 | 186.73 |
| 18 | 1996-97 | - | 152.58 | - | - | - | - | - | - | - | - | - | 35.37 | 283.70 |
| 19 | 1997-98 | - | 248.42 | - | - | - | - | - | - | - | - | - | 36.32 | 101.26 |
| 20 | 1998-99 | - | 64.93 | - | - | - | - | - | - | - | - | - | 46.94 | 206.10 |
| 21 | 1999-2000 | - | 159.25 | - | - | - | - | - | - | - | - | - | 43.08 | 349.03 |
| 22 | 2000-01 | - | 305.95 | - | - | - | - | - | - | - | - | - | 56.84 | 428.26 |
| 23 | 2001-02 | - | 371.41 | | - | - | - | - | - | - | - | - | 78.11 | 419.30 |
| 24 | 2002-03 | 16.99 | 323.58 | | - | - | - | - | - | - | - | 0.68 | 95.89 | 402.77 |
| 25 | 2003-04 | 5.99 | 210.60 | | - | 83.09 | - | - | 6.35 | - | - | 0.85 | 104.93 | 1628.76 |
| 26 | 2004-05 | 4.99 | 1488.33 | 13.80 | - | - | - | - | 12.19 | - | 2.56 | 1.96 | 102.73 | 3964.00 |
| 27 | 2005-06 | 1445.51 | 2354.91 | [illegible] | - | 3.60 | - | - | 6.11 | - | 0.13 | 1.33 | 105.27 | 3301.07 |
| 28 | 2006-07 | 513.63 | 2059.32 | [illegible] | - | 619.91 | - | - | 0.76 | - | 1.59 | 1.84 | 140.29 | 7838.59 |
| 29 | 2007-08 | 5083.6[illegible] | 2163.89 | [illegible] | - | 412.57 | - | 9.50 | 10.91 | 4.13 | - | 1.48 | 141.04 | 6664.40 |
| 30 | 2008-09 | 4160.9[illegible] | 2073.40 | [illegible] | - | 102.97 | - | 33.36 | 4.66 | - | - | 3.98 | 149.49 | 5082.20 |
| 31 | 2009-10 | 724.70 | 4297.52 | [illegible] | - | 273.10 | 269.08 | 92.51 | 36.08 | - | 0.59 | 2.45 | 173.66 | 4442.26 |
| 32 | 2010-11 | 68.50 | 3589.77 | [illegible] | 24.09 | 427.72 | 0.05 | 30.16 | 46.61 | - | 3.15 | 2.77 | 180.43 | 2116.01 |
| 33 | 2011-12 | | 1533.11 | [illegible] | 13.71 | 19.61 | - | 15.33 | 33.17 | - | | 1.10 | 183.51 | 6619.71 |
| 34 | 2012-13 | 1.44 | 5716.81 | [illegible] | 15.25 | 14.00 | - | 35.79 | 30.45 | - | 19.20 | - | 51.79 | 2676.00 |
| 35 | 2013-14 (06/2013 ರವರೆಗೆ) | - | 1686.58 | [illegible] | | 25.07 | - | 118.05 | 2.30 | | - | - | | |
| | ಒಟ್ಟು | 12026.47 | 29835.37 | [illegible] | 53.05 | 1981.64 | 269.13 | 348.13 | 238.14 | 4.13 | 33.20 | 18.44 | 1948.00 | [illegible] |

ಸಹಿ/

ಮುಖ್ಯ ಇಂಜಿನಿಯರ್ [illegible]

ವಾರಾಹಿ [illegible]

ಸಿದ್ದಾಪುರ, [illegible]

[illegible]

**ಸಭಾಪತಿಯವರು:–** ಮೊದಲು ಈ ಯೋಜನೆ ಎಷ್ಟು ವರ್ಷದ್ದು ಎನ್ನುವುದನ್ನು ಹೇಳಿ, ನಂತರ ಪ್ರಶ್ನೆಯನ್ನು ಕೇಳಿದರೆ ಅವರಿಗೆ ಬೇಗ ಅರ್ಥವಾಗುತ್ತದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:– ಮಾನ್ಯ ಸಭಾಪತಿಗಳೆ,** ವರಾಹಿ ಎಡದಂಡೆ ಮತ್ತು ಬಲ ದಂಡೆ ಸುಮಾರು 87 ಕಿ.ಮೀ ಇದೆ. 87 ಕಿ.ಮೀ.ನಲ್ಲಿ 54 ಕಿ.ಮೀ ಭೂಸ್ವಾಧೀನ ಪ್ರಕ್ರಿಯೆ ಮುಗಿದಿದೆ. ಈ ಕೆಲಸ ಪ್ರಾರಂಭವಾಗಿ 35 ವರ್ಷಗಳಾಗಿವೆ. ಇನ್ನು 35 ಕಿ.ಮೀ. ಭೂಸ್ವಾಧೀನ ಪ್ರಕ್ರಿಯೆ ಆಗಬೇಕಾಗಿದೆ. ಇದರ ಬಗ್ಗೆ ಸರ್ಕಾರವನ್ನೇ ಕೇಳುವುದು ಅಷ್ಟು ಸರಿಯಾಗುವುದಿಲ್ಲ, ಏಕೆಂದರೆ ನಾವು ಅಲ್ಲಿಯ ಶಾಸಕರಾಗಿರುವುದರಿಂದ ನಾವು ಸಹ ಅದಕ್ಕೆ ಜವಾಬ್ದಾರಾಗಿದ್ದೇವೆ. ಆದರೆ ಒಂದು ಪ್ರಶ್ನೆ ಕೇಳುವ ಹಕ್ಕು ನನಗೆ ಇನ್ನು ಇದೆ. 35 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂತಹ ಈ ವರಾಹಿ ಯೋಜನೆಯಲ್ಲಿ ಎಲ್ಲಿ ತಪ್ಪಾಗಿದೆ ಎನ್ನುವುದನ್ನು ದಯಮಾಡಿ ಸರ್ಕಾರ ತನಿಖೆ ಮಾಡಿಸುತ್ತದೆಯೇ? ಎಲ್ಲಿಯೊ ಒಂದು ಕಡೆ ತಪ್ಪಾಗಿದೆ. ಎರಡನೆಯದಾಗಿ, ಭೂ ಸ್ವಾಧೀನ ಪ್ರಕ್ರಿಯೆಯನ್ನು ಯಾವಾಗ ಪೂರ್ಣ ಮಾಡುತ್ತೀರಿ? ಮತ್ತು ವರಾಹಿ ನೀರಾವರಿ ಯೋಜನೆಯನ್ನು ಯಾವಾಗ ಪೂರ್ಣ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹೇಳುತ್ತಿರುವುದು ಸರಿಯಾಗಿದೆ. ಮೊನ್ನೆ ಇದರ ಬಗ್ಗೆ ತುಂಬಾ ಚರ್ಚೆಯಾಗಿದೆ. ಇದರ ಆಗು–ಹೋಗುಗಳ ಬಗ್ಗೆ ಮತ್ತು ಅಲ್ಲಿ ಇರುವ ಅರಣ್ಯ ಭೂಮಿ ಮತ್ತು ಕುಮಕಿ ಭೂಮಿಗಳ ಬಗ್ಗೆಯು ಸ್ವಲ್ಪ ತಕರಾರು ಇವೆ. ನನ್ನ ವಿನಂತಿ ಎಂದರೆ, ದಯಮಾಡಿ ಅಲ್ಲಿಗೆ ಹೋಗಿ ಒಂದು ಸಾರಿ ಪರಿಶೀಲನೆ ಮಾಡಬೇಕು ಮತ್ತೆ ಅಲ್ಲಿ ಇರುವವರೆಲ್ಲರನ್ನು ಒಂದು ಸಾರಿ ಕರೆದು ಚರ್ಚೆ ಮಾಡಬೇಕು. ಬೇರೆ–ಬೇರೆ ಕಡೆಗಳಿಗೆ ಭೇಟಿ ಕೊಡುವುದನ್ನು ಪ್ರಾರಂಭ ಮಾಡಿದ್ದೀರಿ. ಮಾನ್ಯ ಪ್ರತಾಪಚಂದ್ರವರು ಕುಂದಾಪುರದಲ್ಲಿಯೇ ಇರುತ್ತಾರೆ. ಕುಂದಾಪುರದಲ್ಲಿಯೇ ತಾವು ಒಂದು ಸಭೆಯನ್ನು ಕರೆದು ಎಲ್ಲವನ್ನು ಸಮಗ್ರವಾಗಿ ಚಿಂತನೆ ಮಾಡಬೇಕು. ಒಟ್ಟಿನಲ್ಲಿ

ಇದಕ್ಕೆ ಒಂದು ಮುಕ್ತಿ ಸಿಗಬೇಕು ಬೇರೆ ಏನು ಇಲ್ಲ. ಯಾಕೆ, ಎಲ್ಲಿ, ಏನು ಆಗಿದೆ ಎಂದು ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಸಮಂಜಸ ಮತ್ತು ಗಂಭೀರವಾದ ವಿಚಾರ. ಮಂತ್ರಿಗಳು ಅಲ್ಲಿಗೆ ಬಂದು ಅರ್ಧದಿನ ಎಲ್ಲವನ್ನು ಪರಿಶೀಲನೆ ಮಾಡಿ, ಕುಂದಾಪುರದಲ್ಲಿಯೇ ಒಂದು ಸಭೆಯನ್ನು ಕರೆಯಬೇಕು. ಆ ಸಭೆಗೆ ಅರಣ್ಯ ಇಲಾಖೆಯ, ಕಂದಾಯ ಇಲಾಖೆಗಳನ್ನು ಮತ್ತು ಇಂಜಿನಿಯರಿಂಗ್ ವಿಭಾಗದವರನ್ನು ಕರೆದು ಎಲ್ಲವನ್ನು ಕೂಲಂಕಷವಾಗಿ ಸಮಾಲೋಚನೆ ಮಾಡಿದರೆ ಮಾತ್ರ ಇದಕ್ಕೆ ಒಂದು ಪರಿಹಾರ ಸಿಗುತ್ತದೆ. ನಾವು ಅಧಿಕಾರದಲ್ಲಿರುವಾಗ ಕುಮಕಿ ಜಮೀನಿನ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಕ್ಲಿಯರ್ ಮಾಡುವಂತಹ ಕೆಲಸವನ್ನು ಮಾಡಿದ್ದೇನೆ. ಆದರೆ ಎಲ್ಲಿ ಏನೋ ತಪ್ಪಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಅಕ್ಷರಸಹ ಸತ್ಯವಾಗಿದೆ. ಅದಕ್ಕಾಗಿ ಮಂತ್ರಿಗಳು ಅಲ್ಲಿಗೆ ಹೋಗಿ ಒಂದು ಸಭೆ ಕರೆದು ಚರ್ಚೆ ಮಾಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಈ ಯೋಜನೆ ಯಾವಾಗ ಪ್ರಾರಂಭವಾಯಿತು ಮತ್ತು ಇದನ್ನು ಯಾವಾಗ ಮುಕ್ತಾಯ ಮಾಡಲಾಗುತ್ತದೆ ಎನ್ನುವ ಒಂದು ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸದಾನಂದಗೌಡರಿಗೆ, ಪ್ರತಾಪಚಂದ್ರ ಶೆಟ್ಟಿಯವರಿಗೆ ಮತ್ತು ಇತರೆ ಸದಸ್ಯರಿಗೆ ಈ ವಿಷಯವಾಗಿ ಎಲ್ಲವು ಗೊತ್ತಿದೆ ನಾನೇನು ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ. ವರಾಹಿ ನದಿಯಿಂದ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಸಿದ್ದಾಪುರ ಹಳ್ಳಿಯಲ್ಲಿ ಒಂದು diversion ware ನಿರ್ಮಿಸಿ ವರಾಹಿ ಜಲವಿದ್ಯುತ್ ಯೋಜನೆ tail race ನಿಂದ ಪ್ರತಿ ನಿತ್ಯ ಬರುವಂತಹ 1,100 ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಂಡು ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಿಗೆ 15,702 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಒದಗಿಸುವಂತಹ ಗುರಿಯನ್ನು ಹೊಂದಲಾಗಿತ್ತು. 1979-80ನೇ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಗುಂಡುರಾವ್‌ರವರು ಶಂಕುಸ್ಥಾಪನೆ ಮಾಡಿದ್ದರು. ಇದು ತಡವಾಗಲು ಕಾರಣವೇನು ಎಂದು ಮಾನ್ಯ ಸದಸ್ಯರು

ಕೇಳಿದ್ದಾರೆ. ಇದು ತಡವಾಗಲು ಕಾರಣ ಇದನ್ನು ವಿದ್ಯುತ್‌ಗಾಗಿ ಉಪಯೋಗಿಸಬೇಕೋ ಅಥವಾ ನೀರಾವರಿಗಾಗಿ ಉಪಯೋಗಿಸಬೇಕೋ ಎನ್ನುವ ಚರ್ಚೆ 20 ವರ್ಷಗಳವರೆಗೆ ನಡೆಯಿತು. 2001ರಲ್ಲಿ ಇದನ್ನು ವಿದ್ಯುತ್‌ಗಾಗಿ ಬೇಡ ನೀರಾವರಿಗಾಗಿ ಉಪಯೋಗಿಸಬೇಕು ಎನ್ನುವ ನಿರ್ಣಯವಾಯಿತು. ಏಕೆಂದರೆ Central Forest and Environmental Advisory Committee ಕನಿಷ್ಠವಾದರೂ ಅರಣ್ಯ ಭೂಮಿ ರಕ್ಷಿಸಬೇಕು ಎಂದು 269 ಹೆಕ್ಟೇರ್‌ಗೆ ಬದಲಾಗಿದೆ 145 ಹೆಕ್ಟೇರ್‌ಗೆ ಸಿಮೀತಗೊಳಿಸಿ ಕೊನೆಯದಾಗಿ ಇದು ನೀರಾವರಿಗೆ ಉಪಯೋಗವಾಗಬೇಕು ಎಂದು ನಿರ್ಣಯವಾಯಿತು. ಆ ಪ್ರಕಾರ 1980–2003ರ ವರೆಗೆ ಇದು ಇಲಾಖೆಯ ಯೋಜನೆಯಾಗಿತ್ತು. 31–12–2003ಕ್ಕೆ ಇದನ್ನು ನಿಗಮಕ್ಕೆ ವರ್ಗಾಯಿಸಲಾಯಿತು. ಇದರ ಮೂಲ ಯೋಜನೆ 80.43 ಕೋಟಿ ರೂ.ಗಳಿಗೆ ಆಗಿತ್ತು. 2004ನೇ ಸಾಲಿನವರೆಗೆ 34.16 ಕೋಟಿ ರೂ.ಗಳಷ್ಟು ಖರ್ಚಾಯಿತು. 2003ಕ್ಕೆ ನಿಗಮಕ್ಕೆ ಇದು ಹಸ್ತಾಂತರವಾಯಿತು. ಒಟ್ಟು 2006ರಲ್ಲಿ revised cost 569.53 ಕೋಟಿ ರೂ.ಗಳಾಯಿತು. ಈಗ ಪ್ರಸ್ತುತ 670 ಹೆಕ್ಟೇರ್‌ಗೆ ಮಾತ್ರ ನೀರನ್ನು ಕೊಡಲಾಗಿದೆ. ಸರ್ಕಾರ ಜೂನ್ 2014ರ ವರೆಗೆ ನಾವು ಚರ್ಚೆ ಮಾಡಿದ ಪ್ರಕಾರ 8000 ಹೆಕ್ಟೇರ್ ಭೂಮಿ ನೀರಾವರಿಯಾಗಬಹುದಾಗಿದೆ. ಉಳಿದಿರುವುದನ್ನು 2015ರ ವರೆಗೆ ಪೂರ್ಣಗೊಳಿಸಬಹುದಾಗಿದೆ. 1400 ಎಕರೆ ಭೂಮಿ ಇನ್ನು ಸ್ವಾಧೀನವಾಗಬೇಕಾಗಿದೆ. ವಿವರವನ್ನು ನಾನು ಕೊಟ್ಟಿದ್ದೇನೆ. ಅಲ್ಲಿ ಪಟ್ಟಾ ಭೂಮಿಯು ಸ್ವಾಧೀನವಾಗಬೇಕು. ಅಲ್ಲಿ Assistant Commissioner ಮತ್ತು Tahsildar ಹುದ್ದೆ ಇರುವುದಿಲ್ಲ. ಅವರು ಇಲ್ಲದೆ ಅಲ್ಲಿ ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಭೂ ಸ್ವಾಧೀನ ಪ್ರಕ್ರಿಯೆ ಭರದಿಂದ ಸಾಗಿದೆ, ಅದಕ್ಕೆ ಸಂಬಂಧಪಟ್ಟ ಮಾನ್ಯ ಸದಸ್ಯರು ಸಹಕಾರವನ್ನು ಕೊಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಒಂದು ಸಭೆಯನ್ನು ಕರೆದು ಎಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ಮುಂದೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಅವರು ಸಲಹೆಯನ್ನು ಕೊಡುತ್ತಾರೆ ಆ ಪ್ರಕಾರ ಮಾಡಲಾಗುತ್ತದೆ. ಈ ಯೋಜನೆ ಬಹಳ lingering project

ಇರುವುದರಿಂದ ಮತ್ತು ಆ ಭಾಗಕ್ಕೆ ಇದೊಂದು ಮಹತ್ವ ಯೋಜನೆಯಾಗಿದೆ. ಇನ್ನು ಕೆಲವು ಶಾಸಕರು additional area ಕ್ಕೆ ಕೇಳುತ್ತಿದ್ದಾರೆ. ಅದೆಲ್ಲವನ್ನು ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಸದಾನಂದಗೌಡ ಸಾಹೇಬರು ಕುಮಕಿ ಭೂಮಿಯ ಸಮಸ್ಯೆಯನ್ನು ಬಗೆಹರಿಸಿದೆ ಎಂದು ಹೇಳಿದರು. ಆದರೆ ತಾವು ಕುಮಕಿ ಭೂಮಿಯನ್ನು ಸರ್ಕಾರಕ್ಕೆ ವರ್ಗಾಯಿಸಲಾಯಿತು, ಖಾತಾವು ಇಲಾಖೆ ಹೆಸರಿನಲ್ಲಿ ಆಯಿತು. ಅದು ಆದ ನಂತರ deemed forest ಎಂದು ಆಗಿದೆ. ಅದರ ಬಗ್ಗೆ ಮಾನ್ಯ ಅರಣ್ಯ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅದು ಇನ್ನು ಕ್ಲಿಯರ್ ಆಗಬೇಕಾಗಿದೆ. ಆ 64.48 ಎಕರೆ 5 ಹಳ್ಳಿಗಳಲ್ಲಿ ಕುಮಕಿ ಭೂಮಿ ಬರುತ್ತದೆ. ತಾವು ಕೊಟ್ಟಿದ್ದಿರಿ, ಖಾತಾ ಬದಲಾವಣೆಯಾಗದ ಮೇಲೆ ಅದು deemed forest ಆಗಿದೆ ಇದನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಅದನ್ನೇ ತನಿಖೆ ಮಾಡಬೇಕು ಎಂದು ನಾನು ಹೇಳುತ್ತಿರುವುದು.

**ಸಭಾಪತಿಯವರು:–** ತನಿಖೆ ಮಾಡಿಸುತ್ತೇವೆ, ಅಲ್ಲಿಗೆ ಬಂದು ಅದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ. ಅದರ ಚರ್ಚೆ ಇಲ್ಲಿ ಆಗುವುದಿಲ್ಲ. ಅಲ್ಲಿ ಬಂದಾಗ ಚರ್ಚೆ ಮಾಡಿ.

**ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸಭಾಪತಿಗಳೆ,** ಅಲ್ಲಿಗೆ ಬಂದು ಚರ್ಚೆ ಮಾಡುವ ಸಮಯದಲ್ಲಿ ಎಲ್ಲರೂ ಮುಕ್ತವಾಗಿ ಚರ್ಚೆ ಮಾಡಲಿ. ಎಲ್ಲರೂ ಏನು ಸಲಹೆ ಕೊಡುತ್ತಾರೆ ಹಾಗೆ ಮಾಡಲಾಗುತ್ತದೆ. ಮತ್ತು ಇಂತಹ ಕಡೆ ತಪ್ಪಾಗಿದೆ ಎಂದು ಕಂಡುಬಂದರೆ ಅದರ ತನಿಖೆಯನ್ನು ಮಾಡಲಾಗುತ್ತದೆ. ಇದನ್ನು ನಾನು ಬಹಳ ವಿವರವಾಗಿ ನೋಡಿದ್ದೇನೆ. ವಿವರವನ್ನು ಹೇಳಿ ಎಂದರೆ ಹೇಳುತ್ತೇನೆ.

**ಸಭಾಪತಿಯವರು:–** ಬೇಡ ಅದನ್ನು ತಾವು ಸಭೆ ಕರೆದಾಗ ಚರ್ಚೆ ಮಾಡಿ, ಏಕೆಂದರೆ ಇದು ಪ್ರಶ್ನೋತ್ತರ ಅವಧಿ ಸಮಯ ಕಡಿಮೆ ಇರುತ್ತದೆ.

**ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಸಭಾಪತಿಗಳೆ,** Varahi Right Bank ನದ್ದು ಕೂಡಾ ದೊಡ್ಡ ಸಮಸ್ಯೆ ಇದೆ. Varahi Right Bank ನಲ್ಲಿ ನಮ್ಮ ಮಾಹಿತಿ ಪ್ರಕಾರ, ಇಲ್ಲಿ ಎತ್ತರವಾದ ಗುಡ್ಡಗಾಡು ಪ್ರದೇಶವಿದೆ, deep cut ಹೋಗುತ್ತದೆ. ಇದರಿಂದ ವೆಚ್ಚ ಜಾಸ್ತಿಯಾಗುತ್ತದೆ. ಇಷ್ಟು ಖರ್ಚು ಮಾಡದೆ ನೀರಾವರಿಯಾಗುವುದಿಲ್ಲ. ಇಂತಹ ಅನೇಕ ಸಮಸ್ಯೆಗಳು ಇವೆ. ಇವೆಲ್ಲವನ್ನು ನಾವು Technical Advisory Committee (TAC) ಮುಂದೆ re-examine ಮಾಡಲು ಕೊಟ್ಟಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಒಂದು ಸಭೆಯನ್ನು ಕರೆಯುತ್ತೇನೆ. ಅವರ ಸಲಹೆ-ಸೂಚನೆಗಳನ್ನು ಪಡೆದುಕೊಂಡು ಇಲಾಖೆಯವರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಂಡು ಈ ಯೋಜನೆಗೆ ಅಂತಿಮ ರೂಪ ಕೊಡಲು ಏನೇನು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಅವುಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ನಾನು ಆ ಕ್ಷೇತ್ರವನ್ನು ಪ್ರತಿನಿಧಿಸುವ ಹಿನ್ನೆಲೆಯಲ್ಲಿ ಕೇಳುವುದೇನೆಂದರೆ ಈ 35 ವರ್ಷಗಳ ವಿಳಂಬಕ್ಕೆ ಯಾರನ್ನಾದರೂ ಹೊಣೆ ಮಾಡಬೇಕಾಗುತ್ತದೆ. ಎಲ್ಲಿಂದ ಮತ್ತು ಯಾರು ತಪ್ಪು ಮಾಡಿದ್ದಾರೆ? ತಪ್ಪು ಮಾಡಿದವರ ಮೇಲೆ ಕ್ರಮ ಜರುಗಬೇಕು. ನಾವು ತಪ್ಪು ಮಾಡಿದ್ದರೆ ನಮ್ಮ ಮೇಲೂ ಕ್ರಮ ಆಗಲಿ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

**ಶ್ರೀ ಎಂ.ಬಿ. ಪಾಟೀಲ್:-** ಬಹುಶಃ ನಾನು ಬಿಜಾಪುರದವರೇ ಹಿಂದುಳಿದವರು ಎಂದು ತಿಳಿದುಕೊಂಡಿದ್ದೆನು. ಆದರೆ ಇಲ್ಲಿ ನೋಡಿದರೆ.....

**ಶ್ರೀ ಡಿ.ವಿ. ಸದಾನಂದಗೌಡ:-** ಮೀನು ತಿನ್ನುವವರರನ್ನು ಬುದ್ಧಿವಂತರು ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಅದು ಬೇಡ. ಅವರು ಹೇಳುವಂತಹದ್ದು ಸರಿಯಿದ್ದು, ಅದರ ಬಗ್ಗೆ ಆಲೋಚನೆ ಮಾಡಿ, ಮಾನ್ಯ ಸಚಿವರು ಅಲ್ಲಿಗೆ ಬಂದು ವಿಚಾರವನ್ನು ತಿಳಿದುಕೊಂಡು ಕ್ರಮ ತೆಗೆದುಕೊಳ್ಳಿ. ಅವರು ಹೇಳಿದ್ದಕ್ಕೆ ಖಂಡಿತ ನನ್ನ ಸಹಮತ ಇದೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, delay ಆಗಿರುವುದಕ್ಕೆ ಒಂದು ಮುಖ್ಯವಾದ ಕಾರಣ ಗೊತ್ತಾಗುತ್ತದೆ. Whether it should be irrigation project or power project or both ಎಂದು ನಿರ್ಧರಿಸಲು 21 ವರ್ಷ ತೆಗೆದುಕೊಂಡಿದೆ. ಇದು ಬಹಳ major delay ಇದೆ. ಇನ್ನು ಉಳಿದಂತೆ land acquisition, ಅರಣ್ಯ ಇತ್ಯಾದಿಗಳ ಬಗ್ಗೆ ಇದೆ. ಅವರೆಲ್ಲರೂ ಸಭೆ ಮಾಡಿದ ನಂತರ ಏನೇನು ವಿಷಯಗಳು ಹೊರಹೊಮ್ಮುತ್ತವೆ, ಏಕೆ ನಿಧಾನವಾಗಿದೆ ಎಂಬುದನ್ನು ತಿಳಿದುಕೊಳ್ಳುತ್ತೇನೆ. ಅಲ್ಲದೇ ನನ್ನ ಇಲಾಖೆಯಿಂದಲೂ ವಿಚಾರಣೆ ಮಾಡಿಸುತ್ತೇನೆ. ನಾನು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಯಾವಾಗ ದಿನಾಂಕ ಕೊಡುತ್ತಾರೆಯೋ, ಆಗ ಅಲ್ಲಿಗೆ ಹೋಗಿ ನೋಡಿ, ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

## ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡವನ್ನು ತಿರುಪತಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು

### 966; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)

**ಅ)** ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡದಲ್ಲಿರುವ ಶ್ರೀ ರೇಣುಕಾದೇವಿ ದರ್ಶನಕ್ಕೆ ರಾಜ್ಯದ ಬೇರೆ–ಬೇರೆ ಬಾಗಗಳಿಂದ ಹಾಗೂ ಮಹಾರಾಷ್ಟ್ರ ರಾಜ್ಯದಿಂದ ಪ್ರವಾಸಿಗರು ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ:

**ಆ)** ಈ ಜನರಿಗೆ ಅಲ್ಲಿ ತಿರುಪತಿ ಮಾದರಿಯಲ್ಲಿ ವಾಸಸ್ಥಳ, ಸಾರ್ವಜನಿಕ ಮೂತ್ರಾಲಯ ಶೌಚಾಲಯಗಳು ಇಲ್ಲದೆ ಇರುವ ಸಂಗತಿ ನಿಜವೇ:

**ಇ)** ತಿರುಪತಿ ಮಾದರಿಯಲ್ಲಿ ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿಪಡಿಸಲು ಯಾವ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ:

**ಈ)** ಶ್ರೀ ಕ್ಷೇತ್ರ ಯಲ್ಲಮ್ಮಗುಡ್ಡ ಒಂದು ಪವಿತ್ರ ದೇವಸ್ಥಾನವಾಗಿರುವುದರಿಂದ ಅಲ್ಲಿ ಮಧ್ಯಪಾನ ನಡೆಯದಂತೆ ನೋಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ:

**ಉ)** ಪ್ರವಾಸಿಗರಿಗೆ ಶುದ್ದವಾದ ಕುಡಿಯುವ ನೀರು, ಒಳಚರಂಡಿ ಮತ್ತು ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕೈಗೊಂಡು ತಿರುಪತಿ ಮಾದರಿಯಲ್ಲಿ ಇಲ್ಲಿಯೂ ಸಹ ಸ್ವಚ್ಚತೆಯನ್ನು ಕಾಪಾಡಲು ಕ್ರಮಕೈಗೊಂಡು ಅಭಿವೃದ್ಧಿ ಪಡಿಸಲಾಗುವುದೇ:

**ಊ)** ತಿರುಪತಿ ಮಾದರಿಯಲ್ಲಿ ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿ ಪಡಿಸಲಾಗುವುದೇ?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

**ಅ)** ಹೌದು.

**ಆ)** ಈ ಕ್ಷೇತ್ರದಲ್ಲಿ ಈಗಾಗಲೇ ಭಕ್ತಾದಿಗಳ ವಾಸ್ತವ್ಯಕ್ಕಾಗಿ 105 ಕೊಠಡಿಗಳು ಹಾಗೂ ಡಾರ್ಮೆಟರಿಯನ್ನು ಒಳಗೊಂಡಂತೆ ವಸತಿ ಸಂಕೀರ್ಣ ಹಾಗೂ ಯಾತ್ರಿ ನಿವಾಸವನ್ನು ನಿರ್ಮಿಸಲಾಗಿರುತ್ತದೆ.

ವಿವಿಧ ಸ್ಥಳಗಳಲ್ಲಿ ಪುರುಷರು ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಮೂತ್ರಾಲಯ, ಶೌಚಾಲಯ ಮತ್ತು ಸ್ನಾನಗೃಹಗಳನ್ನು ಒಳಗೊಂಡ 05 ಸಮುಚ್ಛಯಗಳನ್ನು ನಿರ್ಮಿಸಲಾಗಿರುತ್ತದೆ.

**ಇ)** ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡವನ್ನು ಅಭಿವೃದ್ಧಿಪಡಿಸಿ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಸಲುವಾಗಿ ಮಹಾನಕ್ಷೆಯನ್ನು ತಯಾರಿಸಿದ್ದು, ಸದರಿ ಮಹಾನಕ್ಷೆಗೆ ದಿನಾಂಕ:19.03.2012 ರಂದು ಅನುಮೋದನೆ ನೀಡಲಾಗಿದೆ.

ಈ ಕ್ಷೇತ್ರದಲ್ಲಿ ಈವರೆವಿಗೆ ಕೈಗೊಂಡಿರುವ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರವನ್ನು **ಅನುಬಂಧ –01 ಮತ್ತು 02** ರಲ್ಲಿ ಒದಗಿಸಿದೆ.

**ಈ)** ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದಲ್ಲಿ ಮಧ್ಯದ ಅಂಗಡಿಗಳು ಇರುವುದಿಲ್ಲ. ಮಧ್ಯಪಾನ ನಡೆಯದಂತೆ ಅಬಕಾರಿ ಮತ್ತು ಪೋಲೀಸ್ ಇಲಾಖೆಯವರು ಕ್ರಮ ಕೈಗೊಂಡಿರುತ್ತಾರೆ.

**ಉ)** ಈಗಾಗಲೇ ಪ್ರಥಮ ಹಂತದಲ್ಲಿ ಈ ಕ್ಷೇತ್ರದಲ್ಲಿ ₹ 254.00 ಲಕ್ಷ ವೆಚ್ಚದಲ್ಲಿ **"ಸ್ವತಂತ್ರ ಕುಡಿಯುವ ನೀರಿನ ವ್ಯವಸ್ಥೆ"** ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಭಕ್ತಾದಿಗಳ ಸಂಖ್ಯೆಯು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಮತ್ತಷ್ಟು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದಕ್ಕಾಗಿ ಅಂದಾಜು ₹ 6.00 ಕೋಟಿಗಳ ವೆಚ್ಚದಲ್ಲಿ ಎರಡನೇ ಹಂತದ **"ಸ್ವತಂತ್ರ ಕುಡಿಯುವ ನೀರಿನ ವ್ಯವಸ್ಥೆ"** ಎಂಬ ಹೊಸ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿ, ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದ್ದು, ದೇವಾಲಯ ವತಿಯಿಂದ 2013–14ನೇ ಸಾಲಿನ ಮುಂಗಡ ಪತ್ರದಲ್ಲಿ ಈ ಹೊಸ ಯೋಜನೆಗಾಗಿ ₹ 2.00 ಕೋಟಿ ಅನುದಾನವನ್ನು ಅನುವು ಮಾಡಿಕೊಳ್ಳಲಾಗಿರುತ್ತದೆ.

ಈ ಕ್ಷೇತ್ರದ ಸ್ವಚ್ಛತೆ ನಿರ್ವಹಣೆಗಾಗಿ ದೇವಾಲಯದ ವತಿಯಿಂದ 25 ಮಂದಿ ಖಾಯಂ ಸ್ವಚ್ಛತಾ ನೌಕರರಿದ್ದು, ಹೊರ ಗುತ್ತಿಗೆ ಆಧಾರದ ಮೇಲೂ ಸಹ 25 ಮಂದಿಯನ್ನು ನಿಯೋಜಿಸಿಕೊಳ್ಳಲಾಗಿರುತ್ತದೆ.

**ಊ)** ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡಕ್ಕೆ ಭೇಟಿ ನೀಡುವ ಯಾತ್ರಿಕರಿಗೆ/ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕುರಿತಂತೆ ಹಲವಾರು ಯೋಜನೆಗಳನ್ನು ಕೈಗೊಂಡಿದ್ದು/ಹಮ್ಮಿಕೊಂಡಿದ್ದು, ವಿವರ **ಅನುಬಂಧ –01 ಮತ್ತು 02** ರಲ್ಲಿ ಒದಗಿಸಿದೆ.

## ಅನುಬಂಧ – 1

## ಶ್ರೀ ರೇಣುಕಾಯಲ್ಲಮ್ಮ ಕ್ಷೇತ್ರದಲ್ಲಿ ಈಗಾಗಲೇ ಕೈಗೊಂಡಿರುವ ಕಾಮಗಾರಿಗಳ ವಿವರ

| ಕ್ರ.ಸಂ. | ಅನುಷ್ಠಾನಗೊಳಿಸಿರುವ ಅಭಿವೃದ್ಧಿ ಕಾಮಗಾರಿಗಳ ವಿವರ |
|---|---|
| 1 | ಯಲ್ಲಮ್ಮನಗುಡ್ಡದ ಮುಖ್ಯ ಗುಡಿಯ ಪಶ್ಚಿಮ ದಿಕ್ಕಿನಲ್ಲಿ 36 ಕೊಠಡಿಗಳುಳ್ಳ ವಸತಿ ಸಮುಚ್ಛಯ ನಿರ್ಮಾಣ |
| 2 | ಯಲ್ಲಮ್ಮನಗುಡ್ಡದ ಮುಖ್ಯ ಗುಡಿಯ ಪಶ್ಚಿಮ ದಿಕ್ಕಿನಲ್ಲಿ 3 ಡಾರ್ಮೆಟರಿಗಳ ನಿರ್ಮಾಣ |
| 3 | ಕಲ್ಯಾಣ ಮಂಟಪ ಮತ್ತು ದಾಸೋಹ ಭವನ ನಿರ್ಮಾಣ |
| 4 | ಯಲ್ಲಮ್ಮನಗುಡ್ಡದ ಮುಖ್ಯ ಗುಡಿಯ ಪಶ್ಚಿಮ ದಿಕ್ಕಿನಲ್ಲಿ ಕೂಡು ರಸ್ತೆ ಮತ್ತು ವೃತ್ತ ರಸ್ತೆ ನಿರ್ಮಾಣ ಮಾಡಲಾಗಿದೆ. |
| 5 | ಯಲ್ಲಮ್ಮನಗುಡ್ಡದ ಮುಖ್ಯ ಗುಡಿಯ ಪಶ್ಚಿಮ ದಿಕ್ಕಿನಲ್ಲಿ 80 ಅಡಿ ಉದ್ದದ ಆರ್.ಸಿ.ಸಿ. ರಸ್ತೆ ನಿರ್ಮಾಣ |
| 6 | 54 ಮಳಿಗೆಗಳ ವಾಣಿಜ್ಯ ಸಂಕೀರ್ಣ ನಿರ್ಮಾಣ |
| 7 | ಕ್ಷೇತ್ರದ ಪಶ್ಚಿಮ ದಿಕ್ಕಿನಲ್ಲಿ 23 ಕೊಠಡಿಗಳ ಕೊಠಡಿ ಸಮುಚ್ಛಯ ನಿರ್ಮಾಣ |
| 8 | ಕ್ಷೇತ್ರದ ಉತ್ತರ ದಿಕ್ಕಿನಲ್ಲಿ ಕೊಳ್ಳದ ಭಾಗದಲ್ಲಿ 176 ಮಳಿಗೆಗಳ ವಾಣಿಜ್ಯ ಸಂಕೀರ್ಣದ ನಿರ್ಮಾಣ |
| 9 | ಪ್ರಥಮ ಹಂತದ ಸ್ವತಂತ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನ |
| 10 | ಗುಡ್ಡದ ಉತ್ತರದಿಕ್ಕಿನಲ್ಲಿ ಆರ್.ಸಿ.ಸಿ. ರಸ್ತೆ ನಿರ್ಮಾಣ |
| 11 | ಕ್ಷೇತ್ರದ ದಕ್ಷಿಣ ದಿಕ್ಕಿನಲ್ಲಿ ಶೌಚಾಲಯ ನಿರ್ಮಾಣ |
| 12 | 46 ಕೊಠಡಿಗಳುಳ್ಳ ಯಾತ್ರಿ ನಿವಾಸ ನಿರ್ಮಾಣ |
| 13 | ಸರ್ಕಾರದ ಅನುದಾನ ₹ 271.00 ಲಕ್ಷದಲ್ಲಿ ಬಸ್ ನಿಲ್ದಾಣ, ನೀರಿನ ಟ್ಯಾಂಕ್, ಡಾರ್ಮೆಟರಿ, ಸುಲಭ ಶೌಚಾಲಯ, ಮಳಿಗೆ ಕಟ್ಟಡಗಳನ್ನು ನಿರ್ಮಿಸಿದ್ದು, ಬಸ್ ಶೆಲ್ಟರ್ ಮತ್ತು ನೀರಿನ ಟ್ಯಾಂಕ್ ಕಾಮಗಾರಿಯು ಪ್ರಗತಿಯಲ್ಲಿದ್ದು, ಉಳಿದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. |

# ಅನುಬಂಧ – 2

## ಶ್ರೀ ರೇಣುಕಾಯಲ್ಲಮ್ಮ ಕ್ಷೇತ್ರದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರ

| ಕ್ರ.ಸಂ. | ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾಮಗಾರಿಗಳ ವಿವರ |
|---|---|
| 1 | ಸರ್ಕಾರವು ಆದೇಶ ಸಂಖ್ಯೆ: ಕಂಇ 16/ಮುಅಕ 2012, ದಿನಾಂಕ:08-11-2012 ರಲ್ಲಿ ಶ್ರೀ ಕ್ಷೇತ್ರದ ಯಲ್ಲಮ್ಮಗುಡ್ಡದ ಬ್ಲಾಕ್ ನಂ. 993 ರಲ್ಲಿ 246 ಕೊಠಡಿಗಳ (ಶೌಚಾಲಯ ಸಹಿತ) ಅತಿಥಿ ಗೃಹ ನಿರ್ಮಾಣವನ್ನು ₹ 15.30 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಈ ಕಾಮಗಾರಿಯ ಅನುಷ್ಠಾನವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿರುತ್ತದೆ. |
| 2 | ಸರ್ಕಾರದ ಆದೇಶ ಸಂಖ್ಯೆ:ಕಂಇ 129 ಮುಅಬಿ 2008, ದಿನಾಂಕ:02-01-2009 ₹ 1.00 ಕೋಟಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕಂಇ 63 ಮುಅಬಿ 2011, ದಿನಾಂಕ:19-03-2011 ರಲ್ಲಿ ₹ 2.00 ಕೋಟಿ ಒಟ್ಟು ₹ 3.00 ಕೋಟಿ ಅನುದಾನ ಮಂಜೂರಾಗಿದ್ದು, ಈ ಅನುದಾನದಿಂದ ತಲಾ 47 ಮಳಿಗೆಗಳನ್ನು ಒಳಗೊಂಡ ಮೂರು ಅಂಗಡಿ ಸಮುಚ್ಚಯಗಳನ್ನು ನಿರ್ಮಿಸುವ ಕಾಮಗಾರಿಗೆ ಸರ್ಕಾರವು ಆದೇಶ ಸಂಖ್ಯೆ: ಕಂಇ 14/ಮುಅಕ 2011, ದಿನಾಂಕ:06-09-2011 ರಲ್ಲಿ ಅನುಮೋದನೆಯನ್ನು ನೀಡಿ ಈ ಕಾಮಗಾರಿಯನ್ನು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ (ಲಿ), ಸವದತ್ತಿ ರವರಿಂದ ನಿರ್ವಹಿಸಲು ಅನುಮತಿ ನೀಡಿದ್ದು, ಕಾಮಗಾರಿಯನ್ನು ಕೈಗೊಳ್ಳಬೇಕಿರುತ್ತದೆ. |
| 3 | ಭಕ್ತಾದಿಗಳಿಗೆ ವಿಶೇಷ ದರ್ಶನ ಮತ್ತು ಧರ್ಮದರ್ಶನ ವ್ಯವಸ್ಥೆಗಾಗಿ ಸರತಿ ಸಾಲು ಹಾಗೂ ನೆರಳು ವ್ಯವಸ್ಥೆಯ ಕಾಮಗಾರಿ |
| 4 | ಕ್ಷೇತ್ರದ ಎಣ್ಣೆಹೊಂಡದಲ್ಲಿ ಮಹಿಳಾ ಭಕ್ತಾದಿಗಳಿಗಾಗಿ ಸ್ನಾನ ಗೃಹ ನಿರ್ಮಾಣ |
| 5 | ಯಾತ್ರಿ ನಿವಾಸದಲ್ಲಿ 25 (ಶೌಚಾಲಯ ಸಹಿತ) ಸಾಮಾನ್ಯ ಕೊಠಡಿಗಳನ್ನು ನಿರ್ಮಿಸುವುದು |
| 6 | ಶೀಘ್ರ ದರ್ಶನ ಪಡೆಯುವ ಭಕ್ತರಿಗೆ ಸರತಿ ಸಾಲು ಮತ್ತು ಬ್ರಿಡ್ಜ್ ನಿ |

| | |
|---|---|
| 7 | ಎರಡನೇ ಹಂತದ ಸ್ವತಂತ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನ |
| 8 | ಈಗಾಗಲೇ ನಿರ್ಮಿಸಿರುವ 4 ಸುಲಭ ಶೌಚಾಲಯಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಕಾಮಗಾರಿ |
| 9 | ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ |
| 10 | ಕ್ಷೇತ್ರದ ಎಣ್ಣೆ ಹೊಂಡದಲ್ಲಿ ಕಲ್ಲು ಜೋಡಣೆ ಒಳಚರಂಡಿ ಮತ್ತು ತಡೆಗೋಡೆ ನಿರ್ಮಾಣ |
| 11 | ಕ್ಷೇತ್ರದ ಮಾತಂಗಿ ಗುಡಿಯಿಂದ ಉಗರಗೋಳ ನಾಖಾ ಕಡೆಗೆ ಹೋಗುವ ರಸ್ತೆಗೆ ಗುಂಡದ ಪಕ್ಕ ಒಳಚರಂಡಿ ನಿರ್ಮಾಣ |
| 12 | ಕ್ಷೇತ್ರದ ವಿವಿಧ ಕಡೆಗಳಲ್ಲಿ ಹೈಮಾಸ್ಟ್ ದೀಪಗಳನ್ನು ಅಳವಡಿಸುವುದು. |

**ಶ್ರೀ ಮಹಾತೇಂಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಯವರೇ, ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡದಲ್ಲಿರುವ ಶ್ರೀ ರೇಣುಕಾದೇವಿ ದರ್ಶನಕ್ಕೆ ರಾಜ್ಯದ ಬೇರೆ ಬೇರೆ ಭಾಗಗಳಿಂದ ಹಾಗೂ ಮಹಾರಾಷ್ಟ್ರ ರಾಜ್ಯದಿಂದ ಪ್ರವಾಸಿಗರು ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ: ಎಂಬ ಪ್ರಶ್ನೆಗೆ 'ಬಂದಿದೆ' ಎಂದು ಉತ್ತರವನ್ನು ನೀಡಿದ್ದಾರೆ. ಈ ಜನರಿಗೆ ಅಲ್ಲಿ ತಿರುಪತಿ ಮಾದರಿಯಲ್ಲಿ ವಾಸಸ್ಥಳ ಸಾರ್ವಜನಿಕ ಮೂತ್ರಾಲಯ ಶೌಚಾಲಯಗಳು ಇಲ್ಲದೇ ಇರುವ ಸಂಗತಿ ನಿಜವೇ; ಎಂದು ಕೇಳಿದ್ದು, ಈ ಕ್ಷೇತ್ರಕ್ಕೆ ಲಕ್ಷಾನುಗಟ್ಟಲೆ ಜನರು ಬರುವುದು ತಮಗೂ ತಿಳಿದಿರುವ ಸಂಗತಿಯಾಗಿದೆ. ಅಲ್ಲಿ ಭಕ್ತಾಧಿಗಳ ವಾಸ್ತವ್ಯಕ್ಕೆ 105 ಕೊಠಡಿಗಳು ಹಾಗೂ ಡಾರ್ಮೆಟರಿಯನ್ನು ಒಳಗೊಂಡಂತೆ ವಸತಿ ಸಂಕೀರ್ಣ ಹಾಗೂ ಯಾತ್ರಿ ನಿವಾಸವನ್ನು ನಿರ್ಮಿಸಲಾಗಿರುತ್ತದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಲಕ್ಷಾನುಗಟ್ಟಲೆ ಭಕ್ತಾಧಿಗಳು ಬರುವುದರಿಂದ ಅಲ್ಲಿ ಮಾಡಿರುವ ಸೌಕರ್ಯ ಯಾವುದಕ್ಕೂ ಸಾಕಾಗುವುದಿಲ್ಲ. ಜೊತೆಗೆ ಉತ್ತರದಲ್ಲಿ ವಿವಿಧ ಸ್ಥಳಗಳಲ್ಲಿ ಪುರುಷರು ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಮೂತ್ರಾಲಯ, ಶೌಚಾಲಯ ಮತ್ತು ಸ್ನಾನ ಗೃಹಗಳನ್ನು ಒಳಗೊಂಡ 05 ಸಮುಚ್ಚಯಗಳನ್ನು ನಿರ್ಮಿಸಲಾಗಿರುತ್ತದೆ

ಎಂದು ಹೇಳಿದ್ದಾರೆ. ಬಹುಶಃ ಒಂದು ಲಕ್ಷ ಜನರಿಗೆ 05 ಸಮುಚ್ಛಯಗಳು ಯಾವುದಕ್ಕೂ ಸಾಕಾಗುವುದಿಲ್ಲ. ಆ ನಿಟ್ಟಿನಲ್ಲಿ ಹೆಚ್ಚು ಮಾಡುವ ಕೆಲಸ ಮಾಡಬೇಕು.

ಇನ್ನು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ಚಕ್ಕಡಿಗಳ ಮೂಲಕ ವಾರಗಟ್ಟಲೆ ಭಕ್ತಾಧಿಗಳು ಬರುತ್ತಾರೆ, ಅವರು ಬರುವ ದಾರಿಯಲ್ಲಿ ಸಮುದಾಯ ಭವನ ಹಾಗೂ ಇಳಿದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇನೆ. ಒಟ್ಟಾರೆಯಾಗಿ ತಿರುಪತಿ ಮಾದರಿಯಲ್ಲಿ ಮಾಡಿರುವಂತೆ ಈ ಕ್ಷೇತ್ರದಲ್ಲಿಯೂ ಅಭಿವೃದ್ಧಿ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಶಾಸಕ ಮಿತ್ರರಿಗೆ ಎಲ್ಲಾ ಉತ್ತರಗಳನ್ನು ಕೊಟ್ಟಿದ್ದು, ಮುಂದೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳು ಹಾಗೂ ಈಗಾಗಲೇ ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ವಿವರವಾದ ವರದಿ ಕೊಟ್ಟಿದ್ದೇನೆ. ನಮ್ಮಲ್ಲಿ ದೇವಾಲಯದ ಹೆಸರಿನಲ್ಲಿ 24 ಕೋಟಿ ರೂಪಾಯಿಗಳು ಇದೆ. ದಿನಾಂಕ 2/1/2009ರಲ್ಲಿ ಒಂದು ಕೋಟಿ ಮತ್ತು ದಿನಾಂಕ 19/3/2012ರಲ್ಲಿ 3 ಕೋಟಿ ಸೇರಿದಂತೆ 27 ಕೋಟಿ ರೂಪಾಯಿಗಳ ಅನುದಾನ ದೇವಸ್ಥಾನದಲ್ಲಿ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾಗಳಿಂದ ಸಾಕಷ್ಟು ಭಕ್ತಾಧಿಗಳು ಬರುತ್ತಾರೆ. ಮಾನ್ಯ ಶಾಸಕರು ಹೇಳಿರುವ ವಿಚಾರಗಳಿಗೆ ನಾನು ಸಂಪೂರ್ಣವಾಗಿ ಸಹಮತಿಸುತ್ತೇನೆ. ಇದೊಂದು ಪವಿತ್ರವಾದ ದೇವಸ್ಥಾನವಾಗಿದೆ. ಜಿಲ್ಲೆಯಲ್ಲಿ ಎಲ್ಲಾ ಶಾಸಕರು ಕೂಡಿಕೊಂಡು ಒಂದು ಯೋಜನೆಯನ್ನು ತಯಾರು ಮಾಡಬೇಕು. ವರ್ಷಕ್ಕೆ ಒಂದು ಯೋಜನೆ ಮಾಡಿ ಒಂದು ಸಾರಿ 95 ಕೊಠಡಿಗಳನ್ನು ಕಟ್ಟುವುದು. ಈಗಾಗಲೇ 746 ಕೊಠಡಿಗಳನ್ನು ಕಟ್ಟಬೇಕೆಂದು ಈ ವರ್ಷದಲ್ಲಿ 15 ಕೋಟಿ ರೂಪಾಯಿಗಳ ಅಂದಾಜು ಪತ್ರವನ್ನು ತಯಾರಿಸಿದ್ದಾರೆ. ಅಲ್ಲಿ ಏನೇನು ಮೂಲಭೂತ ಸೌಕರ್ಯವನ್ನು ಕೊಡಬೇಕೋ, ಅದನ್ನು ಕೊಡಬೇಕು. ಈಗಾಗಲೇ 27 ಕೋಟಿ ರೂಪಾಯಿಗಳ ದೇವಸ್ಥಾನದಲ್ಲಿ ಇದ್ದು, ಅದಕ್ಕಿಂತ ಹೆಚ್ಚು ಹಣ ಬೇಕಾದರೂ ಇಲಾಖೆಯಿಂದ ಕೊಡುತ್ತೇನೆ. ಆದರೆ ಒಂದು

ಯೋಜನೆ ರೂಪಿಸಿ ಕಾರ್ಯೋನ್ಮುಖರಾಬೇಕೆಂದು ವಿನಂತಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದಂತೆ 25 ಶೌಚಾಲಯಗಳಿಂದ ಏನೂ ಉಪಯೋಗ ಆಗುವುದಿಲ್ಲ. ಇದಲ್ಲದೇ ಇನ್ನೂ ಒಂದೆರಡು ಪವಿತ್ರವಾದ ಸ್ಥಳಗಳಲ್ಲಿ ಹೋಗಿ ಜನರು ಸ್ನಾನ ಮಾಡುತ್ತಾರೆ. ಅಲ್ಲಿಯೂ ಸ್ನಾನದ ಗೃಹ ಮತ್ತು ಶೌಚಾಲಯಗಳನ್ನು ಕಟ್ಟಬೇಕು. ನಾನು ಅಧಿಕಾರಿಗಳನ್ನು ಗುಡ್ಡಕ್ಕೆ ಕಳುಹಿಸಿಕೊಡುತ್ತೇನೆ. ಸವಿಸ್ತಾರವಾದ ಒಂದು ನಕ್ಷೆಯನ್ನು ತಯಾರು ಮಾಡಿ, ಒಂದು ಯೋಜನೆಯನ್ನು ತಯಾರು ಮಾಡಿದರೆ ಹಣ ಕೊಡಲು ತಯಾರಿದ್ದೇನೆ. ನಮಗೂ ಸಾಕಷ್ಟು ಕಳಕಳಿ ಇದೆ. ತಿರುಪತಿ ಹಾಗೂ ಮಹಾರಾಷ್ಟ್ರ ಸರ್ಕಾರದವರು ಶಿರಡಿಯಲ್ಲಿ ಅಭಿವೃದ್ಧಿ ಮಾಡಿರುವಂತೆ ಎಲ್ಲಮ್ಮನ ಗುಡ್ಡದಲ್ಲಿ ಮಾಡಬೇಕೆಂದು ಕಳಕಳಿ ಇದೆ. ಇದರ ಬಗ್ಗೆ ನಾನೂ ಕಾರ್ಯೋನ್ಮುಖನಾಗುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಶ್ರೀಕಾಂತ ಲಕ್ಷ್ಮಣ ಘೋಟ್ನೇಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಬಹಳ ಸೂಕ್ತವಿದ್ದು, ಈ ದೇವಸ್ಥಾನ ಬಹಳ ಪ್ರಸಿದ್ಧಿ ಪಡೆದಿದ್ದು ನಮ್ಮಲ್ಲಿಯೂ ಬಹಳ ಭಕ್ತಾಧಿಗಳು ಇದ್ದಾರೆ. ಈ ದೇವಸ್ಥಾನಕ್ಕೆ 12 ತಿಂಗಳು ಜನರು ಭೇಟಿ ಕೊಡುತ್ತಿದ್ದು, ಪ್ರತಿ ಮಂಗಳವಾರ ಮತ್ತು ಶುಕ್ರವಾರಗಳಂದು ಬಹಳಷ್ಟು ಜನರು ಹೋಗುತ್ತಾರೆ ಹಾಗೂ ಪ್ರತಿ ಹುಣ್ಣಿಮೆ ದಿನ ಜಾತ್ರೆ ನಡೆಯುತ್ತದೆ. ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನರು ಭೇಟಿ ನೀಡುವುದರಿಂದ ಮೂಲಭೂತ ಸೌಕರ್ಯ ಒದಗಿಸುವುದು ಅವಶ್ಯಕವಾಗಿದೆ. ಅದೇ ಪ್ರಕಾರ ಒದಗಿಸುವ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲದೇ ಅಲ್ಲಿ ಸ್ವಚ್ಛತೆ ಸಲುವಾಗಿ 50 ಜನರನ್ನು ತೆಗೆದುಕೊಂಡಿದ್ದು, ಇದು ಸಾಕಾಗುವುದಿಲ್ಲ. ಸ್ವಚ್ಛತೆಗಾಗಿ ಹೆಚ್ಚಿನ ಜನರನ್ನು ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಭಂಡಾರ ಇತ್ಯಾದಿಗಳನ್ನು ಒಗೆಯುತ್ತಾರೆ. ಅಲ್ಲಿ ಬಹಳಷ್ಟು ಗಲೀಜು ಆಗುವುದರಿಂದ ಸ್ವಚ್ಛತೆಗೆ ಹೆಚ್ಚಿನ ಜನರನ್ನು ತೆಗೆದುಕೊಂಡು, ಹೆಚ್ಚು ವಸತಿ ಗೃಹಗಳನ್ನು ಮಾಡಬೇಕೆಂದು ಧ್ವನಿಗೂಡಿಸುತ್ತೇನೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದು, ಬೆಳಗಾವಿಯವರು ಮುಜರಾಯಿ ಸಚಿವರಾಗಿರುವುದು ವಿಶೇಷವೆಂದು ಹೇಳುತ್ತೇನೆ. ಎಲ್ಲಮ್ಮ ದೇವಸ್ಥಾನವು ಕೇವಲ ಬೆಳಗಾವಿಗೆ ಮಾತ್ರ ಸೀಮಿತರಾಗಿರದೇ ಇಡೀ ರಾಜ್ಯ ಮತ್ತು ಇನ್ನಿತರ ಐದಾರು ರಾಜ್ಯಗಳಿಂದ ಭಕ್ತಾಧಿಗಳು 12 ತಿಂಗಳು ಬರುವ ವ್ಯವಸ್ಥೆ ಇದೆ. ಆದರೆ ಬರುವ ಭಕ್ತರಿಗೆ ಮೂಲಭೂತ ಸೌಕರ್ಯ ಒದಗಿಸುವ ದೃಷ್ಟಿಯಲ್ಲಿ ಈಗಿರುವ ಸೌಲಭ್ಯ ಯಾವುದಕ್ಕೂ ಸಾಲದಾಗಿದೆ. ಇದರಿಂದ ಸ್ವಚ್ಛತೆ ಉಳಿಯುವುದಿಲ್ಲ ಮತ್ತು ಜನರಿಗೆ ಮೂಲಭೂತ ಸೌಕರ್ಯ ಸಿಕ್ಕಿಲ್ಲ. ಮಾನ್ಯ ಸಚಿವರು ಅಲ್ಲಿರುವ ಜನ ಪ್ರತಿನಿಧಿಗಳ ಸಭೆಯನ್ನು ಒಂದು master plan ಮಾಡಿಸಬೇಕೆಂದು ವಿನಂತಿಸುತ್ತೇನೆ. ಮೂಲಭೂತ ಸೌಕರ್ಯಗಳನ್ನು ಒದಗಿಸುವ, ಭಕ್ತಾಧಿಗಳಿಗೆ ಅನುಕೂಲವಾಗುವ ಹಾಗೂ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಒಂದು total master plan ಮಾಡಬೇಕು. ಸನ್ಮಾನ್ಯ ಸಭಾಪತಿಯವರೇ, ಭಕ್ತರು ಕೊಡುವಂತಹ ಕಾಣಿಕೆಯ ಜೊತೆಗೆ ಸರ್ಕಾರವೂ ಸಹ ಅನುದಾನವನ್ನು ನೀಡಬೇಕಾಗಿದೆ. ಸುಮಾರು 100 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಅಲ್ಲಿಗೆ ಬರುವಂತಹ ಭಕ್ತಾದಿಗಳ ಸಂಖ್ಯೆಯನ್ನು ನೋಡಿದರೆ, ಆ ಸಂಖ್ಯೆಗೆ ಅನುಗುಣವಾಗಿ ಅಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲ. ದೊಡ್ಡ ಪ್ರಮಾಣದಲ್ಲಿ ಭಕ್ತಾದಿಗಳು ಅಲ್ಲಿಗೆ ಬರುತ್ತಿರುವುದರಿಂದ ಸ್ವಚ್ಛತೆಯನ್ನು ಕಾಪಾಡುವುದು ಬಹಳ ಮುಖ್ಯವಾಗಿರುವಂತಹ ವಿಷಯವಾಗಿದೆ. ಶೌಚಾಲಯ ನಿರ್ವಹಣೆಯನ್ನು ಹೊರಗುತ್ತಿಗೆ ನೀಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಏಕೆಂದರೆ, ಅಲ್ಲಿರುವಂತಹ 25–50 ಜನ ಸಿಬ್ಬಂದಿಯಿಂದ ಸ್ವಚ್ಛತೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಈ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆಗೆ ನೀಡಬೇಕು ಮತ್ತು ಶೌಚಾಲಯಗಳಿಗೆ ಆದ್ಯತೆಯನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ಸ್ವತಃ ನಾನು ಕೂಡ ಆ ದೇವಿಯ ಭಕ್ತನಾಗಿ ಒಂದೆರಡು ಸಂಗತಿಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಅಲ್ಲಿಗೆ ಭೇಟಿ ನೀಡಿದಾಗ, ಮೊದಲಿಗೆ ಜೋಗಳ ಬಾವಿ, ಸತ್ಯವ್ವನ ಹೊಂಡ ಮತ್ತು ಒಂದು ದೇವಸ್ಥಾನ ಸಿಗುತ್ತದೆ. ಇಲ್ಲಿ ಒಂದು ಬಾವಿ ಇದೆ ಆ ಬಾವಿಯಲ್ಲಿ ನಾವು ಸ್ನಾನ ಮಾಡಿ ಮುಂದಿನ ಕೆಲಸವನ್ನು ಮಾಡಬೇಕಾಗುತ್ತದೆ. ಆದರೆ, ಈಗಿರುವಂತಹ ಪರಿಸ್ಥಿತಿಯಲ್ಲಿ ಆ ಬಾವಿಯ ಶುದ್ಧೀಕರಣದ ವ್ಯವಸ್ಥೆ ಆಗಿಲ್ಲ. ಬಹಳ ಪ್ರಮುಖವಾಗಿ ಆ ಬಾವಿಯ ಶುದ್ಧೀಕರಣ ಕೆಲಸ ಆಗಬೇಕಾಗಿದೆ. ಅಲ್ಲಿಗೆ ಬರುವಂತಹ ಭಕ್ತರ ಸ್ನಾನಕ್ಕೆ ಶುದ್ಧ ನೀರು ಸಿಗುವ ವ್ಯವಸ್ಥೆಯಾಗಬೇಕಾಗಿದೆ. ಅಲ್ಲಿಗೆ ಹೋದ ಭಕ್ತರು ಅಡುಗೆ ಮಾಡಿ, ಎಡೆಯನ್ನು ಹಾಕಿ, ಅಲ್ಲಿರುವಂತಹ ಜೋಗಪ್ಪ ಮತ್ತು ಜೋಗತ್ತಿಯರಿಗೆ ಕೊಟ್ಟು ಆಮೇಲೆ ದೇವಿ ದರ್ಶನವನ್ನು ಮಾಡಿಕೊಂಡು ವಾಪಸ್ಸು ಬರುತ್ತಾರೆ. ಹಾಗಾಗಿ ಅಲ್ಲಿ ಅಡುಗೆ ಮಾಡುವುದಕ್ಕೂ ಸಹ ಸರಿಯಾದಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈಗ ಸ್ವಲ್ಪ ಮಟ್ಟಿಗೆ ಆ ವ್ಯವಸ್ಥೆಗಳನ್ನು ಮಾಡಿದ್ದಾರೆ. ಇದಕ್ಕೆ ಸಮಗ್ರವಾಗಿ ಯೋಜನೆಯನ್ನು ತಯಾರು ಮಾಡಿರುವಂತಹ ಹಿಂದಿನ ಮುಜರಾಯಿ ಮಂತ್ರಿಗಳಿಗೆ ಒಬ್ಬ ಭಕ್ತನಾಗಿ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಕವಟಗಿಮಠ್ ಅವರು ಹೇಳಿದಂತೆ ಬೆಳಗಾವಿ ಜಿಲ್ಲೆಯವರೇ ಇವತ್ತು ಮುಜರಾಯಿ ಸಚಿವರಾಗಿದ್ದಾರೆ. ಆದ್ದರಿಂದ ನಾನು ಹೇಳಿದಂತಹ ಎರಡು ಸಂಗತಿಗಳನ್ನು ಸಮಗ್ರ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಆ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತದೆಯೇ ಎನ್ನುವ ಪ್ರಶ್ನೆಯನ್ನು ಸಹ ಕೇಳುತ್ತಿದ್ದೇನೆ,

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ಈ ಕ್ಷೇತ್ರದ ಬಳಿ ಯಾವುದೇ ಮದ್ಯದ ಅಂಗಡಿಗಳು ಇರುವುದಿಲ್ಲ ಎಂದು ಹೇಳಿದ್ದಾರೆ. ಏನು ಸಿಗದಿದ್ದರೂ ಸಹ ದಿನದ 24 ಗಂಟೆಗಳ ಕಾಲ ಅಲ್ಲಿ ಮದ್ಯ ಸಿಗುತ್ತದೆ. ಅದರ ಮಾರಾಟವನ್ನು ನಿಲ್ಲಿಸಬೇಕೆಂಬುದು ನನ್ನ

ಒತ್ತಾಯವಾಗಿದೆ. ಇದರ ಜೊತೆಗೆ ಸ್ವಚ್ಛತೆ ಹಾಗೂ ಇನ್ನಿತರ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ಮಾಡಲಾಗುತ್ತದೆ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಅದಕ್ಕೊಂದು ನಿರ್ದಿಷ್ಟವಾದ ಅವಧಿಯನ್ನು ನಿಗದಿಗೊಳಿಸಬೇಕಾಗುತ್ತದೆ. ಈಗ ನೀಡಿರುವಂತಹ 27 ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಆದ್ದರಿಂದ ಇನ್ನೂ ಹೆಚ್ಚಿನ ಅನುದಾನವನ್ನು ನೀಡುವುದರ ಮೂಲಕ ಆ ಕ್ಷೇತ್ರದ ಅಭಿವೃದ್ಧಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:–** ಸನ್ಮಾನ್ಯ ಸಭಾಪತಿಯವರೇ, ಈ ಕ್ಷೇತ್ರ ಕೇವಲ ಬೆಳಗಾಂ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿಗೆ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಂದ ಅಲ್ಲದೆ ಕರ್ನಾಟಕದ ಇತರ ಭಾಗಗಳಿಂದಲೂ ಸಹ ಭಕ್ತಾದಿಗಳು ಬರುತ್ತಾರೆ. ಮಾನ್ಯ ಸದಸ್ಯರಾಗಿರುವಂತಹ ಸಿದ್ದರಾಮಣ್ಣನವರು, ಜೋಗಳ ಬಾವಿಯನ್ನು ಸಹ ಅಭಿವೃದ್ಧಿಪಡಿಸಬೇಕೆನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಈ ಹೆಸರನ್ನು ಹೇಳುವುದಕ್ಕೆ ಬದಲಾಗಿ ಇನ್ನೂ ಎರಡು ಕಡೆ ಅಭಿವೃದ್ಧಿ ಅಗಬೇಕು ಎಂದು ಹೇಳಿದ್ದೆ. ಜೋಗುಳ ಬಾವಿ ಸಿರಸಂಗಿ ಟ್ರಸ್ಟ್‌ನ ವ್ಯಾಪ್ತಿಗೆ ಬರುತ್ತದೆ. ಟ್ರಸ್ಟ್‌ನವರ ಜೊತೆಗೂ ಸಹ ಇದರ ಬಗ್ಗೆ ಮಾತನಾಡುತ್ತೇವೆ. ನಮಗೂ ಕೂಡ ಇದರ ಬಗ್ಗೆ ಸಂಪೂರ್ಣವಾಗಿರುವಂತಹ ಕಾಳಜಿ ಇದೆ. ಸುಮಾರು 25 ಶೌಚಾಲಯಗಳನ್ನು ನಿರ್ಮಾಣ ಮಾಡಿದರೆ ಅದು ಯಾವುದಕ್ಕೂ ಸಾಕಾಗುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಆ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಶೌಚಾಲಯಗಳ ನಿರ್ಮಾಣವಾಗಬೇಕಾಗಿದೆ. ಸ್ನಾನಗೃಹಗಳು ಆಗಬೇಕಾಗಿದೆ ಮತ್ತು ಸಮುದಾಯ ಭವನಗಳು ನಿರ್ಮಾಣವಾಗಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈಗ 27 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇನೆ ಆಮೇಲೆ ಹಣ ಕೊಡುವುದಿಲ್ಲ ಎನ್ನುವಂತಹ ಮಾತನ್ನು ಹೇಳಿಲ್ಲ. ಈ ಕ್ಷೇತ್ರದ ಅಭಿವೃದ್ಧಿಗಾಗಿ 27 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಬೇಕಾದರೆ ಅದನ್ನು ಕೊಡುವುದಕ್ಕೂ ನಾವು ತಯಾರಿದ್ದೇವೆ. ಎಲ್ಲರೂ ಸೇರಿ ಇದಕ್ಕೊಂದು ಮಾಸ್ಟರ್ ಪ್ಲಾನ್ ಮಾಡೋಣ.

ಹಿಂದಿನ ಮುಜರಾಯಿ ಸಚಿವರು ಹೇಗೆ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಅದೇ ರೀತಿಯಲ್ಲಿ ನಾನು ಕೂಡ ಕೆಲಸ ಮಾಡಬೇಕೆನ್ನುವ ಉತ್ಸಾಹವಿದೆ. ಆ ದೇವಿಯ ಮಹತ್ವ ಬಹಳವಿರುವುದರಿಂದ ನಾವು ಕೂಡ ಇದರ ಬಗ್ಗೆ ಹೆಚ್ಚು ಗಮನಹರಿಸುತ್ತೇವೆ. ಮಾನ್ಯ ಶಾಸಕರು ಯಾವಾಗ ಸಭೆ ಮಾಡುವುದಕ್ಕೆ ದಿನಾಂಕವನ್ನು ಗೊತ್ತುಪಡಿಸುತ್ತಾರೆ ಆಗ ನಾನು ಮೀಟಿಂಗ್ ಮಾಡುವುದಕ್ಕೆ ತಯಾರಿದ್ದೇನೆ.

**ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿ ಅದಾಲತ್**

**1112; ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ನೀಡುವ ಪಿಂಚಣಿ ವೇತನದ ಸೌಲಭ್ಯ ಕಾರ್ಯಕ್ರಮಗಳ್ಯಾವುವು (ಈ ಯೋಜನೆಯಡಿ ನೀಡುತ್ತಿರುವ ಸಾಮಾಜಿಕ ಭದ್ರತಾ ಪಿಂಚಣಿ ಮೊತ್ತವಾರು ಹಾಗೂ ಇದರ ಪ್ರಯೋಜನ ಪಡೆಯುತ್ತಿರುವವರ ಸಂಖ್ಯೆವಾರು, ಜಿಲ್ಲಾವಾರು ಕಳೆದ 5 ವರ್ಷದ ಪೂರ್ಣ ವಿವರಗಳನ್ನು ಒದಗಿಸುವುದು).

**ಆ)** ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿಯ ಗೊಂದಲ ಉಂಟಾಗಿರುತ್ತದೆ. ಇದಕ್ಕೆ ಕಾರಣಗಳೇನು (ದಕ್ಷಿಣ ಕನ್ನಡ ಜಿಲ್ಲೆಯ ಪೂರ್ಣ ಮಾಹಿತಿ ಒದಗಿಸುವುದು).

**ಇ)** ಈ ಪಿಂಚಣಿ ಸೌಲಭ್ಯದ ಮೊತ್ತವನ್ನು ಯಾವ ಆಧಾರದ ಮೇಲೆ, ಯಾವ ರೀತಿ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ.

**ಈ)** ಪಿಂಚಣಿಗಾಗಿ ಬಾಕಿ ಇರುವ ಪ್ರಕರಣಗಳು ಎಷ್ಟು ಪಿಂಚಣಿಗಾಗಿ ಬಂದ ಅರ್ಜಿ ತಿರಸ್ಕರಿಸಲ್ಪಟ್ಟ ಕಾರಣಗಳೇನು (ಕಾರಣಗಳ ಬಗ್ಗೆ ವಿವರ ನೀಡುವುದು).

ಉ) ಇದಕ್ಕಾಗಿ ಪಿಂಚಣಿ ಅದಾಲತ್‌ಗಳನ್ನು ನಡೆಸಲು ಸರ್ಕಾರ ಉದ್ದೇಶಿಸಿದೆಯೇ. ಈ ಪಿಂಚಣಿ ಅದಾಲತ್‌ಗಳನ್ನು ಇದುವರೆಗೆ ಎಲ್ಲೆಲ್ಲಿ ನಡೆಸಲಾಗಿದೆ ಜಿಲ್ಲಾವಾರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಊ) ಬಾಕಿ ಉಳಿದಿರುವ ಅರ್ಹರಿಗೆ ಪಿಂಚಣಿ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಕಿ ಇರುವ ಪ್ರಕರಣಗಳೇಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು).

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

ಅ) ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಈ ಕೆಳಕಂಡ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ,
2. ವಿಧವಾ ವೇತನ,
3. ಅಂಗವಿಕಲ ವೇತನ,
4. ಸಂಧ್ಯಾ ಸುರಕ್ಷಾ ಯೋಜನೆ,

ಇದರ ಪ್ರಯೋಜನ ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು/ಯೋಜನಾವಾರು ವಿವರವನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.

ಆ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿರುವ ಫಲಾನುಭವಿಗಳ ಭೌತಿಕ ಪರಿಶೀಲನಾ ಕಾರ್ಯವನ್ನು ಫೆಬ್ರವರಿ 2011 ರಿಂದ ಡಿಸೆಂಬರ್ 2011 ರವರೆಗೆ ನಡೆಸಲಾಗಿರುತ್ತದೆ. ಭೌತಿಕ ಪರಿಶೀಲನೆ ಸಮಯದಲ್ಲಿ ಕಾರಣಾಂತರದಿಂದ ಅರ್ಹ ಫಲಾನುಭವಿಗಳ ಪಿಂಚಣಿ ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರದ ಸುತ್ತೋಲೆ ಆರ್‌ಡಿ 106 ಡಿಎಸ್‌ಪಿ 2011,

ದಿನಾಂಕ:06–01–2012 ರನ್ವಯ ಭಾತಿಕ ಪರಿಶೀಲನೆ ಸಮಯದಲ್ಲಿ ಕಾರಣಾಂತರಗಳಿಂದ ರದ್ದುಗೊಂಡ ಅರ್ಹ ಫಲಾನುಭವಿಗಳನ್ನು ಗುರುತಿಸಿ ಪುನಃ ಪರಿಶೀಲನೆ ನಡೆಸಿ ಅಂತಹವರ ಪಿಂಚಣಿ ಮರುಚಾಲನೆಗೊಳಿಸಿ ರದ್ದು ಗೊಂಡಿದ್ದ ದಿನಾಂಕದಿಂದಲೇ ಪಿಂಚಣಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದಂತೆ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ಮಂಜೂರಾತಿ ನೀಡಲಾಗುತ್ತಿದೆ.

ಭೌತಿಕ ಪರಿಶೀಲನಾ ಸಮಯದಲ್ಲಿ ಒಟ್ಟು 9.57 ಲಕ್ಷ ಫಲಾನುಭವಿಗಳ ಪಿಂಚಣಿಯನ್ನು ರದ್ದು ಗೊಳಿಸಲಾಗಿದ್ದು, ಇದರಲ್ಲಿ 1.77 ಲಕ್ಷ ಫಲಾನುಭವಿಗಳ ಪಿಂಚಣಿ ಪುನರ್ ಸ್ಥಾಪಿಸಲಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1054 ಅರ್ಹ ಪ್ರಕರಣಗಳ ಪಿಂಚಣಿಯನ್ನು ಪುನರ್ ಆರಂಭಗೊಂಡಿರುತ್ತವೆ.

| ತಾಲ್ಲೂಕು | ವೃದ್ಧಾಪ್ಯ ವೇತನ | ವಿಧವಾ ವೇತನ | ಅಂ.ವೇತನ (₹ 400) | ಅಂ.ವೇತನ (₹ 1000) | ಸಂಧ್ಯಾ ಸುರಕ್ಷಾ | ಒಟ್ಟು |
|---|---|---|---|---|---|---|
| ಮಂಗಳೂರು | 29 | 111 | 77 | 34 | 79 | **330** |
| ಬಂಟ್ವಾಳ | 35 | 234 | 60 | 26 | 38 | **393** |
| ಬೆಳ್ತಂಗಡಿ | 25 | 73 | 67 | 33 | 77 | **275** |
| ಪುತ್ತೂರು | 1 | 7 | 8 | 1 | – | **17** |
| ಸುಳ್ಯ | 1 | 17 | 8 | 4 | 9 | **39** |
| **ಒಟ್ಟು** | **91** | **442** | **220** | **98** | **203** | **1054** |

ಇ) ಪಿಂಚಣಿ ಯೋಜನೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಅರ್ಜಿದಾರರ ವಾಸ ಸ್ಥಳದ ವ್ಯಾಪ್ತಿಗೆ ಬರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಸ್ವೀಕರಿಸಲಾಗುತ್ತಿದ್ದು, ಸಂಬಂಧಪಟ್ಟ ಕಂದಾಯ ನಿರೀಕ್ಷಕರ ಸ್ಥಳ ತನಿಖೆಯ ನಂತರ ಅರ್ಹತೆಯ ಆಧಾರದ ಮೇಲೆ ಮಾಸಾಶನ ಮಂಜೂರು ಮಾಡಲಾಗುತ್ತಿದೆ.

ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹತೆಯ ಮಾನದಂಡಗಳು ಸಂಕ್ಷಿಪ್ತವಾಗಿ ಈ ಕೆಳಕಂಡಂತಿರುತ್ತದೆ.

**ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ:** ಫಲಾನುಭವಿಗಳು 60 ವರ್ಷ ಹಾಗೂ ಮೇಲ್ಪಟ್ಟ ವಯಸ್ಸುಳ್ಳವರಾಗಿರಬೇಕು, ಅವರು ಬಡತನ ರೇಖೆಗಿಂತ (ಬಿಪಿಎಲ್) ಕೆಳಮಟ್ಟದಲ್ಲಿರಬೇಕು.

**ನಿರ್ಗತಿಕ ವಿಧವಾ ವೇತನ:** 18 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ನಿರ್ಗತಿಕ ವಿಧವೆ ಪತಿಯು ಜೀವಿಸಿಲ್ಲದ ಅಥವಾ ಕಾನೂನು ರೀತ್ಯಾ ಮೃತಪಟ್ಟಿರುವನೆಂದು ಭಾವಿಸುವವನ ಪತ್ನಿ ಮತ್ತು ವಾರ್ಷಿಕ ಆದಾಯ ₹ 12,000 (ಗ್ರಾಮೀಣ ಪ್ರದೇಶದಲ್ಲಿ) ಅಥವಾ ₹ 17,000 (ನಗರ ಪ್ರದೇಶದಲ್ಲಿ) ಕಡಿಮೆ ಇರತಕ್ಕದ್ದು.

**ಅಂಗವಿಕಲ ವೇತನ:** ಅಂಗವಿಕಲತೆ ಶೇಕಡಾ 40 ಕ್ಕಿಂತ ಹೆಚ್ಚಾಗಿದ್ದು, ವಾರ್ಷಿಕ ₹ 12,000 (ಗ್ರಾಮೀಣ ಪ್ರದೇಶದಲ್ಲಿ) ಅಥವಾ ₹ 17,000 (ನಗರ ಪ್ರದೇಶದಲ್ಲಿ) ಕಡಿಮೆ ಇರತಕ್ಕದ್ದು.

**ಸಂಧ್ಯಾ ಸುರಕ್ಷಾ ಯೋಜನೆ:** 65 ವರ್ಷ ಅಥವಾ ಮೇಲ್ಪಟ್ಟು ವಯಸ್ಸಿನ ವಾರ್ಷಿಕ ಆದಾಯ ₹ 20,000/- ಕಡಿಮೆ ಇರುವ ಕೆಳಗೆ ತೋರಿಸಿರುವ ಕಸುಬುದಾರರು ಈ ಮಾಸಾಶನಕ್ಕೆ ಅರ್ಹರಾಗಿರುತ್ತಾರೆ.

ಅ) ಸಣ್ಣ ರೈತರು

ಆ) ಅತೀ ಸಣ್ಣ ರೈತರು

ಇ) ಕೃಷಿ ಕಾರ್ಮಿಕರು

ಈ) ನೇಕಾರರು

ಉ) ಮೀನುಗಾರರು

ಊ) ಅಸಂಘಟಿತ ವಲಯದ ಕಾರ್ಮಿಕರು,

ಪಿಂಚಣಿ ಮೊತ್ತವನ್ನು ಫಲಾನುಭವಿಗಳಿಗೆ ಪ್ರತಿ ತಿಂಗಳು ವಿಳಂಬವಿಲ್ಲದೆ ಖಜಾನೆಯ ಮೂಲಕ ನೇರವಾಗಿ ಕೆಳಕಂಡ ವಿತರಣಾ ವ್ಯವಸ್ಥೆ ಮೂಲಕ ಪಾವತಿಸಲು ಕ್ರಮಕೈಗೊಳ್ಳಲಾಗುತ್ತಿದೆ.

1. ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳ 5 ನೇ ತಾರೀಖಿನೊಳಗಾಗಿ ಸಂಬಂಧಪಟ್ಟ ಖಜಾನೆಯ ಮೂಲಕ ಕಳುಹಿಸಲಾಗುತ್ತದೆ.

2. ಫಲಾನುಭವಿಗಳ ಅಂಚೆ ಕಛೇರಿಯ ಉಳಿತಾಯ ಖಾತೆಗೆ ಪ್ರತಿ ತಿಂಗಳ 2ನೇ ತಾರೀಖಿನೊಳಗೆ ಅಂಚೆ ಕಛೇರಿಗೆ ಸಂಬಂಧಪಟ್ಟ ಖಜಾನೆಯ ಮೂಲಕ ಕಳುಹಿಸಲಾಗುತ್ತದೆ.

3. ಇ–ಮನಿಯಾರ್ಡರ್ ಮುಖಾಂತರ ಪ್ರತಿ ತಿಂಗಳ 2ನೇ ತಾರೀಖಿನೊಳಗೆ ಅಂಚೆ ಕಛೇರಿಗೆ ಕಳುಹಿಸಲಾಗುತ್ತದೆ. ಫಲಾನುಭವಿಗಳಿಗೆ ತಲುಪಲು ಕನಿಷ್ಠ 10 ದಿನಗಳು ಬೇಕಾಗುತ್ತದೆ.

**ಈ)** ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಜನವರಿ 2013 ರಿಂದ 29/07/2013 ರವರೆಗೂ 4.96 ಲಕ್ಷ ಅರ್ಜಿಗಳು ಸ್ವೀಕೃತವಾಗಿದ್ದು, 1.89 ಲಕ್ಷ ಅರ್ಹ ಫಲಾನುಭವಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. 94,212 ಅರ್ಜಿಗಳು ತಿರಸ್ಕೃತವಾಗಿದ್ದು, 2.13 ಲಕ್ಷ ಅರ್ಜಿಗಳು ಬಾಕಿ ಇರುತ್ತದೆ.

ಪಿಂಚಣಿಗಾಗಿ ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ನಿಗಧಿತ ಆದಾಯಕ್ಕಿಂತ ಹೆಚ್ಚಿರುವ ಬಡತನ ರೇಖೆಗಿಂತ ಕೆಳಗಿಲ್ಲದ, ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ನೀಡಿಲ್ಲದೆ ಹಾಗೂ ಅತ್ಯಗತ್ಯ ಮಾಹಿತಿ ಕುರಿತಂತೆ ಸೂಕ್ತ ದಾಖಲಾತಿ ಒದಗಿಸಿಲ್ಲದ ಸಂದರ್ಭಗಳಲ್ಲಿ ಮಾತ್ರ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ.

**ಉ)** ಮೊದಲ ಬಾರಿಗೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಈಗಾಗಲೇ ಇರುವ ಫಲಾನುಭವಿಗಳ ಕುಂದುಕೊರತೆಯನ್ನು

ನಿವಾರಿಸಲು ಹೋಬಳಿ ಮಟ್ಟದಲ್ಲಿ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ಪಿಂಚಣಿ ಅದಾಲತ್‌ನ್ನು ದಿನಾಂಕ: 27–05–2013 ರಿಂದ ನಡೆಸಲಾಗುತ್ತಿದೆ ಹಾಗೂ ಪಿಂಚಣಿದಾರರ ಆಹವಾಲುಗಳನ್ನು ಆಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಜಿಲ್ಲೆಗಳಲ್ಲಿ ಇದುವರೆವಿಗೆ 92 ಪಿಂಚಣಿ ಅದಾಲತ್‌ನ್ನು ನೆಡೆಸಲಾಗಿದ್ದು ವಿವರವನ್ನು ಅನುಬಂಧ 2 ರಲ್ಲಿ ಲಗತ್ತಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕಸಬಾ ಹೋಬಳಿ ಹಾಗೂ ಪಾಣೆ ಮಂಗಳೂರು ಹೋಬಳಿಯಲ್ಲಿ ಪಿಂಚಣಿ ಅದಾಲತ್‌ನ್ನು ದಿನಾಂಕ: 21–07–2013 ರಂದು ನಡೆಡಸಲಾಗಿದೆ.

**ಊ)** ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದ್ದು, ಅರ್ಜಿಗಳನ್ನು 70 ದಿನಗಳೋಳಗಾಗಿ ವಿಲೇವಾರಿಗೊಳಿಸಲು ಕ್ರಮಕೈಗೊಳ್ಳಲಾಗಿದೆ. ಆದಾಗ್ಯೂ ಸಹ ಅರ್ಜಿಗಳನ್ನು ಸರಾಸರಿ ಹತ್ತು ದಿನಗಳೊಳಗಾಗಿ ವಿಲೇವಾರಿಗೊಳಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 29–07–2013 ರಂತೆ 2961 ಪ್ರಕರಣಗಳು ಬಾಕಿ ಇರುತ್ತವೆ. ತಾಲ್ಲೂಕುವಾರು ವಿವರ ಕೆಳಕಂಡಂತೆ ಇರುತ್ತದೆ.

| **ತಾಲ್ಲೂಕು** | **ವೃದ್ಧಾಪ್ಯ ವೇತನ** | **ವಿಧವಾ ವೇತನ** | **ಅಂಗವಿಕಲ ವೇತನ** | **ಸಂಧ್ಯಾ ಸುರಕ್ಷಾ** | **ಒಟ್ಟು** |
|---|---|---|---|---|---|
| ಮಂಗಳೂರು | 41 | 387 | 156 | 578 | **1162** |
| ಬಂಟ್ವಾಳ | 28 | 362 | 138 | 524 | **1052** |
| ಬೆಳ್ತಂಗಡಿ | 4 | 152 | 61 | 234 | **451** |
| ಪುತ್ತೂರು | 4 | 54 | 71 | 60 | **189** |
| ಸುಳ್ಯ | 2 | 44 | 16 | 45 | **107** |
| **ಒಟ್ಟು** | **79** | **999** | **442** | **1441** | **2961** |

| ಪ್ರಶ್ನೆ ಸಂಖ್ಯೆ 1112 ಕ್ಕೆ ಅನುಬಂಧ–೧ | | | | | | |
|---|---|---|---|---|---|---|
| ಫಲಾನುಭವಿಗಳ ವಿವರ 2009 ಮಾರ್ಚ್ ಮಾಹೆ ಅಂತ್ಯಕ್ಕೆ | | | | | | |
| ಕ್ರಮ ಸಂಖ್ಯೆ | ಜಿಲ್ಲೆ | ವೃದ್ಧಾಪ್ಯ ವೇತನ (₹ 400) | ವಿಧವಾ ವೇತನ (₹ 400) | ಅಂಗವಿಕಲ ವೇತನ (₹ 400) | ಸಂಧ್ಯಾ ಸುರಕ್ಷಾ ವೇತನ (₹ 400) | ಒಟ್ಟು |
| 1 | ಬಾಗಲಕೋಟೆ | 14622 | 31308 | 21371 | 41114 | 108415 |
| 2 | ಬೆಂಗಳೂರು ಗ್ರಾಮಾಂತರ | 18862 | 17654 | 6981 | 15527 | 59024 |
| 3 | ಬೆಂಗಳೂರು ನಗರ | 52537 | 48288 | 20864 | 36934 | 158623 |
| 4 | ಬೆಳಗಾಂ | 69082 | 60499 | 54566 | 54431 | 238578 |
| 5 | ಬಳ್ಳಾರಿ | 32360 | 36452 | 20787 | 17544 | 107143 |
| 6 | ಬೀದರ್ | 23101 | 17247 | 16320 | 31103 | 87771 |
| 7 | ಬಿಜಾಪುರ | 48700 | 38124 | 31141 | 18383 | 136348 |
| 8 | ಚಾಮರಾಜನಗರ | 45416 | 28356 | 13222 | 5984 | 92978 |
| 9 | ಚಿಕ್ಕಮಗಳೂರು | 7194 | 14630 | 9659 | 14181 | 45664 |
| 10 | ಚಿತ್ರದುರ್ಗ | 11171 | 20089 | 20862 | 7158 | 59280 |
| 11 | ಮಂಗಳೂರು | 7221 | 23060 | 12389 | 9629 | 52299 |
| 12 | ದಾವಣಗೆರೆ | 13016 | 30412 | 20440 | 38248 | 102116 |

| | | | | | | |
|---|---|---|---|---|---|---|
| 13 | ಧಾರವಾಡ | 15915 | 26972 | 18550 | 13577 | 75014 |
| 14 | ಗದಗ | 21338 | 20832 | 17874 | 12659 | 72703 |
| 15 | ಗುಲ್ಬರ್ಗಾ | 71909 | 47065 | 34527 | 18758 | 172259 |
| 16 | ಹಾಸನ | 66192 | 46356 | 21498 | 12411 | 146457 |
| 17 | ಹಾವೇರಿ | 11605 | 39998 | 25069 | 37767 | 114439 |
| 18 | ಮಡಿಕೇರಿ | 3402 | 7172 | 3142 | 4254 | 17970 |
| 19 | ಕೋಲಾರ | 32642 | 27987 | 13759 | 16218 | 90606 |
| 20 | ಕೊಪ್ಪಳ | 19252 | 21662 | 15286 | 23113 | 79313 |
| 21 | ಮಂಡ್ಯ | 53649 | 65944 | 28109 | 14449 | 162151 |
| 22 | ಮೈಸೂರು | 47345 | 49515 | 27056 | 14338 | 138254 |
| 23 | ರಾಯಚುರು | 34964 | 35328 | 14641 | 7554 | 92487 |
| 24 | ಶಿವಮೊಗ್ಗ | 9140 | 21497 | 15673 | 14038 | 60348 |
| 25 | ತುಮಕೂರು | 26820 | 38117 | 33239 | 20920 | 119096 |
| 26 | ಉಡುಪಿ | 2654 | 17546 | 8344 | 16045 | 44589 |
| 27 | ಕಾರವಾರ | 4806 | 17538 | 11675 | 9304 | 43323 |
| 28 | ರಾಮನಗರ | 38705 | 30625 | 13853 | 4929 | 88112 |
| 29 | ಚಿಕ್ಕಬಳ್ಳಾಪುರ | 16701 | 21098 | 11792 | 8343 | 57934 |
| **ಒಟ್ಟು** | | **820321** | **901371** | **562689** | **538913** | **2823294** |

| ಪ್ರಶ್ನೆ ಸಂಖ್ಯೆ 1112 ಕ್ಕೆ ಅನುಬಂಧ–೧ | | | | | | | |
|---|---|---|---|---|---|---|---|
| ಫಲಾನುಭವಿಗಳ ವಿವರ 2010 ಮಾರ್ಚ್ ಮಾಹೆ ಅಂತ್ಯಕ್ಕೆ | | | | | | | |
| ಕ್ರಮ ಸಂಖ್ಯೆ | ಜಿಲ್ಲೆ | ವೃದ್ಧಾಪ್ಯ ವೇತನ (₹ 400) | ವಿಧವಾ ವೇತನ (₹ 400) | ಅಂಗವಿಕಲ ವೇತನ (₹ 400) | ಅಂಗವಿಕಲ ವೇತನ ಶೇ 75 (₹ 1000) | ಸಂಧ್ಯಾ ಸುರಕ್ಷಾ ವೇತನ (₹ 400) | ಒಟ್ಟು |
| 1 | ಬಾಗಲಕೋಟೆ | 16080 | 37119 | 6174 | 19656 | 54211 | 133240 |
| 2 | ಬೆಂಗಳೂರು ನಗರ | 51549 | 61218 | 7555 | 19960 | 67384 | 207666 |
| 3 | ಬೆಂಗಳೂರು ಗ್ರಾಮಾಂತರ | 20019 | 19295 | 1202 | 6905 | 29258 | 76679 |
| 4 | ಬೆಳಗಾಂ | 70647 | 71287 | 15164 | 47359 | 101989 | 306446 |
| 5 | ಬಳ್ಳಾರಿ | 30982 | 37179 | 2612 | 18469 | 31089 | 120331 |
| 6 | ಬೀದರ್ | 21771 | 25833 | 3158 | 17492 | 63148 | 131402 |
| 7 | ಬಿಜಾಪುರ | 54497 | 39816 | 2425 | 35330 | 40494 | 172562 |
| 8 | ಚಾಮರಾಜನಗರ | 44545 | 31032 | 1944 | 12088 | 16180 | 105789 |
| 9 | ಚಿಕ್ಕಮಗಳೂರು | 6836 | 17060 | 1981 | 8518 | 22660 | 57055 |
| 10 | ಚಿಕ್ಕಬಳ್ಳಾಪುರ | 17259 | 24325 | 1764 | 11572 | 24836 | 79756 |
| 11 | ಚಿತ್ರದುರ್ಗ | 9910 | 22799 | 6926 | 15358 | 29282 | 84275 |
| 12 | ದಾವಣಗೆರೆ | 12145 | 36110 | 6645 | 16256 | 58072 | 129228 |
| 13 | ಧಾರವಾಡ | 13318 | 30095 | 4552 | 13536 | 29262 | 90763 |

| | | | | | | | |
|---|---|---|---|---|---|---|---|
| 14 | ಗದಗ | 26923 | 24892 | 6205 | 14571 | 23255 | 95846 |
| 15 | ಗುಲ್ಬರ್ಗಾ | 75736 | 55671 | 4282 | 35399 | 60763 | 231851 |
| 16 | ಹಾಸನ | 63574 | 49439 | 2371 | 20562 | 25716 | 161662 |
| 17 | ಹಾವೇರಿ | 10821 | 44076 | 10239 | 18688 | 51977 | 135801 |
| 18 | ಕಾರವಾರ | 4763 | 20722 | 2031 | 10901 | 19988 | 58405 |
| 19 | ಕೋಲಾರ | 29334 | 28235 | 3910 | 9664 | 36165 | 107308 |
| 20 | ಕೊಪ್ಪಳ | 17429 | 23259 | 4214 | 13112 | 35641 | 93655 |
| 21 | ಮಡಿಕೇರಿ | 3578 | 9116 | 669 | 3314 | 9465 | 26142 |
| 22 | ಮಂಡ್ಯ | 50472 | 70234 | 3759 | 25878 | 46176 | 196519 |
| 23 | ಮಂಗಳೂರು | 6922 | 24651 | 2417 | 11363 | 16670 | 62023 |
| 24 | ಮೈಸೂರು | 49586 | 57238 | 4880 | 25048 | 42247 | 179999 |
| 25 | ರಾಯಚುರು | 33625 | 39138 | 2821 | 13940 | 23941 | 113465 |
| 26 | ರಾಮನಗರ | 37357 | 33306 | 1231 | 13935 | 26111 | 111940 |
| 27 | ಶಿವಮೊಗ್ಗ | 8596 | 25673 | 3791 | 14312 | 30515 | 82887 |
| 28 | ತುಮಕೂರು | 27068 | 43294 | 6282 | 31644 | 73677 | 181965 |
| 29 | ಉಡುಪಿ | 2411 | 20840 | 2706 | 7138 | 28832 | 61927 |
| ಒಟ್ಟು | | **817753** | **1022952** | **123910** | **511968** | **1120004** | **3596587** |

| ಪ್ರಶ್ನೆ ಸಂಖ್ಯೆ 1112 ಕ್ಕೆ ಅನುಬಂಧ–೧ | | | | | | | |
|---|---|---|---|---|---|---|---|
| ಫಲಾನುಭವಿಗಳ ವಿವರ 2011 ಮಾರ್ಚ್ ಮಾಹೆ ಅಂತ್ಯಕ್ಕೆ | | | | | | | |
| ಕ್ರಮ ಸಂಖ್ಯೆ | ಜಿಲ್ಲೆ | ವೃದ್ಧಾಪ್ಯ ವೇತನ (₹ 400) | ವಿಧವಾ ವೇತನ (₹ 400) | ಅಂಗವಿಕಲ ವೇತನ (₹ 400) | ಅಂಗವಿಕಲ ವೇತನ ಶೇ 75 (₹ 1000) | ಸಂಧ್ಯಾ ಸುರಕ್ಷಾ ವೇತನ (₹ 400) | |
| 1 | ಬೆಳಗಾಂ | 77700 | 83573 | 47078 | 22085 | 130673 | 361109 |
| 2 | ಬಾಗಲಕೋಟೆ | 17052 | 42545 | 20391 | 8922 | 58227 | 147137 |
| 3 | ಬಿಜಾಪುರ | 53897 | 46520 | 33881 | 4137 | 61542 | 199977 |
| 4 | ಗುಲ್ಬರ್ಗಾ | 65337 | 59752 | 32546 | 6548 | 78691 | 242874 |
| 5 | ಬೀದರ್ | 21596 | 28261 | 17831 | 4494 | 66067 | 138249 |
| 6 | ರಾಯಚುರು | 32992 | 46086 | 13969 | 4287 | 31677 | 129011 |
| 7 | ಕೊಪ್ಪಳ | 16149 | 26397 | 13375 | 6425 | 43005 | 105951 |
| 8 | ಗದಗ | 28459 | 27921 | 14356 | 7977 | 29055 | 107768 |
| 9 | ಧಾರವಾಡ | 16663 | 36792 | 14437 | 7260 | 41456 | 116608 |
| 10 | ಕಾರವಾರ | 5367 | 22089 | 10237 | 3002 | 23083 | 63778 |
| 11 | ಹಾವೇರಿ | 10572 | 48927 | 19362 | 12316 | 55090 | 146267 |
| 12 | ಬಳ್ಳಾರಿ | 30491 | 46782 | 19293 | 5938 | 46188 | 148692 |

| | | | | | | | |
|---|---|---|---|---|---|---|---|
| 13 | ಚಿತ್ರದುರ್ಗ | 9852 | 29712 | 14624 | 9985 | 41146 | 105319 |
| 14 | ದಾವಣಗೆರೆ | 10628 | 36353 | 14167 | 7240 | 57875 | 126263 |
| 15 | ಶಿವಮೊಗ್ಗ | 8091 | 29835 | 13604 | 5638 | 35190 | 92358 |
| 16 | ಉಡುಪಿ | 2165 | 23810 | 6690 | 4189 | 34972 | 71826 |
| 17 | ಚಿಕ್ಕಮಗಳೂರು | 6664 | 19591 | 7967 | 3228 | 25561 | 63011 |
| 18 | ತುಮಕೂರು | 26122 | 51010 | 30096 | 10353 | 90942 | 208523 |
| 19 | ಕೋಲಾರ | 35400 | 34576 | 10407 | 7255 | 49546 | 137184 |
| 20 | ಬೆಂಗಳೂರು ನಗರ | 50191 | 75858 | 20411 | 13541 | 92262 | 252263 |
| 21 | ಬೆಂಗಳೂರು ಗ್ರಾಮಾಂತರ | 20676 | 21017 | 6637 | 2332 | 33602 | 84264 |
| 22 | ಮಂಡ್ಯ | 49662 | 75921 | 24652 | 6829 | 59960 | 217024 |
| 23 | ಹಾಸನ | 60935 | 53680 | 19615 | 4211 | 35328 | 173769 |
| 24 | ಮಂಗಳೂರು | 7009 | 29032 | 11239 | 4211 | 22036 | 73527 |
| 25 | ಮಡಿಕೇರಿ | 3358 | 10461 | 3151 | 1164 | 11540 | 29674 |
| 26 | ಮೈಸೂರು | 47562 | 65235 | 23596 | 8161 | 61429 | 205983 |
| 27 | ಚಾಮರಾಜನಗರ | 42309 | 33625 | 11269 | 3790 | 23065 | 114058 |
| 28 | ರಾಮನಗರ | 35602 | 37072 | 13041 | 3342 | 39636 | 128693 |
| 29 | ಚಿಕ್ಕಬಳ್ಳಾಪುರ | 16792 | 27352 | 11483 | 3563 | 35372 | 94562 |
| **ಒಟ್ಟು** | | **809293** | **1169785** | **499405** | **192423** | **1414216** | **4085122** |

## ಪ್ರಶ್ನೆ ಸಂಖ್ಯೆ 1112 ಕ್ಕೆ ಅನುಬಂಧ–1

## ಫಲಾನುಭವಿಗಳ ವಿವರ 2012 ಮಾರ್ಚ್ ಮಾಹೆ ಅಂತ್ಯಕ್ಕೆ

| ಕ್ರಮ ಸಂಖ್ಯೆ | ಜಿಲ್ಲೆ | ವೃದ್ಧಾಪ್ಯ ವೇತನ (₹ 500) | ವಿಧವಾ ವೇತನ (₹ 400) | ಅಂಗವಿಕಲ ವೇತನ (₹ 400) | ಅಂಗವಿಕಲ ವೇತನ ಶೇ 75 (₹ 1000) | ಸಂಧ್ಯಾ ಸುರಕ್ಷಾ ವೇತನ (₹ 500) | |
|---|---|---|---|---|---|---|---|
| 1 | ಬಾಗಲಕೋಟೆ | 11,090 | 35,353 | 16,603 | 7,690 | 46,203 | 1,16,939 |
| 2 | ಬೆಂಗಳೂರು ನಗರ | 25,726 | 45,238 | 10,046 | 7,602 | 60,987 | 1,49,599 |
| 3 | ಬೆಂಗಳೂರು ಗ್ರಾಮಾಂತರ | 18,066 | 19,104 | 5,928 | 2,380 | 31,741 | 77,216 |
| 4 | ಬೆಳಗಾಂ | 45,388 | 62,630 | 32,131 | 16,480 | 85,251 | 2,41,880 |
| 5 | ಬಳ್ಳಾರಿ | 26,576 | 42,130 | 17,168 | 6,012 | 40,784 | 1,32,670 |
| 6 | ಬೀದರ್ | 13,826 | 21,649 | 12,311 | 3,229 | 47,262 | 98,277 |
| 7 | ಬಿಜಾಪುರ | 32,716 | 35,155 | 21,086 | 3,220 | 41,447 | 1,33,624 |
| 8 | ಚಾಮರಾಜನಗರ | 37,944 | 30,624 | 10,311 | 3,578 | 21,668 | 1,04,125 |
| 9 | ಚಿಕ್ಕಮಗಳೂರು | 5,159 | 15,782 | 6,564 | 2,779 | 21,682 | 51,966 |
| 10 | ಚಿಕ್ಕಬಳ್ಳಾಪುರ | 9,861 | 21,105 | 8,571 | 2,573 | 26,332 | 68,442 |

| | | | | | | | |
|---|---|---|---|---|---|---|---|
| 11 | ಚಿತ್ರದುರ್ಗ | 7,564 | 23,636 | 11,995 | 8,506 | 34,920 | 86,621 |
| 12 | ದಾವಣಗೆರೆ | 8,138 | 29,636 | 11,621 | 6,549 | 49,337 | 1,05,281 |
| 13 | ಧಾರವಾಡ | 14,796 | 35,488 | 13,499 | 6,973 | 38,620 | 1,09,376 |
| 14 | ಗದಗ | 17,472 | 24,878 | 12,438 | 7,244 | 24,702 | 86,734 |
| 15 | ಗುಲ್ಬರ್ಗಾ | 38,332 | 26,810 | 18,548 | 3,261 | 36,356 | 1,23,307 |
| 16 | ಹಾಸನ | 52,858 | 47,085 | 17,371 | 3,852 | 27,736 | 1,48,902 |
| 17 | ಹಾವೇರಿ | 6,501 | 39,338 | 15,015 | 10,390 | 41,848 | 1,13,092 |
| 18 | ಕಾರವಾರ | 4,513 | 20,778 | 9,595 | 3,054 | 22,462 | 60,402 |
| 19 | ಕೋಲಾರ | 27,600 | 30,757 | 8,819 | 6,510 | 45,028 | 1,18,714 |
| 20 | ಕೊಪ್ಪಳ | 12,579 | 22,747 | 11,974 | 6,012 | 34,999 | 88,311 |
| 21 | ಮಡಿಕೇರಿ | 2,600 | 8,431 | 2,696 | 1,085 | 7,580 | 22,392 |
| 22 | ಮಂಡ್ಯ | 38,955 | 66,755 | 21,053 | 6,274 | 55,440 | 1,88,477 |
| 23 | ಮಂಗಳೂರು | 5,545 | 24,749 | 9,392 | 4,562 | 20,846 | 65,094 |
| 24 | ಮೈಸೂರು | 32,503 | 52,572 | 17,778 | 8,819 | 53,671 | 1,65,343 |
| 25 | ರಾಯಚುರು | 15,772 | 24,678 | 9,581 | 3,290 | 19,914 | 73,235 |
| 26 | ರಾಮನಗರ | 27,169 | 33,121 | 11,506 | 3,103 | 36,371 | 1,11,270 |

| | | | | | | | |
|---|---|---|---|---|---|---|---|
| 27 | ಶಿವಮೊಗ್ಗ | 5,671 | 22,217 | 10,094 | 4,836 | 29,312 | 72,130 |
| 28 | ತುಮಕೂರು | 18,117 | 37,484 | 21,567 | 8,039 | 68,107 | 1,53,314 |
| 29 | ಉಡುಪಿ | 1,870 | 21,999 | 6,168 | 4,250 | 34,094 | 68,381 |
| 30 | ಯಾದಗಿರಿ | 7,077 | 14,196 | 6,971 | 2,339 | 25,213 | 55,796 |
| **ಒಟ್ಟು** | | **571984** | **936125** | **388400** | **164491** | **1129913** | **3190913** |

| **ಪ್ರಶ್ನೆ ಸಂಖ್ಯೆ 1112 ಕ್ಕೆ ಅನುಬಂಧ–೧** | | | | | | | |
|---|---|---|---|---|---|---|---|
| **ಫಲಾನುಭವಿಗಳ ವಿವರ 2013 ಮಾರ್ಚ್ ಮಾಹೆ ಅಂತ್ಯಕ್ಕೆ** | | | | | | | |
| ಕ್ರಮ ಸಂಖ್ಯೆ | ಜಿಲ್ಲೆ | ವೃದ್ಧಾಪ್ಯ ವೇತನ (₹ 500) | ವಿಧವಾ ವೇತನ (₹ 400) | ಅಂಗವಿಕಲ ವೇತನ (₹ 400) | ಅಂಗವಿಕಲ ವೇತನ ಶೇ 75 (₹ 1000) | ಸಂಧ್ಯಾ ಸುರಕ್ಷಾ ವೇತನ (₹ 500) | |
| 1 | ಬಾಗಲಕೋಟೆ | 11032 | 37119 | 16977 | 8732 | 46376 | **120236** |
| 2 | ಬೆಂಗಳೂರು ನಗರ | 27147 | 51050 | 11045 | 10064 | 68252 | **167558** |
| 3 | ಬೆಂಗಳೂರು ಗ್ರಾಮಾಂತರ | 18580 | 19717 | 5787 | 2647 | 32223 | **78954** |
| 4 | ಬೆಳಗಾಂ | 45394 | 66212 | 32559 | 18407 | 91755 | **254327** |
| 5 | ಬಳ್ಳಾರಿ | 26027 | 44671 | 17248 | 7067 | 42762 | **137775** |

| | | | | | | | |
|---|---|---|---|---|---|---|---|
| 6 | ಬೀದರ್ | 14645 | 24082 | 13897 | 4241 | 50929 | **107794** |
| 7 | ಬಿಜಾಪುರ | 32311 | 36447 | 22408 | 3441 | 43085 | **137692** |
| 8 | ಚಾಮರಾಜನಗರ | 37653 | 32240 | 10436 | 4026 | 23106 | **107461** |
| 9 | ಚಿಕ್ಕಮಗಳೂರು | 5143 | 18009 | 6738 | 3434 | 24387 | **57711** |
| 10 | ಚಿಕ್ಕಬಳ್ಳಾಪುರ | 12536 | 24064 | 9675 | 3543 | 32185 | **82003** |
| 11 | ಚಿತ್ರದುರ್ಗ | 7495 | 24719 | 12368 | 7605 | 36707 | **88894** |
| 12 | ದಾವಣಗೆರೆ | 9229 | 35515 | 12956 | 7976 | 52489 | **118165** |
| 13 | ಧಾರವಾಡ | 14799 | 37328 | 13829 | 7507 | 40414 | **113877** |
| 14 | ಗದಗ | 20105 | 26983 | 13006 | 7901 | 26397 | **94392** |
| 15 | ಗುಲ್ಬರ್ಗಾ | 39869 | 28108 | 18940 | 3716 | 36683 | **127316** |
| 16 | ಹಾಸನ | 52870 | 49428 | 17673 | 4463 | 34609 | **159043** |
| 17 | ಹಾವೇರಿ | 6605 | 40441 | 15158 | 11014 | 42566 | **115784** |
| 18 | ಕಾರವಾರ | 4702 | 21981 | 9526 | 3493 | 23007 | **62709** |
| 19 | ಕೋಲಾರ | 27510 | 31869 | 8826 | 7166 | 46063 | **121434** |
| 20 | ಕೊಪ್ಪಳ | 12234 | 24044 | 11803 | 6570 | 35977 | **90628** |
| 21 | ಮಡಿಕೇರಿ | 2552 | 9585 | 2710 | 1441 | 11953 | **28241** |
| 22 | ಮಂಡ್ಯ | 37346 | 69152 | 20937 | 7185 | 58572 | **193192** |
| 23 | ಮಂಗಳೂರು | 5221 | 25826 | 9148 | 5456 | 23287 | **68938** |

| | | | | | | | |
|---|---|---|---|---|---|---|---|
| 24 | ಮೈಸೂರು | 30140 | 56077 | 17410 | 8805 | 59550 | **171982** |
| 25 | ರಾಯಚುರು | 16302 | 26320 | 9803 | 3836 | 22718 | **78979** |
| 26 | ರಾಮನಗರ | 26842 | 32758 | 10637 | 3740 | 36834 | **110811** |
| 27 | ಶಿವಮೊಗ್ಗ | 5776 | 23691 | 10290 | 5388 | 29520 | **74665** |
| 28 | ತುಮಕೂರು | 18344 | 41346 | 22168 | 9622 | 72678 | **164158** |
| 29 | ಉಡುಪಿ | 1948 | 23878 | 6296 | 4659 | 35329 | **72110** |
| 30 | ಯಾದಗಿರಿ | 7133 | 15273 | 7132 | 2636 | 27551 | **59725** |
| **ಒಟ್ಟು** | | **577490** | **997933** | **397386** | **185781** | **1207964** | **3366554** |

**SSP Beneficiaries – End of June 2013**

| **SL.No.** | **District** | **OAP** | **DWP** | **PHP** | **PHP – 75%** | **PHP Total** | **SSY** | **TOTAL June 2013** |
|---|---|---|---|---|---|---|---|---|
| 1 | BAGALKOT | 12080 | 40501 | 17360 | 9680 | 27040 | 49085 | **128706** |
| 2 | BANGALORE URBAN | 27392 | 55018 | 12634 | 12064 | 24698 | 70971 | **178079** |
| 3 | BANGALORE (RURAL) | 19691 | 20635 | 5812 | 2915 | 8727 | 32621 | **81674** |
| 4 | BELGAUM | 44582 | 69685 | 32642 | 20045 | 52687 | 97088 | **264042** |

| | | | | | | | | |
|---|---|---|---|---|---|---|---|---|
| 5 | BELLARY | 25376 | 45994 | 17028 | 7807 | 24835 | 43876 | **140081** |
| 6 | BIDAR | 14550 | 26389 | 14348 | 5062 | 19410 | 52640 | **112989** |
| 7 | BIJAPUR | 32340 | 38813 | 22951 | 3998 | 26949 | 47502 | **145604** |
| 8 | CHAMARAJANAGAR | 37983 | 33889 | 10583 | 4501 | 15084 | 26016 | **112972** |
| 9 | CHICKMAGALUR | 5050 | 19928 | 6760 | 4017 | 10777 | 27037 | **62792** |
| 10 | CHIKKABALLAPURA | 12116 | 26088 | 9954 | 4590 | 14544 | 36890 | **89638** |
| 11 | CHITRADURGA | 7414 | 26845 | 12750 | 8112 | 20862 | 40207 | **95328** |
| 12 | DAVANAGERE | 9816 | 38172 | 13395 | 8574 | 21969 | 54669 | **124626** |
| 13 | DHARWAD | 14768 | 38899 | 13949 | 8071 | 22020 | 41709 | **117396** |
| 14 | GADAG | 23844 | 28753 | 13252 | 8560 | 21812 | 28630 | **103039** |
| 15 | GULBARGA | 36144 | 28091 | 18375 | 4231 | 22606 | 36699 | **123540** |
| 16 | HASSAN | 52128 | 52637 | 17813 | 5095 | 22908 | 39942 | **167615** |
| 17 | HAVERI | 6781 | 42793 | 15658 | 11795 | 27453 | 44832 | **121859** |
| 18 | KARWAR | 4933 | 23638 | 9575 | 3818 | 13393 | 24413 | **66377** |
| 19 | KOLAR | 27507 | 33331 | 8677 | 7859 | 16536 | 47842 | **125216** |
| 20 | KOPPAL | 11663 | 27060 | 12392 | 7590 | 19982 | 39454 | **98159** |
| 21 | MADIKERI | 2255 | 10333 | 2568 | 1695 | 4263 | 13078 | **29929** |
| 22 | MANDYA | 36165 | 73384 | 21175 | 8200 | 29375 | 63478 | **202402** |
| 23 | MANGALORE | 5149 | 27210 | 9200 | 6067 | 15267 | 24874 | **72500** |
| 24 | MYSORE | 22917 | 51490 | 16747 | 8568 | 25315 | 55395 | **155117** |

| | | | | | | | | |
|---|---|---|---|---|---|---|---|---|
| 25 | RAICHUR | 15895 | 28586 | 10090 | 4397 | 14487 | 24136 | **83104** |
| 26 | RAMANAGARA | 26797 | 34987 | 10884 | 4419 | 15303 | 39855 | **116942** |
| 27 | SHIMOGA | 6018 | 24805 | 10379 | 5853 | 16232 | 29863 | **76918** |
| 28 | TUMKUR | 18334 | 44765 | 23094 | 11005 | 34099 | 77063 | **174261** |
| 29 | UDUPI | 2266 | 25136 | 6410 | 4945 | 11355 | 36825 | **75582** |
| 30 | YADGIR | 7051 | 14996 | 7067 | 2986 | 10053 | 28447 | **60547** |
| **TOTAL** | | **569005** | **1052851** | **403522** | **206519** | **610041** | **1275137** | **3507034** |

**ಅನುಬಂಧ–2**

**ವಿವಿಧ ಹೋಬಳಿಗಳಲ್ಲಿ ಪಿಂಚಣಿ ಅದಾಲತ್ ನಡೆಸಿದ ಜಿಲ್ಲಾವಾರು ವಿವರ ಕೆಳಕಂಡಂತಿದೆ:**

| | | | | |
|---|---|---|---|---|
| **ಕ್ರ.ಸಂ.** | **ಜಿಲ್ಲೆಗಳು** | **ತಾಲ್ಲೂಕು** | **ಪಿಂಚಣಿ ಅದಾಲತ್ ನಡೆಸಿರುವ ಹೋಬಳಿಗಳ ಹೆಸರು** | **ಒಟ್ಟು** |
| 1 | ಬೆಂಗಳೂರು ನಗರ | ಬೆಂಗಳೂರು ಪೂರ್ವ | ಕೆ.ಆರ್.ಪುರ | 2 |
| | | ಬೆಂಗಳೂರು ಉತ್ತರ | ಬಿದರಹಳ್ಳಿ | |
| 2 | ಬೆಳಗಾಂ | ಬೆಳಗಾಂ | ಬೆಳಗಾಂ<br>ಹಿರೇಬಾಗೇವಾಡಿ<br>ಉಚಗಾಂವ<br>ಕಾಕತಿ | |

| | | | | |
|---|---|---|---|---|
| | | ಹುಕ್ಕೇರಿ | ಹುಕ್ಕೇರಿ | |
| | | ಖಾನಾಪುರ | ಖಾನಾಪುರ<br>ಬೀಡಿ<br>ಗುಂಜಿ<br>ಜಾಂಬೋಟಿ | |
| | | ಬೈಲಹೊಂಗಲ | ಬೈಲಹೊಂಗಲ<br>ನೇಸರಗಿ<br>ಕಿತ್ತೂರ | |
| | | ಸವದತ್ತಿ | ಸವದತ್ತಿ<br>ಮುನವಳ್ಳಿ<br>ಯರಗಟ್ಟಿ | |
| | | ರಾಮದುರ್ಗ | ಮುರಗೋಡ<br>ಮುದಕವಿ<br>ಸುರೇಬಾನ<br>ಕಟಕೋಳ<br>ಕೆ. ಚಂದರಗಿ | |
| | | ಗೋಕಾಕ | ಗೋಕಾಕ | |
| | | ಚಿಕ್ಕೋಡಿ | ಚಿಕ್ಕೋಡಿ<br>ಸದಲಗಾ | |

| | | | | |
|---|---|---|---|---|
| | | | ನಿಪ್ಪಾಣಿ<br>ನಾಗರಮುನ್ನೋಳಿ | |
| | | ರಾಯಬಾಗ | ರಾಯಬಾಗ<br>ಕುಡಚಿ | |
| | | ಅಥಣಿ | ಅಥಣಿ<br>ಕಾಗವಾಡ<br>ತೇಲಸಂಗ | |
| 3 | ಬಳ್ಳಾರಿ | ಸಂಡೂರ | ಬಂಡಿಗ್ರಾಮ | 1 |
| 4 | ಬೀದರ್ | ಔರಾದ್ | ಔರಾದ್ / ಸಂತಪೂರ | 3 |
| | | ಬಸವ ಕಲ್ಯಾಣ | ಬಸವ ಕಲ್ಯಾಣ | |
| 5 | ಬಿಜಾಪುರ | ಬಿಜಾಪುರ | ನಾಗಡಾಣ / ಬಬಲೇಶ್ವರ | 6 |
| | | ಮುದ್ದೇಬಿಹಾಳ | ನಾಲತ್‌ವಾಡ್ | |
| | | ಇಂಡಿ | ಅಥರ್ಗ | |
| | | ಸಿಂಧಗಿ | ಅಲ್ಮೇಲ / ದೇವರ ಹಿಪ್ಪರಗಿ | |
| 6 | ಬಾಗಲಕೋಟೆ | ಬಾಗಲಕೋಟೆ | ಬಾಗಲಕೋಟೆ<br>ಕಲಾದಗಿ<br>ಸಿತಿಮನಿ | |
| | | ಬದಾಮಿ | ಬದಾಮಿ<br>ಗುಳೇದಗುಡ್ಡ | 18 |

| | | | | |
|---|---|---|---|---|
| | | | ಕೆರೂರ<br>ಕುಳಗೇರಿ | |
| | | ಹುನಗುಂದ | ಹುನಗುಂದ<br>ಇಳಕಲ್ಲ<br>ಕರಡಿ<br>ಅಮೀನಗಡ | |
| | | ಜಮಖಂಡಿ | ಸಾವಳಗಿ<br>ಜಮಖಂಡಿ<br>ತೇರದಾಳ | |
| | | ಮುಧೋಳ | ಲೋಕಾಪುರ<br>ಮುಧೋಳ | |
| | | ಬೀಳಗಿ | ಬೀಳಗಿ<br>ಅನಗವಾಡಿ | |
| 7 | ಚಿಕ್ಕಮಗಳೂರು | ಚಿಕ್ಕಮಗಳೂರು | ಲಕ್ಯಾ | 2 |
| | | ತರಿಕೇರೆ | ಬೀರೂರು | |
| 8 | ಚಾಮರಾಜನಗರ | ಕೊಳ್ಳೇಗಾಲ | ಕೊಳ್ಳೇಗಾಲ | 4 |
| | | ಯಳಂದೂರು | ಯಳಂದೂರು<br>ಆಲ್ಕೆರೆ | |
| | | ಗುಂಡ್ಲಪೇಟೆ | ಹಂಗಳ | |

| | | | | |
|---|---|---|---|---|
| 10 | ಹಾವೇರಿ | ರಾಣೇಬೆನ್ನೂರು | ಕುಪ್ಪೇಲೂರು | 2 |
| | | ಹಿರೇಕೆರೂರು | ಹಂಸಭಾವಿ | |
| 11 | ಮಂಡ್ಯ | ಮದ್ದೂರು | ಆತಗೂರು | 2 |
| | | ಮಳವಳ್ಳಿ | ಮಳವಳ್ಳಿ | |
| 12 | ಮೈಸೂರು | ನಂಜನಗೂಡು | ಹೆಮ್ಮರಗ | 1 |
| 13 | ರಾಮನಗರ | ರಾಮನಗರ | ಬಿಡದಿ / ವಿರೂಪಾಕ್ಷಿಪುರ | 6 |
| | | ಚನ್ನಪಟ್ಟಣ | ಚನ್ನಪಟ್ಟಣ | |
| | | ಕನಕಪುರ | ಕನಕಪುರ | |
| | | ಮಾಗಡಿ | ಮಾಗಡಿ<br>ಕುದೂರು | |
| 14 | ತುಮಕೂರು | ತುಮಕೂರು | ಗೂಳೂರು<br>ಬೆಳ್ಳಾವಿ<br>ಹೆಬ್ಬೂರು | 9 |
| | | ಮಧುಗಿರಿ | ಪುರವರ | |
| | | ತಿಪಟೂರು | ನೊಣವಿನಕೆರೆ | |
| | | ಚಿಕ್ಕನಾಯಕನಹಳ್ಳಿ | ಚಿಕ್ಕನಾಯಕನಹಳ್ಳಿ | |
| | | ಗುಬ್ಬಿ | ಸಿ.ಎಸ್.ಪುರ<br>ಕಡಬ<br>ನಿಟ್ಟೂರು | |

| | | | | |
|---|---|---|---|---|
| 15 | ಉಡುಪಿ | ಉಡುಪಿ | ಕಸಬಾ | 3 |
| | | ಕುಂದಾಪುರ | ವಂಡಸೇ | |
| | | ಕಾರ್ಕಳ | ಅಧಿಕಾರ | |
| 16 | ಯಾದಗಿರಿ | ಶೋರಾಪುರ | ಕಕ್ಕೇರಾ | 1 |
| 17 | ದಕ್ಷಿಣ ಕನ್ನಡ | ಬಂಟ್ವಾಳ | ಕಸಬಾ/ಪಾಣೆ ಮಂಗಳೂರು | 2 |
| | | | | 92 |

**ಶ್ರೀ ಕೆ. ಮೋನಪ್ಪ ಭಂಡಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ದಿನಾಂಕ:17–07–2013ರಂದು ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದ್ದೆ. ಅದನ್ನು ತಡೆಹಿಡಿಯಲಾಗಿತ್ತು. ಅದಕ್ಕೆ ಉತ್ತರವನ್ನು ಕೊಟ್ಟಿಲ್ಲ. ಇವತ್ತು ಅಧಿವೇಶನದ ಕೊನೆಯ ದಿನವಾಗಿದೆ.

**ಸಭಾಪತಿಯವರು:–** ಆ ವಿಚಾರ ಬಿಟ್ಟು ಈಗ ಪ್ರಶ್ನೆ ಕೇಳಿ. ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಕೆ. ಮೋನಪ್ಪ ಭಂಡಾರಿ:–** ಸನ್ಮಾನ್ಯ ಸಭಾಪತಿಯವರೇ, ಬಡವರ್ಗದ ಜನರಿಗೆ ದಿನನಿತ್ಯದ ಅನ್ನಕ್ಕೆ ಸರ್ಕಾರ ಮಾಡಿಕೊಟ್ಟಿರುವ ಯೋಜನೆಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ, ಅಧಿಕಾರಿಗಳು ಯಾಕೆ ಈ ರೀತಿ ಅನ್ಯಾಯ ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿಯ ಗೊಂದಲ ಉಂಟಾಗಿರುತ್ತದೆ ಇದಕ್ಕೆ ಕಾರಣಗಳೇನು ಎನ್ನುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು, 'ಭೌತಿಕ ಪರಿಶೀಲನಾ ಸಮಯದಲ್ಲಿ ಕಾರಣಾಂತರಗಳಿಂದ ಅರ್ಹಫಲಾನುಭವಿಗಳ ಪಿಂಚಣಿ ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಭೌತಿಕ ಪರಿಶೀಲನಾ ಸಮಯದಲ್ಲಿ ಒಟ್ಟು 9.57 ಲಕ್ಷ ಫಲಾನುಭವಿಗಳ ಪಿಂಚಣಿಯನ್ನು ರದ್ದುಗೊಳಿಸಲಾಗಿದ್ದು, ಇದರಲ್ಲಿ 1.77 ಲಕ್ಷ ಫಲಾನುಭವಿಗಳ ಪಿಂಚಣಿ ಪುನರ್ ಸ್ಥಾಪಿಸಲಾಗಿದೆ.' ಎಂದು ಉತ್ತರವನ್ನು ನೀಡಿದ್ದಾರೆ. ಅಂದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಒಟ್ಟು 7.80 ಲಕ್ಷ ಫಲಾನುಭವಿಗಳಿಗೆ ಪಿಂಚಣಿ ದೊರೆಯುತ್ತಿಲ್ಲ ಎನ್ನುವುದು ಬಹಳ ಸ್ಪಷ್ಟವಾಗಿದೆ. ಪಿಂಚಣಿಯ ಅರ್ಜಿಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಿದ್ದರೆ, ಬಡವರಿಗೆ ಈ ರೀತಿಯ ಅನ್ಯಾಯವಾಗುತ್ತಿರಲಿಲ್ಲ. ಬಾಕಿ ಇರುವಂತಹ 7.80 ಲಕ್ಷ ಪಿಂಚಣಿದಾರರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ. ಅದರಲ್ಲಿಯೂ 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

1054 ಅರ್ಹ ಪ್ರಕರಣಗಳ ಪಿಂಚಣಿ ಪುನರ್ ಆರಂಭಗೊಂಡಿರುತ್ತದೆ' ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಅದು ಇನ್ನೂ ಬಾಕಿ ಇದೆಯೇ ಎನ್ನುವುದರ ಬಗ್ಗೆ ಕೂಡ ಮಾನ್ಯ ಸಚಿವರು ಮಾಹಿತಿಯನ್ನು ನೀಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ನಿರ್ಗತಿಕ ವಿಧವಾ ವೇತನದ ಬಗ್ಗೆ ಹೇಳಿದ್ದಾರೆ. "18 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ನಿರ್ಗತಿಕ ವಿಧವೆ ಪತಿಯು ಜೀವಿಸಿಲ್ಲದ ಅಥವಾ ಕಾನೂನು ರೀತ್ಯಾ ಮೃತಪಟ್ಟಿರುವನೆಂದು ಭಾವಿಸುವವನ ಪತ್ನಿ ಮತ್ತು ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದಲ್ಲಿ 12,000 ರೂಪಾಯಿಗಳು ಮತ್ತು ನಗರ ಪ್ರದೇಶದಲ್ಲಿ 17,000 ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದು" ಎಂದು ಹೇಳಿದ್ದಾರೆ. ವ್ಯವಸ್ಥೆಯ ಪ್ರಕಾರ ದುಡಿಯುವ ಗಂಡು ಮಕ್ಕಳಿದ್ದರೂ ಸಹ 'ಗಂಡು ಮಕ್ಕಳು ನನ್ನನ್ನು ನೋಡಿಕೊಳ್ಳುತ್ತಿಲ್ಲ, ಸಾಕುತ್ತಿಲ್ಲ' ಎನ್ನುವಂತಹ ಮನವಿಯನ್ನು ಕೊಟ್ಟರೆ, ಅವರಿಗೆ ಈ ಯೋಜನೆ ಲಭ್ಯವಾಗುತ್ತದೆ. ಅವರು ದುಡಿಯದೇ ಇರುವಾಗ ಆದಾಯ ಎಲ್ಲಿಂದ ಬರುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆದ್ದರಿಂದ ಈ ಆದಾಯದ ಮಿತಿಯನ್ನು ಸಡಿಲ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಅಂಗವಿಕಲ ವೇತನದ ಬಗ್ಗೆ ಉತ್ತರವನ್ನು ನೀಡಿದ್ದಾರೆ. ಅಂಗವಿಕಲರು ಎಂದರೆ ಅವರು ಖಾಯಂ ಆಗಿ ಅಂಗವಿಕಲರೇ ಆಗಿರುತ್ತಾರೆ. ಅವರಿಗೆ ಬೇರೆ ಯಾವುದೇ ವ್ಯವಸ್ಥೆ ಇಲ್ಲದೇ ಇರುವ ಕಾರಣ ಅವರು ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಜಿಯನ್ನು ಹಾಕಿಕೊಂಡಿರುತ್ತಾರೆ. ಅವರಿಗೆ ಈ ಸೌಲಭ್ಯ ಸಿಗುತ್ತಿದೆ. ಇಲ್ಲಿಯೂ ಕೂಡ ವಾರ್ಷಿಕ ಆದಾಯದ ಮಿತಿಯನ್ನು "ಗ್ರಾಮೀಣ ಪ್ರದೇಶದಲ್ಲಿ 12,000 ರೂಪಾಯಿಗಳು ಮತ್ತು ನಗರ ಪ್ರದೇಶದಲ್ಲಿ 17,000 ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದು" ಎಂದು ಹೇಳಿದ್ದಾರೆ. ಮೊನ್ನೆ ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ವಾರ್ಷಿಕ ಆದಾಯ ಮಿತಿ 12,000 ರೂಪಾಯಿಗಳು ಎನ್ನುವುದನ್ನು ರದ್ದುಗೊಳಿಸಬೇಕು ಎನ್ನುವ ಒತ್ತಾಯವನ್ನು ಮಾಡಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸಂಧ್ಯಾ ಸುರಕ್ಷತೆಯ ಬಗ್ಗೆ ಹೇಳಬೇಕಾದರೆ, 65 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟ ವಯಸ್ಸಿನವರು ಈ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುವುದಕ್ಕೆ ಅರ್ಹರಾಗಿರುತ್ತಾರೆ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಆದರೆ, ಕೆಲವೊಮ್ಮೆ ರೇಶನ್ ಕಾರ್ಡಿನಲ್ಲಿ ಯಾರೋ ಯಾವುದೇ ಸಂದರ್ಭದಲ್ಲಿ 63 ವರ್ಷಗಳೆಂದು ಕೊಟ್ಟುಬಿಡುತ್ತಾರೆ. ಆದರೆ, ಅವರ ನಿಜವಾದ ವಯಸ್ಸು 70 ವರ್ಷಗಳಾಗಿರುತ್ತದೆ. ವಿಲೇಜ್ ಅಕೌಂಟೆಂಟ್‌ಗಳು ರೇಶನ್ ಕಾರ್ಡಿನ ಆಧಾರದ ಮೇಲೆ ಅವರಿಗೆ 63 ವರ್ಷಗಳಾಗಿದೆ ಎಂದೇ ಹೇಳುತ್ತಾರೆ. ಆದರೆ, ಅವರ ನಿಜವಾದ ವಯಸ್ಸು ಹೆಚ್ಚಾಗಿರುತ್ತದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಸರ್ಕಾರಿ ವೈದ್ಯರು ಕೊಟ್ಟ ಸರ್ಟಿಫಿಕೇಟ್‌ನ ಆಧಾರದ ಮೇಲೆ ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯಗಳನ್ನು ಕೊಡುವಂತಹ ಕೆಲಸ ಮಾಡಬೇಕಾಗುತ್ತದೆ. ರೇಶನ್ ಕಾರ್ಡುಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. ಇಲ್ಲದಿದ್ದರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, 'ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಸಂಬಂಧಪಟ್ಟ ಖಜಾನೆಯ ಮೂಲಕ ಅಥವಾ ಅಂಚೆ ಕಛೇರಿಯ ಮೂಲಕ ಪಿಂಚಣಿಯನ್ನು ಕಳುಹಿಸಿಕೊಡಲಾಗುತ್ತದೆ' ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಆದರೆ, ನನಗೆ ತಿಳಿದಿರುವಂತೆ ಸುಮಾರು 6 ತಿಂಗಳಾದರೂ ಸಹ ಪಿಂಚಣಿ ಹಣ ಅವರಿಗೆ ದೊರೆಯುತ್ತಿಲ್ಲ ಎನ್ನುವಂತಹ ದೂರು ಆ ಫಲಾನುಭವಿಗಳಿಂದ ಬಂದಿದೆ. ಈ ಬಗ್ಗೆ ಮಾನ್ಯ ಸಚಿವರು ಕೇವಲ ಉತ್ತರವನ್ನು ಕೊಟ್ಟರೆ ಸಾಕಾಗುವುದಿಲ್ಲ, ನಿಜವಾದ ಅರ್ಥದಲ್ಲಿ ಪರಿಸ್ಥಿತಿ ಏನಿದೆ ಎನ್ನುವುದನ್ನು ಪರಿಶೀಲಿಸಬೇಕಾಗಿದೆ. ಸರಿಯಾದ ಸಮಯಕ್ಕೆ ಅವರಿಗೆ ಪಿಂಚಣಿ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೃಷ್ಣಬೈರೇಗೌಡ (ಕೃಷಿ ಸಚಿವರು, ಕಂದಾಯ ಸಚಿವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನಗಳ ಬಗ್ಗೆ ಪ್ರಶ್ನೆ ಮಾಡಿದ್ದಾರೆ.

1–00 ಗಂಟೆ

ಗೌರವಾನ್ವಿತ ಸದಸ್ಯರು ಕೆಲವು ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನಗಳನ್ನು ರದ್ದುಪಡಿಸಿರುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಹಿಂದೆ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಕೊಟ್ಟಂತಹ ಸಂದರ್ಭದಲ್ಲಿ ಇದರಲ್ಲಿ ಫಲಾನುಭವಿಗಳೇನು ಆಯ್ಕೆಯಾಗಿದ್ದರು ಅದರಲ್ಲಿ ದುರುಪಯೋಗ ವಾಗಿರುವಂತಹ ಸಾಧ್ಯತೆ ಇದೆ ಎನ್ನುವಂತಹ ಹಿನ್ನೆಲೆಯಲ್ಲಿ ಪರಿಷ್ಕರಣೆ ಮಾಡಬೇಕೆಂದು ಹಿಂದಿನ ಸರ್ಕಾರ ಆದೇಶವನ್ನು ಮಾಡಿತ್ತು. ಆ ರೀತಿ ಪರಿಷ್ಕರಣೆ ಮಾಡುವಂತಹ ಸಂದರ್ಭದಲ್ಲಿ ವಿಳಾಸದ ಕೊರತೆಯಿಂದಾಗಲಿ ಅಥವಾ ಅವರಿಗೆ ಸರಿಯಾದ ಅರ್ಹತೆ ಇಲ್ಲ ಎನ್ನುವಂತಹ ಆಧಾರದ ಮೇಲೆ ಈ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಸುಮಾರು ಒಂಬತ್ತೂವರೆ ಲಕ್ಷ ಫಲಾನುಭವಿಗಳ ಅರ್ಹತೆಯನ್ನು ಆ ಸಂದರ್ಭದಲ್ಲಿ ರದ್ದುಪಡಿಸಲಾಗಿತ್ತು. ಅನಂತರ ಅರ್ಹರಿದ್ದವರು ಕೂಡ ರದ್ದಾಗಿದ್ದಾರೆ ಎನ್ನುವಂತಹ ವಿಚಾರ ಬಂದಾಗ ಅದನ್ನು ಪುನರ್ ಪರಿಶೀಲನೆ ಮಾಡಿ ಅರ್ಹತೆ ಇರತಕ್ಕಂಥ ಸುಮಾರು 1,77,000 ಪಿಂಚಣಿದಾರರ ಪಿಂಚಣಿ ಏನು ರದ್ದಾಗಿತ್ತು ಅದನ್ನು reinstate ಮಾಡಿ ಅವರಿಗೆ ಪಿಂಚಣಿ ಕೊಡುವಂತಹ ಕೆಲಸ ಆಗಿದೆ. ಇನ್ನುಳಿದವರ ಪರಿಸ್ಥಿತಿ ಏನು ಎನ್ನುವಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಉಳಿಕೆಯವರಿಗೆ ಇವೊತ್ತಿಗೂ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಇದೆ. ಅವರಲ್ಲಿ ಯಾರಿಗಾದರೂ ಅಂತಹ ಒಂದು ಅಚಾತುರ್ಯದಿಂದ ಏನಾದರೂ ರದ್ದಾಗಿದ್ದರೆ ಈಗಾಗಲೇ ಪರಿಷ್ಕರಣೆ ಆಗಿರುವುದರಿಂದ, ನಾವು ಪರಿಷ್ಕರಣೆ ಹಂತವನ್ನು ದಾಟಿ ಮುಂದೆ ಸಾಗಿದ್ದೇವೆ. ಹೀಗಾಗಿ ಪರಿಷ್ಕರಣೆ ಮುಕ್ತಾಯಗೊಂಡಿದೆ. ಇದರಿಂದ ನಾವು ತಿಳಿಯಬೇಕಾದುದೆಂದರೆ, ಬಹುಶಃ ಇವರು ಅರ್ಹರಿರಲಿಲ್ಲ, ಹಾಗಾಗಿ ಇವರ ಪಿಂಚಣಿ ರದ್ದಾಗಿದೆ ಎಂದು ಭಾವಿಸಿಕೊಳ್ಳಬಹುದಾಗಿದೆ. ಒಂದುವೇಳೆ ಅರ್ಹರಿರುವವರು ಯಾರಾದರೂ

ಇದ್ದರೆ, ನಮ್ಮ ಕ್ಷೇತ್ರದಲ್ಲಿ ನನಗೂ ಸಹ ವೈಯಕ್ತಿಕವಾಗಿ ಈ ಸಮಸ್ಯೆ ಎದುರಾಗಿರುವುದರಿಂದ ಇದಕ್ಕೆ ಪರಿಹಾರವೇನು ಎಂದು ಕೇಳುತ್ತಿದ್ದಾರೆ. ಇವರಿಗೆ ಯಾರಿಗೂ ಇಲ್ಲ ಎಂದು ಹೇಳುತ್ತಿಲ್ಲ, ಹೊಸದಾಗಿ ಅರ್ಜಿ ಹಾಕಿಕೊಂಡಾಗ ಅವರ ಮಾನದಂಡಗಳನ್ನು ಪರಿಶೀಲನೆ ಮಾಡಿ ಹೊಸದಾಗಿ ಅವರಿಗೆ ಮಂಜೂರು ಮಾಡುವುದಕ್ಕೆ ಖಂಡಿತವಾಗಿಯೂ ಅವಕಾಶ ಇದೆ. ಅವರಿಗೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಅರ್ಜಿ ಹಾಕಿಕೊಂಡರೆ ಅದನ್ನು ಪರಿಶೀಲನೆ ಮಾಡುವಂತಹ ಕೆಲಸವನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಇನ್ನೂ ಎಷ್ಟು ಅರ್ಜಿಗಳು ಬಾಕಿ ಇವೆ ಎನ್ನುವಂತಹ ವಿಚಾರವನ್ನು ಕೇಳಿದ್ದಾರೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ಮುಖ್ಯಮಂತ್ರಿಗಳಾಗಿ ಪದವಿ ಸ್ವೀಕರಿಸಿದ ಕೆಲವೇ ದಿವಸಗಳಲ್ಲಿ ಜಿಲ್ಲಾಧಿಕಾರಿಗಳನ್ನು ಕರೆದು ಅರ್ಜಿಗಳೇನು ಬಾಕಿ ಇವೆ ಅವುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕೆನ್ನುವಂತಹ ಸೂಚನೆಯನ್ನು ಕೊಟ್ಟಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಬಾಕಿ ಪ್ರಕರಣಗಳು ಜಾಸ್ತಿಯಾಗಿದ್ದನ್ನು ಈಗ ಕಡಿಮೆ ಮಾಡಿ, ಆದಷ್ಟು ಬೇಗನೆ ಇದನ್ನು 70 ದಿವಸಗಳ ಒಳಗಾಗಿ ವಿಲೇವಾರಿ ಮಾಡಬೇಕೆಂದು ‘ಸಕಾಲ’ ಕಾರ್ಯಕ್ರಮದ ಅಡಿಯಲ್ಲಿಯೇ ತೆಗೆದುಕೊಂಡು ಬಂದು ಹೊಸದಾಗಿ ಯಾರಾದರೂ ಅರ್ಜಿ ಹಾಕುವಂಥದ್ದಿದ್ದರೆ ಅದನ್ನು ಆದಷ್ಟು ಬೇಗನೆ ವಿಲೇವಾರಿ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಇನ್ನು ಎರಡನೆಯದಾಗಿ ವೈದ್ಯಕೀಯ ದೃಢೀಕರಣ ಪತ್ರದ ಆಧಾರದ ಮೇಲೆ ಕೊಡಲಿಕ್ಕೂ ಸಹ ಅವಕಾಶ ಇದೆ ಎಂಬುದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಆದಾಯದ ಮಿತಿ ಏನಿದೆ ಇದು ಸರ್ಕಾರದ ಎಲ್ಲಾ ಯೋಜನೆಗಳಿಗೂ ಇರುವಂಥದ್ದೇ ಆಗಿದೆ. ಆದರೆ ಅದನ್ನು ಕೊಡುವಂತಹ ಸಂದರ್ಭದಲ್ಲಿ ಸಾಕಷ್ಟು ಉದಾರವಾಗಿ ಕೊಡುತ್ತಿರುವಂಥದ್ದು ತಮ್ಮ ಗಮನದಲ್ಲಿದೆ ಎಂದು ಭಾವಿಸಿಕೊಳ್ಳುತ್ತೇನೆ. ಸಾಮಾನ್ಯವಾಗಿ ಇದಕ್ಕಾಗಿ ಅರ್ಜಿ ಹಾಕಿದಂತಹವರಿಗೆ ಹೆಚ್ಚಿನ ಪ್ರಕರಣಗಳಲ್ಲಿ ವಯೋಮಿತಿಯನ್ನು ದಾಟಿದ್ದರೆ ಅವರೆಲ್ಲರಿಗೂ ಸಹ ಕೊಡುವಂತೆ ಆದಷ್ಟೂ ಉದಾರವಾಗಿ ಇದನ್ನು

ಪರಿಗಣಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ಸೂಚನೆಯನ್ನು ಕೊಟ್ಟಿದ್ದಾರೆ. ವಿಧವೆಯವರಿಗೆ ಗಂಡು ಮಕ್ಕಳಿದ್ದರೂ ಸಹ ಅವರಿಗೂ ವಿಧವಾ ಪಿಂಚಣಿಯನ್ನು ಕೊಡಬೇಕೆಂಬುದಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಬಹುಶಃ ಹಿಂದಿನ ಸರ್ಕಾರದಲ್ಲಿಯೂ ಅದೇರೀತಿಯ ಸೂಚನೆ ಇತ್ತು, ಅದನ್ನು ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಿಳಿಸಿದ್ದಾರೆ. ಗಂಡು ಮಕ್ಕಳಿರುವಂತಹ ವಿಧವೆಯರಿಗೂ ಸಹ ವಿಧವಾ ವೇತನವನ್ನು ನೀಡಬೇಕೆನ್ನುವಂತಹ ಸೂಚನೆಯನ್ನು ನಾನು ಈಗಾಗಲೇ ಸರ್ಕಾರದಿಂದ ಕೊಟ್ಟಿದ್ದೇವೆ.

Money Order ಮುಖಾಂತರ ಏನು ಪಿಂಚಣಿ ನೀಡಲಾಗುತ್ತದೆ ಆ ವ್ಯವಸ್ಥೆಯಲ್ಲಿ ಮಧ್ಯದಲ್ಲಿ ಒಂದೆರಡು ಬಾರಿ ಒಂದೆರಡು ತಿಂಗಳ payment ಆಗುತ್ತಿರಲಿಲ್ಲ. ಆದರೆ ಈಗ ಪ್ರತಿ ತಿಂಗಳು ಪಿಂಚಣಿದಾರರಿಗೆ payment ಆಗುತ್ತಿದೆ. ಆದರೆ ಕೆಲವು ದಿನಗಳ ಕಾಲ ನಿಧಾನವಾಗುತ್ತಿರುವುದಕ್ಕೆ ಕಾರಣವೆಂದರೆ ಒಬ್ಬ ಅಂಚೆ ಅಧಿಕಾರಿ ಯಾವುದೇ ಸಂದರ್ಭದಲ್ಲಿಯೂ ₹ 10,000/–ಕ್ಕಿಂತ ಹೆಚ್ಚು ಹಣವನ್ನು ತನ್ನಲ್ಲಿ ಇಟ್ಟುಕೊಳ್ಳಬಾರದೆನ್ನುವಂತಹ ಒಂದು ನಿಯಮವಿರುವುದರಿಂದ ಒಂದು ದಿನಕ್ಕೆ ಅಷ್ಟೇ ವಿಲೇವಾರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಕೆಲವು ದಿನಗಳು ನಿಧಾನವಾಗಬಹುದು. ಆದ್ದರಿಂದ ಇದನ್ನು ಆದಷ್ಟು ಮಟ್ಟಿಗೆ ಆಯಾಯ ತಿಂಗಳಿನ ಪಿಂಚಣಿ ಆಯಾಯ ತಿಂಗಳಿನಲ್ಲಿಯೇ ಪಾವತಿ ಮಾಡುವ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸುತ್ತದೆ ಎಂಬುದಾಗಿ ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

## ತಡೆಹಿಡಿಯಲಾದ ಪ್ರಶ್ನೆಗಳು

## ಕರಡಿ ದಾಳಿಗೊಳಪಟ್ಟವರು

### 334; ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಬಳ್ಳಾರಿ ಜಿಲ್ಲೆಯಲ್ಲಿ ಕರಡಿಯಿಂದ ದಾಳಿಗೊಳಪಟ್ಟು ಅನಾಹುತವಾದ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ;

ಆ) ಈ ಅನಾಹುತಗಳಿಂದಾದ ನಷ್ಟದ ಪ್ರಮಾಣವೆಷ್ಟು; (ಯಾವ ಯಾವ ರೀತಿ ವಿವರ ನೀಡುವುದು)

ಇ) ಈ ಅನಾಹುತಗಳಿಂದ ನಷ್ಟ ಅನುಭವಿಸಿದ ಸಂತ್ರಸ್ಥರು ಯಾರು; (ಹೆಸರು, ಊರುಗಳ ವಿವರ ನೀಡುವುದು);

ಈ) ಸರ್ಕಾರದಿಂದ ಏನು ಪರಿಹಾರ ನೀಡಲಾಗಿದೆ; ಅದರ ಪ್ರಮಾಣವೇನು;

ಉ) ಮುಂದೆ ಈ ಕರಡಿ ದಾಳಿ ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳಲು ಯೋಚಿಸಿದೆ?

### ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬಳ್ಳಾರಿ ಜಿಲ್ಲೆಯಲ್ಲಿ ಕರಡಿಯಿಂದ ದಾಳಿಗೊಳಪಟ್ಟು ಅನಾಹುತವಾದ ಒಟ್ಟು 112 ಪ್ರಕರಣಗಳು ದಾಖಲಾಗಿರುತ್ತವೆ.

ಆ) ಈ ಅನಾಹುತಗಳಿಂದಾದ ನಷ್ಟದ ಪ್ರಮಾಣ ಈ ಕೆಳಕಂಡಂತೆ ಇದೆ.

| ಪ್ರಕರಣದ ವಿವರ | ಪ್ರಕರಣದ ಸಂಖ್ಯೆ | ನಷ್ಟದ ಪ್ರಮಾಣ | |
|---|---|---|---|
| ಬೆಳೆಹಾನಿ | 102 | ಮೆಕ್ಕೆಜೋಳ | 171.80 ಕ್ವಿ. |
| | | ಶೇಂಗಾ | 141.50 ಕ್ವಿ. |
| | | ಜೋಳ | 16 ಕ್ವಿ. |
| | | ಸೂರ್ಯಕಾಂತಿ | 22.80 ಕ್ವಿ. |
| | | ಸಜ್ಜೆ | 6.80 ಕ್ವಿ. |
| | | ಹತ್ತಿ | 12.00 ಕ್ವಿ. |
| | | ಕಬ್ಬು | 125 ಕ್ವಿ. |

| | | |
|---|---|---|
| ಮಾನವ ಗಾಯ | 08 | 08 ಜನರು |
| ಮಾನವ ಪ್ರಾಣ ಹಾನಿ | 02 | 02 ಜನರು |

ಇ) 2012–13ನೇ ಸಾಲಿನಲ್ಲಿ ಅನಾಹುತಗಳಿಂದ ನಷ್ಟ ಅನುಭವಿಸಿದ ಸಂತ್ರಸ್ಥರ ಪಟ್ಟಿಯನ್ನು **ಅನುಬಂಧ 1** ರಲ್ಲಿ ಲಗತ್ತಿಸಿದೆ.

ಈ) ಬಳ್ಳಾರಿ ಜಿಲ್ಲೆಯಲ್ಲಿ ಕರಡಿಯಿಂದ ದಾಳಿಗೊಳಪಟ್ಟ ಪ್ರಕರಣಗಳಿಗೆ ಪ್ರಸ್ತುತ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ 143 ಎಫ್‌ಡಬ್ಲ್ಯುಎಲ್ 2010, ದಿನಾಂಕ:30.04.2011 ರನ್ವಯ ಕೆಳಕಂಡಂತೆ ಪರಿಹಾರ ಧನವನ್ನು ನೀಡಲಾಗಿದೆ.

| **ಹಾನಿ ಪ್ರಕರಣ** | **ಪರಿಹಾರ ಧನ (₹ ಗಳಲ್ಲಿ)** |
|---|---|
| ಬೆಳೆ ಹಾನಿ | 2,29,829.00 |
| ಮಾನವ ಪ್ರಾಣ ಹಾನಿ | 10,00,000.00 |

8 ಜನರು ಕರಡಿ ದಾಳಿಯಿಂದ ಗಾಯಗೊಂಡಿದ್ದು, ಇದರಲ್ಲಿ 7 ಜನರಿಗೆ ₹ 1,58,804.00 ಪರಿಹಾರ ಮೊತ್ತ ಪಾವತಿಸಲು ಬಾಕಿ ಇದ್ದು, ಪ್ರಸಕ್ತ ಸಾಲಿನಲ್ಲಿ ದಯಾತ್ಮಕ ಧನ ಪಾವತಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಉಳಿದ ಒಬ್ಬ ಗಾಯಗೊಂಡ ವ್ಯಕ್ತಿಯು ಬಿಲ್ಲು ಸಲ್ಲಿಸದೇ ಇರುವುದರಿಂದ ಪರಿಹಾರಧನ ನೀಡಿರುವುದಿಲ್ಲ.

ಉ) ಈ ಕರಡಿಗಳ ದಾಳಿಯನ್ನು ನಿಯಂತ್ರಿಸಲು ಹಾಗೂ ಈ ವನ್ಯಜೀವಿಗಳನ್ನು ರಕ್ಷಿಸಿ ಪೋಷಿಸಲು ಕೂಡ್ಲಿಗಿ ತಾಲ್ಲೂಕಿನಲ್ಲಿ ಗುಡೇಕೋಟೆ ಕರಡಿ ಧಾಮವಾಗಿ ಘೋಷಿಸಲು ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿದೆ.

ಸದರಿ ಕರಡಿಗಳ ಆವಾಸಸ್ಥಾನವಾದ ಬಳ್ಳಾರಿ ವಿಭಾಗದ ಗುಡೇಕೋಟೆ ಸುತ್ತಮುತ್ತಲಿನ ಪ್ರದೇಶಗಳು ಕಲ್ಲುಗುಡ್ಡಗಳಿಂದ ಕೂಡಿದ್ದು, ಅವುಗಳಿಗೆ ಅರಣ್ಯ ಪ್ರದೇಶದಲ್ಲಿ ವಾಸಿಸಲು ತೊಂದರೆಯಾಗದಂತೆ

ಮುನ್ನೆಚರಿಕೆಯಾಗಿ ಈ ಪ್ರದೇಶಗಳಲ್ಲಿ ಕಲ್ಲು ಗಣಿಗಾರಿಕೆಯನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಈ ಕರಡಿಗಳ ಆವಾಸಸ್ಥಾನದ ಅರಣ್ಯ ಪ್ರದೇಶಗಳಲ್ಲಿ ಸರ್ವಕಾಲಕ್ಕೂ ಆಹಾರ ಮತ್ತು ನೀರು ಸಿಗುವಂತೆ ಮಾಡಲು ಇಲಾಖಾ ವತಿಯಿಂದ ಹಣ್ಣು ಹಂಪಲ ಗಿಡಗಳನ್ನು ನೆಡುವುದು, ನೀರು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಕರಡಿಧಾಮ ವನ್ಯಜೀವಿ ಉಪವಿಭಾಗ, ಕಮಲಾಪುರದ ಅರಣ್ಯ ಪ್ರದೇಶದಲ್ಲಿ ಹಣ್ಣಿನ ಗಿಡಗಳನ್ನು ನಿರ್ವಹಣೆ ಮಾಡುವುದು, ನೀರಿನ ವ್ಯವಸ್ಥೆಗಾಗಿ ನೀರು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಹಾಗೂ ವನ್ಯಜೀವಿಗಳ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಜಾಗೃತಿ ಶಿಬಿರಗಳನ್ನು ನಡೆಸಿ, ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

## ಅನುಬಂಧ–1

## 2012–13ನೇ ಸಾಲಿನ ಬಳ್ಳಾರಿ ವಿಭಾಗದಲ್ಲಿ ಅನುಭವಿಸಿದ ಸಂತ್ರಸ್ಥರ ಹೆಸರುಗಳು

| ಕ್ರ.ಸಂ. | ವಿಭಾಗ | ವಲಯ | ಪರಿಹಾರ ಪಡೆದ ವ್ಯಯಕ್ತಿಯ ಹೆಸರು ಮತ್ತು ವಿಳಾಸ |
|---|---|---|---|
| ಬೆಳೆ ಹಾನಿ ವಿವರಗಳು | | | |
| 1 | ಬಳ್ಳಾರಿ | ಹೊಸಪೇಟೆ | 1. ನೀಲಮ್ಮ ಗಂಡ ಕಾಶಪ್ಪ, ಗುಂಡಾ |
| | | | 2. ಕಾಗೆ ತಿಪ್ಪೇಸ್ವಾಮಿ ತಂದೆ ತಿಪೇಸ್ವಾಮಿ, ಗುಂಡಾ |
| | | | 3. ವೆಂಕಟೇಶ್ ತಾಯಿ ಹುಲಿಗಮ್ಮ, ಗುಂಡಾ |
| | | | 4. ಎನ್.ಲಿಂಗಪ್ಪ ತಂದೆ ಬುಳ್ಳಪ್ಪ, ಗುಂಡಾ |
| | | | 5. ಲಂಬಾಣಿ ಯಶಿನಾಯ್ಕ ತಂದೆ ಶಂಕರ ನಾಯ್ಕ, ಗುಂಡಾ |
| | | | 6. ಸಣ್ಣ ಭರಮಪ್ಪ ತಂದೆ ಭರಮಪ್ಪ, ಗುಂಡಾ |
| | | | 7. ಶಂಕರ್ ನಾಯ್ಕ ತಂದೆ ಮಂಗಲ ನಾಯ್ಕ್, ಗುಂಡಾ |
| | | | 8. ಲಂಬಾಣಿ ಯಮುನನಾಯ್ಕ್ ತಂದೆ ಶಂಕರ ನಾಯ್ಕ್, ಗುಂಡಾ |
| | | | 9. ಲಂಬಾಣಿ ಭೂಜ ನಾಯ್ಕ್ ತಂದೆ ಶಂಕರ ನಾಯ್ಕ, ಗುಂಡಾ |
| 2 | ಬಳ್ಳಾರಿ | ಕೂಡ್ಲಿಗಿ | 10. ಕೊಟ್ರೇಶ ನಾಯ್ಕ ತಂದೆ : ಸೋಮ್ಲನಾಯ್ಕ, ಬಿ.ಬಿ. ತಾಂಡ |
| | | | 11. ಕೆ. ಇಮಕ್ಯಾ ನಾಯ್ಕ ತಂದೆ : ದುರಗನಾಯ್ಕ, ಬಿ.ಬಿ. ತಾಂಡ |
| | | | 12. ನಾಗೇಶ್ವರಪ್ಪ ತಂದೆ : ಗೌಡಪ್ಪ, ಜಿ.ಕೆ. ಹಳ್ಳಿ |

| | | | |
|---|---|---|---|
| | | | 13. ಷಣ್ಮುಖನಾಯ್ಕ ತಂದೆ : ಮಾಲ್ಯನಾಯ್ಕ, ಎ. ತಾಂಡ |
| | | | 14. ಕೆ. ಶ್ರೀನಿವಾಸ ತಂದೆ : ಕೊಡ್ಲಿ ಸಣ್ಣ ನಿಂಗಪ್ಪ, ಮಹದುನಪುರ |
| | | | 15. ಪಾಲಮ್ಮ ಗಂಡ : ಓಬಯ್ಯ, ಯರ್ರಬನಹಳ್ಳಿ |
| | | | 16. ಬಸಮ್ಮ ಗಂಡ : ಮುದ್ಲಯ್ಯ, ಜಿ.ಕೆ. ಹಳ್ಳಿ |
| | | | 17. ಬಂಗಾರ ಓಬಯ್ಯ ತಂದೆ : ಬಂಗಾರ ದೊಡ್ಡ ಓಬಯ್ಯ, ಜಿ.ಕೆ |
| | | | 18. ಸಣ್ಣ ರಾಮನಾಯ್ಕ ತಂದೆ : ಹೊನ್ನ ನಾಯ್ಕ, ಕಂತಾಪುರತಾಂಡ |
| | | | 19. ಸುಗನಾಯ್ಕ ತಂದೆ : ರೂಪ್ಲಾ ನಾಯ್ಕ |
| | | | 20. ಚಂದ್ರನಾಯ್ಕ ತಂದೆ : ದಿವಂಗತ ರಾಜ ನಾಯ್ಕ |
| | | | 21. ಸಿ. ನಾಗರಾಜ ತಂದೆ : ಹೆಚ್. ಪೋತ್ಲಾ ನಾಯ್ಕ |
| | | | 22. ಠಾಕೂರ ನಾಯ್ಕ ತಂದೆ : ಕೃಷ್ಣ ನಾಯ್ಕ |
| | | | 23. ತಾವರನಾಯ್ಕ ತಂದೆ : ರೂಪ್ಲಾ ನಾಯ್ಕ, ಕಂತಾಪುರ ತಾಂಡ |
| | | | 24. ಸುಪಾಲಿ ಬೊಮ್ಮಯ್ಯ ತಾಯಿ : ಸುಪಾಲಿ ಹನುಮಮ್ಮ, ಮಹದೇವಪುರ |
| | | | 25. ಓಬಕ್ಕ ಗಂಡ : ಸುಪಾಲಿ ಬೊಮ್ಮಯ್ಯ, ಹಾಲಸಾಗರ |
| | | | 26. ಖಲಂದರ ಭಾಷ ತಂದೆ : ಅಬ್ದುಲ್ ಗಫೂರ್, ಜಿ.ಕೆ. |
| | | | 27. ಎಫ್.ಆರ್. ಓಕ್ಯಾ ನಾಯ್ಕ ತಂದೆ : ಲೋಕ್ಯಾ ನಾಯ್ಕ, ಶ್ರೀಕಂತಾಪುರ |
| | | | 28. ಕೆ. ಹನುಮನಾಯ್ಕ ತಂದೆ : ದುರುಗನಾಯ್ಕ, ಬಿ.ಬಿ. ತಾಂಡ |

| | | | |
|---|---|---|---|
| | | | 29. ಪಿ. ತಿಪ್ಪೇಸ್ವಾಮಿ ತಂದೆ : ಬೊರಯ್ಯ, ಕರಡಿಹಳ್ಳಿ |
| | | | 30. ಕೆ. ಬಸವರಾಜ ತಂದೆ : ಬೊರಯ್ಯ, ಕರಡಿಹಳ್ಳಿ |
| | | | 31. ಸುರೇಶ್ ತಂದೆ : ಬೋರಯ್ಯ, ಕರಡಿಹಳ್ಳಿ |
| | | | 32. ಜಿ. ಬೋರಯ್ಯ ತಂದೆ : ಪಾಪಯ್ಯ, ಕರಡಿಹಳ್ಳಿ |
| | | | 33. ಬೋರಯ್ಯ ತಂದೆ : ಬಸಯ್ಯ, ಕರಡಿಹಳ್ಳಿ |
| | | | 34. ವೆಂಕಟೇಶ್ ತಂದೆ : ತಿಪ್ಪಯ್ಯ, ಜಿ.ಕೆ. |
| | | | 35. ಬುಡ್ಡಾರೆಡ್ಡಿ ತಂದೆ : ಹುಳಿ ವೀರಪ್ಪ, ಸಿದ್ಧಾಪುರ ವಡ್ಡರಹಟ್ಟಿ |
| | | | 36. ಮಲ್ಲಿಕಾರ್ಜುನ ತಂದೆ : ಮಲ್ಲೇಶಿ, ಜಿ.ಕೆ. |
| | | | 37. ಕೆ. ವೃಷಭೇಂದ್ರ ತಂದೆ : ಕೊಟ್ರಪ್ಪ, ಬೆಳ್ಳಿಕಟ್ಟಿ |
| | | | 38. ಕೆ. ಶಿವಣ್ಣ ತಂದೆ : ಕೊಟ್ರಪ್ಪ, ಬೆಳ್ಳಿಕಟ್ಟಿ |
| | | | 39. ಕೆ. ಲೋಕೇಶಿ ತಂದೆ : ಕೊಟ್ರಪ್ಪ, ಬೆಳ್ಳಿಕಟ್ಟಿ |
| | | | 40. ಓಬಯ್ಯ ತಂದೆ : ಹನುಮಯ್ಯ ಮಹದೇವಪುರ |
| | | | 41. ನಾಗೇಂದ್ರಪ್ಪ ತಂದೆ : ಪತ್ರಪ್ಪ, ಹಾಲಸಾಗರ |
| | | | 42. ಹರಿಜನ ಯಲ್ಲಪ್ಪ ತಂದೆ : ರಂಗಪ್ಪ ಭೀಮಸಮುದ್ರ |
| | | | 43. ಪೀರಾನಾಯ್ಕ ತಂದೆ : ಸಕ್ರನಾಯ್ಕ, ಶ್ರೀಕಂಠಾಪುರ ತಾಂಡ |
| | | | 44. ಮೀಸಲು ಶರಣಪ್ಪ ತಂದೆ : ಮೀಸಲು ಓಬಯ್ಯ, ಕರಡಿಹಳ್ಳಿ |

| | | | |
|---|---|---|---|
| | | | 45. ಗೊರಯ್ಯ ತಂದೆ : ತಮ್ಮಯ್ಯ |
| | | | 46. ಬೋರಯ್ಯ ತಂದೆ : ಬಸಯ್ಯ |
| | | | 47. ಮೋದಿನ್ ಸಾಬ್ ತಂದೆ : ಬುಡೇನ್ ಸಾಬ್, ಜಿ.ಕೆ. |
| | | | 48. ಹೆಚ್. ಚಿದಾನಂದಪ್ಪ ತಂದೆ : ಸಿದ್ಧಪ್ಪ, ಮಹದೇವಪುರ |
| | | | 49. ಬೋರಯ್ಯ ತಂದೆ : ಗಾತ್ರ ಪಾಪಯ್ಯ, ಕರಡಿಹಳ್ಳಿ |
| | | | 50. ಸಾರಪ್ಪ ತಂದೆ : ಬಸಪ್ಪ, ಮಹದೇವಪುರ |
| **ಗಾಯಗೊಂಡಿರುವವರ ಜನರ ವಿವರ** | | | |
| 1 | ಬಳ್ಳಾರಿ | ಹೊಸಪೇಟೆ | 51. ಕೆ. ತಾಯಪ್ಪ ತಂದೆ ಕೆ.ಮಾರಪ್ಪ, ಗುಂಡಾ |
| 2 | ಬಳ್ಳಾರಿ | ಕೂಡ್ಲಿಗಿ | 52. ದೇವೇಂದ್ರಪ್ಪ ತಂದೆ : ಹನುಮಂತಪ್ಪ, ಕೆ. ದಂಬರಹಳ್ಳಿ |
| | | | 53. ಒಬಯ್ಯ ತಂದೆ : ದುಡಕಲು ಓಬಯ್ಯ, ಯರಬನಹಳ್ಳಿ |
| | | | 54. ಎಂ. ಮಾರೇಶಿ ತಂದೆ : ಹೊನ್ನೂರಪ್ಪ, ಜಿ.ಕೆ.ಹಳ್ಳಿ |
| | | | 55. ಕೊಟ್ರಮ್ಮ ಗಂಡ : ಲಿಂಗರಾಜು, ಕೊಟ್ಟೂರು |
| | | | 56. ತಿಪ್ಪೇಸ್ವಾಮಿ ತಂದೆ : ಬಾಲಪ್ಪ |
| | | | 57. ಕೊಟ್ರಮ್ಮ ಗಂಡ : ಮಹಾದೇವಪ್ಪ |
| | | | 58. ಪ್ರಕಾಶಗೌಡ ತಂದೆ : ಸಿದ್ಧನಗೌಡ, ಕೊಟ್ಟೂರು |
| **ಮಾನವ ಮರಣ ಹೋದಿದ ಪ್ರಕರಣಗಳು** | | | |

| | | | |
|---|---|---|---|
| | | | 59. ಕುರಿ ಓಬಯ್ಯ ತಂದೆ : ಓಂಕಾರ, ನಾರಹಟ್ಟಿ |
| | | | 60. ಜಿ. ದಾದಾಸಾಬ್ ತಂದೆ : ಇಮಾಮ್ ಸಾಬ್ |
| **ವನ್ಯಜೀವಿ ಉಪವಿಭಾಗ, ಕಮಲಾಪುರದಲ್ಲಿ 2012–13ನೇ ಸಾಲಿನಲ್ಲಿ ವನ್ಯಪ್ರಾಣಿ ಹಾವಳಿಯಿಂದ ಬೆಳೆ ಹಾನಿಯಾಗಿರುವ ಸಂತ್ರಸ್ಥರ ವಿವರ** | | | |
| 1 | ಬಳ್ಳಾರಿ | ಹೊಸಪೇಟೆ | 1. ಶ್ರೀಮತಿ ಹೆಚ್. ಈರಮ್ಮ ಗಂಡ: ಸಿದ್ದಪ್ಪ, ಹೊಸಚಿನ್ನಾಪುರ |
| | | | 2. ಶ್ರೀ ಹೆಚ್. ಪಂಪಾಪತಿ ತಂದೆ: ಕರಿಓಬಯ್ಯ ಕಮಲಾಪುರ |
| | | | 3. ಶ್ರೀ ಪಿ. ಹನುಮಂತ ತಂದೆ: ನಾಗಪ್ಪ, ಕಮಲಾಪುರ |
| | | | 4. ಹನುಮಂತಪ್ಪ ತಂದೆ: ಎಮ್. ಎಲುಕಯ್ಯ, ಕಮಲಾಪುರ |
| | | | 5. ಪೂಜಾರಿ ಬೊಮ್ಮಯ್ಯ ತಂದೆ: ಮುತ್ತಯ್ಯ, ಕಮಲಾಪುರ |
| | | | 6. ಆರ್. ರಾಮಸ್ವಾಮಿ ತಂದೆ: ರಾಮಸ್ವಾಮಿ, ಕಮಲಾಪುರ |
| | | | 7. ಆರ್. ರಾಜು ತಂದೆ: ರಾಮಸ್ವಾಮಿ, ಕಮಲಾಪುರ |
| | | | 8. ರಾಮವ್ವ ಗಂಡ: ಲೇಟ್ ಮಾರಯ್ಯ, ದೇವಲಾಪುರ |
| | | | 9. ಗೌಡ್ರಲಿಂಗಮ್ಮ ಗಂಡ: ಲೆಟ್ ಪಕ್ಕೀರಪ್ಪ ದೇವಲಾಪುರ |
| | | | 10. ನಾಯ್ಕರ ಫಕ್ಕೀರಪ್ಪ ತಂದೆ: ಲೇಟ್ ಮಾರೆಪ್ಪ, ಕಮಲಾಪುರ |
| | | | 11. ಕುರುಬರ ಅಯ್ಯಪ್ಪ ತಂದೆ: ಮಲ್ಲೇಶಪ್ಪ, ಬೈಲುವದ್ದಿಗೇರಿ |
| | | | 12. ಕುರುಬರ ಸುಡುಗಾಡೆಪ್ಪ ತಂದೆ: ಮಲ್ಲೇಶಪ್ಪ, ಬೈಲುವದ್ದಿಗೇರಿ |

| | | | |
|---|---|---|---|
| | | | 13. ಹರೇಗಾರ ಸುಭದ್ರಮ್ಮ ತಂದೆ: ದ್ಯಾಮಪ್ಪ, ಬುಕ್ಕಸಾಗರ |
| | | | 14. ಎಲ್. ಭೀಮಪ್ಪ ತಂದೆ: ಭಜನೆರಾಮಪ್ಪ, ಸೀತಾರಾಂತಾಂಡ |
| | | | 15. ಎಲ್. ಗಣೇಶ ತಂದೆ: ಭಜನೆ ಭೋಜಪ್ಪ, ಸೀತಾರಾಂತಾಂಡ |
| | | | 16. ಕುರುಬರ ಗಂಗಮ್ಮ ಗಂಡ: ಕೆ. ಸತ್ಯಪ್ಪ, ಬೈಲುವದ್ದಿಗೇರಿ |
| | | | 17. ಹರಿಜನ ಲಕ್ಷ್ಮಪ್ಪ ತಂದೆ: ಹರಿಜನ ಹುಲುಗಪ್ಪ, ಬೈಲುವದ್ದಿಗೇರಿ |
| | | | 18. ಹೊನ್ನೂರಪ್ಪ ತಾಯಿ: ಪಕ್ಕೀರಮ್ಮ, ಹೊಸಚಿನ್ನಾಪುರ |
| | | | 19. ರಮೇಶನಾಯ್ಕ ತಂದೆ: ಕ್ರಿಷ್ಣನಾಯ್ಕ, ಸೀತಾರಾಂತಾಂಡ |
| | | | 20. ಕಾಗಿ ತಿಪ್ಪೇಸ್ವಾಮಿ ತಂದೆ: ದಿ. ಕಾಗಿ ಸೋಮಪ್ಪ ಬೈಲುವದ್ದಿಗೇರಿ |
| | | | 21. ಮಾರೆಪ್ಪ ತಂದೆ: ಲೇಟ್. ಮಹಂತಪ್ಪ, ನಲ್ಲಾಪುರ |
| | | | 22. ಗುರುಸ್ವಾಮಿ ತಂದೆ: ಲೇಟ್. ಮರಿತಿಮ್ಮಪ್ಪ, ಬೈಲುವದ್ದಿಗೇರಿ |
| | | | 23. ಶ್ರೀ ಕೆ. ರಾಮಪ್ಪ ತಂದೆ: ಹನುಮಂತಪ್ಪ, ನಲ್ಲಾಪುರ |
| | | | 24. ಶ್ರೀ ಎಲ್. ಶಂಕ್ರನಾಯ್ಕ ತಂದೆ: ಧರ್ಮಪ್ಪ, ಸೀತಾರಾಂತಾಂಡ |
| | | | 25. ಶ್ರೀ ವೆಂಕಟೇಶ ತಂದೆ: ಕೆಂಚಪ್ಪ, ನಲ್ಲಾಪುರ |
| | | | 26. ಶ್ರೀ ಪಿ. ಓಬಯ್ಯ ತಂದೆ: ದಿ. ಈರಪ್ಪ, ಕಮಲಾಪುರ |
| | | | 27. ಶ್ರೀ ಪೂಜಾರಿ ಗುರುವಯ್ಯ ತಂದೆ: ದಿ. ಈರಪ್ಪ, ಕಮಲಾಪುರ |
| | | | 28. ಶ್ರೀ ಎಲ್. ಚಂದ್ರಪ್ಪ ತಂದೆ: ಶಂಕ್ರಪ್ಪ, ಸೀತಾರಾಂತಾಂಡ |

| | | | |
|---|---|---|---|
| | | | 29. ಶ್ರೀ ತುಂಬಳದ ಮಾರೆಪ್ಪ ತಂದೆ: ಈರಪ್ಪ, ದೇವಲಾಪುರ |
| | | | 30. ಶ್ರೀ ಅಂಜಿನಪ್ಪ ತಂದೆ: ಲೆಟ್. ಹನುಮಂತಪ್ಪ, ದೇವಲಾಪುರ |
| | | | 31. ಶ್ರೀ ಎನ್. ಹನುಮಂತಪ್ಪ ತಂದೆ: ದಿ. ಅಂಜಿನಪ್ಪ, ಭುವನಹಳ್ಳಿ |
| | | | 32. ಶ್ರೀ ನಾಯಕರ ಜಡಿಯಪ್ಪ ತಂದೆ: ತಿಪ್ಪಣ್ಣ, ಭುವನಹಳ್ಳಿ |
| | | | 33. ಶ್ರೀಮತಿ ಲಕ್ಷ್ಮಮ್ಮ ಗಂಡ: ರಂಗಪ್ಪ, ಧರ್ಮಸಾಗರ |
| | | | 34. ಶ್ರೀ ಕೆ. ದೊಡ್ಡಬಸಪ್ಪ ತಂದೆ: ಲೇಟ್. ವಿರುಪಾಕ್ಷಪ್ಪ, ಧರ್ಮಸಾಗರ |
| | | | 35. ಡಿ. ನಿರ್ಮಲ್‌ಕುಮಾರ್ ತಂದೆ: ಲೇಟ್. ಭರ್ಮಪ್ಪ, ಕುರೆಕುಪ್ಪ |
| | | | 36. ಶ್ರೀ ಕಾಗಿ ತಿಪ್ಪೇಸ್ವಾಮಿ ತಂದೆ: ಲೇಟ್. ಕಾಗಿಸೋಮಪ್ಪ, ಬೈಲುವದ್ದಿಗೇರಿ |
| | | | 37. ಶ್ರೀ ಸಂಡೂರಪ್ಪ ತಂದೆ: ದ್ಯಾಮಯ್ಯ, ಕಮಲಾಪುರ |
| | | | 38. ಶ್ರೀ ಗುರುಸ್ವಾಮಿ ತಂದೆ: ಲೇಟ್. ಮರಿತಿಮ್ಮಪ್ಪ, ಬೈಲುವದ್ದಿಗೇರಿ |
| | | | 39. ಶ್ರೀಮತಿ ಎಲ್. ಶಾಂತಿಬಾಯಿ ಗಂಡ: ಎಲ್. ಫನಿಯಪ್ಪ ಸೀತಾರಾಂತಾಂಡ |
| | | | 40. ಶ್ರೀ ಹರೀಶ್‌ನಾಯ್ಕ ತಂದೆ: ಗಣ್ಯನಾಯ್ಕ, ಸೀತಾರಾಂತಾಂಡ |
| | | | 41. ಶ್ರೀ ಗಣಿಯಾನಾಯ್ಕ ತಂದೆ: ತೇಜಪ್ಪನಾಯ್ಕ, ಸೀತಾರಾಂತಾಂಡ |
| | | | 42. ಶ್ರೀ ಮೂರುಣ್ಣೆ ತಾಯಪ್ಪ ತಂದೆ: ಲೇಟ್ ಮೂರುಣ್ಣೆ ದೇವಿರಪ್ಪ, ದೇವಲಾಪುರ |

| | | | |
|---|---|---|---|
| | | | 43. ಶ್ರೀ ಗುಡ್ಡರ ದೊಡ್ಡಬಸಪ್ಪ ತಂದೆ: ಅಂಬಣ್ಣ, ದೇವಲಾಪುರ |
| | | | 44. ಶ್ರೀಮತಿ ಟಿ. ಮಾರೆಮ್ಮ ಗಂಡ: ಚಿಂತಯ್ಯ, ಕಣಿವೆತಿಮ್ಮಲಾಪುರ |
| | | | 45. ಶ್ರೀ ಎಲ್. ರಾಮಪ್ಪ ತಂದೆ: ಗುಂಡಪ್ಪ, ಸೀತಾರಾಂತಾಂಡ |
| | | | 46. ಶ್ರೀ ಎಲ್. ಸೀತಾರಾಮ ತಂದೆ: ಎಲ್. ರಾಮಪ್ಪ, ಸೀತಾರಾಂತಾಂಡ |
| | | | 47. ಶ್ರೀಮತಿ ಹೆಚ್. ಈರಮ್ಮ ಗಂಡ: ಲೇಟ್ ಹೆಚ್. ಸಿದ್ದಪ್ಪ, ಹೊಸ ಚಿನ್ನಾಪುರ |
| | | | 48. ಶ್ರೀಮತಿ ಅನ್ನಪೂರ್ಣಮ್ಮ ಗಂಡ: ಭೀಮಪ್ಪ, ಬೈಲುವದ್ದಿಗೇರಿ |
| | | | 49. ಶ್ರೀಮತಿ ಹುಲಿಗೆಮ್ಮ ಗಂಡ: ಮಲ್ಲಪ್ಪ, ಮೆಟ್ರಿ |
| | | | 50. ಶ್ರೀ ಕನಕರಾಜ ಎಂ. ತಂದೆ: ಎಂ. ಶಿವಪ್ಪ, ಕಣಿವೆತಿಮ್ಮಲಾಪುರ |
| | | | 51. ಶ್ರೀ ಎಲ್. ಮುತ್ತೇಶ ತಂದೆ: ಎಲ್. ದೊಡ್ಡವಾಚಪ್ಪ, ಸೀತಾರಾಂತಾಂಡ |
| | | | 52. ಶ್ರೀ ಅಂ. ಪೊಂಪನಗೌಡ ತಂದೆ: ತಿಪ್ಪೇರುದ್ರಪ್ಪ, ದೇವಲಾಪುರ |

**ಶ್ರೀ ಮೃತ್ಯುಂಜಯ ಜಿನಗಾ:–** ಸನ್ಮಾನ್ಯ ಸಭಾಪತಿಯವರೇ, ಬಳ್ಳಾರಿ ಜಿಲ್ಲೆಯಲ್ಲಿ ಕರಡಿಯಿಂದ ದಾಳಿಗೊಳಪಟ್ಟು ಅನಾಹುತವಾದ ಒಟ್ಟು 112 ಪ್ರಕರಣಗಳು ದಾಖಲಾಗಿರುವುದಾಗಿ ತಿಳಿಸಿರುವ ಸರ್ಕಾರ ಈ ಅನಾಹುತಗಳಿಂದಾದ ನಷ್ಟದ ಪ್ರಮಾಣವನ್ನು ಕೂಡ ಕೊಟ್ಟಿದೆ. ಜೊತೆಗೆ ಇಬ್ಬರು ವ್ಯಕ್ತಿಗಳು ಮೃತಪಟ್ಟಿದ್ದು ಅವರಿಗೆ 10 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿರುವುದಾಗಿ ತಿಳಿಸಿದೆ. ಗಾಯಗೊಂಡಿರುವಂತಹ 8 ಜನರು ಕರಡಿ ದಾಳಿಯಿಂದ ಗಾಯಗೊಂಡಿದ್ದು, ಇದರಲ್ಲಿ 7 ಜನರಿಗೆ ₹ 1,58,804/–ಗಳ ಪರಿಹಾರ ಮೊತ್ತ ಪಾವತಿಸಲು ಬಾಕಿ ಇದೆ ಎನ್ನುವಂತಹ ವಿಚಾರವನ್ನು ತಿಳಿಸಿದ್ದಾರೆ. ಆದರೆ ಇದುವರೆಗೆ ಅವರಿಗೆ ಎಷ್ಟು ಹಣವನ್ನು ಪರಿಹಾರದ ರೂಪದಲ್ಲಿ ನೀಡಲಾಗಿದೆ ಎನ್ನುವಂತಹ ವಿಚಾರವನ್ನು ತಿಳಿಸಿರುವುದಿಲ್ಲ. ಹಾಗಾಗಿ ಈ ವಿಚಾರದಲ್ಲಿ ನನಗೆ ಅನುಮಾನ ಉಂಟಾಗಿದೆ, ಸರ್ಕಾರ ಆ ಮಾಹಿತಿಯನ್ನು ನೀಡದೆ ಮರೆಮಾಚುವುದಕ್ಕೆ ಕಾರಣವೇನು, ಸರ್ಕಾರ ಪರಿಹಾರ ನೀಡಿದ್ದೇವೆ ಎಂದು ಹೇಳುವುದಕ್ಕೆ ಗೌರವ ತರುವಂತಹ ರೀತಿಯಲ್ಲಿ ಆ ಜನರಿಗೆ ಪರಿಹಾರವನ್ನು ಕೊಟ್ಟಿರಬಹುದೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ.

ಇವೊತ್ತು ಬೆಳೆ ಹಾನಿಗೆ ಏನು ಪರಿಹಾರವನ್ನು ನೀಡಿದ್ದಾರೆ ಅದು ನಿಜಕ್ಕೂ ರೈತರಿಗೆ ಆಗಿರುವಂತಹ ಬೆಳೆ ನಷ್ಟಕ್ಕೆ ಸರಿಯಾದಂತಹ ನ್ಯಾಯ ಸಿಕ್ಕಿಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಅದರ ಬಗ್ಗೆ ಸರ್ಕಾರ ಗಮನ ಹರಿಸಿ ಅವರಿಗೆ ಯೋಗ್ಯವಾದ ಪರಿಹಾರ ಸಿಗುವಂತೆ ನೋಡಿಕೊಳ್ಳಬೇಕೆಂದು ವಿನಂತಿಸುತ್ತೇನೆ.

‘ಕರಡಿ ದಾಳಿಯನ್ನು ನಿಯಂತ್ರಿಸಲು ಹಾಗೂ ಈ ವನ್ಯಜೀವಿಗಳನ್ನು ರಕ್ಷಿಸಿ ಪೋಷಿಸಲು ಕೂಡ್ಲಿಗಿ ತಾಲ್ಲೂಕಿನಲ್ಲಿ ಗುಡೇಕೋಟೆ ಕರಡಿ ಧಾಮವಾಗಿ ಘೋಷಿಸಲು ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿದೆ’ ಎನ್ನುವಂತಹ ವಿಚಾರವನ್ನು ಸರ್ಕಾರದ ಉತ್ತರದಲ್ಲಿ ತಿಳಿಸಲಾಗಿದೆ. ಇನ್ನೂ ಅದನ್ನು ಪರಿಗಣಿಸುತ್ತೇವೆ, ಯೋಚಿಸುತ್ತೇವೆ ಎನ್ನುವಂತಹ ಉತ್ತರವನ್ನು ಸರ್ಕಾರ

ಕೊಡುವುದಾದರೆ ನಾವು ಸರ್ಕಾರದಿಂದ ಯಾವ ರೀತಿಯ ಭರವಸೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಬಿ. ರಮಾನಾಥ್ ರೈ:–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ನಾವು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ. ಪ್ರಾಣಹಾನಿಯಾದಂತಹ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ಕೊಡಲಾಗಿದೆ. ಜೊತೆಗೆ ಕರಡಿ ದಾಳಿಯ ಅನಾಹುತದಿಂದಾಗಿ ಫಲವತ್ತಾಗಿ ಬಂದಿದ್ದ ಬೆಳೆಗಳೇನು ನಷ್ಟಕ್ಕೊಳಗಾಗಿವೆ ಅದಕ್ಕೇನು ಪರಿಹಾರ ಕೊಡಬೇಕೆನ್ನುವ ಬಗ್ಗೆ ನಾನು ಮಾತನಾಡಿದ್ದೇನೆ. ಸರ್ಕಾರ ಬೆಳೆ ಹಾನಿಗೆ ಸಂಬಂಧಿಸಿದಂತೆ ಕೃಷಿ ಇಲಾಖೆಯಿಂದ ಯಾವ ರೀತಿಯ ಪರಿಹಾರ ನಿಗದಿಪಡಿಸಿದೆ ಅಷ್ಟನ್ನು ಕೊಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ನಾನು ಹಿಂದೆ ಕೂಡ ಕೊಟ್ಟಿದ್ದೇನೆ, ಇವೊತ್ತು ಕೂಡ ನಾನು ಭರವಸೆಯನ್ನು ಕೊಡುತ್ತಿದ್ದೇನೆ. ಇದು ರೈತರ ಬೆಳೆ ಹಾನಿಗೆ ಸಂಬಂಧಿಸಿದಂತೆ ಪರಿಹಾರ ನೀಡುವಂತಹ ವ್ಯವಸ್ಥೆ ಏನಿದೆ ಇದು ಇವೊತ್ತು–ನೆನ್ನೆಯಿಂದ ಕೊಡುತ್ತಿರುವಂತಹದ್ದಲ್ಲ, ಹಿಂದಿನಿಂದಲೂ ಇರುವಂತಹ ವ್ಯವಸ್ಥೆಯ ಹಾದಿಯಲ್ಲಿಯೇ ನಾವು ಸಹ ಮುನ್ನಡೆಯುತ್ತಿದ್ದೇವೆ. ಮುಂದಿನ ದಿವಸಗಳಲ್ಲಿ ಈ ಪರಿಹಾರದ ಮೊತ್ತವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ನಾವು ಆಲೋಚನೆ ಮಾಡುತ್ತಿದ್ದೇವೆ.

**ಶ್ರೀ ಮೃತ್ಯಂಜಯ ಜಿನಗಾ:–** ಮಾನ್ಯ ಸಭಾಪತಿಯವರೇ, ಕರಡಿ ದಾಳಿಯಿಂದ ಗಾಯಗೊಂಡಿರುವವರಿಗೆ ನೀಡುವ ಪರಿಹಾರವನ್ನು ಸಹ ಹೆಚ್ಚಿನ ಪ್ರಮಾಣದಲ್ಲಿ ನೀಡಬೇಕೆಂದು ವಿನಂತಿಸುತ್ತಿದ್ದೇನೆ.

**ಶ್ರೀ ಬಿ. ರಮಾನಾಥ್ ರೈ:–** ಮಾನ್ಯ ಸಭಾಪತಿಯವರೇ, ಗಾಯಾಳುಗಳಿಗೆ ಕೂಡ ಹೆಚ್ಚಿನ ಮೊತ್ತದ ಪರಿಹಾರವನ್ನು ಕೊಡುವ ಬಗ್ಗೆ ವಿಚಾರ ಮಾಡುತ್ತೇವೆ. ಕರಡಿ ದಾಳಿಯಿಂದ ಗಾಯಗೊಂಡಂತಹ ಒಬ್ಬ ವ್ಯಕ್ತಿ ವೈದ್ಯಕೀಯ ವೆಚ್ಚದ ಮಾಹಿತಿಯನ್ನು ಸಲ್ಲಿಸಿದೆ ಇರುವುದರಿಂದ ಆ ವ್ಯಕ್ತಿಗೆ

ಪರಿಹಾರಧನವನ್ನು ನೀಡಿರುವುದಿಲ್ಲ. ಆದ್ದರಿಂದಾಗಿ ಪರಿಹಾರವನ್ನು ನೀಡುವುದರಲ್ಲಿ ವಿಳಂಬವಾಗಿದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ವೈದ್ಯಕೀಯ ವೆಚ್ಚದ ಮಾಹಿತಿಯನ್ನು ಕೊಟ್ಟವರಿಗೂ ಪರಿಹಾರವನ್ನು ಕೊಟ್ಟಿಲ್ಲ, ಕೊಡದವರಿಗೂ ಪರಿಹಾರವನ್ನು ಕೊಟ್ಟಿರುವುದಿಲ್ಲ. ಮಾಹಿತಿ ಕೊಟ್ಟಿರುವಂತಹ 7 ಜನ ಗಾಯಾಳುಗಳಿಗೆ ಕೂಡ ಪರಿಹಾರವನ್ನು ನೀಡಿಲ್ಲ, ಅವರಿಗೆ ಕೂಡ ಪರಿಹಾರ ನೀಡುವುದು ಬಾಕಿ ಇದೆ.

**ಶ್ರೀ ಬಿ. ರಮಾನಾಥ್ ರೈ:–** ಎಲ್ಲರಿಗೂ ಪರಿಹಾರವನ್ನು ಕೊಡುತ್ತೇವೆ. ಕರಡಿ ದಾಳಿಯಿಂದ ಏನು ಪ್ರಾಣಹಾನಿಯಾಗಿದೆ ಅವರಿಗೆ ಪರಿಹಾರದ ಮೊತ್ತವನ್ನೇನು ನಿಗದಿಪಡಿಸಿದ್ದೇವೆ ಅದನ್ನು ಖಂಡಿತವಾಗಿಯೂ ಕೊಡುತ್ತೇವೆ. ಮುಂದಿನ ವರ್ಷಗಳಲ್ಲಿ ಆ ಪರಿಹಾರದ ಮೊತ್ತವನ್ನು ಕೂಡ ಹೆಚ್ಚಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಮೃತ್ಯಂಜಯ ಜಿನಗಾ:–** ಮಾನ್ಯ ಸಭಾಪತಿಯವರೇ, ಕರಡಿ ದಾಳಿಗೊಳಗಾದವರಿಗೆ ಕೂಡ ಸರ್ಕಾರ ಗೌರವ ತರುವಂತಹ ಮೊತ್ತವನ್ನು ಕೊಡುತ್ತಿಲ್ಲ. ಅದಕ್ಕೋಸ್ಕರ ಮಾನ್ಯ ಸಚಿವರು ಆ ವಿಚಾರವನ್ನು ಹೇಳುವುದಕ್ಕೆ ತಯಾರಿಲ್ಲ.

**ಸಭಾಪತಿಯವರು:–** ಅವರು ಏನು ಹೇಳುತ್ತಿದ್ದಾರೆಂದರೆ, ನೀವು ಬಾಕಿ ಇರುವುದನ್ನು ಹೇಳುತ್ತಿದ್ದೀರಿ. ಈ ಗಾಯಾಳುಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂದು ಹೇಳುತ್ತಿಲ್ಲ. ಅದನ್ನು ಏಕೆ ಮುಚ್ಚಿ ಇಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ಎಷ್ಟು ಕೊಟ್ಟಿದ್ದೀರಿ ? ಇಲ್ಲವೇ ಎಷ್ಟು ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೆ ಇದರಲ್ಲಿ ಮುಚ್ಚಿ ಇಡುವ ಪ್ರಶ್ನೆಯೇ ಇಲ್ಲ. ಗಾಯಗೊಂಡವರಿಗೆ ಹೆಚ್ಚಿನ ಮೊತ್ತವನ್ನು ಕೊಡುವುದಕ್ಕೆ ನಾವು ಪರಿಶೀಲನೆಯನ್ನು ಮಾಡುತ್ತೇವೆ. ಕೃಷಿ ನಷ್ಟವನ್ನು ಹೊಂದಿದವರ ಬಗ್ಗೆ ಕೂಡ ನಾವು ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ.

ಈಗ ಪರಿಶೀಲನೆ ಮಾಡುತ್ತಿರುವ ಹಂತದಲ್ಲಿ ಇರುವಾಗ ಅದನ್ನು ಹೇಗೆ ಹೇಳುವುದಕ್ಕೆ ಸಾಧ್ಯ? ಕೃಷಿ ಇಲಾಖೆಯವರು ಏನು ಒಂದು ಮೊತ್ತವನ್ನು ನಿಗದಿ ಪಡಿಸುತ್ತಾರೆ ಅಂತಹ ಹಣವನ್ನು ಕೊಡಬೇಕೆಂಬುದು ನಮ್ಮ ಮನಸ್ಸಿನಲ್ಲಿ ಇರತಕ್ಕಂತಹ ಅಭಿಪ್ರಾಯವಾಗಿದೆ. ಅದಕ್ಕೆ ಪೂರಕವಾಗಿ ನಾವು . . . .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಅವರಿಗೆ ಹೆಚ್ಚಿನ ಪರಿಹಾರವನ್ನು ಕೊಟ್ಟಿಲ್ಲ. ಈ ಪರಿಹಾರವನ್ನು ಕೊಡುವುದಕ್ಕೆ ಮಾನದಂಡ ಏನಾದರೂ ಇದೆಯೇ? ಆಸ್ಪತ್ರೆ ಖರ್ಚನ್ನು ನಾವು ವಹಿಸಿಕೊಳ್ಳುತ್ತೇವೆ ಇಲ್ಲವೇ bill submit ಮಾಡಿದರೆ ಅಷ್ಟೂ ಕೊಡುತ್ತೇವೆ ಅಥವಾ ಇಷ್ಟು ಹಣವನ್ನು ಕೊಡುತ್ತೇವೆ ಎಂದು ಏನಾದರೂ ತೀರ್ಮಾನ ಮಾಡಿದ್ದೀರಾ? ಅವರು bill submit ಮಾಡಿಲ್ಲ ಅದಕ್ಕೆ ಕೊಟ್ಟಿಲ್ಲವೆಂದು ತಮ್ಮ ಉತ್ತರದಲ್ಲಿ ಬರೆದಿದ್ದೀರಿ. ಹಾಗಿದ್ದರೆ bill submit ಮಾಡಿದರೆ ಅಷ್ಟೂ ಹಣವನ್ನು ಕೊಡುತ್ತೀರಾ?

**ಶ್ರೀ ಬಿ. ರಮಾನಾಥ ರೈ:-** ನಾವು ಈಗ 7 ಜನರಿಗೆ ಯಾವ ಹಣವನ್ನು ಕೊಡಬೇಕೆಂದು ನಿಗದಿ ಪಡಿಸಿದ್ದೇವೆ ಅದನ್ನು ಗಾಯಾಳುಗಳಿಗೆ ಕೊಡುತ್ತೇವೆ. ಒಬ್ಬರಿಗೆ ಮಾತ್ರ ಈ ಹಣವನ್ನು ಕೊಟ್ಟಿಲ್ಲ. ಅವರು ಮಾಹಿತಿಯನ್ನು ಕೊಡುವುದರಲ್ಲಿ ನಿಧಾನವಾಗಿರಬಹುದು. ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಮುಂದಿನ ದಿವಸಗಳಲ್ಲಿ ಕೃಷಿ ಹಾನಿಯಾಗಿದ್ದಕ್ಕೆ ಹೆಚ್ಚಿನ ಪರಿಹಾರವನ್ನು ಕೊಡುವ ವಿಚಾರ ನಮ್ಮ ಪರಿಶೀಲನೆಯಲ್ಲಿ ಇದೆ. ಈಗಲೇ ಇಷ್ಟೇ ಎಂದು ಹೇಳುವುದಕ್ಕೆ ಬರುವುದಿಲ್ಲ. ಗಾಯಾಳುಗಳಿಗೆ ಕೂಡ ಹೆಚ್ಚಿನ ಮೊತ್ತವನ್ನು ನಮ್ಮ ಸರ್ಕಾರ ನೀಡಿದೆ. ಈ ಕರಡಿ ಆವಾಸ ಸ್ಥಾನವನ್ನು ಅಂದರೆ ಕೂಡ್ಲಗಿ ತಾಲ್ಲೂಕಿನಲ್ಲಿರುವ ಗುಡೇಕೋಟೆಯನ್ನು ಕರಡಿ ಧಾಮವಾಗಿ ಘೋಷಿಸುವ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿ ಇದೆ. ನನಗೆ ಸರಿಯಾಗಿ interpretation ಮಾಡುವುದಕ್ಕೆ ಬರುತ್ತಿಲ್ಲ. ಇದನ್ನು ವಕೀಲರಾದರೆ ಚೆನ್ನಾಗಿ ಮಾಡುತ್ತಾರೆ. ನಾನು ವಕೀಲನಲ್ಲ. ಇದರ ಬಗ್ಗೆ ಸಂಶಯದಿಂದ ಮಾತನಾಡುವುದು ಸರಿಯಲ್ಲ. ಸಂಶಯದಿಂದ ಮಾತನಾಡಿದರೂ ಕೂಡ ಅದಕ್ಕೆ ನೇರವಾದ ಉತ್ತರವನ್ನು ಕೊಡುತ್ತೇವೆ. ಇದು

ಪರಿಗಣನೆಯಲ್ಲಿ ಇದೆ ಎಂದರೆ, ಇದನ್ನು ಮಾಡುವ ಯೋಚನೆ ನಮ್ಮ ಸರ್ಕಾರದಲ್ಲಿ ಇದೆ ಎಂದು ಅರ್ಥ. ಇದರಲ್ಲಿ ತಪ್ಪೇನೂ ಇಲ್ಲ. ಇದನ್ನು ಮಾಡುತ್ತೇವೆ ಎಂಬ ಒಂದು ಭರವಸೆಯ ಮಾತನ್ನು ಇಲ್ಲಿ ಹೇಳಿದಾಗ, ಅದನ್ನು ಒಪ್ಪಿಕೊಳ್ಳಬೇಕು. ಈ ಗುಡೆಕೋಟೆ ಸುತ್ತಮುತ್ತಲಿನ ಪ್ರದೇಶಗಳು, ಕಲ್ಲುಗುಡ್ಡಗಳಿಂದ ಕೂಡಿದ್ದು, ಅವುಗಳಿಗೆ ಅರಣ್ಯ ಪ್ರದೇಶದಲ್ಲಿ ವಾಸಿಸಲು ತೊಂದರೆಯಾಗದಂತೆ ಮುನ್ನೆಚ್ಚರಿಕೆಯಾಗಿ ಈ ಪ್ರದೇಶಗಳಲ್ಲಿ ಕಲ್ಲು ಗಣಿಗಾರಿಕೆಯನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಕರಡಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಆ ಭಾಗದಲ್ಲಿ ಗಣಿಗಾರಿಕೆಯನ್ನು ನಿಷೇಧ ಮಾಡಿದೆ. ತಮ್ಮ ಪ್ರಶ್ನೆಗೆ ಪೂರಕವಾಗಿ ಉತ್ತರವನ್ನು ಕೊಟ್ಟಿದ್ದೇವೆ. ತಮಗೆ ಅನುಕೂಲಕರವಾಗಿ ಉತ್ತರವನ್ನು ಕೊಟ್ಟಿದ್ದೇವೆ. ತಾವು ನಮ್ಮ ಮೇಲೆ ವಿಶ್ವಾಸವನ್ನು ಇಟ್ಟು ಈ ಭರವಸೆಯನ್ನು ಒಪ್ಪಿಕೊಳ್ಳಬೇಕು.

**ಪರಿತ್ಯಕ್ತ ಮಹಿಳೆಯರನ್ನು 'ಮನಸ್ವಿನಿ' ಯೋಜನೆಗೆ ಸೇರಿಸುವುದು**

**1014; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ನ್ಯಾಯಾಲಯಕ್ಕೆ ಹೋಗಲು ಶಕ್ತರಲ್ಲದ, ಬಡತನ ರೇಖೆಗಿಂತ ಕೆಳಗಿರುವ ಪರಿತ್ಯಕ್ತ ಮಹಿಳೆಗೆ 'ಮನಸ್ವಿನಿ' ಯೋಜನೆಯಲ್ಲಿ ಮಾಸಾಶನ ನೀಡುವ ಯೋಜನೆ ಸರ್ಕಾರದ ಚಿಂತನೆಯಲ್ಲಿದೆಯೇ.

**ಆ)** ಇಲ್ಲದಿದ್ದರೆ, ಅದಕ್ಕೆ ಕಾರಣಗಳೇನು?

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

**ಅ)** **ಮತ್ತು ಆ)** 'ಮನಸ್ವಿನಿ' ಯೋಜನೆಯನ್ನು ಬಡತನ ರೇಖೆಗಿಂತ ಕೆಳಗಿರುವ 40 ವರ್ಷ ಮೇಲ್ಪಟ್ಟ ಅವಿವಾಹಿತ ಮಹಿಳೆಯರಿಗೆ ಹಾಗೂ ಬಡತನ ರೇಖೆಗಿಂತ ಕೆಳಗಿರುವ ವಿಚ್ಛೇದನ ಪಡೆದ ಮಹಿಳೆಯರಿಗೆ ಮಾಸಿಕ ₹ 500.00 ಗಳ ಮಾಸಾಶನ ನೀಡಲು ಹೊಸದಾಗಿ ದಿನಾಂಕ:12/07/2013 ರಂದು 2013-14ನೇ ಸಾಲಿನ ಆಯವ್ಯಯ

ಭಾಷಣದಲ್ಲಿ ಘೋಷಿಸಲಾಗಿದೆ. ಸದರಿ ಯೋಜನೆಯನ್ನು ಶೀಘ್ರವೆ ಅನುಷ್ಠಾನಗೊಳಿಸಲಾಗುವುದು.

**(ಮಾನ್ಯ ಕೃಷ್ಣಾ ಬೈರೇಗೌಡ (ಕೃಷಿ ಸಚಿವರು) ಇವರು ಕಂದಾಯ ಸಚಿವರ ಪರವಾಗಿ ಉತ್ತರವನ್ನು ನೀಡಿದರು)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಮನಸ್ವಿನಿ ಎನ್ನತಕ್ಕಂತಹ ಯೋಜನೆಯನ್ನು ಜಾರಿಗೆ ತರುವುದಾಗಿ 2013–14 ರ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿದೆ. ಈ ಮನಸ್ವಿನಿ ಯೋಜನೆಯಲ್ಲಿ. . . .

**ಸಭಾಪತಿಯವರು:–** ಅದರಲ್ಲಿ ತಪ್ಪು ಇರುವುದಕ್ಕೆ ಸಾಧ್ಯವಿಲ್ಲ. ಅದು ಒಂದನ್ನೇ ಮಾಡುವುದು. ಮಾಡುತ್ತೇವೆಂದು ಹೇಳಿದೆ. ಅದಕ್ಕೆ ಇನ್ನೇನು ಸೇರಿಸಬೇಕು ಹೇಳಿ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಪರಿತ್ಯಕ್ತ ಮಹಿಳೆಯರು ಅಂದರೆ ಗಂಡನನ್ನು ಬಿಟ್ಟವರು ಯಾರು ಇದ್ದಾರೆ ಇವರನ್ನೂ ಕೂಡ ಸೇರಿಸಬೇಕು. 40 ವರ್ಷ ಮೇಲ್ಪಟ್ಟ ಅವಿವಾಹಿತ ಮಹಿಳೆಯರಿಗೆ, ವಿಚ್ಛೇದನ ಪಡೆದ ಮಹಿಳೆಯರಿಗೆ ಮಾಸಿಕ 500.00 ರೂಪಾಯಿ ನೀಡಲಾಗುವುದು ಎಂದು ಹೇಳಿದ್ದಾರೆ. ಕೋರ್ಟಿಗೆ ಹೋಗಿ ವಿಚ್ಛೇದನ ಪಡೆಯುವುದಕ್ಕೆ ಶಕ್ತಿ ಇರತಕ್ಕಂಥಹವರು ಯಾರು ಇದ್ದಾರೆ ಅವರುಗಳು ಇದರ ಅಡಿಯಲ್ಲಿ ಬರುತ್ತಾರೆ. ಆದರೆ ಕೋರ್ಟಿಗೆ ಹೋಗುವುದಕ್ಕೆ ಅಸಹಾಯಕರಾದ ಪರಿತ್ಯಕ್ತ ಮಹಿಳೆಯರಿಗೆ ಈ ಮನಸ್ವಿನಿ ಯೋಜನೆಯಿಂದ ಪರಿಹಾರವನ್ನು ಕೊಡಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಅವರುಗಳನ್ನು ಮಕ್ಕಳು ನೋಡಿಕೊಳ್ಳುತ್ತಾರೆ.

**ಸಭಾಪತಿಯವರು:–** ಅದೆಲ್ಲಾ ಬೇಡ ಪರಿತ್ಯಕ್ತ ಮಹಿಳೆಯರು ಎಂದು ಅವರು ಹೇಳುತ್ತಿದ್ದಾರೆ. ಅವರನ್ನೂ ಇದರಲ್ಲಿ ಸೇರಿಸಿ ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಅವರೆಲ್ಲರೂ ಈ ಮಹಿಳೆಯನ್ನು ಸಾಕುತ್ತಾರಾ? ಅವೆಲ್ಲ ಬೇಡ. ಬಡತನ ರೇಖೆಗಿಂತ ಕೆಳಗೆ ಇರುವ ಪರಿತ್ಯಕ್ತ ಮಹಿಳೆಯರನ್ನು ಇದರ ಅಡಿಯಲ್ಲಿ ಸೇರಿಸಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಕೃಷ್ಣಾ ಬೈರೇಗೌಡ (ಕೃಷಿ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಅದೇ ಉದ್ದೇಶದಿಂದ ಈ ಯೋಜನೆಯನ್ನು ಘೋಷಣೆ ಮಾಡಲಾಗಿದೆ. ಆದರೆ ಈ ಯೋಜನೆಗೆ ರೂಪುರೇಷೆಗಳನ್ನು ಹಾಕಿಕೊಳ್ಳುವ ಸಂದರ್ಭದಲ್ಲಿ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ಈ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ಮಾಡುತ್ತೇವೆ. ನಾವು ಒಂದು ಕಡೆಯಲ್ಲಿ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ತಾವು ಅದನ್ನು ಒಪ್ಪುತ್ತೀರಿ ಎಂದು ಭಾವಿಸಿದ್ದೇನೆ. ಅದನ್ನು ನಾವು ತೀರಾ general ಆಗಿ ಮಾಡಿದರೆ, ಸಮಾಜದಲ್ಲಿ ಒಂದು ಒಳ್ಳೆಯದನ್ನು ಮಾಡುವುದಕ್ಕೆ ಹೋಗಿ ಇನ್ನೊಂದು ಕಡೆ ದುಷ್ಪರಿಣಾಮ ಆಗಬಾರದು. ಆದರ ಅರ್ಹತೆ ಇರುವವರಿಗೆ ಇದನ್ನು ಕೊಡುವ ಸಂದರ್ಭದಲ್ಲಿ ಯಾರ್‍ಯಾರೋ ಬಂದು ಅದನ್ನು ಉಪಯೋಗ ಮಾಡಿಕೊಳ್ಳದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ಯೋಜನೆಗೆ ರೂಪುರೇಷೆಗಳನ್ನು ಹಾಕಿಕೊಳ್ಳುವ ಸಂದರ್ಭದಲ್ಲಿ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ಈ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ಮಾಡುತ್ತೇವೆ. ಸರ್ಕಾರ ಇದರ ಪರವಾಗಿ ಸಕಾರಾತ್ಮಕವಾಗಿ ಇದೆ. ಈ ಬಗ್ಗೆ guidelines ಮಾಡುವಾಗ ವಿಚಾರ ಮಾಡಿ ಮಾಡುತ್ತೇವೆ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಚುಕ್ಕೆ ಗುರುತಿಲ್ಲದ ಸಮೂಹ 3ನೇ ಪಟ್ಟಿಯಲ್ಲಿರುವ 71 ಪ್ರಶ್ನೆಗಳ ಪೈಕಿ 64 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

## ವಾಸಕ್ಕೆ ಮೊದಲೇ ಸೋರುತ್ತಿರವ ಆಸರೆ ಮನೆಗಳು

### 38; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

**ಅ)** ಸರ್ಕಾರ ಬೆಣ್ಣೆ ಹಳ್ಳದ ಪ್ರವಾಹದಿಂದ ಸಂತ್ರಸ್ತರಾದವರಿಗೆ ಕಟ್ಟಿಸಿ ಹಸ್ತಾಂತರ ಮಾಡಿದ ಆಸರೆ ಮನೆಗಳ ಸಂಖ್ಯೆ ಎಷ್ಟು; (ಗ್ರಾಮವಾರು ಮಾಹಿತಿ ನೀಡುವುದು)

**ಆ)** ಈ ಮನೆಗಳಲ್ಲಿ ಫಲಾನುಭವಿಗಳು ವಾಸ ಮಾಡುವ ಮೊದಲೇ ಸೋರುತ್ತಿರುವ ಮನೆಗಳ ಸಂಖ್ಯೆ ಎಷ್ಟು;

**ಇ)** ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಮುಳ್ಳೊಳ್ಳಿ ಗ್ರಾಮದಲ್ಲಿ ನಿರ್ಮಿಸಿದ ಮನೆಗಳಲ್ಲಿ ಸೋರುತ್ತಿರುವ ಮನೆಗಳ ಸಂಖ್ಯೆ ಎಷ್ಟು;

**ಈ)** ಈ ಮನೆಗಳನ್ನು ದುರಸ್ಥಿ ಮಾಡಿಸಿ ಫಲಾನುಭವಿಗಳಿಗೆ ಯಾವಾಗ ಹಸ್ತಾಂತರ ಮಾಡಲಾಗುವುದು?

### ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

**ಅ)** ಬೆಣ್ಣೆ ಹಳ್ಳ ಪ್ರವಾಹ ಸಂತ್ರಸ್ಥರಿಗೆ ಹಸ್ತಾಂತರ ಮಾಡಿದ ಆಸರೆ ಮನೆಗಳ ಸಂಖ್ಯೆ – 14,120 ಗ್ರಾಮವಾರು ವಿವರ ಕೆಳಕಂಡಂತಿದೆ:

| | | | |
|---|---|---|---|
| 1. | ಕೊಂಗವಾಡ | – | 420 |
| 2. | ಅರಹಟ್ಟಿ | – | 269 |
| 3. | ಬಸವಾಪೂರ | – | 370 |
| 4. | ಗುಡಿಸಾಗರ | – | 232 |
| 5. | ಅಮರಗೊಳ | – | 150 |
| 6. | ಆಹೆಟ್ಟಿ | – | 55 |
| 7. | ಮುಳ್ಳೊಳ್ಳಿ | – | 320 |

| | | | |
|---|---|---|---|
| 8. | ಸುರಕೋಡ | – | 648 |
| 9. | ಕುರ್ಲಗೇರಿ | – | 458 |
| 10. | ವೈ.ಎಸ್. ಹಡಗಲಿ | – | 593 |
| 11. | ಮಾಳವಾಡ | – | 605 |
| | **ಒಟ್ಟು** | | **4,120** |

**ಆ)** ಇರುವುದಿಲ್ಲ

**ಇ)** 28 ದುರಸ್ಥಿ ಕಾರ್ಯಕ್ಕೆ ಕೈಗೊಳ್ಳಲಾಗಿದೆ.

**ಈ)** ಈಗಾಗಲೇ ಮನೆಗಳನ್ನು ದುರಸ್ಥಿ ಮಾಡಿಸಿ ದಿನಾಂಕ 15/09/2012 ರಂದು ಫಲಾನುಭವಿಗಳಿಗೆ ಹಸ್ತಾಂತರ ಮಾಡಲಾಗಿದೆ.

## ಸಕ್ಕರೆ ಕಾರ್ಖಾನೆಗಳಲ್ಲಿ ಮೂಲಭೂತ ಸೌಕರ್ಯಗಳು

## 917; ಶ್ರೀ ಬಿ. ರಾಮಕೃಷ್ಣ (ಸ್ಥ.ಸಂ. ಕ್ಷೇತ್ರ)

**1)** ಮಂಡ್ಯ ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು? ಮತ್ತು ಅವು ಯಾವುವು? (ವಿವರಗಳನ್ನು ನೀಡುವುದು)

**2)** ಈ ಕಾರ್ಖಾನೆಗಳಿಗೆ ಕಬ್ಬು ಸಾಗಿಸುವ ರೈತರಿಗೆ ಉಳಿದುಕೊಳ್ಳಲು, ಕುಡಿಯುವ ನೀರು, ಶೌಚಾಲಯ ಮತ್ತು ಊಟ ತಿಂಡಿಗಳಿಗೆ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**3)** ಹಾಗಿದ್ದಲ್ಲಿ, ಈ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)**

1) ಮಂಡ್ಯ ಜಿಲ್ಲೆಯಲ್ಲಿ 1 (ಒಂದು) ಸರ್ಕಾರಿ ಮತ್ತು 3 (ಮೂರು) ಖಾಸಗಿ ಸಕ್ಕರೆ ಕಾರ್ಖಾನೆಗಳು ಇರುತ್ತವೆ. ವಿವರ ಕೆಳಕಂಡಂತೆ ಇದೆ.

| ಕ್ರ.ಸಂ. | ಕಾರ್ಖಾನೆಯ ಹೆಸರು | ವಲಯ |
|---|---|---|
| 1 | ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ | ಸರ್ಕಾರಿ ವಲಯ |
| 2 | ಚಾಮುಂಡೇಶ್ವರಿ ಶುಗರ್ಸ್, ಕೆ.ಎಂ. ದೊಡ್ಡಿ | ಖಾಸಗಿ |
| 3 | ಕೋರಮಂಡಲ್ ಶುಗರ್ಸ್ ಲಿ., ಕೆ.ಆರ್. ಪೇಟೆ | ಖಾಸಗಿ |
| 4 | ಎನ್.ಎಸ್.ಎಲ್. ಶುಗರ್ಸ್ ಲಿ., ಕೊಪ್ಪ | ಖಾಸಗಿ |

2) ಕಬ್ಬು ಸಾಗಿಸುವ ರೈತರಿಗೆ ಉಳಿದುಕೊಳ್ಳಲು, ಕುಡಿಯುವ ನೀರು, ಶೌಚಾಲಯ ಮತ್ತು ಊಟ ತಿಂಡಿಗಳಿಗೆ ಸಂಬಂಧಪಟ್ಟ ಕಾರ್ಖಾನೆಗಳು ವ್ಯವಸ್ಥೆ ಕಲ್ಪಿಸಿರುತ್ತವೆ.

3) ಸಂಬಂಧಪಟ್ಟ ಕಾರ್ಖಾನೆಗಳು ಮೇಲಿನ ಸೌಲಭ್ಯಗಳನ್ನು ಕಲ್ಪಿಸಿರುವುದರಿಂದ ಸರ್ಕಾರ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

## ರೈತರಿಗೆ ಬಾಕಿ ಹಣ ಪಾವತಿ

## 916; ಶ್ರೀ ಬಿ. ರಾಮಕೃಷ್ಣ

1) ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿರುವ ರೈತರುಗಳಿಗೆ ಇದುವರೆವಿಗೂ ಬಾಕಿ ಹಣ ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಎಷ್ಟು ಕಾರ್ಖಾನೆಗಳು ಬಾಕಿ ಹಣ ಪಾವತಿ ಮಾಡಬೇಕು? (ಕಾರ್ಖಾನೆವಾರು ಪೂರ್ಣ ಮಾಹಿತಿ ನೀಡುವುದು)

**3)** ರೈತರಿಗೆ ಸಕ್ಕರೆ ಕಾರ್ಖಾನೆಯವರು ಸಕಾಲದಲ್ಲಿ ಬಾಕಿ ಹಣ ಪಾವತಿ ಮಾಡಲು ಸರ್ಕಾರ ನಿರ್ದೇಶನವನ್ನೇನಾದರೂ ನೀಡುವುದೇ?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)**

**1)** ಮಂಡ್ಯ ಜಿಲ್ಲೆಯ 5 ಸಕ್ಕರೆ ಕಾರ್ಖಾನೆಗಳ ಪೈಕಿ 3 ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿರುವ ರೈತರಿಗೆ ಬಾಕಿ ಹಣ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

**2)** ದಿನಾಂಕ: 15.07.2013 ರಲ್ಲಿದ್ದಂತೆ ಕಾರ್ಖಾನೆವಾರು ವಿವರವನ್ನು ಕೆಳಗೆ ನೀಡಿದೆ:

**(₹ ಲಕ್ಷಗಳಲ್ಲಿ)**

| ಕ್ರ.ಸಂ. | ಕಾರ್ಖಾನೆ ಹೆಸರು | 2012–13ನೇ ಸಾಲಿನ ಬಾಕಿ | ಹಿಂದಿನ ಬಾಕಿ | ಒಟ್ಟು ಬಾಕಿ |
|---|---|---|---|---|
| 1 | ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ | 567 | 44 | 611 |
| 2 | ಪಾಂಡವಪುರ, ಸಸಕಾನಿ., ಪಾಂಡವಪುರ | 0 | 256 | 256 |
| 3 | ಎನ್ಎಸ್ಎಲ್, (ಎಸ್‌ಸಿಎಂ) ಶುಗರ್ಸ್, ಕೊಪ್ಪ | 465 | 0 | 465 |
| | **ಒಟ್ಟು** | **1032** | **300** | **1332** |

**3)** ಕಬ್ಬು (ನಿಯಂತ್ರಣ) ಆದೇಶ, 1966ರ ಕಲಂ 3(3ಎ) ರ ಪ್ರಕಾರ ಬಾಕಿ ಹಣ ಪಾವತಿಸುವಂತೆ ಸಂಬಂಧಪಟ್ಟ ಕಾರ್ಖಾನೆಗಳಿಗೆ ಈಗಾಗಲೇ ನೋಟೀಸ್ ನೀಡಲಾಗಿದೆ. ಒಂದು ವೇಳೆ ಬಾಕಿ ಮೊತ್ತವನ್ನು ಕೂಡಲೆ ಪಾವತಿಸದೆ ಹೋದಲ್ಲಿ ಕಬ್ಬು (ನಿಯಂತ್ರಣ) ಆದೇಶ 1966ರ ಕಲಂ 3(8)ರ ಅಡಿಯಲ್ಲಿ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನೀಡಿ ಬಾಕಿಯನ್ನು ವಸೂಲ್ಮಾಡಲಾಗುವುದು.

## ಬಳ್ಳಾರಿ ಜಿಲ್ಲೆಯಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮ

**388; ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಬಳ್ಳಾರಿ ಜಿಲ್ಲೆಯಲ್ಲಿ ಅರಣ್ಯ ಬೆಳೆಸಲು ಗಿಡ ನೆಡುವ ಕಾರ್ಯಕ್ರಮಕ್ಕೆ ಬಿಡುಗಡೆಯಾಗಿರುವ ಮೊತ್ತವೆಷ್ಟು;

ಆ) ಈ ಮೊತ್ತವನ್ನು ಸಂಪೂರ್ಣ ಉಪಯೋಗಿಸಲಾಗಿದೆಯೇ; ಹಾಗಿದ್ದಲ್ಲಿ ಉಪಯೋಗದ ವಿವರ ನೀಡುವುದು;

ಇ) ಈ ಕಾರ್ಯಕ್ರಮನ್ನು ಎಲ್ಲೆಲ್ಲಿ ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು)

**ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) 2012–13ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಅರಣ್ಯ ಬೆಳೆಸಲು ಗಿಡ ನೆಡುವ ಕಾರ್ಯಕ್ರಮಕ್ಕೆ ವಿವಿಧ ಶೀರ್ಷಿಕೆಗಳಡಿ ಬಿಡುಗಡೆಯಾದ ಒಟ್ಟು ಮೊತ್ತ **₹ 1121.27 ಲಕ್ಷಗಳು**

ಆ) ಮೇಲ್ಕಂಡ ಸಂಪೂರ್ಣ ಮೊತ್ತವನ್ನು ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಗಿಡ ನೆಡುವುದರ ಮೂಲಕ ನೆಡುತೋಪು ಬೆಳೆಸಲು ಕ್ರಮಕೈಗೊಳ್ಳಲಾಗಿದೆ. ಹಳೆಯ ನೆಡುತೋಪುಗಳ ಪೋಷಣಾ ಕಾರ್ಯ ಮಾಡಲಾಗುತ್ತಿದೆ. ಅಲ್ಲದೆ ಮಣ್ಣು ಮತ್ತು ಸಂರಕ್ಷಣೆ, ಜಾನುವಾರು ಕಂದಕಗಳ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಮೇಲೆ ತಿಳಿಸಿದ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

| Sl No | Scheme | Name of the District | Formation of plantation | | Maint.of 1 year plantation | | Maint.of 2 year plantation. | | Maint.of 3 & 4 year plantation | | Advance Work | | Other works CPT/SMC/TRG/Buildings etc. | | TOTAL | |
|---|---|---|---|---|---|---|---|---|---|---|---|---|---|---|---|---|
| | | | Phy. | Fin. | Phy. | Fin. | Phy. | Fin. | Phy. | Fin. | Phy. | Fin. | Phy. | Fin. | Phy. | Fin. |
| 1 | 2 | 3 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | | | | | | | **Bellary (T) DIVISION** | | | | | | | | | |
| 1 | Development Degraded Forest | Bellary | 20.000 | 2.175 | 0.000 | 0.000 | 140.000 | 8.415 | 0.000 | 0.000 | 0.000 | 0.000 | | 0.265 | 0.000 | 10.855 |
| 2 | Greening of Urban Area | Bellary | 62.000 | 22.000 | 13.000 | 3.000 | 75.000 | 1.000 | 0.000 | 0.000 | 10.000 | 1.272 | | 1.000 | 0.000 | 28.272 |
| 3 | C.O. Protection from fire | Bellary | 5000.000 | 1.505 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 0.000 | 0.000 | 1.505 |
| 4 | 13th Finance Comm. | Bellary | 40.000 | 5.316 | 75.000 | 5.040 | 10.000 | 0.335 | 0.000 | 0.000 | 0.000 | 0.000 | | 43.3189 | 0.000 | 54.010 |
| 5 | KFDF-03 | Bellary | 1285.000 | 245.028 | 558.000 | 35.130 | 45.000 | 2.565 | 0.000 | 0.000 | 442.500 | 111.302 | | 15.265 | 0.000 | 409.290 |
| 6 | NAP-FDA | Bellary | 180.000 | 9.316 | 0.000 | 0.000 | 0.000 | 0.000 | 100.000 | 0.000 | 0.000 | 0.000 | | 0.000 | 280.00 | 9.316 |
| 7 | MPCA | Bellary | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 2.000 | 0.000 | 2.000 |
| 8 | CAMPA | Bellary | 810.880 | 87.000 | 811.280 | 45.000 | 0.000 | 0.000 | 179.000 | 0.000 | 455.600 | 125.240 | | 0.000 | 2173.0 | 257.240 |
| 9 | RSPD | Bellary | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 30.017 | 0.000 | 30.017 |
| 10 | IFM | Bellary | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 32.056 | 0.000 | 32.056 |
| 11 | KIADB | Bellary | 0.000 | 0.000 | 21.750 | 6.560 | 0.000 | 0.000 | 0.000 | 0.000 | 0.000 | 0.000 | | 0.000 | 0.000 | 6.560 |
| 12 | Sandal Cultivation | Bellary | 20.000 | 1.840 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 1.902 | 0.000 | 3.742 |
| 13 | Roadside plantation-139 | Bellary | 40.000 | 15.960 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 1.360 | 0.000 | 17.320 |
| 14 | Daivivana | Bellary | 75.000 | 12.300 | 25.000 | 1.500 | 0.000 | 0.000 | 0.000 | 0.000 | 0.000 | 0.000 | | 22.200 | 0.000 | 36.000 |
| 15 | Roadside plantation -422-SCP | Bellary | 35.000 | 13.964 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 0.308 | 0.000 | 14.272 |
| 16 | Roadside plantation -423-TSP | Bellary | 17.250 | 6.883 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 0.000 | 0.000 | 6.883 |
| 17 | MMSV | Bellary | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | 0.000 | | 1.962 | 0.000 | 1.962 |
| 18 | JBIC-KSFMBC-139-MW | Bellary | 0.000 | 0.000 | 0.000 | 0.000 | 1825.000 | 59.318 | 1235.000 | 27.486 | 0.000 | 0.000 | | 0.000 | 3060.0 | 86.804 |
| 19 | Samrudha Hasiru Yojane | Bellary | - | - | 15.000 | 0.439 | 0.000 | 0.000 | 0.000 | 0.000 | 0.000 | 0.000 | | 0.011 | 990.0 | 0.450 |
| | (T) Division Total | | 7585.130 | 423.287 | 1519.030 | 96.669 | 2095.000 | 71.633 | 1514.000 | 27.486 | 908.100 | 237.814 | | 151.664 | 6503.000 | 1008.663 |
| | | | | | | | **Bellary SF DIVISION** | | | | | | | | | |
| 1 | SDP | Bellary | 180.86 | 45.478 | 0 | 0 | 283 | 12.5364 | 185.06 | 7.6265 | 150 | 23.1294 | | 11.23 | 0 | 100 |
| 2 | RSPD-139 MW | | 40 | 11.534 | 0 | 0 | 0 | 0 | 0 | 0 | 0 | 0 | | 1.188 | 38 | 12.722 |
| | (SF) Division Total | | 220.86 | 57.012 | 0 | 0.00 | 283.00 | 12.5364 | 185.06 | 7.6265 | 150 | 23.1294 | | 12.418 | 38 | 112.722 |
| | District Total | | 7805.99 | 480.30 | 1519.03 | 96.67 | 2378.00 | 84.17 | 1699.06 | 35.11 | 1058.10 | 260.94 | | 164.08 | 6541 | 1121.27 |

**ಹೊಸ ತಾಲ್ಲೂಕುಗಳ ರಚನೆ**

**339; ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಈ ಹಿಂದಿನ ಸರ್ಕಾರ ಘೋಷಿಸಿದಂತೆ ಹೊಸ ತಾಲ್ಲೂಕುಗಳನ್ನು ರಚಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಕಂಪ್ಲಿ, ಕುರುಗೋಡ ಮತ್ತು ಕೊಟ್ಟೂರು (ಬಳ್ಳಾರಿ ಜಿಲ್ಲೆ) ಗಳಿಗೆ ಏನಾದರೂ ವಿಶೇಷ ಅನುದಾನ ಬಿಡುಗಡೆ ಗೊಳಿಸಲಾಗುತ್ತದೆಯೇ; (ವಿಶೇಷ ಅನುದಾನದ ವಿವರ ನೀಡುವುದು)

ಇ) ಹಾಗಿದ್ದಲ್ಲಿ ವಿಶೇಷ ಅನುದಾನ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಯಾವ ಕಾಲಮಿತಿಯಲ್ಲಿ ಒದಗಿಸುತ್ತದೆ?

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)**

ಅ) ಇಲ್ಲ.

ಆ) ದಿ:12-7-2013ನೇ ಸಾಲಿನಲ್ಲಿ ಮಂಡಿಸಲಾದ 2013-14ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.

ಇ) ಎಲ್ಲಾ ದೃಷ್ಟಿಕೋನಗಳಿಂದ ಪರಾಮರ್ಶಿಸಿ ಹಂತ ಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ತದನಂತರ ಮೂಲಭೂತ ಸೌಕರ್ಯ ಒದಗಿಸಲು ಅಗತ್ಯ ಕ್ರಮ ವಹಿಸಲಾಗುವುದು.

**ಐ.ಟಿ.ಐ ಗೆ ಸಂಬಂಧಿಸಿದಂತೆ ಶ್ರೀ ಥಾಮಸ್ ವರದಿ ಅನುಷ್ಠಾನದ ಬಗ್ಗೆ**

**607; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

ಅ) ಐ.ಟಿ.ಐ. ಗೆ ಸಂಬಂಧಪಟ್ಟ ಶ್ರೀ ಥಾಮಸ್ ವರದಿ ಅನುಷ್ಠಾನದ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಆ) ಥಾಮಸ್ ವರದಿ ಜಾರಿಗೆ ಇರುವ ಅಡೆತಡೆಗಳೇನು?

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಕಾರ್ಮಿಕ ರಾಜ್ಯ ಸಚಿವರು.)**

**ಅ)** ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಮುಖ್ಯ ಶಿಫಾರಸ್ಸುಗಳ ಪೈಕಿ ಈಗಾಗಲೇ ಶೇ. 100 ರಷ್ಟು ಅನುದಾನವನ್ನು ಅನುದಾನಿತ ಐಟಿಐಗಳ ಸಿಬ್ಬಂದಿಗಳಿಗೆ ನೀಡಲಾಗುತ್ತಿದೆ. ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಪದ್ದತಿಯನ್ನು ಸಹ ಜಾರಿಗೊಳಿಸಲಾಗಿದೆ. ಪರೀಕ್ಷೆಯ ಸುಧಾರಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಶ್ರೀ ಪಿ.ಎಸ್.ಎಸ್.ಥಾಮಸ್ ವರದಿಯ ಶಿಫಾರಸ್ಸಿನಲ್ಲಿರುವಂತೆ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ ಆರ್ಥಿಕ ಇಲಾಖೆಯು ಷರತ್ತುಗಳೊಂದಿಗೆ ನೀಡಿರುವ ಅಭಿಪ್ರಾಯ ಹಾಗೂ ಶಿಕ್ಷಣ ಇಲಾಖೆಯಲ್ಲಿ ಜಾರಿಯಲ್ಲಿರುವ ಪಿಂಚಣಿ ಪದ್ಧತಿಯ ಮಾದರಿಯಲ್ಲಿ ಪಿಂಚಣಿ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಇನ್ನಿತರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆರ್ಥಿಕ ಇಲಾಖೆಯ ಸಹಮತಿ ಅಗತ್ಯವಿದೆ.

**ಆ)** ಥಾಮಸ್ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು ಅಂತಿಮ ನಿರ್ಧಾರ ಕೈಗೊಳ್ಳಬೇಕಿರುವುದರಿಂದ ಆ ಪ್ರಕ್ರಿಯೆಗೆ ಕಾಲಾವಕಾಶದ ಅಗತ್ಯವಿರುತ್ತದೆ.

## ಬಿಜಾಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಸಣ್ಣಕೈಗಾರಿಕೆಗಳು

## 894(1158); ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)

**ಅ)** ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಲಾಗಿದೆ;

**ಆ)** ಅಭಿವೃದ್ಧಿಪಡಿಸಿದ ಒಟ್ಟು ಕೈಗಾರಿಕಾ ನಿವೇಶನಗಳು ಎಷ್ಟು;

**ಇ)** ಹಂಚಿಕೆಯಾದ ನಿವೇಶನಗಳು ಎಷ್ಟು ಮತ್ತು ಅವು ಯಾವುವು;

**ಈ)** ಹಂಚಿಕೆಯಾಗದೆ ಬಾಕಿ ಉಳಿದಿರುವ ನಿವೇಶನಗಳು ಎಷ್ಟು ಮತ್ತು ಯಾವುವು? (ವಸಾಹತುಗಳ ಸಹಿತ ವಿವರ ನೀಡುವುದು)

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಹಾಗೂ ಸಕ್ಕರೆ ಸಚಿವರು)**

**ಅ)** ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಾಹತುಗಳ ವಿವರಗಳು ಈ ಕೆಳಕಂಡಂತಿವೆ.

| **ಜಿಲ್ಲೆ** | **ತಾಲೂಕು** | **ಕೈಗಾರಿಕಾ ವಸಾಹತು** |
|---|---|---|
| ಬಿಜಾಪುರ | ಬಿಜಾಪುರ | ಬಿಜಾಪುರ ಮತ್ತು ಮಹಾಲ್ ಬಾಗಾಯಿತ್ |
| | ಮುದ್ದೇಬಿಹಾಳ | ಮುದ್ದೇಬಿಹಾಳ |
| | ಸಿಂಧಗಿ | ಸಿಂಧಗಿ |
| ಬಾಗಲಕೋಟೆ | ಬಾಗಲಕೋಟೆ | ಬಾಗಲಕೋಟೆ ಮತ್ತು ನವನಗರ |
| | ಮುಧೋಳ | ಮುಧೋಳ |
| | ಜಮಖಂಡಿ | ಜಮಖಂಡಿ |
| | ಹುನಗುಂದ | ಹುನಗುಂದ |
| ಬೆಳಗಾವಿ | ಬೆಳಗಾವಿ | 1. ಉದ್ಯಮಬಾಗ್,<br>2. ಅನಗೋಳ,<br>3. ಅನಗೋಳ 2ನೇ ಹಂತ<br>4. ಕಣಬರಗಿ<br>5. ಕಂಗ್ರಾಳಿ ಬಿಕೆ<br>6. ದೇಸೂರು |
| | ಖಾನಾಪುರ | ಖಾನಾಪುರ |
| | ಚಿಕ್ಕೋಡಿ | ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ |
| | ಗೋಕಾಕ್ | ಗೋಕಾಕ್ |
| | ಬೈಲಹೊಂಗಲ | ಬೈಲಹೊಂಗಲ |
| | ರಾಮದುರ್ಗ | ರಾಮದುರ್ಗ |
| | ಅಥಣಿ | ಅಥಣಿ |

ಆ)

1. ಬಿಜಾಪುರ ಜಿಲ್ಲೆ : 262 ನಿವೇಶನಗಳು

2. ಬಾಗಲಕೋಟೆ ಜಿಲ್ಲೆ : 254 ನಿವೇಶನಗಳು

3. ಬೆಳಗಾವಿ ಜಿಲ್ಲೆ : 370 ನಿವೇಶನಗಳು

ಇ)

1. ಬಿಜಾಪುರ ಜಿಲ್ಲೆ : 117 ನಿವೇಶನಗಳು

2. ಬಾಗಲಕೋಟೆ ಜಿಲ್ಲೆ : 196 ನಿವೇಶನಗಳು

3. ಬೆಳಗಾವಿ ಜಿಲ್ಲೆ : 270 ನಿವೇಶನಗಳು

ಈ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ, ಜಿಲ್ಲೆಗಳಲ್ಲಿ ಒಟ್ಟು 303 ಕೈಗಾರಿಕಾ ನಿವೇಶನಗಳು ಖಾಲಿ ಇವೆ. ವಿವರಗಳು ಕೆಳಕಂಡಂತಿವೆ.

| ಜಿಲ್ಲೆ | ಕೈಗಾರಿಕಾ ವಸಾಹತು | ಖಾಲಿ ಇರುವ ನಿವೇಶನಗಳು |
|---|---|---|
| ಬಿಜಾಪುರ | ಬಿಜಾಪುರ | 8 (ವಿಶೇಷ ಮಾದರಿ) |
| | ಮುದ್ದೇಬಿಹಾಳ | 37 (ಕ್ಯೂ ಮಾದರಿ – 8; ಆರ್ ಮಾದರಿ – 18, ವಿಶೇಷ ಮಾದರಿ – 11) |
| | ಸಿಂಧಗಿ | 100 (ಕ್ಯೂ ಮಾದರಿ – 21, ಆರ್ ಮಾದರಿ – 65; ವಿಶೇಷ ಮಾದರಿ – 14) |
| ಬಾಗಲಕೋಟೆ | ನವನಗರ | 55 (ಕ್ಯೂ ಮಾದರಿ – 9; ಆರ್ ಮಾದರಿ – 39; ಪಿ ಮಾದರಿ – 5; ವಿಶೇಷ ಮಾದರಿ – 2) |
| | ಹುನಗುಂದ | 3 (ವಿಶೇಷ ಮಾದರಿ) |
| ಬೆಳಗಾವಿ | ಉದ್ಯಮಬಾಗ | 3 (ಎಂ ಮಾದರಿ – 2; ವಿಶೇಷ ಮಾದರಿ – 1) |
| | ಕಣಬರಗಿ | 1 (ಆರ್ ಮಾದರಿ) |
| | ಖಾನಾಪುರ | 2 (ವಿಶೇಷ ಮಾದರಿ) |
| | ಗೋಕಾಕ | 1 (ಆರ್ ಮಾದರಿ) |
| | ದೇಸೂರು | 41 (ಎ ಮಾದರಿ – 16; ಬಿ ಮಾದರಿ – 12, ವಿಶೇಷ ಮಾದರಿ – 13) |
| | ಅಥಣಿ | 52 (ಕ್ಯೂ ಮಾದರಿ – 17; ಆರ್ ಮಾದರಿ – 13, ಎಸ್ ಮಾದರಿ – 22) |

## ಮುಜರಾಯಿ ಇಲಾಖೆಯಡಿ ಇರುವ ದೇವಸ್ಥಾನಗಳ ಆದಾಯ

### 1157; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆ ಅಡಿಯಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು;

ಆ) ಅವುಗಳಿಂದ ಸರ್ಕಾರಕ್ಕೆ ಜಮಾ ಆಗುವ ವಾರ್ಷಿಕ ಆದಾಯವೆಷ್ಟು;

ಇ) ₹ 1.00 ಲಕ್ಷಕ್ಕೂ ಹೆಚ್ಚು ಆದಾಯವಿರುವ ದೇವಸ್ಥಾನಗಳೆಷ್ಟು; ಹಾಗೂ ಇಂತಹ ದೇವಸ್ಥಾನಗಳ ವಿವಿಧ ಖಾತೆಗಳಲ್ಲಿರುವ ಜಮಾ ಹಣವೆಷ್ಟು;

### ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಟ್ಟು 34331 ಅಧಿಸೂಚಿತ ಸಂಸ್ಥೆಗಳು ಇರುತ್ತವೆ.

ಆ) ಅಧಿಸೂಚಿತ ದೇವಾಲಯಗಳನ್ನು **"ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾಧಾಯ ದತ್ತಿಗಳ ನಿಯಮಗಳು 2002"** ನಿಯಮ 3ರ ಅನ್ವಯ ವಾರ್ಷಿಕ ವರಮಾನಕ್ಕನುಗುಣವಾಗಿ ಈ ಕೆಳಕಂಡಂತೆ ವರ್ಗೀಕರಣ ಮಾಡಲಾಗಿರುತ್ತದೆ.

| | |
|---|---|
| ಪ್ರವರ್ಗ 'ಎ' – 125 ಸಂಸ್ಥೆಗಳು | (ವಾರ್ಷಿಕ ವರಮಾನವು ₹ 25.00 ಲಕ್ಷ ಮತ್ತು ₹ 25.00 ಲಕ್ಷಕ್ಕಿಂತ ಹೆಚ್ಚಿರುವ ಸಂಸ್ಥೆಗಳು) |
| ಪ್ರವರ್ಗ 'ಬಿ' – 179 ಸಂಸ್ಥೆಗಳು | (ವಾರ್ಷಿಕ ವರಮಾನವು ₹ 5.00 ಲಕ್ಷಕ್ಕಿಂತ ಹೆಚ್ಚು ಮತ್ತು ₹ 25.00 ಲಕ್ಷದೊಳಗೆ) |
| ಪ್ರವರ್ಗ 'ಸಿ' – 34027 ಸಂಸ್ಥೆಗಳು | (ವಾರ್ಷಿಕ ವರಮಾನವು ₹ 5.00 ಲಕ್ಷದೊಳಗೆ) |

ಕಾಯ್ದೆಯ ಪ್ರಕಾರ ಆಯಾಯ ದೇವಸ್ಥಾನಗಳ ಆದಾಯವನ್ನು ಆಯಾಯ ದೇವಸ್ಥಾನಗಳ ಖಾತೆಗೆ ಜಮಾ ಮಾಡಲಾಗುತ್ತಿದ್ದು, ಸದರಿ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿಲ್ಲ.

ಇ) **"ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾಧಾಯ ದತ್ತಿಗಳ ನಿಯಮಗಳು 2002"** ರ ನಿಯಮ 3ರ ಅನ್ವಯ ಅಧಿಸೂಚಿತ ಸಂಸ್ಥೆಗಳನ್ನು ಅವುಗಳ ವಾರ್ಷಿಕ ಆದಾಯಕ್ಕನುಗುಣವಾಗಿ ಸಮೂಹ 'ಎ', 'ಬಿ' ಮತ್ತು 'ಸಿ' ವರ್ಗದ ಅಧಿಸೂಚಿತ ಸಂಸ್ಥೆಗಳೆಂದು ವರ್ಗೀಕರಿಸಲಾಗಿದ್ದು, ಇವುಗಳಿಗೆ ಅನುಕ್ರಮವಾಗಿ ಧಾರ್ಮಿಕ ಮತ್ತು ದತ್ತಿ ಆಯುಕ್ತರು, ಜಿಲ್ಲಾಧಿಕಾರಿಗಳು, ಮತ್ತು ಸಹಾಯಕ ಆಯುಕ್ತರು / ಉಪವಿಭಾಗಾಧಿಕಾರಿಗಳು ನಿಯಮಿಸಲಾದ ಪ್ರಾಧಿಕಾರವಾಗಿರುತ್ತಾರೆ.

| **ಪ್ರವರ್ಗ** | **ವಾರ್ಷಿಕ ವರಮಾನ** | **ನಿಯಮಿಸಲಾದ ಪ್ರಾಧಿಕಾರ** |
|---|---|---|
| ಪ್ರವರ್ಗ 'ಎ' – 125 ಸಂಸ್ಥೆಗಳು | (ವಾರ್ಷಿಕ ವರಮಾನವು ₹ 25.00 ಲಕ್ಷ ಮತ್ತು ₹ 25.00 ಲಕ್ಷಕ್ಕಿಂತ ಹೆಚ್ಚಿರುವ ಸಂಸ್ಥೆಗಳು) | ಧಾರ್ಮಿಕ ಮತ್ತು ದತ್ತಿ ಆಯುಕ್ತರು |
| ಪ್ರವರ್ಗ 'ಬಿ' – 179 ಸಂಸ್ಥೆಗಳು | (ವಾರ್ಷಿಕ ವರಮಾನವು ₹ 5.00 ಲಕ್ಷಕ್ಕಿಂತ ಹೆಚ್ಚು ಮತ್ತು ₹ 25.00 ಲಕ್ಷದೊಳಗೆ) | ಜಿಲ್ಲಾಧಿಕಾರಿಗಳು |
| ಪ್ರವರ್ಗ 'ಸಿ' – 34027 ಸಂಸ್ಥೆಗಳು | (ವಾರ್ಷಿಕ ವರಮಾನವು ₹ 5.00 ಲಕ್ಷದೊಳಗೆ) | ಸಹಾಯಕ ಆಯುಕ್ತರು / ಉಪವಿಭಾಗಾಧಿಕಾರಿಗಳು |

179 ಸಂಸ್ಥೆಗಳು ಸಮೂಹ 'ಬಿ' ವರ್ಗಕ್ಕೂ, 34027 ದೇವಸ್ಥಾನಗಳು ಸಮೂಹ 'ಸಿ' ವರ್ಗಕ್ಕೂ ಸೇರಿದ್ದು, ಇವುಗಳಲ್ಲಿ ₹ 1.00 ಲಕ್ಷ ಮೇಲ್ಪಟ್ಟ ಆದಾಯವಿರುವ ಸಂಸ್ಥೆಗಳು ಹಾಗೂ ಅವುಗಳ ಖಾತೆಗಳಲ್ಲಿರುವ ಹಣದ ವಿವರವನ್ನು ನಿಯಮಿಸಲಾದ ಪ್ರಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು / ಉಪವಿಭಾಗಾಧಿಕಾರಿಗಳಿಂದಲೂ ಹಾಗೂ ಸಮೂಹ 'ಎ' ವರ್ಗದ

ಅಧಿಸೂಚಿತ ದೇವಾಲಯಗಳ ಖಾತೆಗಳಲ್ಲಿರುವ ಹಣದ ವಿವರವನ್ನು ಆಯಾಯ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳು / ಜಿಲ್ಲಾಧಿಕಾರಿಗಳಿಂದಲೂ ಸಂಗ್ರಹಿಸಿ ಮಾನ್ಯ ಶಾಸಕರಿಗೆ ನೇರವಾಗಿ ಒದಗಿಸಲಾಗುವುದು.

**ಬಿಜಾಪುರ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ**

**897(1160); ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

ಅ) ಬಿಜಾಪುರ ಜಿಲ್ಲೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ (IEM) ಬಂದಿರುವ ಪ್ರಸ್ತಾವನೆಗಳೆಷ್ಟು; ಅವು ಯಾವುವು;

ಆ) ಈಗಾಗಲೇ ಇರುವ ಸಕ್ಕರೆ ಕಾರ್ಖಾನೆಗಳು ಯಾವುವು?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)**

**ಅ) ಬಿಜಾಪುರ ಜಿಲ್ಲೆಯಲ್ಲಿ ಈ ಕೆಳಕಂಡ 10 ಹೊಸ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದಿಂದ ಕೈಗಾರಿಕಾ ಉದ್ಯಮಿಯ ಜ್ಞಾಪಕ ಪತ್ರ (IEM) ಪಡೆದಿರುತ್ತವೆ:–**

| ಕ್ರ.ಸಂ. | ಕಾರ್ಖಾನೆಯ ಹೆಸರು | ಗ್ರಾಮ | ತಾಲ್ಲೂಕು |
|---|---|---|---|
| 1 | ಬಸವೇಶ್ವರ ಶುಗರ್ಸ್ | ಕಾರಜೋಳ | ಬಿಜಾಪುರ |
| 2 | ಶಾರದಾ ಶುಗರ್ಸ್ | ಕೊಡಗಾನೂರು | ಬಸವನಬಾಗೇವಾಡಿ |
| 3 | ಸೋಮೇಶ್ವರ ಶುಗರ್ಸ್ | ಸಂಗಾಪುರ | ಬಿಜಾಪುರ |
| 4 | ಎಂ.ಎಸ್. ಪಾಟೀಲ್ ಶುಗರ್ಸ್ | ನಿಂಬಾಳ ಬಿ.ಕೆ. | ಇಂಡಿ |
| 5 | ಜಮಖಂಡಿ ಶುಗರ್ಸ್ | ನಾದ್ ಕೆ.ಡಿ. | ಇಂಡಿ |
| 6 | ಸೌರ್ವಭೌಮ ಶುಗರ್ಸ್ | ಚಟ್ಟರಕಿ | ಸಿಂಧಗಿ |
| 7 | ಬಾಲಾಜಿ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿ., | ಯರಗಲ್, | ಮುದ್ದೆಬಿಹಾಳ್ |

| | | | |
|---|---|---|---|
| 8 | ಬೆಳಗಾಂ ಶುಗರ್ಸ್ ಲಿ., | ಹೊನವಾಡ | ಬಿಜಾಪುರ |

**ಆ)** ಬಿಜಾಪುರ ಜಿಲ್ಲೆಯಲ್ಲಿ ಒಟ್ಟು ಐದು ಸಕ್ಕರೆ ಕಾರ್ಖಾನೆಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ:–

| **ಕ್ರ.ಸಂ.** | **ಕಾರ್ಖಾನೆಯ ಹೆಸರು ಮತ್ತು ವಿಳಾಸ** | **ವಲಯ** |
|---|---|---|
| 1 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಕೃಷ್ಣಾನಗರ, ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ | ಸಹಕಾರಿ ವಲಯ |
| 2 | ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮಿಜಿ ಶುಗರ್ಸ್ ಲಿ., ಹಿರೇಬೇವನೂರು ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ | ಖಾಸಗಿ ವಲಯ |
| 3 | ಇಂಡಿಯನ್ ಶುಗರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ್, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ | ಖಾಸಗಿ ವಲಯ |
| 4 | ಮನಾಲಿ ಶುಗರ್ಸ್ ಲಿ. ಮಲಘಾಣ್ ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ. | ಖಾಸಗಿ ವಲಯ |
| 5 | ಕೆ.ಪಿ.ಆರ್. ಶುಗರ್ಸ್ ಲಿ. ಅಲಮೇಲ್, ಸಿಂಧಗಿ ತಾಲ್ಲೂಕು, ಬಿಜಾಪುರ ಜಿಲ್ಲೆ | ಖಾಸಗಿ ವಲಯ |

**ಯಾತ್ರಿ ನಿವಾಸ ನಿರ್ಮಾಣ**

**670; ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಹೊರ ರಾಜ್ಯದ ದೇವಸ್ಥಾನಗಳಿಗೆ ಹೋಗುವ ಯಾತ್ರಿಕರಿಗೆ ಯಾತ್ರಿ ನಿವಾಸಗಳನ್ನು ಸರ್ಕಾರ ಮಂಜೂರು ಮಾಡಿದೆಯೇ

**ಆ)** ಮಂಜೂರು ಮಾಡಿದ್ದಲ್ಲಿ ಎಷ್ಟು ಯಾತ್ರಿ ನಿವಾಸಗಳು ಮತ್ತು ಯಾವ ಯಾವ ಸ್ಥಳಗಳಲ್ಲಿ ಮಂಜೂರು ಮಾಡಿದೆ. ಹಾಗೂ ಬಿಡುಗಡೆ ಮಾಡಿದ ಅನುದಾನ ಎಷ್ಟು?

**ಇ)** ನೆರೆ ರಾಜ್ಯ ಮಹಾರಾಷ್ಟ್ರ ರಾಜ್ಯದಲ್ಲಿರುವ ಶಿರಡಿ, ಪಂಡರಾಪುರ ಮತ್ತು ಇನ್ನಿತರ ದೇವಸ್ಥಾನಗಳಿಗೆ ಯಾತ್ರಿ ನಿವಾಸ ಮಂಜೂರು ಮಾಡಿದ್ದಲ್ಲಿ ಸ್ಥಳ ಗುರುತಿಸಲಾಗಿದೆಯೇ ಮತ್ತು ಅನುದಾನ ಬಿಡುಗಡೆ ಮಾಡಲಾಗಿದೆಯೇ ಅನುದಾನ ಬಿಡುಗಡೆ ಮಾಡಿದ್ದಲ್ಲಿ ಯಾವ ಯಾವ ಕ್ಷೇತ್ರಗಳಿಗೆ ಎಷ್ಟೆಷ್ಟು ಅನುದಾನ ಮಂಜೂರು ಮಾಡಲಾಗಿದೆ.

**ಈ)** ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಯಾವ ಯಾವ ಮಠ ಮಾನ್ಯಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. (ಹಾಗಿದ್ದರೆ ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

**ಉ)** ಈ ವರ್ಷ ಮಠ ಮಾನ್ಯಗಳಿಗೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

**ಅ)**

1) ಕರ್ನಾಟಕ ರಾಜ್ಯದಿಂದ ಹೊರರಾಜ್ಯದ ದೇವಸ್ಥಾನಗಳಿಗೆ ಹೋಗುವ ಯಾತ್ರಿಕರಿಗೆ ಹೊರರಾಜ್ಯಗಳಾದ ಆಂಧ್ರಪ್ರದೇಶದ ತಿರುಮಲ–

ತಿರುಪತಿಯಲ್ಲಿ, ತಿರುಚಾನೂರಿನಲ್ಲಿ, ಮಂತ್ರಾಲಯದಲ್ಲಿ, ಉತ್ತರಪ್ರದೇಶದ ವಾರಣಾಸಿಯಲ್ಲಿ ಈಗಾಗಲೇ ಕಾರ್ನಾಟಕ ರಾಜ್ಯ ಛತ್ರಗಳನ್ನು ನಿರ್ಮಾಣ ಮಾಡಿ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದೆ.

2) ಮಹಾರಾಷ್ಟ್ರದ ತುಳಜಾಪುರದಲ್ಲಿಯೂ ಸಹ **"ಕರ್ನಾಟಕ ರಾಜ್ಯ ಛತ್ರ"** ವನ್ನು ನಿರ್ಮಾಣ ಮಾಡಿದ್ದು, ಪೀಠೋಪಕರಣಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

3) ಆಂಧ್ರಪ್ರದೇಶದ ಕೇರಳದ ಶಬರಿಮಲೆ ಕ್ಷೇತ್ರದ ನೀಳಕಲ್, ಮಹಾರಾಷ್ಟ್ರದ ಗುಡ್ಡಾಪುರ, ಪಂಡರಾಪುರ ಹಾಗೂ ತಮಿಳುನಾಡಿನ ತಿರುಚೆಂದೂರಿನಲ್ಲಿ ಕರ್ನಾಟಕ ರಾಜ್ಯ ಛತ್ರ / ಕರ್ನಾಟಕ ಭವನಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾತಿ ದೊರಕಿರುತ್ತದೆ.

**ಆ)**

| ಕ್ರ.ಸಂ. | ಯಾತ್ರಿ ನಿವಾಸ/ಕರ್ನಾಟಕ ರಾಜ್ಯ ಛತ್ರಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿರುವ ಸ್ಥಳಗಳು | ಮಂಜೂರು ಮಾಡಿರುವ ಅನುದಾನ (₹ ಲಕ್ಷಗಳಲ್ಲಿ) | ಬಿಡುಗಡೆ ಮಾಡಿರುವ ಅನುದಾನ |
|---|---|---|---|
| 1 | ಕರ್ನಾಟಕ ರಾಜ್ಯ ಛತ್ರ ಪಂಡರಾಪುರ, ಸೋಲಾಪುರ ಜಿಲ್ಲೆ, ಮಹಾರಾಷ್ಟ್ರ ರಾಜ್ಯ | ಆದೇಶ ಸಂಖ್ಯೆ: ಕಂಇ 44 ಮುಅಬಿ2005 ದಿ:28.03.2005 — 80.00 | ಬಿಜಾಪುರ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಕಾಮಗಾರಿಯ ಅನುಷ್ಠಾನವನ್ನು ವಹಿಸಿದ್ದು, ₹ 80.00 ಲಕ್ಷ ಅನುದಾನವನ್ನು ಸದರಿ ಇಲಾಖೆಗೆ ದಿನಾಂಕ:07–03–2008 ರಂದು ಬಿಡುಗಡೆ ಮಾಡಲಾಗಿರುತ್ತದೆ. |
| 2 | ಕರ್ನಾಟಕ ರಾಜ್ಯ ಛತ್ರ ಗುಡ್ಡಾಪುರ (ಶ್ರೀ ದಾನಮ್ಮ ದೇವಿ ದೇವಸ್ಥಾನದ ಬಳಿ) ಜತ್ತಾ ತಾಲ್ಲೂಕು, ಸಾಂಗ್ಲಿ ಜಿಲ್ಲೆ, ಮಹಾರಾಷ್ಟ್ರ ರಾಜ್ಯ | 1) ಸರ್ಕಾರದ ಆದೇಶ ಕಂಇ 66 ಮುಅಬಿ 2011 ದಿನಾಂಕ: 19.03.2011 ರಲ್ಲಿ ₹ 25.00 ಲಕ್ಷ ಮಂಜೂರಾಗಿರುತ್ತದೆ.<br>2) ₹ 300.00 ಲಕ್ಷಗಳನ್ನು 2013–14ನೇ ಸಾಲಿನಲ್ಲಿ "ಲೆಕ್ಕ ಶೀರ್ಷಿಕೆ 4059–80–051–0–52" ಧಾರ್ಮಿಕ ಸಂಸ್ಥೆಗಳ ಮೂಲಭೂತ ಸೌಕರ್ಯ ಹಾಗೂ ವಸತಿ ಸೌಕರ್ಯದಡಿ ಒದಗಿಸಿರುವ ಅನುದಾನದಿಂದ ಭರಿಸಲು ಸರ್ಕಾರವು ಕ್ರಿಯಾ ಯೋಜನೆಯಡಿ ಅನಧಿಕೃತ ಟಿಪ್ಪಣಿ ಸಂಖ್ಯೆ: ಕಂಇ 311 ಮುಅಬಿ 2012 ದಿನಾಂಕ:20/23.05.2013 ರಲ್ಲಿ ಲೋಕೋಪಯೋಗಿ ಇಲಾಖೆಗೆ ನಿರ್ದೇಶಿಸಿರುತ್ತದೆ. | ₹ 25.00 ಲಕ್ಷಗಳನ್ನು ಬಿಜಾಪುರ ಜಿಲ್ಲಾಧಿಕಾರಿಗಳಿಗೆ ದಿನಾಂಕ:29–08–2012 ರಂದು ಬಿಡುಗಡೆ ಮಾಡಲಾಗಿರುತ್ತದೆ. |

ಇ)

- **ಶ್ರೀಕ್ಷೇತ್ರ ಶಿರಡಿ:–** ಮಹಾರಾಷ್ಟ್ರದ ಶ್ರೀಕ್ಷೇತ್ರ ಶಿರಡಿಗೆ ಬೇಟಿ ನೀಡುವ ಕರ್ನಾಟಕ ರಾಜ್ಯದ ಯಾತ್ರಾರ್ಥಿಗಳ ಸೌಲಭ್ಯಕ್ಕಾಗಿ **"ಕರ್ನಾಟಕ ರಾಜ್ಯ ಛತ್ರ"**ವನ್ನು ನಿರ್ಮಿಸುವ ಉದ್ದೇಶವಿದ್ದು, ಈ ಕುರಿತು ಬಿಜಾಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ವಿಶೇಷ ತಹಸೀಲ್ದಾರ್ ರವರು ಕೆಲವು ಸ್ಥಳಗಳನ್ನು ಗುರುತಿಸಿದ್ದು, ಸದರಿಯವರು ಮಾಹಿತಿ ನೀಡಿರುವ ಜಮೀನುಗಳ ಸ್ಥಳ ಪರಿಶೀಲನೆ ನಡೆಸಿ ಸಂಬಂಧಿಸಿದ ರೆವಿನ್ಯೂ ಕಛೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸಿ **"ಕರ್ನಾಟಕ ಭವನ"**ವನ್ನು ನಿರ್ಮಿಸಲು ಸೂಕ್ತವಾಗುವಂತಹ ನಿವೇಶನವನ್ನು ಗುರುತಿಸಿ 1.00 ಎಕರೆ ಜಮೀನನ್ನು ಪಡೆಯುವ ಬಗ್ಗೆ ನಿಯಮಾನುಸಾರ ಪ್ರಸ್ಥಾವನೆಯನ್ನು ಸಲ್ಲಿಸಲು ಇಂಡಿ ಉಪವಿಭಾಗಾಧಿಕಾರಿಗಳು ಹಾಗೂ ಬಿಜಾಪುರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದು, ಶ್ರೀಕ್ಷೇತ್ರ ಶಿರಡಿಯಲ್ಲಿ ಸೂಕ್ತ ಸರ್ಕಾರಿ ಜಮೀನು ಅಥವಾ ಖಾಸಗಿ ಜಮೀನು ಪಡೆದು ಕರ್ನಾಟಕ ಭವನ ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಗೆ ಸರ್ಕಾರದಿಂದ ಅನುದಾನ ಮಂಜೂರಾಗಿರುವುದಿಲ್ಲ.

- **ಪಂಡರಾಪುರ:–** ಮಹಾರಾಷ್ಟ್ರದ ಸೋಲಾಪುರ ಜಿಲ್ಲೆ, ಗೋಪಾಲಪುರ, ಪಂಡರಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು ನಿರ್ಮಿಸಲು ಸರ್ವೆ ನಂ. 3482 ರಲ್ಲಿ ಈಗಾಗಲೇ 40*50 ಮೀಟರ್ ಜಾಗವನ್ನು ಖರೀದಿಸಲಾಗಿರುತ್ತದೆ. ಹಾಗೂ ದಿನಾಂಕ: 20.02.2013 ರಂದು **"ಕರ್ನಾಟಕ ಭವನ"** ನಿರ್ಮಾಣದ ಶಂಕು ಸ್ಥಾಪನೆಯನ್ನು ಸಹ ನಡೆಸಲಾಗಿರುತ್ತದೆ.

  ಈ ಕಾಮಗಾರಿಗಾಗಿ ಸರ್ಕಾರವು ಆದೇಶ ಸಂ: ಕಂಇ 44 ಮುಅಬಿ 2005, ದಿನಾಂಕ:28.03.2005 ರಲ್ಲಿ ₹ 80.00 ಲಕ್ಷಗಳನ್ನು ಮುಜರಾಯಿ ಸಿಬ್ಬಂದಿ ನಿಧಿಯಿಂದ ಭರಿಸಲು ಮಂಜೂರಾತಿಯನ್ನು

ನೀಡಿದ್ದು, ಈ ಮೊತ್ತವನ್ನು ಈಗಾಗಲೇ ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿರುವ ಬಿಜಾಪುರ ಲೋಕೋಪಯೋಗಿ ಇಲಾಖೆ ಯವರಿಗೆ ಠೇವಣಿ ಇಡಲಾಗಿರುತ್ತದೆ.

- **ತಿರುಚೆಂದೂರು:–** ತಮಿಳುನಾಡು ರಾಜ್ಯ ತಿರುಚೆಂದೂರಿನ ಶ್ರೀ ಸುಬ್ರಹ್ಮಣ್ಯ ದೇವಾಲಯದ ಬಳಿ ಕರ್ನಾಟಕ ರಾಜ್ಯದ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ವಸತಿ ಗೃಹವನ್ನು ನಿರ್ಮಿಸುವ ಸಲುವಾಗಿ 280*100 ಚ.ಅ. ವಿಸ್ತೀಣದ ಸ್ಥಳವನ್ನು ಗುರುತಿಸಲಾಗಿದ್ದು, ಈ ಜಾಗವನ್ನು ಪಡೆಯುವ ಬಗ್ಗೆ ತಮಿಳುನಾಡಿನ ಕಂದಾಯ ಇಲಾಖೆಯ ಕಾರ್ಯದರ್ಶಿಗಳೊಡನೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ.

  ಈ ಸ್ಥಳದಲ್ಲಿ ಕರ್ನಾಟಕ ಭವನ ನಿರ್ಮಾಣಕ್ಕಾಗಿ ಸರ್ಕಾರದಿಂದ ₹ 1.00 ಕೋಟಿ ಅನುದಾನವು ಮಂಜೂರಾಗಿದ್ದು, ನಿರ್ವೇಶನವು ಮಂಜೂರಾಗದಿರುವ ಹಿನ್ನಲೆಯಲ್ಲಿ ಈ ಅನುದಾನವು ಆಯುಕ್ತರ ಅಭಿರಕ್ಷೆಯಲ್ಲಿರುತ್ತದೆ.

**ಈ)** ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಅಂದರೆ 2012–13ನೇ ಸಾಲಿನಲ್ಲಿ 205 ಮಠಗಳಿಗೆ ₹ 2208–98 ಗಳ ಅನುದಾನ ಮಂಜೂರು ಮಾಡಿದ್ದು, ಜಿಲ್ಲಾವಾರು ಹಾಗೂ ಸಂಸ್ಥೆವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.

**ಉ)** ಈ ವರ್ಷ ಅನುದಾನ ಕೋರಿ ಯಾವುದೇ ಮಠ ಮಾನ್ಯಗಳ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

## ನೆರೆಹಾವಳಿ, ಪರಿಹಾರ ಹಾಗು ಅಧಿಕ ಮಳೆಯ ಮುನ್ಸೂಚನೆ

### 688; ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)

ಅ) ಕರಾವಳಿ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಮಂಗಳೂರುಗಳಲ್ಲಿ ಇತ್ತೀಚಿನ ನೆರೆ ಹಾವಳಿಯಿಂದಾಗಿ ಆಗಿರುವ ಪ್ರಾಣ ಹಾನಿ ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿ ನಷ್ಟವೇನು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಸರ್ಕಾರ ತೆಗೆದುಕೊಂಡ ಕ್ರಮವೇನು; ನೀಡಲಾಗಿರುವ ಪರಿಹಾರದ ವಿವರಗಳೇನು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಈ ರೀತಿಯ ಅಧಿಕ ಮಳೆಯ ಮುನ್ಸೂಚನೆ ಸರ್ಕಾರಕ್ಕೆ ಮೊದಲು ತಿಳಿದು ಬರಲಿಲ್ಲವೇ ಮಳೆ ಮಾಹಿತಿಯನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಲಾಗಿದೆ;

ಈ) ಮಳೆ ಮಾಹಿತಿಯ ಉಪಯೋಗ ಯಶಸ್ವಿಯಾಗದಿರಲು ಕಾರಣಗಳೇನು?

### ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ನೆರೆಹಾವಳಿಯಿಂದ ಆಗಿರುವ ಪ್ರಾಣ ಹಾನಿ ಹಾಗೂ ಸಾರ್ವಜನಿಕ ಆಸ್ತಿ ಪಾಸ್ತಿ ನಷ್ಟದ ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ

ಆ) ಸರ್ಕಾರ ತೆಗೆದುಕೊಂಡಿರುವ ಪರಿಹಾರ ಕ್ರಮಗಳ ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ:

ಇ) ರಾಜ್ಯದಲ್ಲಿ ಮಳೆ ಮುನ್ಸಚನೆಯನ್ನು ಹೋಬಳಿ ಮಟ್ಟದಲ್ಲಿ 24 ಗಂಟೆ, 48 ಗಂಟೆ ಮತ್ತು 72 ಗಂಟೆಗಳ ಪೂರ್ವ ನೀಡುವ ಬಗ್ಗೆ ಕ್ರಮ ಕೈಗೊಂಡಿದ್ದು, ಇದು ರಾಷ್ಟ್ರದಲ್ಲಿಯೇ ಮಾದರಿಯಾಗಿರುತ್ತದೆ. ಮಳೆ ಮುನ್ಸೂಚನೆ ವಿವರಗಳನ್ನು ಜಿಲ್ಲಾಮಟ್ಟ, ತಾಲ್ಲೂಕುಮಟ್ಟ ಮತ್ತು ಹೋಬಳಿಮಟ್ಟದವರೆಗೆ ನೀಡಲಾಗುತ್ತಿದೆ. ಈ ಮಾಹಿತಿಯನ್ನು

ಸಂಬಂಧಪಟ್ಟ ಸ್ಥಳೀಯ ಸರ್ಕಾರಿ ಆಡಳಿತ ಹಾಗೂ ಸಮುದಾಯ ಬಳಕೆ ಮಾಡಿಕೊಳ್ಳಲು ಅನುವಾಗಿದೆ. ವರ್ಷದ ಎಲ್ಲಾ ದಿನಗಳಲ್ಲಿ 24 ಗಂಟೆ ಕಾರ್ಯನಿರ್ವಹಿಸುವ "ವರುಣಮಿತ್ರ" ಯೋಜನೆಯಡಿಯಲ್ಲಿ ಮಳೆ ಮುನ್ಸೂಚನೆ ಮಾಹಿತಿಯನ್ನು ನೀಡಲಾಗುತ್ತಿದ್ದು, ಇದನ್ನೆ ಕೃಷಿಕರು, ಮೀನುಗಾರರು ಹಾಗೂ ಮಿಕ್ಕ ಸಮುದಾಯ ವರ್ಗದವರು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಜೂನ್ 01, 2013ರಿಂದ ಜುಲೈ 28 2013ರವೆಗೆ ಒಟ್ಟು 46507 ಸಂಖ್ಯೆಯ ದೂರವಾಣಿ ಕರೆಗಳು ಸ್ವೀಕರಿಸಿದ್ದು, ಇವರಿಗೆ ಮಳೆ ಮುನ್ಸೂಚನೆ ಮಾಹಿತಿಯನ್ನು ನೀಡಲಾಗಿದೆ. ಮಳೆ ಮುನ್ಸೂಚನೆ ಮಾಹಿತಿಯನ್ನು ಉಪಯೋಗ ಮಾಡಿಕೊಳ್ಳುವ ಸಂಬಂಧ ಸಹಾಯವಾಣಿ ಮೂಲಕ ಕಳೆದ ವರ್ಷದಿಂದ ಕ್ರಮ ಕೈಗೊಂಡಿದ್ದು, ಇದನ್ನು ಕ್ರಮೇಣವಾಗಿ ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಉಪಯೋಗ ಮಾಡುವುದು ಕಂಡುಬಂದಿರುತ್ತದೆ.

**ಈ)** ಮಳೆ ಮಾಹಿತಿ ಉಪಯೋಗ ಕ್ರಮೇಣವಾಗಿ ವರ್ಷಂಪ್ರತಿ ಯಶಸ್ವಿಯಾಗುತ್ತಿದೆ ರಾಜ್ಯದಲ್ಲಿ Doppler Weather Radar ಗಳನ್ನು ಸ್ಥಾಪಿಸಿದಲ್ಲಿ, ಮಳೆ ಮಾಹಿತಯ ಮತ್ತು ಮಳೆ ಮುನ್ಸಚನೆಯ ವಿವರಗಳ ಉಪಯೋಗ ಹೆಚ್ಚಿನ ಯಶಸ್ವಿ ಪಡೆದುಕೊಳ್ಳುತ್ತದೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) ವಿಧಾನ ಪರಿಷತ್ ಸದಸ್ಯರು ಇವರ ಪ್ರಶ್ನೆ ಸಂಖ್ಯೆ: 688 (ಅ) ಮತ್ತು (ಆ) ಕ್ಕೆ ಅನುಬಂಧ**

| | ಚಿಕ್ಕಮಗಳೂರು | ದಕ್ಷಿಣ ಕನ್ನಡ | ಶಿವಮೊಗ್ಗ | ಉತ್ತರ ಕನ್ನಡ | ಉಡುಪಿ | ಒಟ್ಟು |
|---|---|---|---|---|---|---|
| ಜೀವಹಾನಿ | 7 | 16 | – | 4 | 2 | **29** |
| ಪರಿಹಾರ ಪಾವತಿಸಿದ ಪ್ರಕರಣಗಳು | 7 | 14 | – | 4 | 1 | **26** |
| ಪರಿಹಾರದ ಮೊತ್ತ (₹ ಲಕ್ಷಗಳಲ್ಲಿ) | 10.5 | 21.0 | – | 6.0 | 1.5 | **39.00** |
| ಜಾನುವಾರು ಹಾನಿ | 8 | 16 | 16 | 6 | 6 | **52** |
| ಪರಿಹಾರ ಪಾವತಿಸಿದ ಪ್ರಕರಣಗಳು | 8 | 14 | 16 | 6 | 6 | **50** |
| ಪರಿಹಾರದ ಮೊತ್ತ (₹ ಲಕ್ಷಗಳಲ್ಲಿ) | 0.72 | 1.71 | 2.40 | 0.96 | 0.96 | **6.75** |
| ಹಾನಿಯಾದ ಮನೆಗಳ ಸಂಖ್ಯೆ | 30 | 562 | 93 | 106 | 154 | **945** |
| ಹಾನಿಯ ಮೊತ್ತ (₹ ಲಕ್ಷಗಳಲ್ಲಿ) | 6.90 | 250.73 | 25.65 | 24.38 | 35.42 | **343.08** |
| ಮನೆ ಹಾನಿಗೆ ಪರಿಹಾರ ನೀಡಿರುವ ಪ್ರಕರಣಗಳು | 30 | 562 | – | 106 | 99 | **797** |
| ನೀಡಿರುವ ಪರಿಹಾರದ ಮೊತ್ತ (₹ ಲಕ್ಷಗಳಲ್ಲಿ) | 1.88 | 18.27 | 0 | 3.18 | 2.97 | **26.30** |
| ಮೂಲಭೂತ ಸೌಕರ್ಯ ಹಾನಿ (₹ ಕೋಟಿಗಳಲ್ಲಿ) | 29.13 | 35.51 | 82.35 | 20.94 | 23.42 | **191.35** |
| **ಒಟ್ಟು ನೀಡಿರುವ ಪರಿಹಾರದ ಮೊತ್ತ (₹ ಲಕ್ಷಗಳಲ್ಲಿ)** | **13.1** | **40.98** | **2.40** | **10.14** | **5.43** | |

## ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಕಾರ್ಯಕ್ರಮ

### 900(1145); ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳ ಉತ್ಪಾದನಾ ವಸ್ತು ಯಾವುದು; ಸಾಮರ್ಥ್ಯ ಎಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು) ಹಾಗೂ ಸಣ್ಣ ಕೈಗಾರಿಕೆಗಳ ಸಂಖ್ಯೆ ವಿವರಗಳನ್ನು ಜಿಲ್ಲಾವಾರು ಒದಗಿಸುವುದು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಯಾವ ಯಾವ ಸ್ಥಳಗಳಲ್ಲಿವೆ ವಿವರ ಒದಗಿಸುವುದು)

ಆ) ಸದರಿ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಸರ್ಕಾರ ಯಾವ ಕ್ರಮಕೈಗೊಂಡಿದೆ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮುಚ್ಚುವ ಸ್ಥಿತಿಗೆ ಬಂದಿರುವಂತಹ ಸಣ್ಣ ಕೈಗಾರಿಕೆಗಳೆಷ್ಟು; ಅವು ಯಾವುವು;

ಇ) ಮುಚ್ಚುವ ಹಂತಕ್ಕೆ ತಲುಪಿರಲು ಕಾರಣಗಳೇನು; ಇವುಗಳ ಪುನಶ್ಚೇತನಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ; ಸಣ್ಣ ಕೈಗಾರಿಕೋದ್ಯಮಿಗಳ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿ ಏನೇನು ಕಾರ್ಯ ಯೋಜನೆ ಹಮ್ಮಿಕೊಳ್ಳಲಾಗಿವೆ. (ವಿವರ ನೀಡುವುದು)

ಈ) ಇದರ ಜೊತೆಗೆ ಹೊಸ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಮುಂದಾಗುವುದೇ; ಎಲ್ಲೆಲ್ಲಿ ಉದ್ದೇಶಿಸಲಾಗಿದೆ. ಇದಕ್ಕಾಗಿ ಜಾಗವನ್ನು ನಿಗದಿಪಡಿಸಲಾಗಿದೆಯೇ (ಎಲ್ಲೆಲ್ಲಿ ಎಂಬ ವಿವರಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು ಹಾಗೂ ಹೊಸದಾಗಿ ಸಣ್ಣ ಕೈಗಾರಿಕೆ ಸ್ಥಾಪಿಸಲು ಮುಂದಾಗಿರುವಂತಹ ಕೈಗಾರಿಕೋಧ್ಯಮಿಗಳ ಹೆಸರು, ವಿಳಾಸ ಪೂರ್ಣ ವಿವರ ಒದಗಿಸುವುದು).

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಹಾಗೂ ಸಕ್ಕರೆ ಸಚಿವರು)**

ಅ) ರಾಜ್ಯದಲ್ಲಿ ಒಟ್ಟು 4,63,198 ಸಣ್ಣ ಕೈಗಾರಿಕಾ ಘಟಕಗಳು ದಿನಾಂಕ 30-06-2013ವರೆಗೆ ನೋಂದಣಿಯಾಗಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. ಈ ಕೈಗಾರಿಕೆಗಳು ಉತ್ಪಾದಿಸುವ ವಿಸ್ತಾರವಾದ

ಉತ್ಪನ್ನಗಳ (Broad Category) ಪಟ್ಟಿಯನ್ನು **ಅನುಬಂಧ – 2**ರಲ್ಲಿ ಲಗತ್ತಿಸಿದೆ. ಸಣ್ಣ ಕೈಗಾರಿಕಾ ಘಟಕಗಳ ಸಾಮರ್ಥ್ಯವು ಅವುಗಳು ತೊಡಗಿಸುವ ಬಂಡವಾಳದ ಮೇಲೆ ನಿರ್ಧರಿತವಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿರುವ ಕೈಗಾರಿಕಾ ಪ್ರದೇಶ, ಕೈಗಾರಿಕಾ ವಸಾಹತು ಹಾಗೂ ತಾಲ್ಲೂಕುಗಳಾದ್ಯಂತ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿವೆ.

2012-13ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ಹಾಗೂ ವಿವಿಧ ಉತ್ಪನ್ನ ಚಟುವಟಿಕೆಗಳಲ್ಲಿ ತೊಡಗಿರುವ ವಿವರ ಕೆಳಗಿನಂತಿದೆ.

| ಕ್ರ.ಸಂ. | ತಾಲೂಕು | ಘಟಕಗಳ ಸಂಖ್ಯೆ | ಬಂಡವಾಳ (₹ ಲಕ್ಷ) | ಉದ್ಯೋಗ ಸಂಖ್ಯೆ |
|---|---|---|---|---|
| 1 | ಮಂಗಳೂರು | 342 | 4947.88 | 2535 |
| 2 | ಬಂಟ್ವಾಳ | 285 | 399.76 | 573 |
| 3 | ಪುತ್ತೂರು | 284 | 351.08 | 531 |
| 4 | ಸುಳ್ಯ | 239 | 86.38 | 272 |
| 5 | ಬೆಳ್ತಂಗಡಿ | 243 | 762.01 | 688 |
| **ಒಟ್ಟು** | | **1393** | **6547.11** | **4599** |

ಆ) ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರದ ಯಾವುದೇ ನಿರ್ದಿಷ್ಟ ಯೋಜನೆಗಳಿರುವುದಿಲ್ಲ. ಆದಾಗ್ಯೂ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸರ್ಕಾರವು ಹಲವು ರಿಯಾಯಿತಿ ಮತ್ತು ಸವಲತ್ತುಗಳನ್ನು ಕಲ್ಪಿಸಿದೆ. ವಿವರಗಳು:

- ಘಟಕದ ಪುನಃಶ್ಚೇತನ ಯೋಜನಾ ವೆಚ್ಚದ ಶೇ.25 ರಷ್ಟು ₹ 2.50 ಲಕ್ಷಗಳಿಗೆ ಮಿತಿಗೊಳಪಟ್ಟು ಬಡ್ಡಿರಹಿತ ಬೀಜಧನವನ್ನು (National Equity Fund ಮಾರ್ಗ ಸೂಚಿಯನ್ವಯ) ಸಾಲದ ರೂಪದಲ್ಲಿ ಒದಗಿಸುವುದು.
- ಕೆಐಎಡಿಬಿ/ಕೆಎಸ್ಎಸ್ಐಡಿಸಿ ಮತ್ತು ಕಿಯೊನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷ ಋಣಸ್ಥಗಿತದೊಂದಿಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಬಡ್ಡಿರಹಿತವಾಗಿ ಪಾವತಿಸಲು ಅವಕಾಶ.
- ಅಭಿವೃದ್ಧಿ ಸಾಲ ಮರುಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೇ ಪಾವತಿಸಲು ಅವಕಾಶ.
- ತೆರಿಗೆ ಸಂಬಂಧಿತ ಸೌಲಭ್ಯಗಳು: ತೆರಿಗೆ ಬಾಕಿಯನ್ನು 6 ಅರ್ಧ ವಾರ್ಷಿಕ ಕಂತುಗಳಲ್ಲಿ ಪ್ರತಿ ತಿಂಗಳಿಗೆ ಶೆ.1/2ರಂತೆ ಬಡ್ಡಿ ಸಹಿತ ಮರುಪಾವತಿ ಹಾಗೂ ಮುಂದಿನ ಮೂರು ವರ್ಷಗಳಲ್ಲಿ ಪಾವತಿಸುವ ಮಾಹೆಯ ತೆರಿಗೆಯಲ್ಲಿ ಶೆ.50ರಷ್ಟು ಬಡ್ಡಿರಹಿತವಾಗಿ ಮುಂದೂಡಿ ನಂತರ 3 ವಾರ್ಷಿಕ ಕಂತುಗಳಲ್ಲಿ ಆಯಾ ಸಾಲಿನ ತೆರಿಗೆ ಜೊತೆಯಲ್ಲಿ ಮರುಪಾವತಿ ಮಾಡಲು ಅವಕಾಶ ನೀಡಲಾಗಿದೆ ಮತ್ತು ಘಟಕವು ಮುಚ್ಚಿರುವ ಅವಧಿಗೆ ಬಡ್ಡಿಯನ್ನು ವಿಧಿಸುವಂತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 20 ಸಣ್ಣ ಕೈಗಾರಿಕಾ ಘಟಕಗಳು ಮುಚ್ಚುವ ಸ್ಥಿತಿಯಲ್ಲಿವೆ. **ಅನುಬಂಧ–3**ರಲ್ಲಿ ಪಟ್ಟಿ ಲಗತ್ತಿಸಿದೆ.

ಇ) ಸಣ್ಣ ಕೈಗಾರಿಕೆಗಳು ಮುಚ್ಚುವ ಹಂತ ತಲುಪಲು ಪ್ರಮುಖ ಕಾರಣಗಳೆಂದರೆ: ಮಾರುಕಟ್ಟೆ ಪೈಪೋಟಿ, ಅಸಮರ್ಪಕ ವಿದ್ಯುತ್ ಸರಬರಾಜು, ಕಚ್ಚಾಮಾಲಿನ ಕೊರತೆ, ದುಡಿಯುವ ಬಂಡವಾಳ, ಖರೀದಿದಾರರಿಂದ ಸರಬರಾಜು ಮಾಡಿದ ಉತ್ಪನ್ನಗಳಿಗೆ ವಿಳಂಬ ಪಾವತಿ, ವ್ಯವಹಾರ ನಿರ್ವಹಣೆಯಲ್ಲಿ ವಿಫಲತೆ ಇತ್ಯಾದಿ.

ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರದ ಯಾವುದೇ ನಿರ್ದಿಷ್ಟ ಯೋಜನೆಗಳಿರುವುದಿಲ್ಲ. ಆದಾಗ್ಯೂ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಹಲವು ರಿಯಾಯಿತಿ ಮತ್ತು ಸವಲತ್ತುಗಳನ್ನು ಸರ್ಕಾರವು ಕಲ್ಪಿಸಿದೆ.

ರಾಜ್ಯದಲ್ಲಿ ಹೊಸ ಉದ್ಯಮಗಳನ್ನು ಪ್ರಾರಂಭಿಸಲು/ಉತ್ತೇಜಿಸಲು ಹೊಸ ಕೈಗಾರಿಕಾ ನೀತಿ 2009-14ನ್ನು ಅನುಷ್ಠಾನಗೊಳಿಸುತ್ತಿದ್ದು, ಹೊಸ ಬಂಡವಾಳ ಹೂಡಿಕೆಗೆ ಈ ಕೆಳಕಂಡ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಿದೆ.

1) ಬಂಡವಾಳ ಹೂಡಿಕೆ ಉತ್ತೇಜನಾ ಸಹಾಯಧನ.
2) ಭೂ ಪರಿವರ್ತನ ಶುಲ್ಕ ಮರುಪಾವತಿ.
3) ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.
4) ತಂತ್ರಜ್ಞಾನ ಮೇಲ್ದರ್ಜೆಗೇರಿಸಲು, ಗುಣಮಟ್ಟ ಪ್ರಮಾಣ ಪತ್ರ ಹಾಗೂ ಪೇಟೆಂಟ್ ನೊಂದಾಯಿಸಲು ಉತ್ತೇಜನ.
5) ಮಳೆ ಕೊಯ್ಲು ಮತ್ತು ಜಲ ಸಂರಕ್ಷಣೆ ಹಾಗೂ ಶಕ್ತಿ ಸಂರಕ್ಷಣೆಗೆ ಉತ್ತೇಜನ.
6) ಯೋಜನಾ ವರದಿ ತಯಾರಿಕೆಯ ವೆಚ್ಚದ ಹಿಂಪಾವತಿ ಇತ್ಯಾದಿ.
7) ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ಶುಲ್ಕ ರಿಯಾಯಿತಿ.
8) ಪ್ರವೇಶ ತೆರಿಗೆ ವಿನಾಯಿತಿ.

9) ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ.

10) ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.

11) ವಿದ್ಯುತ್ ತೆರಿಗೆಯಿಂದ ವಿನಾಯಿತಿ.

ಇದರ ಜೊತೆಗೆ ಕೈಗಾರಿಕಾ ಪ್ರದೇಶ ಹಾಗೂ ಕೈಗಾರಿಕಾ ವಸಾಹತುಗಳ ಸ್ಥಾಪಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಲಾಗುತ್ತಿದೆ.

**ಈ)** ಸರ್ಕಾರವು ಹೊಸದಾಗಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಶೀಲರನ್ನು ಕೈಗಾರಿಕಾ ನೀತಿಯನ್ವಯ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಿ ಪ್ರೋತ್ಸಾಹಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಇರಾ, ಮುಡಿಪು, ಬಾಳೆಪುಣಿ ಗ್ರಾಮಗಳ 586 ಎಕರೆ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಹೊಸ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲಾಗಿತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲ್ಲುಕಿನಾದ್ಯಂತ ಹೊಸದಾಗಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಇಲಾಖೆಯಿಂದ ಉದ್ದಿಮೆದಾರರ ಜ್ಞಾಪನಾಪತ್ರ ಭಾಗ–1ನ್ನು ನೀಡಿರುವ ತಾಲ್ಲೂಕುವಾರು ವಿವರ ಕೆಳಗಿನಂತಿದೆ.

| **ತಾಲ್ಲೂಕು** | **ಘಟಕಗಳ ಸಂಖ್ಯೆ** |
|---|---|
| ಮಂಗಳೂರು | 548 |
| ಬಂಟ್ವಾಳ | 244 |
| ಸುಳ್ಯ | 78 |
| ಪುತ್ತೂರು | 223 |
| ಬೆಳ್ತಂಗಡಿ | 83 |
| **ಒಟ್ಟು** | **1176** |

## REGISTRATION OF MSME UNITS UPTO 30-06-2013 — ANNEXURE - 1

| SL NO | DISTRICT | Cumulative upto 2012-2013 | | | Units Regd during 2013-2014 | | | Cumulative upto 2013-2014 | | |
|---|---|---|---|---|---|---|---|---|---|---|
| | | No. of units | Investment Rs. Lakhs | EMP in Nos. | No of Units | Investment Rs in Lakhs | EMP in Nos. | No of Units | Investment Rs. Lakhs | EMP in Nos. |
| 1 | Bagalkot | 9054 | 23645.40 | 43323 | 90 | 1269.99 | 956 | 9144 | 24915.39 | 44279 |
| 2 | Bangalore (U) | 82857 | 548302.31 | 781990 | 1404 | 2026075.39 | 15895 | 84261 | 2574377.695 | 797885 |
| 3 | Bangalore (R) | 17760 | 75657.34 | 101554 | 77 | 2004.59 | 822 | 17837 | 77661.93 | 102376 |
| 4 | Belguam | 38695 | 85626.42 | 164193 | 167 | 891.79 | 787 | 38862 | 86518.21 | 164980 |
| 5 | Bellary | 18932 | 76826.09 | 93415 | 265 | 6605.54 | 1912 | 19197 | 83431.63 | 95327 |
| 6 | Bidar | 8199 | 22151.54 | 45886 | 11 | 69.50 | 105 | 8210 | 22221.04 | 45991 |
| 7 | Bijapur | 10140 | 18312.26 | 48662 | 68 | 639.86 | 236 | 10208 | 18952.12 | 48898 |
| 8 | CH Nagar | 8793 | 10704.23 | 37628 | 23 | 259.95 | 261 | 8816 | 10964.181 | 37889 |
| 9 | Chikkaballapur | 1450 | 5523.33 | 7550 | 34 | 537.00 | 229 | 1484 | 6060.33 | 7779 |
| 10 | Chikmagalur | 9800 | 16498.55 | 38889 | 88 | 138.13 | 367 | 9888 | 16636.68 | 39256 |
| 11 | Chitradurga | 11108 | 21084.71 | 45121 | 101 | 505.33 | 506 | 11209 | 21590.04 | 45927 |
| 12 | D.Kannada | 23844 | 60321.46 | 116955 | 338 | 573.47 | 936 | 24182 | 60894.933 | 117891 |
| 13 | Davangere | 10256 | 24806.62 | 45246 | 30 | 1306.10 | 351 | 10286 | 26112.72 | 45597 |
| 14 | Dharwad | 19680 | 70094.10 | 155597 | 307 | 1920.54 | 1151 | 19987 | 72014.64 | 156748 |
| 15 | Gadag | 8437 | 12711.61 | 32975 | 88 | 468.50 | 494 | 8525 | 13180.112 | 33469 |
| 16 | Gulbarga | 17874 | 40425.23 | 75010 | 83 | 314.59 | 363 | 17957 | 40739.82 | 75373 |
| 17 | Hassan | 13472 | 25674.06 | 55216 | 162 | 250.59 | 451 | 13634 | 25924.65 | 55667 |
| 18 | Haveri | 10660 | 17400.23 | 39375 | 134 | 133.48 | 227 | 10794 | 17533.708 | 39602 |
| 19 | Kodagu | 3787 | 8784.99 | 25697 | 18 | 90.24 | 93 | 3805 | 8875.23 | 25790 |
| 20 | Kolar | 15190 | 61331.94 | 95849 | 35 | 2329.00 | 615 | 15225 | 63660.943 | 96464 |
| 21 | Koppal | 6667 | 36985.13 | 40895 | 18 | 219.15 | 105 | 6685 | 37204.275 | 41000 |
| 22 | Mandya | 10669 | 26396.37 | 49270 | 75 | 313.80 | 305 | 10744 | 26710.17 | 49575 |
| 23 | Mysore | 25476 | 74322.99 | 134875 | 157 | 1326.86 | 1161 | 25633 | 75649.854 | 136036 |
| 24 | Raichur | 10020 | 36355.82 | 47742 | 17 | 2355.52 | 201 | 10037 | 38711.34 | 47943 |
| 25 | Ramanagara | 2263 | 26625.38 | 18643 | 107 | 1982.88 | 1001 | 2370 | 28608.26 | 19644 |
| 26 | Shimoga | 17697 | 33742.18 | 79133 | 208 | 232.20 | 758 | 17905 | 33974.38 | 79891 |
| 27 | Tumukur | 24723 | 75718.39 | 129693 | 220 | 1410.95 | 1304 | 24943 | 77129.344 | 130997 |
| 28 | Udupi | 9695 | 52283.62 | 69163 | 158 | 838.17 | 697 | 9853 | 53121.79 | 69860 |
| 29 | U.Kannada | 10790 | 25488.05 | 57295 | 42 | 223.99 | 270 | 10832 | 25712.04 | 57565 |
| 30 | Yadgir | 595 | 2225.78 | 2307 | 90 | 134.75 | 240 | 685 | 2360.53 | 2547 |
| | TOTAL | 458583 | 1616026.14 | 2679447 | 4615 | 2055421.85 | 32799 | 463198 | 3671447.985 | 2712246 |

LCO : 900(1145) 31-7-2013

as on June-2013

**LIST OF BROAD CLASSIFICATION OF MSMEs UNDER NIC-2004 -- Annexure- 2**

| | Sector |
|---|---|
| 1 | Activities Auxiliary to Financial Intermediation |
| 2 | Activities of Membership Orgnization n.e.c. |
| 3 | Activities of Private Households as Employers of Domestic Staff |
| 4 | Agriculture, Hunting and Related Service Activities |
| 5 | Air Transport |
| 6 | Collection,Purification and Distribution of water |
| 7 | Computer and Related Activities |
| 8 | Construction |
| 9 | Education |
| 10 | Electricity,Gas,Steam and Hot water Supply |
| 11 | Extraction of Crude Petroleum and Natural Gas: Service Activities incidental to Oil and Gas Extraction, excluding Surveying |
| 12 | Extraction of Crude Petroleum and Natural Gas: Service Activities incidental to Oil and Gas Extraction, Extra Territorial Organization and Bodies |
| 13 | Financial Intermediation, Except Insurance & Pension Funding |
| 14 | Fishing, Aquaculture and Service Activities Incidental to Fishing |
| 15 | Forestry, Logging and Related Service Activities |
| 16 | Health and Social Work |
| 17 | Hotels and Restaurants |
| 18 | Insurance and Pension Funding, Except Compulsary Social Security |
| 19 | Land Transport |
| 20 | Mainteinance and Repair of Motor Vehicles and Motor cycles |
| 21 | Mainteinance and Repair of Personal and Hosehold Goods |
| 22 | Manufacturing of Basic Metals |
| 23 | Manufacturing of Chemical &Chemicals Products |
| 24 | Manufacturing of Electrical Machinary and Apparatus N.E.C |
| 25 | Manufacturing of fabricated Metals Products,Except Machinary and Equipment |
| 26 | Manufacturing of Food Products and Beverages |
| 27 | Manufacturing of Furnitiure;Manufacturing N.E.C |
| 28 | Manufacturing of Machinary and Equipment N.E.C |
| 29 | Manufacturing of Motor Vehicles,Trailers and Semi -Trailers |
| 30 | Manufacturing of Office,Accountingf and Computing Machinary |
| 31 | Manufacturing of Other Transport Equipment |
| 32 | Manufacturing of Paper and Paper Products |
| 33 | Manufacturing of Radio,Television ,Communication Equipment and Apparatus |
| 34 | Manufacturing of Rubber and Plastic Products |
| 35 | Manufacturing of Tabacco Products |
| 36 | Manufacturing of Textiles |
| 37 | Manufacturing of Wearing Apparel;dressing and Dyeing of Fur |
| 38 | Manufacturing of wood,products of Wood,Cork,Articles of Straw &Plating Materials,except furniture |
| 39 | Manufacturing ofMedicals ,Precision and Optical Instruments,Watches and Clocks |
| 40 | Manufacuring of Coke,refined Petroleum Products and Nuclear Fuel |
| 41 | Manufacutring of Other Non-Metallic Mineral Produtcs |
| 42 | Mining of Coal and Lignite, Extraction of Peat |
| 43 | Mining of Metal Ores |
| 44 | Mining of Uranium and Thorium Ores |
| 45 | Other Bussiness Activities |
| 46 | Other Mining and Quarrying |
| 47 | Other Service Activities |
| 48 | Others |
| 49 | Post and Telecommunications |
| 50 | Public Administration and Defence; Compulsory Social Security |
| 51 | Publishing ,Printing and Reproduction of recorded Media |
| 52 | Real Estate Activities |
| 53 | Recreational,Cultural and Sporting Activities |
| 54 | Recycling |
| 55 | Renting of Transport Equipment,Other Machinery &Equipment N.E.C |
| 56 | Research and Development |
| 57 | Sewage and Refuse Disposal, Sanitation and Similar Activities |
| 58 | Supporting and Auxillary Activities |
| 59 | Tanning and Dressing of Leather;Manufacture of Luggage,Handbags,Saddlers,Harness and Footwear |
| 60 | Undifferentiated Goods-Producing Activities of Private Households for Own Use |
| 61 | Undifferentiated Service-Producing Activities of Private Households for Own Use |
| 62 | Water Transport |
| 63 | Wholesale of Trade and Commission Trade |
| 64 | **Total** |

*LCQ : 900(1145) 31-7-2013*

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಚ್ಚುವ ಹಂತದಲ್ಲಿರುವ ಕೈಗಾರಿಕೆಗಳು

| ಸ್ಥಳ | ಘಟಕಗಳ ಹೆಸರು |
|---|---|
| ಮಂಗಳೂರು | ಸುಚಿ ಪ್ರಿಂಟಿಂಗ್ |
| | ರಾಜ್ ಸ್ಟವ್ಸ್ & ಅಲುಮಿನಿಯಮ್ |
| | ಅದ್ವೈತ ಗ್ರೀಸ್ |
| | ಆಜಾಮ್ ಇಂಡಸ್ಟ್ರೀಸ್ |
| | ಜ್ಯೇಷ್ಠ ಇಂಜಿನಿಯರಿಂಗ್ |
| | ಕೆನರಾ ಕಾರ್ಪೊರೇಶನ್ |
| ಹಂಪನ್‌ಕಟ್ಟ, ಮಂಗಳೂರು | ಎಫ್ ಫೈಬರ್ (ಡಿಆರ್‌ಟಿ) |
| | ಪಾಟೀಲ್ ಡೈ & ಕೆಮಿಕಲ್ಸ್ (ಡಿಆರ್‌ಟಿ) |
| | ಗೋಕುಲಮ್ ಇಂಡಸ್ಟ್ರೀಸ್ (ಡಿಆರ್‌ಟಿ) |
| ಕಾರ್ ಸ್ಟ್ರೀಟ್ | ಪೀಲ್ಡ್ ಸ್ಟಾರ್ ಸೈಕಲ್ |
| ಅಶೋಕ್ ನಗರ್ | ಮಧು ಅಮೃತ್ ಇಂಡಸ್ಟ್ರೀಸ್ |
| | ಲಕ್ಷ್ಮೀಶ ಇಂಡಸ್ಟ್ರೀಸ್ |
| | ರಮೇಶ್ ಇಂಡಸ್ಟ್ರೀಸ್ |
| | ಸೋನು ಎಂಟರ್‌ಪ್ರೈಸಸ್ |
| | ಯಾದವ ಎನ್. ಇಂಡಸ್ಟ್ರೀಸ್ |
| | ವಾಣಿ ಬಿ. ಇಂಡಸ್ಟ್ರೀಸ್ |
| | ದಿವಾಕರ್ ಇಂಡಸ್ಟ್ರೀಸ್ |
| ಪುತ್ತೂರ್ | ಶಂಕರ್ ನಾರಾಯಣ ಫುಡ್ ಪ್ರಾಡಕ್ಟ್ಸ್ |
| | ಶಿವರೆ ಕ್ಯಾಶ್ಯು ಇಂಡಸ್ಟ್ರೀಸ್ |
| | ವಾಗಲೆ ಉದ್ಯೋಗ್ |

**ಐ.ಟಿ.ಐ ಕೈಗಾರಿಕಾ ತರಬೇತಿ ಕೇಂದ್ರಗಳು**

**1144; ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು; (ಜಿಲ್ಲಾವಾರು ಸಂಖ್ಯೆ ವಿವರಗಳನ್ನು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಸರ್ಕಾರಿ ಮತ್ತು ಖಾಸಗಿವಾರು ವಿವರಗಳನ್ನು ಒದಗಿಸುವುದು)

**ಆ)** ಸದರಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ವರ್ಷದಲ್ಲಿ ಎಷ್ಟು ತರಬೇತಿದಾರರು ತರಬೇತಿ ಪಡೆಯುತ್ತಾರೆ; ಯಾವ ಯಾವ ಟ್ರೇಡ್‌ಗಳ ತರಬೇತಿ ಇರುತ್ತದೆ; (ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಮಾಹಿತಿಯೊಂದಿಗೆ ಈ ತರಬೇತಿ ಕೇಂದ್ರಗಳ ಪೈಕಿ ಖಾಸಗಿಯ ಎಷ್ಟು ತರಬೇತಿ ಕೇಂದ್ರಗಳು ಸರ್ಕಾರದ ಅನುದಾನ ಪಡೆಯುತ್ತಿವೆ; ಅನುದಾನ ಪಡೆಯದ ಖಾಸಗಿ ಐಟಿಐಗಳ ಸಂಖ್ಯೆ, ಅವು ಯಾವುವು ವಿವರ ಒದಗಿಸುವುದು)

**ಇ)** ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಇ.ಎಸ್.ಐ ಆಸ್ಪತ್ರೆಗಳಾವುವು; ಅಲ್ಲಿ ದಾಖಲಾಗುವ ಕಾರ್ಮಿಕರಿಗೆ ಯಾವ ರೀತಿಯ ಔಷಧೋಪಚಾರ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ;

**ಈ)** ಕಾರ್ಮಿಕರ ಹಿತಕ್ಕಾಗಿ ಸರ್ಕಾರ ಕೈಗೊಳ್ಳುವ ಕಾರ್ಯಕ್ರಮ ಯೋಜನೆಗಳಾವುವು; ಸದರಿ ಆಸ್ಪತ್ರೆಗಳ ಪ್ರಯೋಜನವು ದಕ್ಷಿಣ ಕನ್ನಡ ಜಿಲ್ಲೆಯ ಮೀನುಕೃಷಿ ಮಾಡುವ ಕಾರ್ಮಿಕರು ಒಳಪಡುತ್ತಾರೆಯೇ;

**ಉ)** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಸರ್ಕಾರಿ ಐ.ಟಿ.ಐ. ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಎಲ್ಲೆಲ್ಲಿ ಗುರುತಿಸಲಾಗಿದೆ; ಅವು ಯಾವುವು; ಯಾವಾಗ ಪ್ರಾರಂಭಗೊಳಿಸಲಾಗುವುದು; ಪ್ರವೇಶ ಸಂಖ್ಯೆ ಎಷ್ಟು ಇರುತ್ತದೆ?

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಕಾರ್ಮಿಕ ರಾಜ್ಯ ಸಚಿವರು)**

ಅ) ಪ್ರಸ್ತುತ ರಾಜ್ಯದಲ್ಲಿ 158 ಸರ್ಕಾರಿ ಹಾಗೂ 196 ಅನುದಾನಿತ ಹಾಗೂ 1146 ಅನುದಾನ ರಹಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ವಿವರವನ್ನು ಅನುಬಂಧ – 1ರಲ್ಲಿ ನೀಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರವನ್ನು ಅನುಬಂಧ – 2ರಲ್ಲಿ ನೀಡಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವರ್ಷಕ್ಕೆ 5472 ತರಬೇತಿದಾರರು ತರಬೇತಿ ಪಡೆಯುತ್ತಾರೆ. ವೃತ್ತಿಗಳ ವಿವರಗಳನ್ನು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ – 2ರಲ್ಲಿ ಲಗತ್ತಿಸಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಆಸ್ಪತ್ರೆ, 05 ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ವಿವರ ಕೆಳಕಂಡಂತಿದೆ.

1) ಕಾರಾವಿ ಆಸ್ಪತ್ರೆ, ಮಂಗಳೂರು – 100 ಹಾಸಿಗೆ
2) ಕಾರಾವಿ ಚಿಕಿತ್ಸಾಲಯ. ಪಣಂಬೂರು, ಮಂಗಳೂರು
3) ಕಾರಾವಿ ಚಿ. ಕರಂಗಲ್ಪಾಡಿ, ಮಂಗಳೂರು
4) ಕಾರಾವಿ ಚಿ. ಕುಲಶೇಖರ, ಮಂಗಳೂರು
5) ಕಾರಾವಿ ಚಿ. ಮೋರ್ಗನ್ಸ್‌ಗೇಟ್, ಮಂಗಳೂರು
6) ಕಾರಾವಿ ಚಿ. ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ

ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಕೆಳಕಂಡಂತಿವೆ.

1) ಒಳ ರೋಗಿ ಮತ್ತು ಹೊರ ರೋಗಿ ಚಿಕಿತ್ಸೆ

2) ತಜ್ಞ ವೈದ್ಯಾಧಿಕಾರಿಗಳ ಸೌಲಭ್ಯ

3) ಪ್ರಸೂತಿ ಸೌಲಭ್ಯ

4) ಪ್ರಯೋಗ ಶಾಲಾ ಸೌಲಭ್ಯ / ಕ್ಷ–ಕಿರಣ ಸೌಲಭ್ಯ

5) ರಜಾ ಪ್ರಮಾಣ ಪತ್ರ

6) ವೈದ್ಯಕೀಯ ವೆಚ್ಚ ಮರುಪಾವತಿ

7) ಉಚಿತ ಔಷಧಿ ಸರಬರಾಜು

8) ಆಂಬುಲೆನ್ಸ್ ಸೌಲಭ್ಯ

9) ವಿಮಾ ರೋಗಿಗಳಿಗೆ ಕಾರಾವಿ ಚಿಕಿತ್ಸಾಲಯಗಳಿಂದ ಕಾರಾವಿ ಆಸ್ಪತ್ರೆ ಉಚಿತ ಪ್ರಯಾಣ ಸೌಲಭ್ಯ.

ಕಾರಾವಿ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದ ಸೌಲಭ್ಯಗಳನ್ನು ಹೊಂದಾಣಿಕೆ ಮಾಡಿಕೊಂಡ ಆಸ್ಪತ್ರೆ ಮೂಲಕ ಒದಗಿಸಲಾಗುತ್ತದೆ.

**ಈ)** ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1) ಕಾರಾವಿ ಆಸ್ಪತ್ರೆಯ ಸೌಲಭ್ಯದ ಉನ್ನತೀಕರಣ

2) ತಜ್ಞ ವೈದ್ಯಾಧಿಕಾರಿಗಳ ಕೊರತೆ ನಿವಾರಿಸಲು 06 ತಜ್ಞ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

3) ಚಿಕಿತ್ಸಾಲಯಗಳಿಂದ ಆಸ್ಪತ್ರೆಗೆ ಉಚಿತ ಪ್ರಯಾಣ ಸೌಲಭ್ಯ ಒದಗಿಸಿದೆ.

ಕಾರಾವಿ ನಿಗಮವು ಮೀನು ಕೃಷಿ ಮಾಡುವ ಕಾರ್ಮಿಕರನ್ನು ಕಾರಾವಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಿರುವುದಿಲ್ಲ.

ಉ) ಹಿಂದುಳಿದ ತಾಲ್ಲೂಕುಗಳಿಗೆ ಒತ್ತು ನೀಡಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಲ್ಲದ ತಾಲ್ಲೂಕುಗಳಲ್ಲಿ ಹಂತಹಂತವಾಗಿ ಸರ್ಕಾರಿ ಐಟಿಐಗಳನ್ನು ಪ್ರಾರಂಭಿಸಲು ಉದ್ದೇಶೀಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಸರ್ಕಾರಿ ಐಟಿಐನ್ನು ಮಂಜೂರು ಮಾಡುವ ಪ್ರಸ್ತಾಪ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

**Annexure – 1 (LCQ – 1144)**

**District wise no. of Govt. & Pvt. ITIs in the State**

| **Division** | **District** | **No. of Govt. & Pvt. ITCs** | | |
|---|---|---|---|---|
| | | **Govt.** | **Aided** | **Un-aided** |
| Bangalore | Bangalore Urban | 6 | 10 | 69 |
| | Bangalore Rural | 2 | 1 | 14 |
| | Ramanagar | 4 | 4 | 19 |
| | Chitradurga | 4 | 4 | 52 |
| | Davanagere | 3 | 6 | 43 |
| | Kolar | 4 | 7 | 20 |
| | Chikkaballapura | 4 | 1 | 15 |
| | Shimoga | 6 | 6 | 28 |
| | Tumkur | 8 | 12 | 51 |
| | | **41** | **51** | **311** |
| Gulbarga | Bellary | 8 | 8 | 72 |
| | Bidar | 4 | 6 | 64 |
| | Gulbarga | 6 | 9 | 74 |
| | Yadgiri | 1 | 2 | 23 |
| | Koppal | 7 | 3 | 39 |
| | Raichur | 4 | 2 | 35 |
| | | **30** | **30** | **307** |
| Hubli | Bagalkote | 4 | 10 | 57 |

| | | | | |
|---|---|---|---|---|
| | Belgaum | 9 | 8 | 106 |
| | Bijapur | 3 | 7 | 88 |
| | Dharwad | 5 | 14 | 37 |
| | Gadag | 4 | 7 | 31 |
| | Haveri | 4 | 3 | 42 |
| | U.K. | 9 | 4 | 9 |
| | | **38** | **53** | **370** |
| Mysore | Chamarajanagar | 3 | 3 | 10 |
| | Chikkamagalur | 5 | 5 | 10 |
| | Dakshina Kannada | 5 | 13 | 12 |
| | Hassan | 13 | 22 | 51 |
| | Kodagu | 3 | 1 | 4 |
| | Mandya | 10 | 4 | 38 |
| | Mysore | 7 | 10 | 29 |
| | Udupi | 3 | 4 | 4 |
| | | **49** | **62** | **158** |
| **Total** | | **158** | **196** | **1146** |

## Annexure -2 (LCQ-1144)

| Sl.No | Name & address of the Pvt. ITI | Type of ITI | Trades implemented in Govt., Aided & Pvt. ITI s in Dakshina Kannada Dist. |
|---|---|---|---|
| | Bantawala | | |
| 1 | Govt. ITI, Vitla, Bantwala Tq. | Govt. | |
| 2 | B.A. ITC, Tumbay, Bantwala Tq. , D.K. | Pvt. | |
| 3 | Sri Durga ITC, Manchi Post, Bantawala Tq., D.K. Dist. | Pvt. | C & T , Carpentary, Conversion MRTV to EM, COPA, Disel Mech , DMM, DMC, DPCS , Ele. Mech., Electrician, COE - Automobiles, COE - Electronics, MWM, Fitter, Machinist, MMV, MRAC, MRTV, Driver cum Mech., Architectural Asst., Plumber, Turner, Welder, DCM(LMV), MAEE, Mech. Tractor,, |
| 4 | Vittal Suprajit Pvt. ITI, Vitla, Bantwala Tq., Dakshina Kannada Dist. | Pvt. | |
| | Belthangadi | | |
| 1 | Govt. ITI, Malady, Belthangadi | Govt. | |
| 2 | Prasanna I.T.C., Near Santhekatte, Belthangadi, D.K. Dist. | Pvt. | |
| 3 | Sri Dharmasthala ITC for Women, Ujire, Belthangady, D.K. Dist. | Pvt. | |
| 4 | Nagarika Pvt. ITI, Near Bus stand, Guruvayanakere, Belthangadi Tq., D.K. Dist. | Pvt. | |
| | Mangalore | | |
| 1 | Govt. ITI , Mangalore(M), | Govt. | |
| 2 | Govt. ITI , Mangalore(W), | Govt. | |
| 3 | Dharmasthala Manjunatheshwara I.T.C., Venoor, D.K. Dist. | Aided | |
| 4 | St. Alloysius ITC, Mangalore , D.K. | Aided | |
| 5 | Syyed Madani ITC, Ullal, D.K. | Aided | |
| 6 | Hebich ITC, Balmat, Mangalore, D.K. | Aided | |
| 7 | KACES, ITC Stichcraft,Balmatt.Mangalore | Aided | |
| 8 | Xavier ITC , Jyothi Mandir. Mukka-574177, Mangalore | Aided | |
| 9 | Brahmasri Narayanaguru I.T.C., Katipala, Mangalore, D.K. | Aided | |
| 10 | Narayanaguru I.T.C., Kudroli, Mangalore. | Aided | |
| 11 | St. Joseph I.T.C., Jeppu, P.B.NO. 502, Mangalore. | Pvt. | |
| 12 | Sri. Kalikambha ITC, Bannadka, Belavadi Post, Mudabidari Tq., Dakshina Kannada | Pvt. | |
| 13 | Sri Durga Devi ITC, Ratnagiri, Niddodi, Near Kateel, Via Moodbidri, Mangalore, D.K. Dist. | Pvt. | |
| 14 | Serena Vocational Training Institute, Mount Pleasant S.L., Mathias Road, Mangalore, D.K. Dist. | Pvt. | |
| | Mudabidare | | |
| 1 | A.G. Soans I.T.C., Kodanagalli, Mudabidre, D.K.- 574197 | | |
| | Puttur | | |
| 1 | Govt. ITI, Narimogaru, Puttur | Govt. | |
| 2 | Mulki Ramakrishna Punja I.T.C., Mulki,-574154. Dakshina Kannada Dist. | Aided | |
| 3 | Sri Mahalingeshwara I.T.C., Puttur, D.K. 574201 | Aided | |
| 4 | Bethany I.T.C., Nelyadi, Puttur, D.K. -574229. | Aided | |
| | Sulya | | |
| 1 | Sri Parivara Panchalingeshwara I.T.C., Varshanagar, Ninthikal, Sulya Tq., D.K. Dist. | Pvt. | |
| 2 | Kurunje Venkatarama Gowda I.T.C., Sullia, D.k. | Aided | |
| 3 | Jnanabharathi ITC, Jnanabharathi, Jalsoor, Sullia Tq., D.K. Dist. | Pvt. | |

**ಕರ್ನಾಟಕ ಕರಾವಳಿ ನಿಯಂತ್ರಣ ವಲಯ ಯೋಜನೆ ಜಾರಿ**

**923; ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭಾ ಕ್ಷೇತ್ರ)**

ಅ) ರಾಜ್ಯದಲ್ಲಿ ಕರಾವಳಿ ಭಾಗದಲ್ಲಿ ಕರಾವಳಿ ನಿಯಂತ್ರಣ ವಲಯ ಸಿ.ಆರ್.ಜೆಡ್ ಯೋಜನೆಯು ಜಾರಿಯಲ್ಲಿರುವುದು ನಿಜವೇ, ಈ ಯೋಜನೆಯ ಧ್ಯೇಯೊದ್ದೇಶಗಳೇನು; (ಇದರ ಕಾರ್ಯಸ್ವರೂಪ ಯೋಜನೆ ವಿವರಗಳನ್ನು ಒದಗಿಸುವುದು)

ಆ) ಸದರಿ ಯೋಜನೆಯ ವ್ಯಾಪ್ತಿಗೊಳಪಡುವ ಮೀನುಗಾರರು ಹಾಗೂ ಇತರ ಕುಟುಂಬದವರುಗಳು ಪಟ್ಟಾ ಜಮೀನು ಹೊಂದಿದ್ದರೂ ಸಹ ಸರ್ಕಾರದ ವಿವಿಧ ಯೋಜನೆಗಳನ್ವಯ ಮನೆ ಮಂಜೂರಾತಿಗೆ ಪರವಾನಗಿ ಸಿಗದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) ಆದರೆ ಸಿ.ಆರ್.ಜೆಡ್. ಯೋಜನೆಯ ಸುತ್ತೋಲೆ ಮಾತ್ರ ನೀಡಿ ಇದಕ್ಕಾಗಿ ಸೂಕ್ತವಾದ ಪರಿಹಾರ ಮತ್ತು ಪರ್ಯಾಯ ಕ್ರಮವನ್ನು ಜರುಗಿಸದಿರುವ ಕುರಿತು ಸರ್ಕಾರದ ನಿಲುವೇನು?

**ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಸಿ.ಆರ್.ಜೆಡ್ ಅಧಿಸೂಚನೆಯನ್ನು ಪರಿಸರ ಕಾಯ್ದೆ, 1986ರ ಅಡಿಯಲ್ಲಿ ಅಧಿಸೂಚನೆ ಸಂಖ್ಯೆ S.O.19(E) ದಿನಾಂಕ 06.01.2011ರ ಮೂಲಕ ಕೇಂದ್ರ ಸರ್ಕಾರವು ಪ್ರಕಟಿಸಿರುತ್ತದೆ.

ಕರಾವಳಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮೀನುಗಾರರ ಸಮುದಾಯ ಮತ್ತಿತರ ಸ್ಥಳೀಯ ಸಮುದಾಯಗಳಿಗೆ ಜೀವನೋಪಾಯ ಭದ್ರತೆ ದೊರಕುವಂತೆ ನೋಡಿಕೊಳ್ಳುವುದು, ಕರಾವಳಿ ತೀರಗಳು, ಅವುಗಳ

ವಿಶಿಷ್ಟ ಪರಿಸರ ಮತ್ತು ಅದರ ಕಡಲ ಪ್ರದೇಶವನ್ನು ಸಂರಕ್ಷಿಸಿ ಕಾಪಾಡಿಕೊಂಡು ಬರುವುದು ಮತ್ತು ಕರಾವಳಿ ಪ್ರದೇಶಗಳಲ್ಲಿ ಪ್ರಾಕೃತಿಕ ವಿಕೋಪಗಳು ಮತ್ತು ಜಾಗತಿಕ ತಾಪಮಾನ ಏರಿಕೆಯ ಅಪಾಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಒಂದು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಗೆ ಉತ್ತೇಜನ ನೀಡುವುದೇ ಈ ಅಧಿಸೂಚನೆಯ ಧ್ಯೇಯೊದ್ದೇಶವಾಗಿದೆ.

ಈ ಅಧಿಸೂಚನೆಯ ಸಂಕ್ಷಿಪ್ತ ಕಾರ್ಯ ಸ್ವರೂಪ ಮತ್ತು ಯೋಜನೆಯ ವಿವರಗಳನ್ನು ಅನುಬಂಧ – 1ರಲ್ಲಿ ಲಗತ್ತಿಸಲಾಗಿದೆ.

ಆ) ಹೌದು

ಇ) ಕಡಲ ತೀರ ವಲಯ ನಿಯಂತ್ರಣ ಅಧಿಸೂಚನೆ, 2011ರ ಅನುಸಾರ ಅಧಿಸೂಚನೆಯ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಕೈಗೊಳ್ಳಲಾಗುವ ನಿರ್ಮಾಣ ಕಾರ್ಯಗಳಿಗೆ ಕರ್ನಾಟಕ ಕಡಲ ತೀರ ವಲಯ ನಿರ್ವಹಣ ಪ್ರಾಧಿಕಾರದ ಅನುಮೋದನೆ ಅಗತ್ಯವಾಗಿದ್ದು, ಈ ಪ್ರಾಧಿಕಾರದ ಅವಧಿ ದಿನಾಂಕ 06.09.2012 ರಂದು ಮುಕ್ತಾಯಗೊಂಡಿರುತ್ತದೆ. ಈ ಪ್ರಾಧಿಕಾರದ ಪುನರ್‌ರಚನೆಗೆ ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಿಕೊಡಲಾಗಿದೆ. ಪ್ರಾಧಿಕಾರದ ಪುನರ್ ರಚನೆಯನ್ನು ನಿರೀಕ್ಷಿಸಲಾಗುತ್ತಿದೆ.

ಈ ಅಧಿಸೂಚನೆಯನ್ನು ಕೇಂದ್ರ ಸರ್ಕಾರದ ಶಾಸನ ಅನುಸಾರ ಹೊರಡಿಸಲಾಗಿದ್ದು, ಇದನ್ನು ಪಾಲಿಸುವುದು ಅನಿವಾರ್ಯ ಮತ್ತು ಅಗತ್ಯ ಇದಕ್ಕೆ ಯಾವುದೇ ಪರ್ಯಾಯ ಅಥವಾ ಪರಿಹಾರ ಅಗತ್ಯ ಕಂಡು ಬರುವುದಿಲ್ಲ.

# ಸಿ.ಆರ್.ಜೆಡ್. ಅಧಿಸೂಚನೆ 2011ರ ಸಂಕ್ಷಿಪ್ತ ಕಾರ್ಯ ಸ್ವರೂಪ ಮತ್ತು ಯೋಜನೆಯ ವಿವರಗಳು

## 1. ಸಿ.ಆರ್.ಜೆಡ್ ಅಧಿಸೂಚನೆ 2011ರ ವ್ಯಾಪ್ತಿ

i) ಸಮುದ್ರಮುಖವಾಗಿ ತೀರದುದ್ದಕ್ಕೂ ಭೂಮಿಯ ಕಡೆ ಉಬ್ಬರ ರೇಖೆ (ಎಚ್.ಟಿ.ಎಲ್)ಯಿಂದ (ಇಲ್ಲಿ ಇನ್ನು ಮುಂದೆ ಎಚ್.ಟಿ.ಎಲ್. (HTL) ಎಂದು ಕರೆಯಲಾಗಿದೆ) 500 ಮೀಟರ್‌ಗಳವರೆಗಿನ ಭೂಪ್ರದೇಶ.

ii) ಸಮುದ್ರ ಸಂಪರ್ಕಿತವಾದ ಉಬ್ಬರವಿಳಿತದಿಂದ ಪ್ರಭಾವಿತವಾದ ಜಲನಿಕಾಯಗಳ ಉದ್ದಕ್ಕೂ ಭೂಮಿಯ ಕಡೆಗೆ 100 ಮೀಟರುಗಳು ಅಥವಾ ಸಂದು ಕಡಲಿನ ಅಗಲ ಇವೆರಡರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸಿ.ಆರ್.ಜೆಡ್. (CRZ) ಅನ್ವಯಿಸುತ್ತದೆ. ಅಂಥ ಉಬ್ಬರವಿಳಿತ ಪ್ರಭಾವಕ್ಕೊಳಗಾದ ಜಲನಿಕಾಯಗಳ ಉದ್ದಕ್ಕೂ ಎಷ್ಟು ದೂರದವರೆಗೆ ಅಭಿವೃದ್ಧಿಯನ್ನು ನಿಯಂತ್ರಿಸಬೇಕು ಎಂಬುದನ್ನು ಉಬ್ಬರವಿಳಿತದ ಪರಿಣಾಮಗಳನ್ನು ಎಷ್ಟು ದೂರದವರೆಗೆ ಅನುಭವಿಸಲಾಗುತ್ತಿದೆ. ಎಂಬುದರ ಆಧಾರದ ಮೇಲೆ ನಿರ್ಧರಿಸತಕ್ಕದ್ದು. ಇದನ್ನು ವರ್ಷದ ಅತಿ ಶುಷ್ಕ ಅವಧಿಯಲ್ಲಿ ಅಳತೆ ಮಾಡುವಾಗ ಸಾವಿರಕ್ಕೆ ಐದು ಭಾಗದಷ್ಟು ಉಪ್ಪಿನಂಶದ ಸಾಂಧ್ರತೆಯನ್ನು ಆಧರಿಸಿ ನಿರ್ಣಯಿಸಲಾಗುತ್ತದೆ. ಎಲ್ಲಿಯವರೆಗೆ ಉಬ್ಬರ ವಿಳಿತಗಳ ಪರಿಣಾಮಗಳನ್ನು ಅನುಭವಿಸಲಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು ಮತ್ತು ಅದರಂತೆ ಕರಾವಳಿ ವಲಯ ನಿರ್ವಹಣಾ ಯೋಜನೆಗಳಲ್ಲಿ (ಇಲ್ಲಿ ಇನ್ನು ಮುಂದೆ Coastal Zone Management Plan (CZMP) ಗಳು ಎಂದು ಕರೆಯಲಾಗಿದೆ) ಗುರುತು ಮಾಡಬೇಕು.

**ವಿವರಣೆ:** ಈ ಉಪ ಪ್ಯಾರಾದ ಉದ್ದೇಶಗಳಿಗಾಗಿ ಉಬ್ಬರವಿಳಿತ ಪ್ರಭಾವಿಕ ಜಲ ನಿಕಾಯಗಳೆಂದರೆ ಸಮುದ್ರದ ಉಬ್ಬರ ವಿಳಿತಗಳ ಪರಿಣಾಮಗಳನ್ನು ಎದುರಿಸುವ ಜಲ ನಿಕಾಯಗಳು, ಕೊಲ್ಲಿಗಳು, ಅಳಿವೆಗಳು, ನದಿಗಳು, ಸಂದು ಕಡಲು, ಹಿನ್ನೀರು, ಲಗೂನುಗಳು, ಸಮುದ್ರ ಅಥವಾ ಸಂದುಗಡಲು ಮತ್ತು ಅಥಹವುಗಳಿಗೆ ಸಂಪರ್ಕ ಹೊಂದಿರುವ ಕೊಳಗಳು.

i) ಸಮುದ್ರಜ ಮುಖ ಪ್ರದೇಶದಲ್ಲಿ ವಿಕೋಪರೇಖೆ ಮತ್ತು ಭೂಭಾಗದ ಕಡೆಗೆ ಉಬ್ಬರರೇಖೆಯಿಂದ 500 ಮೀಟರುಗಳ ಪ್ರದೇಶ ಮತ್ತು ಉಬ್ಬರವಿಳಿತ ಪ್ರಭಾವಿತ ಜಲ ನಿಕಾಯಗಳ ಸಂದರ್ಭದಲ್ಲಿ ವಿಕೋಪರೇಖೆ ಮತ್ತು 100 ಮಿಟರುಗಳ ರೇಖೆವರೆಗಿನ ಪ್ರದೇಶ. 'ವಿಕೋಪ ರೇಖೆ' ಎಂದರೆ ಉಬ್ಬರವಿಳಿತ, ಅಲೆಗಳು ಮತ್ತು ಸಮುದ್ರ ಮಟ್ಟದ ಏರಿಕೆ ಹಾಗೂ ತೀರ ರೇಖೆಯ ಬದಲಾವಣೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು, ಪರಿಸರ ಮತ್ತು ಅರಣ್ಯ ಮಂತ್ರಾಲಯವರು, ಸರ್ವೇ ಆಫ್ ಇಂಡಿಯ (SOI) ಅವರ ಮೂಲಕ ಗುರುತಿಸಿ ರೇಖಿಸಿರುವ ಒಂದು ರೇಖೆ.

ii) ಉಬ್ಬರ ರೇಖೆ ಮತ್ತು ಇಳಿತ ರೇಖೆಗಳ ನಡುವಿನ ಭೂ ಪ್ರದೇಶ ಇದನ್ನು ಅಂತರ ಭರತ ವಲಯ (Internal Zone) ಎಂದು ಕರೆಯುತ್ತೇವೆ.

iii) ಸಮುದ್ರದ ಸಂದರ್ಭದಲ್ಲಿ ಇಳಿತದ ರೇಖೆಯಿಂದ ಸಾಗರ ಜಲ ಸೀಮಾ ಮೀತಿಯವರೆಗಿನ (12 ನಾಟಿಕಲ್ ಮೈಲಿ ಪ್ರದೇಶ ಮತ್ತು ಉಬ್ಬರವಿಳಿತ ಪ್ರಭಾವಿತ ಜಲ ನಿಕಾಯಗಳ ಸಂದರ್ಭದಲ್ಲಿ ಒಂದು ದಂಡೆಯ ಇಳಿತ ರೇಖೆಯಿಂದ ಅದರ ಎದುರು ದಂಡೆಯ ಇಳಿತ ರೇಖೆ ನಡುವೆ ಇರುವ ನೀರು ಮತ್ತು ಪಾತ್ರ ಪ್ರದೇಶ).

**2. ಅಧಿಸೂಚನೆಯ ಅನುಸಾರ ನಿಷೇಧಿಸಲ್ಪಟ್ಟಿರುವ ಚಟುವಟಿಕೆಗಳು**

ಅಧಿಸೂಚನೆಯ ಕಂಡಿಕೆ 3ರಲ್ಲಿ ನಮೂದಿಸಲಾಗಿರುವ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ.

**3. ಅನುಮತಿಸಲ್ಪಟ್ಟಿರುವ ಚಟುವಟಿಕೆಗಳು**

ಅಧಿಸೂಚನೆಯ ಕಂಡಿಕೆ 3ರಲ್ಲಿ ನಮೂದಿಸಲ್ಪಟ್ಟಿರುವ ಚಟುವಟಿಕೆಗಳನ್ನು ಹೊರತುಪಡಿಸಿ ಉಳಿದಂತೆ ಮೀನುಗಾರರ ಮತ್ತು ಸ್ಥಳೀಯ ಸಮುದಾಯಗಳ ಅನುಕೂಲಕ್ಕಾಗಿ ಸಮುದ್ರಮುಖವಾದ ಮತ್ತು ಮುಂಗೆರೆಯ ಸೌಕರ್ಯಗಳ ಅವಶ್ಯವಿರುವ ಚಟುವಟಿಕೆಗಳನ್ನು ನಿಯಮಾನುಸಾರ ಸಂಬಂಧ ಪಟ್ಟ ಪ್ರಾಧಿಕಾರಗಳು ಅನುಮತಿಸಬಹುದಾಗಿದೆ.

**4. ಕಡಲ ತೀರ ನಿಯಂತ್ರಿತ ವಲಯದ ವಿಂಗಡಣೆ:**

ಕಡಲ ತೀರದ ಪರಿಸರ ಸೂಕ್ಷ್ಮತೆ ಮತ್ತು ಭೂ ಬಳಕೆಯ ಆಧಾರದ ಮೇಲೆ ಚಡುವಟಿಕೆಗಳ ನಿಯಂತ್ರಣದ ದೃಷ್ಠಿಯಿಂದ ನಿಯಂತ್ರಿತ ವಲಯವನ್ನು ಐದು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳ ಸಂಕ್ಷಿಪ್ತ ಮಾಹಿತಿ ಕೆಳಕಂಡಂತಿದೆ.

1. **ಸಿ.ಆರ್.ಜೆಡ್–I:** ಜೀವಿ ಪರಿಸರ ದೃಷ್ಟಿಯಿಂದ ಬಲು ನಾಜೂಕಾದ ಮತ್ತು ಯಾವುದರ ಭೂ ಮೇಲ್ಮೈ ಲಕ್ಷಣಗಳು ಕರಾವಳಿಯ ಅಖಂಡತೆಯನ್ನು ನಿರ್ವಹಿಸಿಕೊಂಡು ಬರಲು ಮಹತ್ವದ ಪಾತ್ರವನ್ನು ವಹಿಸುತ್ತದೆಯೋ ಅಂಥ ಪ್ರದೇಶಗಳು.

2. **ಸಿ.ಆರ್.ಜೆಡ್–II:** ಕಡಲ ತೀರದ ರೇಖೆಯವರೆಗೆ ಅಥವಾ ಕಡಲ ತೀರದ ರೇಖೆಗೆ ಬಲು ಹತ್ತಿರವಾಗಿ ಅಭಿವೃದ್ಧಿ ಪಡಿಸಿದ ಪ್ರದೇಶಗಳು.

**ವಿವರಣೆ:** 'ಅಭಿವೃದ್ಧಿ ಪಡಿಸಿದ ಪ್ರದೇಶ' ಎಂಬ ಪದದ ಉದ್ದೇಶಗಳಿಗಾಗಿ ಅದನ್ನು ಪುರಸಭಾ ಮಿತಿಗಳಲ್ಲಿ ಅಥವಾ ಇನ್ಯಾವುದೇ ಕಾನೂನು ಬದ್ಧವಾಗಿ ಹೆಸರಿಸಿದ ನಗರ ಪ್ರದೇಶದ ಮಿತಿಯೊಳಗೆ ಇರುವ ಈಗಾಗಲೇ ಗಣನೀಯ ಪ್ರಮಾಣದಲ್ಲಿ ನಿರ್ಮಿತವಾಗಿರುವ ಮತ್ತು ಚರಂಡಿ ವ್ಯೆವಸ್ಥೆ ಸಂಪರ್ಕ ಮಾರ್ಗಗಳು ಮತ್ತಿತರ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಮುಂತಾದ ಮೂಲ ಸೌಲಭ್ಯಗಳನ್ನು ಹೊಂದಿರುವ ಪ್ರದೇಶಗಳು ಎಂದು ಪರಿಭಾಷಿಸಲಾಗಿದೆ.

3. **ಸಿ.ಆರ್.ಜೆಡ್–III:** ಹೋಲಿಕೆಯಲ್ಲಿ ಯಾವುದೇ ಚಟುವಟಿಕೆ ಇಲ್ಲದ ಮತ್ತು ಪ್ರವರ್ಗ I; ಅಥವಾ II ಕ್ಕೆ ಸೇರಿರದ ಪ್ರದೇಶಗಳು, ಇದರಲ್ಲಿ (ಅಭಿವೃದ್ಧಿ ಹೊಂದಿದ ಮತ್ತು ಹೊಂದಿರದ) ಗ್ರಾಮೀಣ ಪ್ರದೇಶದ ಕರಾವಳಿ ಪ್ರದೇಶಗಳು ಮತ್ತು ಸಾಕಷ್ಟು ಕಟ್ಟಡ ನಿರ್ಮಾಣವಾಗಿರದ ಮುನಿಸಿಪಲ್ ಮಿತಿಗಳಲ್ಲಿ ಅಥವಾ ಇತರ ಕಾನೂನು ಬದ್ಧವಾಗಿ ನಗರ ಪ್ರದೇಶವೆಂದು ಹೆಸರಿಸಲಾದ ಸ್ಥಳಗಳೊಳಗಿನ ಪ್ರದೇಶಗಳನ್ನು ಒಳಗೊಂಡಿರುತ್ತದೆ.

4. **ಸಿ.ಆರ್.ಜೆಡ್–IV:–**
   - ಎ) ಉಬ್ಬರ ರೇಖೆಯಿಂದ ಸಮುದ್ರದ ಕಡೆಗೆ ಹನ್ನೆರಡು ನಾಟಿಕಲ್ ಮೈಲುಗಳವರೆಗಿನ ಜಲ ಪ್ರದೇಶ
   - ಬಿ) ಇದರಲ್ಲಿ ಉಬ್ಬರ ವಿಳಿತಗಳ ಪ್ರಭಾವಕ್ಕೆ ಒಳಗಾಗುವ ಜಲ ನಿಕಾಯಗಳ ಜಲ ಪ್ರದೇಶವು ಅಂದರೆ ಸದರಿ ಜಲ ನಿಕಾಯದ ಮುಖಭಾಗದಿಂದ ಹಿಡಿದು ಉಬ್ಬರವಿಳಿತದ ಪ್ರಭಾವಕ್ಕೆ ಒಳಗಾಗುವ ಸ್ಥಳದವರೆಗಿನ ಪ್ರದೇಶವು ಒಳಗೊಳ್ಳತಕ್ಕದ್ದು. ಇವನ್ನು ವರ್ಷದ ಅತಿ ಶುಷ್ಕ ಅವಧಿಯಲ್ಲಿ ಪ್ರತಿ ಸಾವಿರಕ್ಕೆ ಐದು ಭಾಗಗಳಾಗಿ ಅಳೆಯಲಾಗುವುದು.

5. **ಸಿ.ಆರ್.ಜೆಡ್–V:–** ಬಲು ಸೂಕ್ಷ್ಮ ಕರಾವಳಿ ಪರಿಸರವನ್ನು ರಕ್ಷಿಸುವ ಉದ್ದೇಶಕ್ಕಾಗಿ ಮತ್ತು ಸ್ಥಳೀಯ ಸಮುದಾಯಗಳು ಎದುರಿಸುವ

ಸಂಕಷ್ಟಗಳ ದೃಷ್ಟಿಯಿಂದ ವಿಶೇಷ ಪರಿಗಣನೆ ಅಗತ್ಯವಿರುವ ಪ್ರದೇಶಗಳು.

**5. ಕಡಲ ತೀರ ವಲಯ ನಿರ್ವಹಣಾ ಯೋಜನೆ:-**

ಕಡಲ ತೀರ ನಿಯಂತ್ರಿತ ವಲಯದ ವಿವಿಧ ವರ್ಗಗಳನ್ನು ಗುರುತಿಸಲ್ಪಟ್ಟಿರುವ ನಕ್ಷೆಗಳನ್ನೊಳಗೊಂಡ ಕಡಲ ತೀರ ವಲಯ ನಿರ್ವಹಣಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸುವುದನ್ನು ಈ ನಿಯಮಗಳಲ್ಲಿ ಅಂತರ್ಗತಗೊಳಿಸಲಾಗಿದೆ.

**6. ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರ:-**

ಕಡಲ ತೀರ ನಿರ್ವಹಣಾ ಯೋಜನೆಯ ಅನುಷ್ಠಾನಕ್ಕಾಗಿ ಮತ್ತು ಈ ಪ್ರದೇಶದಲ್ಲಿನ ಚಟುವಟಿಕೆಗಳ ನಿಯಂತ್ರಣಕ್ಕಾಗಿ ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ರಾಜ್ಯ ಕಡಲ ತೀರ ವಲಯ ನಿರ್ವಹಣಾ ಪ್ರಾಧಿಕಾರ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಡಲ ತೀರ ವಲಯ ನಿರ್ವಹಣಾ ಸಮಿತಿಗಳನ್ನು ಸ್ಥಾಪಿಸಲಾಗಿದೆ.

## ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗೆ ಯೋಜನೆ ರೂಪಿಸುವುದು

### 1143; ಶ್ರೀ ಕೆ. ಮೋನಪ್ಪ ಭಂಡಾರಿ (ವಿ.ಸ.ಕ್ಷೇತ್ರ)

**ಅ)** ರಾಜ್ಯದಲ್ಲಿರುವ ದೊಡ್ಡ ಮತ್ತು ಸಣ್ಣ ಕೆರೆಗಳು ಎಷ್ಟು; (ಒಟ್ಟು ಸಂಖ್ಯಾ ವಿವರಗಳನ್ನು ಜಿಲ್ಲಾವಾರು ನೀಡುವುದು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಸಂಖ್ಯಾ ವಿವರ ಅವು ಯಾವುವು ಸಂಪೂರ್ಣ ಮಾಹಿತಿ ಒದಗಿಸುವುದು)

**ಆ)** ದಕ್ಷಿಣ ಕನ್ನಡ ಜಿಲ್ಲೆ ಇಂತಹ ದೊಡ್ಡ ಹಾಗೂ ಸಣ್ಣ ಕೆರೆಗಳ ಪೈಕಿ ಈಗಾಗಲೇ ಎಷ್ಟು ಕೆರೆಗಳನ್ನು ಮತ್ತು ಯಾವ್ಯಾವ ಕೆರೆಗಳನ್ನು ಕೆರೆ ಹೂಳೆತ್ತುವ ಕಾಮಗಾರಿ ಪೂರ್ಣಗೊಳಿಸಲಾಗಿದೆ; ಇದಕ್ಕೆ ಖರ್ಚಾದ

ಮೊತ್ತವೆಷ್ಟು; ಕಳೆದ 5 ವರ್ಷಗಳ ಮಾಹಿತಿಯನ್ನು ತಾಲೂಕುವಾರು ನೀಡುವುದು;

ಇ) ಸದರಿ ಕೆರೆಗಳ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ದುಸ್ಥಿತಿಯಲ್ಲಿರುವ ಕೆರೆಗಳ ಮತ್ತು ಹೂಳು ತುಂಬಿರುವ ಕೆರೆಗಳ ಜೀರ್ಣೋದ್ಧಾರಕ್ಕೆ ಯಾವ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಸದರಿ ಕೆರೆಗಳಿಂದಾಗಿ ರೈತರ ಕೃಷಿ ಭೂಮಿಗೆ ನೀರುಣಿಸಲು ಯೋಗ್ಯವಾಗಿರುವ ಕೆರೆಗಳೆಷ್ಟು; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಈ) ಈ ಪೈಕಿ ಎಷ್ಟು ಕೆರೆಗಳನ್ನು ಮೀನುಗಾರಿಕೆ ಬೆಳವಣಿಗೆಗೆ ಹಾಗೂ ಪ್ರವಾಸಿ ವಿಹಾರ ತಾಣಗಳಾಗಿ ಮಾರ್ಪಡಿಸಿ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ದೋಣಿವಿಹಾರ ಯೋಜನೆ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗುವುದೇ; ಅಂತಹ ಕೆರೆಗಳ್ಯಾವುವು;

ಉ) ಇದಕ್ಕಾಗಿ ಗುರುತಿಸಿದ ಕೆರೆಗಳ ಮತ್ತು ಯಾವ ಯೋಜನೆಯಡಿ ಎಷ್ಟು ಮೊತ್ತದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತದೆಯೇ? (ವಿವರ ಒದಗಿಸುವುದು)

**ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು)**

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 3584 ಸಣ್ಣ ಕೆರೆಗಳಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ತಾಲ್ಲೂಕುವಾರು ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 19730 ಕೆರೆಗಳಿರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 159 ಕೆರೆಗಳಿದ್ದು, ತಾಲ್ಲೂಕುವಾರು ವಿವರವನ್ನು ಅನುಬಂಧ–2A ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ – 3 ರಲ್ಲಿ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 64 ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಕೆರೆಗಳ ವಿವರವನ್ನು ಅನುಬಂಧ – 3A ರಲ್ಲಿ ಹಾಗೂ ಕಳೆದ 5 ವರ್ಷಗಳಲ್ಲಿ ಖರ್ಚಾದ ತಾಲ್ಲೂಕುವಾರು ವಿವರಗಳನ್ನು ಅನುಬಂಧ – 4 ರಲ್ಲಿ ನೀಡಲಾಗಿದೆ.

ಇ) ಪ್ರಸ್ತುತ ಸಣ್ಣ ನೀರಾವರಿ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ಮಂಗಳೂರು ತಾಲೂಕಿನ ಕಾವೂರು ಕೆರೆ ಮತ್ತು ಬಂಟ್ವಾಳ ತಾಲೂಕಿನ ಕಾರಿಂಜೇಶ್ವರ ಕೆರೆಗಳ ಜೀರ್ಣೋದ್ಧಾರಕ್ಕೆ ಪ್ರಸ್ತುತ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ. ಈ ಕೆರೆಗಳು ರೈತರ ಕೃಷಿ ಭೂಮಿಗೆ ನೀರುಣಿಸಲು ಯೋಗ್ಯವಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 159 ಕೆರೆಗಳಿದ್ದು, ಅವುಗಳಲ್ಲಿ ಕೆರೆಗಳ ಪುನರುಜ್ಜೀವನ ಯೋಜನೆಯಡಿ 76 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅವುಗಳಲ್ಲಿ 36 ಕಾಮಗಾರಿಗಳು ಮುಗಿದಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯ 13 ಕೆರೆಗಳನ್ನು ಕೃಷಿ ಭೂಮಿಗೆ ನೀರು ಒದಗಿಸಲು ಉಪಯೋಗಿಸಲಾಗುತ್ತಿದೆ. ವಿವರವನ್ನು ಅನುಬಂಧ–5 ರಲ್ಲಿ ನೀಡಲಾಗಿದೆ.

**ಈ)** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಗ್ರಾಮ ಪಂಚಾಯತಿ ಕೆರೆಗಳನ್ನು 2012–13ನೇ ಸಾಲಿನಲ್ಲಿ ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿದೆ.

1) ಗುರುವಾಯ್ಯನ ಕೆರೆ – 10,000

2) ಕಡಲ ಕೆರೆ – 10,000

3) ಸುಣ್ಣದ ಕೆರೆ – 10,000

4) ಪಿಲಿಕುಳ ಕೆರೆ – 10,000

5) ಎಂ.ಸಿ.ಎಫ್ ಕೆರೆ – 10,000

ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸಿ ವಿಹಾರ ತಾಣಗಳಾಗಿ ಮಾರ್ಪಡಿಸುವ ಯೋಜನೆಯು ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

**ಅನುಬಂಧ–1**

**ರಾಜ್ಯದಲ್ಲಿರುವ ದೊಡ್ಡ ಮತ್ತು ಸಣ್ಣ ನೀರಾವರಿ ಕೆರೆಗಳ ಜಿಲ್ಲಾವಾರು ಸಂಖ್ಯೆಗಳ ವಿವರ**

| ಕ್ರ.ಸಂ. | ಜಿಲ್ಲೆ | ಸಂಖ್ಯೆ |
|---|---|---|
| 1 | ಬೆಂಗಳೂರು (ನಗರ) | 47 |
| 2 | ಬೆಂಗಳೂರು (ಗ್ರಾಮಾಂತರ) | 98 |
| 3 | ರಾಮನಗರ | 103 |
| 4 | ಚಿತ್ರದುರ್ಗ | 149 |
| 5 | ದಾವಣಗೆರೆ | 102 |
| 6 | ಕೋಲಾರ | 143 |
| 7 | ಚಿಕ್ಕಬಳ್ಳಾಪುರ | 202 |

| | | |
|---|---|---|
| 8 | ಶಿವಮೊಗ್ಗ | 338 |
| 9 | ತುಮಕೂರು | 368 |
| 10 | ಮೈಸೂರು | 51 |
| 11 | ಚಾಮರಾಜನಗರ | 64 |
| 12 | ಮಂಡ್ಯ | 48 |
| 13 | ಹಾಸನ | 163 |
| 14 | ಚಿಕ್ಕಮಗಳೂರು | 121 |
| 15 | ದಕ್ಷಿಣ ಕನ್ನಡ | 2 |
| 16 | ಉಡುಪಿ | 4 |
| 17 | ಕೊಡಗು | 28 |
| 18 | ಬಳ್ಳಾರಿ | 81 |
| 19 | ಬೀದರ್ | 117 |
| 20 | ಗುಲ್ಬರ್ಗ | 150 |
| 21 | ಯಾದಗಿರಿ | 71 |
| 22 | ರಾಯಚೂರು | 68 |
| 23 | ಕೊಪ್ಪಳ | 106 |
| 24 | ಬೆಳಗಾವಿ | 257 |
| 25 | ಬಿಜಾಪುರ | 149 |
| 26 | ಬಾಗಲಕೋಟೆ | 63 |
| 27 | ಧಾರವಾಡ | 111 |
| 28 | ಗದಗ | 29 |
| 29 | ಹಾವೇರಿ | 259 |
| 30 | ಉತ್ತರ ಕನ್ನಡ | 90 |
| | **ಒಟ್ಟು** | **3584** |

## ಅನುಬಂಧ–2

## ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ. ಮೋನಪ್ಪ ಭಂಡಾರಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1143

### ಅ) ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳ ತಾಲ್ಲೂಕುವಾರು ವಿವರ

| ಕ್ರ.ಸಂ. | ತಾಲ್ಲೂಕು | ಕೆರೆಗಳ ಹೆಸರು | ಕೆರೆ ಅಂಗಳದ ವಿಸ್ತೀರ್ಣ (ಹೆ.ಗಳಲ್ಲಿ) | ನೀರಿನ ಶೇಖರಣಾ ಸಾಮರ್ಥ್ಯ (ಎಂಸಿಎಫ್‌ಟಿ) | ಅಚ್ಚುಕಟ್ಟು (ಹೆ.ಗಳಲ್ಲಿ) |
|---|---|---|---|---|---|
| 1 | ಭಂಟ್ವಾಳ | ಕಾರಿಂಜೇಶ್ವರ ಕೆರೆ | 1.05 | 1.00 | 41.95 |
| 2 | ಮಂಗಳೂರು | ಕಾವೂರು ಕೆರೆ | 3.34 | 5.93 | 89.48 |
| 3 | ಬೆಳ್ತಂಗಡಿ | – | – | – | – |
| 4 | ಪುತ್ತೂರು | – | – | – | – |
| 5 | ಸುಳ್ಯ | – | – | – | – |
| | **ಒಟ್ಟು** | **0** | **4.39** | **6.93** | **131.43** |

## ಅನುಬಂಧ–2 A

## ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಪೂರ್ಣ ಮಾಹಿತಿ

| ಕ್ರ. ಸಂ. | ಕೆರೆಯ ಹೆಸರು | ಕೆರೆ ಇರುವ ಗ್ರಾಮ | ಷರಾ |
|---|---|---|---|
| **1** | **2** | **3** | **4** |
| | **ತಾಲೂಕು : ಮಂಗಳೂರು** | | |
| 1 | ಸೋಮೇಶ್ವರ ಗ್ರಾಮದ ಬೀಚ್ ಬಳಿ ಇರುವ ಸರ್ಕಾರಿ ಕೆರೆ ಅಭಿವೃದ್ಧಿ | ಸೋಮೇಶ್ವರ | |
| 2 | ಸೋಮೇಶ್ವರ ಗ್ರಾಮದ ಮೂರುಕಟ್ಟೆ ಕೆರೆ ಅಭಿವೃದ್ಧಿ | ಸೋಮೇಶ್ವರ | |
| 3 | ಬೋಳಿಯಾರು ಗ್ರಾಮದ ಮಜಿ/ಹ್ಯೊಗೆ ಕೆರೆ ಅಭಿವೃದ್ಧಿ | ಬೋಳಿಯಾರು | |

| | | | |
|---|---|---|---|
| 4 | ಪಾವೂರು ಗ್ರಾಮದ ಇನೋಳಿ ಕೆರೆ ಅಭಿವೃದ್ಧಿ | ಪಾವೂರು | |
| 5 | ಪಾವೂರು ಗ್ರಾಮದ ಇನೋಳಿ ಕಲ್ಲಾಜೆ ಬಪ್ಪಂತೊಟ ಕೆರೆ ಅಭಿವೃದ್ಧಿ (ಕೋಣಾಜೆ ಗ್ರಾಮದ ಕುಂಟಲಗುರಿ ಕೆರೆ ಅಭಿವೃದ್ಧಿ) | ಪಾವೂರು | |
| 6 | ಹರೇಕಳ ಗ್ರಾಮದ ಐಕು ಕೆರೆ ಅಭಿವೃದ್ಧಿ | ಹರೇಕಳ | |
| 7 | ಅಂಬ್ಲಮೊಗರು ಗ್ರಾಮದ ನಾಡ ಕೆರೆ ಅಭಿವೃದ್ಧಿ | ಅಂಬ್ಲಮೊಗರು | |
| 8 | ಬೆಳ್ಮ ಗ್ರಾಮದ ಕಲ್ಪಾದೆ ಕೆರೆ ಅಭಿವೃದ್ಧಿ | ಬೆಳ್ಮ | |
| 9 | ಮಂಜ ನಾಡಿ ಗ್ರಾಮದ ಬಟ್ಟೆಯಡ್ಕ ಕೆರೆ ಅಭಿವೃದ್ಧಿ | ಮಂಜನಾಡಿ | |
| 10 | ಮಂಗಳೂರು ತಾಲೂಕು ಕುಮರಂಗಲದಲ್ಲಿರುವ ಸಾರ್ವಜನಿಕರಿಗೆ ಒಪ್ಪಿಸಲ್ಪಟ್ಟ ಕೆರೆ ಅಭಿವೃದ್ಧಿ | ಕೋಟೆಕಾರು | |
| 11 | ಮಂಜ ನಾಡಿ ಗ್ರಾಮದ ನಾಟೆಕಲ್ ಕೆರೆ ಅಭಿವೃದ್ಧಿ | ಮಂಜನಾಡಿ | |
| 12 | ಉಳಾಯಿಬೆಟ್ಟು ಗ್ರಾಮ (ಪೆರ್ಮುಂಕಿ ಕೈ ಗುರಿ) | ಉಳಾಯಿಬೆಟ್ಟು | |
| 13 | ಗಂಜೀಮಠ ಗ್ರಾಮ ತೆಂಕ ಉಳಿಪಾಡಿ ಪರಕೆದು ಕೆರೆ | ಗಂಜೀಮಠ | |
| 14 | ಗಂಜೀಮಠ ಗ್ರಾಮ ತೆಂಕ ಉಳಿಪಾಡಿ ಕೆರೆ | ಗಂಜೀಮಠ | |
| 15 | ಗುರುಪುರ ಗ್ರಾಮ ಚಿಲಿಂಬಿ ಕೆರೆ | ಗುರುಪುರ | |
| 16 | ಗುರುಪುರ ಗ್ರಾಮ ಅಡ್ಡೂರು ಬರ್ಕೆ ಕೆರೆ | ಗುರುಪುರ | |
| 17 | ಗುರುಪುರ ಗ್ರಾಮ ಗುರುಪುರ ಮಠದ ಹಿಂದಿನ ಕೆರೆ | ಗುರುಪುರ | |
| 18 | ಗುರುಪುರ ಗ್ರಾಮ ಗುರುಪುರ ಸದಾಶಿವ ದೇವಸ್ಥಾನ ಕೆರೆ | ಗುರುಪುರ | |
| 19 | ಕಂದಾವರ ಗ್ರಾಮ ಕಂದಾವರ ಕೆರೆ | ಕಂದಾವರ | |

| | | | |
|---|---|---|---|
| 20 | ಅಡ್ಯಾರು ಗ್ರಾಮ ಕೆಮ್ಮಂಜೂರು ಕೆರೆ | ಅಡ್ಯಾರು | |
| 21 | ಅರ್ಕುಳ ಗ್ರಾಮ ಅರ್ಕುಳಬೈಲು ಕೆರೆ | ಅರ್ಕುಳ | |
| 22 | ಬೊಂಡಂತಿಲ ಗ್ರಾಮ ಅರ್ಕುಲ ಮರಹಂದ ಕೆರೆ | ಬೊಂಡಂತಿಲ | |
| 23 | ನೀರುಮಾರ್ಗ ಗ್ರಾಮ ಮಾಣೂರು ಕೆರೆ | ನೀರುಮಾರ್ಗ | |
| 24 | ನೀರುಮಾರ್ಗ ಗ್ರಾಮ ನೀರುಮಾರ್ಗ ಕೆರೆ | ನೀರುಮಾರ್ಗ | |
| 25 | ಬೊಂಡಂತಿಲ ಗ್ರಾಮ ಕಟ್ಟಂಜ ಕೆರೆ | ಬೊಂಡಂತಿಲ | |
| 26 | ಬೊಂಡಂತಿಲ ಗ್ರಾಮ ಪಕಳಪಾದೆ ಕೆರೆ | ಬೊಂಡಂತಿಲ | |
| 27 | ಬೊಂಡಂತಿಲ ಗ್ರಾಮ ಬಾಬುಕೋಡಿ ಕೆರೆ | ಬೊಂಡಂತಿಲ | |
| 28 | ಮುಚ್ಚೂರು ಬಾಯಾಂಗ ಕೆರೆ | ಮುಚ್ಚೂರು | |
| 29 | ಮುಚ್ಚೂರು ಕೊಂಪದವು ಬಂಡಸಾಲೆ ಕೆರೆ | ಮುಚ್ಚೂರು | |
| 30 | ಪಡುಪೆರಾರ ಕಬೆತ್ತುಗುತ್ತು ಕೆರೆ | ಪಡುಪೆರಾರ | |
| 31 | ಎಡಪದವು ಕಾಂಬೆಟ್ಟು ದೇವಸ್ಥಾನದ ಬಳಿಯ ಕೆರೆ | ಎಡಪದವು | |
| 32 | ತೆಂಕ ಎಡಪದವು ಗ್ರಾಮದ ಕೋರ್ಡೆಲು ಕೆರೆ | ತೆಂಕ ಎಡಪದವು | |
| 33 | ಎಡಪದವು ಗ್ರಾಮದ ಶಿಬ್ರಿ ಕೆರೆ | ಎಡಪದವು | |
| 34 | ತೆಂಕ ಎಡಪದವು ಗ್ರಾಮದ ಕುಂದೋಡಿ ಕೆರೆ | ತೆಂಕ ಎಡಪದವು | |
| 35 | ತೆಂಕ ಎಡಪದವು ಗ್ರಾಮದ ಒಡ್ಡೂರು ಕಾಂತುಕೋಡಿ ಕೆರೆ | ತೆಂಕ ಎಡಪದವು | |
| 36 | ತೆಂಕ ಎಡಪದವು ಗ್ರಾಮದ ಕೆರೆ | ತೆಂಕ ಎಡಪದವು | |
| 37 | ಪಡುಪೆರಾರ ಗ್ರಾಮದ ಕೊಕ್ಕಾರ್ ಕೆರೆ | ಪಡುಪೆರಾರ | |
| 38 | ಕೆಂಜಾರು ಗ್ರಾಮದ ಅರ್ಬಿ ಕೆರೆ | ಕೆಂಜಾರು | |
| 39 | ಮೂಡಬಿದ್ರೆ ಪುರಸಭೆ ವ್ಯಾಪ್ತಿಯ ಬಸದಿ ಕೆರೆ | ಮೂಡಬಿದ್ರೆ | |
| 40 | ಅತಿಕಾರಿಬೆಟ್ಟು ಗ್ರಾಮದ ಕಕ್ವ ಮಡಿವಾಳ | ಅತಿಕಾರಿಬೆಟ್ಟು | |

| | | | |
|---|---|---|---|
| | ಕೆರೆ | | |
| 41 | ಶಿಮಂತೂರು ಮಾಡ್ರಾಗುತ್ತು ಬಳಿ ಇರುವ ಕೆರೆ | ಶಿಮಂತೂರು | |
| 42 | ಮೂಡುಶೆಡ್ಡೆ ಗ್ರಾಮ ಕುಂಟ ಕೆರೆ | ಮೂಡುಶೆಡ್ಡೆ | |
| 43 | ಕಿಲ್ಪಾಡಿ ಗ್ರಾಮ ಕೆಂಚನಕೆರೆ | ಕಿಲ್ಪಾಡಿ | |
| 44 | ಐಕಳ ಗ್ರಾಮ ಐಕಳ ಬಾವ ಕೆರೆ | ಐಕಳ | |
| 45 | ಎಳಿಂಜೆ ಗ್ರಾಮ ಮುತ್ತಯ ಕೆರೆ | ಎಳಿಂಜೆ | |
| 46 | ಎಕ್ಕಾರು ಗ್ರಾಮ ಬೈಪೋಡಿ ಕೆರೆ ಮುಡ್ಡೂರು ಗ್ರಾಮ ಪಂಚಾಯತ್ ನಿಡ್ಡೋಡಿ ಗ್ರಾಮದ ಮಾಂಜ ಕೆರೆ | ಎಕ್ಕಾರು | |
| 47 | ಕವತ್ತಾರು ಗ್ರಾಮ ಭಟ್ಟಬೆನ್ನಿ ಕೆರೆ | ಕವತ್ತಾರು | |
| 48 | ಕುತ್ತೆತ್ತೂರು ಗ್ರಾಮ ಪುಲಿತ್ತೂರು ಕೆರೆ | ಕುತ್ತೆತ್ತೂರು | |
| 49 | ಕಿನ್ನಿಗೋಳಿ ಗ್ರಾಮ ತೋಡಮ ಕೆರೆ | ಕಿನ್ನಿಗೋಳಿ | |
| 50 | ಕಿನ್ನಿಗೋಳಿ ಗ್ರಾಮ ರಾಪಾಯಿ ಕೆರೆ | ಕಿನ್ನಿಗೋಳಿ | |
| 51 | ಮನ್ನಬೆಟ್ಟು ಗ್ರಾಮ ಕಮ್ಮಾಜೆ ಕೆರೆ (ಕೆಮ್ರಾಲ್ ಗ್ರಾಮದ ಭೋಜರಾವ್ ಮನೆಬಳಿ ಇರುವ ಕೆರೆ) | ಮನ್ನಬೆಟ್ಟು | |
| 52 | ಕೆಂಜಾರು ಗ್ರಾಮದ ಕೆಂಜಾರು ಕೆರೆ (ಪರ್ದೊಟ್ಟು) | ಕೆಂಜಾರು | |
| 53 | ಶಿರ್ತಾಡಿ ಗ್ರಾಮ ಪಂಚಾಯತ್ ವಾಲ್ಪಾಡಿ ಎಂಡ್ರಟ್ಟು ಕೆರೆ | ಶಿರ್ತಾಡಿ | |
| 54 | ಮೂಡಬಿದ್ರೆ ಕಡಲ ಕೆರೆ | ಮೂಡಬಿದ್ರೆ | |
| | **ತಾಲೂಕು : ಬಂಟ್ವಾಳ** | | |
| 1 | ಬರ್ಕೆ ಕೆರೆ | ಶಂಭೂರು | |
| 2 | ನಾಟೆಬೆಟ್ಟು ಕೆರೆ | ಅರ್ಲ | |
| 3 | ಪರನೀರು ಕೆರೆ | ಮೂಡನಡುಗೋಡು | |
| 4 | ಗಧಾತೀರ್ಥ ಕೆರೆ | ಕಾವಳಮೂಡುರು | |

| | | | |
|---|---|---|---|
| 5 | ಸರ್ವೆ ನಂ 46/8ರಲ್ಲಿರುವ ಅಜ್ಜಿಬೆಟ್ಟು ಕೆರೆ | ಅಜ್ಜಿಬೆಟ್ಟು | |
| 6 | ಕುದ್ಕೋಳಿ ಕೆರೆ | ಬಾಳ್ತಿಲ | |
| 7 | ಚನಿಲ (ಪಿಲಿಂಜ) ಕೆರೆ | ಗೋಳ್ತಮಜಲು | |
| 8 | ಕುಳ ಕೆರೆ | ಕರಿಯಂಗಳ | |
| 9 | ನೂಜಿಬೈಲು ಕೆರೆ | ಕೊಳ್ನಾಡು | |
| 10 | ಬಂಗೇರಕೆರೆ ಕೆರೆ | ಮೂಡಪಡುಕೋಡಿ | |
| 11 | ಕೆದ್ದಳಿಕೆ ಕೆರೆ | ಕಾವಳಪಡೂರು | |
| 12 | ಬದ್ಯಾರು ಕೆರೆ | ಎಲಿಯನಡುಗೋಡು | |
| 13 | ಮದಕ ಕೆರೆ | ಬೋಳಂತೂರು | |
| 14 | ಪುದ್ದೊಟ್ಟು ಕೆರೆ | ಕೊಳ್ನಾಡು | |
| 15 | ಸದಾಶಿವ ದೇವಸ್ಥಾನ ಕೆರೆ | ಕೊಳ್ನಾಡು | |
| 16 | ಸುಧೆಕಾರು ಕೆರೆ | ಬಾಳ್ತಿಲ | |
| 17 | ಪಿತ್ತಿಲಕೋಡಿ ಕೆರೆ | ನರಿಕೊಂಬು | |
| 18 | ಕಲ್ಲಾಜೆ ಕೆರೆ | ಕಡೇಶ್ವಾಲ್ಯ | |
| 19 | ರಾಯಪ್ಪಕೋಡಿ ಕೆರೆ | ಅಮ್ಟೂರು | |
| 20 | ನಾಟಿಜರ ಕೆರೆ | ನರಿಕೊಂಬು | |
| 21 | ಕಿನ್ನಿಮಜಲು ಕೆರೆ | ಅಮ್ಟಾಡಿ | |
| 22 | ಒಳವೂರು ಕೆರೆ | ತುಂಬೆ | |
| 23 | ಹಬೀಬ್ ಅಬ್ದುಲ್ ರಹಿಮಾನ್ ಸಾರ್ವಜನಿಕ ಕೆರೆ | ಸಜೀಪನಡು | |
| 24 | ಕುಟ್ಟಿಕಳ ಕೆರೆ | ಮೇರಮಜಲು | |
| 25 | ತೇವುಕಾಡು ಕೆರೆ | ಮೇರಮಜಲು | |
| 26 | ಬಡ್ಡೂರು ಕೆರೆ | ಮೇರಮಜಲು | |
| 27 | ಗರಡಿಪಳ್ಳ ಕೆರೆ | ಬಾಳೆಪುಣಿ | |
| 28 | ತೇವು ಪರಂಗಿ ಕೆರೆ | ಪುದು | |
| 29 | ಮಹಾಲಿಂಗೇಶ್ವರ ಕೆರೆ | ತುಂಬೆ | |
| 30 | ಹನುಮಾಜೆ ಕೆರೆ | ಪೆರ್ನೆ | |

| | | | |
|---|---|---|---|
| 31 | ಓಜಾಲ (ಪಟ್ಟಿಕಪಡ್ಪು) ಕೆರೆ | ಕುಳ | |
| 32 | ಪಂಚಲಿಂಗೇಶ್ವರ ಕೆರೆ | ವಿಟ್ಲ | |
| 33 | ಕೊಲ್ಯ ಕೆರೆ | ವಿಟ್ಲಮುಡ್ನೂರು | |
| 34 | ನಾಕುನಾಡಿ ಕೆರೆ | ಪಿಲಾತಬೆಟ್ಟು | |
| | **ತಾಲ್ಲೂಕು : ಪುತ್ತೂರು** | | |
| 1 | ಬಳ್ಳಕಾನ ಕೆರೆ | ಅರಿಯಡ್ಕ | |
| 2 | ಚಿಕ್ಕಮುಡ್ನೂರು ಕೆರೆ | ಬನ್ನೂರು | |
| 3 | ಅಲೆಮುಡ ಕೆರೆ | ಬನ್ನೂರು | |
| 4 | ಬಜತ್ತೂರು ಕೆರೆ | ಬಜತ್ತೂರು | |
| 5 | ಮೇಗಿನ ಸಜೆ ಕೆರೆ | ಬಲ್ನಾಡು | |
| 6 | ಆರುವಾರ ಕೆರೆ | ಕಾಣಿಯೂರು | |
| 7 | ಕಾಡತ ಕೆರೆ | ಪೆರಾಬೆ | |
| 8 | ಚೀರ ಕೆರೆ | ಮರ್ದಾಳ | |
| 9 | ಪೆರಿಯಡ್ಕ ಕೆರೆ | ಕಡಬ | |
| 10 | ಪೊಸಳಿಕೆ ಕೆರೆ | ಕೋಡಿಂಬಾಳ | |
| 11 | ನಡುಮಜಲು ಕೆರೆ | ಮರ್ದಾಳ | |
| 12 | ಮುದಲಾಜೆ ಕೆರೆ | ಬಲ್ನಾಡು | |
| 13 | ನೂಜಿ ಕೆರೆ | ಬನ್ನೂರು | |
| 14 | ಪುಂಡಿಕ್ಯಾ ಕೆರೆ | ಬಡಗನ್ನೂರು | |
| 15 | ಬಾಳಬೈಲು ಕೆರೆ | ಮರ್ದಾಳ | |
| 16 | ಕಲ್ಪ ಕೆರೆ | ಕಡಬ | |
| 17 | ಆರ್ಕ ಕೆರೆ | ಕಬಕ | |
| 18 | ಬೆಟ್ಟಗುಂಡಿ ಕೆರೆ | ಕಬಕ | |
| 19 | ಕುಡಿಪ್ಪಾಡಿ ದೇವಾಲಯದ ಕೆರೆ | ಕಬಕ | |
| 20 | ಕಡಬ ಕೆರೆ | ಕಡಬ | |
| 21 | ಕಂಚಿಗಾರ ಕೆರೆ | ಸವಣೂರು | |
| 22 | ಹೊಸ ಕೆರೆ | ಕುಟ್ರುಪ್ಪಾಡಿ | |

| | | | |
|---|---|---|---|
| 23 | ಹಳೇನೇರಂಕಿ ಕೆರೆ | ಹಳೆನೇರಂಕಿ | |
| 24 | ಮಠ ಕೆರೆ | ಉಪ್ಪಿನಂಗಡಿ | |
| 25 | ಹಳೆಸ್ಟೇಶನ್ ಕೆರೆ | ಕಡಬ | |
| 26 | ಕೋಡಿಂಬಾಳ ಕಕ್ಕೆಗುಂಡಿ ಕೆರೆ | ಕಡಬ | |
| 27 | ಬೆಳ್ಳಿಪ್ಪಾಡಿ ಕೆರೆ | ಕೋಡಿಂಬಾಡಿ | |
| 28 | ಕೌಡಿಚ್ಚಾರು ಮದಕ ಕೆರೆ | ಅರಿಯಡ್ಕ | |
| 29 | ಕಟ್ಟತ್ತಾರು ನೀರಾವರಿ ಕೆರೆ | ಮುಂಡೂರು | |
| 30 | ಬೈರೆತ್ತಿ ಕೆರೆ | ಕೆದಂಬಾಡಿ | |
| 31 | ಸುಳ್ಯ ಕೆರೆ | ಐತ್ತೂರು | |
| 32 | ಪಡುಬೆಟ್ಟು ಕೆರೆ | ನೆಲ್ಯಾಡಿ | |
| 34 | ಪರಂಬೋಕು ಕೆರೆ | ಕಡಬ | |
| | **ತಾಲ್ಲೂಕು : ಸುಳ್ಯ** | | |
| 1 | ಮೊಗಪ್ಪಕೆರೆ(ಉ.ಭಾ) | ಬೆಳ್ಳಾರೆ | |
| | ಮೊಗಪ್ಪಕೆರೆ(ದ.ಭಾ) | | |
| 2 | ಪೊದೆಕೆರೆ | ಮುರುಳ್ಯ | |
| 3 | ಬೋಗಾಯನಕೆರೆ | ಬಳ್ಪ | |
| 4 | ಕಾಂತಕುಮೇರಿಕೆರೆ | ಐನೆಕಿದು | |
| 5 | ಬಸವನಮೂಲೆ ಕೆರೆ | ಸುಬ್ರಹ್ಮಣ್ಯ | |
| 6 | ಪನ್ನೆಮಿತ್ತಕೆರೆ | ಬಾಳುಗೋಡು | |
| 7 | ಅಂಗಾರವರ್ಮನಕೆರೆ | ಏನೆಕಲ್ಲು | |
| | **ತಾಲ್ಲೂಕು : ಬೆಳ್ತಂಗಡಿ** | | |
| 1 | ನೂಜೋಡಿ ಕೆರೆ | ನಾರಾವಿ | |
| 2 | ನನ್ನೊಟ್ಟು ಕೆರೆ | ನಾರಾವಿ | |
| 3 | ತ್ಯಾಂಪಶೆಟ್ಟಿ ಕೆರೆ | ನಾರಾವಿ | |
| 4 | ಪೆರಿಂಜೆ ಕೆರೆ | ನಾರಾವಿ | |
| 5 | ಗೊಮ್ಮಟಬೆಟ್ಟ ಕೆರೆ | ನಾರಾವಿ | |
| 6 | ಮಲೆಕೆದ್ದು ಕೆರೆ | ಹೊಸಂಗಡಿ | |

| | | | |
|---|---|---|---|
| 7 | ಎರಡಾಲ್ ಕೆರೆ | ಹೊಸಂಗಡಿ | |
| 8 | ಅತ್ರಟ್ಟ ಕೆರೆ | ಹೊಸಂಗಡಿ | |
| 9 | ಕಿರುಂಬಿ ಕೆರೆ | ಹೊಸಂಗಡಿ | |
| 10 | ಅಣೆಕೆರೆ | ಅಂಡಿಂಜೆ | |
| 11 | ದುಗ್ಗನಬೆಟ್ಟು ಕೆರೆ | ಅಂಡಿಂಜೆ | |
| 12 | ಕಾಂಚಮುಡಗ ಕೆರೆ | ಅಂಡಿಂಜೆ | |
| 13 | ಕರಂಬೋಡು ಕೆರೆ | ಅಂಡಿಂಜೆ | |
| 14 | ಗುಂಪದಡ್ಕ ಕೆರೆ | ಅಂಡಿಂಜೆ | |
| 15 | ಉಲ್ಪೆ ಕೆರೆ | ಪಿಲ್ಯ | |
| 16 | ಬಾರ್ಯ ಕೆರೆ | ಅಳದಂಗಡಿ | |
| 17 | ಪಿಲ್ಯಗುತ್ತು ಕೆರೆ | ಅಳದಂಗಡಿ | |
| 18 | ನಿರ್ಮಲಬೆಟ್ಟು ಕೆರೆ | ಅಳದಂಗಡಿ | |
| 19 | ಅಜಲ ಕೆರೆ | ವೇಣೂರು | |
| 20 | ಸುಣ್ಣದ ಕೆರೆ | ಕುವೆಟ್ಟು | |
| 21 | ಗುರುವಾಯನಕೆರೆ | ಕುವೆಟ್ಟು | |
| 22 | ಚಿಂಗಾಣಿಬೆಟ್ಟು ಕೆರೆ | ಬಾರ್ಯ | |
| 23 | ಸಾರಕಟ್ಟೆ ಮಡಗ ಕೆರೆ | ತಣ್ಣೀರುಪಂಥ | |
| 24 | ಕಾಯರ್ಪಾಡಿ ಕೆರೆ | ಇಳಂತಿಲ | |
| 25 | ಸೂರ್ಯಕೆರೆ | ಇಳಂತಿಲ | |
| 26 | ಪೆರ್ಲ ಕೆರೆ | ಉಜಿರೆ | |
| 27 | ಕಕ್ಕರಬೆಟ್ಟು ಕೆರೆ | ಉಜಿರೆ | |
| 28 | ಅತ್ತಾಜೆ ಕೆರೆ | ಉಜಿರೆ | |
| 29 | ಬಂಗಾರಕಟ್ಟೆ ಕೆರೆ | ಮಡಂತ್ಯಾರು | |
| 30 | ಪೆರ್ನಾಲ್ ಕೆರೆ | ತೋಟತ್ತಾಡಿ | |
| 31 | ಚೆಜ್ಯೋಡಿ ಕೆರೆ | ನೆರಿಯಾ | |

| **ಕ್ರ.ಸಂ.** | **ತಾಲೂಕು** | **ಕೆರೆಗಳ ಸಂಖ್ಯೆ** |
|---|---|---|
| 1 | ಮಂಗಳೂರು | 54 |
| 2 | ಬಂಟ್ವಾಳ | 34 |
| 3 | ಪುತ್ತೂರು | 33 |
| 4 | ಸುಳ್ಯ | 7 |
| 5 | ಬೆಳ್ತಂಗಡಿ | 31 |
| | **ಒಟ್ಟು** | **159** |

ಅನುಬಂಧ - 3

ಕಳೆದ 5 ವರ್ಷಗಳಲ್ಲಿ 2008-09, 2009-10, 2010-11, 2011-12 ಮತ್ತು 2012-13 ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲೆ0ಯ ಕೆರೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಹೂಳು ತೆಗೆದ ಬಗ್ಗೆ ವಿವರಗಳು

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಕೆರೆಯ ಹೆಸರು | ಮಂಜೂರಾದ ಅಂದಾಜು ಮೊತ್ತ | ವರ್ಷ | ಕೆರೆಯ ವಿಸ್ತೀರ್ಣ ಹೆ. ಗಳಲ್ಲಿ | ಹೂಳು ತೆಗೆದ ಪರಿಮಾಣ ಘ.ಮೀ.ಗಳಲ್ಲಿ | ಇಲ್ಲಿಯವರೆಗೆ ಆದ ಒಟ್ಟು ವೆಚ್ಚ ರೂ. ಲಕ್ಷಗಳಲ್ಲಿ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | | 9 |
| | | ಸಣ್ಣ ನೀರಾವರಿ ಕೆರೆ | | | | | | | |
| | | 2008-09 | | | | | | | |
| 1 | ದಕ್ಷಿಣ ಕನ್ನಡ | ಮಂಗಳೂರು | ಕಾವೂರು ಕೆರೆ | 20.00 | 2008-09 | 3.34 | 7512.00 | 15.86 | ಹೂಳೆತ್ತುವುದರೊಂದಿಗೆ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. |
| | | | ಒಟ್ಟು | **20.00** | | **3.34** | **7512.00** | **15.86** | |
| | | 2009-10 | 0ಯಾವುದೂ ಇರುವುದಿಲ್ಲ | | | | | | |
| | | 2010-11 | 0ಯಾವುದೂ ಇರುವುದಿಲ್ಲ | | | | | | |
| | | 2011-12 | | | | | | | |
| 1 | ದಕ್ಷಿಣ ಕನ್ನಡ | ಮಂಗಳೂರು | ಕಾವೂರು ಕೆರೆ | 100.00 | 2011-12 | 3.34 | 27834.83 | 58.50 | ಹೂಳೆತ್ತುವುದರೊಂದಿಗೆ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಭೌತಿಕವಾಗಿ ಪೂರ್ಣಗೊಳಿಸಲಾಗಿದೆ. ರೂ.23.84 ಲಕ್ಷ ಹಣ ಪಾವತಿ ಮಾಡುವುದು ಬಾಕಿ ಇರುತ್ತದೆ. |
| | | | ಒಟ್ಟು | **100.00** | | **3.34** | **27834.83** | **58.50** | |
| | | 2012-13 | 0ಯಾವುದೂ ಇರುವುದಿಲ್ಲ | | | | | | |
| | | 2013-14 | 0ಯಾವುದೂ ಇರುವುದಿಲ್ಲ | | | | | | |
| | | ಸಣ್ಣ ನೀರಾವರಿಯೇತರ ಕೆರೆ | | | | | | | |
| | | 2008-09 | | | | | | | |
| 1 | ದಕ್ಷಿಣ ಕನ್ನಡ | ಮಂಗಳೂರು | ಮೂಡಬಿದ್ರೆ ಮಾರ್ಪಾಡಿ ಗ್ರಾಮದ ಕಡಲಕೆರೆ ಅಭಿವೃದ್ಧಿ. | 28.70 | 2008-09 | 7.28 | 13746.00 | 25.88 | ಹೂಳೆತ್ತುವುದರೊಂದಿಗೆ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. |
| 2 | ದಕ್ಷಿಣ ಕನ್ನಡ | ಮಂಗಳೂರು | ಬೆಳ್ವಾರು ಗ್ರಾಮದ ಬಂಡಿಗೆ ಕೆರೆ ಅಭಿವೃದ್ಧಿ. | 6.00 | 2008-09 | 0.02 | 560.00 | 4.97 | ಹೂಳೆತ್ತುವುದರೊಂದಿಗೆ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. |
| | | | ಒಟ್ಟು | **34.70** | | **7.30** | **14306.00** | **30.85** | |
| | | 2009-10 | | | | | | | |
| 1 | ದಕ್ಷಿಣ ಕನ್ನಡ | ಮಂಗಳೂರು | ಕಡೆಕಾರು ಮಲ್ಲಿಕಾರ್ಜುನ ದೇವಸ್ಥಾನದ ಕೆರೆ ಅಭಿವೃದ್ಧಿ. | 45.00 | 2009-10 | 0.15 | 5197.16 | 44.93 | ಹೂಳೆತ್ತುವುದರೊಂದಿಗೆ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. |
| | | | ಒಟ್ಟು | **45.00** | | **0.15** | **5197.16** | **44.93** | |
| | | 2010-11 | 0ಯಾವುದೂ ಇರುವುದಿಲ್ಲ | | | | | | |
| | | 2011-12 | 0ಯಾವುದೂ ಇರುವುದಿಲ್ಲ | | | | | | |
| | | 2012-13 | 0ಯಾವುದೂ ಇರುವುದಿಲ್ಲ | | | | | | |
| | | 2013-14 | 0ಯಾವುದೂ ಇರುವುದಿಲ್ಲ | | | | | | |

## ಅನುಬಂಧ–3A

## ಕಳೆದ 5 ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ 2702–01–101–0–72(ಜಿಲ್ಲಾ ಪಂಚಾಯತ್) ಯೋಜನೇತರ ಅನುದಾನದಡಿ ತೆಗೆದುಕೊಂಡ ಕಾಮಗಾರಿಗಳ ವಿವರ

**ಅನುದಾನ ₹ ಲಕ್ಷಗಳಲ್ಲಿ**

| ಕ್ರಮ ಸಂಖ್ಯೆ | ತಾಲೂಕು | ಗ್ರಾ.ಪಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಒದಗಿಸಿದ ಅನುದಾನ | ಒಟ್ಟು ಖರ್ಚು | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 9 |
| | **2008–09** | | | | | | |
| 1 | ಬಂಟ್ವಾಳ | ಅಳಿಕೆ | ಬಂಟ್ವಾಳ ತಾಲೂಕು ಬರಂಗೇಡಿ ಕೆರೆ ಅಭಿವೃದ್ಧಿ | 3.00 | 3.00 | 3.00 | |
| 2 | ಬಂಟ್ವಾಳ | ವಿಟ್ಲ | ಬಂಟ್ವಾಳ ತಾಲೂಕು ವಿಟ್ಲ ಪಂಚಲಿಂಗೇಶ್ವರ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 3 | ಪುತ್ತೂರು | | ಪುತ್ತೂರು ತಾಲೂಕು ಕುಟ್ರುಪಾಡಿ ಹಳೇಸ್ಟೇಷನ್ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 4 | ಸುಳ್ಯ | ಎಣ್ಮೂರು | ಸುಳ್ಯ ತಾಲೂಕು ಎಣ್ಮೂರು ಗ್ರಾಮದ ಮುರುಳ್ಯ ಪುದು ಕೆರೆ ಅಭಿವೃದ್ಧಿ | 5.00 | 5.00 | 5.00 | |
| | | | **ಒಟ್ಟು** | **18.00** | **18.00** | **18.00** | |
| | **2009–10** | | | | | | |
| 1 | ಪುತ್ತೂರು | ಕಡಬ | ಪುತ್ತೂರು ತಾಲೂಕು ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಳೆ ಸ್ಟೇಷನ್ ಕೆರೆ ಅಭಿವೃದ್ಧಿ | 5.00 | 5.00 | 5.00 | |

| | | | | | | | |
|---|---|---|---|---|---|---|---|
| 1 | ಮಂಗಳೂರು | ಗುರುಪುರ | ಮಂಗಳೂರು ತಾಲೂಕು ಗುರುಪುರ ದೇವಸ್ಥಾನ ಕೆರೆ | 5.00 | 5.00 | 5.00 | |
| 2 | ಬಂಟ್ವಾಳ | ಅಮ್ಟಾಡಿ | ಬಂಟ್ವಾಳ ತಾಲೂಕು ಅಮ್ಟಾಡಿ ಗ್ರಾಮದ ಶ್ರೀ ಅಣ್ಣಪ್ಪ ಪಂಜುರ್ಲಿ ದೇವಸ್ಥಾನದ ಬಳಿ ತಡ್ಸಾಲು ಗುಡ್ಡ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 3 | ಬಂಟ್ವಾಳ | ವಿಟ್ಲ | ವಿಟ್ಲ ಪಂಚಲಿಂಗೇಶ್ವರ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 4 | ಸುಳ್ಯ | ಐನೆಕಿದು | ಸುಳ್ಯ ತಾಲೂಕು ಕಾಂತಕುಮೇರಿ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 5 | ಪುತ್ತೂರು | ಮುಂಡೂರು | ಪುತ್ತೂರು ತಾಲೂಕು ಸರ್ವೆ ಗ್ರಾಮದ ಕಟ್ಟತ್ತಾರು ನೀರಾವರಿ ಕೆರೆ ಅಭಿವೃದ್ಧಿ | 5.00 | 5.00 | 5.00 | |
| | | | **ಒಟ್ಟು** | **30.00** | **30.00** | **30.00** | |
| | **2010–11** | | | | | | |
| 1 | ಮಂಗಳೂರು | ಗುರುಪುರ | ಮಂಗಳೂರು ತಾಲೂಕು ಗುರುಪುರ ದೇವಸ್ಥಾನ ಕೆರೆ | 5.00 | 5.00 | 5.00 | |
| 2 | ಸುಳ್ಯ | ಐನೆಕಿದು | ಸುಳ್ಯ ತಾಲೂಕು ಕಾಂತಕುಮೇರಿ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 1 | ಮಂಗಳೂರು | ಕವತ್ತಾರು | ಮಂಗಳೂರು ತಾಲೂಕು ಕವತ್ತಾರು ಗ್ರಾಮದ ಭಟ್ರಬೆನ್ನಿ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 2 | ಪುತ್ತೂರು | ಬಜತ್ತೂರು | ಪತ್ತೂರು ತಾಲೂಕು ಬಜತ್ತೂರು ಗ್ರಾಮದ ಬಜತ್ತೂರು ಕೆರೆ ಅಭಿವೃದ್ಧಿ | 5.00 | 5.00 | 5.00 | |
| 3 | ಸುಳ್ಯ | ಮುರುಳ್ಯ | ಸುಳ್ಯ ತಾಲೂಕು ಮುರುಳ್ಯ ಗ್ರಾಮದ ಪುದುಕೆರೆ | 5.00 | 5.00 | 5.00 | |
| 4 | ಬೆಳ್ತಂಗಡಿ | ಅಳದಂಗಡಿ | ಬೆಳ್ತಂಗಡಿ ತಾಲೂಕು ಅಳದಂಗಡಿ ಗ್ರಾ.ಪಂ.ನ ಪಿಲ್ಯ ಗುತ್ತು ಕೆರೆ ಅಭಿವೃದ್ಧಿ | 3.50 | 3.50 | 3.50 | |
| | | | **ಒಟ್ಟು** | **28.50** | **28.50** | **28.50** | |

| | | | | | | | |
|---|---|---|---|---|---|---|---|
| | **2011–12** | | | | | | |
| 1 | ಸುಳ್ಯ | ಮುರುಳ್ಯ | ಸುಳ್ಯ ತಾಲೂಕು ಮುರುಳ್ಯ ಗ್ರಾಮದ ಮದುಕೆರೆ | 5.00 | 5.00 | 5.00 | |
| 2 | ಮಂಗಳೂರು | ತಲಪಾಡಿ | ದೇವಿಪುರ ಸರಕಾರಿ ಜಾಗದ ಕೆರೆ | 3.00 | 3.00 | 3.00 | |
| 3 | ಬಂಟ್ವಾಳ | ವಿಟ್ಲ | ಕೋಟಿಕೆರೆ ಅಭಿವೃದ್ಧಿ | 8.00 | 8.00 | 8.00 | |
| 4 | ಬೆಳ್ತಂಗಡಿ | ಅಳದಂಗಡಿ | ಪಿಲ್ಯ ಗ್ರಾಮದ ಬರಾಯ ಕೆರೆ ಅಭಿವೃದ್ಧಿ | 3.00 | 3.00 | 3.00 | |
| 5 | ಬಂಟ್ವಾಳ | ಬಾಳ್ತಿಲ | ಕುರ್ಮಾಣಿ ಎಂಬಲ್ಲಿ ಕೆರೆ ಅಭಿವೃದ್ಧಿ | 3.00 | 3.00 | 3.00 | |
| | | | **ಒಟ್ಟು** | **22.00** | **22.00** | **22.00** | |
| | **2012–13** | | | | | | |
| 1 | ಮಂಗಳೂರು | ಪಾಲಡ್ಕ | ಕಡಂದಲೆ ಕಾಂಗ್ಲ ಕೆರೆ ಅಭಿವೃದ್ಧಿ | 3.00 | 3.00 | 3.00 | |
| 2 | ಬಂಟ್ವಾಳ | ಇಡ್ಕಿದು | ಕುಳ ಗ್ರಾಮದ ವಿಷ್ಣುನಗರ ಕೆರೆ ಅಭಿವೃದ್ಧಿ | 2.00 | 2.00 | 2.00 | |
| 3 | ಬಂಟ್ವಾಳ | ಅಳಿಕೆ | ಅಳಿಕೆ ಗ್ರಾಮದ ಮಡಿಯಾಲ ಕೆರೆ ಅಭಿವೃದ್ಧಿ | 5.00 | 5.00 | 5.00 | |
| 4 | ಬಂಟ್ವಾಳ | ವಿಟ್ಲ | ವಿಟ್ಲಕಸಬಾ ಗ್ರಾಮದ ಉಕ್ಕುಡ ಕೆರೆ ಅಭಿವೃದ್ಧಿ | 1.06 | 1.06 | 1.06 | |
| 5 | ಬಂಟ್ವಾಳ | ಬಾಳ್ತಿಲ | ಕಲ್ಲಪಾಪು ಸಾರ್ವಜನಿಕ ಕೆರೆ ಅಭಿವೃದ್ಧಿ | 3.61 | 3.61 | 3.61 | |
| 6 | ಬಂಟ್ವಾಳ | ತುಂಬೆ | ಕಳ್ಳಿಗೆ ಗ್ರಾಮದ ನೆತ್ತರಕೆರೆ ಶಾಲಾ ಕೆರೆ ಅಭಿವೃದ್ಧಿ | 3.00 | 3.00 | 3.00 | |
| 7 | ಬೆಳ್ತಂಗಡಿ | ಅರಂಬೋಡಿ | ಕಾಂತರಬೆಟ್ಟು ಸಾರ್ವಜನಿಕ ಬಾವಿ ಅಭಿವೃದ್ಧಿ | 1.50 | 1.50 | 1.50 | |
| | | | **ಒಟ್ಟು** | **19.17** | **19.17** | **19.17** | |

ಅನುಬಂಧ-4

ಕಳೆದ 5 ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ 2702-01-101-0-72(ಜಿಲ್ಲಾ ಪಂಚಾಯತ್) ಯೋಜನೆಯಡಿ ಅನುಷ್ಠಾನದಡಿ ಪೂರ್ಣಗೊಳಿಸಲಾದ ಕಾಮಗಾರಿಗಳ ವಿವರ

ಘೋಷ್ವಾರೆ

ಅನುದಾನ ರೂ.ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ತಾಲೂಕು | 2008-09 | | | 2009-10 | | | 2010-11 | | | 2011-12 | | | 2012-13 | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|
| | | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 1 | ಮಂಗಳೂರು | 0 | 0.00 | 0.00 | 1 | 5.00 | 5.00 | 2 | 10.00 | 10.00 | 1 | 3.00 | 3.00 | 1 | 3.00 | 3.00 | 5 | 21.00 | 21.00 |
| 2 | ಬಂಟ್ವಾಳ | 2 | 8.00 | 8.00 | 2 | 10.00 | 10.00 | 0 | 0.00 | 0.00 | 2 | 11.00 | 11.00 | 5 | 14.67 | 14.64 | 11 | 43.67 | 43.64 |
| 3 | ಪುತ್ತೂರು | 1 | 5.00 | 5.00 | 2 | 10.00 | 10.00 | 1 | 5.00 | 5.00 | 0 | 0.00 | 0.00 | 0 | 0.00 | 0.00 | 4 | 20.00 | 20.00 |
| 4 | ಸುಳ್ಯ | 1 | 5.00 | 5.00 | 1 | 5.00 | 5.00 | 2 | 10.00 | 10.00 | 1 | 5.00 | 5.00 | 0 | 0.00 | 0.00 | 5 | 25.00 | 25.00 |
| 5 | ಬೆಳ್ತಂಗಡಿ | 0 | 0.00 | 0.00 | 0 | 0.00 | 0.00 | 1 | 3.50 | 3.50 | 1 | 3.00 | 3.00 | 1 | 1.50 | 1.50 | 3 | 8.00 | 8.00 |
| | ಒಟ್ಟು | 3 | 18.00 | 18.00 | 6 | 30.00 | 30.00 | 6 | 28.50 | 28.50 | 5 | 22.00 | 22.00 | 7 | 19.17 | 19.14 | 28 | 117.67 | 117.64 |

ಕಳೆದ 5 ವರ್ಷಗಳಲ್ಲಿ 4702-00-101-1-14-132 ಲೆಕ್ಕ ಶೀರ್ಷಿಕೆಯಡಿ ಕೆರೆಗಳ ಪುನರುಜ್ಜೀವನ ಯೋಜನೆಯಡಿ ಪೂರ್ಣಗೊಳಿಸಲಾದ ಕಾಮಗಾರಿಗಳ ವಿವರ

ಘೋಷ್ವಾರೆ

ಅನುದಾನ ರೂ.ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ತಾಲೂಕು | 2008-09 | | | 2009-10 | | | 2010-11 | | | 2011-12 | | | 2012-13 | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|
| | | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಖರ್ಚು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 1 | ಮಂಗಳೂರು | 0 | 0 | 0 | 0 | 0 | 0 | 0 | 0 | 0 | 18 | 585.00 | 326.01 | 0 | 0 | 0 | 18 | 585.00 | 326.01 |
| 2 | ಬಂಟ್ವಾಳ | 0 | 0 | 0 | 0 | 0 | 0 | 0 | 0 | 0 | 7 | 185.00 | 75.70 | 0 | 0 | 0 | 7 | 185.00 | 75.70 |
| 3 | ಪುತ್ತೂರು | 0 | 0 | 0 | 0 | 0 | 0 | 0 | 0 | 0 | 5 | 153.00 | 74.68 | 0 | 0 | 0 | 5 | 153.00 | 74.68 |
| 4 | ಸುಳ್ಯ | 0 | 0 | 0 | 0 | 0 | 0 | 0 | 0 | 0 | 0 | 0 | 0.00 | 0 | 0 | 0 | 0 | 0.00 | 0.00 |
| 5 | ಬೆಳ್ತಂಗಡಿ | 0 | 0 | 0 | 0 | 0 | 0 | 0 | 0 | 0 | 6 | 275.00 | 32.17 | 0 | 0 | 0 | 6 | 275.00 | 32.17 |
| | ಒಟ್ಟು | 0 | 0.00 | 0.00 | 0 | 0.00 | 0.00 | 0 | 0.00 | 0.00 | 36 | 1198.00 | 508.56 | 0 | 0.00 | 0.00 | 36 | 1198.00 | 508.56 |

# ಅನುಬಂಧ–5

## ಮಂಗಳೂರು ತಾಲೂಕಿನಲ್ಲಿ ಕೃಷಿ ಭೂಮಿಗೆ ನೀರುಣಿಸಲು ಯೋಗ್ಯವಾಗಿರುವ ಕೆರೆಗಳ ವಿವರ

| Sl.No. | District | Talluk/Constituency | Name of Grama Panchayth | Name of the Tank |
|---|---|---|---|---|
| 1 | 2 | 3 | 4 | 5 |
| 1 | ದ.ಕ. | ಮುಲ್ಕಿ ಮೂಡಬಿದ್ರೆ | ಮೂಡುಶೆಡ್ಡೆ | ಅತಿಕಾರಿಬೆಟ್ಟು ಗ್ರಾಮದ ಕಕ್ವ ಮಡಿವಾಳ ಕೆರೆ |
| 2 | ದ.ಕ. | ಮುಲ್ಕಿ ಮೂಡಬಿದ್ರೆ | ಮೂಡುಶೆಡ್ಡೆ | ಶಿಮಂತೂರು ಮಾಡ್ರಾಗುತ್ತು ಬಳಿ ಇರುವ ಕೆರೆ |
| 3 | ದ.ಕ. | ಮುಲ್ಕಿ ಮೂಡಬಿದ್ರೆ | ಐಕಳ | ಎಳಿಂಜೆ ಗ್ರಾಮ ಮುತ್ತಯ ಕೆರೆ |
| 4 | ದ.ಕ. | ಮುಲ್ಕಿ ಮೂಡಬಿದ್ರೆ | ಬಾಳ | ಕುತ್ತೆತ್ತೂರು ಗ್ರಾಮ ಪುಲಿತ್ತೂರು ಕೆರೆ |
| 5 | ದ.ಕ. | ಮುಲ್ಕಿ ಮೂಡಬಿದ್ರೆ | ಕಿನ್ನಿಗೋಳಿ | ಕಿನ್ನಿಗೋಳಿ ಗ್ರಾಮ ರಾಪಾಯಿ ಕೆರೆ |
| 6 | ದ.ಕ. | ಮುಲ್ಕಿ ಮೂಡಬಿದ್ರೆ | ಶಿರ್ತಾಡಿ | ಶಿರ್ತಾಡಿ ಗ್ರಾಮ ಪಂಚಾಯತ್ ವಾಲ್ಪಾಡಿ ಎಂಡ್ರಟ್ಟು ಕೆರೆ |
| 7 | ದ.ಕ. | ಮಂಗಳೂರು | | ಸೋಮೇಶ್ವರ ಗ್ರಾಮದ ಮೂರುಕಟ್ಟೆ ಕೆರೆ ಅಭಿವೃದ್ಧಿ |
| 8 | ದ.ಕ. | ಮಂಗಳೂರು | | ಬೋಳಿಯಾರು ಗ್ರಾಮದ ಮಜಿ/ ಹ್ಯೊಗೆ ಕೆರೆ ಅಭಿವೃದ್ಧಿ |
| 9 | ದ.ಕ. | ಮಂಗಳೂರು ಉತ್ತರ | ಗುರುಪುರ | ಗುರುಪುರ ಗ್ರಾಮ ಚಿಲಿಂಬಿ ಕೆರೆ |
| 10 | ದ.ಕ. | ಮಂಗಳೂರು ಉತ್ತರ | ಗುರುಪುರ | ಗುರುಪುರ ಗ್ರಾಮ ಅಡ್ಡೂರು ಬರ್ಕೆ ಕೆರೆ |
| 11 | ದ.ಕ. | ಮಂಗಳೂರು ಉತ್ತರ | ನೀರುಮಾರ್ಗ | ನೀರುಮಾರ್ಗ ಗ್ರಾಮ ಮಾಣೂರು ಕೆರೆ |
| 12 | ದ.ಕ. | ಮಂಗಳೂರು ಉತ್ತರ | ನೀರುಮಾರ್ಗ | ಬೊಂಡಂತಿಲ ಗ್ರಾಮ ಕಟ್ಟಂಜ ಕೆರೆ |
| 13 | ದ.ಕ. | ಮಂಗಳೂರು ಉತ್ತರ | ನೀರುಮಾರ್ಗ | ಬೊಂಡಂತಿಲ ಗ್ರಾಮ ಬಾಬುಕೋಡಿ ಕೆರೆ |

**ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಜವಳಿ ಇಲಾಖೆಗೆ ನಿಗದಿ ಪಡಿಸಿದ ಅನುದಾನ**

**938; ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ)**

**ಅ)** ಈ ವರ್ಷದ ಆಯವ್ಯಯದಲ್ಲಿ ಜವಳಿ ಇಲಾಖೆಗೆ ನಿಗದಿಪಡಿಸಿರುವ ಹಣವೆಷ್ಟು;

**ಆ)** ಯಾವ-ಯಾವ ನಿಗಮಗಳಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ; ಇದರಲ್ಲಿ ನೇಕಾರರ ಬದುಕಿಗೆ ಕೊಟ್ಟಿರುವ ಕೊಡುಗೆ ಏನು;

**ಇ)** ಪ್ರಸ್ತುತ ಆಯವ್ಯಯದಲ್ಲಿ ನೇಕಾರರಿಗೆ ಕೊಟ್ಟಿರುವ ಯೋಜನೆಗಳಾವುವು;

**ಈ)** ಯುವ ನೇಕಾರರಿಗೆ ಹೊಸ ಯೋಜನೆಗಳೇನಾದರೂ ರೂಪಿಸಲಾಗಿದೆಯೇ?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

**ಅ)** 2013-14ನೇ ವರ್ಷದ ಆಯವ್ಯಯದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಒಟ್ಟು ₹ 23906.95 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

**ಆ)** ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಹುಬ್ಬಳ್ಳಿ ಈ ನಿಗಮಕ್ಕೆ ₹ 2150.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರ ಬದುಕಿಗೆ ಈ ಕೊಡುಗೆಗಳನ್ನು ಕೊಟ್ಟಿರುತ್ತದೆ.

1) ನಿರಂತರ ಉದ್ಯೋಗ,
2) ಹೆಚ್ಚಿನ ಮಜೂರಿ ದೊರಕಿಸಿ ಜೀವನ ಮಟ್ಟ ಸುಧಾರಣೆ.
3) ಸಾಮಾಜಿಕ ಭದ್ರತಾ ಯೋಜನೆಗಳಡಿ ಪ್ರಯೋಜನ ಒದಗಿಸಿಕೊಡುವುದು

4) ಇಲಾಖೆಯ ಯೋಜನೆಗಳಡಿ ವಸತಿ ಕಾರ್ಯಾಗಾರ ಸೌಲಭ್ಯ, ಮಿತವ್ಯಯ ನಿಧಿ ಯೋಜನೆಯಡಿ ಪ್ರಯೋಜನ ಒದಗಿಸಿಕೊಡುವುದು.

ಇ) ಪ್ರಸ್ತುತ ಆಯವ್ಯಯದಲ್ಲಿ ನೇಕಾರರಿಗೆ ಈ ಕೆಳಕಂಡ ಯೋಜನೆಗಳನ್ನು ಕೊಡಲಾಗಿದೆ.

1. ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ – ಸಹಕಾರ ಸಂಘಗಳು.
2. ಗುಂಪು ವಿಮಾ ಯೋಜನೆ.
3. ಆರೋಗ್ಯ ವಿಮಾ ಯೋಜನೆ.
4. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ.
5. ಕೈಮಗ್ಗ ಉತ್ಪನ್ನಗಳ ಮಾರಾಟ – 20% ರಿಬೇಟ್.
6. ಕೈಮಗ್ಗ ನೇಕಾರರಿಗೆ ಮಿತವ್ಯಯ ನಿಧಿ ಯೋಜನೆ.
7. ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ.
8. ನೇಕಾರರ ವಿಶೇಷ ಪ್ಯಾಕೇಜ್.
9. ನೇಕಾರರ ವಿಶೇಷ ಪ್ಯಾಕೇಜ್–ಕೆ.ಹೆಚ್.ಡಿ.ಸಿ.
10. ನೂತನ ಜವಳಿ ನೀತಿ.
11. ವಸತಿ ಕಾರ್ಯಾಗಾರ.
12. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಸಹಾಯ.
13. ಒಂದಾವರ್ತಿ ಕೈಮಗ್ಗ ನೇಕಾರರಿಗಾಗಿ ಸಾಲ ಮನ್ನಾ

ಈ) ರಾಜ್ಯದ ಯುವಜನರ ಸಬಲೀಕರಣಕ್ಕಾಗಿ ಯುವ ನೀತಿ 2012ನ್ನು ಸರ್ಕಾರವು ಶಿಫಾರಸ್ಸು ಮಾಡಿದ್ದು, ಇಲಾಖೆಯಲ್ಲಿ ಹಾಲಿ ಇರುವ

ಯೋಜನೆಗಳಲ್ಲಿ ಯುವ ಜನರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ವಾರ್ಷಿಕ ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ.

**ಯಾದಗಿರಿ ಜಿಲ್ಲೆಯಲ್ಲಿ ಜವಳಿ ಪಾರ್ಕ್**

**939; ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿರುವವರು)**

**ಅ)** ಯಾದಗಿರಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಮಾಡಲು ಇರುವ ಉದ್ದೇಶ ಏನು;

**ಆ)** ಈ ಜಿಲ್ಲೆಯಲ್ಲಿ ಒಟ್ಟು ಎಷ್ಟು ನೇಕಾರರು ಹಾಗೂ ಎಷ್ಟು ಜವಳಿ ಉದ್ಯಮದಾರರು ಇದ್ದಾರೆ;

**ಇ)** ಉದ್ದೇಶಿಸಿರುವ ಜಾಗ ಯಾವ ತಾಲ್ಲೂಕು, ಜಿಲ್ಲೆಯಲ್ಲಿದೆ; ಹಾಗೂ ಜಾಗದ ಸರ್ವೆ ನಂಬರ್ ಎಷ್ಟು; ಅದರಲ್ಲಿರುವ ಜಮೀನಿನ ವಿಸ್ತೀರ್ಣ ಎಷ್ಟು;

**ಈ)** ಈ ಜಾಗವನ್ನು ಈಗಾಗಲೇ ಜವಳಿ ಇಲಾಖೆಗೆ ವರ್ಗಾಯಿಸಲಾಗಿದೆಯೇ;

**ಉ)** ಯಾವಾಗ ಕೆಲಸ ಪ್ರಾರಂಭ ಮಾಡಲಾಗುವುದು;

**ಊ)** ಜವಳಿ ಪಾರ್ಕ್‌ಗೆ ನಿಗದಿ ಮಾಡಿರುವ ಹಣ ಎಷ್ಟು; ಬಿಡುಗಡೆಯಾಗಿರುವ ಹಣ ಎಷ್ಟು?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

**ಅ)** ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿರುವ ಈ ಜಿಲ್ಲೆಯು ಆರ್ಥಿಕವಾಗಿ ಅತೀ ಹಿಂದುಳಿದ ಜಿಲ್ಲೆಯಾಗಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಡಾ॥ ನಂಜುಡಪ್ಪ ವರದಿಯಂತೆಯೂ ಅತೀ ಹಿಂದುಳಿದ ತಾಲ್ಲೂಕುಗಳಾಗಿ ಗುರುತಿಸಲ್ಪಟ್ಟಿವೆ. ಭಾರತ ಸಂವಿಧಾನದ

ಆರ್ಟಿಕಲ್ 371(ಜೆ) ರಂತೆ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಆರ್ಥಿಕವಾಗಿ ಅತೀ ಹಿಂದುಳಿದ ಪ್ರದೇಶವೆಂದು ಕೇಂದ್ರ ಸರ್ಕಾರವು ಗುರುತಿಸಿದ್ದು, ಈ ಹಿನ್ನೆಲೆಯಲ್ಲಿ ಸ್ಥಳೀಯ ಜನರಿಗೆ ಉದ್ಯೋಗ ಕಲ್ಪಿಸಲು ಅನುಕೂಲವಾಗುವಂತೆ ಯಾದಗಿರಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದೆ.

**ಆ)** ಈ ಜಿಲ್ಲೆಯಲ್ಲಿ ಒಟ್ಟು 1301 ನೇಕಾರರು ಹಾಗೂ 62 ಜವಳಿ ಉದ್ಯಮದಾರರು ಇದ್ದಾರೆ.

**ಇ)** ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆಯ ಬಾಡಿಯಾಳ ಮತ್ತು ಕಡೆಚೂರ್ ಗ್ರಾಮಗಳಲ್ಲಿ ಒಟ್ಟು 3232.22 ಎಕರೆ ಭೂಮಿಯು ಕೆ.ಐ.ಎ.ಡಿ.ಬಿ.ಯವರಿಂದ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಇದರಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು 1000 ಎಕರೆ ಭೂಮಿಯನ್ನು ಮೀಸಲಿರಿಸಲು ತೀರ್ಮಾನಿಸಲಾಗಿದೆ. ಯಾವ ಸರ್ವೆ ನಂಬರಿನ ಜಮೀನು ಮೀಸಲಿರಿಸಬೇಕೆಂಬ ವಿಚಾರದ ಪ್ರಕ್ರಿಯೆ ಪ್ರಗತಿಯಲ್ಲಿದೆ.

**ಈ)** ಇಲ್ಲ

**ಉ)** ಜವಳಿ ಪಾರ್ಕ್ ಸ್ಥಾಪನೆಗೆ ಮೀಸಲಿರಿಸಿರುವ ಭೂಮಿಯು ನಿರ್ಧಿಷ್ಟ ವಿವರಗಳು ಲಭ್ಯವಾದ ಮೇಲೆ ಯೋಜನೆ ವರದಿ ತಯಾರಿಸಿ, ಪರಿಶೀಲಿಸಿ ಕೂಡಲೇ ಆದ್ಯತೆ ಮೇಲೆ ಕೆಲಸ ಪ್ರಾರಂಭಿಸಲಾಗುವುದು.

**ಊ)** 2013–14 ರಲ್ಲಿ ಜವಳಿ ನೀತಿಗೆ ಹಂಚಿಕೆಯಾಗಿರುವ ₹ 50.00 ಕೋಟಿ ಆಯವ್ಯಯ ಅನುದಾನಲ್ಲಿ ₹ 8.00 ಕೋಟಿಗಳನ್ನು ಜವಳಿ ಪಾರ್ಕ್ ಸ್ಥಾಪನೆಗೆ ವಿನಿಯೋಗಿಸಲು ಅವಕಾಶ ಕಲ್ಪಿಸಲಾಗಿದೆ. ಜವಳಿ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದಂತೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

## ಪಹಣಿ ತಿದ್ದುಪಡಿ

## 1121; ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿರುವವರು)

1) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನಲ್ಲಿ ಪಹಣಿ ತಿದ್ದುಪಡಿ ಮಾಡಲು ಇರುವ ತೊಂದರೆಗಳೇನು;

2) ರೈತರು ಇದುವರೆವಿಗೂ ಪಹಣಿ ತಿದ್ದುಪಡಿಗೆ ಕೋರಿರುವ ಅರ್ಜಿಗಳೆಷ್ಟು; ಯಾವ ದಿನಾಂಕದಿಂದ ಕಛೇರಿಯಲ್ಲಿ ಅರ್ಜಿಗಳನ್ನು ವಿಲೇ ಇಡಲಾಗಿದೆ; ಕಾರಣವೇನು;

3) ಸಕಾರಣವಿಲ್ಲದೆ, ಕ್ಷುಲ್ಲಕ ಕಾರಣಗಳನ್ನೊಡ್ಡಿ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿಬರಲು ರೈತರಿಗೆ ತಿಳಿಸುತ್ತಿರುವುದು ನಿಜವೇ;

4) ವಿನಾಕಾರಣ ತಾಲ್ಲೂಕು ಕಛೇರಿಗೆ ಸಾವಿರಾರು ಜನ ಒಂದು ಕೆಲಸ ಕಾರ್ಯಗಳಾಗದೆ ನಿರಾಶೆಯಿಂದ ವಾಪಸ್ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರಣೆ ನೀಡುವುದು)

### ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

1) ನಿಯಮಾನುಸಾರ ತಿದ್ದುಪಡಿ ವ್ಯಾಪ್ತಿಗೆ ಒಳಪಡುವ ಪ್ರಕರಣಗಳನ್ನು ತಿದ್ದುಪಡಿ ಮಾಡಲು ಯಾವುದೇ ತೊಂದರೆಗಳಿರುವುದಿಲ್ಲ.

2) ರೈತರಿಂದ 6471 ಅರ್ಜಿಗಳು ಸ್ವೀಕೃತವಾಗಿದ್ದು, 5935 ವಿಲೇವಾರಿಯಾಗಿದ್ದು, ಬಾಕಿ 536 ಅರ್ಜಿಗಳಿದ್ದು ಕೂಡಲೇ ವಿಲೇವಾರಿ ಕ್ರಮ ಕೈಗೊಳ್ಳಲಾಗುತ್ತಿದೆ.

3) **ಮತ್ತು 4)** ಇಂತಹ ಯಾವುದೇ ಪ್ರಕರಣಗಳು ಉದ್ಭವಿಸಿರುವುದಿಲ್ಲ.

## ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಸ್ಥಾಪಿಸುವುದು

**1120; ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿರುವವರು)**

**ಅ)** ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜವಳಿ ಪಾರ್ಕ್ ಮಾಡಲು ಬೇಡಿಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಸರ್ಕಾರವು ಜಾಗವನ್ನು ಗುರುತಿಸಿದೆಯೇ;

**ಇ)** ಗುರುತಿಸಿದ್ದಲ್ಲಿ, ಆ ಜಾಗವು ಸರ್ಕಾರದ್ದೋ ಅಥವಾ ರೈತರ ಜಮೀನಿಗೆ ಸೇರಿರುವುದೋ;

**ಈ)** ಈಗಾಗಲೇ ಗುರುತು ಮಾಡಿರುವ ಆ ಜಾಗದಲ್ಲಿ ಜವಳಿ ಪಾರ್ಕ್ ಮಾಡಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

**ಅ)** ಹೌದು

**ಆ)** ಜವಳಿ ಪಾರ್ಕ್ ಸ್ಥಾಪನೆಗೆ ನೊಂದಾಯಿತ ಸ್ಪೆಷಲ್ ಪರ್‌ಪಸ್ ವೆಹಿಕಲ್ (ಎಸ್‌ಪಿವಿ) ಕಂಪನಿಯೊಂದು ಜಾಗವನ್ನು ಗುರುತಿಸಿರುತ್ತದೆ.

**ಇ)** ಸರ್ಕಾರದ ಕೃಷಿ ಇಲಾಖೆಗೆ ಸೇರಿದ ಜಮೀನು.

**ಈ)** ಉದ್ದೇಶಿತ ಪಾರ್ಕ್ ಸ್ಥಾಪನೆಗೆ ಪ್ರಸ್ತಾಪಿಸಿರುವ ಸರ್ಕಾರಿ ಭೂಮಿಯನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

## ಕೊಡಗು ಜಿಲ್ಲೆಯಲ್ಲಿ ಹೆಚ್ಚು ಮಳೆಯಿಂದಾಗಿರುವ ನಷ್ಟ

### 972; ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಕೊಡಗು ಜಿಲ್ಲೆಯಲ್ಲಿ ಬಿದ್ದಂತಹ ಹೆಚ್ಚಿನ ಮಳೆಯಿಂದಾಗಿ ಆಗಿರುವ ನಷ್ಟದ ಅಂದಾಜು ಮೊತ್ತವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಪರಿಹಾರ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು)

ಇ) ಹಾನಿಗೊಳಗೊಂಡ ರಸ್ತೆಗಳೆಷ್ಟು; ಸೇತುವೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಈ) ಮಡಿಕೇರಿ ನಗರದಲ್ಲಿ ಬೀಳುತ್ತಿರುವ ಮಳೆಯಿಂದಾಗಿ ಹಾನಿಗೊಳಗೊಂಡ ಆಸ್ತಿ–ಪಾಸ್ತಿಗಳೆಷ್ಟು; (ವಾರ್ಡುವಾರು ವಿವರ ನೀಡುವುದು) ಹಾಗೂ ಪರಿಹಾರ ನೀಡಲು ತೆಗೆದುಕೊಂಡ ಕ್ರಮಗಳೇನು? (ವಾರ್ಡುವಾರು ವಿವರ ನೀಡುವುದು)

### ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ ಬಿದ್ದಂತಹ ಹೆಚ್ಚಿನ ಮಳೆಯಿಂದ ಆಗಿರುವ ನಷ್ಟ ₹ 409.48 ಲಕ್ಷಗಳು ತಾಲ್ಲೂಕುವಾರು ವಿವರ; ಅನುಬಂಧ–1ರಲ್ಲಿ ನೀಡಿದೆ

ಆ) ಅನುಬಂಧ–2ರಲ್ಲಿ ನೀಡಿದೆ

ಇ) ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಿಂದ 22.10 ಕಿ.ಮೀ. ರಸ್ತೆ ಹಾನಿಯಾಗಿರುತ್ತದೆ. ಹಾನಿಯಾಗಿರುವ ತಾಲ್ಲೂಕುವಾರು ವಿವರ ಕೆಳಕಂಡಂತಿರುತ್ತದೆ.

| ಕ್ರ.ಸಂ. | ತಾಲ್ಲೂಕು | ಹಾನಿಗೊಂಡ ರಸ್ತೆ | |
|---|---|---|---|
| | | ಕಿ.ಮೀ. | ಅಂದಾಜು ನಷ್ಟ (₹ ಲಕ್ಷಗಳಲ್ಲಿ) |
| 1 | ಮಡಿಕೇರಿ | 7.38 | 44.35 |
| 2 | ಸೋಮವಾರಪೇಟೆ | 11.22 | 90.35 |
| 3 | ವಿರಾಜಪೇಟೆ | 3.50 | 50.00 |
| | **ಒಟ್ಟು ಮೊತ್ತ** | **22.10** | **184.70** |

**ಈ)** ಅನುಬಂಧ–3ರಲ್ಲಿ ನೀಡಿದೆ.

# ಅನುಬಂಧ–1

| ಕ್ರ.ಸಂ. | ತಾಲ್ಲೂಕು | ಸಾರ್ವಜನಿಕ ಆಸ್ತಿ ಪಾಸ್ತಿ (₹ ಲಕ್ಷಗಳಲ್ಲಿ) | ಮಾನವ ಪ್ರಾಣ ಹಾನಿ | ಜಾನುವಾರು ಪ್ರಾಣ ಹಾನಿ | | ವಾಸದ ಮನೆ ಹಾನಿ | | ಕೃಷಿ ಬೆಳೆ ಹಾನಿ | | ತೋಟಗಾರಿಕೆ ಬೆಳೆ ಹಾನಿ | |
|---|---|---|---|---|---|---|---|---|---|---|---|
| | | | | (₹ ಲಕ್ಷಗಳಲ್ಲಿ) | | (₹ ಲಕ್ಷಗಳಲ್ಲಿ) | | (₹ ಲಕ್ಷಗಳಲ್ಲಿ) | | (₹ ಲಕ್ಷಗಳಲ್ಲಿ) | |
| | | | | ಸಂಖ್ಯೆ | ನಷ್ಟ | ಸಂಖ್ಯೆ | ನಷ್ಟ | ಸಂಖ್ಯೆ | ನಷ್ಟ | ಸಂಖ್ಯೆ | ನಷ್ಟ |
| 1 | ಮಡಿಕೇರಿ | 96.35 | 1 | 2 | 0.31 | 60 | 15.01 | – | – | 39.00 | 65.40 |
| 2 | ಸೋಮವಾರ ಪೇಟೆ | 162.35 | – | 2 | 0.25 | 51 | 11.57 | 25.76 | 0.96 | 0.96 | 1.19 |
| 3 | ವಿರಾಜಪೇಟೆ | 50 | 3 | 3 | 0.46 | 42 | 5.63 | – | | – | – |
| | **ಒಟ್ಟು** | **308.7** | **4** | **7** | **1.02** | **153** | **32.21** | **25.76** | **0.96** | **39.96** | **66.59** |

**ಸರ್ಕಾರದ ಅಧೀನ ಕಾರ್ಯದರ್ಶಿ**
**ಕಂದಾಯ ಇಲಾಖೆ (ಸೇ–3 ಮತ್ತು ವಿ.ನಿ)**
**ಕರ್ನಾಟಕ ಸರ್ಕಾರ ಸಚಿವಾಲಯ**

## ಅನುಬಂಧ–2

| ಕ್ರ.ಸಂ. | ತಾಲ್ಲೂಕು | ಮಾನವ ಪ್ರಾಣ ಹಾನಿ | | ಜಾನುವಾರು ಪ್ರಾಣ ಹಾನಿ | | ವಾಸದ ಮನೆ ಹಾನಿ | |
|---|---|---|---|---|---|---|---|
| | | ಸಂಖ್ಯೆ | ಪ.ಮೊತ್ತ (₹ ಲಕ್ಷಗಳಲ್ಲಿ) | ಸಂಖ್ಯೆ | ಪ.ಮೊತ್ತ (₹ ಲಕ್ಷಗಳಲ್ಲಿ) | ಸಂಖ್ಯೆ | ಪ.ಮೊತ್ತ (₹ ಲಕ್ಷಗಳಲ್ಲಿ) |
| 1 | ಮಡಿಕೇರಿ | 1 | 1.50 | 1 | 0.16 | 20 | 0.51 |
| 2 | ಸೋಮವಾರ ಪೇಟೆ | – | – | 2 | 0.28 | 46 | 1.04 |
| 3 | ವಿರಾಜಪೇಟೆ | 3 | 4.50 | 2 | 0.33 | 11 | 030 |
| | **ಒಟ್ಟು** | **4** | **6.00** | **5** | **0.63** | **77** | **1.85** |

| ಅನುಬಂಧ–3 | | | | | | |
|---|---|---|---|---|---|---|
| ಕ್ರ.ಸಂ. | ಬ್ಲಾಕ್ ಸಂಖ್ಯೆ | ಪ್ರದೇಶದ ಹೆಸರು | ಪೂರ್ಣ ಮನೆ ಹೆಸರು | ಭಾಗಶಃ ಮನೆ ಕುಸಿತ | ತಡೆಗೋಡೆ ಮತ್ತು ಬರೆ ಕುಸಿತ | ಹಾನಿ ಮೊತ್ತ (ಲಕ್ಷಗಳಲ್ಲಿ) |
| 1 | 17 | ದೇಚೂರು | | 1 | | 0.75 |
| 2 | 14 | ಚಾಮುಂಡೇಶ್ವರಿ ನಗರ | | | 1 | 10.00 |
| 3 | 24 | ಆಜಾದ್ ನಗರ | | | 1 | 3.00 |
| 4 | 14 | ಇಂದಿರಾನಗರ | | 1 | | 0.50 |
| 5 | 16 | ಮಂಗಳಾದೇವಿನಗರ | 1 | | | 3.00 |
| 6 | 8 | ಅಂಬೇಡ್ಕರ್ ಬಡಾವಣೆ | | | 1 | 3.50 |
| 7 | 23 | ಕನ್ನಂಡಬಾಣೆ | | | 1 | 4.50 |
| 8 | 24 | ತ್ಯಾಗರಾಜ ಕಾಲೋನಿ | | 1 | | 0.75 |
| 9 | 24 | ಗದ್ದಿಗೆ ಹಿಂಭಾಗ | | 1 | | 0.75 |
| 10 | 24 | ಕು. ಉಕ್ಕುಡ | | 1 | | 1.50 |
| 11 | 24 | ತ್ಯಾಗರಾಜ ಕಾಲೋನಿ | | 1 | | 1.50 |
| 12 | 19 | ಸುದರ್ಶನ ಬಡಾವಣೆ | | | 1 | 0.90 |
| 13 | 14 | ಚಾಮುಂಡೇಶ್ವರಿ ನಗರ | | | 1 | 4.80 |

| | | | | | | |
|---|---|---|---|---|---|---|
| 14 | 23 | ಕನ್ನಂಡಬಾಣೆ | | | 1 | 2.00 |
| 15 | 18 | ಮೈಸೂರು ರಸ್ತೆ | | | 1 | 1.30 |
| 16 | 17 | ದೇಚೂರು | | | 1 | 1.60 |
| 17 | 14 | ಸ್ಟೀವರ್ ಹಿಲ್ | | | 1 | 1.00 |
| 18 | 14 | ಇಂದಿರಾನಗರ | | 1 | | 1.00 |
| 19 | 17 | ದೇಚೂರು | | | 1 | 1.60 |
| 20 | 24 | ಕು. ಉಕ್ಕುಡ ರಸ್ತೆ | | 1 | | 0.47 |
| 21 | 24 | ತ್ಯಾಗರಾಜ ಕಾಲೋನಿ | | 1 | | 1.21 |
| 22 | 24 | ತ್ಯಾಗರಾಜ ಕಾಲೋನಿ | | | 1 | 1.83 |
| 23 | 18 | ಪುಟಾಣಿ ನಗರ | 1 | | | 1.25 |
| 24 | 23 | ಚೈನ್ ಗೇಟ್ | | | 1 | 1.00 |
| 25 | 7 | ಹಿಲ್ ರಸ್ತೆ | | | 1 | 0.50 |
| 26 | 20 | ದೇಚೂರು ಬಾಣೆಮೊಟ್ಟೆ | | 1 | | 0.45 |
| | | **ಒಟ್ಟು** | | | | **50.66** |

| | ವಾರ್ಡ್ ಸಂ. | ಸ್ಥಳ | ಕಂಬಗಳು ಮತ್ತು ಇತರ ಸಾಮಾಗ್ರಿಗಳು | ಅಂದಾಜು ಮೊತ್ತ ₹ ಲಕ್ಷಗಳಲ್ಲಿ | ಪರಿವರ್ತಕಗಳು | ಅಂದಾಜು ಮೊತ್ತ ₹ ಲಕ್ಷಗಳಲ್ಲಿ | ಒಟ್ಟು ಮೊತ್ತ ಲಕ್ಷಗಳಲ್ಲಿ |
|---|---|---|---|---|---|---|---|
| 1 | 4 | ಹಾಕಿ ಗ್ರೌಂಡ್ | 6 | 0.33 | | | 0.33 |
| 2 | 3 | ಮೈತ್ರಿ ರಸ್ತೆ | – | – | 1 | 0.17 | 0.17 |
| 3 | 9 | ನ್ಯೂ ಎಕ್ಸಟೆನ್ಶನ್ | 1 | 0.055 | – | – | 0.05 |
| 5 | 21 | ಉಕ್ಕಡ | – | – | 1 | 0.17 | 0.17 |
| 6 | 30 | ಕಾವೇರಿ ಲೇಔಟ್ | – | – | 1 | 0.19 | 0.19 |
| 7 | 1 | ಎಫ್.ಎಂ.ಸಿ ಹಿಂದುಗಡೆ | – | – | 1 | 0.17 | 0.17 |
| 8 | 12 | ದೇಚೂರು | – | | 1 | 0.17 | 0.17 |
| 9 | 10 | ಗೌಳಿ ಬೀದಿ | 2 | 0.11 | – | – | 0.11 |
| 10 | **ಒಟ್ಟು** | | **9** | **0.495** | **5** | **0.87** | **1.36** |

ಮಡಿಕೇರಿ ನಗರದಲ್ಲಿ ಬಿದ್ದ ಮಳೆಯಿಂದಾಗಿ ಹಾನಿಗೊಂಡ ಆಸ್ತಿ ಪಾಸ್ತಿ ಹಾನಿಗೆ ಸಂಬಂಧಿಸಿದಂತೆ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ ಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಲಾಗಿದೆ.

## ಕೊಡಗು ಜಿಲ್ಲೆಯಲ್ಲಿ ಆಗುತ್ತಿರುವ ಆನೆಹಾವಳಿ

## 940; ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಕೊಡಗು ಜಿಲ್ಲೆಯಲ್ಲಿ ಆನೆದಾಳಿಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜಿಲ್ಲೆಯಲ್ಲಿ ಕಳೆದ ಎರಡು ವರ್ಷದಲ್ಲಿ ಎಷ್ಟು ಆನೆದಾಳಿಗಳ ಪ್ರಕರಣಗಳು ದಾಖಲಾಗಿವೆ; (ವಿವರ ನೀಡುವುದು)

ಇ) ಇದರಿಂದ ಆದ ಬೆಳೆ ಹಾನಿ ಎಷ್ಟು; ಪ್ರಾಣ ಹಾನಿಗಳೆಷ್ಟು; (ವಿವರ ನೀಡುವುದು)

ಈ) ವಿತರಿಸಿದ ಪರಿಹಾರ ಮೊತ್ತವೆಷ್ಟು; (ಪ್ರತ್ಯೇಕ ಪ್ರಕರಣವಾರು ವಿವರ ನೀಡುವುದು)

ಉ) ಆನೆ ದಾಳಿಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

**ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಹೌದು.

ಆ) ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ವರ್ಷದಲ್ಲಿ ಕಾಡಾನೆದಾಳಿ ಪ್ರಕರಣ ದಾಖಲಾದ ವಿವರ ಕೆಳಗಿನಂತಿದೆ.

| ವಿಭಾಗಗಳ ವಿವರ | ಮಾನವ ಪ್ರಾಣ ಹಾನಿ ಪ್ರಕರಣ | ಮಾನವ ಗಾಯ ಪ್ರಕರಣ | ಬೆಳೆ ಹಾನಿ ಪ್ರಕರಣ |
|---|---|---|---|
| **2011–12** | | | |
| ಮಡಿಕೇರಿ | 1 | 6 | 290 |
| ವೀರಾಜಪೇಟೆ | 3 | 1 | 808 |
| ಮಡಿಕೇರಿ ವನ್ಯಜೀವಿ | – | 1 | 553 |
| ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ | 3 | 2 | 485 |
| **ಒಟ್ಟು** | **7** | **10** | **2136** |

| 2012–13 | | | |
|---|---|---|---|
| ಮಡಿಕೇರಿ | 3 | 4 | 535 |
| ವೀರಾಜಪೇಟೆ | 4 | 4 | 1357 |
| ಮಡಿಕೇರಿ ವನ್ಯಜೀವಿ | – | 2 | 515 |
| ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ | 4 | 1 | 842 |
| **ಒಟ್ಟು** | **11** | **11** | **3249** |

ಇ) **ಬೆಳೆಹಾನಿ:**

ಬೆಳೆಹಾನಿಯ ಪ್ರಮಾಣವನ್ನು ನಿಖರವಾಗಿ ಅಂದಾಜಿಸಲು ಸಾಧ್ಯವಾಗುವುದಿಲ್ಲ. ಆದಾಗ್ಯೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ಪರಿಹಾರ ಪಾವತಿಸಲಾಗಿದೆ.

**ಪ್ರಾಣಹಾನಿ:**

| **ವಿಭಾಗಗಳ ವಿವರ** | **ಮಾನವ ಪ್ರಾಣ ಹಾನಿ ಪ್ರಕರಣ** |
|---|---|
| **2011–12** | |
| ಮಡಿಕೇರಿ | 1 |
| ವೀರಾಜಪೇಟೆ | 3 |
| ಮಡಿಕೇರಿ ವನ್ಯಜೀವಿ | – |
| ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ | 3 |
| **ಒಟ್ಟು** | **7** |
| **2012–13** | |
| ಮಡಿಕೇರಿ | 3 |
| ವೀರಾಜಪೇಟೆ | 4 |
| ಮಡಿಕೇರಿ ವನ್ಯಜೀವಿ | – |
| ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ | 4 |
| **ಒಟ್ಟು** | **11** |

**ಈ)** ಮೇಲಿನ ಅವಧಿಯಲ್ಲಿ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದನ್ವಯ ಪಾವತಿಸಲಾದ ದಯಾತ್ಮಕ ಧನದ ವಿವರ ಕೆಳಗಿನಂತಿದೆ.

**(₹ ಲಕ್ಷಗಳಲ್ಲಿ)**

| ವಿಭಾಗಗಳ ವಿವರ | ಮಾನವ ಪ್ರಾಣ ಹಾನಿ ಪ್ರಕರಣ | ಮಾನವ ಗಾಯ ಪ್ರಕರಣ | ಬೆಳೆ ಹಾನಿ ಪ್ರಕರಣ |
|---|---|---|---|
| **2011–12** | | | |
| ಮಡಿಕೇರಿ | 2.00 | 0.558 | 7.69 |
| ವೀರಾಜಪೇಟೆ | 7.00 | 0.263 | 34.45 |
| ಮಡಿಕೇರಿ ವನ್ಯಜೀವಿ | 0 | 0.035 | 17.77 |
| ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ | 10.00 | 0.338 | 21.49 |
| **ಒಟ್ಟು** | **19.00** | **1.194** | **81.40** |
| **2012–13** | | | |
| ಮಡಿಕೇರಿ | 15.00 | 0.307 | 19.539 |
| ವೀರಾಜಪೇಟೆ | 20.00 | 0.210 | 64.630 |
| ಮಡಿಕೇರಿ ವನ್ಯಜೀವಿ | 0 | 0.026 | 14.160 |
| ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ | 20.00 | 0.20 | 49.77 |
| **ಒಟ್ಟು** | **55.00** | **0.743** | **148.099** |

**ಉ)** ಆನೆ ದಾಳಿಗಳನ್ನು ತಡೆಗಟ್ಟಲು ಇಲಾಖಾವತಿಯಿಂದ ಸರ್ಕಾರದ ಆದೇಶ ಮತ್ತು ಅನುದಾನದ ಮೇರೆಗೆ ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯ ಅರಣ್ಯ ವಿಭಾಗಗಳಾದ ಮಡಿಕೇರಿ, ವೀರಾಜಪೇಟೆ, ವನ್ಯಜೀವಿ ವಿಭಾಗ, ಮಡಿಕೇರಿ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಕೊಡಗು ಭಾಗದ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕ್ರಮದ ವಿವರ ಕೆಳಗಿನಂತಿದೆ.

| ವಿವರ | **2010–11** | **2011–12** | **2012–13** |
|---|---|---|---|
| ಸೋಲಾರ ಬೇಲಿ (ಕಿ.ಮೀ.ಗಳಲ್ಲಿ) | 59.11 | 59.50 | 49.91 |
| ಆನೆ ತಡೆ ಕಂದಕ (ಕಿ.ಮೀ.ಗಳಲ್ಲಿ) | 25.05 | 29.25 | 43.00 |
| ಕಾಡಾನೆ ಓಡಿಸುವ ತಂಡ ರಚನೆ | 23 | 23 | 23 |

1. ಕಾಡು ಪ್ರಾಣಿಗಳು ಹಾಗೂ ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಓಡಿಸುವ ಸಲುವಾಗಿ ಕಾಡಾನೆ ತಡೆ ಕ್ಯಾಂಪುಗಳನ್ನು ಸ್ಥಾಪಿಸಿ, ಪ್ರತಿಯೊಂದು ಕ್ಯಾಂಪಿನಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ನುರಿತ ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮಕೈಗೊಳ್ಳಲಾಗಿದೆ.

2. ಸದರಿ ಸಿಬ್ಬಂದಿಗಳಿಗೆ ವಾಕೀ–ಟಾಕೀ, ಗನ್ ಹಾಗೂ ವಾಹನಗಳ ಸೌಲಭ್ಯಗಳನ್ನು ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಒದಗಿಸಲಾಗಿದೆ.

3. ಸಿಬ್ಬಂದಿಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

4. ಕಾಡಾನೆ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ಅವಶ್ಯಕತೆಗನುಗುಣವಾಗಿ Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನೇ Rapid Response Teams (RRT) ತಂಡಗಳನ್ನಾಗಿಸಿ, ಕಾಡಾನೆ ಹಾವಳಿ ನಿಯಂತ್ರಿಸಲಾಗುತ್ತಿದೆ.

5. ವನ್ಯಪ್ರಾಣಿ ಹಾವಳಿ ಕಂಡುಬಂದಾಗ ಕೂಡಲೇ ಕ್ರಮ ಕೈಗೊಳ್ಳುವ ಸಂಬಂಧ ಕೇಂದ್ರ ಸ್ಥಾನದಲ್ಲಿ 24 ಗಂಟೆಗಳ ಕಾಲ ಸೇವೆ ಒದಗಿಸುವ ಸಲುವಾಗಿ ಶುಲ್ಕ ರಹಿತ ಸೇವಾ ಸಂಖ್ಯೆ (Toll Free Number) ನ್ನು ಅನುಷ್ಠಾನಗೊಳಿಸಿ ಸಾರ್ವಜನಿಕರಿಗೆ ಒದಗಿಸಲು ಸಧ್ಯದಲ್ಲೇ ಕ್ರಮ ಕೈಗೊಳ್ಳಲಾಗುವುದು.

## ದೇವಸ್ಥಾನಗಳ ಜೀರ್ಣೋದ್ಧಾರ

**957; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹಾಗೂ ಅಭಿವೃದ್ಧಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಹಣ ಬಿಡುಗಡೆ ಮಾಡಲಾಗುತ್ತಿದೆಯೇ;

ಆ) ಜಿಲ್ಲಾಧಿಕಾರಿಗಳಿಂದ ಹಣವನ್ನು ಪಡೆಯುವಾಗ ಬಾಂಬೆ ಪಬ್ಲಿಕ್ ಆಕ್ಟ್ ಪ್ರಕಾರ ದೇವಸ್ಥಾನದ ನೋಂದಣಿ ಕಡ್ಡಾಯವೇ;

ಇ) ಒಂದು ವೇಳೆ ದೇವಸ್ಥಾನ ನೋಂದಣಿಯಾಗದೇ ಇದ್ದರೆ ಆ ಹಣವನ್ನು ಅವರಿಗೆ ಕೊಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಆ ಹಣವನ್ನು ನೇರವಾಗಿ ಯಾರಿಗೆ ಕೊಡಲಾಗುವುದು;

ಈ) ಹಣ ಪಡೆಯಲು ಇರುವ ಮಾರ್ಗಸೂಚಿಗಳೇನು;

ಉ) ಬಾಂಬೆ ಪಬ್ಲಿಕ್ ಆಕ್ಟ್ ಪ್ರಕಾರ ನೋಂದಣಿಯಾದ ದೇವಸ್ಥಾನಗಳ ಅರ್ಚಕರಿಗೆ ಪ್ರತಿ ತಿಂಗಳು ಎಷ್ಟು ಮಾಸಾಶನ ಕೊಡಲಾಗುತ್ತಿದೆ ಹಾಗೂ ಇದಕ್ಕೆ ಎಷ್ಟು ಖರ್ಚು ಬರುತ್ತದೆ.

ಊ) ದೇವಸ್ಥಾನಗಳಿಂದ ಪ್ರತಿ ವರ್ಷ ಎಷ್ಟು ಆದಾಯ ಇರುತ್ತದೆ; ಹಾಗೂ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ) ಹೌದು.

ಆ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಜಾರಿಗೆ ಬರುವ ಪೂರ್ವದಲ್ಲಿ ಬೆಳಗಾವಿ,

ಉತ್ತರಕನ್ನಡ, ಬಿಜಾಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಜಾರಿಯಲ್ಲಿದ್ದ ಬಾಂಬೆ ಪಬ್ಲಿಕ್ ಆಕ್ಟ್ ನಿರಸನಗೊಂಡಿರುವುದರಿಂದ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವಾಗ ಬಾಂಬೆ ಪಬ್ಲಿಕ್ ಆಕ್ಟ್ ಪ್ರಕಾರ ದೇವಸ್ಥಾನಗಳ ನೊಂದಣಿ ಪ್ರಶ್ನೆ ಬರುವುದಿಲ್ಲ.

ಪ್ರಸ್ತುತ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ನೊಂದಣಿಯು ಕಡ್ಡಾಯವಾಗಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ಕಾರದಿಂದ ಮಂಜೂರಾದ ಅನುದಾನವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಅನುಷ್ಠಾನಾಧಿಕಾರಿಗಳಾದ ಜಿಲ್ಲಾಧಿಕಾರಿಗಳು/ತಹಸೀಲ್ದಾರ್‌ಗಳು ಬಿಡುಗಡೆ ಮಾಡುವರು.

**ಈ)** ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳು, ಪೂಜಾ ಸ್ಥಳಗಳ ದುರಸ್ಥಿ, ಜೀರ್ಣೋದ್ಧಾರ ಹಾಗೂ ನವ ನಿರ್ಮಾಣ ಉದ್ದೇಶಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಸರ್ಕಾರವು ದಿನಾಂಕ:20.09.2010 ರಂದು ಸಂಖ್ಯೆ:ಕಂಇ 95 ಮುಅಬಿ 2010ರಲ್ಲಿ ಹೊರಡಿಸಿರುವ ಸುತ್ತೋಲೆಯ ಅನ್ವಯ ಬಿಡುಗಡೆ ಮಾಡಲಾಗುತ್ತದೆ.

ಮಾರ್ಗಸೂಚಿಯ ಪ್ರತಿಯನ್ನು **ಅನುಬಂಧ–01** ರಲ್ಲಿ ಒದಗಿಸಿದೆ.

ಉ) ಬಾಂಬೆ ಪಬ್ಲಿಕ್ ಆಕ್ಟ್ ನಿರಸನಗೊಂಡಿರುತ್ತದೆ. ಸದರಿ ಸಂಸ್ಥೆಗಳನ್ನು **"ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997"** ರ ಸೆಕ್ಷನ್ 23ರ ಅನ್ವಯ ಅಧಿಸೂಚಿತ ಸಂಸ್ಥೆಗಳನ್ನಾಗಿ ಪ್ರಕಟಿಸಲಾಗಿರುತ್ತದೆ.

ಅರ್ಚಕರಿಗೆ ಯಾವುದೇ ಮಾಸಾಶನವನ್ನು ಕೊಡುತ್ತಿರುವುದಿಲ್ಲ. ಆದರೆ ಕಾಯ್ದೆಯ ಸೆಕ್ಷನ್ 36 ಹಾಗೂ ನಿಯಮಗಳು 34(2)(ಬಿ) ರ ಅನ್ವಯ ಅಧಿಸೂಚಿತ ಸಂಸ್ಥೆಗಳ ವಾರ್ಷಿಕ ವರಮಾನದ ಆಧಾರದ ಮೇಲೆ ಸೂಕ್ತ ಆಯವ್ಯಯವನ್ನು ತಯಾರಿಸಿ ಆ ಆಯವ್ಯಯದಲ್ಲಿ

ದೇವಾಲಯದ ಆದಾಯದ 35% ಮೀರದಂತೆ ಅರ್ಚಕರಿಗೆ ಮತ್ತು ದೇವಾಲಯದ ಇತರೆ ನೌಕರರಿಗೆ ವೇತನ ಮತ್ತು ಉಪಲಬ್ಧಿಗಳನ್ನು ಪಾವತಿಸಲು ಅವಕಾಶವಿರುತ್ತದೆ.

ಊ)

1) **"ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997"** ರ ಸೆಕ್ಷನ್ 36 (1)ರ ಅನ್ವಯ ಹುಂಡಿ ಸಂಗ್ರಹಣೆ, ತಸ್ತೀಕ್ ಮೊತ್ತ, ವರ್ಷಾಸನ, ನಗದು ಅನುದಾನಗಳು, ಜಾತ್ರೆ, ರಥೋತ್ಸವ, ಸೇವಾರ್ಥ ಶುಲ್ಕಗಳು, ಠೇವಣಿ ಮೇಲಿನ ಬಡ್ಡಿ, ಮನಿಯಾರ್ಡರ್‌ಗಳು, ಜಮೀನು ಮತ್ತು ಕಟ್ಟಡಗಳ ಬಾಡಿಗೆ ಇವುಗಳಿಂದ ಬರುವ ವರಮಾನವನ್ನು ದೇವಾಲಯದ ವರಮಾನವೆಂದು ಪರಿಗಣಿಸಲಾಗುತ್ತದೆ.

2) ಜಾತ್ರೆ, ರಥೋತ್ಸವ, ಮನಿಯಾರ್ಡರ್‌ಗಳು, ಹುಂಡಿ ಸಂಗ್ರಹಣೆ ಇಂದ ಬರುವ ಆದಾಯಗಳು ಅನಿರ್ದಿಷ್ಟ ಆದಾಯಗಳಾಗಿದ್ದು, ವರ್ಷದಿಂದ ವರ್ಷಕ್ಕೆ ಏರುಪೇರಾಗುತ್ತಿರುತ್ತದೆ, ಅಲ್ಲದೆ ಇಲಾಖೆಯ ವ್ಯಾಪ್ತಿಗೆ ಬರುವ ಅಧಿಸೂಚಿತ ದೇವಾಲಯಗಳನ್ನು ವಾರ್ಷಿಕ ಅದಾಯಕ್ಕನುಗುಣವಾಗಿ 'ಎ', 'ಬಿ' ಮತ್ತು 'ಸಿ' ಪ್ರವರ್ಗಗಳನ್ನಾಗಿ ವರ್ಗೀಕರಿಸಿದ್ದು, ವಾರ್ಷಿಕ ₹ 25.00 ಲಕ್ಷ ಹಾಗೂ ₹ 25.00 ಲಕ್ಷಕ್ಕೆ ಮೇಲ್ಪಟ್ಟು ಆದಾಯವಿರುವ ಸಂಸ್ಥೆಗಳನ್ನು ಪ್ರವರ್ಗ 'ಎ' ಸಂಸ್ಥೆಗಳೆಂದು, ವಾರ್ಷಿಕ ₹ 25.00 ಲಕ್ಷದೊಳಗಿದ್ದು, ₹ 5.00 ಲಕ್ಷ ಮೇಲ್ಪಟ್ಟು ಆದಾಯವಿರುವ ಸಂಸ್ಥೆಗಳನ್ನು ಪ್ರವರ್ಗ 'ಬಿ' ಸಂಸ್ಥೆಗಳೆಂದು, ₹ 5.00 ಲಕ್ಷದೊಳಗಿನ ಸಂಸ್ಥೆಗಳನ್ನು ಪ್ರವರ್ಗ 'ಸಿ' ಸಂಸ್ಥೆಗಳೆಂದು ವರ್ಗೀಕರಿಸಿದ್ದು, ಸಮೂಹ 'ಬಿ' ಮತ್ತು 'ಸಿ' ವರ್ಗದ ಅಧಿಸೂಚಿತ ದೇವಾಲಯಗಳಿಗೆ ಅನುಕ್ರಮವಾಗಿ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು/ಉಪವಿಭಾಗಾಧಿಕಾರಿಗಳು ನಿಯಮಿಸಲಾದ ಪ್ರಾಧಿಕಾರಿಗಳಾಗಿದ್ದು, ಈ ವರ್ಗಕ್ಕೆ ಸೇರಿದ ಸಂಸ್ಥೆಗಳ ಆದಾಯವನ್ನು

ಸದರಿಗಳ ಕಛೇರಿಯಲ್ಲಿ ನಿರ್ವಹಿಸುವುದರಿಂದ ಸದರಿ ಮಾಹಿತಿಗಳನ್ನು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಸಂಗ್ರಹಿಸಿ ಮಾನ್ಯ ಶಾಸಕರಿಗೆ ನೇರವಾಗಿ ಒದಗಿಸಲಾಗುವುದು.

3) ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರ/ದುರಸ್ಥಿ/ನಿರ್ಮಾಣ/ಅಭಿವೃದ್ಧಿ/ ಮೂಲಭೂತ ಸೌಕರ್ಯಗಳಿಗಾಗಿ ಈ ಕೆಳಕಂಡ ಲೆಕ್ಕ ಶೀರ್ಷಿಕೆಯಡಿ ಸರ್ಕಾರವು ಆಯಾಯ ಆರ್ಥಿಕ ವರ್ಷದಲ್ಲಿ ಅನುವು ಮಾಡುವ ಮೊತ್ತದ ಆಧಾರದ ಮೇಲೆ ಅನುದಾನವನ್ನು ಸರ್ಕಾರದ ಹಂತದಲ್ಲಿ ಬಿಡುಗಡೆ ಮಾಡಲಾಗುತ್ತದೆ.

| ಕ್ರ.ಸಂ. | **ಲೆಕ್ಕ ಶೀರ್ಷಿಕೆ** |
|---|---|
| 1 | "2250–00–103–5–12" ದೇವಸ್ಥಾನಗಳು ಮತ್ತು ಇತರೇ ಧಾರ್ಮಿಕ ಸಂಸ್ಥೆಗಳು (200) ನಿರ್ವಹಣೆ (ಯೋಜನೇತರ) |
| 3 | "4059–50–051–0–52" ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ವಸತಿ ಸೌಕರ್ಯ (ಯೋಜನೆ) |

4) 2012–13ನೇ ಸಾಲಿನಲ್ಲಿ 5835 ಧಾರ್ಮಿಕ ಸಂಸ್ಥೆಗಳಿಗೆ ₹ 25022.43 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧ–02** ರಲ್ಲಿ ಒದಗಿಸಿದೆ.

**ಅನುಬಂಧ-01**

**ಕರ್ನಾಟಕ ಸರ್ಕಾರ**

**ಸಂಖ್ಯೆ: ಕಂಇ 95 ಮುಆಬಿ 2010** **ಕರ್ನಾಟಕ ಸರ್ಕಾರದ ಸಚಿವಾಲಯ,**

**ಬಹುಮಹಡಿ ಕಟ್ಟಡ,**

**ಬೆಂಗಳೂರು, ದಿನಾಂಕ: 20.09.2010**

**ಸುತ್ತೋಲೆ**

**ವಿಷಯ:** ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳು, ಪೂಜಾ ಸ್ಥಳಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ನವನಿರ್ಮಾಣ ಉದ್ದೇಶಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

**ಉಲ್ಲೇಖ:** 1. ಸುತ್ತೋಲೆ ಸಂಖ್ಯೆ: ಆರ್‌ಡಿ 171 ಎಂಎಲ್‌ಡಿ 90, ದಿನಾಂಕ:7.9.1990

2. ಸಂಖ್ಯೆ: ಆರ್‌ಡಿ 171 ಎಂಎಲ್‌ಡಿ 90, ದಿನಾಂಕ:4.4.1991.

3. ಸಂಖ್ಯೆ: ಆರ್‌ಡಿ 171 ಎಂಎಲ್‌ಡಿ 2000, ದಿನಾಂಕ:28.1.2001

4. ಸಂಖ್ಯೆ: ಕಂಇ 59 ಮುಆಬಿ 2001, ದಿನಾಂಕ:4.9.2001.

ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳು, ಪೂಜಾ ಸ್ಥಳಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ನವನಿರ್ಮಾಣ ಕಾಮಗಾರಿಗಳಿಗಾಗಿ ಸರ್ಕಾರದಿಂದ ಅನುದಾನ ಮಂಜೂರು ಮಾಡಲಾಗುತ್ತಿದೆ. ಈ ಅನುದಾನವನ್ನು ಮಂಜೂರು ಬಿಡುಗಡೆ ಮಾಡುವ ಬಗ್ಗೆ ಉಲ್ಲೇಖದಲ್ಲಿ ತಿಳಿಸಿರುವ ಸುತ್ತೋಲೆಗಳಲ್ಲಿ ಸ್ಪಷ್ಟೀಕರಣ ಹೊರಡಿಸಲಾಗಿದೆ. ಕಳೆದ ಎರಡು ವರ್ಷಗಳಿಂದ, ಸರ್ಕಾರವು ಧಾರ್ಮಿಕ ಸಂಸ್ಥೆಗಳು, ಪೂಜಾ ಸ್ಥಳಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ

ನವನಿರ್ಮಾಣ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡುವ ಅನುದಾನದ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಅನುದಾನ ಮಂಜೂರು ಮಾಡಲು ಸರ್ಕಾರದ ನಿಯಂತ್ರಣದಲ್ಲಿರುವ ಧಾರ್ಮಿಕ ಸಂಸ್ಥೆಗಳು, ಖಾಸಗಿ ಧಾರ್ಮಿಕ ಸಂಸ್ಥೆಗಳು ಹಾಗೂ ಮಠಗಳಿಂದ ಹೆಚ್ಚಿನ ಬೇಡಿಕೆಗಳು ಬರುತ್ತಿರುವುದು ಹಿನ್ನೆಲೆಯಲ್ಲಿ, ಸರ್ಕಾರವು ಆಯವ್ಯಯ ಮುಂಗಡ ಪತ್ರದಲ್ಲಿ "2250–00–1–03–(101)– ದೇವಸ್ಥಾನಗಳು ಹಾಗೂ ಇತರ ಧಾರ್ಮಿಕ ಸಂಸ್ಥೆಗಳು ಸಹಾಯಾನುದಾನ" ಮತ್ತು "2250–00–800–1–03 (200)– ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು ನಿರ್ವಹಣೆ" ಎಂಬ ಎರಡು ಲೆಕ್ಕ ಶೀರ್ಷಿಕೆಗಳಲ್ಲಿ ಹಣವನ್ನು ಈ ಉದ್ದೇಶಕ್ಕಾಗಿ ಒದಗಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಿಂದೆ ಹೊರಡಿಸಿದ ಉಲ್ಲೇಖದಲ್ಲಿ ಸೂಚಿಸಿರುವ ಎಲ್ಲಾ ಸುತ್ತೋಲೆಗಳನ್ನು ರದ್ದುಪಡಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣವೇ ಜಾರಿಗೆ ಬರುವಂತೆ ಆದೇಶಿಸಿದೆ:–

**I. ಧಾರ್ಮಿಕ ದತ್ತಿ ಇಲಾಖಾ ನಿಯಂತ್ರಣಕ್ಕೆ ಬರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ:**

ಮುಂಗಡ ಪತ್ರದ ಲೆಕ್ಕ ಶೀರ್ಷಿಕೆ "2250–00–800–1–03 (200)– ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು ನಿರ್ವಹಣೆ" ರಡಿಯಲ್ಲಿ ಒದಗಿಸಿದ ಮೊತ್ತವನ್ನು ಧಾರ್ಮಿಕ ದತ್ತಿ ಇಲಾಖಾ ನಿಯಂತ್ರಣಕ್ಕೆ ಒಳಪಡುವ ದೇವಸ್ಥಾನಗಳಿಗೆ ಮಂಜೂರು ಮಾಡಲಾಗುವುದು.

1. ಧಾರ್ಮಿಕ ದತ್ತಿ ಇಲಾಖಾ ನಿಯಂತ್ರಣದಲ್ಲಿರುವ ದೇವಸ್ಥಾನಗಳಿಗೆ ಅನುದಾನವನ್ನು ಮಂಜೂರು ಮಾಡುವ ಬಗ್ಗೆ ಹಂತ ಹಂತವಾಗಿ ಕೈಗೆತ್ತಿಕೊಳ್ಳುವುದು. ಇದಕ್ಕಾಗಿ ಜಿಲ್ಲಾಧಿಕಾರಿಗಳು ಸಂಸ್ಥೆಗಳಿಲ್ಲಿರುವ ಹಣದ ಪರಿಸ್ಥಿತಿಯನ್ನು ಅರಿತು ಪ್ರಸ್ತಾವನೆಗಳನ್ನು ಪಡೆದು, ತಮ್ಮ ವ್ಯಾಪ್ತಿಯಲ್ಲಿರುವ ಅಧಿಕಾರವನ್ನು ಚಲಾಯಿಸಿ, ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವುದು. ತಮ್ಮ ವ್ಯಾಪ್ತಿಗೆ ಮೀರಿದರೆ, ಅವುಗಳನ್ನು ಧಾರ್ಮಿಕ ದತ್ತಿ ಆಯುಕ್ತರಿಗೆ

ಕಳುಹಿಸುವುದು ಮತ್ತು ಧಾರ್ಮಿಕ ದತ್ತಿ ಆಯುಕ್ತರು ತಮ್ಮ ಅಧಿಕಾರವನ್ನು ಚಲಾಯಿಸಿ, ಅಂತಹ ಪ್ರಸ್ತಾವನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವುದು. ಧಾರ್ಮಿಕ ದತ್ತಿ ಆಯುಕ್ತರು ತಮ್ಮ ಅಧಿಕಾರ ವ್ಯಾಪ್ತಿಗೆ ಮೀರಿದರೆ ಅದನ್ನು ಸರ್ಕಾರಕ್ಕೆ ಸಲ್ಲಿಸುವುದು.

2. ದೇವಸ್ಥಾನದ ವ್ಯವಸ್ಥಾಪನಾ/ಜೀರ್ಣೋದ್ಧಾರ ಸಮಿತಿಯವರು ಸಾರ್ವಜನಿಕರಿಂದ ಈ ಕೆಲಸಕ್ಕಾಗಿ ವಂತಿಗೆಯನ್ನು ಪಡೆದು ಸಂಗ್ರಹಿಸಿದರೆ ಅಂತಹ ಸಂಸ್ಥೆಗೆ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲು ಆದ್ಯತೆ ನೀಡಲಾಗುವುದು. ಸರ್ಕಾರದಿಂದ ಪಡೆದ ಅನುದಾನ ಅಥವಾ ಸಾರ್ವಜನಿಕರಿಂದ ಸಂಗ್ರಹಿಸಿದ ವಂತಿಗೆ ಇವುಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಡುವುದು ಮತ್ತು ಅವುಗಳ ಲೆಕ್ಕವನ್ನು ಸರಿಯಾಗಿ ನೋಡಿಕೊಳ್ಳುವುದು.

3. ಧಾರ್ಮಿಕ ಸಂಸ್ಥೆಗಳ/ದೇವಸ್ಥಾನಗಳ ದುರಸ್ಥಿ, ಜೀರ್ಣೋದ್ಧಾರ, ನಿರ್ಮಾಣ ಮುಂತಾದ ಉದ್ದೇಶಕ್ಕಾಗಿ ಸರ್ಕಾರದಲ್ಲಿ ದೊರೆಯುವ ಅನುದಾನದ ಲಭ್ಯತೆಗೊಳಪಟ್ಟು ಗರಿಷ್ಠ ₹ 10.00 ಲಕ್ಷದವರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ದೇವಸ್ಥಾನ/ಧಾರ್ಮಿಕ ಸಂಸ್ಥೆಗೆ ಈ ಕೆಳಕಂಡ ಉದ್ದೇಶಗಳಿಗೆ ಆದ್ಯತೆ ನೀಡಲಾಗುವುದು.

    1. ಗರ್ಭಗುಡಿಯ ದುರಸ್ಥಿ
    2. ಪೂಜಾ ಸ್ಥಾನಗಳ ದುರಸ್ಥಿ ಹಾಗೂ ನವೀಕರಣ,
    3. ದೇವಸ್ಥಾನದ ಮಹಾ ದ್ವಾರದ ದುರಸ್ಥಿ,
    4. ಭಕ್ತಾದಿಗಳು ದೇವರ ದರ್ಶನಕ್ಕಾಗಿ ಕಾಯುವ ಪ್ರಧಾನ ಮಂದಿರಗಳ ದುರಸ್ಥಿ,
    5. ಪ್ರಾಕಾರಗಳ ದುರಸ್ಥಿ,
    6. ಪಿಲ್ಲರುಗಳ ದುರಸ್ಥಿ,

7. ಧ್ವಜಸ್ತಂಭಗಳ ದುರಸ್ಥಿ / ನಿರ್ಮಾಣ,
8. ಕಾಂಪೌಂಡ್ ಗೋಡೆಗಳ ದುರಸ್ಥಿ / ನಿರ್ಮಾಣ,
9. ಭಕ್ತಾದಿಗಳಿಗೆ ನಾಗರೀಕ ಸೇವಾ ಸೌಲಭ್ಯ ಒದಗಿಸುವುದು,
10. ರಥ, ರಥದ ಮನೆ ದುರಸ್ಥಿ / ನಿರ್ಮಾಣ
11. ಶಿಲ್ಪ, ಶಿಲ್ಪಗಳ ಭಾಗಗಳ ದುರಸ್ಥಿ

ಮೇಲೆ ಸೂಚಿಸಿದ ಕಾಮಗಾರಿಗಳನ್ನು, ಅವುಗಳು ಸೂಚಿಸಿರುವ ಕ್ರಮ ಸಂಖ್ಯೆ ಪ್ರಕಾರ ಆದ್ಯತೆ ಮೇಲೆ ಕೈಗೆತ್ತಿಕೊಳ್ಳಲು, ಇದಕ್ಕಾಗಿ ಜಿಲ್ಲಾಧಿಕಾರಿಗಳು ಪ್ರಸ್ತಾವನೆಗಳಿಗೆ ಧಾರ್ಮಿಕ ದತ್ತಿ ಆಯುಕ್ತರಿಗೆ ಅನುದಾನ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುವುದು. ಮೇಲೆ ತಿಳಿಸಿದ ಯಾವುದೇ ಅರ್ಹ ವಿಷಯಗಳಲ್ಲಿ ಈ ಷರತ್ತುಗಳನ್ನು ಸರ್ಕಾರವು ಸಡಿಲಿಸಬಹುದಾಗಿದೆ. ಸರ್ಕಾರದಿಂದ ಪೂಜಾ ಸ್ಥಳಗಳ ದುರಸ್ಥಿ ಹಾಗೂ ನವೀಕರಣಕ್ಕಾಗಿ ಬಿಡುಗಡೆಯಾದಾಗ ಸರ್ಕಾರದ ಅನುದಾನವನ್ನು ಆಯಾ ದೇವಸ್ಥಾನಗಳಿಗೆ ಬಿಡುಗಡೆ ಮಾಡುವ ಬಗ್ಗೆ ಈ ಕೆಳಕಂಡ ನಿಯಮಗಳನ್ನು ಪಾಲಿಸುವುದು.

1. ಅನುದಾನವನ್ನು ಮಂಜೂರು ಮಾಡಿಸಿಕೊಂಡಂತಹ ದೇವಸ್ಥಾನಗಳು ಉದ್ದೇಶಿತ ಕಾಮಗಾರಿಗೆ ಸಂಬಂಧಿಸಿದಂತೆ ನಕ್ಷೆ ಮತ್ತು ಅಂದಾಜು ಪಟ್ಟಿಗೆ ತಾಂತ್ರಿಕ / ಆಡಳಿತಾತ್ಮಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದ ನಂತರ, ಮಂಜೂರಾದ ಮೊತ್ತವು ₹ 5.00 ಲಕ್ಷಕ್ಕಿಂತ ಕಡಿಮೆಯಾಗಿದ್ದಲ್ಲಿ, ಏಕ ಕಂತಿನಲ್ಲಿ ಕ್ರಾಸ್ಡ್ ಚೆಕ್ ಮುಖಾಂತರವೇ ಸಂಸ್ಥೆಯ ಹೆಸರಿನಲ್ಲಿ ಪಾವತಿಸತಕ್ಕದ್ದು, ಹಾಗೂ ಅನುದಾನ ಬಳಿಸಿದ ಬಗ್ಗೆ ಒಂದು ವರ್ಷದೊಳಗೆ ಬಳಕೆ ಪ್ರಮಾಣ ಪತ್ರ ಪಡೆಯುವುದು.
2. ಮಂಜೂರಾದ ಅನುದಾನವು ₹ 10.00 ಲಕ್ಷಕ್ಕೂ ಮೇಲ್ಪಟ್ಟಿದ್ದರೆ ಅನುದಾನವನ್ನು ಎರಡು ಸಮಾನ ಕಂತುಗಳಲ್ಲಿ ಸಂಸ್ಥೆಯ ಹೆಸರಿನಲ್ಲಿ ಬಿಡುಗಡೆ ಮಾಡುವುದು. ಮೊದಲನೇ ಕಂತನ್ನು ಪಡೆದ ಸಂಸ್ಥೆಯು

ಉದ್ದೇಶಿತ ಕಾಮಗಾರಿಯನ್ನು ಕೈಗೆತ್ತಿಕೊಂಡು, ಈ ಅನುದಾನವನ್ನು ಖರ್ಚು ಮಾಡಿದ ನಂತರ, ಸದರಿ ಕಾಮಗಾರಿಯ ಪ್ರಗತಿ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ (ಲೋಕೋಪಯೋಗಿ ಇಲಾಖೆಯ ಅಥವಾ ಜಿಲ್ಲಾ ಪಂಚಾಯತ್ ಅಭಿಯಂತರರಿಂದ) ಪರಿವೀಕ್ಷಣೆ ಮಾಡಿಸಿ, ಅವರ ಅನುಮೋದನೆಯೊಂದಿಗೆ ಮೊದಲನೆ ಕಂತಿನ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಿತ ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ, ಎರಡನೇ ಕಂತನ್ನು ಬಿಡುಗಡೆ ಮಾಡುವುದು.

3. ಸರ್ಕಾರದಿಂದ ಮಂಜೂರಾದ ಅನುದಾನದ ಜೊತೆಗೆ, ಧಾರ್ಮಿಕ ಸಂಸ್ಥೆಗಳು/ದೇವಸ್ಥಾನಗಳು ಇನ್ನುಳಿದ ವೆಚ್ಚವನ್ನು ಆಯಾ ಸಂಸ್ಥೆಗಳು, ಸಾರ್ವಜನಿಕರಿಂದ ಸಂಗ್ರಹಿಸಿದ ದೇಣಿಗೆಯಿಂದ ಖರ್ಚು ಮಾಡಿ, ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರೈಸುವುದು. ಮೊದಲನೇ ಕಂತು ಬಿಡುಗಡೆ ಮಾಡಲು ಸಂಘ/ಸಂಸ್ಥೆಗಳಿಂದ ಕೋರಿಕೆ ಬಂದಾಗ, ಸಕ್ಷಮ ಪ್ರಾಧಿಕಾರದಿಂದ ಅಂದಾಜಿನ ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಪಡೆಯಬೇಕೆಂಬುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿರುವುದನ್ನು ಖಚಿತ ಪಡಿಸಿಕೊಂಡು ಅನುದಾನ ಬಿಡುಗಡೆ ಮಾಡುವ ಪ್ರಾಧಿಕಾರವು ಮುಂದೆ ವಿಳಂಬ ಮಾಡದೆ ಅನುದಾನವನ್ನು ಆಯಾ ಸಂಸ್ಥೆಗಳಿಗೆ ಬಿಡುಗಡೆ ಮಾಡತಕ್ಕದ್ದು.

4. ಸಾರ್ವಜನಿಕ ವಂತಿಗೆ ಹಾಗೂ ಸರ್ಕಾರದ ಅನುದಾನ ಉದ್ದೇಶಿತ ಕಾಮಗಾರಿಗಳಿಗೆ ಬಳಸಿರುವ ಬಗ್ಗೆ ಸರಿಯಾಗಿ ಲೆಕ್ಕ ಪತ್ರಗಳನ್ನು ನಿರ್ವಹಿಸತಕ್ಕದ್ದು, ಲೆಕ್ಕ ಪರಿಶೋಧನೆ ಮಾಡಿಸಿ ಸಾರ್ವಜನಿಕ ಹಣ ಅಪವ್ಯಯವಾಗದಂತೆ ಸಂಬಂಧಪಟ್ಟ ಸಂಸ್ಥೆಗಳು ನಿಗಾ ವಹಿಸುವುದು.

5. ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಎರಡನೇ ಕಂತು ಬಿಡುಗಡೆ ಮಾಡುವಾಗ ಮೊದಲನೇ ಕಂತಿನಿಂದ ಪಡೆದ

ಅನುದಾನವನ್ನು ಉಪಯೋಗಿಸಿದ ಬಗ್ಗೆ ಬಳಕೆ ಪ್ರಮಾಣ ಪತ್ರ (Utilisation Certificate) ಸಲ್ಲಿಸುವುದು ಮತ್ತು ಎರಡನೇ ಕಂತಿನ ಅನುದಾನವನ್ನು ಉಪಯೋಗಿಸಿದ ನಂತರ ಎರಡನೇ ಕಂತಿನಲ್ಲಿ ಬಿಡುಗಡೆಯಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

6. ಸರ್ಕಾರದಿಂದ ಅನುದಾನ ಮಂಜೂರಾಗುವ ಯಾವುದೇ ₹ 5.00 ಲಕ್ಷಕ್ಕೂ ಮೇಲ್ಪಟ್ಟ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮಗಳನ್ನು ಪಾಲಿಸುವುದು.

7. ಸಾರ್ವಜನಿಕ ಸ್ಥಳಗಳಾದ ಸಿ.ಎ. ನಿವೇಶನ, ಸರ್ವೀಸ್ ರಸ್ತೆಗಳು, ರಸ್ತೆಗಳು, ಪಾರ್ಕುಗಳು ಮತ್ತು ಇತರೆ ಸಾರ್ವಜನಿಕರು ಉಪಯೋಗ ಪಡಿಸುವಂತಹ ಸ್ಥಳಗಳಲ್ಲಿ ದೇವಸ್ಥಾನಗಳು ಇದ್ದಲ್ಲಿ ಅಂತಹವುಗಳಿಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ. ಇದನ್ನು ಅನುದಾನ ಬಿಡುಗಡೆ ಮಾಡುವ ಸಕ್ಷಮ ಪ್ರಾಧಿಕಾರಗಳು ಖಚಿತ ಪಡಿಸಿಕೊಳ್ಳುವುದು.

8. ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊದಲನೇ ಕಂತು ಬಿಡುಗಡೆಯಾದ ದಿನಾಂಕದಿಂದ ಒಂದು ವರ್ಷದೊಳಗಾಗಿ ಪೂರ್ಣ ಹಣವನ್ನು ಬಿಡುಗಡೆ ಮಾಡಿಸಿಕೊಳ್ಳಲು ಸಂಬಂಧಿಸಿದ ದೇವಸ್ಥಾನದ ಸಮಿತಿ ಕ್ರಮ ಜರುಗಿಸುವುದು. ಒಂದು ವರ್ಷದೊಳಗಾಗಿ ಬಿಡುಗಡೆ ಮಾಡಿಸಿಕೊಳ್ಳಲು ಕ್ರಮ ವಹಿಸದಿದ್ದರೆ ಬೇರೆ ದೇವಸ್ಥಾನಗಳಿಗೆ ಮರು ಹಂಚಿಕೆ ಮಾಡಲು ಸರ್ಕಾರ ಕ್ರಮ ಜರುಗಿಸುವುದು.

9. ಪ್ರಸ್ತುತ ಮಂಜೂರಾಗಿ ಬಿಡುಗಡೆ ಆಗದೆ ಇರುವ ಅನುದಾನವನ್ನು ಬಿಡುಗಡೆ ಮಾಡಲು, ಈ ಮಾರ್ಗಸೂಚಿಗಳನ್ನೇ ಅನುಸರಿಸುವುದು.

ಆಡಳಿತಾತ್ಮಕ ಮಂಜೂರು ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಿರುವ ಸಕ್ಷಮ ಪ್ರಾಧಿಕಾರಗಳನ್ನು ಸರ್ಕಾರಿ ಆದೇಶ

ಸಂಖ್ಯೆ: ಕಂಇ 08 ಮುಸೇವಿ 2009 ದಿನಾಂಕ:27.01.2009 ರಲ್ಲಿ ಗುರುತಿಸಲಾಗಿದೆ. ಈ ಅಧಿಕಾರ ಪ್ರತ್ಯಾಯೋಜನೆಯಂತೆ ಸರ್ಕಾರದಿಂದ ಅನುದಾನ ಮಂಜೂರಾದ ದೇವಸ್ಥಾನಗಳು, ಲೋಕೋಪಯೋಗಿ ಇಲಾಖೆಯಿಂದ ಲೈಸೆನ್ಸ್ ಪಡೆದುಕೊಂಡಂತಹ ವ್ಯಕ್ತಿಗಳು/ ಸಂಸ್ಥೆಗಳಿಂದ ಧಾರ್ಮಿಕ ಸಂಸ್ಥೆಗಳು/ ದೇವಸ್ಥಾನಗಳ ನಿರ್ಮಾಣ / ದುರಸ್ಥಿ ಮತ್ತು ನವೀಕರಣಕ್ಕಾಗಿ ಅಂದಾಜನ್ನು ತಯಾರಿಸಿ, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ ಅನುದಾನವನ್ನು ಬಿಡುಗಡೆ ಮಾಡುವುದು.

**II. ಖಾಸಗಿ ದೇವಸ್ಥಾನಗಳಿಗೆ/ಸಂಸ್ಥೆಗಳಿಗೆ ಸಂಬಂಧಿಸಿದಂತೆ**

ಮುಂಗಡ ಪತ್ರದ ಲೆಕ್ಕ ಶೀರ್ಷಿಕೆ "2250–00–1–03 (101)– ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು – ಸಹಾಯಾನುದಾನ" ರಡಿಯಲ್ಲಿ ಒದಗಿಸಿದ ಅನುದಾನವನ್ನು ಖಾಸಗಿ ದೇವಸ್ಥಾನ / ಸಂಸ್ಥೆಗಳ ದುರಸ್ಥಿ / ಜೀರ್ಣೋದ್ಧಾರಗಳಿಗೆ ಮಂಜೂರು ಮಾಡಲಾಗುವುದು.

1. ಅಸ್ತಿತ್ವದಲ್ಲಿರುವ ಖಾಸಗಿ ಧಾರ್ಮಿಕ ಸಂಸ್ಥೆಗಳನ್ನು ಮಾತ್ರ ಅನುದಾನಕ್ಕಾಗಿ ಪರಿಗಣಿಸಲಾಗುವುದು. ಹೊಸ ಖಾಸಗಿ ದೇವಸ್ಥಾನದ ನಿರ್ಮಾಣಕ್ಕಾಗಿ ಅನುದಾನ ನೀಡಲಾಗುವುದಿಲ್ಲ.
2. ಸರ್ಕಾರವು ಖಾಸಗಿ ಧಾರ್ಮಿಕ ಸಂಸ್ಥೆಗಳ ದುರಸ್ಥಿ / ಜೀರ್ಣೋದ್ಧಾರ, ಮುಂತಾದವುಗಳಿಗೆ ಸರ್ಕಾರದಲ್ಲಿ ದೊರೆಯುವ ಅನುದಾನದ ಲಭ್ಯತೆಗೊಳಪಟ್ಟು ಗರಿಷ್ಠ ₹ 25.00 ಲಕ್ಷದವರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಖಾಸಗಿ ದೇವಸ್ಥಾನ / ಧಾರ್ಮಿಕ ಸಂಸ್ಥೆಗಳ ಈ ಕೆಳಕಂಡ ಉದ್ದೇಶಗಳಿಗೆ ಆದ್ಯತೆ ನೀಡುವುದು:–

   1. ಗರ್ಭಗುಡಿಯ ದುರಸ್ಥಿ
   2. ಪೂಜಾ ಸ್ಥಾನಗಳ ದುರಸ್ಥಿ ಹಾಗೂ ನವೀಕರಣ,

3. ದೇವಸ್ಥಾನದ ಮಹಾ ದ್ವಾರದ ದುರಸ್ಥಿ,
4. ಭಕ್ತಾದಿಗಳು ದೇವರ ದರ್ಶನಕ್ಕಾಗಿ ಕಾಯುವ ಪ್ರಧಾನ ಮಂದಿರಗಳ ದುರಸ್ಥಿ,
5. ಪ್ರಾಕಾರಗಳ ದುರಸ್ಥಿ,
6. ಪಿಲ್ಲರುಗಳ ದುರಸ್ಥಿ,
7. ಧ್ವಜಸ್ಥಂಭಗಳ ದುರಸ್ಥಿ / ನಿರ್ಮಾಣ,
8. ಕಾಂಪೌಂಡ್ ಗೋಡೆಗಳ ದುರಸ್ಥಿ / ನಿರ್ಮಾಣ,
9. ಭಕ್ತಾದಿಗಳಿಗೆ ನಾಗರೀಕ ಸೇವಾ ಸೌಲಭ್ಯ ಒದಗಿಸುವುದು,
10. ದೇವಸ್ಥಾನದ ಅಕ್ಕಪಕ್ಕದಲ್ಲಿ ಕಲ್ಯಾಣ ಮಂಟಪ ನಿರ್ಮಾಣ,
11. ರಥ/ರಥದ ಮನೆ ದುರಸ್ಥಿ / ನಿರ್ಮಾಣ

3. ಅನುದಾನ ಬಯಸುವ ಖಾಸಗಿ ಧಾರ್ಮಿಕ ಸಂಸ್ಥೆಗಳು ಕೋರಿಕೆ ಪತ್ರವನ್ನು ಸರ್ಕಾರ/ಆಯುಕ್ತರು/ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬಹುದು. ಇಂತಹ ಸಂಸ್ಥೆಗಳಿಗೆ ಸರ್ಕಾರವು ಅನುದಾನ ಮಂಜೂರು ಮಾಡಿದಲ್ಲಿ ಅನುದಾನ ಬಿಡುಗಡೆಯಾದ ಖಾಸಗಿ ಸಂಸ್ಥೆಗಳು ಉದ್ದೇಶಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಪರಿಶೀಲನೆಗೆ ಒಳಪಡಿಸಿದ ನಂತರ ಮಂಜೂರಾದ ಅನುದಾನ ₹ 5.00 ಲಕ್ಷಕ್ಕಿಂತ ಕಡಿಮೆಯಾಗಿದ್ದರೆ, ಪೂರ್ಣ ಹಣವನ್ನು ಕ್ರಾಸ್ಡ್ ಚೆಕ್ ಮುಖಾಂತರ ಏಕ ಕಂತಿನಲ್ಲಿ ಸಂಸ್ಥೆಗೆ ಬಿಡುಗಡೆ ಮಾಡುವುದು. ನಂತರ ಸದರಿ ಸಂಸ್ಥೆಗಳಿಂದ ಬಳಕೆ ಪ್ರಮಾಣ ಪತ್ರ ಪಡೆಯುವುದು.

4. ಮಂಜೂರಾದ ಅನುದಾನವು ₹ 10.00 ಲಕ್ಷಕ್ಕೂ ಮೇಲ್ಪಟ್ಟಿದ್ದರೆ, ಅನುದಾನವನ್ನು ಎರಡು ಸಮಾನ ಕಂತುಗಳಲ್ಲಿ ಸಂಸ್ಥೆಯ ಹೆಸರಿನಲ್ಲಿ ಬಿಡುಗಡೆ ಮಾಡುವುದು. ಮೊದಲನೇ ಕಂತನ್ನು ಪಡೆದ ಸಂಸ್ಥೆಯು ಉದ್ದೇಶಿತ ಕಾಮಗಾರಿಯನ್ನು ಕೈಗೆತ್ತಿಕೊಂಡು, ಈ ಅನುದಾನವನ್ನು ಖರ್ಚು ಮಾಡಿದ ನಂತರ, ಸದರಿ ಕಾಮಗಾರಿಯ ಪ್ರಗತಿ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ (ಲೋಕೋಪಯೋಗಿ ಇಲಾಖೆಯ ಅಥವಾ ಜಿಲ್ಲಾ ಪಂಚಾಯತ್ ಅಭಿಯಂತರರಿಂದ) ಪರಿವೀಕ್ಷಣೆ ಮಾಡಿಸಿ, ಅವರ ಅನುಮೋದನೆಯೊಂದಿಗೆ ಮೊದಲನೆ ಕಂತಿನ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಿತ ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ, ಎರಡನೇ ಕಂತನ್ನು ಬಿಡುಗಡೆ ಮಾಡುವುದು.

5. ಸರ್ಕಾರದಿಂದ ಮಂಜೂರಾದ ಅನುದಾನದ ಜೊತೆಗೆ ಖಾಸಗಿ ಧಾರ್ಮಿಕ ಸಂಸ್ಥೆಗಳು ಅಂದಾಜು ಪಟ್ಟಿಯಂತೆ ಉಳಿದ ವೆಚ್ಚವನ್ನು ಸಂಸ್ಥೆಯ ನಿಧಿಯಿಂದ ಭರಿಸಿ, ಕಾಮಗಾರಿಯನ್ನು ಪೂರ್ಣಗೊಳಿಸುವುದು. ಸರ್ಕಾರದ ಅನುದಾನವನ್ನು ಉದ್ದೇಶಿತ ಕಾಮಗಾರಿಗಳಿಗೆ ಬಳಸಿರುವ ಬಗ್ಗೆ ಸರಿಯಾದ ಲೆಕ್ಕಪತ್ರಗಳನ್ನು ನಿರ್ವಹಿಸಿ, ಹಣ ಅಪವ್ಯಯವಾಗದಂತೆ ಸಂಬಂಧಪಟ್ಟ ಸಂಸ್ಥೆಗಳು ನಿಗಾ ವಹಿಸುವುದು.

6. ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಎರಡನೇ ಕಂತು ಬಿಡುಗಡೆ ಮಾಡುವಾಗ ಮೊದಲನೇ ಕಂತಿನ ಅನುದಾನ ಉಪಯೋಗಿಸಿದ ಬಗ್ಗೆ ಪ್ರಮಾಣ ಪತ್ರ (Utilisation Certificate) ಸಲ್ಲಿಸುವುದು ಮತ್ತು ಎರಡನೇ ಕಂತಿನ ಅನುದಾನವನ್ನು ಉಪಯೋಗಿಸಿದ ನಂತರ, ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದು.

**III. ಮಠಗಳಿಗೆ ಸಂಬಂಧಿಸಿದಂತೆ**

ಮುಂಗಡ ಪತ್ರದ ಲೆಕ್ಕ ಶೀರ್ಷಿಕೆ "2250–00–1–03 (101)– ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು – ಸಹಾಯಾನುದಾನ" ರಡಿಯಲ್ಲಿ ಒದಗಿಸಿದ ಅನುದಾನವನ್ನು ಮಠಗಳ ದುರಸ್ಥಿ / ಜೀರ್ಣೋದ್ಧಾರ ಇತ್ಯಾದಿಗಳಿಗೆ ಮಂಜೂರು ಮಾಡಲಾಗುವುದು.

1. ಅಸ್ತಿತ್ವದಲ್ಲಿರುವ ಮಠಗಳನ್ನು ಮಾತ್ರ ಅನುದಾನಕ್ಕಾಗಿ ಪರಿಗಣಿಸಲಾಗುವುದು.

2. ಸರ್ಕಾರವು ಮಠಗಳ ದುರಸ್ಥಿ / ಜೀರ್ಣೋದ್ಧಾರ ಮುಂತಾದವುಗಳಿಗೆ ಸರ್ಕಾರದಲ್ಲಿ ದೊರೆಯುವ ಅನುದಾನದ ಲಭ್ಯತೆಗಳಿಗೊಳಪಟ್ಟು ಗರಿಷ್ಠ ₹ 50.00 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು. ಮಠಗಳ ಈ ಕೆಳಕಂಡ ದುರಸ್ಥಿ / ಜೀರ್ಣೋದ್ಧಾರ / ನವನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು.

    1. ಮಠದ ಕಟ್ಟಡ ದುರಸ್ಥಿ
    2. ಮಠದ ಅಧೀನದಲ್ಲಿರುವ ದೇವಸ್ಥಾನಗಳ ದುರಸ್ಥಿ/ ಜೀಣೋದ್ಧಾರ
    3. ಮಠಕ್ಕೆ ಬರುವ ಭಕ್ತಾದಿಗಳಿಗೆ ನಾಗರೀಕ ಸೇವಾ ಸೌಲಭ್ಯ ಒದಗಿಸುವ ಕಾಮಗಾರಿ

3. ಅನುದಾನ ಬಯಸುವ ಮಠಗಳು ಕೋರಿಕೆ ಪತ್ರವನ್ನು ಸರ್ಕಾರ/ ಆಯುಕ್ತರು/ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬಹುದು. ಇಂತಹ ಮಠಗಳಿಗೆ ಸರ್ಕಾರವು ಅನುದಾನ ಮಂಜೂರು ಮಾಡಿದಲ್ಲಿ ಅನುದಾನ ಬಿಡುಗಡೆಯಾದ ಮಠಗಳು ಉದ್ದೇಶಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಪರಿಶೀಲನೆಗೆ ಒಳಪಡಿಸಿದ ನಂತರ, ಮಂಜೂರಾದ ಅನುದಾನ ₹ 5.00 ಲಕ್ಷಕ್ಕಿಂತ ಕಡಿಮೆಯಾಗಿದ್ದರೆ, ಪೂರ್ಣ ಹಣವನ್ನು ಕ್ರಾಸ್ಡ್ ಚೆಕ್ ಮುಖಾಂತರ ಏಕ ಕಂತಿನಲ್ಲಿ

ಮಠಕ್ಕೆ ಬಿಡುಗಡೆ ಮಾಡುವುದು. ನಂತರ ಸಂಬಂಧಪಟ್ಟ ಮಠದ ವತಿಯಿಂದ ಬಳಕೆ ಪ್ರಮಾಣ ಪತ್ರ ಪಡೆಯುವುದು.

4. ಮಂಜೂರಾದ ಅನುದಾನವು ₹ 5.00 ಲಕ್ಷಕ್ಕೂ ಮೇಲ್ಪಟ್ಟಿದ್ದರೆ, ಅನುದಾನವನ್ನು ಎರಡು ಸಮಾನ ಕಂತುಗಳಲ್ಲಿ ಮಠದ ಹೆಸರಿನಲ್ಲಿ ಬಿಡುಗಡೆ ಮಾಡುವುದು. ಮೊದಲನೇ ಕಂತನ್ನು ಪಡೆದ ಮಠವು ಉದ್ದೇಶಿತ ಕಾಮಗಾರಿಯನ್ನು ಕೈಗೆತ್ತಿಕೊಂಡು, ಈ ಅನುದಾನವನ್ನು ಖರ್ಚು ಮಾಡಿದ ನಂತರ, ಸದರಿ ಕಾಮಗಾರಿಯ ಪ್ರಗತಿ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ (ಲೋಕೋಪಯೋಗಿ ಇಲಾಖೆಯ ಅಥವಾ ಜಿಲ್ಲಾ ಪಂಚಾಯತ್ ಅಭಿಯಂತರರಿಂದ) ಪರಿವೀಕ್ಷಣೆ ಮಾಡಿಸಿ, ಅವರ ಅನುಮೋದನೆಯೊಂದಿಗೆ ಮೊದಲನೆ ಕಂತಿನ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಿತ ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ, ಎರಡನೇ ಕಂತನ್ನು ಬಿಡುಗಡೆ ಮಾಡುವುದು.

5. ಸರ್ಕಾರದಿಂದ ಮಂಜೂರಾದ ಅನುದಾನದ ಜೊತೆಗೆ ಮಠಗಳು ಅಂದಾಜು ಪಟ್ಟಿಯಂತೆ ಉಳಿದ ವೆಚ್ಚವನ್ನು ಮಠದ ನಿಧಿಯಿಂದ ಭರಿಸಿ, ಖರ್ಚು ಮಾಡಿ, ಕಾಮಗಾರಿಯನ್ನು ಪೂರ್ಣಗೊಳಿಸುವುದು. ಸರ್ಕಾರದ ಅನುದಾನ ಉದ್ದೇಶಿತ ಕಾಮಗಾರಿಗಳಿಗೆ ಬಳಸಿರುವ ಬಗ್ಗೆ ಸರಿಯಾದ ಲೆಕ್ಕಪತ್ರಗಳನ್ನು ನಿರ್ವಹಿಸಿ, ಹಣ ಅಪವ್ಯಯವಾಗದಂತೆ ಸಂಬಂಧಪಟ್ಟ ಮಠವು ನಿಗಾ ವಹಿಸುವುದು.

6. ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಎರಡನೇ ಕಂತು ಬಿಡುಗಡೆ ಮಾಡುವಾಗ ಮೊದಲನೇ ಕಂತಿನ ಅನುದಾನ ಉಪಯೋಗಿಸಿದ ಬಗ್ಗೆ ಪ್ರಮಾಣ ಪತ್ರ (Utilisation Certificate) ಸಲ್ಲಿಸುವುದು ಮತ್ತು ಎರಡನೇ ಕಂತಿನ ಅನುದಾನವನ್ನು ಉಪಯೋಗಿಸಿದ ನಂತರ, ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದು.

**(ಕೆ.ಎಸ್. ಪ್ರಭಾಕರ)**
ಸರ್ಕಾರದ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
4. ಎಲ್ಲಾ ಪ್ರಾದೇಶಿಕ ಆಯುಕ್ತರು,
5. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು,
7. ಮಾನ್ಯ ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿಗಳು
8. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.

# ಅನುಬಂಧ–02

## 2012–13ನೇ ಸಾಲಿನ ರಾಜ್ಯದ ಧಾರ್ಮಿಕ ಸಂಸ್ಥೆಗಳ ದುರಸ್ಥಿ ಜೀರ್ಣೋದ್ಧಾರ/ನವನಿರ್ಮಾಣಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿದ ಜಿಲ್ಲಾವಾರು ಅನುದಾನದ ವಿವರ

| ಕ್ರ.ಸಂ. | ಜಿಲ್ಲೆ | ಸಂಸ್ಥೆಗಳ ಸಂಖ್ಯೆ | ಮೊತ್ತ (₹ ಲಕ್ಷಗಳಲ್ಲಿ) |
|---|---|---|---|
| 1 | ಬೆಂಗಳೂರು ನಗರ | 178 | 758.00 |
| 2 | ಬೆಂಗಳೂರು ಗ್ರಾ | 90 | 496.00 |
| 3 | ಬೆಳಗಾವಿ | 224 | 903.50 |
| 4 | ಬಳ್ಳಾರಿ | 40 | 349.00 |
| 5 | ಬೀದರ್ | 13 | 207.00 |
| 6 | ಬಿಜಾಪುರ | 174 | 936.50 |
| 7 | ಬಾಗಲಕೋಟೆ | 67 | 550.00 |
| 8 | ಚಿತ್ರದುರ್ಗ | 1001 | 2232.33 |
| 9 | ಚಿಕ್ಕಮಗಳೂರು | 150 | 850.00 |
| 10 | ಚಿಕ್ಕಬಳ್ಳಾಪುರ | 116 | 522.60 |
| 11 | ಚಾಮರಾಜನಗರ | 41 | 306.00 |
| 12 | ದಕಿಣ ಕನ್ನಡ | 273 | 1436.00 |
| 13 | ದಾವಣಗೆರೆ | 138 | 552.00 |
| 14 | ಧಾರವಾಡ | 62 | 588.50 |
| 15 | ಗುಲ್ಬರ್ಗಾ | 110 | 452.00 |
| 16 | ಗದಗ | 73 | 333.00 |
| 17 | ಹಾಸನ | 212 | 872.00 |
| 18 | ಹಾವೇರಿ | 116 | 491.50 |
| 19 | ಕೋಲಾರ | 168 | 695.50 |
| 20 | ಕೊಪ್ಪಳ | 231 | 610.17 |
| 21 | ಕೊಡಗು | 166 | 525.00 |
| 22 | ಮೈಸೂರು | 139 | 739.00 |
| 23 | ಮಂಡ್ಯ | 180 | 848.50 |

| | | | |
|---|---|---|---|
| 24 | ರಾಯಚೂರು | 41 | 239.00 |
| 25 | ರಾಮನಗರ | 141 | 1078.40 |
| 26 | ಶಿವಮೊಗ್ಗ | 272 | 1214.00 |
| 27 | ತುಮಕೂರು | 352 | 1594.33 |
| 28 | ಉಡುಪಿ | 810 | 3659.50 |
| 29 | ಉತ್ತರ ಕನ್ನಡ | 221 | 581.50 |
| 30 | ಯಾದಗಿರಿ | 29 | 94.00 |
| 31 | ಹೊರರಾಜ್ಯ | 7 | 307.60 |
| | **ಒಟ್ಟು** | **5835** | **25022.43** |

## ಮೂಲಭೂತ ಸೌಕರ್ಯದ ಕೊರತೆಯಿಂದಾಗಿ ಸಣ್ಣ ಕೈಗಾರಿಕಾ ಉದ್ಯಮಿಗಳಿಗೆ ತೊಂದರೆ

**911(955); ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ಬೆಳಗಾವಿಯಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಸಣ್ಣ ಕೈಗಾರಿಕಾ ಉದ್ದಿಮೆಗಳು ಕಾರ್ಯನಿರತವಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಈ ಉದ್ದಿಮೆಗಳು ಈವರೆಗೂ ಅವಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳಾದ ಉತ್ತಮ ರಸ್ತೆ, ನೀರು, ನಿಯಮಿತವಾದ ವಿದ್ಯುತ್ ಸರಬರಾಜು ಸುಮಾರು ವರ್ಷಗಳಿಂದ ವಂಚಿತವಾಗಿದ್ದು, ಅವುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;

**ಇ)** ಅತ್ಯುತ್ತಮ ಗುಣಮಟ್ಟದ ಸಾಮಾನುಗಳನ್ನು ತಯಾರಿಸಿದರೂ ಸಹ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಅವುಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಇರುವುದರಿಂದ ಉದ್ಯಮದಾರರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಈ)** ಹಾಗಿದ್ದಲ್ಲಿ, ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು.

ಉ) ಇಂದಿನ ಜಾಗತಿಕ ಮಟ್ಟದಲ್ಲಿ ಹೊಸ–ಹೊಸ ತಾಂತ್ರಿಕ ಮಟ್ಟದ ಉದ್ಯಮಗಳನ್ನು ಪ್ರಾರಂಬಿಸಲು ಯಾವ ಯಾವ ಸಹಾಯವನ್ನು ಉದ್ದಿಮೆದಾರರಿಗೆ ಒದಗಿಸಲಾಗುವುದು;

ಊ) ನೆರೆ ರಾಜ್ಯಗಳಾದ ಗುಜರಾತ್ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ನೀಡುತ್ತಿರುವ ಸೌಕರ್ಯಗಳನ್ನು ನಮ್ಮ ರಾಜ್ಯದಲ್ಲಿಯೂ ಸಹ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;

ಋ) ಬೆಳಗಾವಿಯಲ್ಲಿ ಸಣ್ಣ ಉದ್ದಿಮೆಗಳು ಮುಚ್ಚುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)**

ಅ) ಹೌದು.

ಆ) ಬೆಳಗಾವಿಯಲ್ಲಿನ ಕೈಗಾರಿಕೆಗಳ ಸರ್ವತೋಮುಖ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳಾದ ಉತ್ತಮ ರಸ್ತೆ, ನೀರು, ವಿದ್ಯುತ್ ಸರಬರಾಜು ವ್ಯವಸ್ಥೆ ಮುಂತಾದವುಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ.

ಮುಂದುವರೆದಂತೆ, ಬೆಳಗಾವಿ ತಾಲೂಕಿನ ಮಚ್ಚೆ ಕೈಗಾರಿಕಾ ವಸಾಹತುವಿನಲ್ಲಿ ಇತ್ತೀಚೆಗೆ ರಸ್ತೆ ಅಭಿವೃದ್ಧಿ ಸಲುವಾಗಿ ಭಾರತ ಸರ್ಕಾರದ "ಅಸೈಡ್" ಯೋಜನೆಯಡಿ ₹ 6.35 ಕೋಟಿ ಮೊತ್ತವನ್ನು ವೆಚ್ಚಮಾಡಿ 5.75 ಕಿ.ಮೀ.ಗಳ ರಸ್ತೆ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಇ) ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿನ್ನಡೆ/ಹಿಂಜರಿತ ಉದ್ಭವಿಸಿದ ಕಾರಣ ಸಣ್ಣ ಕೈಗಾರಿಕೆಗಳು ಸದ್ಯದ ಪರಿಸ್ಥಿತಿಯಲ್ಲಿ ಮಾರುಕಟ್ಟೆ ಸಮಸ್ಯೆಯನ್ನು ಭಾಗಶಃ ಎದುರಿಸುತ್ತಿವೆ.

ಈ) ಕೈಗಾರಿಕಾ ನೀತಿ 2009–14ರನ್ವಯ ರಾಜ್ಯ ಸರ್ಕಾರದ ಇಲಾಖೆಗಳು ಸಣ್ಣ ಕೈಗಾರಿಕೆಗಳಿಂದ ಖರೀದಿಸುವ ಉತ್ಪನ್ನಗಳಿಗೆ ಶೇ.15 ರಷ್ಟು ಬೆಲೆ

ಆದ್ಯತೆಯ ಸೌಲಭ್ಯವನ್ನು ಒದಗಿಸಲಾಗಿದೆ. ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶ, ಮಾರಾಟ ಮೇಳ ಹಾಗೂ ಜಿಲ್ಲಾ ಸರಬರಾಜು ಮತ್ತು ಮಾರುಕಟ್ಟೆ ಸಂಘಗಳ (ಡಿ.ಎಸ್.ಎಂ.ಎಸ್) ಮೂಲಕ ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಉ) ರಾಜ್ಯದಲ್ಲಿ ಇಂದಿನ ಜಾಗತಿಕ ಮಟ್ಟದಲ್ಲಿ ಹೊಸ–ಹೊಸ ತಾಂತ್ರಿಕ ಮಟ್ಟದ ಉದ್ಯಮಗಳನ್ನು ಪ್ರಾರಂಭಿಸಲು ಉತ್ತೇಜಿಸಲು ಹೊಸ ಕೈಗಾರಿಕಾ ನೀತಿ 2009–14ನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಕೆಳಕಂಡ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಿದೆ.

1) ಬಂಡವಾಳ ಹೂಡಿಕೆ ಉತ್ತೇಜನಾ ಸಹಾಯಧನ.

2) ಭೂ ಪರಿವರ್ತನ ಶುಲ್ಕ ಮರುಪಾವತಿ.

3) ತ್ಯಾಜ್ಯ ಸಂಸ್ಕರಣಾ ಯಂತ್ರ ಸ್ಥಾಪನೆಗೆ ಸಹಾಯಧನ.

4) ತಂತ್ರಜ್ಞಾನ ಮೆಲ್ದರ್ಜೆಗೇರಿಸಲು, ಗುಣಮಟ್ಟ ಪ್ರಮಾಣ ಪತ್ರ ಹಾಗೂ ಪೇಟೆಂಟ್ ನೊಂದಾಯಿಸಲು ಉತ್ತೇಜನ.

5) ಮಳೆ ಕೊಯ್ಲು ಮತ್ತು ಜಲ ಸಂರಕ್ಷಣೆ ಹಾಗೂ ಶಕ್ತಿ ಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳಲು ಉತ್ತೇಜನ.

6) ಯೋಜನಾ ವರದಿ ತಯಾರಿಕೆಯ ವೆಚ್ಚದ ಹಿಂಪಾವತಿ ಇತ್ಯಾದಿ.

ಮೇಲ್ಕಂಡ ಸಹಾಯಧನಗಳ ಜೊತೆಗೆ ಕೆಳಕಂಡ ವಿವಿಧ ತೆರಿಗೆ / ಶುಲ್ಕ ವಿನಾಯಿತಿ / ರಿಯಾಯಿತಿಗಳನ್ನು ನೀಡುವ ಅವಕಾಶವನ್ನು ಸಹ ಕಲ್ಪಿಸಿದೆ.

7) ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ಶುಲ್ಕ ರಿಯಾಯಿತಿ.

8) ಪ್ರವೇಶ ತೆರಿಗೆ ವಿನಾಯಿತಿ.

9) ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.

10) ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.

11) ವಿದ್ಯುತ್ ತೆರಿಗೆಯಿಂದ ವಿನಾಯಿತಿ.

**ಊ)** ಪ್ರಸ್ತುತ ಕೈಗಾರಿಕಾ ನೀತಿ 2009–14 ರನ್ವಯ ರಿಯಾಯಿತಿ ಮತ್ತು ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ನೆರೆಯ ರಾಜ್ಯಗಳಲ್ಲಿ ಒದಗಿಸುತ್ತಿರುವ ಸೌಕರ್ಯಗಳನ್ನು ನಮ್ಮ ರಾಜ್ಯದಲ್ಲಿಯೂ ಕಲ್ಪಿಸಲು ನೂತನ ಕೈಗಾರಿಕಾ ನೀತಿಯನ್ನು ರೂಪಿಸುವಾಗ ಕ್ರಮ ಕೈಗೊಳ್ಳಲಾಗುವುದು.

**ಋ)** ಇಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ.

**ಶಿವಯೋಗಿ ಮಂದಿರದಲ್ಲಿ ಗ್ರಾಮೀಣ ಕ್ರೀಡಾಂಗಣ**

**956; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ಹಿಂದಿನ ಸರ್ಕಾರ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ ಗ್ರಾಮೀಣ ಕ್ರೀಡಾಂಗಣ ನಿರ್ಮಿಸಲು ಆದೇಶ ನೀಡಿದ್ದ ಸಂಗತಿ ಹಾಗೂ ಇಲ್ಲಿ ಪ್ರತಿ ವರ್ಷ ಗ್ರಾಮೀಣ ಕ್ರೀಡಾಕೂಟಗಳು ನಡೆಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಗ್ರಾಮೀಣ ಕ್ರೀಡಾಂಗಣ ಕಟ್ಟಲು ಇಲ್ಲಿನ ಶಾಲೆಯ ಹತ್ತಿರ ಜಾಗ ಲಭ್ಯವಿದ್ದು, ಅಲ್ಲಿ ಕ್ರೀಡಾಂಗಣ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ;

**ಇ)** ಇಲ್ಲಿನ ಶಾಲೆಯ ಸುತ್ತಲೂ ಹಾಗೂ ಕ್ರೀಡಾಂಗಣದ ಸುತ್ತಲೂ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ₹ 10 ಲಕ್ಷಕ್ಕಿಂತಲೂ ಹೆಚ್ಚಿನ ಹಣ ಖರ್ಚು ಮಾಡಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇಲ್ಲಿ ಗ್ರಾಮೀಣ ಕ್ರೀಡಾಪಟುಗಳಿಗೆ ತಂಗಲು ಅನುಕೂಲ, ಕುಡಿಯುವ ನೀರಿನ ವ್ಯವಸ್ಥೆ, ಸ್ಥಳದ ವ್ಯವಸ್ಥೆ ಲಭ್ಯವಿರುವುದರಿಂದ ಗ್ರಾಮೀಣ ಕ್ರೀಡಾಂಗಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ?

**ಶ್ರೀ ಕೆ. ಅಭಯ ಚಂದ್ರ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು)**

**ಅ)** ಬಂದಿದೆ

**ಆ)** ಪತ್ರ ಸಂಖ್ಯೆ: ಸನಿ/ಯುಸೇಕ್ರೀ/ಬಾನಿ/2012-13, ದಿನಾಂಕ: 23-01-2013ರಲ್ಲಿ ತಹಶೀಲ್ದಾರ್, ಬಾದಾಮಿ ಇವರಿಗೆ ಪತ್ರ ಬರೆದು ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಯಾವುದಾದರೂ ಶಾಲಾ/ ಕಾಲೇಜು ಅಥವಾ ಜನ ವಸತಿ ಹತ್ತಿರ ಇರುವ ಕನಿಷ್ಠ 6 ರಿಂದ 8 ಎಕರೆ ಜಮೀನು ಒದಗಿಸುವಂತೆ ಕೋರಲಾಗಿದೆ. ಜಮೀನು ದೊರೆತ ನಂತರ, ಇಲಾಖೆಗೆ ಜಮೀನು ವಶಪಡಿಸಿಕೊಂಡು ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಮುಂದಿನ ಕ್ರಮಕೈಗೊಳ್ಳಲಾಗುವುದು.

**ಇ)** ಬಂದಿಲ್ಲ. ಆದರೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಶಿವಯೋಗ ಮಂದಿರದಲ್ಲಿ ಗ್ರಾಮೀಣ ಕ್ರೀಡಾಂಗಣಕ್ಕೆ ಯಾವುದೇ ಅನುದಾನವನ್ನು ಮಂಜೂರಾತಿ ನೀಡಿರುವುದಿಲ್ಲ.

**ಈ)** ಪತ್ರ ಸಂಖ್ಯೆ: ಸನಿ/ಯುಸೇಕ್ರೀ/ಬಾನಿ/2012-13, ದಿನಾಂಕ: 23-01-2013ರಲ್ಲಿ ತಹಶೀಲ್ದಾರ್, ಬಾದಾಮಿ ಇವರಿಗೆ ಪತ್ರ ಬರೆದು ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಯಾವುದಾದರೂ ಶಾಲಾ/ ಕಾಲೇಜು ಅಥವಾ ಜನ ವಸತಿ ಹತ್ತಿರ ಇರುವ ಕನಿಷ್ಠ 6 ರಿಂದ 8 ಎಕರೆ ಜಮೀನು ಒದಗಿಸುವಂತೆ ಕೋರಲಾಗಿದೆ. ಜಮೀನು ದೊರೆತ ನಂತರ, ಇಲಾಖೆಗೆ ಜಮೀನು ವಶಪಡಿಸಿಕೊಂಡು ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಮತ್ತು ಉಳಿದ ಸೌಲಭ್ಯಗಳನ್ನು ಒದಗಿಸಲು ಯೋಜನೆಗೆ ಅನುಕ್ರಮವಾಗಿ ಸೂಕ್ತಕ್ರಮ ಕೈಗೊಳ್ಳಲಾಗುವುದು.

## ಅಮೃತೂರು ಹೋಬಳಿಯ ಮಲ್ಲಾಪುರ ಗ್ರಾಮದ ಕೆರೆ ಒತ್ತುವರಿ ತೆರವು

**994; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶಿತರು)**

ಅ) ಕುಣಿಗಲ್ ತಾಲ್ಲೂಕು, ಅಮೃತೂರು ಹೋಬಳಿಯ ಮಲ್ಲಾಪುರ ಗ್ರಾಮದ ಸರ್ವೆ ನಂಬರ್ 18ರ ಜಮೀನಿನ ಒಟ್ಟು ವಿಸ್ತೀರ್ಣ ಮತ್ತು ಚಕ್ಕುಬಂದಿ ಏನು; ಇದರಲ್ಲಿರುವ ಸರ್ಕಾರಿ ಜಮೀನಿನ ವಿಸ್ತೀರ್ಣ ಮತ್ತು ಚಕ್ಕುಬಂದಿ ಏನು; ಈ ಜಮೀನಿನಲ್ಲಿ ಕೆರೆ–ಕಟ್ಟೆಗಳು, ಗೋಗಟ್ಟೆಗಳು ಒಳಗೊಂಡಿವೆಯೇ; ಒಳಗೊಂಡಿದ್ದರೆ, ಇವುಗಳ ನಿರ್ಮಾಣಕ್ಕೆ ಎಷ್ಟು ಸರ್ಕಾರಿ ಜಮೀನನ್ನು ಬಳಸಲಾಗಿದೆ: (ಚಕ್ಕುಬಂದಿವಾರು ಮಾಹಿತಿ ನೀಡುವುದು)

ಆ) ಸರ್ಕಾರಿ ಜಮೀನಲ್ಲದೇ ಕೆರೆ–ಕಟ್ಟೆ ಮತ್ತು ಗೋಗಟ್ಟೆಗಳ ನಿರ್ಮಾಣಕ್ಕೆ ಇತರ ಯಾವ್ಯಾವ ರೈತರಿಂದ ಎಷ್ಟೆಷ್ಟು ಜಮೀನುಗಳನ್ನು ವಶಪಡಿಸಿಕೊಳ್ಳಲಾಗಿದೆ; ಅವರಿಗೆ ಪರಿಹಾರ ನೀಡಲಾಗಿದೆಯೇ; (ವ್ಯಕ್ತಿಗತ ವಿವರ ನೀಡುವುದು)

ಇ) ತುಮಕೂರು ಜಿಲ್ಲೆಯ ಅಸಿಸ್ಟೆಂಟ್ ಕಮೀಷನರ್ ರವರು ಕೇಸ್ ನಂ.ಆರ್ಎ–7/2004–2005ರಂತೆ ಸರ್ವೆ ನಂ.18ನ್ನು ಪುನರ್ ಪರಿಶೀಲನೆ ಮಾಡುವ ಬಗ್ಗೆ ತಿಳಿಸಿರುವುದು ನಿಜವೇ; ಹಾಗಿದ್ದಲ್ಲಿ, ಪುನರ್ ಪರಿಶೀಲನೆ ಮಾಡಲಾಗಿದೆಯೇ; (ಸಂಪೂರ್ಣ ಮಾಹಿತಿಗಳನ್ನು ಒದಗಿಸುವುದು)

ಈ) ಸರ್ವೆ ನಂಬರ್ 18ರಲ್ಲಿನ ಸರ್ಕಾರಿ ಜಮೀನುಗಳು ಒತ್ತುವರಿಯಾಗಿರುವುದು ನಿಜವೇ; ಹಾಗಿದ್ದಲ್ಲಿ, ಈ ಒತ್ತುವರಿಯನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು?

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

ಅ) ಕುಣಿಗಲ್ ತಾಲ್ಲೂಕು, ಅಮೃತೂರು ಹೋಬಳಿ, ಮಲ್ಲಾಪುರ ಗ್ರಾಮದ ಸ.ನಂ.18ರಲ್ಲಿ ಆಕಾರ್ ಬಂದ್‌ನಂತೆ ಒಟ್ಟು 18 ಎಕರೆ 12 ಗುಂಟೆ

ಇದ್ದು ಈ ಪೈಕಿ **9** ಎಕರೆ **07** ಗುಂಟೆ ಇನಾಂ ರದ್ದಿಯಾತಿ ಪ್ರಕಾರ ಮರು ಮಂಜೂರಾಗಿ ದುರಸ್ತಾಗಿ ಸ.ನಂ.**99** ರಿಂದ **103**ರ ವರೆಗೆ ಖಾತೆ ಪಹಣಿ ದಾಖಲಾಗಿ ಹಿಡುವಳಿ ಜಮೀನಿನಾಗಿರುತ್ತದೆ. ಈ ರೀತಿ ಮಂಜೂರಾಗಿ ದುರಸ್ತಾಗಿ ಸ.ನಂ.**18**ರಲ್ಲಿ **9** ಎಕರೆ **05** ಗುಂಟೆ ಉಳಿದಿದ್ದು ಈ ಪೈಕಿ **8** ಎಕರೆ **08** ಗುಂಟೆ ವಿಸ್ತೀರ್ಣವು ಕೆರೆಗೆ ಭೂ ಸ್ವಾಧೀನವಾಗಿ **0–37** ಗುಂಟೆ ಸರ್ಕಾರಿ ಖರಾಬು ಜಮೀನಾಗಿ ಉಳಿದಿರುತ್ತದೆ.

**ಆ)** ಸದರಿ ಕೆರೆಗೆ ಮಲ್ಲಾಪುರ ಸ.ನಂ. ಬಗ್ಗೆ ಈ ಕೆಳಕಂಡಂತೆ ರೈತರ ಜಮೀನು ಕೆರೆಗೆ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.

| ಕ್ರ.ಸಂ. | ಗ್ರಾಮ | ಸ.ನಂ. | ವಿಸ್ತೀರ್ಣ | ಭೂ ಸ್ವಾಧೀನಪಡಿಸಿಕೊಳ್ಳಲಾದ ರೈತರ ಹೆಸರು |
|---|---|---|---|---|
| 1 | ಮಲ್ಲಾಪುರ | 14 | 0.06 | ಟಿ. ಗೋವಿಂದರಾಜು ಬಿನ್ ತಿಮ್ಮಪ್ಪ |
| 2 | ಮಲ್ಲಾಪುರ | 15/2 | 0.16 | ಜಯಮ್ಮ ಕೋಂ ವೆಂಕಟಗಿರಿಯಪ್ಪ |
| 3 | ಮಲ್ಲಾಪುರ | 16/1 | 1.29 | ಎಲ್ಲಯ್ಯ ಬಿನ್ ಸಿಂಗ್ರಿಮೇಸ್ತ್ರಿ |
| 4 | ಮಲ್ಲಾಪುರ | 89 | 2.09.08 | ಎ.ಎನ್. ಗೋಪಾಲಕೃಷ್ಣರಾವ್ ಬಿನ್ ಲೇಟ್ ನಾಗರಾಜರಾವ್ |
| 5 | ಸೊಂಡಕೊಪ್ಪ | 37/1 | 4.28 | ಸರೋಜಮ್ಮ ಕೋಂ ಎ.ಕೆ. ಶ್ರೀನಿವಾಸ್ |

ಇದು ಸರ್ಕಾರಿ ಜಮೀನಾಗಿದ್ದು, ಈ ಜಮೀನಿಗೆ ಯಾವುದೇ ಪರಿಹಾರ ನೀಡಿರುವುದಿಲ್ಲ.

**ಇ)** ತುಮಕೂರು ಜಿಲ್ಲೆಯ ತುಮಕೂರು ಉಪವಿಭಾಗದ ಸಹಾಯಕ ಆಯುಕ್ತರು ನಂ:ಆರ್‌ಎ/7/**2004–05**ರಂತೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿ, ದಿನಾಂಕ: **25–05–2005**ರ ಆದೇಶದಂತೆ **ದಿ:03–02–2004**ರ ಭೂ ಸಕ್ರಮೀಕರಣ ಸಮಿತಿಯ ತೀರ್ಮಾನವನ್ನು ವಜಾಕರಿಸಿ, ಪುನರ್ ಪರಿಶೀಲನೆ ನಡೆಸಿ, ಅಗತ್ಯ ಕ್ರಮ ಜರಿಗಿಸಲು ಆದೇಶಿಸಲಾಗಿರುತ್ತದೆ. ಸದರಿಯವರ ಆದೇಶದನ್ವಯ ಪುನರ್ ಪರಿಶೀಲನೆ ನಡೆಸಿ ಭೂ ಸಕ್ರಮೀಕರಣ ಸಮಿತಿಯಲ್ಲಿ ಕಡತ

ಮಂಡಿಸಲಾಗಿದ್ದು, ದಿನಾಂಕ:**09–11–2012** ರಂದು ನಡೆದ ಸಭೆಯಲ್ಲಿ ಇನಾಂ ರದ್ದಿಯಾತಿ ಕಾನೂನಿನ್ವಯ ಮಂಜೂರಾಗಿ, ಹಿಡುವಳಿ ಜಮೀನಾಗಿರುವುದರಿಂದ, ಮತ್ತು ಹೊಸಕೆರೆ ನಿರ್ಮಾಣಕ್ಕೆ ಭೂ ಸ್ವಾಧೀನವಾಗಿರುವುದರಿಂದ ಮಂಜೂರಾತಿಗೆ ಸರ್ಕಾರಿ ಜಮೀನು ಲಭ್ಯವಿಲ್ಲದೆ ಇರುವ ಕಾರಣ ಮಂಜೂರಾತಿಗೆ ಅವಕಾಶವಿಲ್ಲವೆಂದು ತೀರ್ಮಾನಿಸಿ, ಅರ್ಜಿಗಳನ್ನು ವಜಾಕರಿಸಲಾಗಿರುತ್ತದೆ.

ಈ) ಸ.ನಂ.**18**ರಲ್ಲಿ ಇರುವ ಸರ್ಕಾರಿ ಜಮೀನು ಪೂರಾ ಹೊಸಕೆರೆಗೆ **8** ಎಕರೆ **08** ಗುಂಟೆ ಭೂಸ್ವಾಧೀನವಾಗಿದ್ದು, **0.37** ಗುಂಟೆ ಸರ್ಕಾರಿ ಜಮೀನಾಗಿ ಉಳಿದಿದ್ದು ಸದರಿ ಜಮೀನು ಸಹಾ ಕೆರೆಯ ಒಳಗೆ ಬರುವುದರಿಂದ ಕೆರೆಯ ನೀರು ಸಂಗ್ರಹಣೆ ಪ್ರದೇಶವಾಗಿದ್ದು ಒತ್ತುವರಿಯಾಗಿರುವುದಿಲ್ಲ.

**ನೆಮ್ಮದಿ ಕೇಂದ್ರಗಳ ಹೆಚ್ಚಳ ಮತ್ತು ಅವುಗಳಿಗೆ ಪೂರ್ಣ ಅಧಿಕಾರ**

**1027; ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು)**

ಅ) ಕಂದಾಯ ಇಲಾಖೆಯ ತಾಲ್ಲೂಕು ಕಛೇರಿಗಳಲ್ಲಿರುವ ನೆಮ್ಮದಿ ಕೇಂದ್ರಗಳು ಸಮರ್ಪಕವಾಗಿ ಸೇವೆ ಸಲ್ಲಿಸದೇ ಗ್ರಾಮೀಣ ಜನಸಾಮಾನ್ಯರಿಗೆ, ರೈತಾಪಿ ಜನರಿಗೆ ತೀವ್ರ ಅನಾನುಕೂಲ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈಗ ಇರುವ ನೆಮ್ಮದಿ ಕೇಂದ್ರಗಳ ಸಂಖ್ಯೆ ಎಷ್ಟು; ಇದರ ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ.

ಆ) ಪ್ರತಿಯೊಂದು ತಾಲ್ಲೂಕು ಕಛೇರಿಯಲ್ಲಿ ಕನಿಷ್ಠ ಪಕ್ಷ ಎರಡು, ಮೂರು ನೆಮ್ಮದಿ ಕೇಂದ್ರಗಳನ್ನು ಪ್ರಾರಂಭಿಸಿ ಅವುಗಳಿಗೆ ಪೂರ್ಣ ಅಧಿಕಾರ ನೀಡಿ ಅವುಗಳು ನೀಡುವ ದಾಖಲೆಗಳಿಗೆ ಮತ್ತೆ ಹಿರಿಯ ಅಧಿಕಾರಿಗಳ ಸಹಿ ಪಡೆಯುವುದನ್ನು ತಪ್ಪಿಸಲಾಗುವುದೇ?

ಇ) ಪ್ರತಿಯೊಂದು ಹೋಬಳಿ ಕೇಂದ್ರದಲ್ಲಿಯೂ ಕೂಡ ನಾಡಕಛೇರಿಗಳನ್ನು ಅಲ್ಲಿ ಪ್ರಾರಂಭಿಸಲಾಗುವುದೇ, ಹೀಗಿರುವ ನಾಡಕಛೇರಿಗಳಲ್ಲಿ ನೆಮ್ಮದಿ ಕೇಂದ್ರಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗುವುದೇ;

ಈ) ನೆಮ್ಮದಿ ಕೇಂದ್ರಗಳನ್ನು ಹೆಚ್ಚು ಮಾಡಿ ಅವುಗಳು ನೀಡುವ ಗಣಕೀಕೃತ ದಾಖಲೆಗಳಿಗೆ ಪೂರ್ಣ ಮಾನ್ಯತೆ ನೀಡಿ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು; ಈ ಬಗ್ಗೆ ಕ್ರಮತೆಗೆದುಕೊಳ್ಳಲಾಗುವುದೇ?

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)**

ಅ) ರಾಜ್ಯದಲ್ಲಿ ಈ ಹಿಂದೆ ಅಸ್ಥಿತ್ವದಲ್ಲಿದ್ದಂತಹ ನೆಮ್ಮದಿ ಕೇಂದ್ರಗಳು ಖಾಸಗಿ ಸಹಭಾಗಿತ್ವದಲ್ಲಿ ಇ-ಆಡಳಿತ ಇಲಾಖೆಯ ಸಹಯೋಗದೊಂದಿಗೆ ಕೆಲಸ ನಿರ್ವಹಿಸುತ್ತಿದ್ದು, ಈ ನೆಮ್ಮದಿ ಕೇಂದ್ರಗಳ ಬಗ್ಗೆ ಸಾರ್ವಜನಿಕರಿಂದ ವ್ಯಾಪಕವಾದ ದೂರುಗಳು ಬಂದ ಹಿನ್ನೆಲೆಯಲ್ಲಿ ಇ-ಆಡಳಿತ ಇಲಾಖೆಯಿಂದ ಈ ಯೋಜನೆಯನ್ನು ಕಂದಾಯ ಇಲಾಖೆಗೆ ವರ್ಗಾಯಿಸಿ, ಖಾಸಗಿ ಸಹಭಾಗಿತ್ವದಿಂದ ಪೂರ್ಣ ಮುಕ್ತಗೊಳಿಸಿ, ರಾಜ್ಯಾದ್ಯಂತ 777 ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಅಗತ್ಯವಾದಂತಹ ಮೂಲಭೂತ ಸೌಕರ್ಯ ಮತ್ತು ಸಿಬ್ಬಂದಿಗಳನ್ನು ನೇಮಕ ಮಾಡಿ ದಿನಾಂಕ: 25.12.2012 ರಂದು ಸಾರ್ವಜನಿಕರ ಸೇವೆಗೆ ಒದಗಿಸಲಾಗಿದೆ. ಹಾಗೂ ಜನ ಸಾಂಧ್ರತೆ, ಸರಾಸರಿ ವಹಿವಾಟು ಮತ್ತು ಭೂಗೋಳಿಕ ವಿಸ್ತೀರ್ಣ ಅಂಶಗಳ ಆಧಾರದ ಮೇಲೆ ರಾಜ್ಯದಲ್ಲಿ 110 ಹೆಚ್ಚುವರಿ ಫ್ರೆಂಟ್ ಆಫೀಸ್‌ಗಳನ್ನು ಮಂಜೂರು ಮಾಡಲಾಗಿದೆ. ಈ ಕೇಂದ್ರಗಳ ಪೂರ್ಣ ಜವಾಬ್ದಾರಿ ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿರುತ್ತದೆ ಹಾಗೂ ರಾಜ್ಯಮಟ್ಟದಲ್ಲಿ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯವು ಯೋಜನೆಯ ಉಸ್ತುವಾರಿ ವಹಿಸುತ್ತಿದೆ. ಸಾರ್ವಜನಿಕರಿಗೆ ವಿವಿಧ ಬಗೆಯ 36 ಸೇವೆಗಳನ್ನು ನಿಗದಿತ ಅವಧಿಯಲ್ಲಿ ಹೋಬಳಿ ಮಟ್ಟದ ಅಟಲ್‌ಜೀ ಜನಸ್ನೇಹಿ

ಕೇಂದ್ರದ ಮುಖಾಂತರ ಯಾವುದೇ ತೊಂದರೆ ಇಲ್ಲದೇ ಒದಗಿಸಲಾಗುತ್ತಿದೆ.

ಆ) ಈಗಾಗಲೇ ರಾಜ್ಯದ ಎಲ್ಲಾ ತಾಲ್ಲೂಕಿನ ಹೋಬಳಿ ಮಟ್ಟದಲ್ಲಿ ಮತ್ತು ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಈ ಕೇಂದ್ರಗಳಿಂದ ಸಾರ್ವಜನಿಕರಿಗೆ ಅಗತ್ಯವಾದ 36 ವಿವಿಧ ಸೇವೆಗಳನ್ನು ನೀಡಲಾಗುತ್ತಿದೆ. ಅವಶ್ಯಕತೆ ಇರುವ ವಿವಿದೆಡೆಗಳಲ್ಲಿ ಹೆಚ್ಚುವರಿ ಪ್ರೆಂಟ್ ಆಫೀಸ್‌ಗಳನ್ನು ತೆರೆಯಲಾಗಿದೆ. ತಾಲ್ಲೂಕು ಕಛೇರಿ/ಯಾವುದೇ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಸ್ವೀಕೃತ ಅರ್ಜಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ಅಲ್ಲಿ ಫ್ರಂಟ್ ಆಫೀಸ್ ತೆರೆಯಲು ಕ್ರಮವಹಿಸಲಾಗುತ್ತಿದೆ. ರೈತರು ಪಹಣಿ ಪತ್ರಿಕೆ ಪಡೆಯಲು ಭೂಮಿ ಕೇಂದ್ರ ಮತ್ತು ಅಟಲ್‌ಜೀ ಕೇಂದ್ರದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕೇಂದ್ರಗಳಿಂದ ಸಾರ್ವಜನಿಕರಿಗೆ ಯಾವುದೇ ವಿಳಂಬವಿಲ್ಲದೇ ದಾಖಲಾತಿಗಳನ್ನು ಒದಗಿಸಲಾಗುತ್ತಿದೆ ಹಾಗೂ ಈ 36 ಸೇವೆಗಳ ದಾಖಲಾತಿಗಳನ್ನು ಸೆಕ್ಯೂರ್ಡ್ ಸ್ಟೇಷನರಿ ಮತ್ತು ಹಾಲೋಗ್ರಾಂ ಮಾರ್ಕ್‌ನೊಂದಿಗೆ ನೀಡಲಾಗುತ್ತಿದೆ. ಜಾತಿ ಮತ್ತು ಆದಾಯ ದೃಡೀಕರಣ ಪತ್ರ ಹಾಗೂ ಕೃಷಿ ಸಂಬಂಧಿತ ಪ್ರಮಾಣ ಪತ್ರಗಳನ್ನು ಹೊರತುಪಡಿಸಿ ಉಳಿದೆಲ್ಲಾ ಪ್ರಮಾಣ ಪತ್ರಗಳನ್ನು ನೀಡುವ ಅಧಿಕಾರವನ್ನು ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಉಪತಹಶೀಲ್‌ದಾರ್‌ರವರಿಗೆ ಪ್ರತ್ಯಾಯೋಜಿಸಲಾಗಿದೆ. ಹಾಗೂ ಸದರಿ ಗಣಕೀಕೃತ ದಾಖಲಾತಿಗಳು ಡಿಜಿಟಲ್ ಸಿಗ್ನೇಚರ್ ಹೊಂದಿರುದರಿಂದ ಮತ್ತೆ ಹಿರಿಯ ಅಧಿಕಾರಿಗಳ ಸಹಿ ಪಡೆಯುವ ಅಗತ್ಯತೆ ಇರುವುದಿಲ್ಲ.

ಇ) ರಾಜ್ಯದಲ್ಲಿ ಪ್ರತಿಯೊಂದು ಹೋಬಳಿಗಳಲ್ಲಿಯೂ ನಾಡಕಛೇರಿಗಳು/ ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ 329 ನಾಡಕಛೇರಿಗಳಲ್ಲಿ ಮೇಲ್ಕಂಡಂತೆ ನಿಗದಿಪಡಿಸಿದ ಕಾರ್ಯಗಳು ನಿರ್ವಹಣೆಯಾಗುತ್ತಿವೆ. ಇದರೊಂದಿಗೆ ಹೊಸದಾಗಿ 272 ನಾಡಕಛೇರಿ ಆರಂಭಿಸಿ ಅವಶ್ಯವಾದ ಹಾರ್ಡ್‌ವೇರ್, ಪೀಠೋಪಕರಣ

ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ ಎಲ್ಲಾ ಹೋಬಳಿ ಕೇಂದ್ರಗಳಲ್ಲೂ ಅಟಲ್‌ಜೀ ಜನಸ್ನೇಹಿ ಕೇಂದ್ರ ತೆರೆಯಲಾಗಿದೆ.

**ಈ)** ರಾಜ್ಯದಲ್ಲಿ ತಾಲ್ಲೂಕು ಕೇಂದ್ರಸ್ಥಾನದಲ್ಲಿ 176 ಅಟಲ್‌ಜೀ ಜನಸ್ನೇಹಿ ಕೇಂದ್ರಗಳು ಮತ್ತು ಹೋಬಳಿ ಕೇಂದ್ರಗಳಲ್ಲಿ 601 ಹೀಗೆ ಒಟ್ಟು 777 ಅಟಲ್‌ಜೀ ಜನಸ್ನೇಹಿ ಕೇಂದ್ರಗಳು ಹೋಬಳಿಗೆ ಒಂದರಂತೆ ಸ್ಥಾಪಿಸಲಾಗಿದ್ದು, ಈ ಭಾಗದ ಯಾವುದೇ ಸಾರ್ವಜನಿಕರಿಗೆ ಅನಾನುಕೂಲವಾಗದ ರೀತಿಯಲ್ಲಿ ಸೇವೆಗಳನ್ನು ಒದಗಿಸಲಾಗುತ್ತಿದೆ. ಹಾಗೆಯೇ ಅವಶ್ಯಕ ಇದ್ದಲ್ಲಿ ಹೆಚ್ಚುವರಿ ಫ್ರೆಂಟ್ ಆಫೀಸ್‌ಗಳನ್ನು ತೆರೆಯಲಾಗುತ್ತಿದೆ. ಈಗಾಗಲೇ 110 ಫ್ರಂಟ್ ಆಫೀಸ್ ತೆರೆಯಲು ಮಂಜೂರಿ ನೀಡಲಾಗಿದೆ. ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಗಣಕೀಕೃತ ಪ್ರಮಾಣ ಪತ್ರಗಳು ಡಿಜಿಟಲ್ ಸಿಗ್ನೇಚರ್ ಕಾರ್ಡ್ ಮುಖಾಂತರ ಸಹಿಯಾಗಿದ್ದು, ಇದು ಐ.ಟಿ. ಕಾಯ್ದೆ 2000 ರಡಿ ಪೂರ್ಣ ಮಾನ್ಯತೆ ಪಡೆದಿದ್ದು, ಅದರಂತೆ ಸರ್ಕಾರದಿಂದ ಆದೇಶ ಹೊರಡಿಸಲಾಗಿರುತ್ತದೆ. ಅಟಲ್‌ಜೀ ಜನಸ್ನೇಹಿ ಕೇಂದ್ರಗಳಿಂದ ನೀಡುವ ದಾಖಲೆಗಳು ಅಧಿಕೃತ ದಾಖಲೆಗಳಾಗಿದ್ದು, ಈ ದಾಖಲೆಗಳನ್ನು ಮಾನ್ಯ ಮಾಡಬೇಕಾಗಿ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು ಮುಂತಾದವುಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿರುತ್ತಾರೆ. ಆದ್ದುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲವಾಗದ ರೀತಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಮೂಲಕ ಸೇವೆಗಳನ್ನು ನೀಡಲಾಗುತ್ತಿದೆ.

**ಹೇಮಾವತಿ ನಾಲೆಯಿಂದ ತುಮಕೂರು ಜಿಲ್ಲೆಯ ಕೆರೆಗಳಿಗೆ ನೀರು**

**1026; ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು)**

**ಅ)** ಹೇಮಾವತಿ ನಾಲೆಯ ಮೂಲಕ ತುಮಕೂರು ಜಿಲ್ಲೆಯ ಎಷ್ಟು ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಇನ್ನೂ ಎಷ್ಟು ಕೆರೆಗಳಿಗೆ ಹೇಮಾವತಿ ನಾಲೆ ಮೂಲಕ ನೀರನ್ನು ತುಂಬಿಸುವ ಯೋಜನೆ ಇದೆ; ಈ ಯೋಜನೆಗಳು ಯಾವ ಹಂತದಲ್ಲಿವೆ;

ಇ) ಕುಣಿಗಲ್ ಕೆರೆಯಿಂದ ಹೇಮಾವತಿ ನಾಲೆಯ ನೀರನ್ನು ಬೆಂಗಳೂರು ತಿಪ್ಪಗೊಂಡನಹಳ್ಳಿ ಕೆರೆಗೆ ಹರಿಸುವ ಬಗ್ಗೆ ಸರ್ವೆ ನಡೆಸಿ ಕ್ರಮ ತೆಗೆದುಕೊಳ್ಳಲಾಗುವುದೇ?

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ) ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ 227 ಕೆರೆಗಳಿಗೆ ಹೇಮಾವತಿ ನಾಲೆಯ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ನೀರನ್ನು ಹರಿಸಿರುವ ಕೆರೆಗಳ ತಾಲ್ಲೂಕುವಾರು ವಿವರ ಕೆಳಕಂಡಂತಿವೆ:

| ಕ್ರ.ಸಂ. | ತಾಲ್ಲೂಕು | ನೀರನ್ನು ಹರಿಸಿರುವ ಕೆರೆಗಳ ಸಂಖ್ಯೆ |
|---|---|---|
| 1 | ತುಮಕೂರು ತಾಲ್ಲೂಕು | 66 |
| 2 | ತಿಪಟೂರು ತಾಲ್ಲೂಕು | 36 |
| 3 | ತುರುವೇಕೆರೆ ತಾಲ್ಲೂಕು | 61 |
| 4 | ಗುಬ್ಬಿ ತಾಲ್ಲೂಕು | 59 |
| 5 | ಕುಣಿಗಲ್ ತಾಲ್ಲೂಕು | 05 |
| | **ಒಟ್ಟು** | **227** |

ಆ) ಹೇಮಾವತಿ ನಾಲೆಯ ಮೂಲಕ ತುಮಕೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಕೆರೆಗಳಿಗೆ ಕುಡಿಯುವ ನೀರಿನ ಸಲುವಾಗಿ ನೀರನ್ನು ಹರಿಸಲು ಸರ್ಕಾರದಿಂದ ಅನುಮೋದನೆಗೊಂಡಿರುವ 8 ಸಂಖ್ಯೆ ಕುಡಿಯುವ ನೀರಿನ ಯೋಜನೆಗಳಿಂದ ನೀರನ್ನು ಒದಗಿಸಬೇಕಾದ ಒಟ್ಟು 115 ಕೆರೆಗಳ ಪೈಕಿ 60 ಕೆರೆಗಳಿಗೆ ಪ್ರಾಯೋಗಿಕವಾಗಿ ಚಾಲನೆಗೊಳಿಸಿರುವ 2 ಯೋಜನೆಗಳಿಂದ ನೀರನ್ನು ಒದಗಿಸಲಾಗಿದ್ದು, ಉಳಿಕೆ 55 ಕೆರೆಗಳಿಗೆ ನೀರನ್ನು ಹರಿಸಬೇಕಾಗಿದೆ.

8 ಯೋಜನೆಗಳ ಪೈಕಿ 2 ಸಂಖ್ಯೆ ಯೋಜನೆಗಳನ್ನು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದ್ದು (ಪ್ರಾಯೋಗಿಕವಾಗಿ 60 ಕೆರೆಗಳಿಗೆ ನೀರನ್ನು ಹರಿಸಲಾಗಿದೆ), 4 ಸಂಖ್ಯೆ ಯೋಜನೆಗಳ ಕಾಮಗಾರಿಯು ವಿವಿಧ ಹಂತದ ಪ್ರಗತಿಯಲ್ಲಿವೆ ಮತ್ತು ಉಳಿದ 2 ಸಂಖ್ಯೆ ಯೋಜನೆಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಸದರಿ ಯೋಜನೆಗಳ ಹೆಸರು ಹಾಗೂ ಅದರ ಪ್ರಸ್ತುತ ಹಂತದ ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ.

ಇ) ಕುಣಿಗಲ್ ಕೆರೆಯಿಂದ ಬೆಂಗಳೂರು ತಿಪ್ಪಗೊಂಡನಹಳ್ಳಿ ಕೆರೆಗೆ ಹೇಮಾವತಿ ನಾಲೆಯ ನೀರನ್ನು ಹರಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

(₹ ಕೋಟಿಗಳಲ್ಲಿ)

| ಕ್ರ.ಸಂ. | ಯೋಜನೆಯ ಹೆಸರು | ಅಂದಾಜು ಮೊತ್ತ | ನೀರನ್ನು ಹರಿಸಬೇಕಾಗಿರುವ ಕೆರೆಗಳ ಸಂಖ್ಯೆ | ಯೋಜನೆಯ ಪ್ರಸ್ತುತ ಹಂತ |
|---|---|---|---|---|
| 1 | ಗೂಳೂರು–ಹೆಬ್ಬೂರು ಕುಡಿಯುವ ನೀರಿನ ಯೋಜನೆಯು: ತುಮಕೂರು ತಾಲ್ಲೂಕಿನ 52 ಹಳ್ಳಿಗಳ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 142.225 ಕಿ.ಮೀ. ನಿಂದ 150 ಎಂ.ಸಿ.ಎಫ್.ಟಿ ನೀರನ್ನು 2 ಹಂತಗಳಲ್ಲಿ ಎತ್ತಿ 52 ಕೆರೆಗಳಿಗೆ ಒದಗಿಸುವ ಯೋಜನೆ. | 55.00 | 10 | ಯೋಜನೆಯ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು ಮತ್ತು ಚಾಲನೆಗೊಳಿಸಲಾಗಿದೆ. ಒಟ್ಟು 52 ಕೆರೆಗಳ ಪೈಕಿ 42 ಕೆರೆಗಳಿಗೆ ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ. ಉಳಿದ 10 ಕೆರೆಗಳಿಗೆ ನೀರನ್ನು ಹರಿಸಬೇಕಾಗಿರುತ್ತದೆ. |
| 2 | ಹೊನ್ನವಳ್ಳಿ ಮತ್ತು ಇತರೆ ಹೋಬಳಿಗಳ ಕುಡಿಯುವ ನೀರಿನ ಯೋಜನೆಯು ತಿಪಟೂರು, ಅರಸೀಕೆರೆ, ಕಡೂರು ಮತ್ತು ಹೊಸದುರ್ಗ ತಾಲ್ಲೂಕುಗಳ 86 ಹಳ್ಳಿಗಳ ಕುಡಿಯುವ ನೀರಿಗಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 9.90 ಕಿ.ಮೀ ನಿಂದ 201 ಎಂ.ಸಿ.ಎಫ್.ಟಿ ನೀರನ್ನು 23 ಕೆರೆಗಳಿಗೆ ಒದಗಿಸುವ ಯೋಜನೆ. | 87.20 | 5 | ಯೋಜನೆಯ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು ಹಾಗೂ ಚಾಲನೆಗೊಳಿಸಲಾಗಿದೆ. ಒಟ್ಟು 23 ಕೆರೆಗಳ ಪೈಕಿ 18 ಕೆರೆಗಳಿಗೆ ಪ್ರಾಯೋಗಿಕವಾಗಿ ನೀರನ್ನು ಹರಿಸಲಾಗಿದೆ. ಉಳಿದ 5 ಕೆರೆಗಳಿಗೆ ನೀರನ್ನು ಹರಿಸಬೇಕಾಗಿರುತ್ತದೆ. |
| 3 | ದೊಡ್ಡಗುಣಿ ಕೆರೆಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 65 ನೇ ಕಿ.ಮೀ ನಿಂದ 18.20 ಎಂ.ಸಿ.ಎಫ್.ಟಿ ನೀರನ್ನು ಎತ್ತಿ ದೊಡ್ಡಗುಣಿ ಕೆರೆಗೆ ಹರಿಸುವ ಮೂಲಕ 14 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ. | 3.25 | 1 | ಅಪ್ರೋಜ್ ಚಾನಲ್, ರೈಸಿಂಗ್ ಮೈನ್, ಪಂಪ್ ಹೌಸ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಪಂಪ್ ಜೋಡಣೆಗೆ ತಳಪಾಯ ಹಾಗೂ ಟ್ರಾನ್ಸ್‌ಫಾರ್ಮರ್ ಜೋಡಣೆ ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೆ, ಎಲೆಕ್ಟ್ರಿಕಲ್ ಪವರ್ ಸಪ್ಲೈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ. ಪ್ರಸಕ್ತ 2013–14ನೇ ಸಾಲಿನಲ್ಲಿ ನೀರನ್ನು ಹರಿಸಲು ಯೋಜಿಸಲಾಗಿದೆ. |
| 4 | ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 106800 ಮೀ ನಿಂದ ನೀರನ್ನು ಎತ್ತಿ ಬೆಳ್ಳಾವಿ, ಚನ್ನೇನಹಳ್ಳಿ, ದೊಡ್ಡೇರಿ, ದೊಡ್ಡವೀರನಹಳ್ಳಿ ಹಾಗೂ ಸೋರೇಕುಂಟೆ ಕೆರೆಗಳಿಗೆ ಹರಿಸಿ ಸುತ್ತಮುತ್ತಲ ಗ್ರಾಮಗಳಿಗೆ | 5.70 | 6 | ರೈಸಿಂಗ್ ಮೈನ್‌ನ 3500 ಮೀ ಉದ್ದದ ಪೈಪುಗಳ inner lining ಕೆಲಸ ಮುಗಿದಿದ್ದು, guniting ಕೆಲಸ ಪ್ರಗತಿಯಲ್ಲಿದೆ. ತೂಬು ನಿರ್ಮಾಣ ಮುಗಿದಿದ್ದು, ಉಳಿದ ಕಾಮಗಾರಿ |

| | | | | |
|---|---|---|---|---|
| | ಕುಡಿಯುವ ನೀರು ಒದಗಿಸುವ ಯೋಜನೆ. | | | ಪ್ರಗತಿಯಲ್ಲಿದೆ. ಪ್ರಸಕ್ತ 2013–14ನೇ ಸಾಲಿನಲ್ಲಿ ನೀರನ್ನು ಹರಿಸಲು ಯೋಜಿಸಲಾಗಿದೆ. |
| 5 | ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ವಜ್ರನಕಟ್ಟೆ ಕೆರೆ, ಸಿ. ಕಟ್ಟಿಗೇನಹಳ್ಳಿ ಕೆರೆ, ಕೊಪ್ಪ ಕೆರೆಗಳಿಗೆ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ : 144.65 ಕಿ.ಮೀ ನಿಂದ ಪ್ರಾರಂಭವಾಗುವ ವಿತರಣಾ ನಾಲೆ 23 ರ ಸರ : 14600 ಮೀ. ನಿಂದ ಸಂಪರ್ಕ ಕಲ್ಪಿಸಿ, ಕುಡಿಯುವ ನೀರು ಒದಗಿಸುವ ಯೋಜನೆ. | 2.20 | 3 | 0 ಇಂದ 600 ಮೀ. ಹಾಗೂ 1370 ಮೀ ನಿಂದ 2075 ಮೀ ವರೆಗೆ ನಾಲಾ ಕೆಲಸ ಪೂರ್ಣಗೊಂಡಿದ್ದು ಉಳಿದ ಕಾಮಗಾರಿ ಪ್ರಗತಿಯಲ್ಲಿದೆ. ಪ್ರಸಕ್ತ 2013–14 ನೇ ಸಾಲಿನಲ್ಲಿ ನೀರನ್ನು ಹರಿಸಲು ಯೋಜಿಸಲಾಗಿದೆ. |
| 6 | ಚಿಕ್ಕನಾಯಕನಹಳ್ಳಿ – ಕುಡಿಯುವ ನೀರಿನ ಯೋಜನೆಯು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 46 ನೇ ಕಿ.ಮೀ ನಿಂದ 800 ಎಂ.ಸಿ.ಎಫ್.ಟಿ ನೀರನ್ನು ಬಳಸಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 26 ಕೆರೆಗಳಿಗೆ ಹರಿಸುವ ಮೂಲಕ 26 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ. | 94.70 | 26 | ಈ ಯೋಜನೆಯ ಗುರುತ್ವಾಕರ್ಷಣಾ ನಾಲಾ ಭಾಗದ ಮುಖ್ಯ ತೂಬು ನಿರ್ಮಾಣ, ಬ್ರಾಂಚ್ ಕಾಲುವೆಯ ನಾಲಾ ಅಗೆತ ಕಾಮಗಾರಿಯು ಪ್ರಗತಿಯಲ್ಲಿದ್ದು, ಪಂಪ್ ಹೌಸ್ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. 2014–15ನೇ ಸಾಲಿನಲ್ಲಿ ನೀರನ್ನು ಹರಿಸಲು ಯೋಜಿಸಲಾಗಿದೆ. |
| 7 | ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ 6 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನಾಗಮಂಗಲ ಶಾಖಾ ನಾಲೆಯ ಸರಪಳಿ 42.856 ಕಿ.ಮೀ ನಿಂದ ನೀರನ್ನು ಎತ್ತಿ ದಬ್ಬೇಘಟ್ಟ ಹಾಗೂ ಗೊಟ್ಟಿಕೆರೆ ಕೆರೆಗಳಿಗೆ ಹರಿಸುವ ಯೋಜನೆ | 3.00 | 2 | ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ |
| 8 | ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ 10 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನಾಗಮಂಗಲ ಶಾಖಾ ನಾಲೆಯ ಸರ : 22.75 ಕಿ.ಮೀ ನಿಂದ ಹಾಗೂ 27.325 ಕಿಮೀ ನಿಂದ ನೀರನ್ನು ಎತ್ತಿ ಕ್ರಮವಾಗಿ ಹಬಕನಹಳ್ಳಿ ಹಾಗೂ ಕಣತ್ತೂರು ಕೆರೆಗಳಿಗೆ ಹರಿಸುವ ಯೋಜನೆ | 1.30 | 2 | ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ |
| | **ಒಟ್ಟು:–** | | **55** | |

## ದಾಂಡೇಲಿ ನಗರದ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆ

**1029; ಶ್ರೀ ಡಿ.ಎಸ್. ವೀರಯ್ಯ (ವಿ.ಸ.ಕ್ಷೇತ್ರ)**

ಅ) ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನಲ್ಲಿ ಥರ್ಮಲ್ ಪವರ್ ಸ್ಟೇಷನ್ ಇದೆಯೇ; ಯಾವ ವರ್ಷದಿಂದ ಈ ಪವರ್‌ಪ್ಲಾಂಟ್ ಕೆಲಸ ಮಾಡುತ್ತಿದೆ; ಇದನ್ನು ನಿರ್ವಹಿಸಲು ಎಷ್ಟು ಖಾಯಂ ಅರೆಗುತ್ತಿಗೆ ಹಾಗೂ ಅರೆಗುತ್ತಿಗೆ ಕಾರ್ಮಿಕರು ಇರುತ್ತಾರೆ;

ಆ) ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ;

ಇ) ಪ್ರತಿ ದಿನ ಪ್ರತಿ ಮೆಗವ್ಯಾಟ್‌ಗೆ ಎಷ್ಟು ಪ್ರಮಾಣದ ಹಾರುಬೂದಿ (FLY ASH) ಉತ್ಪಾದನೆಯಾಗುತ್ತಿದೆ;

ಈ) ಹಾರುಬೂದಿಯನ್ನು ಅಭಯಾರಣ್ಯದಲ್ಲಿ ಚೆಲ್ಲಲು ಖಾಸಗಿ ಗುತ್ತಿಗೆದಾರರ ಮೂಲಕ ಪ್ರಯತ್ನಿಸಲಾಗುತ್ತಿದೆಯೇ;

ಉ) ಕಾರ್ಖಾನೆಯಿಂದ DIOXIN, FURAN ಹಾಗೂ VOC ಉತ್ಪಾದನೆ ಆಗುತ್ತಿದೆಯೇ ಒಂದು ಟನ್ ಕಾಗದಕ್ಕೆ ಎಷ್ಟು ಪ್ರಮಾಣದಲ್ಲಿ ಇವುಗಳು ಉತ್ಪತ್ತಿ ಯಾಗುತ್ತಿವೆ; ಅವುಗಳನ್ನು ನಿಯಂತ್ರಿಸಲು ಎಷ್ಟು ಕಾರ್ಮಿಕರನ್ನು ನಿಯೋಜಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)

ಊ) ಕಾರ್ಮಿಕರಿಗೆ ಅಪಘಾತ ನಿರ್ವಹಣಾ ಪದ್ಧತಿಯಲ್ಲಿ ತರಬೇತಿ ನೀಡಲಾಗಿದೆಯೇ; ಆ ಸಂಸ್ಥೆಗಳ ಹೆಸರು ಹಾಗೂ ತರಬೇತುದಾರರ ವಿದ್ಯಾರ್ಹತೆ ಏನು; ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ;

ಋ) ಕಾರ್ಖಾನೆಯನ್ನು ವಿಸ್ತರಿಸಲು ಸರ್ಕಾರಕ್ಕೆ ಈ ಕಾರ್ಖಾನೆಯು ಪ್ರಸ್ತಾವನೆಯನ್ನು ಈ ಹಿಂದೆ ಸಲ್ಲಿಸಿರುತ್ತದೆಯೇ; ವಿಸ್ತರಣೆಯ ನಂತರ ಎಷ್ಟು ಜನರಿಗೆ ಖಾಯಂ ಉದ್ಯೋಗ ನೀಡಲಾಗಿದೆ ಗುತ್ತಿಗೆ ಆಧಾರದ ಮೇಲೆ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ; ಅವರಿಗೆ ನೀಡುತ್ತಿರುವ ದಿನಗೂಲಿ ಹಾಗೂ ಸೌಲಭ್ಯಗಳೇನು?

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಕಾರ್ಮಿಕ ರಾಜ್ಯ ಸಚಿವರು)**

ಅ) ಮೆ:ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್, ದಾಂಡೇಲಿ ಈ ಕಾರ್ಖಾನೆಯ ಹೆಸರಿನಲ್ಲಿ ಉಷ್ಣಸ್ಥಾವರ ಘಟಕ ಇರುತ್ತದೆ. ಆದರೆ ಕಾರ್ಖಾನೆಯ ಸ್ವಂತ ಬಳಕೆಗಾಗಿ ವಿದ್ಯುತ್ ಉತ್ಪಾದನೆ (Captive Power Plant) ಸಲುವಾಗಿ ಉಷ್ಣಸ್ಥಾವರ ಸ್ಥಾಪಿಸಿಕೊಂಡಿದ್ದು, ಉಷ್ಣಸ್ಥಾವರ ಘಟಕವು 1958 ರಲ್ಲಿ ಪ್ರಾರಂಬವಾಗಿದ್ದು, ಪವರ್ ಪ್ಲಾಂಟ್ ನಿರ್ವಹಣೆಯಲ್ಲಿ 189 ಜನ ಖಾಯಂ ನೌಕರರು ಮತ್ತು 140 ಜನ ಗುತ್ತಿಗೆ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಆ) ಈ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಒಟ್ಟು 74.80 MW ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ.

ಇ) ಪ್ರತಿ ಮೆಗಾವ್ಯಾಟ್‌ಗೆ 0.50 Metric Ton ಹಾರು ಬೂದಿ ಉತ್ಪಾದನೆಯಾಗುತ್ತಿದೆ.

ಈ) ಹಾರು ಬೂದಿಯನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲಾಗುತ್ತಿದೆ.

1. ಸಿಮೆಂಟ್ ಉತ್ಪಾದನೆ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ.
2. ಇಟ್ಟಿಗೆ ತಯಾರಿಕಾ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ.
3. ಕಲಘಟಗಿಯಲ್ಲಿರುವ ಪ್ರೈವೇಟ್ ಡೆಸರ್ಟೆಡ್ ಗಣಿಗಳಲ್ಲಿರುವ ವೇಸ್ಟ್ ಮೈನಿಂಗ್ ಪಿಟ್‌ಗಳಲ್ಲಿ ತುಂಬಲಾಗುತ್ತಿದೆ.

ಉ) ಸದರಿ ಕಾರ್ಖಾನೆಯಲ್ಲಿ, ಪ್ರಸ್ತುತ DIOXIN, FURAN ಹಾಗೂ VOC ಗಳು ಉತ್ಪಾದನೆಯಾಗುತ್ತಿಲ್ಲ.

ಊ) ಕಾರ್ಮಿಕರಿಗೆ ಅಪಘಾತ ನಿರ್ವಹಣಾ ಪದ್ಧತಿಯಲ್ಲಿ ಆನ್-ಜಾಬ್ ತರಬೇತಿಯನ್ನು ನೀಡಲಾಗುತ್ತಿದೆ. ಅಪಘಾತ ನಿಯಂತ್ರಣ ಮತ್ತು

ಸುರಕ್ಷತೆ ಕುರಿತು ಕಾರ್ಖಾನೆಯಲ್ಲಿನ ಸುರಕ್ಷತಾ ವಿಭಾಗ ಹಾಗೂ ಅಗ್ನಿಶಾಮಕ ವಿಭಾಗದಿಂದ ಕಾರ್ಖಾನೆಯಲ್ಲಿ 2009 ರಿಂದ 2013 ರ ವರೆಗಿನ ಅವಧಿಯಲ್ಲಿ ಖಾಯಂ ಮತ್ತು ಗುತ್ತಿಗೆ ಕಾರ್ಮಿಕರಲ್ಲಿ ಒಟ್ಟು 4,898 ಕಾರ್ಮಿಕರಿಗೆ ತರಬೇತಿ ನೀಡಲಾಗಿರುತ್ತದೆ.

ಋ) 2007ರಲ್ಲಿ ಸದರಿ ಕಾರ್ಖಾನೆಯನ್ನು ವಿಸ್ತರಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ದಿನಾಂಕ 19-7-2007ರಲ್ಲಿ ಕಾರ್ಖಾನೆಯನ್ನು ವಿಸ್ತರಿಸಲು ಅನುಮತಿ ನೀಡಿರುತ್ತದೆ.

1. ಕಾರ್ಖಾನೆಯಲ್ಲಿ ಪೇಪರ್ ಮಶೀನ್-6, ಹೊಸ ಪಲ್ಪ್ ಮಿಲ್, ಬಾಯ್ಲರ್ ಇತ್ಯಾದಿ ವಿಸ್ತರಣೆಗಳನ್ನು ಮಾಡಿಕೊಳ್ಳಲು ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅನುಮೋದನೆಯನ್ನು ನೀಡಲಾಗಿದೆ.

2. 2007 ರಿಂದ 2010 ರವರೆಗಿನ ವಿಸ್ತರಣೆಯ ನಂತರ ಕಾರ್ಖಾನೆಯಲ್ಲಿ ಖಾಯಂ ಆಗಿ 278 ಕಾರ್ಮಿಕರಿಗೆ ಉದ್ಯೋಗ ನೀಡಲಾಗಿದೆ ಮತ್ತು 391 ಕಾರ್ಮಿಕರಿಗೆ ಗುತ್ತಿಗೆ ಆಧಾರದಲ್ಲಿ ಉದ್ಯೋಗ ನೀಡಲಾಗಿದೆ

3. ಗುತ್ತಿಗೆ ಕಾರ್ಮಿಕರಲ್ಲಿ ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 232/- ಅರೆ ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 227/-, ಮತ್ತು ಕೌಶಲ್ಯ ರಹಿತ ಕಾರ್ಮಿಕರಿಗೆ ₹ 207/- ವೇತನ ಪ್ರತಿದಿನಕ್ಕೆ ಪಾವತಿಯಾಗುತ್ತಿರುತ್ತದೆ. ಎಲ್ಲಾ ಕಾರ್ಮಿಕರಿಗೆ ಸಮವಸ್ತ್ರ, ಕ್ಯಾಂಟಿನ್, ವೈಯುಕ್ತಿಕ ಸುರಕ್ಷತಾ ಸಲಕರಣಗಳು (ಸೇಪ್ಟಿ ಹೆಲ್ಮೆಟ್, ಶೂಸ್, ಗಾಗಲ್ಸ್, ಗ್ಲೌಸ್, ಇತ್ಯಾದಿ) ಮತ್ತು ಮಳೆಗಾಲದ ವಸ್ತ್ರಗಳು ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದಲ್ಲದೆ ಕಾರ್ಖಾನೆಯ ಆಡಳಿವರ್ಗದವರು ಕಾರ್ಮಿಕರಿಗೆ ಪಿಎಫ್, ಇಎಸ್ಐ ಸೌಲಭ್ಯ, ಕ್ಯಾಂಟೀನ್ ಸೌಲಭ್ಯ,

ಬೋನಸ್, ಗ್ರಾಚುಟಿ, ರಜೆ ಸೌಲಭ್ಯ ಮತ್ತಿತರ ಸೌಲಭ್ಯಗಳನ್ನು ಒದಗಿಸಿರುತ್ತಾರೆ.

**ದಾಂಡೇಲಿನಗರದ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯಲ್ಲಿ ಉಷ್ಣಸ್ಥಾವರ**

**1028; ಶ್ರೀ ಡಿ.ಎಸ್. ವೀರಯ್ಯ (ವಿ.ಸ. ಕ್ಷೇತ್ರ)**

**ಅ)** ದಾಂಡೇಲಿಯ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯಲ್ಲಿ ಉಷ್ಣ ಸ್ಥಾವರ ಇದೆಯೇ;

**ಆ)** ಉಷ್ಣ ಸ್ಥಾವರವನ್ನು ಯಾವ ವರ್ಷ ಅಳವಡಿಸಲಾಗಿದೆ; ಅವುಗಳ ಸಾಮರ್ಥ್ಯ ಎಷ್ಟು (ಉಷ್ಣ ಸ್ಥಾವರ ಸ್ಥಾಪಿಸಲು ಕೇಂದ್ರ ಪರಿಸರ ಮಂತ್ರಾಲಯಕ್ಕೆ ಸಲ್ಲಿಸಿದ ENVIRONMENT IMPACT ASSESSMENT (E.I.A) ವರದಿ ಹಾಗೂ ಪಡೆದುಕೊಂಡ ಒಪ್ಪಿಗೆ ಪತ್ರ ಒದಗಿಸುವುದು)

**ಇ)** ಉಷ್ಣ ಸ್ಥಾವರದಿಂದ ಉತ್ಪನ್ನವಾಗುವ ಹಾರುಬೂದಿ (FLY ASH) ಯನ್ನು ಹೇಗೆ ಪರಿಸರಕ್ಕೆ ಹಾನಿಯಾಗದಂತೆ ನಿರ್ವಹಿಸಲಾಗುತ್ತಿದೆ (ಅವುಗಳ ವಿವರ ಒದಗಿಸುವುದು)

**ಈ)** ಉಷ್ಣ ಸ್ಥಾವರ ಹಾಗೂ ಬಾಯ್ಲರ್‌ಗಳ ನಿರ್ವಹಣೆ ಸರಿಯಾಗಿ ನಡೆಯುತ್ತಿದೆಯೇ; ಅವುಗಳನ್ನು ನಿರ್ವಹಿಸಲು ಎಷ್ಟು ಖಾಯಂ, ಅರೆಕಾಲಿಕ ಹಾಗೂ ಗುತ್ತಿಗೆ ಕಾರ್ಮಿಕರು ಇರುತ್ತಾರೆ; (ಅವರಿಗೆ ನೀಡುತ್ತಿರುವ ವೇತನ ಹಾಗೂ ಸೌಲಭ್ಯಗಳ ಸಂಪೂರ್ಣ ವಿವರ ನೀಡುವುದು)

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಕಾರ್ಮಿಕ ರಾಜ್ಯ ಸಚಿವರು)**

**ಅ)** ಮೆ:ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್, ದಾಂಡೇಲಿ ಈ ಕಾರ್ಖಾನೆಯಲ್ಲಿ ಪ್ರತ್ಯೇಕ ಉಷ್ಣಸ್ಥಾವರ ಘಟಕ ಇರುತ್ತದೆ.

ಆ) ಉಷ್ಣಸ್ಥಾವರ ಘಟಕವು 1958 ನೇ ಸಾಲಿನಲ್ಲಿ ಪ್ರಾರಂಬವಾಗಿದ್ದು, ಪ್ರಸ್ತುತ 74.80 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ವಿವರಗಳು ಈ ಕೆಳಗಿನಂತಿವೆ:

| ಕ್ರ.ಸಂ. | ಪ್ರಾರಂಬವಾದ ವರ್ಷ | ಉಷ್ಣ ಸ್ಥಾವರದ ಸಾಮರ್ಥ್ಯ |
|---|---|---|
| 1 | 1958 | 5.00 ಮೆಗಾವ್ಯಾಟ್ |
| 2 | 1991 | 5.3 ಮೆಗಾವ್ಯಾಟ್ |
| 3 | 2003 | 14.5 ಮೆಗಾವ್ಯಾಟ್ |
| 4 | 2006 | 15.5 ಮೆಗಾವ್ಯಾಟ್ |
| 5 | 2010 | 34.5 ಮೆಗಾವ್ಯಾಟ್ |
| | **ಒಟ್ಟು** | **74.80 ಮೆಗಾವ್ಯಾಟ್** |

ಆಡಳಿತ ವರ್ಗದವರು ENVIRONMENT IMPACT ASSESSMENT ವರದಿಯನ್ನು 2006 ನೇ ಸಾಲಿನಲ್ಲಿ ತಯಾರಿಸಿದ್ದು, ಅದನ್ನು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಅರ್ಜಿಯೊಂದಿಗೆ ಸಲ್ಲಿಸಿರುತ್ತಾರೆ. ಮತ್ತು ಈ ಕುರಿತು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ತನ್ನ ಅನುಮತಿ ಪತ್ರ ಸಂಖ್ಯೆ: J-11011/408/2006-1A.II(i) ದಿನಾಂಕ:19–07–2007 ರಲ್ಲಿ ಅನುಮತಿ ನೀಡಿದೆ (ಅನುಬಂಧ–1).

ಇ) ಬಾಯ್ಲರುಗಳಿಂದ ಹೊರಬರುವ ಹಾರು ಬೂದಿಯನ್ನು ಪರಿಸರಕ್ಕೆ ಹರಡದಂತೆ ತಡೆಯಲು ಎಲ್ಲಾ ಉಷ್ಣಸ್ಥಾವರ ಘಟಕಗಳಿಗೆ ನಾಲ್ಕು ಫೀಲ್ಡ್ ಇರುವ ಅತ್ಯಾಧುನಿಕ ಇ.ಎಸ್.ಪಿ. (Electro Static Precipitator) ಅಳವಡಿಸಲಾಗಿದೆ. ಇದರಿಂದ ಹೊಗೆಯೊಂದಿಗೆ ಹೋಗುವ ಹಾರು ಬೂದಿಯನ್ನು ಘಟಕದಲ್ಲಿಯೇ ತಡೆದು, ಶೇಖರಿಸಿ ಅವುಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲಾಗುತ್ತಿದೆ.

1. ಸಿಮೆಂಟ್ ಉತ್ಪಾದನೆ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

2. ಇಟ್ಟಿಗೆ ತಯಾರಿಕೆ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

3. ಕಲಘಟಗಿಯ ಪ್ರೈವೇಟ್ ಡೆಸರ್‌ಟೆಡ್ ಗಣಿಗಳಲ್ಲಿರುವ Waste Mining Pit ಗಳಲ್ಲಿ ತುಂಬಲಾಗುತ್ತಿದೆ.

**ಈ)** ಬಾಯ್ಲರುಗಳ ನಿರ್ವಹಣೆಯನ್ನು ನಿಯಮಾನುಸಾರ ನಿರ್ವಹಿಸಲಾಗುತ್ತಿದೆ. ಬಾಯ್ಲರುಗಳ ನಿರ್ವಹಣೆಯಲ್ಲಿ 189 ಜನ ಖಾಯಂ ನೌಕರರು ಮತ್ತು 140 ಜನ ಗುತ್ತಿಗೆ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಖಾಯಂ ನೌಕರರ ಪೈಕಿ ಅತಿ ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 17200/–, ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 17000/– ಅರೆ ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 16900/– ಮತ್ತು ಕೌಶಲ್ಯ ರಹಿತ ಕಾರ್ಮಿಕರಿಗೆ ₹ 16800/– ವೇತನ ಮಾಹೆಯಾನ ಪಾವತಿಯಾಗುತ್ತಿರುತ್ತದೆ. ಅದೇ ರೀತಿ ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 232/– ಅರೆ ಕೌಶಲ್ಯ ಹೊಂದಿದ ಕಾರ್ಮಿಕರಿಗೆ ₹ 227/– ಮತ್ತು ಕೌಶಲ್ಯ ರಹಿತ ಕಾರ್ಮಿಕರಿಗೆ ₹ 207/– ವೇತನ ಪ್ರತಿದಿನಕ್ಕೆ, ಪಾವತಿಯಾಗುತ್ತಿರುತ್ತದೆ. ಎಲ್ಲಾ ಕಾರ್ಮಿಕರಿಗೆ ಸಮವಸ್ತ್ರ, ಕ್ಯಾಂಟೀನ್, ವೈಯುಕ್ತಿಕ ಸುರಕ್ಷತಾ ಸಲಕರಣಗಳು (ಸೇಫ್ಟಿ ಹೆಲ್ಮೆಟ್, ಶೂಸ್, ಗಾಗಲ್ಸ್, ಗ್ಲೌಸ್, ಇತ್ಯಾದಿ) ಮತ್ತು ಮಳೆಗಾಲದ ವಸ್ತ್ರಗಳ ಸೌಲಭ್ಯಗಳನ್ನು ನೀಡಲಾಗುತ್ತಿದೆ.

No J-11011/408/2006-IA II (I)

**Government of India**

**Ministry Environment and Forests**

**(I.A. Division)**

Paryavaran Bhawan
CGO Complex, Lodhi Road
New Delhi – 110 003

**E-mail : pb.rastogi@nic.in**
**Talefax : 011-24367668**
**Dated 19th July, 2007**

**To,**

The Executive Director
M/s The West Coast Papers Mills Ltd.
P.B. No. 5, Bangur Nagar
Dandeli, Uttar Kannada
Karnataka

**E-mail :** klchandak@westcoastpaper.com / bsmundra@westcoastpaper.com
**Fax No. :** 08284-231249, 080-22231838

**Subject :** **Expansion-cum-Modernization of Paper Unit (1,78,500 TPA to 3,20,000 TPA) and Captive Power Plant (30 MW) at Dandeli, Haliyal, Uttar Kannada, Karnataka by M/s The West Coast Paper Mills Ltd.**

**Sir,**

This has reference to your letter no. 22:PD&P:18:1101:27046 dated 13th November, 2006 alongwith Application, Questionnaire and EIA/EMP report as per EIA Notification, 1994 and subsequent communications dated 16th December, 2006, 16th January, 2007,

24th February, 2007, 17th March, 2007, 19th March, 2007, 26th March, 2007 and 28th May, 2007 on the above mentioned project.

2.0 The Ministry of Environment and Forests has examined your application. It is noted that proposal is for the expansion-cum-modernization of Paper Unit (1,78,500 TPA to 3,20, 000 TPA) and Captive Power Plant (30 MW) at Bangur Nagar, Dandeli, Haliyal, Uttar Kannada, Karnataka. The total area available is 155 ha and no additional land will be required for the expansion project. Dandeli reserve forest is located at 0.5 km (E) and Dandeli Wildlife Sanctuary at 9 km (E).

3.0 New cooking plant will be based on State-of-the-art technology and will install modified Batch, Cooking process, New Brown Stock washing, Oxygen de-lignification and knots separation and screening plant and new bleach plant. The new cooking plant will meet the pulp requirements of the proposed new fibre line. Obsolete bleaching sequence (C/D-EP-H-D) technology will be replaced by installing new Oxygen de-lignification combined with elemental chlorine free bleaching sequence ($D_o$-$E_{op}$-$D_l$) and will bring down the pollution load. Thus, use of elemental chlorine process in bleaching will be completely eliminated.

4.0 ESP will be provided to the boilers to control SPM emissions below 150 mg/Nm$^3$ Low NOx burners will be installed to the boilers. Dust suppression system will be provided to coal yard. Odour will be controlled by installing odour collection system and subsequently incinerated in Rotary kiln. Total water requirement from Kali river

will be 1,00,000 $m^3$/d and prior 'permission' from the Government of Karnataka is obtained for 85,000 $m^3$/day and have applied for remaining 15,000 $m^3$/day No ground water will be extracted. The wastewater will be treated in ETP and discharged to Halmaddi Nala leading to river kali Dua to installation of advanced cooking system and ECF bleaching colour in wastewater will be subslantially reduced Boiler ash will be given to cement/bricks manufacturing units. Lime grits will be disposed off in lowlying areas. Chip dust will be fired in boiler waste pulp from Waste Water Treatment Plant (WWTP) will be sold to board/egg tray manufacturers

5.0 Public hearing meeting was held on 20th February 2007 'Consent for Establishment' for the existing plant has been accorded by the Karnataka State Pollution Control Board (KSPCB) vide letter no. CFE-CELL-/WCPML/NE-934/2005-06/24 dated 9th May 2005. Total cost of the project is ₹ 1,100.00 Crores.

6.0 The Ministry of Environment and Forests hereby accords environmental clearance to the proposed of the above project under the provisions of EIA Notification dated 27th January, 1994 as amended subsequently subject to strict compliance of the following specific and general conditions.

**A. SPECIFIC CONDITIONS:**

i. The gaseous emissions (SPM, $SO_2$, $NO_X$ and $H_2S$) from various process units shall conform to the standards prescribed from time to time. The KSPCB may specify more stringent standards for the relevant parameters keeping in

view the nature of the industry, its size and location. At no time, the emission level shall go beyond the prescribed standards. In the event of failure of any pollution control system(s) adopted by the unit, the respective unit should not be restarted until the control measures are rectified to achieve the desired efficiency.

ii. Three on-line monitoring stations for ambient air near the boundary of the plant shall be set up alongwith another on-line stack monitoring system for recovery boiler for particulate matter, $SO_2$, $NO_X$ and $H_2S$ and the on-line data shall be submitted to the CPCB and KSPCB.

iii. The company shall phase out Elemental Chlorine from pulp bleaching process. Obsolete bleaching sequence (C/D-EP-H-D) technology shall be replaced by new Oxygen de-lignification combined with elemental chlorine free bleaching sequence ($D_O$-$E_{OP}$-$D_l$) to bring down the pollution load.

iv. ESP shall be provided to the new boilers viz. coal fired boilers, chemical recovery boiler and lime mud re-burning kiln and SPM emissions shall be maintained below 150 mg/Nm3 Low NOx burners shall be installed to the boilers. Dust suppression system shall be provided to coal yard.

v. Fugitive emissions shall be controlled by providing dust collectors and water spraying system at material transfer points. Odour shall be controlled by installing odour

collection system and subsequently incinerating in Rotary kiln. Monitoring of $H_2S$ and mercaptans shall be carried out once in a month in the work environment.

vi. Total fresh water requirement from River Kali shall not exceed 1,00,000 $m^3$/d and prior 'permission' from the Government of Karnataka for the remaining 15,000 $m^3$/day shall be obtained. Effort shall be made to reduce water consumption by recycle and reuse. No ground water shall be extracted. The wastewater from the process shall not exceed 85,885 m3/d. The wastewater shall be segregated into pulp mill and paper machine stream and treated independently in the effluent treatment plant (ETP) before discharge to Halmaddi Nala leading to river kali.

vii. The company shall make continued efforts in reducing the volume of effluent discharge into the river through recycling / reuse techniques and reducing the pollution load by adopting advanced wastewater treatment technologies.

viii. The performance of the Effluent Treatment Plant shall be improved and efforts shall be made to bring down the color, total suspended solids in the final treated effluent by adopting processes like activated Carbon filter, use of better Flocculating and decolorizing agents etc. The quality of the treated effluent shall conform to the prescribed standards and used for irrigation.

ix. Effort shall be made to reduce colour in wastewater substantially after installation of advanced cooking system and ECF bleaching. The use of Ferric/Ferrous chloride shall be optimized to further reduce the colour in the treated effluent.

x. AOx levels shall not exceed 1.0 kg/ton of paper production and water quality shall be regularly monitored at the discharge point and in the river. The company also shall have their own instrument for the measurement of AOx. TOC levels in the treated effluent shall also be measured once in a month.

xi. Solid waste generated in the form of boiler ash shall be provided to cement / bricks manufacturing units. Lime grits shall be disposed off in low-lying areas. Chip dust shall be used as fuel in the existing boiler. Waste pulp from ETP shall be given to cardboard / egg tray manufacturers.

xii. Efforts shall be made to bring down the noise level in the Paper mill plant.

xiii. As per the recommendations made in the Charter on Corporate Responsibility for Environmental Protection (CREP) issued by the CPCB shall be followed.

xiv. Green belt shall be raised in at least 48 ha. (30%) out of total 155 ha to mitigate the effects of fugitive emissions all around the plant in as per the CPCB quidelines and in consultation with local DFO.

xv. The company shall undertake rainwater harvesting measures to recharge the ground water.

xvi. Prior permission from the State Forest Department as the proposed expansion of the paper unit is located at 0.5 km of the Dandeli Reserve Forest.

xvii. Prior approval of the National Board for Wildlife shall be obtained since the proposed expansion of the paper unit is located within 2.0 km radius of the Dandeli Wildlife Sanctuary.

**B. GENERAL CONDITIONS:**

i. The project authorities must strictly adhere to the stipulations made by the Karnataka State Pollution Control Board (KSPCB) and the State Government.

ii. No further expansion or modernization in the plant shall be carried out without prior approval of the Ministry of Environment and Forests. In case of deviations or alterations in the project proposal from those submitted to this Ministry for clearance, a fresh reference shall be made to the Ministry to assess the adequacy of conditions imposed and to add additional environmental protection measures required if any

iii. Proper house keeping and cleanliness must be maintained within and outside the plant.

iv. The overall noise levels in and around the plant area shall be kept well within the standards (85 dBA) by providing noise

control measures including acoustic hoods, silencers, enclosures etc. on all sources of noise generation. The ambient noise levels should conform to the standards prescribed under EPA Rules, 1989 viz 75 dBA (day time) and 70 dBA (night time).

v. Occuptional healthy surveillance programme shall be undertaken as regular exercise for all the employees, specially for those engaged inhandling hazardous substances. The first aid facilities in the occupational health centre shall be strengthened and the medical records of each employee should be maintained separately.

vi. The project proponent shall also comply with at the environmental protection measures and safeguards recommended in the EIAEMP report.

vii. The implementation of the project vis-a-vis environmental action plans shall be monitored by Ministry's Regional Office at Bangalore/ KSPCB/CPCB. A six monthly compliance status report shall be submitted to montoring agencies.

viii. Adequate provisions for infrastructure facilities sure as water supply, fuel, sanitation etc. shall be ensured for construction workers during the construction phase so as to avaid felling of trees and pollution of water and thesurroundings.

ix. The project proponent shall have a scheme for social upliftment in the surroundind villages with reference to

contribution in road contruction, education, establishment of health centers, sanitation facilities, drinking water supply, community awareness and employment to local people whenever and wherever possible both for technical and non-technical jobs.

x. A separate Environmental Management Cell equipped with full fledged laboratory facilities to carry out the various Environmental Management and Monitoring functions shall be set up under the control of Senior Executive.

xi. As proposed in EIA/EMP, ₹ 241.75 Lakhs & ₹ 150.00 Lakhs earmarked towards the capital cost and recurring cost per annum or environmental pollution control measures respectively shall be used judiciously to implement the conditions stipulated by the Ministry of Environment and Forests as well as the State Government and an implementation schedule in implementing all the conditions stipulated herein shall be submitted to the Ministry's Regional Office at Bangalore. The funds so provided shall not be diverted for any other purposes.

xii. Six monthly status report on the project vis-a-vis implementation environmental measures shall be submitted to this Ministry's Regional Office at Bangalore / CPCB / KSPCB.

xiii. The Project Proponent shall inform the public at the project has been accorded environmental clearance by the Ministry

and copies of the clearance letter are available with the Karnataka State Pollution Control Board/committee and may also be seen at Website of the Ministry of Environment and Forests at http://www.envfor.nic.in. This shall be advertised within seven days from the date of issue of the clearance letter at least in two local newspapers that are widely circulated in the region of which one shall be in the vernacular language of the locality concerned and a copy of the same shall be forwarded to the Regional office.

xiv. The Project Authorities shall inform the Regional Office as well as the Ministry the date of financial closure and final approval of the project by the concerned authorities and the date of commencing the land development work.

7.0 The Ministry or any competent authority may suitable any further condition(s) on receiving reports from the project authorities. The above condition shall be monitored by the Regional Office located at Bangalore.

8.0 The Ministry may revoke or suspend the clearance, if implementation of any of the above conditions is not satisfactory.

9.0 The Ministry reserves the right to stipulate additional conditions if found necessary. The Company in a time bound manner shall implement these conditions.

10.0 The above conditions will be enforced, inter-alia under the provisions of the Water (Prevention & Control of Pollution) Act, 1974, the Air (Prevention & Control of Pollution) Act, 1981, the

Environment (Protection) Act, 1986, Hazardous Wastes (Management and Handling) Rules, 2003 and the Public Liability Insurance Act, 1991 along with their amendments and rules.

**(Dr. P.B. Rastogi)**
**Additional Director**

**Copy to:**

1. The Chairman, Central Pollution Control Board, Parivesh Bhavan, CBD-cum-Office Complex, East Arjun Nagar, Delhi-110032.
2. The Chairman, Karnataka State Pollution Control Board, 6,7,8 & 9th Floor, (Public Utility Building) Subhas Chandra Bose Building, M.G. Road, Bangalore-560001, Karnataka.
3. The Chief Conservator of Forests (Central), Regional Office (SZ), Kendriya Sadan, IVth Floor, E & F Wing, 17th Main Road, Koramangala, Bangalore-560034.
4. The Secretary, State Department of Environment & Forests, Government of Karnataka Bangalore.
5. JS (CCI-I), Ministry of Environment and Forests, Paryavarna Bhavan, CGO Complex, New Delhi-110003.
6. Monitoring Cell, Ministry of Environment and Forests, Paryavarna Bhavan, CGO Complex, New Delhi -110003.
7. Guard file
8. Monitoring file

**The West Coast Paper Mills Limited, Dandeli**

An ISO 14001 certified Company



EXPANSION-CUM-MODERNISATION
UNDER
PROPOSED MEGA PROJECT

# RAPID ENVIRONMENTAL IMPACT ASSESSMENT REPORT

September 2006

*Prepared by*

VIMTA LABS LTD
HYDERABAD

SPB PROJECTS AND CONSULTANCY LTD
CHENNAI

THE WEST COAST PAPER MILLS LTD. DANDELI

| CHAPTER # | TITLE | PAGE # |
|---|---|---|
| | 5.7 Water Quality | C5-[illegible] |
| | 5.8 Noise Level Survey | C5-3[illegible] |
| | 5.9 Demography and Socio-Economics | C5-[illegible] |
| | 5.10 Flora and Fauna studies | C5-[illegible] |
| 6 | IMPACT ASSESSMENT | C6-1 |
| | 6.1 Introduction | C6-1 |
| | 6.2 Impacts During Construction Phase | C6-1 |
| | 6.3 Impacts during Operational Phase | C6-[illegible] |
| 7 | ENVIRONMENT MANAGEMENT PLAN | C7-1 |
| | 7.1 Introduction | C7-1 |
| | 7.2 Summary of Anticipated Environmental Impacts and Mitigation | C7-1 |
| | 7.3 Environmental Management during Construction | C7-5 |
| | 7.4 Management during Operational Stage | C7-[illegible] |
| 8 | ENVIRONMENT MONITORING | C8-1 |
| | 8.1 Monitoring and Reporting Procedure | C8-1 |
| | 8.2 Infrastructure for Environmental Protection | C8-5 |
| 9 | Environment Management and Training | C9-1 |
| | 9.1 Introduction | C9-1 |
| | 9.2 Formation of an Environmental Management System | C9-1 |
| | 9.3 Implementation of an Environmental Management System | C9-2 |
| | 9.4 Implementation Schedule of Mitigation Measures | C9-[illegible] |
| | 9.5 Institutional Arrangements for Environment Management | C9-10 |
| | 9.6 Budgetary Cost Estimates for Environmental Management | C9-[illegible] |
| 10 | RISK ASSESSMENT AND DISASTER MANAGEMENT PLAN | C10-1 |
| | 10.1 Introduction | C10-1 |
| | 10.2 Approach to the Study | C10-1 |
| | 10.3 Risk Assessment | C10-3 |
| | 10.4 Hazard Identification | C10-3 |
| | 10.5 Emergency Preparedness Plan | C10-[illegible] |
| 11 | SOURCES OF DATA AND INFORMATION | [illegible] |
| [illegible] | REFERENCES | [illegible] |

ANNEXURE

[illegible] Air Quality
Ecological Studies
Village-wise Landuse Pattern
Demographic Details

[illegible]

[illegible]
Amendment

2 [illegible]

3 Raw Materials Availability – [illegible]

| CHAPTER # | TITLE | | PAGE # |
|---|---|---|---|
| | 5.7 | Water Quality | C5-[illegible] |
| | 5.8 | Noise Level Survey | C5-3[illegible] |
| | 5.9 | Demography and Socio-Economics | C5-[illegible] |
| | 5.10 | Flora and Fauna studies | C5-[illegible] |
| 6 | IMPACT ASSESSMENT | | C6-1 |
| | 6.1 | Introduction | C6-1 |
| | 6.2 | Impacts During Construction Phase | C6-1 |
| | 6.3 | Impacts during Operational Phase | C6-[illegible] |
| 7 | ENVIRONMENT MANAGEMENT PLAN | | C7-1 |
| | 7.1 | Introduction | C7-1 |
| | 7.2 | Summary of Anticipated Environmental Impacts and Mitigation | C7-1 |
| | 7.3 | Environmental Management during Construction | C7-5 |
| | 7.4 | Management during Operational Stage | C7-[illegible] |
| 8 | ENVIRONMENT MONITORING | | C8-1 |
| | 8.1 | Monitoring and Reporting Procedure | C8-2 |
| | 8.2 | Infrastructure for Environmental Protection | C8-5 |
| 9 | Environment Management and Training | | C9-1 |
| | 9.1 | Introduction | C9-1 |
| | 9.2 | Formation of an Environmental Management System | C9-1 |
| | 9.3 | Implementation of an Environmental Management System | C9-3 |
| | 9.4 | Implementation Schedule of Mitigation Measures | C9-9 |
| | 9.5 | Institutional Arrangements for Environment Management | C9-10 |
| | 9.6 | Budgetary Cost Estimates for Environmental Management | C9-[illegible] |
| 10 | RISK ASSESSMENT AND DISASTER MANAGEMENT PLAN | | C10-1 |
| | 10.1 | Introduction | C10-1 |
| | 10.2 | Approach to the Study | C10-1 |
| | 10.3 | Risk Assessment | C10-2 |
| | 10.4 | Hazard Identification | C10-3 |
| | 10.5 | Emergency Preparedness Plan | C10-[illegible] |
| 11 | SOURCES OF DATA AND INFORMATION | | [illegible] |
| 12 | REFERENCES | | [illegible] |


ANNEXURE

Ambient Air Quality
Ecological Studies
Village-wise Land-use Pattern
Demographic Details

[illegible]

[illegible]
Annexure

2 [illegible]

3 Raw Materials Availability – Annexure

## PROCEEDINGS OF THE GOVERNMENT OF KARNATAKA

**Sub:** Proposal of M/s. West Coast Paper Mills Ltd., Chandrakiran, 4th Floor, 10-A Kasturba Road, Bangalore, to enhance the production capacity of "Paper & Duplex Board" at Dandeli Taluk, Uttara, Kannada District.

**Read:** Proceedings of the 11th State High Level Clearance Committee [SHLCC] meeting held on 28.9.2007.

**Preamble:**

M/s. West coast Paper Mills Ltd., Chandrakiran, 4th Floor, 10-A Kastrurba Road, Bangalore, to to enhance the production capacity of "Paper & Duplex Board" from 1,63,750 TPA to 3,20,000 TPA within the existing factory premises at Dandeli Taluk, Uttara Kannada District, with an investment of ₹ 1100.00 crores. The project proposes to provide employment to about 150 persons. The Company had requested approval of the project for sanction of various Infrastructure facilities as well as incentives and concessions.

The State High Level Clearance Committee, [SHLCC] after detailed discussion of the project proposal of the said Company, approved the proposal of M/s. West Coast Paper Mills Ltd., and recommended to grant Infrastructure facilities and to extend incentives & concessions. Hence the following order.

**GOVERNMENT ORDER NO: CI 19 SPI 2008, BANGALORE**

**DATED: 27.02.2008**

In the circumstances explained above, Government is pleased to approve M/s. West Coast Paper Mills Ltd., Chandrakiran, 4th Floor, 10-A Kasturba Road, Bangalore, to enhance the production capacity of "Paper & Duplex Board" from 1,63,750 TPA to 3,20,000 TPA within the existing factory premises at Dandeli Taluk, Uttara Kannada District with an investment of ₹ 1100.00 crores and extend the following infrastructure facilities, incentives and concessions.

**INFRASTRUCTRE FACILITIES:**

**Land:** The Committee resolved to permit the Company to take up expansion project within existing premises at Dandeli, Uttara Kannada District. The Company is requesting to recommend to Forest Department, GOK to continue the lease hold rights of 36.11 hectares of land consisting of labour colony (16.18 Ha.) Strip Area (4.80 Ha.) Railway Siding (4.79 Ha.) Nursery (1.60 Ha.) Effluent Treatment Plant Stage 1st (4.86 Ha.) and River Pump House (3.88 Ha.) where factory is situated. Then Company is also requesting to recommend to GOI to accord approval for leasing of total area of 25.4908 hectares of land consisting of Halamaddi Depot (5.2608 Ha.) and Effluent Treatment Plant Stage II (20.23 Has.) which was made available to unit since inception of the factory and subsequently for the purpose of raw material storage and for establishment of ETP. The above requests of the Comapany were earlier recommended vide G.O.NO.CI 283

SPC 1994 dated 26.4.2000. The Concerned Departments to take action accordingly.

**Water:** Water Resources Department to permit the Company to draw additional water of 20000 KL per day from Kali River. The Company shall adopt rain water harvesting and water recycling. This approval as subject to the final order issued by Water Resources Department.

**Incentivies and Concessions:** As per New Industrial Policy 2006-2011

**Environment:** The promoters were advised to obtain CFE from KSPCB & ECC from MOEF, GOI.

**Employment:** The Company shall prepare a plan for development of human resource required for the project, train local people and provide employment to these trained local youth and comply with Government policy of Employment to local people. A copy of human resource development plan shall be send to the Commissioner for I.D. & Director of Industries and Commerce for monitoring.

**Vendor Development:** Where ever there is scope for vendor development for the project, the Company shall prepare a vendor development plan develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

**Social Infrastructure Development:** The company is advised to take up social infrastructure development projects in the vicinity of proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

**Others:**

- The promoter shall take all statutory and other necessary clearance4s and shall submit milestones/progress in implementation of the project regularly, which will be monitored buy the Departments concerned.

  This approval is valid for a period of two years from the date of issue.

By Order and in the name of the
President Of India,

(K.R. Chandramma)
Desk Officer (Technical Cell)
Commerce & Industries Development

**To**

The Compiler, Karnataka Gazette, Bangalore for Publication in the next issue of the Gazette.

**Copy to:**

1. The Principal Accountant General (Audit/Accounts) in Karnataka, Bangalore.

2. The ACS & Principal Secretary to Government, Energy Department Bangalore.
3. The Principal Secretary to Government, Finance Department, Bangalore
4. The Principal Secretary to Government, Urban Development Department, Bangalore
5. The Principal Secretary to Government, Water Resources Dept, Bangalore
6. The Principal Secretary to Government, Forest, Ecology & Environment Department, Bangalore
7. The Principal Secretary to Government, Revenue Department, Bangalore
8. The Principal Secretary to Government, Rural Development & Panchayat Raj Department, Bangalore
9. The Managing Director, Karnataka Power Transmission Corporation Limited (KPTCL), Bangalore.
10. The Secretary, Karnataka State Pollution Control Board, # 49, Church Street, Parisara Bhavan, Bangalore-01.
11. The Commissioner for Industrial Development and Director of Industries and Commerce, Khanija Bhavan, Bangalore.
12. The CEO & EM, KIADB, Nrupatunga Road, Bangalore-1
13. The Commissioner for Commercial Taxes, Therige Bhavan, Gandhi Nagar, Bangalore-9

14. The Managing Director, Karnataka Udyoga Mitra, Khanija Bhavan, Bangalore. (For information and Monitoring progress of the Project)
15. M/s. West Coast Paper Mills Ltd., Chandrakiran, 4th Floor, 10-A Kasturba Road, Bangalore (please contract M.D. Karnataka Udyoga Mitra, avail services for getting all clearances approvals from the various Government Departments and Agency and submit the mile stone/progress in implementation of the project regularly)
16. The Directore (Technical Cell), Commerce & Industries Department, Vikasa Soudha, Bangalore.
17. PS to Principal Secretary to Govt., Commerce & Industries Dept.
18. Guard File / Spare Copies.

**ದಾಂಡೇಲಿನಗರದ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆ ಕುರಿತು**

**997; ಶ್ರೀ ಡಿ.ಎಸ್. ವೀರಯ್ಯ (ವಿ.ಸ. ಕ್ಷೇತ್ರ)**

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿರುವ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯ ಆಡಳಿತ ಮಂಡಳಿಯು ಕಾರ್ಮಿಕರ ವಿರುದ್ಧ ದೌರ್ಜನ್ಯ ನಡೆಸುತ್ತಿರುವ ಕುರಿತಾಗಿ ಕಾರ್ಮಿಕ ಭವನದಲ್ಲಿರುವ ಲೇಬರ್ ಕಮಿಷನರ್ ಅವರಿಗೆ ಕಾರ್ಮಿಕ ಸಂಘಟನೆ/ಸಾರ್ವಜನಿಕ ಸಂಘಗಳಿಂದ ದೂರುಗಳು ಬಂದಿವಿಯೇ; (ಮಾಹಿತಿ ನೀಡುವುದು)

ಆ) ಬಂದಿದ್ದಲ್ಲಿ ದೂರು ನೀಡಿದ ಸಂಘಟನೆಗಳು ಯಾವುವು; ಆ ಸಂಘಟನೆಗಳ ಹೆಸರು, ದೂರು ನೀಡಿದವರ ಹುದ್ದೆ, ವಿಳಾಸಗಳೇನು;

ಇ) ಲೇಬರ್ ಕಮಿಷನರ್ ಈ ದೂರುಗಳ ಕುರಿತು ಕೈಗೊಂಡ ಕಾನೂನು ಕ್ರಮಗಳೇನು; ಅವುಗಳ ಸಂಪೂರ್ಣ ವಿವರ ನೀಡುವುದು?

**ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು)**

**ಅ)** ಹೌದು. ಮೆ: ವೆಸ್ಟ್‌ಕೋಸ್ಟ್ ಪೇಪರ್ ಮೀಲ್ಸ್ ಲಿ., ದಾಂಡೇಲಿ, ಸಂಸ್ಥೆಯ ಕಾರ್ಮಿಕರ ಸಮಸ್ಯೆಗಳ ಕುರಿತು ಹಲವಾರು ಸಂಘಟನೆಗಳು ಮತ್ತು ಜನಪ್ರತಿನಿಧಿಗಳಿಂದ ದೂರುಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುತ್ತವೆ. ದೂರು ನೀಡಿರುವವರ ವಿವರಗಳನ್ನು ಒದಗಿಸಿದೆ. (ಕೆಳಗೆ ನಮೂದಿಸಿದ "ಆ" ಪ್ರಶ್ನೆಯ ಉತ್ತರವನ್ನು ನೋಡುವುದು).

**ಆ)**

1) ಅಬ್ದುಲ್ ವಹಾಬ ಎಚ್. ಬಾಂಸರಿ – ಅಧ್ಯಕ್ಷರು ಮತ್ತು ಇತರೆ ಪದಾಧಿಕಾರಿಗಳು, ಹಳಿಯಾಳ – ಜೋಯ್ಡ ಕ್ಷೇತ್ರದ ಅಲ್ಪಸಂಖ್ಯಾ ಮೋರ್ಚ, ಭಾರತೀಯ ಜನತಾ ಪಕ್ಷ, ದಾಂಡೇಲಿ.

2) ಸಯ್ಯದ್ ಕೆ. ತಂಗಡಿ, ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಕಮಿಟಿ, ದಾಂಡೇಲಿ–581326

3) ಶಂಕರ ಮುಂಗರವಾಡಿ, ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ದಾಂಡೇಲಿ ಘಟಕ–581325

4) ಶಿವಾನಂದ ಜಿ. ಅಧ್ಯಕ್ಷರು, ಕಾರ್ಮಿಕ ಸೇನಾ, ದಾಂಡೇಲಿ–581325 ಮೇಲಿನ ಸಂಘಟನೆಗಳು ಕಾರ್ಮಿಕ ಸಂಘಗಳ ಕಾಯ್ದೆ, 1926ರಡಿಯಲ್ಲಿ ನೋಂದಣಿಯಾಗಿರುವುದಿಲ್ಲ.

ಇ) ಮೇಲಿನ ಸಂಘಟನೆಗಳು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಿಂದ ಬಂದ ದೂರುಗಳನ್ನು ಉಪಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿರುತ್ತದೆ. ಅಲ್ಲದೆ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ ಸೂಚನೆಯ ಮೇರೆಗೆ ಕಾರ್ಮಿಕ ಆಯುಕ್ತರ

ನೇತೃತ್ವದಲ್ಲಿ ಜಂಟಿ ಕಾರ್ಮಿಕ ಆಯುಕ್ತರು, ಬೆಂಗಳೂರು, ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ, ಸಹಾಯಕ ಕಾರ್ಮಿಕ ಆಯುಕ್ತರು, ಹುಬ್ಬಳ್ಳಿ ವಿಭಾಗ, ಹುಬ್ಬಳ್ಳಿ, ಕಾರ್ಮಿಕ ಅಧಿಕಾರಿ, ಕಾರವಾರ ಉಪವಿಭಾಗ, ಕಾರವಾರ, ಇವರುಗಳ ನ್ನೊಳಗೊಂಡ ತಂಡ ದಿನಾಂಕ: 08/11/2011 ಮತ್ತು 9/11/2011 ರಂದು ಮೆ: ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿಮಿಟೆಡ್, ದಾಂಡೇಲಿ ಸಂಸ್ಥೆಗೆ ಭೇಟಿ ನೀಡಿ, (1) ಕನಿಷ್ಟ ವೇತನ ಕಾಯ್ದೆ 1948, (2) ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1970

(3) ಉಪಧನ ಪಾವತಿ ಕಾಯ್ದೆ 1972 (4) ಸಮಾನ ವೇತನ ಪಾವತಿ ಕಾಯ್ದೆ 1976 (5) ಬೋನಸ್ ಪಾವತಿ ಕಾಯ್ದೆ 1965 (6) ಕರ್ನಾಟಕ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯ್ದೆ 1946 (7) ಕರ್ನಾಟಕ ಕೈಗಾರಿಕಾ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬ ರಜಗಳು) ಕಾಯ್ದೆ 1963 ಅಡಿಯಲ್ಲಿ ತಪಾಸಣೆಯನ್ನು ನಡೆಸಲಾಗಿರುತ್ತದೆ. ಕಾರ್ಮಿಕರ ಬೇಡಿಕೆಗಳ ಸಂಬಂಧ ದಿ: 29/3/2012 ರಂದು ಕೈಗಾರಿಕಾ ವಿವಾದಗಳ ಕಾಯ್ದೆ 1947 ರ ಪರಿಚ್ಛೇದ 12 (3) ಮತ್ತು 18 (3) ರಡಿಯಲ್ಲಿ ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘಗಳ ಜಂಟಿ ಸಂಧಾನ ಸಮಿತಿ ಮಧ್ಯೆ ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ, ಬೆಳಗಾವಿ ಇವರ ಸಮ್ಮುಖದಲ್ಲಿ ತ್ರಿಪಕ್ಷೀಯ ಒಪ್ಪಂದ ಏರ್ಪಟ್ಟಿರುತ್ತದೆ. ಸದರಿ ಒಪ್ಪಂದದಲ್ಲಿ ವೇತನ ಹೆಚ್ಚಳ, ತಾತ್ಕಾಲಿಕ ಕೆಲಸಗಾರರ ಖಾಯಂಗೊಳಿಸುವಿಕೆ, ಉತ್ಪಾದನೆ ಮತ್ತು ಇತರೆ ಸೇವಾ ಷರತ್ತುಗಳು ಒಳಪಟ್ಟಿರುವುದಲ್ಲದೇ ತಪಾಸಣೆ ಸಂದರ್ಭದಲ್ಲಿ ಕಂಡು ಬಂದ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಂಡಿರುವ ಅಂಶಗಳು ಸಹ ಒಳಗೊಂಡಿರುತ್ತವೆ.

ಅಲ್ಲದೇ 400 ತಾತ್ಕಾಲಿಕ ಕಾರ್ಮಿಕರ ಸೇವೆಯನ್ನು ಹಂತ ಹಂತವಾಗಿ ದಿನಾಂಕ: 1/7/2015 ರೊಳಗಾಗಿ ಸೇವೆಯಲ್ಲಿ ಸಕ್ರಮಗೊಳಿಸುವುದಾಗಿ ಸಹ ಆಡಳಿತವರ್ಗ ಒಪ್ಪಿಕೊಂಡಿರುತ್ತದೆ. ಎಲ್ಲಾ ತಾತ್ಕಾಲಿಕ ಮತ್ತು

ಗುತ್ತಿಗೆ ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿ ಮಾಡಲು ಸಹ ಒಪ್ಪಲಾಗಿರುತ್ತದೆ.

ಗುತ್ತಿಗೆದಾರರು ಗುತ್ತಿಗೆ ಕಾರ್ಮಿಕರಿಗೆ ವೇತನ ಪಾವತಿ ಕಾಯ್ದೆ 1936 ರನ್ವಯ ವೇತನವನ್ನು ಪಾವತಿ ಮಾಡುತ್ತಿದ್ದು, ವೇತನ ಸರಿಯಾಗಿ ಸಂದಾಯವಾಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಲು ಪ್ರಧಾನ ಮಾಲೀಕರು ವೇತನ ವಹಿಗಳನ್ನು ದೃಢೀಕರಿಸುತ್ತಿದ್ದಾರೆ.

**ಉತ್ತರ ಕನ್ನಡ ಜಿಲ್ಲೆಯಲ್ಲಿ ಕಲ್ಲು ಮರಳು ಗಣಿಗಾರಿಕೆ**

**919(959); ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ವಿಭಾಗದಲ್ಲಿ ಕಾರ್ಯಚರಣೆಯಲ್ಲಿರುವ ಕಲ್ಲು-ಮರಳು ಗಣಿಗಾರಿಕೆ ಹಾಗೂ (Laterite) ಕೆಂಪುಕಲ್ಲು ಗಣಿ ಗಾರಿಕೆಗಳೆಷ್ಟು?

ಆ) ಕಲ್ಲು, ಮರಳು ಹಾಗೂ ಕೆಂಪುಕಲ್ಲು ಗಣಿಗಾರಿಕೆಯಿಂದ ಅರಣ್ಯ ಇಲಾಖೆಗೆ ಆಗುತ್ತಿರುವ ಆದಾಯ ಮತ್ತು ವೆಚ್ಚ ಎಷ್ಟು?

ಇ) ಎಷ್ಟು ಜನ ಅಥವಾ ಸಂಸ್ಥೆಗಳಿಗೆ ಅರಣ್ಯ ವಿಭಾಗವಾರು ಪರವಾನಿಗೆ ನೀಡಲ್ಪಟ್ಟಿದೆ; (ಅದರ ಹೆಸರು, ವಿಳಾಸ ಹಾಗೂ ನಡೆಸುತ್ತಿರುವ ಗಣಿಕಾರಿಕೆ ಕುರಿತು ಸಂಪೂರ್ಣ ವಿವರ ನೀಡುವುದು) ಹಾಗೂ ಆದಾಯ ಮತ್ತು ವೆಚ್ಚ ಕುರಿತು 2007 ರಿಂದ 2013ರ ವಾರ್ಷಿಕ ವರದಿ ನೀಡುವುದು.

**ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಉತ್ತರ ಕನ್ನಡ ಜಿಲ್ಲೆಯ (ಕೆನರಾ ವೃತ್ತದ) ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಕಲ್ಲು-ಮರಳು ಹಾಗೂ ಕೆಂಪುಕಲ್ಲು ಗಣಿಗಾರಿಕೆಗಾಗಿ 2 ಗಣಿಗುತ್ತಿಗೆಗಳು ಮಂಜೂರಾಗಿವೆ. ಅದರಲ್ಲಿ 1 ಮರಳು ಗಣಿಗಾರಿಕೆಯು ಕಾರ್ಯಾಚರಣೆಯಲ್ಲಿದೆ.

ಆ) ಕಲ್ಲು ಮತ್ತು ಮರಳು ಗಣಿಗುತ್ತಿಗೆಗಳಿಂದ ಸಂಗ್ರಹವಾಗುವ ರಾಜಧನವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಜಮೆಯಾಗಿರುತ್ತದೆ. ಅದರ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ವರ್ಷ | ಸಂಗ್ರಹವಾದ ರಾಜಧನ (₹ ಗಳಲ್ಲಿ) |
|---|---|---|
| 1 | 2010–11 | 12000 |
| 2 | 2011–12 | 45600 |
| 3 | 2012–13 | 257700 |
| | ಒಟ್ಟು | **315300** |

ಇ)

| ಅ.ಸಂ. | ವಿಭಾಗ | ವ್ಯಕ್ತಿ/ಸಂಸ್ಥೆ ಹೆಸರು |
|---|---|---|
| 1 | ಕಾರವಾರ | ಶ್ರೀ ಬಿ.ಟಿ. ನಾಯ್ಕ. ಬೇಲೇಕೇರಿ, ಅಂಕೋಲಾ.<br>ಅರಣ್ಯ (ಸಂರಕ್ಷಣೆ) ಕಾಯ್ದೆ, 1980ರಂತೆ ಕೇಂದ್ರ ಸರ್ಕಾರದಿಂದ ಮರಳು ಕ್ವಾರಿಗಾಗಿ ಅಂಕೋಲ ತಾಲ್ಲೂಕು ಡೋಂಗ್ರಿ ಗ್ರಾಮದ ಸ.ನಂ. 81ರಲ್ಲಿ 0.49ಹೆ. ಮಂಜೂರಾಗಿರುತ್ತದೆ. |
| 2 | ಕಾರವಾರ | ಮೆ॥ ರಾಮಶ್ರೀ ಕನಸ್ಟ್ರಕ್ಷನ್ಸ್, ಕಾರವಾರ.<br>ಅರಣ್ಯ (ಸಂರಕ್ಷಣೆ) ಕಾಯ್ದೆ, 1980ರಂತೆ ಕೇಂದ್ರ ಸರ್ಕಾರದಿಂದ ಕಲ್ಲು ಕ್ವಾರಿಗಾಗಿ ಕಾರವಾರ ತಾಲ್ಲೂಕು ಅರಗ ಗ್ರಾಮದ ಸ.ನಂ. 52ಎರಲ್ಲಿ 0.494 ಹೆ. ಮಂಜೂರಾಗಿರುತ್ತದೆ. ಆದರೆ ಈ ಗಣಿಗಾರಿಕೆಯು ಕಾರ್ಯನಿರ್ವಹಿಸುತ್ತಿರುವುದಿಲ್ಲ. |

**ಬೀದರ್ ಜಿಲ್ಲೆಯಲ್ಲಿ ನೀಡಿರುವ ಕೃಷಿಯೇತರ ಅನುಮತಿಗಳು**

**1038; ಶ್ರೀ ರಘುನಾಥರಾವ್ ಮಾಲ್ಕಾಪೂರೆ (ವಿ.ಸ.ಕ್ಷೇತ್ರ)**

**ಅ)** ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಜನ ಅರ್ಜಿದಾರರಿಗೆ ಎನ್.ಎ. ಅನುಮತಿಗಳನ್ನು (ಕೃಷಿಯೇತರ ಭೂ ಅನುಮತಿ) ನೀಡಲಾಯಿತು. ಇವರುಗಳು ಅರ್ಜಿ ಸಲ್ಲಿಸಿದ ದಿನಾಂಕ ಮತ್ತು ಎನ್.ಎ. ಅನುಮತಿ ನೀಡಿದ ದಿನಾಂಕಗಳ ವಿವರಗಳೇನು (ಎನ್.ಎ. ಅನುಮತಿ ಪಡೆದುಕೊಂಡಿರುವವರ ಹೆಸರು ವಿಳಾಸಗಳ ಮಾಹಿತಿಯನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ–ಅಂಶಗಳಲ್ಲಿ ಒದಗಿಸುವುದು)

**ಆ)** ಜಿಲ್ಲೆಯಲ್ಲಿ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮೇಲ್ಕಂಡ ಅವಧಿಯಲ್ಲಿ ಒಮ್ಮೆ ನೀಡಿದ್ದ ಎನ್.ಎ. ಅನುಮತಿಯನ್ನು ಅದೇ ಅಧಿಕಾರಿಯು ರದ್ದುಪಡಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು? (ಇಂತಹ ಪ್ರಕರಣಗಳ ಹೆಸರು, ವಿಳಾಸದ ಮಾಹಿತಿಯನ್ನು ಒದಗಿಸುವುದು)

**ಇ)** ಒಮ್ಮೆ ಅನುಮತಿಯನ್ನು ನೀಡಿ ವರ್ಷಗಳು ಕಳೆದ ನಂತರ ಮತ್ತೆ ಅದೇ ಪ್ರಾಧಿಕಾರಿಯು ಅನುಮತಿಯನ್ನು ರದ್ದುಪಡಿಸಲು ಕಾನೂನಿನಲ್ಲಿ ಅವಕಾಶವಿದೆಯೇ? ಹಾಗಿದ್ದಲ್ಲಿ, ಈ ವಿಷಯದಲ್ಲಿ ಇರುವ ನಿಯಮಗಳೇನು?

**ಈ)** ಜಿಲ್ಲೆಯಲ್ಲಿ ಇಂತಹ ಅನೇಕ ಪ್ರಕರಣಗಳಿದ್ದು, ಇದರಿಂದಾಗಿ ಸಾರ್ವಜನಿಕರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇಂತಹ ಕ್ರಮಗಳನ್ನು ಕೈಗೊಂಡ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುವುದು?

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

**ಅ)** ಭೂ ಪರಿವರ್ತನೆಗಾಗಿ ಬೀದರ್ ಜಿಲ್ಲೆಯಲ್ಲಿ ಒಟ್ಟು 66 ಪ್ರಕರಣಗಳಿಗೆ ಅನುಮತಿ ನೀಡಲಾಗಿದೆ. ವಿಧಾನಸಭಾ ಕ್ಷೇತ್ರವಾರು ಪ್ರತ್ಯೇಕವಾದ ಪಟ್ಟಿ ಲಗತ್ತಿಸಿದೆ.

**ಆ)** ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.

**ಇ)** ಭೂ ಪರಿವರ್ತನೆ ಮಂಜೂರಾತಿಯಲ್ಲಿ ವಿಧಿಸಿದ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ನೀಡಲಾದ ಅನುಮತಿ ರದ್ದುಪಡಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 24 ಮತ್ತು 25ರಡಿಯಲ್ಲಿ ಅವಕಾಶ ಇದೆ.

**ಈ)** ಇಲ್ಲ

# ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಭೂ ಪರಿವರ್ತನೆಗಾಗಿ ಅನುಮತಿ ನೀಡಿದ ಬಗ್ಗೆ ವಿವರ ಬೀದರ ದಕ್ಷಿಣ ಕ್ಷೇತ್ರ

## 2010–11

| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಕೋರಿರುವ ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದ್ದೇಶ |
|---|---|---|---|---|---|---|---|---|
| | | ಸದರಿ ಸಾಲಿನಲ್ಲಿ ಭೂ ಪರಿವರ್ತನೆ ಪ್ರಕರಣಗಳಿಗೆ ಮಂಜೂರಿ ನೀಡಿರುವುದಿಲ್ಲ | | | | | | |
| | | | | 2011–12 | | | | |
| 1 | ಶ್ರೀ ಎನ್. ಕುಲದೀಪ ರೆಡ್ಡಿ ತಂದೆ ಎನ್. ಶ್ಯಾಮಸುಂದರ್ ರೆಡ್ಡಿ, ಸಾ: ಮಲಕಾಪುರ | 15.12.2011 | ಮಲ್ಕಾಪೂರ | 144/4 | 4–00 | ಸಂಖ್ಯೆ:ಕಂಭೂ.ಪ:ಸಿಆರ್–182/2011–12 | 27.04.2012 | ವಸತಿ |
| 2 | ಶ್ರೀ ಸಂಜೀವ ರೆಡ್ಡಿ ತಂದೆ ಗುರುನಾಥ ರೆಡ್ಡಿ ಸಾ: ಬೆಳ್ಳೂರ ತಾ: ಬೀದರ್ | 05.12.2011 | ಮಲ್ಕಾಪೂರ | 144/5 | 3–23 | ಸಂಖ್ಯೆ:ಕಂಭೂ.ಪ:ಸಿಆರ್–183/2011–12 | 27.04.2012 | ವಸತಿ |
| 3 | ಶ್ರೀ ಎನ್. ಕುಲದೀಪ ರೆಡ್ಡಿ ತಂದೆ ಎನ್ ಶ್ಯಾಮಸುಂದರ್ ರೆಡ್ಡಿ, ಸಾ: ಮಲಕಾಪುರ | 15.12.2011 | ಮಲ್ಕಾಪೂರ | 115/2 | 4–15 | ಸಂಖ್ಯೆ:ಕಂಭೂ.ಪ:ಸಿಆರ್–188/2011–12 | 27.04.2012 | ವಸತಿ |
| | | | | 2012–13 | | | | |
| 4 | ಶ್ರೀ ವೀರಶೆಟ್ಟಿ ತಂದೆ ಸಿದ್ದಪ್ಪಾ ಊಳ್ಳಾಗಡ್ಡಿ ಸಾ: ರಾಮಪೂರೆ ಕಾಲೋನಿ ಬೀದರ | 15.11.2011 | ಕೋಲಾರ(ಕೆ) | 265 ಮತ್ತು 266 | 0–20 ಮತ್ತು 01–31 | ಸಂಖ್ಯೆ:ಕಂಭೂ.ಪ:ಸಿಆರ್–24/2012–13 | 27.07.2012 | ವಸತಿ |
| 5 | ಶ್ರೀ ರಾಮಚಂದ್ರ ತಂದೆ ನರಸಪ್ಪಾ ಸಾ: ಮಲ್ಕಾಪೂರ ತಾ. ಬೀದರ್ | 15.11.2011 | ಕೋಲಾರ(ಕೆ) | 267 | 02–09 | ಸಂಖ್ಯೆ:ಕಂಭೂ.ಪ:ಸಿಆರ್–25/2012–13 | 27.07.2012 | ವಸತಿ |
| 6 | ಶ್ರೀ ಪ್ರಕಾಶ ತಂದೆ ಸಂಗಯ್ಯ ಸಾ: ಪನಸಾಲ ತಾಲೀಂ, ಬೀದರ್ | 15.11.2011 | ಕೋಲಾರ(ಕೆ) | 268 | 03–34 | ಸಂಖ್ಯೆ:ಕಂಭೂ.ಪ:ಸಿಆರ್–27/2012–13 | 27.07.2012 | ವಸತಿ |
| 7 | ಶ್ರೀ ಜಗನ್ನಾಥ ತಂದೆ ಗಂಗಾರಾಮ ಸಾ: ನಂದೋ ಕಾಲೋನಿ, ಬೀದರ್ | 15.11.2011 | ಕೋಲಾರ(ಕೆ) | 269 ಮತ್ತು 270 | 02–05 ಮತ್ತು 01–23 | ಸಂಖ್ಯೆ:ಕಂಭೂ.ಪ:ಸಿಆರ್–28/2012–13 | 27.07.2012 | ವಸತಿ |

# ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಭೂ ಪರಿವರ್ತನೆಗಾಗಿ ಅನುಮತಿ ನೀಡಿದ ಬಗ್ಗೆ ವಿವರ (ಬೀದರ್ ಕ್ಷೇತ್ರ)

| 2010–11 | | | | | | | | |
|---|---|---|---|---|---|---|---|---|
| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದ್ದೇಶ |
| 1 | ಶ್ರೀ ಗೌತಮ್ ತಂದೆ ಹಣಮಂತ ಕಾಂಬಳೆ ಸಾ: ಹುಮನಾಬಾದ | 25–03–2010 | ಮರಖಲ್ | 212/3ಸಿ | 0–21 | ಸಂಖ್ಯೆ:ಕಂಭೂ.ಪ:ಸಿಆರ್–07/2010–11 | 18–06–2010 | ವಾಣಿಜ್ಯ |
| 2 | ಶ್ರೀ ಅಯೂಬ ತಂದೆ ಅಬ್ದುಲ ಸಾ: ಬೀದರ್ | 15–05–2010 | ಮೈಲೂರ | 86/4 | 0–20 | ಸಂಖ್ಯೆ:ಕಂಭೂ.ಪ:ಸಿಆರ್–17/2010–11 | 27–08–2012 | ವಾಣಿಜ್ಯ |
| 2011–12 | | | | | | | | |
| ಸದರಿ ಸಾಲಿನಲ್ಲಿ ಭೂ ಪರಿವರ್ತನೆ ಪ್ರಕರಣಗಳಿಗೆ ಮಂಜೂರಿ ನೀಡಿರುವುದಿಲ್ಲ. | | | | | | | | |
| 2012–13 | | | | | | | | |
| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದೇಶ |
| 1 | ಶ್ರೀ ಸಿದ್ರಾಮ ತಂದೆ ಸೈಬಣ್ಣಾ ಸಾ: ನೌಬಾದ್ ತಾ: ಬೀದರ್ | 14–12–2011 | ನೌಬಾದ | 67/2 | 0–34 | ಸಂಖ್ಯೆ:ಕಂಭೂ.ಪ:ಸಿಆರ್–11/2012–13 | 04–08–2012 | ವಸತಿ |
| 2 | ಶ್ರೀಮತಿ ಲಕ್ಷ್ಮಿಬಾಯಿ ಗಂಡ ರೇವಣ್ಣಸಿದ್ದಪ್ಪಾ ಸಾ: ಶಿವನಗರ ದಕ್ಷಿಣ ಬೀದರ್ | 18–7–2011 | ಚಿದ್ರಿ | 93/1 | 0–13 | ಸಂಖ್ಯೆ:ಕಂಭೂ.ಪ:ಸಿಆರ್–23/2012–13 | 28–07–2012 | ವಸತಿ |
| 3 | ಶ್ರೀಮತಿ ಈಶ್ವರಿ ಗಂಡ ವೀರಶೆಟ್ಟಿ ಕುಂಚಿಗೆ ಸಾ: ಗುರುನಾನಕ ಕಾಲೋನಿ ಬೀದರ್ | 21–2–2012 | ಹಮೀಲಾಪುರ | 6/02 | 04–20 | ಸಂಖ್ಯೆ:ಕಂಭೂ.ಪ:ಸಿಆರ್–31/2012–13 | 22–08–2012 | ವಸತಿ |
| 4 | ಶ್ರೀ ರಾಜೇಶ್ವರ ತಂದೆ ವಿಠಯ್ಯ ಸಾ: ಕೆ.ಇ.ಬಿ ಕಾಲೋನಿ ಬೀದರ್ | 02–08–2012 | ರಸೂಲಾಬಾದ್ | 6/ಈ | 7–32 | ಸಂಖ್ಯೆ:ಕಂಭೂ.ಪ:ಸಿಆರ್–33/2012–13 | 01–09–2012 | ವಾಣಿಜ್ಯ |

# ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಭೂ ಪರಿವರ್ತನೆಗಾಗಿ ಅನುಮತಿ ನೀಡಿದ ಬಗ್ಗೆ ವಿವರ ಬಸವಕಲ್ಯಾಣ ಕ್ಷೇತ್ರ

## 2010–11

| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಕೋರಿರುವ ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದ್ದೇಶ |
|---|---|---|---|---|---|---|---|---|
| 1 | ಶ್ರೀ ಶರಪೋದ್ದೀನ್ ತಂದೆ ಕರೀಮಸಾಬ ಸಾ: ತ್ರಿಪೂರಾಂತ | 13.04.2010 | ತ್ರಿಪೂರಾಂತ | 30/2 | 04–12 | ಸಂಖ್ಯೆ: ಕಂಭೂಪ/ಸಿಆರ್–02/2010–11 | 30.12.2010 | ವಸತಿ |
| 2 | ಶ್ರೀ ಸ್ವಪನೀಲ್ ತಂದೆ ವಿಠಲರಾವ್ ಬಿರಾದಾರ ಸಾ: ಬಸವಕಲ್ಯಾಣ | 08.02.2010 | ತ್ರಿಪೂರಾಂತ | 222/2 | 6–02 | ಸಂಖ್ಯೆ: ಕಂಭೂಪ/ಸಿಆರ್–12/2010–11 | 25.12.2010 | ವಸತಿ |
| 3 | ಶ್ರೀ ನೂರಂದಪ್ಪಾ ತಂದೆ ಭೀಮಣ್ಣಾ ದಾಬಕೆ ಸಾ: ಬಸವಕಲ್ಯಾಣ | 13.08.2010 | ಬಸವಕಲ್ಯಾಣ | 133/4 | 5–00 | ಸಂಖ್ಯೆ: ಕಂಭೂಪ/ಸಿಆರ್–40/2010–11 | 07.02.2011 | ವಸತಿ |
| 4 | ಶ್ರೀಮತಿ ಶಕುಂತಲಾ ಗಂಡ ಸುರೇಶ ಸಾ: ಬಸವಕಲ್ಯಾಣ | 23.04.2010 | ತ್ರಿಪೂರಾಂತ | 98/5 | 2–32 | ಸಂಖ್ಯೆ: ಕಂಭೂಪ/ಸಿಆರ್–15/2010–11 | 07.02.2011 | ವಸತಿ |
| 5 | ಶ್ರೀ ಮೋಹನ ನಿತೀನ ತಂದೆ ನಾರಾಯಣಗೀರ ಸಾ: ಬಸವಕಲ್ಯಾಣ | 29.04.2010 | ತ್ರಿಪೂರಾಂತ | 14/2 | 4–21 | ಸಂಖ್ಯೆ: ಕಂಭೂಪ/ಸಿಆರ್–16/2010–11 | 05.02.2011 | ವಸತಿ |
| 6 | ಶ್ರೀ ಮಾಣಿಕ ತಂದೆ ಶಿವರಾಮ ಸಾ: ತ್ರಿಪೂರಾಂತ ತಾ: ಬಸವಕಲ್ಯಾಣ | 23.08.2010 | ತ್ರಿಪೂರಾಂತ | 100/3 | 2–18 | ಸಂಖ್ಯೆ: ಕಂಭೂಪ/ಸಿಆರ್–89/2010–11 | 18.04.2011 | ವಸತಿ |
| 7 | ಶ್ರೀಮತಿ ನಿರ್ಮಲಾಬಾಯಿ ಗಂಡ ಸಿದ್ರಮಪ್ಪಾ ಖೂಬಾ ಸಾ: ತ್ರಿಪುರಾಂತ ತಾ: ಬಸವಕಲ್ಯಾಣ | 08.04.2010 | ತ್ರಿಪೂರಾಂತ | 139/4 | 6–00 | ಸಂಖ್ಯೆ: ಕಂಭೂಪ/ಸಿಆರ್–11/2010–11 | 21.05.2011 | ವಸತಿ |
| | | | **2011–12** | | | | | |
| 1 | ಶ್ರೀ ತಂತಪ್ಪಾ ತಂದೆ ರಾಮಣ್ಣಾ<br>2. ಶ್ರೀ ಬಾಬು ತಂದೆ ಮುರಗೆಪ್ಪಾ,<br>3. ಶ್ರೀಮತಿ ಗಂಗಾಬಾಯಿ ಗಂಡ ಖೋಬಣ್ಣಾ,<br>4. ಖೋಬಳ್ಳಾ ತಂದೆ ಮಾರುತಿ,<br>5. ಶ್ರೀ ಗೋವಿಂದ ತಂದೆ ಮಾರುತಿ,<br>6. ಶ್ರೀ ವೆಂಕಟ ಸಾ: ತ್ರಿಪುರಾಂತ | 02.12.2010 | ತ್ರಿಪೂರಾಂತ | 124 | 14–27 | ಸಂಖ್ಯೆ: ಕಂಭೂಪ/ಸಿಆರ್–06/2011–12 | 06.08.2012 | ಕೈಗಾರಿಕಾ |
| 2 | ಶ್ರೀ ಮಹಮ್ಮದ್ ಯೂಸುಫ್ ತಂದೆ ರಾಜಾಸಾಬ ಗೋಬರೆ ಸಾ: ಬಸವಕಲ್ಯಾಣ | 07.02.2011 | ಯದಲಾಪುರ | 41/1(41/3) | 03–06 | ಸಂಖ್ಯೆ: ಕಂಭೂಪ/ಸಿಆರ್–66/2011–12 | 24.08.2012 | ವಸತಿ |
| 3 | ಶ್ರೀ ಸೈಯದ್ ಅನುವರುಲ್ಲಾ ಹುಸೇನಿ ಮತ್ತು ಶ್ರೀ ಸೈದ್ ಸೈಫುಲ್ಲಾ ಹುಸೇನಿ ತಂದೆ ಸೈಯದ್ ಅನುವರುಲ್ಲಾ ಸಾ: ಯದಲಾಪೂರ | 04.02.2011 | ಬಸವಕಲ್ಯಾಣ | 39 | 01–29 | ಸಂಖ್ಯೆ: ಕಂಭೂಪ/ಸಿಆರ್–67/2011/12 | 01.09.2012 | ವಸತಿ |
| 4 | ಶ್ರೀ ಆಶೀಫಾ ಬೇಗಂ ಗಂಡ ಸೈಯದ್ ಸಪ್ದರ ಅಲಿ ಸಾ: ಬಸವಕಲ್ಯಾಣ | 07.02.2011 | ಯದಲಾಪುರ | 39/4 | 01–16 | ಸಂಖ್ಯೆ: ಕಂಭೂಪ/ಸಿಆರ್/88/2011–12 | 22.08.2012 | ವಸತಿ |

| | | | | | | | | |
|---|---|---|---|---|---|---|---|---|
| 5 | ಶ್ರೀಮತಿ ಶಕುಂತಲಾ ಗಂಡ ಸಂಗಶೆಟ್ಟಿಪ್ಪಾ ಸಾ: ಬಸವಕಲ್ಯಾಣ | 03.05.2011 | ಖಾನಾಪುರ(ಕೆ) | 6/3 | 04–00 | ಸಂಖ್ಯೆ: ಕಂಭೂಪ/ಸಿಆರ್/89/2011–12 | 22.08.2012 | ವಸತಿ |
| 6 | ಶ್ರೀ ರಘುನಾಥ ತಂದೆ ಗುರುನಾಥ ಸಾ: ತ್ರಿಪೂರಾಂತ, ತಾ: ಬಸವಕಲ್ಯಾಣ | 03.02.2011 | ತ್ರಿಪೂರಾಂತ | 125/5 | 0–21 | ಸಂಖ್ಯೆ: ಕಂಭೂಪ/ಸಿಆರ್–91/2011–12 | 31.08.2012 | ವಸತಿ |
| 7 | ಶ್ರೀಮತಿ ಖೈರುನ್ನಿಸಾ ಗಂಡ ರಾಜೇಕಾಣ, 2. ಶ್ರೀಮತಿ ಹುರುನ್ನಿಸಾ ಗಂಡ ಯುಸೂಪಮಿಯ್ಯಾ, 3. ಅಮ್ಜದ್ ಅಲಿಖಾನ ತಂದೆ ಅಹಮ್ಮದ್ ಖಾನ ಸಾ: ತ್ರಿಪೂರಾಂತ | 23.11.2011 | ತ್ರಿಪೂರಾಂತ | 98/12 | 0–27 | ಸಂಖ್ಯೆ: ಕಂಭೂಪ/ಸಿಆರ್–09/2011–12 | 29.06.2012 | ವಸತಿ |
| 8 | ಶ್ರೀ ನಾರಾಯಣ ತಂದೆ ಪಾಂಡಪ್ಪಾ ಬೋಕ್ಕೆ ಸಾ: ತ್ರಿಪೂರಾಂತ ತಾ: ಬಸವಕಲ್ಯಾಣ | 03.01.2011 | ತ್ರಿಪೂರಾಂತ | 1255/7 | 01–06 | ಸಂಖ್ಯೆ: ಕಂಭೂಪ/ಸಿಆರ್–38/2011–12 | 27.04.2012 | ವಸತಿ |
| 9 | ಶ್ರೀ ನಾರಾಯಣ ತಂದೆ ಪಾಂಡಪ್ಪಾ ಬೋಕ್ಕೆ ಸಾ: ತ್ರಿಪೂರಾಂತ ತಾ: ಬಸವಕಲ್ಯಾಣ | 03.01.2011 | ತ್ರಿಪೂರಾಂತ | 125/2 | 01–06 | ಸಂಖ್ಯೆ: ಕಂಭೂಪ/ಸಿಆರ್/39/2011–12 | 27.04.2012 | ವಸತಿ |
| 10 | ಶ್ರೀಮತಿ ಪುಷ್ಪಾವತಿ ಗಂಡ ಶರಣಪ್ಪ ಸಾ: ಶಾಯಪೂರ, ತಾ: ಬಸವಕಲ್ಯಾಣ | 13.12.2010 | ತ್ರಿಪೂರಾಂತ | 185/1 | 01–25 | ಸಂಖ್ಯೆ: ಕಂಭೂಪ/ಸಿಆರ್–44/2011–12 | 22.08.2012 | ವಸತಿ |
| 11 | ಶ್ರೀ ಸಂತೋಷ ತಂದೆ ರಾಜಾರಾಮ ಮಹೇಂದ್ರಕರ್ ಸಾ: ಬಸವಕಲ್ಯಾಣ | 14.01.2011 | ತ್ರಿಪೂರಾಂತ | 118/3 | 0–20 | ಸಂಖ್ಯೆ: ಕಂಭೂಪ/ಸಿಆರ್54/2011–12 | 06.08.2012 | ವಸತಿ |
| 12 | ಶ್ರೀ ಸದಾನಂದ ತಂದೆ ರಾಜಾರಾಮ ಮಹೇಂದ್ರಕರ್ ಸಾ: ಬಸವಕಲ್ಯಾಣ | 03.02.2011 | ತ್ರಿಪೂರಾಂತ | 118/3 | 0–20 | ಸಂಖ್ಯೆ: ಕಂಭೂಪ/ಸಿಆರ್–55/2011–12 | 11.05.2012 | ವಸತಿ |
| 13 | ಶ್ರೀ ಅಣ್ಣೆಪ್ಪ ತಂದೆ ಕಾಶಪ್ಪಾ ಸಾ: ಮಂಠಾಳ, ತಾ: ಬಸವಕಲ್ಯಾಣ | 14.01.2011 | ಮಂಠಳಾ | 369/ಅ | 01–00 | ಸಂಖ್ಯೆ: ಕಂಭೂಪ/ಸಿಆರ್–57/2011–12 | 22.06.2012 | ವಸತಿ |
| 14 | ಶ್ರೀಮತಿ ಮಲ್ಲಮ್ಮ ಗಂಡ ಗುರುಲಿಂಗಯ್ಯ ಸಾ: ತ್ರಿಪುರಾಂತ ತಾ: ಬಸವಕಲ್ಯಾಣ | 12.01.2011 | ತ್ರಿಪೂರಾಂತ | 63/20 | 00–20 | ಸಂಖ್ಯೆ: ಕಂಭೂಪ/ಸಿಆರ್–125/2011–12 | 27.07.2012 | ವಸತಿ |
| 15 | ಶ್ರೀಮತಿ ನಿರ್ಮಲಾಬಾಯಿ ಗಂಡ ಸಿದ್ರಾಮಪ್ಪಖೂಬಾ ಸಾ: ಬಸವಕಲ್ಯಾಣ | 21.08.2011 | ತ್ರಿಪೂರಾಂತ | 88/1,4,5 | 5–04 | ಸಂಖ್ಯೆ: ಕಂಭೂಪ/ಸಿಆರ್–128/2011–12 | 06.06.2012 | ವಸತಿ |
| 16 | ಶ್ರೀಮತಿ ಪಾಷಾ ಬೇಗಂ ಶ್ರೀ ಫಿರೋಜಾ ಖಾನ್ ತಂದೆ ಮಸ್ತಾನಾ ಸಾಬ, ಸಾ: ಬಸವಕಲ್ಯಾಣ | 12.07.2011 | ಖಾನಾಪುರ | 4/3 | 7–38 | ಸಂಖ್ಯೆ: ಕಂಭೂಪ/ಸಿಆರ್–130/2011–12 | 22.08.2012 | ವಸತಿ |
| 17 | ಶ್ರೀ ಬಸವರಾಜ ತಂದೆ ಬೋಜಪ್ಪ ಕೊರಕೆ ಸಾ: ಬಿರಾದರ ಕಾಲೋನಿ, ಬೀದರ್ | 12.07.2011 | ಬಸವಕಲ್ಯಾಣ | 50/1 | 05/7 | ಸಂಖ್ಯೆ: ಕಂಭೂಪ/ಸಿಆರ್–1333/2011–12 | 25.08.2012 | ವಸತಿ |
| 18 | ಅಧ್ಯಕ್ಷರು/ಕಾರ್ಯದರ್ಶಿಗಳು, ಬಸವಕಲ್ಯಾಣ ಎಜುಕೇಷನ್ ಟ್ರಸ್ಟ್, ಬಸವಕಲ್ಯಾಣ | 07.04.2011 | ನಾರಾಯಣಪುರ | 473/3<br>473/4 | 1.27<br>1.30 | ಸಂಖ್ಯೆ: ಕಂಭೂಪ/ಸಿಆರ್–151/2011–12 | 27.07.2012 | ಶೈಕ್ಷಣಿಕ |

| | | | | | | | | |
|---|---|---|---|---|---|---|---|---|
| | | | | 473/5<br>472/1 | 2.15<br>3.18 | | | |
| 19 | ಶ್ರೀಮತಿ ನರೀಸ್ ಸುಲ್ತಾಣ್ ಗಂಡ ನಜಮೂದ್ದೀನ್ ಬಾಷಾ, ಸಾ: ಕೌಡಿಯಾಳ ತಾ: ಬಸವಕಲ್ಯಾಣ | 17.02.2011 | ಕೌಡಿಯಾಳ(ಎಸ್) | 16/5 | 1–12 | ಸಂಖ್ಯೆ: ಕಂಭೂಪ/ಸಿಆರ್–161/2011–12 | 16.05.2012 | ವಸತಿ |
| 20 | ಶ್ರೀ ವಿಜಯಕುಮಾರ ತಂದೆ ವೀರಣ್ಣ ಸಾ: ಕೌಡಿಯಾಳ ತಾ: ಬಸವಕಲ್ಯಾಣ | 23.08.2011 | ಕೌಡಿಯಾಳ(ಎಸ್) | 16/9 | 0–11 | ಸಂಖ್ಯೆ: ಕಂಭೂಪ/ಸಿಆರ್–164/2011–12 | 24.08.2012 | ವಾಣಿಜ್ಯ |
| | | | **2012–13** | | | | | |
| 1 | ಶ್ರೀಮತಿ ಶ್ರೀದೇವಿ ತಂದೆ ವಿನಾಯಕ ಗಣೇಶ ಸಾ: ಮುಡಬಿ, ತಾ: ಬಸವಕಲ್ಯಾಣ | 26.09.2012 | ಮುಡಬಿ | 240 | 01–000 | ಸಂಖ್ಯೆ: ಕಂಭೂಪ/ಸಿಆರ್–77/2012–13 | 06.02.2013 | ವಾಣಿಜ್ಯ |
| 2 | ಶ್ರೀ ಮಾಜೀದ ತಂದೆ ಅಹ್ಮದ್ ಹುಸೇನ ಜರೆಗರ ಮತ್ತು ಶ್ರೀ ಸಾಜೀದ ತಂದೆ ಅಹ್ಮದ್ ಹುಸೇನಿ ಜರೆಗರ | 16.10.2012 | ಮುಡಬಿ | 19/6 | 9–32 | ಸಂಖ್ಯೆ: ಕಂಭೂಪ/ಸಿಆರ್–92/2012–13 | 21.01.2013 | ಕೈಗಾರಿಕಾ |
| 3 | ಶ್ರೀ ಅಹ್ಮದ್ ಹುಸೇನ ತಂದೆ ರಹಮಾನ ಸಾಬ ಸಾ: ಬಸವಕಲ್ಯಾಣ | 09.10.2012 | ಮುಡಬಿ | 19/5 | 02–14 | ಸಂಖ್ಯೆ: ಕಂಭೂಪ/ಸಿಆರ್–93/2012–13 | 21.01.2013 | ಕೈಗಾರಿಕಾ |
| 4 | ಶ್ರೀ ಸಲೀಂ ತಂದೆ ಅಹ್ಮದ್ ಹುಸೇನ ಸಾ: ಬಸವಕಲ್ಯಾಣ | 12.01.2012 | ಮುಡಬಿ | 48/2 | 05–10 | ಸಂಖ್ಯೆ: ಕಂಭೂಪ/ಸಿಆರ್–122/2012–13 | 21.01.2013 | ಕೈಗಾರಿಕಾ |

# ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಭೂ ಪರಿವರ್ತನೆಗಾಗಿ ಅನುಮತಿ ನೀಡಿದ ಬಗ್ಗೆ ವಿವರ

## (ಹುಮನಾಬಾದ್ ಕ್ಷೇತ್ರ)

| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದ್ದೇಶ |
|---|---|---|---|---|---|---|---|---|
| **2010–11** | | | | | | | | |
| 1 | ಶ್ರೀ ಈಶ್ವರ ತಂದೆ ಈರಣ್ಣಾ ರಾಯವಣೆ ಸಾ: ಆರ್ದಶ ನಗರ ಗುಲ್ಬರ್ಗಾ | 19–2–2010 | ಬೇನಚೊಂಚೋಳ್ಳಿ | 190/4 | 11–05 | ಸಂಖ್ಯೆ: ಕಂ.ಭೂಪ.ಸಿಆರ್–33/2010–11 | 06–08–2012 | ವಸತಿ |
| 2 | ಶ್ರೀ ರಾಜೇಂದ್ರಕುಮಾರ ತಂದೆ ಶಿವಲಿಂಗಪ್ಪಾ ಮಾಲಿ ಪಾಟೀಲ್ ಸಾ: ನಿರ್ಣಾ ತಾ: ಹುಮನಾಬಾದ್ | 08–10–2010 | ನಿರ್ಣಾ | 469 | 0.15 | ಸಂಖ್ಯೆ: ಕಂ.ಭೂಪ.ಸಿಆರ್–101/2010–11 | 26–02–2011 | ವಾಣಿಜ್ಯ |
| 3 | ಶ್ರೀ ಇ. ರಮೇಶ ತಂದೆ ಗಂಗಯ್ಯಾ ಸಾ: ಗುಲ್ಬರ್ಗಾ | 21–06–2010 | ಮಾಣಿಕನಗರ | 1/2<br>1/3<br>1/4<br>5/1 | 5–00<br>11.06<br>8.00<br>1.00 | ಸಂಖ್ಯೆ: ಕಂ.ಭೂಪ.ಸಿಆರ್–59/2010–11 | 19–03–2011 | ವಸತಿ |
| **2011–12** | | | | | | | | |
| 1 | ಶ್ರೀ ಈರಪ್ಪಾ ತಂದೆ ಬಂಡೆಪ್ಪಾ ಜವಳಗಿ ಸಾ: ಮನ್ನಾಏಖೆಳ್ಳಿ, ಜಿಲ್ಲೆ: ಬೀದರ್ | 18–08–2011 | ಮನ್ನಾಏಖೆಳ್ಳಿ | 62/6 | 1–00 | ಸಂಖ್ಯೆ: ಕಂ.ಭೂಪ.ಸಿಆರ್–61/2011–12 | 06–08–2012 | ವಸತಿ |
| 2 | ಅಧ್ಯಕ್ಷರು ಮಾಣಿಕ ಪ್ರಭು ಎಜುಕೇಶನ್ ಸೋಸೈಟಿ, ಮಾಣಿಕನಗರ ತಾ: ಹುಮನಾಬಾದ್ | 25–11–2011 | ಮಾಣಿಕನಗರ | 86 | 14–20 | ಸಂಖ್ಯೆ: ಕಂ.ಭೂಪ.ಸಿಆರ್–13/2011–12 | 01–09–2012 | ಶೈಕ್ಷಣಿಕ |
| 3 | ಶ್ರೀ ಪದ್ಮಾಕರ ತಂದೆ ಶಂಕರ ರಾವ್ ಪಾಟೀಲ್ ಸಾ: ಹುಮನಾಬಾದ್ | 15–10–2010 | ಹುಮನಾಬಾದ್ | 159/6 | 1–00 | ಸಂಖ್ಯೆ: ಕಂ.ಭೂಪ.ಸಿಆರ್–59/2011–12 | 04–08–2012 | ವಸತಿ |
| 4 | ಶ್ರೀಮತಿ ಅಲಪನಾ ಗಂಡ ಪ್ರಕಾಶ ಪಾಟೀಲ್ ಸಾ: ಘಾಟಬೋರಾಳ ತಾ: ಹುಮನಾಬಾದ್ | 04–03–2011 | ಘಾಟಬೋರಾಳ | 425/1 | 3–00 | ಸಂಖ್ಯೆ: ಕಂ.ಭೂಪ.ಸಿಆರ್–65/2011–12 | 06–06–2012 | ವಸತಿ |
| 5 | ಶ್ರೀ ಸಂಜೀವಕುಮಾರ ತಂದೆ ರಾಮಚಂದ್ರಾವ್ ಮದರಗಾಂವ ಸಾ: ಚಿಟಗುಪ್ಪಾ | 26–08–2011 | ಚಿಟಗುಪ್ಪಾ | 190/6/2,1/90/6/3 ಮತ್ತು 190/6/4 | 05–03 | ಸಂಖ್ಯೆ: ಕಂ.ಭೂಪ.ಸಿಆರ್–97/2011–12 | 10–04–2012 | ವಸತಿ |
| 6 | ಶ್ರೀ ವಿಜಯಕುಮಾರ ತಂದೆ ರಾಮಚಂದ್ರರಾವ್‌ಚಿದ್ರಿ ಸಾ: ಧೂಮ್ಮಸಾಗರ ತಾ: ಹುಮನಾಬಾದ್ | 05–09–2011 | ಧೂಮ್ಮಸಾಗರ | 5/6 | 2–00 | ಸಂಖ್ಯೆ: ಕಂ.ಭೂಪ.ಸಿಆರ್–197/2011–12 | 24–05–2012 | ವಸತಿ |

| | | | | | | | | |
|---|---|---|---|---|---|---|---|---|
| 7 | ಶ್ರೀಮತಿ ರತ್ನಪ್ರಭ ಗಂಡ ವಿಜಯಕುಮಾರ ಸಾ: ಘಾಟಬೋರಾಳ ತಾ: ಹುಮನಾಬಾದ್ | 16–05–2011 | ಘಾಟಬೋರಾಳ | 425/4 | 3–00 | ಸಂಖ್ಯೆ: ಕಂ.ಭೂಪ.ಸಿಆರ್–154/2011/12 | 06–06–2012 | ವಸತಿ |
| 8 | ಶ್ರೀ ರುರುವೀತ್ ಸಿಂಗ್ ತಂದೆ ರಾಜೇಂದ್ರಸಿಂಗ್ ಸಾ: ಬೀದರ್ | 05–09–2011 | ಮಾಣಿಕನಗರ | 5/3 | 05–32 | ಸಂಖ್ಯೆ: ಕಂ.ಭೂಪ.ಸಿಆರ್–198/2011–12 | 24–05–2012 | ವಸತಿ |
| 9 | ಶ್ರೀಮತಿ ಶಕುಂತಲಾ ಗಂಡ ಅಣ್ಣಾರಾವ ಪಾಟೀಲ ಸಾ: ಹುಣಕುಲ್ | 17–11–2011 | ಹುಮನಾಬಾದ್ | 141/9 | 1–18 | ಸಂಖ್ಯೆ: ಕಂ.ಭೂಪ.ಸಿಆರ್–199/2011–12 | 24–05–2012 | ವಸತಿ |
| **2012–13** | | | | | | | | |
| 1 | ಶ್ರೀ ಜಗನ್ನಾಥ ತಂದೆ ಶಂಕರರಾವ ಚಿದ್ರಿ ಸಾ: ಹುಮನಾಬಾದ್ | 27–11–2012 | ಹುಮನಾಬಾದ | 376/2<br>376/2 | 0–25<br>0–17 | ಸಂಖ್ಯೆ: ಕಂ.ಭೂಪ.ಸಿಆರ್–30/2012–13 | 22–08–2012 | ವಾಣಿಜ್ಯ<br>ವಸತಿ |
| 2 | ಶ್ರೀ ಪ್ರಕಾಶ್ ತಂದೆ ಸುಧಾಕರರಾವ ಕುಲಕರ್ಣಿ ಸಾ: ಹುಮನಾಬಾದ್ | 24–03–2012 | ಮಾಣಿಕನಗರ | 10/6 | 02–03 | ಸಂಖ್ಯೆ: ಕಂ.ಭೂಪ.ಸಿಆರ್–34/2012–13 | 31–08–2012 | ವಸತಿ |
| 3 | ಶ್ರೀ ನಾಗರಾಜ ತಂದೆ ಶಂಕರರಾವ ಪೋಲಿಸ ಪಾಟೀಲ ಸಾ: ಕೋಂಡಂಪಲ್ಲಿ ತಾ: ಚಿಂಚೋಳಿ | 17–02–2012 | ಹುಮನಾಬಾದ್ | 141/9 | 01–14 | ಸಂಖ್ಯೆ: ಕಂ.ಭೂಪ.ಸಿಆರ್–35/2012–13 | 31–08–2012 | ವಾಣಿಜ್ಯ |
| 4 | ಶ್ರೀಮತಿ ಶರಣಮ್ಮಾ ಗಂಡ ಶಿವಲಿಂಗಪ್ಪಾ ಸಾ: ಹುಮನಾಬಾದ್ | 27–02–2012 | ಹುಮನಾಬಾದ್ | 374 | 3–27 | ಸಂಖ್ಯೆ: ಕಂ.ಭೂಪ.ಸಿಆರ್–36/2012–13 | 31–08–2012 | ವಸತಿ |

# ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಭೂ ಪರಿವರ್ತನೆಗಾಗಿ ಅನುಮತಿ ನೀಡಿದ ಬಗ್ಗೆ ವಿವರ (ಔರಾದ್ ಕ್ಷೇತ್ರ)

**2010–11**

ಸದರಿ ಸಾಲಿನಲ್ಲಿ ಭೂಪರಿವರ್ತನೆ ಪ್ರಕರಣಗಳಿಗೆ ಮಂಜೂರಿ ನೀಡಿರುವುದಿಲ್ಲ.

**2011–12**

ಸದರಿ ಸಾಲಿನಲ್ಲಿ ಭೂಪರಿವರ್ತನೆ ಪ್ರಕರಣಗಳಿಗೆ ಮಂಜೂರಿ ನೀಡಿರುವುದಿಲ್ಲ.

**2012–13**

| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದ್ದೇಶ |
|---|---|---|---|---|---|---|---|---|
| 1 | ಶ್ರೀ ವಿಲ್ಸನ್ ತಂದೆ ಜೋಸೆಫ್<br>ಸಾ: ಮಂಗಲಪೇಟ ಬೀದರ್ | 22–09–2011 | ಠಾಣಾಕೂಶನೂರ | 144/4 | 04–33 | ಸಂಖ್ಯೆ:ಕಂ.ಭೂ.ಪ.ಸಿಆರ್–10/2012–13 | 05–07–2012 | ಕೈಗಾರಿಕೆ |

# ಬೀದರ್ ಜೇಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಭೂ ಪರಿವರ್ತನೆಗಾಗಿ ಅನುಮತಿ ನೀಡಿದ ವಿವರ (ಭಾಲ್ಕಿ ಕ್ಷೇತ್ರ)

| ಕ್ರ.ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ಅರ್ಜಿ ದಿನಾಂಕ | ಗ್ರಾಮದ ಹೆಸರು | ಗ್ರಾಮದ ಸ.ನಂ. | ವಿಸ್ತೀರ್ಣ | ಭೂ ಪರಿವರ್ತನೆ ಮಂಜೂರಿ ನೀಡಿದ ಸಂಖ್ಯೆ | ದಿನಾಂಕ | ಉದ್ದೇಶ |
|---|---|---|---|---|---|---|---|---|
| **2010–11** | | | | | | | | |
| ಸದರಿ ಸಾಲಿನಲ್ಲಿ ಭೂಪರಿವರ್ತನೆ ಪ್ರಕರಣಗಳಿಗೆ ಮಂಜೂರಿ ನೀಡಿರುವುದಿಲ್ಲ. | | | | | | | | |
| **2011–12** | | | | | | | | |
| 1 | ಶ್ರೀ ಶ್ರೀಮತಿ ಕಸ್ತೂರಬಾಯಿ ಗಂಡ ವಿಜಯ ಕುಮಾರ ಸಾ: ಬಾವರ್ಚಿ ಗಲ್ಲಿ ಬಾಲ್ಕಿ | 15–10–2011 | ಭಾಲ್ಕಿ | 343/1 | 2–20 | ಸಂಖ್ಯೆ:ಕಂ.ಭೂ.ಪ.ಸಿಆರ್–175/2011–12 | 29–06–2012 | ವಸತಿ |
| 2 | ಶ್ರೀ ಜಯರಾಜ ತಂದೆ ಕಾಶಪ್ಪಾ ಖಂಡ್ರೆ ಸಾ: ಭಾಲ್ಕಿ | 29–10–2011 | ಭಾಲ್ಕಿ | 81/2 | 5–33 | ಸಂಖ್ಯೆ:ಕಂ.ಭೂ.ಪ.ಸಿಆರ್–201/2011–12 | 30–07–2012 | ವಸತಿ |
| 3 | 1) ಶ್ರೀ ಭರತ ತಂದೆ ಕಾಶಪ್ಪಾ<br>2) ಶ್ರೀಮತಿ ಸುಶೀಲಾ ಬಾಯಿ ಗಂಡ ಕಾಶಪ್ಪ<br>3) ಶ್ರೀಮತಿ ರೇಣುಕಾ ಗಂಡ ಭರತ ಖಂಡ್ರೆ<br>ಸಾ: ಭಾಲ್ಕಿ | 30–01–2012 | ಭಾಲ್ಕಿ | 208/2 | 7–02 | ಸಂಖ್ಯೆ:ಕಂ.ಭೂ.ಪ.ಸಿಆರ್–203/2011–12 | 03–07–2012 | ವಸತಿ |
| 4 | ಶ್ರೀಮತಿ ಲತಾ ಗಂಡ ದತ್ತುಕುಮಾರ ಖಂಡ್ರೆ ಸಾ: ಭಾಲ್ಕಿ | 31–10–2011 | ಭಾಲ್ಕಿ | 203/2 | 0–10 | ಸಂಖ್ಯೆ:ಕಂ.ಭೂ.ಪ.ಸಿಆರ್–204/2011–12 | 10–09–2012 | ವಾಣಿಜ್ಯ |
| **2012–13** | | | | | | | | |
| 1 | ಶ್ರೀ ಗುಂಡಪ್ಪಾ ತಂದೆ ಅಣ್ಣೇಪ್ಪಾ ಬಿರಾದ್ ಸಾ: ಡೋಣಗಾಪೂರ ತಾ: ಭಾಲ್ಕಿ | 31–03–2011 | ಹಲಬರ್ಗಾ | 159/3 | 1–00 | ಸಂಖ್ಯೆ:ಕಂ.ಭೂ.ಪ.ಸಿಆರ್–1/2012–13 | 13–12–2012 | ಕೈಗಾರಿಕೆ |

**ಎಚ್.ಡಿ. ಕೋಟೆ ತಾಲ್ಲೂಕಿನ ಏತ ನಿರಾವರಿ**

**1045; ಶ್ರೀ ಸಿದ್ದರಾಜು (ವಿ.ಸ.ಕ್ಷೇತ್ರ)**

**ಅ)** ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಒಟ್ಟು ಏತ ನೀರಾವರಿಗಳ ಸಂಖ್ಯೆ ಎಷ್ಟು;

**ಆ)** ಅವುಗಳ ಪೈಕಿ ಕಾರ್ಯ ನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು;

**ಇ)** ಸದರಿ ತಾಲ್ಲೂಕಿನಲ್ಲಿ ಬಹು ಉಪಯೋಗಿ ಏತ ನೀರಾವರಿ ಯೋಜನೆಗಳಲ್ಲಿ ಕೆಲವು ಶಿಥಿಲಗೊಂಡ, ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು;

**ಉ)** ಸದರಿ ತಾಲ್ಲೂಕಿನ ಇನ್ನೂ ಕೆಲವು ಏತ ನೀರಾವರಿಗಳು ವಿದ್ಯುತ್ ಸಮಸ್ಯೆಯನ್ನು ಎದುರಿಸುತ್ತಿದ್ದು, ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

**ಅ)** ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಜಲ ಸಂಪನ್ಮೂಲ ಇಲಾಖೆಯ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ತಾರಕ ಏತ ನೀರಾವರಿ ಯೋಜನೆ ಮಾತ್ರ ಇರುತ್ತದೆ.

**ಆ)** ತಾರಕ ಏತ ನೀರಾವರಿ ಯೋಜನೆಯು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ.

**ಇ)** ಈ ತಾಲ್ಲೂಕಿನಲ್ಲಿ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಇಂತಹ ಯಾವುದೇ ಯೋಜನೆಗಳು ಇರುವುದಿಲ್ಲ.

**ಈ)** ಉದ್ಭವಿಸುವುದಿಲ್ಲ.

ಉ) ತಾರಕ ಏತ ನೀರಾವರಿ ಯೋಜನೆಯು ಚಾಲನೆಯಲ್ಲಿದ್ದು, ಪ್ರಸ್ತುತ ಯಾವುದೇ ವಿದ್ಯುತ್ ಸಮಸ್ಯೆಯನ್ನು ಎದುರಿಸುತ್ತಿಲ್ಲ.

**ಆದಿವಾಸಿ ಜನಾಂಗದ ಸಮಸ್ಯೆಗಳು**

**1044; ಶ್ರೀ ಸಿದ್ದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಮೈಸೂರು ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಹಕ್ಕು ಪತ್ರಗಳನ್ನು ಪಡೆದ ಆದಿವಾಸಿಗಳ ಸಂಖ್ಯೆ ಎಷ್ಟು? ಒಟ್ಟು ಎಷ್ಟು ಅರ್ಜಿಗಳು ಸ್ವೀಕೃತಗೊಂಡಿವೆ; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನದ ನಿಧಾನಗತಿಯಿಂದ ಆದಿವಾಸಿಗಳ ಆರ್ಥಿಕ ಪ್ರಗತಿಗೆ ಅಡ್ಡಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು;

ಇ) ಅರಣ್ಯ ರಕ್ಷಣೆ ಮತ್ತು ವನ್ಯಜೀವಿಗಳಿಗಿರುವಂತೆ ಕಾನೂನು ಆದಿವಾಸಿಗಳಿಗೆ ಇಲ್ಲವೇ; ಕಾರಣವೇನು;

ಈ) ಆದಿವಾಸಿ ಜನಾಂಗದ ಬದುಕಿಗೆ ಬರೆ ಎಳೆದ ಅರಣ್ಯ ಮತ್ತು ಅರಣ್ಯ ಜೀವಿಗಳ ಸಂರಕ್ಷಣೆಗೆ ಆದ್ಯತೆ ನೀಡುವುದರ ಬದಲು, ಅರಣ್ಯ ಮತ್ತು ಆದಿವಾಸಿಗಳೆರಡು ಅಭಿವೃದ್ಧಿ ಹೊಂದುವಂತಹ ಮಸೂದೆ ಮತ್ತು ಯೋಜನೆಗಳು ಸರ್ಕಾರದ ಮುಂದಿದೆಯೆ?

**ಶ್ರೀ ಎಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**

ಅ) ಮೈಸೂರು ಜಿಲ್ಲೆಯ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಹಕ್ಕು ಪತ್ರಗಳನ್ನು ಕೋರಿ ಕಳೆದ 3 ವರ್ಷಗಳಲ್ಲಿ 5387 ಪರಿಶಿಷ್ಟ ಪಂಗಡದ ಅರ್ಜಿದಾರರಿಂದ ಅರ್ಜಿಗಳು ಬಂದಿದ್ದು, ಅವುಗಳಲ್ಲಿ 4832 ಅರ್ಜಿಗಳು ತಿರಸ್ಕೃತಗೊಂಡಿದ್ದು, 555 ಅರ್ಜಿಗಳನ್ನು ಮಾನ್ಯತೆ ಮಾಡಿ

ಹಕ್ಕು ಪತ್ರಗಳನ್ನು ನೀಡಲಾಗಿದೆ. ತಾಲ್ಲೂಕುವಾರು ವಿವರ ಅನುಬಂಧ–1ರಲ್ಲಿ ನೀಡಲಾಗಿದೆ.

**ಆ)** ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನವು ಪ್ರಗತಿಯಲ್ಲಿದ್ದು, ಆದಿವಾಸಿಗಳ ಆರ್ಥಿಕ ಪ್ರಗತಿಗೆ ಅರಣ್ಯ ಇಲಾಖೆಯಿಂದ ಯಾವುದೇ ಅಡ್ಡಿಯಾಗಿರುವುದಿಲ್ಲ.

**ಇ)** ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ, ಅಧಿಸೂಚನೆ ದಿನಾಂಕ:06/09/2012ರ ರೀತ್ಯಾ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ಮತ್ತು ನಿಯಮಗಳು 2008 (ನಿಯಮಗಳ ತಿದ್ದುಪಡಿ 2012)ರಲ್ಲಿ ತಿಳಿಸಿರುವ ಪ್ರಕಾರ ಗಿರಿಜನ ಹಾಡಿಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳಿಗೆ ವೈಯಕ್ತಿಕ ಹಕ್ಕುಗಳನ್ನು/ಸಮುದಾಯದ ಹಕ್ಕುಗಳನ್ನು ಮಾನ್ಯ ಮಾಡಲಾಗುತ್ತಿದೆ.

**ಈ)** ಇಲ್ಲ.

# ಅನುಬಂಧ–1

| ಕ್ರ.ಸಂ. | ತಾಲ್ಲೂಕಿನ ಹೆಸರು | ವೈಯಕ್ತಿಕ ಹಕ್ಕುಗಳು | | | | ಸಮುದಾಯ ಹಕ್ಕುಗಳು | | |
|---|---|---|---|---|---|---|---|---|
| | | ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ | ಅಂಗೀಕರಿಸಿ ಹಕ್ಕು ಪತ್ರಗಳನ್ನು ನೀಡಲಾದ ಸಂಖ್ಯೆ | ವಿಸ್ತೀರ್ಣ (ಎಕರೆಗಳಲ್ಲಿ) | ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ಅಂಗೀಕರಿಸಿ ಹಕ್ಕು ಪತ್ರಗಳನ್ನು ನೀಡಲಾದ ಸಂಖ್ಯೆ | ಇತ್ಯರ್ಥಗೊಳಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ |
| 1 | ಹೆಚ್.ಡಿ. ಕೋಟೆ | 3631 | 3238 | 393 | 112.37 | 57 | 14 | 43 |
| 2 | ಹುಣಸೂರು | 1311 | 1311 | – | – | 30 | – | 30 |
| 3 | ಪಿರಿಯಾಪಟ್ಟಣ | 179 | 17 | 162 | 74.30 | 15 | 5 | 10 |
| 4 | ನಂಜನಗೂಡು | 266 | 266 | – | – | 05 | – | 05 |
| | **ಒಟ್ಟು** | **5387** | **4832** | **555** | **187.27** | **107** | **19** | **88** |

## ವಲಯ ಅರಣ್ಯಾಧಿಕಾರಿ ಹಾಗು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆ ನೇಮಕಾತಿಯಲ್ಲಿ ಬಿ.ಎಸ್ಸಿ. ಪದವಿ ಪರಿಗಣನೆ

**924(1049); ಶ್ರೀ ಆರ್.ಕೆ. ಸಿದ್ದರಾಮಣ್ಣ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಅರಣ್ಯ ಇಲಾಖೆಯ ವಲಯ ಅರಣ್ಯ ಅಧಿಕಾರಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ನೇರ ನೇಮಕಾತಿ ಸಮಯದಲ್ಲಿ ಬಿ.ಎಸ್ಸಿ (ಅರಣ್ಯ ಶಾಸ್ತ್ರ) ವಿದ್ಯಾರ್ಹತೆಯನ್ನು ಪರಿಗಣಿಸದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಬಂದಿದ್ದಲ್ಲಿ, ಸದರಿ ವಿದ್ಯಾರ್ಹತೆಯನ್ನು ಪರಿಗಣಿಸದಿರಲು ಇರುವ ನ್ಯೂನತೆಗಳೇನು; (ವಿವರ ನೀಡುವುದು) ಪರಿಗಣಿಸಲು ಕೈಗೊಂಡ ಕ್ರಮವೇನು?

**ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು)**

**ಅ)** ಅರಣ್ಯ ಇಲಾಖೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ ಹುದ್ದೆಗಳ ನೇರ ನೇಮಕಾತಿ ಸಮಯದಲ್ಲಿ ಬಿ.ಎಸ್ಸಿ (ಅರಣ್ಯ ಶಾಸ್ತ್ರ) ವಿದ್ಯಾರ್ಹತೆಯನ್ನು ಪರಿಗಣಿಸಿ ನೇಮಕಾತಿ ಮಾಡಲಾಗಿದೆ.

**ಆ)** ಅನ್ವಯಿಸುವುದಿಲ್ಲ.

## ತುಂಗ-ಭದ್ರ ಹೊಳೆದಾಟಲು ತೆಪ್ಪ ಬಳಸುತ್ತಿರುವ ಕುರಿತು

**1048; ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಶಿವಮೊಗ್ಗ ತಾಲ್ಲೂಕು, ಆಡೋನಹಳ್ಳಿ ಮತ್ತು ಭದ್ರಾವತಿ ತಾಲ್ಲೂಕು, ಆನವೇರಿ ಮಧ್ಯೆ ತುಂಗಾ-ಭದ್ರಾ ನದಿ ಹರಿಯುತ್ತಿದ್ದು, ಆಡೋನಹಳ್ಳಿಯಿಂದ ಆನವೇರಿ ಗ್ರಾಮಕ್ಕೆ ಹಾಗೂ ಆನವೇರಿಯಿಂದ ಆಡೋನಹಳ್ಳಿ ಗ್ರಾಮಕ್ಕೆ ಹೊಳೆ ದಾಟಲು ಎರಡೂ ಗ್ರಾಮದ

ಗ್ರಾಮಸ್ಥರು ತೆಪ್ಪ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹೊಳೆ ದಾಟಲು ಗ್ರಾಮಸ್ಥರು ಬಳಸುತ್ತಿರುವ ತೆಪ್ಪಕ್ಕೆ ಪರವಾನಗಿ ನೀಡಲಾಗಿದೆಯೇ;

**ಇ)** ಗ್ರಾಮಸ್ಥರು ಬಳಸುತ್ತಿರುವ ತೆಪ್ಪ ಪ್ರಯಾಣಿಕರ ದೃಷ್ಟಿಯಿಂದ ಅಸುರಕ್ಷಿತ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ತೆಪ್ಪದ ಪ್ರಯಾಣ ಅಸುರಕ್ಷಿತವೆಂದು ಕಂಡು ಬಂದಿದ್ದಲ್ಲಿ, ಗ್ರಾಮಸ್ಥರು ಪ್ರಯಾಣಿಸಲು ಸರ್ಕಾರದ ವತಿಯಿಂದ ಸುರಕ್ಷಿತವಾದಂತಹ ದೋಣಿ ವ್ಯವಸ್ಥೆ ಮಾಡಲಾಗುವುದೇ; ಯಾವಾಗ ದೋಣಿ ವ್ಯವಸ್ಥೆ ಮಾಡಲಾಗುವುದು?

**ಶ್ರೀ ಬಾಬುರಾವ್ ಚಿಂಚನಸೂರು (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

**ಅ)** – ಇಲ್ಲ –

**ಆ)** – ಇಲ್ಲ –

**ಇ)** ಸದರಿ ಗ್ರಾಮದಲ್ಲಿ ಬಳಸುತ್ತಿರುವ ತೆಪ್ಪದ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

**ಈ)** ಈ ಬಗ್ಗೆ ಗ್ರಾಮಸ್ಥರಿಂದ ಬೇಡಿಕೆ ಬಂದಲ್ಲಿ ಸ್ಥಳ ಪರಿಶೀಲಿಸಿ, ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು.

**ಸಭಾಪತಿಯವರು:–** ಮಂಡಿಸಲಾಯಿತು.

## ಸಭಾ ನಾಯಕರ ಹುಟ್ಟು ಹಬ್ಬದ ಅಭಿನಂದನೆ

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಇದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಚಾರ ಅಲ್ಲ. ಇಂದು ತಮ್ಮ 66ನೇ ಹುಟ್ಟು ಹಬ್ಬವನ್ನು ಆಚರಿಸುತ್ತಿರುವಂತಹ Birthday

Boy ಆದ ನಮ್ಮ ಸದನದ ಸಭಾ ನಾಯಕರಿಗೆ, ನಮ್ಮ ಸದನದ ಯಜಮಾನರಿಗೆ ಇಡೀ ಸದನದ ಪರವಾಗಿ ಹುಟ್ಟು ಹಬ್ಬದ ಶುಭಾಷಯಗಳನ್ನು ಹೇಳುತ್ತಿದ್ದೇನೆ, ಅವರು ನೂರು ಕಾಲ ಬಾಳಲಿ. ಮತ್ತು ಹೀಗೇ ಇರಲಿ ಎಂದು ಆಶಿಸುತ್ತೇನೆ.

**(ಸದನದ ಎಲ್ಲಾ ಸದಸ್ಯರು ಮೇಜುಕುಟ್ಟುವ ಮೂಲಕ ಅಭಿನಂದನೆಯನ್ನು ವ್ಯಕ್ತಪಡಿಸಿದರು)**

**ಸಭಾಪತಿಯವರು:** ಮಾನ್ಯ ಹೊರಟ್ಟಿಯವರು ಕೂಡ ಅದನ್ನು ಕಳಿಸಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:–** ತಾವು ಇಂದು 66ನೇ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದೀರಿ ಆ ತಲೆಯಲ್ಲಿ ಬಿಳಿ ಕೂದಲು ಬಿಟ್ಟರೆ ಬೇರೆ ಇನೇನೂ ಬದಲಾವಣೆಯಾಗಿಲ್ಲ.

**ಶ್ರೀ ಕೃಷ್ಣಾ ಬೈರೇಗೌಡ:–** ಸಭಾ ನಾಯಕರದ್ದು ಹುಟ್ಟು ಹಬ್ಬವೋ ಇಲ್ಲವೇ ವಿರೋಧ ಪಕ್ಷದ ನಾಯಕರದ್ದು ಹುಟ್ಟು ಹಬ್ಬವೋ ನಮಗೆ ಅರ್ಥವಾಗುತ್ತಿಲ್ಲ. ತಾವು ದಯವಿಟ್ಟು ಅದನ್ನು enlighten ಮಾಡಬೇಕು. ಮದುವೆ ವಾರ್ಷಿಕೋತ್ಸವೋ ಏನೋ ಇರಬೇಕು.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:–** ಮಾನ್ಯ ಸಭಾಪತಿಯವರೆ, ನಿಮ್ಮನ್ನು ನೋಡಿದರೆ ಇವತ್ತು ನಿಮ್ಮದೂ ಏನೇ ವಿಶೇಷ ಇರಬೇಕು ಆದರೆ ಹೇಳುತ್ತಿಲ್ಲ. ಹೇಳಿದರೆ ಒಳ್ಳೆಯದು.

**ಶ್ರೀ ಡಿ.ವಿ. ಸದಾನಂದಗೌಡ:–** ಹೇಳುತ್ತೇನೆ. ನಮ್ಮ ಕೃಷಿ ಸಚಿವರು ಮತ್ತು ನಮ್ಮ ಸಹಕಾರೀ ಸಚಿವರು ಕೇಳುತ್ತಿದ್ದಾರೆ. ನನ್ನದು ಯಾವ ವಿಶೇಷವೂ ಇಲ್ಲ. ನನ್ನ ಮನೆಯ ಯಜಮಾನನ ಹುಟ್ಟುಹಬ್ಬದ ವಿಶೇಷವೇ ನನ್ನ ವಿಶೇಷ. ಆ ಹುಟ್ಟು ಹಬ್ಬವನ್ನು ಆಚರಿಸುವುದೇ ಒಂದು ವಿಶೇಷ. ನಾನು ಇಂದು ಬೆಳಿಗ್ಗೆಯಿಂದ ಕುಳಿತುಕೊಂಡು ಹಾಗೇ ಅವರನ್ನು ನೋಡುತ್ತಿದ್ದೆ. **ಈ 66 ವರ್ಷದಲ್ಲಿ ಅವರ ಮೊಗದಲ್ಲಿ 16 ವರ್ಷದ ಹುಡುಗುತನ ಮಿಂಚುತ್ತಿದೆ.**

**26 ವರ್ಷದ ತುಂಟತನ ಅವರಲ್ಲಿ ಆಗಾಗ ಕಾಣುತ್ತಿದೆ. 36 ವರ್ಷದ ಯುವಕನ ವೀರಾವೇಶ ಕೂಡ ಅವರಲ್ಲಿ ಆಗಾಗ ಒಮ್ಮೊಮ್ಮೆ ಸದನದಲ್ಲಿ ಕಂಡಿದ್ದೇನೆ. 46 ರ ಉತ್ಸಾಹ ಅವರಲ್ಲಿ ಕಾಣುತ್ತಿದೆ. ಅವರು ಈ ಸದನದಿಂದ ಹೊರಗೆ ಹೋಗಿ ಎಷ್ಟು ಬೇಗನೆ ಬರುತ್ತಾರೆಂದರೆ ಅವರಿಗೆ 66 ವರ್ಷಗಳು ಎಂದು ಹೇಳುವುದಕ್ಕಾಗುವುದಿಲ್ಲ. 46 ರಲ್ಲಿ ಇರುವಂತಹ ಉತ್ಸಾಹ ಅವರಲ್ಲಿ ಇದೆ. 56 ವರ್ಷದಲ್ಲಿ ಇರುವಂತಹ ಉಲ್ಲಾಸ ಅವರಲ್ಲಿ ಇದೆ. ಅವರಿಗೆ 66 ವರ್ಷಗಳು ಎಂದು ಹೇಳುವುದಿಲ್ಲ. 96 ವರ್ಷ ವಯಸ್ಸಿನಲ್ಲಿರುವ ಒಬ್ಬ ವಯೋವೃದ್ಧನ maturity, ಮುತ್ಸದ್ದಿತನ ಅವರಲ್ಲಿ ಇದೆ.**

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶ ಕೊಡಬೇಕು.

**ಶ್ರೀ ಡಿ.ವಿ. ಸದಾನಂದಗೌಡ:-** ನೀವು ಆಮೇಲೆ ಮಾತನಾಡಿ. ನಾನು ಇಲ್ಲಿ ಅವರ ಬಗ್ಗೆ ಮಾತನಾಡುವಾಗ ತಮಗೆ ಏನಾದರೂ ಹೊಟ್ಟೆ ಕಿಚ್ಚು ಆಗುತ್ತದೆಯೇ? ನಾನು ಅವರ ಬಗ್ಗೆ ಮಾತನಾಡುತ್ತಿರುವುದು ಅವರನ್ನು ಒಲಿಸಿಕೊಳ್ಳುವುದಕ್ಕೆ ಅಲ್ಲ. ಅವರಲ್ಲಿ ಇರುವಂತಹ ವಿಚಾರಗಳನ್ನು ಹೇಳುವುದಕ್ಕೆ ಮಾತ್ರ ನಾನಿಲ್ಲಿ ನಿಂತಿದ್ದೇನೆ. ಅವರನ್ನು ಒಲಿಸಿಕೊಳ್ಳುವುದು ಅಂತಹ ಕಷ್ಟವೇನೂ ಇಲ್ಲ. ಬಹಳ ಸುಲಭದಲ್ಲಿ ಅವರನ್ನು ಒಲಿಸಿಕೊಳ್ಳಬಹುದು.

**ಶ್ರೀಮತಿ ಮೋಟಮ್ಮ:-** ನಿಮ್ಮ ವರ್ಣನೆ ನೋಡಿ, ಮತ್ತೆ ಅವರಿಗೆ ಬಹಳ ಅರ್ಜಿಗಳು ಬಂದರೆ ಕಷ್ಟ.

**ಶ್ರೀ ಡಿ.ವಿ. ಸದಾನಂದಗೌಡ:-** ನಾನು ಹೊಟ್ಟೆಕಿಚ್ಚು ಎಂದು ಹೇಳಿದ್ದು ಇದಕ್ಕೇ. ನಿಮಗೆ ಹಿಂದೆ ಕೂತವರಿಗೆ ಆ ರೀತಿ ಆಗುತ್ತದೆಂದು ಹೇಳುತ್ತಿದ್ದೇನೆ. ಇಂದು ಮಧ್ಯಾಹ್ನ ಅವರೇ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ಆ ಭೋಜನ ಕೂಟಕ್ಕೆ ಎಲ್ಲರೂ ಬರಬೇಕೆಂದು ನಾನು ಅವರ ಪರವಾಗಿ ಆಹ್ವಾನ ಮಾಡುತ್ತೇನೆ. ದೇವರು ಅವರಿಗೆ ಆಯುರಾರೋಗ್ಯವನ್ನು ಸಕಲ ಐಶ್ವರ್ಯ, ಸಕಲ ಧನಕನಕ ಹಾಗೂ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ಉನ್ನತ ಪದವಿ

ಸಿಗಲಿ ಹಾರೈಸಿ ಮತ್ತೊಮ್ಮೆ ಅವರಿಗೆ ಶುಭಾಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು ನನ್ನ ಬಗ್ಗೆ ಬಹಳ ಅಭಿಮಾನದ ಮಾತುಗಳನ್ನಾಡಿ ಪ್ರೀತಿ, ವಾತ್ಸಲ್ಯ, ಅಭಿಮಾನ ಹುಟ್ಟಿಸುವಂತಹ ಅನೇಕ ಮಹತ್ತರವಾದಂತಹ ವಿಚಾರಗಳನ್ನು ಅವರು ಹೇಳಿದ್ದಾರೆ. ಬಹುತೇಕವಾಗಿ ಅವರು ಹೇಳಿದಂತಹ ಮಾತುಗಳು ಕೆಲವು ಇಲ್ಲದಿದ್ದರೂ ಮುಂದೆ ಅಳವಡಿಸಿಕೊಳ್ಳಿ ಎಂದು ಸೂಚ್ಯವಾಗಿ ಹೇಳಿದ್ದಾರೆಂದು ನಾನು ಭಾವಿಸುತ್ತಿದ್ದೇನೆ. ಅವರ ಪ್ರೀತಿ, ವಿಶ್ವಾಸ, ಅಭಿಮಾನ, ವಾತ್ಸಲ್ಯಕ್ಕೆ ನಾನು ಯಾವ ರೀತಿ ಪ್ರತಿಕ್ರಿಯೆ ನೀಡಬೇಕೆಂದು ನನ್ನಲ್ಲಿ ಶಬ್ಧಗಳೇ ಇಲ್ಲದಂತಾಗಿದೆ. ಏಕೆಂದರೆ, ನಾನು ಸಾಹಿತಿಯಾಗಿದ್ದರೆ ಚೆನ್ನಾಗಿ ಹೇಳಬಹುದಾಗಿತ್ತು. ನಾನು ಸಾಮಾನ್ಯ ಸಾಮಾಜಿಕ ಕಾರ್ಯಕರ್ತನಾಗಿದ್ದೇನೆ. ಶ್ರೀಮಾನ್ ಸದಾನಂದಗೌಡರು ಬಹಳಷ್ಟು ಮಹತ್ತರವಾದ ವಿಚಾರಗಳನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿ ನನ್ನ ಪರವಾಗಿ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ನಾನು ಅವರಿಗೆ ಸಂಪೂರ್ಣವಾಗಿ ಉಪಕೃತನಾಗಿದ್ದೇನೆ. ಅಷ್ಟೆ ಅಲ್ಲ, ಈ ಸದನದ ಎಲ್ಲಾ ಸದಸ್ಯರು, press gallery ಯಲ್ಲಿರುವಂತಹ ಪತ್ರಿಕಾ ಮಾಧ್ಯಮದವರು, ಅಧಿಕಾರಿಗಳ ಗ್ಯಾಲರಿಯಲ್ಲಿರುವಂತಹ ಅಧಿಕಾರಿಗಳೆಲ್ಲರ ಪರವಾಗಿ ಅವರು ಮಾತನಾಡಿದ್ದಾರೆ. ಅವರೆಲ್ಲರಿಗೂ ಸಹ ನಾನು ಉಪಕೃತನಾಗಿದ್ದೇನೆ. ಅವರೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ದಯಮಾಡಿ 1.30 ಕ್ಕೆ ಎಲ್ಲರೂ ಭೋಜನ ಕೂಟಕ್ಕೆ ಬರಬೇಕೆಂದು ತಮ್ಮ ಮುಖಾಂತರ ಆಹ್ವಾನಿಸುತ್ತಿದ್ದೇನೆ. ಈಗಾಗಲೇ ಈ ಬಗ್ಗೆ host ಆಗಿ, ಬಹಳಷ್ಟು ಮಾರ್ಮಿಕವಾದ ಮಾತುಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅದಕ್ಕೆ ನಾನು ಯಾವ ರೀತಿ ಅವರಿಗೆ ಕೃತಜ್ಞತೆ ಸಲ್ಲಿಸಬೇಕೆಂದು ನನಗೆ ಶಬ್ಧಗಳೇ ಬರುತ್ತಿಲ್ಲ. ನಮಸ್ಕಾರ.

## 2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:** ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕನ್ನು ಅತಿವೃಷ್ಟಿ ಪ್ರದೇಶವೆಂದು ಘೋಷಿಸುವ ಬಗ್ಗೆ

**ಶ್ರೀ ಸಿದ್ದರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ:30–7–2013ರ 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ಹೆಚ್.ಡಿ.ಕೋಟೆಯನ್ನು ಅತಿವೃಷ್ಟಿ ತಾಲ್ಲೂಕಾಗಿ ಘೋಷಿಸಿ ಎಂಬ ಶೀರ್ಷಿಕೆಯೊಂದಿಗೆ ವರದಿ ಪ್ರಕಟವಾಗಿತ್ತು. ಸದರಿ ವರದಿಯನ್ವಯ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಈ ಸಾಲಿನಲ್ಲಿ ಮಳೆಗಾಲ ಅತ್ಯಂತ ಹೆಚ್ಚಿನದಾಗಿದ್ದು 658 ಮಿ.ಮೀಟರ್ ಪ್ರಸ್ತುತ ಮಳೆಯಾಗಿದ್ದು ಇನ್ನೂ ಮುಂದುವರೆದಿರುತ್ತದೆ. ಇದರಿಂದಾಗಿ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗಿರುತ್ತದೆ, ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಗಳಾದ ಹತ್ತಿಯನ್ನು 31 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಮಾಡಲಾಗಿದ್ದು ಹೆಚ್ಚಿನ ಪ್ರಮಾಣವು ಮಳೆಯಿಂದಾಗಿ ಸಂಪೂರ್ಣ ಜಲಾವೃತಗೊಂಡಿರುತ್ತದೆ. ಅಲ್ಲದೆ ಹತ್ತಿ ಹೂಗಳು ಮಳೆಯಿಂದ ಉದುರುತ್ತಿವೆ. ಪ್ರತಿ ಎಕರೆಗೆ ರೈತ ₹ 10,000 ವೆಚ್ಚ ಮಾಡಿದ್ದು ಅತಿವೃಷ್ಟಿಯಿಂದಾಗಿ ಸಂಪೂರ್ಣ ಬೆಳೆ ನೆಲ ಕಚ್ಚಿದೆ. ಅಲ್ಲದೇ 4,669 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾದ ಹೊಗೆಸೊಪ್ಪು ಕೂಡ ಮಳೆಯಿಂದ ತೇವಾಂಶದ ಪ್ರಮಾಣ ಹೆಚ್ಚಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದೇ ರೀತಿ ತೆಂಗು, ಅಲಸಂದೆ, ಎಳ್ಳು, ಹೆಸರು, ಉದ್ದು, ಇನ್ನಿತರೆ ಬೆಳೆಗಳು ಕೂಡ ಅತಿವೃಷ್ಟಿಯಿಂದಾಗಿ ರೋಗಕ್ಕೆ ತುತ್ತಾಗಿವೆ. ಆದ್ದರಿಂದ ಹೆಚ್.ಡಿ. ಕೋಟೆ ತಾಲ್ಲೂಕನ್ನು ಅತಿವೃಷ್ಟಿ ತಾಲ್ಲೂಕು ಎಂದು ಘೋಷಿಸಿ, ಪ್ರತಿ ಹೆಕ್ಟೇರ್‌ಗೆ ರೈತರಿಗೆ 15,000 ರೂಪಾಯಿಗಳಿಂದ 20,000 ರೂಪಾಯಿಗಳವರೆಗೂ ಪರಿಹಾರ ಧನವನ್ನು ಘೋಷಿಸಿ ರೈತರ ಹಿತ ಕಾಪಾಡುವಂತೆ ಮಾನ್ಯ ಕಂದಾಯ ಸಚಿವರ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇದಕ್ಕೆ ಉತ್ತರವನ್ನು ನಂತರ ಒದಗಿಸುತ್ತೇವೆ ಎಂದರೆ

ಇವತ್ತೇ ಸದನ ಮುಗಿದು ಹೋಗುತ್ತದೆ. ಆದ್ದರಿಂದ ನೇರವಾಗಿ ಸದಸ್ಯರಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:–** ಒಂದೇ ವಿಷಯದ ಬಗ್ಗೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹಾಗೂ ಮಾನ್ಯ ಅರುಣಶಹಾಪುರರವರು ಕೊಟ್ಟಿದ್ದಾರೆ. ಇಬ್ಬರು ಒಬ್ಬರಾದ ಮೇಲೆ ಓದಬಹುದು ಅಥವಾ ಯಾರಾದರೂ ಒಬ್ಬರು ಓದಬಹುದು.

**ಆ) ವಿಷಯ:** ಮೈಸೂರು ವಿಶ್ವವಿದ್ಯಾಲಯವು ಹೊರ ರಾಜ್ಯದ ಪ್ರತಿಷ್ಠಿತ ಕಾಲೇಜುಗಳೊಂದಿಗೆ ಒಪ್ಪಂದ ಮಾಡಿಕೊಂಡು ಬೇರೆ ಬೇರೆ ವಿಷಯಗಳ ದೂರ ಶಿಕ್ಷಣ ನಿಗದಿತ ಶುಲ್ಕಕ್ಕಿಂತ ಹೆಚ್ಚು ವಸೂಲಿ ಮಾಡುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯವು ರಾಜ್ಯ ಹಾಗೂ ಹೊರರಾಜ್ಯದ ಪ್ರತಿಷ್ಠಿತ ಕಾಲೇಜುಗಳೊಂದಿಗೆ ಒಪ್ಪಂದ ಮಾಡಿಕೊಂಡ ಬೇರೆ ಬೇರೆ ವಿಷಯಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ದೂರ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ದೂರ ಶಿಕ್ಷಣ ಕೇಂದ್ರಗಳಿಂದ ವಾರ್ಷಿಕ ₹ 25,000 ಶುಲ್ಕ ನಿಗದಿ ಮಾಡಿದ್ದರೂ ಒಪ್ಪಂದ ಮಾಡಿಕೊಂಡಿರುವ ಪ್ರತಿಷ್ಠಿತ ಕಾಲೇಜುಗಳು ವಿದ್ಯಾರ್ಥಿಗಳಿಂದ ಅವ್ಯಾಹತವಾಗಿ ಲಕ್ಷಾಂತರ ರೂಪಾಯಿಗಳ ಶುಲ್ಕ ವಸೂಲಿ ಮಾಡುತ್ತಿದ್ದು, ದೂರ ಶಿಕ್ಷಣದ ಹೆಸರಿನಲ್ಲಿ ಖಾಯಂ ಕೋರ್ಸ್‌ಗಳನ್ನು ನಡೆಸುತ್ತಿವೆ.

ಯು.ಜಿ.ಸಿ.ನಿಯಮಾವಳಿ ಪ್ರಕಾರ ಯಾವುದೇ ವಿಶ್ವವಿದ್ಯಾನಿಲಯ ತನ್ನ ವ್ಯಾಪ್ತಿ ಹೊರತುಪಡಿಸಿ ಉಳಿದ ಕಾಲೇಜುಗಳಿಗೆ ಯಾವುದೇ ಕೋರ್ಸ್ ನಡೆಸಲು ಅನುಮತಿ ನೀಡುವಂತಿಲ್ಲ ಮತ್ತು ದೂರ ಶಿಕ್ಷಣ ಹೆಸರಿನಲ್ಲಿ ಖಾಯಂ ಕೋರ್ಸ್‌ಗಳನ್ನು ನಡೆಸುವಂತಿಲ್ಲ. ವಿಚಿತ್ರವೆಂದರೆ ದೂರ ಶಿಕ್ಷಣದ ಹೆಸರಿನಲ್ಲಿ 2 ವರ್ಷದ ಕೋರ್ಸ್‌ಗೆ 6 ಲಕ್ಷ ಶುಲ್ಕದ ಜೊತೆಗೆ 2 ಲಕ್ಷ

ರೂಪಾಯಿಗಳನ್ನು ವಸತಿ ನಿಯಲದ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ದೂರ ಶಿಕ್ಷಣಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ 73 ಶಿಕ್ಷಣ ಸಂಸ್ಥೆಗಳಿಗೆ ದೂರ ಶಿಕ್ಷಣ ಕೇಂದ್ರದ ಹೆಸರಿನಲ್ಲಿ ಅನುಮತಿ ನೀಡಿದೆ. ಆದರೆ ಈ ಶಿಕ್ಷಣ ಸಂಸ್ಥೆಗಳು ದೂರ ಶಿಕ್ಷಣ ಎನ್ನುವ ಸತ್ಯ ಸಂಗತಿಯನ್ನು ಮರೆಮಾಚಿ ಪೂರ್ಣಾವಧಿ ಕೋರ್ಸ್‌ಗಾಗಿ ಪ್ರವೇಶ ಪ್ರಕ್ರಿಯೆ ನಡೆಸಿ ವಿದ್ಯಾರ್ಥಿಗಳಿಂದ ದುಬಾರಿ ಶುಲ್ಕವನ್ನು ವಸೂಲಿ ಮಾಡುತ್ತಿವೆ ಎಂದು ವರದಿಯಾಗಿದೆ.

ರಾಜ್ಯದ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡ ದೂರ ಶಿಕ್ಷಣ ಕೇಂದ್ರಗಳಿಂದ ವಿದ್ಯಾರ್ಥಿಗಳ ಶೋಷಣೆಯಾಗುತ್ತಿದ್ದು, ರಾಜ್ಯದ ಮತ್ತು ವಿಶ್ವವಿದ್ಯಾಲಯದ ಪ್ರತಿಷ್ಠೆಗೆ ಧಕ್ಕೆ ತರುವಂತಿದ್ದು ಮಾನ್ಯ ಉನ್ನತ ಶಿಕ್ಷಣ ಸಚಿವರು ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸುವುದರ ಜೊತೆಗೆ ಕ್ರಮ ಜರುಗಿಸುವುದಕ್ಕೆ ಕೂಡ ನಾವು ಕ್ರಮ ಕೈಗೊಳ್ಳುತ್ತೇವೆ.

**ಇ) ವಿಷಯ:** ಭೀಮಾ ನದಿಯಲ್ಲಿ ನೀರಿಲ್ಲದೆ ಒಣಗುತ್ತಿರುವುದರಿಂದ ಮಹಾರಾಷ್ಟ್ರದಿಂದ ನೀರು ಬಿಡಿಸುವ ಬಗ್ಗೆ.

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಗುಲ್ಬರ್ಗಾ ಜಿಲ್ಲೆಯ ಅಫಜಲಪುರ, ಜೇವರ್ಗಿ, ಶಹಾಪೂರ, ಯಾದಗಿರಿ, ಈ ಭಾಗಗಳಲ್ಲಿ ಹರಿಯುತ್ತಿರುವ ಭೀಮಾ ನದಿಗೆ ಒಂದು ಹನಿ ನೀರು ಇವತ್ತಿನವರೆಗೂ ಬಂದಿರುವುದಿಲ್ಲ. ಪುಣೆ, ಸೊಲ್ಲಾಪುರ ಪ್ರದೇಶದಲ್ಲಿ ಮಳೆಯಾಗದ ಕಾರಣ ಉಜನಿ ಜಲಾಶಯಕ್ಕೆ ಇನ್ನು ನೀರು ಬಂದಿಲ್ಲ. ಹೀಗಾಗಿ ಆ ಜಲಾಶಯದಿಂದ ನೀರು ಬಿಡದ ಕಾರಣ ಭೀಮಾನದಿ ಬತ್ತಿ ಹೋಗಿದೆ. ನದಿ ಭಾಗದ ಬಿಜಾಪುರ, ಗುಲ್ಬರ್ಗಾ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ನೀರಿಗೆ ಇನ್ನು ಪರದಾಡುವ ಸ್ಥಿತಿ ಇದೆ. ಆದ್ದರಿಂದ ಭೀಮಾ

ನದಿ ತೀರದ ಪ್ರದೇಶದಲ್ಲಿ ಕೃಷಿ ಚಟುವಟಿಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಭರದ ಛಾಯೆ ಆವರಿಸಿಕೊಂಡಿದೆ. ಪಕ್ಕದ ಕೃಷ್ಣಾನದಿ ತುಂಬಿ ಹರಿಯುತ್ತಿದ್ದನ್ನು ಕಂಡು ಭೀಮಾ ದಡದ ರೈತರು ಬತ್ತ, ಕಬ್ಬು, ಇತರ ಬೆಳೆಯನ್ನು ನಾಟಿ ಮಾಡಿದ್ದಾರೆ. ಆದರೆ ನೀರು ಬರದೆ ಇದ್ದಲ್ಲಿ ಬೆಳೆಯನ್ನು ಬೆಳೆಯಲು ಪರದಾಡಬೇಕಾಗುತ್ತದೆ ಮತ್ತು ಕುಡಿಯುವ ನೀರಿನ ಸಮಸ್ಯೆಯು ಕೂಡ ಉದ್ಭವಿಸುತ್ತದೆ. ಹಾಗೆಯೇ UKP (Upper Krishna Project) ನ Jevargi Branch Canal, Indi Branch Canal, Shahapur Branch Canal, Mudbal Branch Canal ನಿಂದ ಕೃಷ್ಣಾ ನದಿಗೆ ನೀರು ಬಿಟ್ಟರೆ ಭೀಮಾ ನದಿಗೆ ಬಂದು ತಲುಪುತ್ತದೆ.

ಹಿಂದೆ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ಈ ಕೆಲಸ ಮಾಡಿತ್ತು. ಅದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ಹಿಂದೆ ನಾರಾಯಣಪುರ ದಂಡೆಯ ಮುಖ್ಯ ಕಾಲುವೆಯ ಮೂಲಕ 10,000 ಕ್ಯೂಸೆಕ್ ನೀರನ್ನು ಇಂಡಿ ಶಾಖೆ ಹಾಗೂ ಇತರೆ ಕಾಲುವೆಯ ಮೂಲಕ ನೀರು ಹರಿಸಿ ಇದು ಕೊನೆಗೊಳ್ಳುವ ಪ್ರತಿಯೊಂದು ಹಳ್ಳ ನದಿಗಳಿಗೆ ನೀರನ್ನು ಬಿಡಲಾಯಿತು. ಒಟ್ಟು 176 ಕಿಲೋಮೀಟರ್‌ವರೆಗೆ ನೀರನ್ನು ಹರಿಸಿ ಸಂಪೂರ್ಣ ಬತ್ತಿ ಮರಳು ಹಾಸಿಗೆಯಂತಾಗಿದ್ದ ಭೀಮಾ ನದಿಯ ತೀರದ 136 ಗ್ರಾಮಗಳು, ಒಂದು ಮಹಾನಗರ, ಒಂದು ನಗರ, ಐದು ಪಟ್ಟಣಗಳಿಗೆ ಕುಡಿಯುವ ನೀರಿನ ಪರಿಹಾರ ಒದಗಿಸಲಾಯಿತು. ಆದ್ದರಿಂದ ಭೀಮಾ ನದಿಗೆ ನೀರು ಬರದ ಕಾರಣ ಆ ಪ್ರದೇಶದಲ್ಲಿ ಕೃಷಿ ಚಟುವಟಿಕೆ ಸಂಪೂರ್ಣ ನಿಂತು ಹೋಗಿದ್ದು ಮತ್ತು ಜನತೆಗೆ ಕುಡಿಯುವ ನೀರಿನ ಸಮಸ್ಯೆ ಕೂಡ ಆ ಭಾಗದ ಜನತೆ ಎದುರಿಸಬೇಕಾದಂತಹ ಪರಿಸ್ಥಿತಿ ಉದ್ಭವವಾಗಿದೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಜಲಸಂಪನ್ಮೂಲ ಮಂತ್ರಿಗಳು ಮಹಾರಾಷ್ಟ್ರದ ಜೊತೆ ಮಾತನಾಡಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ ನೀರನ್ನು ಬಿಡುವುದರ ಜೊತೆಗೆ ತಕ್ಷಣ ಭೀಮಾ ನದಿಗೆ ನೀರು ಬಿಡಿಸಬೇಕೆಂದು ಈ ಮೂಲಕ್ಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀಮಾನ್ ಅಲ್ಲಮಪ್ರಭು ಪಾಟೀಲ್‌ರವರು ಬಹಳ ಗಂಭೀರವಾದ ವಿಷಯವನ್ನು ಚರ್ಚೆ ಮಾಡಿದ್ದಾರೆ. ಭೀಮಾ ನದಿಯಲ್ಲಿ ನೀರು ಇಲ್ಲದಿರುವ ವಿಚಾರವಾಗಿ ಈಗಾಗಲೇ ಚರ್ಚೆ ಮಾಡಿದ್ದಾರೆ. ಸರ್ಕಾರದ ಮುಖಾಂತರವಾಗಿ ಇದಕ್ಕೆ ಕ್ರಮ ಜರುಗಿಸುತ್ತೇವೆಂದು ಹೇಳುವುದರ ಜೊತೆಗೆ ಸಂಬಂಧಿಸಿದ ಶಾಸಕರಿಗೆ ಉತ್ತರವನ್ನು ನಂತರ ಒದಗಿಸಿಕೊಡುತ್ತೇವೆ.

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಜಲ ಸಂಪನ್ಮೂಲ ಸಚಿವರ ಹತ್ತಿರ ಮಾತನಾಡಿ ಅಪ್ಪರ್ ಕೃಷ್ಣ ಪ್ರಾಜೆಕ್ಟಿನ Jevargi Branch Canal, Indi Branch Canal, Shahapur Branch Canal, Mudbal Branch Canal, ಈ ಕೆನಾಲ್‌ಗಳ ಮೂಲಕ ನೀರು ಬಿಟ್ಟರೆ ಸುಮ್ಮನೆ waste ಆಗಿ ನದಿಗೆ ಹೋಗುತ್ತಿದೆ, ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಮಹಾರಾಷ್ಟ್ರಕ್ಕೆ ಹೋಗತಕ್ಕಂಥ ನೀರು ಕೆನಾಲ್ ಮೂಲಕ ಭೀಮಾ ನದಿಗೆ ಬಂದು ಸೇರುತ್ತದೆ. ಆ ನೀರನ್ನು ಭೀಮಾ ನದಿಗೆ ಬಿಟ್ಟರೆ ಸಾಕಷ್ಟು ಅನುಕೂಲವಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, Irrigation Consultative Committee, Chairman ನಾನೇ ಇದ್ದೆ. ಮೊನ್ನೆ ಆಲಮಟ್ಟಿ ಜಲಾಶಯದಿಂದ ಪ್ರಮುಖವಾದಂತಹ ಕೆನಾಲ್‌ಗಳಿಗೆ ನೀರು ಬಿಡುವಂತಹ ವಿಚಾರದಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಸಭೆ ಮಾಡಿದ್ದೇವೆ. ಆ ಭಾಗದ ಎಲ್ಲಾ ಶಾಸಕರು, ಸಂಸತ್ ಸದಸ್ಯರುಗಳು ಭಾಗವಹಿಸಿದ್ದರು. ಆ ಕೆನಾಲ್‌ಗಳಿಗೆ ನೀರು ಬಿಡುವುದಕ್ಕೆ ನಾವು ಈಗಾಗಲೇ ನಿರ್ಣಯ ಕೈಗೊಂಡಿದ್ದೇವೆ.

**ಶ್ರೀ ಅಲ್ಲಮಪ್ರಭು ಪಾಟೀಲ್:-** ತಾವೇ ಅಧ್ಯಕ್ಷರಾಗಿದ್ದೀರಿ. ದಯಮಾಡಿ ತಕ್ಷಣ ನೀರು ಬಿಡಿಸಿ.

**ಶ್ರೀ ಎಸ್.ಆರ್. ಪಾಟೀಲ್:-** ತಾವು ಏನು ಹೇಳಿದ್ದೀರಿ ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಈಗ ಮಾನ್ಯ ಶಾಣಪ್ಪನವರು ನನಗೆ ಒಂದು ಸಣ್ಣ ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ. ತಾವು ಅದನ್ನು ಎರಡು ನಿಮಿಷದಲ್ಲಿ ಹೇಳಿಬಿಡಿ ಅಥವಾ ಬರೆದಿದ್ದರೆ ಓದುಬಿಡಿ.

**ವಿಷಯ:** ಬೆಂಗಳೂರು ಕಾಕ್ಸ್‌ಟೌನ್‌ನಲ್ಲಿರುವ ಆಟದ ಮೈದಾನವನ್ನು ಇಂಡಿಯನ್ ಜಿಮ್‌ಖಾನ ಕ್ಲಬ್‌ನವರು ಒತ್ತುವರಿ ಮಾಡಿಕೊಂಡಿದ್ದು ಆ ಮೈದಾನದ ಜಾಗವನ್ನು ಮಕ್ಕಳ ಆಟದ ಮೈದಾನಕ್ಕೆ ತೆರವುಗೊಳಿಸುವ ಬಗ್ಗೆ

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಕಳೆದ ಸಲ ಮಾನ್ಯ ಬಸವರಾಜ ಹೊರಟ್ಟಿಯವರು ನಿಯಮ 72 ರಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಕಾಕ್ಸ್‌ಟೌನ್‌ನಲ್ಲಿ ಅವರಿಗೆ ನೀಡಿದ್ದಂತಹ ಮೈದಾನವು 1 ಎಕರೆ 38 ಗುಂಟೆ ಏನು ಇತ್ತು ಅದಕ್ಕೆ ಬದಲಾಗಿ 4 ಎಕರೆ 38 ಗುಂಟೆ ಜಮೀನನ್ನು ಅಲ್ಲಿ ಇದ್ದಂತಹ ಇಂಡಿಯನ್ ಜಿಮಖಾನರವರು ಉಪಯೋಗ ಮಾಡಿಕೊಂಡು ಒಂದು solid structure ಅನ್ನು ತಯಾರು ಮಾಡುತ್ತಿದ್ದಾರೆ. ಅದನ್ನು ಕ್ರೀಡೆಗಾಗಿ ಖಾಲಿ ಇಡಬೇಕೆಂದು ಹೇಳಿದ್ದಾರೆ. ಸರ್ಕಾರದವರು ಆದಷ್ಟು ಮಟ್ಟಿಗೆ ಬಿ.ಬಿ.ಎಂ.ಪಿ ಯವರಿಗೆ ಏನು ಅಧಿಕಾರ ಇಲ್ಲ. ಕಾನೂನು ಪ್ರಕಾರ ಇದನ್ನು ಬಿಡಿಎ ನವರು ಕಾಯ್ದು ಇಡಬೇಕಾದಂತಹ ಜಮೀನಾಗಿದೆ ಎಂದು ಹೇಳಿದ್ದಿರಿ, 2008 ರಲ್ಲಿ ನಾವು ಏನು ಮಾಡುವುದಕ್ಕಾಗಲಿಲ್ಲ. ಆದರೆ, ಜನಗಳ ಹಿತದೃಷ್ಟಿಯಿಂದ ಈ ಜಾಗವನ್ನು ಏನು ಜನಗಳಿಗಾಗಿ ಮೀಸಲಿಡಬೇಕೋ ಆ ರೀತಿಯಾಗಿ ನಾವು ಮೀಸಲಿಡುತ್ತೇವೆ, ಅಲ್ಲಿ construction ನಡೆದಿರುವುದನ್ನು ಆದಷ್ಟು ಮಟ್ಟಿಗೆ ನಿಲ್ಲಿಸುವುದಕ್ಕೆ ಅಡ್ವೋಕೇಟ್ ಜನರಲ್‌ರವರ ಜೊತೆಗೆ ಮಾತನಾಡಿ, we will take necessary action ಎಂದು ಹೇಳಿದ್ದರು. ಒಂದು ತಿಂಗಳಾಯಿತು ಆದರೂ ಕೂಡ ಜಿಮಖಾನದವರು ಮತ್ತೆ ಕಟ್ಟುತ್ತಿದ್ದಾರೆ. ದಯಮಾಡಿ ಆದಷ್ಟು ಮಟ್ಟಿಗೆ ಅದನ್ನು ಕಾನೂನು ಬದ್ಧವಾಗಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿ.

1–30 ಗಂಟೆ

**ಸಭಾಪತಿಯವರು:–** ಈ ಸದನದಲ್ಲಿ ಕಟ್ಟುವುದನ್ನು ನಿಲ್ಲಿಸುತ್ತೇವೆಂದು ಹೇಳಿದ್ದಿರಿ ಆದರೆ ಇನ್ನೂ ಕಟ್ಟುತ್ತಿದ್ದಾರೆ ಅದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ ನೋಡಿ ಎಂದು ಹೇಳುತ್ತಿದ್ದಾರೆ. ಸದನದಲ್ಲಿ ಕೊಟ್ಟ ಭರವಸೆ ಏನು ಇದೆ ಅದನ್ನು ಈಡೇರಿಸಿ ಎಂದು ಹೇಳುತ್ತಿದ್ದಾರೆ. ವಿವರ ಬೇಡ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಈ ಹಿಂದೆ ನಡೆದ ಅಧಿವೇಶನದಲ್ಲಿ ಇದರ ಬಗ್ಗೆ ಈ ಸದನದಲ್ಲಿ ಸಹ ಬಹಳ ವಿಸ್ತೃತವಾದಂತಹ ಚರ್ಚೆಯಾಗಿದೆ. ಮಕ್ಕಳಿಗೆ ಆಟದ ಮೈದಾನವಾಗಿ ಈ ಜಾಗವನ್ನು ಮೀಸಲಾಗಿಡಬೇಕೆಂಬ ಬಗ್ಗೆ ತೆಗೆದುಕೊಂಡಿರತಕ್ಕಂಥಹ ತೀರ್ಮಾನ ಏನು ಇದೆ ಅದನ್ನು ನೀವೂ ಕೂಡ ಒಪ್ಪಿಕೊಂಡಿದ್ದೀರಿ. ಮಕ್ಕಳಿಗೆ ಆ ಆಟದ ಮೈದಾನವನ್ನು ಮೀಸಲಾಗಿ ಇಡಬೇಕಾಗುತ್ತದೆ. ಇದು ನಿಜ. ಆದರೆ ಆ ಮಕ್ಕಳ ಆಟದ ಮೈದಾನಕ್ಕೆ ಮೀಸಲಿಡಬೇಕೆಂದು ಬಿ.ಬಿ.ಎಂ.ಪಿ. ತೆಗೆದುಕೊಂಡ ತೀರ್ಮಾನವನ್ನು ಉಲ್ಲಂಘಿಸಿ ಆ ಜಾಗವನ್ನು ಸರ್ಕಾರ 35 ವರ್ಷಗಳಿಗೆ ಪುನಃ ಲೀಸ್ ಅನ್ನು ಮುಂದುವರಿಸಿರತಕ್ಕಂತಾದ್ದು ಸರಿಯಾದ ಕ್ರಮ ಅಲ್ಲ. ನಾನು ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯವನ್ನು ಪಡೆದು, ಕಾನೂನು ಅಭಿಪ್ರಾಯವನ್ನು ಪಡೆದು ಇದರ ಬಗ್ಗೆ ಖಂಡಿತವಾಗಿಯೂ ಮುಂದಿನ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಇಲ್ಲಿ ನೇರವಾಗಿ ಹೇಳಿದ್ದೀರಿ. ಈ ಜಾಗವನ್ನು ಮಕ್ಕಳ ಆಟದ ಮೈದಾನವಾಗಿ ಇಟ್ಟುಕೊಳ್ಳುವ ಸಲುವಾಗಿ ನಾವು ಮತ್ತು ನೀವು ಸೇರಿ ರಕ್ಷಣೆ ಮಾಡಬೇಕಾಗುತ್ತದೆ. ಈ ಬಗ್ಗೆ ಅಡ್ವೋಕೇಟ್ ಜನರಲ್ ಅವರ ಜೊತೆಯಲ್ಲಿ ಚರ್ಚೆ ಮಡುತ್ತೇವೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿಯಾದ ನಂತರ ಅದೇ ಆಟದ ಮೈದಾನದಲ್ಲಿ ಕಟ್ಟಡ ಕಟ್ಟುವ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ?

**ಸಭಾಪತಿಯವರು:–** ಸರ್ಕಾರ ಏನು ಹೇಳುತ್ತದೆಯೋ ನೋಡೋಣ.

**ಶ್ರೀ ಎಂ.ಸಿ. ನಾಣಯ್ಯ:-** ಈ ಬಗ್ಗೆ ತೀರ್ಮಾನವಾಗುವವರೆಗೆ ಆ ಮೈದಾನದ ಪಕ್ಕದಲ್ಲಿರುವ ಒಂದು ಎಕರೆ 4 ಗುಂಟೆಯನ್ನು ಬಿಟ್ಟು ಬಿಟ್ಟಿದ್ದಾರೆ. ಆದರೆ ಬಾಕಿ ಇರತಕ್ಕಂತಹ ಮೈದಾನ ಪ್ರದೇಶ ಯಾವುದು ಇದೆ ಅಲ್ಲಿ ಯಾವುದೇ ರೀತಿಯ ಕಟ್ಟಡ ಕಾಮಗಾರಿ ಕಟ್ಟದೆಯೇ ಅದನ್ನು ಮಕ್ಕಳ ಆಟದ ಮೈದಾನವಾಗಿ ಉಳಿಸಿಕೊಳ್ಳುವ ಕೆಲಸ ಸರ್ಕಾರದಿಂದ ಆಗಬೇಕು. ಅಂತಹ ಒಂದು ಆದೇಶವನ್ನು ತಾವು ಬಿ.ಬಿ.ಎಂ.ಪಿ.ಗೆ ಕೊಡಬೇಕು. ಅಷ್ಟೇ ಇದನ್ನು ಮಾಡುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಅಲ್ಲಿ ಯಾವುದೇ ಕೆಲಸ ಕಾರ್ಯಗಳನ್ನು ಮುಂದುವರೆಸುವುದಿಲ್ಲವೆಂದು ಹೇಳಿದ್ದಾರೆ. ಆದಕಾರಣ ಪರಿಶೀಲನೆ ಮಾಡಿ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ನನಗೆ ನೆನಪು ಇದೆ. ಹಿಂದಿನ ಸರ್ಕಾರದ ಸಚಿವ ಸಂಪುಟದಲ್ಲಿ ಬಿ.ಬಿ.ಎಂ.ಪಿ.ಗೆ ವ್ಯತಿರಿಕ್ತವಾದ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಈ ಸಚಿವ ಸಂಪುಟದ ನಿರ್ಣಯವನ್ನು revert ಮಾಡುವುದರ ಬಗ್ಗೆ ಅಥವಾ ಇದನ್ನು ಮಾರ್ಪಾಡು ಮಾಡುವ ವಿಚಾರದಲ್ಲಿ ಅಡ್ವೋಕೇಟ್ ಜನರಲ್ ಅವರ ಹತ್ತಿರ ಚರ್ಚೆ ಮಾಡಿ ಕಾನೂನು ಸಲಹೆಗಳನ್ನು ಪಡೆದು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಅಂದು ಸರ್ಕಾರದ ಪರವಾಗಿ ನಾವು ಏನು ಹೇಳಿದ್ದೇವೆಯೋ ಅದಕ್ಕೆ ನಾವು ಇವತ್ತಿಗೂ ಬದ್ಧವಾಗಿದ್ದೇವೆ. ಆದರೆ ಅಡ್ವೋಕೇಟ್ ಜನರಲ್ ಅವರ ಜೊತೆ ಚರ್ಚೆಯಾಗಿ ಅದರ outcome ಏನು ಬಂದಿದೆಯೋ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದು ಇರಲಿಕ್ಕೂ ಸಾಕು.

**ಶ್ರೀ ಕೆ.ಬಿ. ಶಾಣಪ್ಪ:-** ಅಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಅಲ್ಲಿ construction ಮಾಡದ ಹಾಗೆ ನಾವು ಪ್ರತಿಬಂಧ ಮಾಡುತ್ತೇವೆಂದು ಹೇಳಿಲ್ಲ. Please examine. I think my memory is very fine, if there is any thing wrong you rectify me. ಈ

ಬಗ್ಗೆ ಬಿ.ಬಿ.ಎಂ.ಪಿ ಅವರು ಏನು ಶಿಫಾರಸ್ಸನ್ನು ಮಾಡಿದ್ದರು, ಆ ಶಿಫಾರಸ್ಸನ್ನು ಹಿಂದಿನ ಸರ್ಕಾರದಲ್ಲಿ overrule ಮಾಡಿ, cabinet has got a power. ಅವರು ಆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದರಿಂದಾಗಿ ತೊಂದರೆಯಾಗಿದ್ದನ್ನು ತಾವು ನಮ್ಮ ಸರ್ಕಾರದ ಗಮನಕ್ಕೆ ತಂದಿದ್ದೀರಿ. ಅದು ನಮ್ಮ ಸರ್ಕಾರದ ಗಮನದಲ್ಲಿ ಕೂಡ ಇದೆ. ಈ ತೊಂದರೆ ಆಗಿರುವುದರ ಬಗ್ಗೆ ನಾವು ಲಕ್ಷ್ಯ ವಹಿಸುತ್ತೇವೆ. ಈ ಸಚಿವ ಸಂಪುಟದ ನಿರ್ಣಯ ಆಗಿದ್ದರ ಬಗ್ಗೆ ಅದನ್ನು ಮಾರ್ಪಾಡು ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಅಡ್ವೊಕೇಟ್ ಜನರಲ್ ಅವರ ಜೊತೆಯಲ್ಲಿ ಕಾನೂನಿನ ಸಲಹೆಯನ್ನು ಪಡೆದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸಭಾಪತಿಯವರಿಗೆ ಹೇಳಿದ್ದೆವು. ಇವತ್ತಿಗೂ ಅದಕ್ಕೆ ನಾವು ಬದ್ಧರಾಗಿದ್ದೇವೆ.

**ಶ್ರೀ ಎಂ.ಸಿ. ನಾಣಯ್ಯ:-** ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಅಡ್ವೊಕೇಟ್ ಜನರಲ್ ಅವರ ಜೊತೆಯಲ್ಲಿ ಕಾನೂನಿನ ಸಲಹೆಯನ್ನು ಪಡೆದು ಇದರ ಪುನರ್ ವಿಮರ್ಶೆ ಮಾಡಬೇಕು ಎಂಬ ಒಂದು ಚಿಂತನೆ ನಿಮ್ಮಲ್ಲಿ ಇದೆ. ಆದರೆ ಆ ಆಟದ ಮೈದಾನದ status-quo ವನ್ನು maintain ಮಾಡಬೇಕಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್:-** ಈಗ ನಮ್ಮ ಗಮನಕ್ಕೆ ತಂದಿದ್ದೀರಿ. ಈಗಾಗಲೇ ಅವರಿಗೆ allot ಮಾಡಿರುವ ಜಾಗದಲ್ಲಿ ಅವರು ಕಟ್ಟಡ ಕಾಮಗಾರಿ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:-** ಇದು allotted ಜಾಗ ಅಂದರೆ ಅವರಿಗೆ ಎಲ್ಲವನ್ನೂ ಕೊಟ್ಟಿದ್ದಾರೆ. ದಯವಿಟ್ಟು ಈ ಆಟದ ಮೈದಾನವೊಂದನ್ನು ತಾವು ಉಳಿಸಿಕೊಳ್ಳಿ ಎಂದು ಹೇಳುತ್ತಿರುವುದು.

**ಶ್ರೀ ಕೆ.ಬಿ. ಶಾಣಪ್ಪ:-** ಅದನ್ನು ಉಳಿಸಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಎಲ್ಲವನ್ನು ಕೊಟ್ಟು ಬಿಟ್ಟಿದ್ದಾರೆ. ಹಿಂದಿನ ಸರ್ಕಾರದಲ್ಲಿ ನಿರ್ಣಯವಾಗಿದೆ. ಇಂತಹ ಸಂದರ್ಭದಲ್ಲಿ ಏನು ಮಾಡುವುದಕ್ಕೆ

ಸಾಧ್ಯವಿದೆ ಎಂಬುದರ ಬಗ್ಗೆ ಅಡ್ವೋಕೇಟ್ ಜನರಲ್ ಅವರ ಜೊತೆಯಲ್ಲಿ ಕಾನೂನಿನ ಸಲಹೆಯನ್ನು ಪಡೆಯುತ್ತೇವೆಂದು ಹೇಳಿದ್ದೆವು. What is the legal aspect and what will be the legal impact? Whether we are capable of amending the very decision taken by the Cabinet? ಇದರ ಬಗ್ಗೆ ನಾವು ಪರಿಶೀಲನೆ ಮಾಡಿ, ಆ ರೀತಿ ಮಾಡುವುದಕ್ಕೆ ಬರುತ್ತದೆ ಎಂದು ಹೇಳಿದರೆ ಮಾಡುತ್ತೇವೆಂದು ನಾವು ಹೇಳಿದ್ದೆವು.

**ಶ್ರೀ ಎಂ.ಸಿ. ನಾಣಯ್ಯ:-** ಹಾಗಾದರೆ ಈ ಸರ್ಕಾರ ಅಧಿಕಾರ ಇಲ್ಲವೇ? Pending decision of that, why should you not stop the construction on that playground area?

**ಶ್ರೀ ಕೆ.ಬಿ. ಶಾಣಪ್ಪ:-** ಅದು ನಿಮ್ಮ ಆಸ್ತಿ. ನೀವು ಅವರಿಗೆ ಲೀಸ್ ಆಧಾರದ ಮೇಲೆ ಕೊಟ್ಟಿದ್ದಿರಿ ಅದನ್ನು ನಿಲ್ಲಿಸಿ ಎಂದು ಹೇಳುತ್ತಿದ್ದೇವೆ ಅಷ್ಟೆ.

**ಶ್ರೀ ಎಸ್.ಆರ್. ಪಾಟೀಲ್:-** ನೀವು ಇವೆಲ್ಲವನ್ನೂ ಮಾಡಿ ತಂದು ನಮಗೆ ಹೇಳುವುದಕ್ಕೆ ಪ್ರಾರಂಭ ಮಾಡಿದ್ದೀರಿ. It is a continued entity. ಹಿಂದೆ ಮಾಡಿದ್ದಾರೆಂದು ನಾವು ಕೈ ಚೆಲ್ಲಿ ಕುಳಿತುಕೊಳ್ಳುತ್ತೇವೆಂದು ಹೇಳಿಲ್ಲ. ನಮ್ಮ ಬೆಂಗಳೂರು ನಗರದ ನಾಗರೀಕರ ಹಿತ ದೃಷ್ಟಿಯಿಂದ ಮತ್ತು ಮಕ್ಕಳ ಹಿತದೃಷ್ಟಿಯಿಂದ ಅಡ್ವೋಕೇಟ್ ಜನರಲ್ ಅವರ ಜೊತೆಯಲ್ಲಿ ಕಾನೂನಿನ ಸಲಹೆಯನ್ನು ಪಡೆದು ಅದನ್ನು ಏನು ಮಾರ್ಪಾಡು ಮಾಡುವುದಕ್ಕೆ ಸಾಧ್ಯವಿದೆಯೋ ಅದರ ಬಗ್ಗೆ ಚಿಂತನೆ ಮಾಡುತ್ತೇವೆಂದು ಹೇಳಿದ್ದೆವು. ಇವತ್ತಿಗೂ ಅದಕ್ಕೆ ಬದ್ಧರಾಗಿದ್ದೇವೆ. ಇದರ ಪುನರ್ ವಿಮರ್ಶೆ ಮಾಡಬೇಕು ಎಂಬ ಒಂದು ಚಿಂತನೆ ನಿಮ್ಮಲ್ಲಿ ಇದೆ. ಈಗ ಕಟ್ಟಡ ಕಾಮಗಾರಿ ನಡೆದಿದೆ ಎಂದು ಹೇಳಿದ ಮೇಲೆ ಇದರ ಬಗ್ಗೆ ತೀವ್ರವಾಗಿ.. Unless we rectify that Cabinet decision, how can we stop it? ನೀವು ಅದನ್ನು ಹೇಳಿ.

**SRI M.C. NANAIAH:-** It is the pending decision of the Cabinet, why should not you stop the construction on that playground area?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ನಾಣಯ್ಯನವರೆ, ನೀವು ನನಗೆ ಒಂದು ಜಮೀನನ್ನು ಮಾರಾಟ ಮಾಡುತ್ತೀರಿ ಎಂದು ಇಟ್ಟುಕೊಳ್ಳಿ.

(ಗೊಂದಲ)

**Sri M.C. NANAIAH:-** This is the leased property given by the Government.

**Sri S.R. PATIL:-** You should go through the recitals of the lease deed.

**ಶ್ರೀ ಎಂ.ಸಿ. ನಾಣಯ್ಯ:-** ಬೇಡವೆಂದು ಹೇಳುವುದಾದರೆ ಬೇಡವೆಂದು ಹೇಳಿ. ಆ ಜಾಗದಲ್ಲಿ ಬರೀ ಕಟ್ಟಡ ಕಟ್ಟುವುದಕ್ಕೆ ಸೀಮಿತವಾದ ವಿಚಾರವೆಂದು ಹೇಳಿದರೆ ಅದನ್ನು ಹೇಳಿಬಿಡಿ. We will not raise it. ನಿಮ್ಮ ಸರ್ಕಾರ ಕೂಡ ಈ ಆಟದ ಮೈದಾನದಲ್ಲಿ ಕಟ್ಟಡ ಕಟ್ಟುವುದಕ್ಕೆ ನಮ್ಮ ಸಮ್ಮತಿ ಇದೆ ಎಂದು ಹೇಳುಬಿಡಿ.

**ಶ್ರೀ ಎಸ್.ಆರ್. ಪಾಟೀಲ್:-** ನಾನು ಅದಕ್ಕೆ ಸಮ್ಮತಿ ಇದೆ ಎಂದು ಹೇಳುವುದಿಲ್ಲ. ನಾವು ಅಡ್ವೊಕೇಟ್ ಜನರಲ್ ಅವರ ಜೊತೆಯಲ್ಲಿ ಮಾತನಾಡಿ ಕಾನೂನಿನ ಸಲಹೆಯನ್ನು ಪಡೆದು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದನ್ನು ಮಾರ್ಪಾಡು ಮಾಡುವ ಬಗ್ಗೆ. . . . .

(ಗೊಂದಲ)

**ಸಭಾಪತಿಯವರು:-** ಈ ವಿಚಾರ ಸಾಕು. ಅವರು ತಮ್ಮ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ತಾವು ಗಮನಿಸಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ ಈ ವಿಚಾರದ ಬಗ್ಗೆ . . . .

**ಶ್ರೀ ಎಸ್.ಆರ್. ಪಾಟೀಲ್:-** ಅವರು ಅಲ್ಲಿ ಕಟ್ಟಡವನ್ನು ಕಟ್ಟಿದ ನಂತರವೂ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಮಾನ್ಯ

ಹೊರಟ್ಟಿಯವರೆ ಕೇಳಿ. ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು, ಅತ್ಯಂತ ಶೀಘ್ರವಾಗಿ ಈ ಬಗ್ಗೆ ಅಡ್ವೋಕೇಟ್ ಜನರಲ್ ಅವರ ಜೊತೆಯಲ್ಲಿ ಕಾನೂನಿನ ಸಲಹೆಯನ್ನು ಪಡೆದು ಅತ್ಯಂತ ಶೀಘ್ರವಾಗಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಮಗೆ ಸಾರ್ವಜನಿಕರ ಹಿತ ಬಹಳ ಮಹತ್ವದ್ದಾಗಿದೆ.

**ಸಭಾಪತಿಯವರು:–** ಈಗ ಸಾಕು. ಅದರ ಬಗ್ಗೆ ಚರ್ಚೆ ಬೇಡ. ಪ್ರಸ್ತಾಪ ಮಾಡಿದ್ದೀರಿ. ಸರ್ಕಾರ ಏನು ಮಾಡುತ್ತದೆಯೋ ನೋಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಬಹಳ ಗಂಭೀರವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇನ್ನು ತಡ ಮಾಡದೆ ಅತ್ಯಂತ ಶೀಘ್ರವಾಗಿ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಬೆಂಗಳೂರು ನಗರದ ಜನತೆಯ ಬಗ್ಗೆ ಗೌರವ ಇದೆ ಮತ್ತು ಮಕ್ಕಳ ಬಗ್ಗೆ ವಿಶ್ವಾಸವಿದೆ.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಏನಾದರೂ ಮಾಡಿ. ಆದರೆ ಈಗ ತಕ್ಷಣಕ್ಕೆ ಅಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿರುವುದನ್ನು ನಿಲ್ಲಿಸಿ. ನಂತರ ಕಾನೂನಿನ ಪ್ರಕಾರ ಅವರಿಗೆ ಯೋಗ್ಯತೆ ಇದ್ದರೆ ಅವರಿಗೇ ಮತ್ತೆ ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:–** ಅತ್ಯಂತ ಶೀಘ್ರವಾಗಿ ಕ್ರಮ ಜರುಗಿಸುತ್ತೇವೆ ಕಾನೂನಾತ್ಮಕವಾಗಿ ಏನು ಸಾಧ್ಯವಿದೆ ಅದೆಲ್ಲವನ್ನು ಮಾಡುತ್ತೇವೆ.

**ಸಭಾಪತಿಯವರು:–** ನಾನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆದರೆ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ.

**SRI M.C. NANAIAH:-** You are not much better than the previous government. That's all.

**ಸಭಾಪತಿಯವರು:–** ಹಿಂದೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಉತ್ತರ ಬಂದಿದೆ. ಮಾನ್ಯ ನಾಣಯ್ಯನವರು ಪ್ರಸ್ತಾಪ ಮಾಡಿದ ವಿಚಾರಕ್ಕೆ

ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಮಧ್ಯಾಹ್ನದ ಮೇಲೆ ಬಂದರೆ ಅವರು ಉತ್ತರ ಕೊಡಲಿ. ಉಳಿದ ಎರಡು ವಿಚಾರಗಳಿಗೆ ಸಂಬಂಧಪಟ್ಟಂತೆ ಆಯಾಯ ಸಚಿವರು ಇದ್ದರೆ ಅವರು ಉತ್ತರ ಕೊಡಲಿ. ಇಲ್ಲವಾದಲ್ಲಿ ಮಾನ್ಯ ಸಭಾ ನಾಯಕರು ಉತ್ತರವನ್ನು ಕೊಡಲಿ. ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಉತ್ತರವನ್ನು ಕೊಡಬೇಕು.

**3) ಸಚಿವರ ಹೇಳಿಕೆ**

**ಮಾನ್ಯ ಸಭಾಪತಿಯವರು ಅಪ್ಪಣೆಯ ಮೇರೆಗೆ ಚರ್ಚೆ ಮಾಡಲಾದ ಪ್ರಶ್ನೆಗೆ ಸಚಿವರಿಂದ ಉತ್ತರ**

**ಅ) ವಿಷಯ:** ಉಡುಪಿ ಜಿಲ್ಲೆಯ ಕರಾವಳಿ ಪ್ರದೇಶದ ಕಡಲತೀರದ ಪ್ರದೇಶಗಳಲ್ಲಿ ಕಡಲಬ್ಬರ ತೀವ್ರವಾಗಿರುವ ಬಗ್ಗೆ

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು):–** ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಚಾರಕ್ಕೆ ನನ್ನ ಹೇಳಿಕೆ ಈ ರೀತಿ ಇದೆ.

**ಶೂನ್ಯ ವೇಳೆಯ ಪ್ರಶ್ನೆ:** ಉಡುಪಿ ಜಿಲ್ಲೆಯ ಕರಾವಳಿ ಪ್ರದೇಶದ ಕಡಲ ತೀರದ ಪ್ರದೇಶಗಳಲ್ಲಿ ಕಡಲಬ್ಬರ ತೀವ್ರವಾಗಿ ಕಡಲು ಕೊರೆತದಿಂದಾಗಿ ಮತ್ತು ತೀವ್ರ ಪ್ರಕೃತಿ ವಿಕೋಪದಿಂದಾಗಿ ಗಂಗೊಳ್ಳಿ ಕಿರುಬಂದರಿನಲ್ಲಿ ಮೀನುಗಾರರಿಗೆ ಬಾರಿನಷ್ಠ ಉಂಟಾಗಿದೆ. ಕುಂದಾಪುರ ತಾಲ್ಲೂಕು ಕೋಡಿ, ಕಿನಾರಕೋಡಿ ಮತ್ತು ಉಡುಪಿ ತಾಲ್ಲೂಕಿನ ಮಣೂರುಕೋಟಾ, ಮಲ್ಪೆ, ವಿಶೇಷವಾಗಿ ಕಾಪು ಲೇಟ್‌ಔಸ್ ಕಡಲಬ್ಬರಕ್ಕೆ ಆಹುತಿಯಾಗುತ್ತಿವೆ.

ಅನೇಕ ರಸ್ತೆಗಳನ್ನು ತೆರೆಗಳು ನುಂಗುತ್ತಿವೆ. ಈ ಸಮುದ್ರದ ಹಂಚಿನಲ್ಲಿ ತುರ್ತಾಗಿ ತಡೆಗೋಡೆ ನಿರ್ಮಾಣ ಮಾಡದಿದ್ದಲ್ಲಿ ಅಪಾಯದ ಸಮಸ್ಯೆ

ಹೆಚ್ಚಾಗಬಹುದೆಂಬ ಆತಂಕವಿದೆ. ಕೂಡಲೇ ಬಂದರು ಮಂತ್ರಿಗಳು ಕಡಲು ಕೊರೆತದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಿ, ಸಮುದ್ರ ತಡೆಗೋಡೆ ರಚನೆ ಬಗ್ಗೆ ಕ್ರಮ ಕೈಗೊಳ್ಳಬೇಕು. ಸಂತ್ರಸ್ಥರಿಗೆ ತುರ್ತು ಪರಿಹಾರ ನೀಡಲು ಆದೇಶಿಸಬೇಕೆಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ವಿವರಣೆ:**

2013–14ನೇ ಸಾಲಿನ ಮಳೆಗಾಲದಲ್ಲಿ ಉಡುಪಿ ಜಿಲ್ಲೆಯ ಸಮುದ್ರ ತೀರ ಪ್ರದೇಶದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿ, ತೆಂಕ ಎರ್ಮಾಳ್ ಮೀನುಗಾರಿಕಾ ರಸ್ತೆ ಸುಮಾರು 300.00 ರಿಂದ 400.00ಮೀ ಉದ್ದಕ್ಕೆ ಸಂಪೂರ್ಣ ಕೊಚ್ಚಿ ಹೋಗಿರುತ್ತದೆ. ಇದೇ ರೀತಿ ಮಣೂರು ಪಡುಕರೆ ಜಟ್ಟಿಕೇಶ್ವರ ದೇವಸ್ಥಾನದ ಹಿಂಭಾಗದ ರಸ್ತೆ 150.00ಮೀ ಉದ್ದಕ್ಕೆ ಹಾನಿಯಾಗಿರುತ್ತದೆ. ಹಾಗೂ ಕೋಡಿಕನ್ಯಾನ ಮೀನುಗಾರಿಕಾ ರಸ್ತೆಗೆ ಕೂಡಾ ಹಾನಿಯಾಗಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸಮುದ್ರದ ಕೊರೆತ ಸಂಭವಿಸಿದ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ವಿಧಾನಸಭಾ ಕ್ಷೇತ್ರ | ಸಮುದ್ರ ಕೊರೆತ ಸಂಭವಿಸಿದ ಸ್ಥಳಗಳು | ಸಂಭವಿಸಿದ ಒಟ್ಟು ಸಮುದ್ರ ಕೊರೆತದ ಉದ್ದ | ತುರ್ತು ಸಂರಕ್ಷಣಾ ಕಾಮಗಾರಿಗೆ ಬೇಕಾದ ಅನುದಾನ |
|---|---|---|---|---|
| 1 | ಕಾಪು | ತೆಂಕ ಎರ್ಮಾಳ್, ಉದ್ಯಾವರ ಪಡುಕರೆ, ಕನಕೋಡ ಭಜನಾ ಮಂದಿರ, ತೆಂಕ ಎರ್ಮಾಳಿನ ನಾಗಾರ್ಜುನ ಬ್ರೇಕ್ ವಾಟರ್ ಸಮೀಪ, ಬಡಾ ಎರ್ಮಾಳ್ ಮತ್ತು ಕೈಪುಂಜಾಲು. | 650.00 ಮೀ | ₹ 54.00 ಲಕ್ಷ |
| 2 | ಕುಂದಾಪುರ | ಕುಂದಾಪುರ ಕೋಡಿ, ಕೋಡಿಕನ್ಯಾನ, ಕೋಡಿಕಿನಾರೆ ಹೋಟೆಲ್ ಮುಂಭಾಗ, ಕೋಟ ಪಡುಕರೆ, ಸಾಸ್ತಾನ ಕೋಡಿ, ಮಣೂರು ಜಟ್ಟಿಕೇಶ್ವರ ದೇವಸ್ಥಾನದ ಹಿಂಬದಿ ಮತ್ತು ಕೋಟತಟ್ಟು | 630.00 ಮೀ | ₹ 100.50 ಲಕ್ಷ |
| 3 | ಬೈಂದೂರು | ಶಿರೂರು ಕಳಿಹಿತ್ಲು, ಮರವಂತೆ, ತ್ರಾಸಿ ಬೀಚ್‌ನ ಹತ್ತಿರ, ಪಡುವರಿ ದೊಂಬೆ, ಆದ್ರಗೋಳಿ ಮತ್ತು ಕಂಚುಗೋಡು | 1010.00 ಮೀ | ₹ 73.00 ಲಕ್ಷ |
| | | **ಒಟ್ಟು** | **2290.00 ಮೀ** | **₹ 227.50 ಲಕ್ಷ** |

ಜಿಲ್ಲಾಡಳಿತದ ಸೂಚನೆಯ ಮೇರೆಗೆ ಮೇಲಿನ ಎಲ್ಲಾ ಪ್ರದೇಶಗಳಲ್ಲಿ ಸಮುದ್ರ ಕೊರೆತದ ತೀವ್ರತೆ ಹಾಗೂ ಅಗತ್ಯತೆಗನುಗುಣವಾಗಿ ತಾತ್ಕಾಲಿಕ ತುರ್ತು ತಡೆಗೋಡೆಗಳ ಕಾಮಗಾರಿಯನ್ನು ಕಲ್ಲುಗಳನ್ನು ಹಾಕುವ ಮುಖಾಂತರ ನಿರ್ವಹಿಸಲಾಗುತ್ತಿದೆ.

ದಿನಾಂಕ: 26–07–2013ರಂದು ಬೀಸಿದ ಬಲವಾದ ಗಾಳಿ ಮಳೆಯಿಂದಾಗಿ ಗಂಗೊಳ್ಳಿ ಮೀನುಗಾರಿಕಾ ಬಂದರಿನ 2 ಹರಾಜು ಮಳಿಗೆಗಳ ಛಾವಣಿಯ ಶೀಟುಗಳು ಹಾಗೂ ಬಾಗಿಲು ಕಿಟಕಿಗಳಿಗೆ ತುಂಬಾ ಹಾನಿಯಾಗಿದ್ದು, ಹಾನಿಯ ಅಂದಾಜು ವೆಚ್ಚವು ಸುಮಾರು ₹ 12.00 ಲಕ್ಷಗಳಾಗುತ್ತಿದ್ದು, ಸದರಿ ವಿಷಯದ ದುರಸ್ತಿ ಬಗ್ಗೆ ಮೀನುಗಾರಿಕಾ ನಿರ್ದೇಶಕರಿಗೆ ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಜಿಲ್ಲಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗುವುದು.

**ಸಭಾಪತಿಯವರು:–** ಮಾನ್ಯ ಪಟೇಲ್ ಶಿವರಾಂ ರವರ ಶೂನ್ಯವೇಳೆಗೆ ಪ್ರಸ್ತಾಪಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ.

### ಆ) ಬೆಂಗಳೂರು ನಗರ ಮತ್ತು ರಾಜ್ಯದ ಇತರೆ ಪಟ್ಟಣಗಳಲ್ಲಿ ಫ್ಲೆಕ್ಸ್ ಹಾವಳಿಯನ್ನು ತಡೆಗಟ್ಟುವ ಬಗ್ಗೆ

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಗಳೆ,

**ಉತ್ತರ:**

1964 ರ ಕರ್ನಾಟಕ ಪುರಸಭಾ ಕಾಯ್ದೆ ಕಲಂ 133 ರ ಪ್ರಕಾರ ಯಾವುದೇ ಜಾಹೀರಾತನ್ನು ಮುನ್ಸಿಪಲ್ ಕೌನ್ಸಿಲ್‌ನ ಅನುಮತಿಯಿಲ್ಲದೆ ಪೌರಸಭಾ ಪ್ರದೇಶದೊಳಗೆ ಯಾವುದೇ ಸ್ಥಳದಲ್ಲಿ ಯಾವ ರೀತಿಯಲ್ಲಾಗಲಿ ಪ್ರದರ್ಶಿಸಲು ಅವಕಾಶವಿರುವುದಿಲ್ಲ. ಅನಧಿಕೃತ ಜಾಹೀರಾತುಗಳನ್ನು ಮೇಲ್ಕಂಡ ಕಾಯ್ದೆಯ ಕಲಂ 136 ರಂತೆ ತೆಗೆದುಹಾಕಬಹುದಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವ್ಯಕ್ತಿಗಳು ಹಾಗೂ ಸಂಘಸಂಸ್ಥೆಗಳು, ಹುಟ್ಟುಹಬ್ಬ ಹಾಗೂ ಇನ್ನಿತರೆ ಕಾರಣಗಳಿಗಾಗಿ ಅಳವಡಿಸುವ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲು ಪಾಲಿಕೆಯ ಜಾಹೀರಾತು ಬೈಲಾದ–2006 ರ ಉಪ ವಿಧಿ 4 'ಸಿ' ರಂತೆ ಅನುಮತಿ ಪಡೆಯಬೇಕಾಗಿರುತ್ತದೆ. ಈ ರೀತಿ ಅನುಮತಿ ಪಡೆದು ಅಳವಡಿಸುವ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅನುಮತಿ ಪಡೆದಿರುವ ವ್ಯಕ್ತಿ/ಸಂಘಸಂಸ್ಥೆಗಳು ಅವಧಿ ಮುಗಿದ ನಂತರ ತೆರವುಗೊಳಿಸಬೇಕಾಗಿರುತ್ತದೆ. ಒಂದು ವೇಳೆ ಅವಧಿ ಮುಗಿದ ನಂತರವೂ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರೆವುಗೊಳಸದೇ ಇದ್ದಲ್ಲಿ ಪಾಲಿಕೆಯ ವಲಯಗಳಲ್ಲಿರುವ ಪ್ರಹರಿ ದಳ ಮತ್ತು ಜಾಹೀರಾತು ವಿಭಾಗದ ಜಾಗೃತಿ ದಳ (Enforcement Team) ದ ನೆರವಿನಿಂದ ಪ್ರತಿನಿತ್ಯ ತೆರವುಗೊಳಿಸಲಾಗುತ್ತಿದೆ. ಚುನಾವಣೆ ನಂತರ ಇತ್ತೀಚಿನವರೆಗೆ ಸುಮಾರು 3000 ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲಾಗಿದೆ.

ಅಲ್ಲದೆ ಅನಧಿಕೃತವಾಗಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸುವ ಸಂಘಸಂಸ್ಥೆ/ವ್ಯಕ್ತಿಗಳ ಮೇಲೆ The Karnataka Open Places Prevention of Disfigurement Act, 1981ರ ಸೆಕ್ಷನ್ 3 ರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಜುಲೈ ಮಾಹೆಯಲ್ಲಿ ಚಲನಚಿತ್ರಗಳ ಪೋಸ್ಟರ್‌ಗಳನ್ನು ಗೋಡೆಗಳ ಮೇಲೆ ಅಂಟಿಸಿದ್ದ 8 ನಿರ್ಮಾಪಕರ ಮೇಲೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲು ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳು, ಸಾರ್ವಜನಿಕ ಹೆದ್ದಾರಿಗಳು, ಜನನಿಬಿಡ ಪ್ರದೇಶಗಳಲ್ಲಿ ಇವುಗಳನ್ನು ನಿಷೇಧ ಪಡಿಸುವ ಸಂಬಂಧ ಸೂಕ್ತ ಕಾನೂನು ರೂಪಿಸಲು ಪರಿಶೀಲಿಸಲಾಗುವುದು.

## 4) ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

## ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು ವಕ್ಫ ಮಂಡಳಿಗೆ ಸೇರಿದ ಸ್ಥಿರ ಮತ್ತು ಚರ ಆಸ್ತಿಗಳ ರಕ್ಷಣೆ ಬಗ್ಗೆ

**ಸಭಾಪತಿಯವರು:–** ಡಾ॥ ಎ.ಎಚ್. ಶಿವಯೋಗಿಸ್ವಾಮಿಯವರು ನನಗೆ ಒಂದು ಪತ್ರವನ್ನು ಬರೆದು, ನಾನು ಪತ್ರವನ್ನು ಓದಬೇಕು ಅದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳಿಕೊಂಡಿದ್ದಾರೆ. ಬೇಗನೆ ಓದಿಮುಗಿಸಿ.

**ಡಾ॥ ಎ.ಎಚ್. ಶಿವಯೋಗಿ ಸ್ವಾಮಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ದಿನಾಂಕ:29–7–2013ರಂದು ನಾನು, ಕ್ಯಾಪ್ಟನ್ ಗಣೇಶ್ ಮತ್ತು ಮಾನ್ಯ ಮೋನಪ್ಪ ಭಂಡಾರಿಯವರು ನಿಯಮ 72ರ ಅಡಿಯಲ್ಲಿ ಒಂದು ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್ ಮತ್ತು ವಕ್ಫ್ ಸಚಿವರಿಗೆ ಕೊಡಲಾಗಿತ್ತು. ಆ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರು ಲಿಖಿತ ಉತ್ತರವನ್ನು ನೀಡಿದ್ದಾರೆ. ಅದರ ಮೇಲೆ ಸದನದಲ್ಲಿ ಚರ್ಚೆ ಮಾಡಲಾಗಿದೆ. ಆ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ನೀಡಿದ್ದು, ಸದನವನ್ನು ತಪ್ಪು ದಾರಿಗೆ ಎಳೆದಿರುತ್ತಾರೆ. ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರು ಬೇರೆ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಅವರ ಒಪ್ಪಿಗೆ ಇಲ್ಲದೆ ಏಕ ವ್ಯಕ್ತಿಯಾಗಿ ವರದಿ ನೀಡಿದ್ದಾರೆ, ಅದು ಆಯೋಗದ ವರದಿಯಲ್ಲ ಎಂದು ತಿಳಿಸಿರುತ್ತಾರೆ. ಆದರೆ ಆಯೋಗದ ಅಧ್ಯಕ್ಷರು ತಮ್ಮ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸುವಾಗ ಆಯೋಗದ ಸದಸ್ಯರಾಗಿದ್ದ ಆರು ಜನರಲ್ಲಿ ಐದು ಜನರು ಹಾಜರಾಗಿದ್ದರು. ಅಲ್ಲದೆ ಅಂದಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಜಮೀರ್ ಪಾಶಾರವರು ಹಾಜರಿದ್ದರು. ಇವರು ವರದಿ ಸಲ್ಲಿಸುವಾಗ ತೆಗೆದಿರುವ ಪೋಟೋ ದಿನಾಂಕ: 27–3–2012ರ ಹೊಸದಿಂಗತ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಎರಡನೆ ಅಂಶ ಎಂದರೆ, ಈ ವರದಿಯ ಬಗ್ಗೆ ದಿನಾಂಕ:3–1–2013ರಂದು ನಡೆದಿರುವ ಸಚಿವ ಸಂಪುಟದ ಸಭೆಯಲ್ಲಿ ವಿಸ್ಕೃತವಾದ ಚರ್ಚೆ ನಡೆದಿದ್ದು Advocate General ರವರ ಸಲಹೆಯನ್ನು

ಪಡೆದು, ವರದಿಯಲ್ಲಿ ತಿಳಿಸಿರುವ ಅನೇಕ ವಿಷಯಗಳ ಬಗ್ಗೆ ರಾಜ್ಯ ಲೋಕಾಯುಕ್ತದ ತನಿಖೆಗೆ ಸಲ್ಲಿಸಲು ತೀರ್ಮಾನಿಸಲಾಯಿತು ಎಂದು ಅಂದಿನ ಕಾನೂನು ಮತ್ತು ಸಂಸದೀಯ ಸಚಿವರಾಗಿದ್ದ ಶ್ರೀ ಎಸ್. ಸುರೇಶ ಕುಮಾರ್‌ರವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿರುವುದನ್ನು ದಿನಾಂಕ:4–1–2013 ರ ಹಿಂದೂ ಮತ್ತು ಡೆಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಮತ್ತು ಇನ್ನು ಅನೇಕ ಪ್ರತಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಮುಚ್ಚಿಟ್ಟು, ಸತ್ಯಾಂಶಗಳನ್ನು ವಾಸ್ತವಾಂಶಗಳನ್ನು ಸದನಕ್ಕೆ ತಿಳಿಸದೆ ಅಗೌರವವನ್ನು ಉಂಟು ಮಾಡುತ್ತಾರೆ. ಈ ವಿಷಯವನ್ನು ಪ್ರಸ್ತಾಪಿಸಲು ಮತ್ತು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತಂದು ತಾವು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಆ ಪತ್ರವನ್ನು ನನಗೆ ಕಳುಹಿಸಿ ಕೊಡಿ. ನಾನು ಅದನ್ನು ನೋಡಿ ನಮ್ಮ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ಪ್ರಕಾರ ಏನು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿದೆ ಆ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ಅಂತಿಮ ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆ. ಚರ್ಚೆ ಬೇಡ, ಕೊಟ್ಟಿದ್ದಿರಾ ಅದನ್ನು ನಾನು ನೋಡುತ್ತೇನೆ.

**ಡಾ|| ಎ.ಎಚ್. ಶಿವಯೋಗಿ ಸ್ವಾಮಿ:–** ಮಾನ್ಯ ಸಭಾಪತಿಗಳೆ, ಇದು ಹಕ್ಕುಚ್ಯುತಿಗೆ ಬರುವುದಾದರೆ, ಸಚಿವರ ಮೇಲೆ ಹಕ್ಕುಚ್ಯುತಿ ಮಂಡನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಹಕ್ಕುಚ್ಯುತಿಗೆ ಬರುವುದಾದ್ದರೆ ಅಲ್ಲಿಗೆ ರೆಫರ್ ಮಾಡುತ್ತೇನೆ. ಯಾವ ರೀತಿ ಮಾಡಬಹುದು ಎನ್ನುವುದನ್ನು ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ನು ನೋಡಿಕೊಂಡು ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

**ಶ್ರೀ ಡಿ.ಬಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಕಾನೂನಿನ ಚೌಕ್ಕಟಿನಲ್ಲಿ ಏನು ಇದೆ ಆ ರೀತಿ ನೀವು ಕ್ರಮವನ್ನು ತೆಗೆದುಕೊಳ್ಳಿ. ಆದರೆ ಇದೊಂದು ಗಂಭೀರವಾದ ವಿಚಾರವಾದ

ಕಾರಣ ಇದರ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿರುತ್ತದೆ. ಏಕೆಂದರೆ ಇದನ್ನು ಸದನದಲ್ಲಿ ಚರ್ಚೆ ಮಾಡಲು ಅವಕಾಶವಿಲ್ಲ. ಇವತ್ತು ಸಾಯಂಕಾಲ ಸದನ ಅನಿರ್ಧಿಷ್ಟ ಕಾಲದವರಿಗೆ ಮುಂದುಡೂಲಾಗುತ್ತದೆ. ಬೇರೆ ರೀತಿಯಲ್ಲಿ ಪ್ರಸ್ತಾಪ ಮಾಡಲು ನಮಗೆ ಅವಕಾಶಗಳಿಲ್ಲ. ತಾವು ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು ಎನ್ನುವುದು ನಮ್ಮ ವಿನಮ್ರವಾದ ವಿನಂತಿ.

**ಸಭಾಪತಿಯವರು:–** ಖಂಡಿತವಾಗಿಯು ಪರಿಶೀಲನೆ ಮಾಡುತ್ತೇನೆ.

## 5. ಅಭಿನಂದನಾ ಪ್ರಸ್ತಾಪ

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಮಧುಸೂದನ್‌ರವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 32(ಎ) ಮೇರೆಗೆ ಅಭಿನಂದನೆಯ ಸೂಚನೆಯ ಪ್ರಸ್ತಾಪವನ್ನು ಕಳುಹಿಸಿದ್ದಾರೆ ಅದನ್ನು ಅವರು ಸಭೆಯ ಮುಂದೆ ಮಂಡಿಸಬಹುದು.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 32(ಎ) ಮೇರೆಗೆ ಅಭಿನಂದನೆಯ ಸೂಚನೆಯ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಸಹಾಯಕ ಚರ್ಚಾ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಎಸ್. ನಂಜುಡಸ್ವಾಮಿ ಯವರು, ಪ್ರೊ: ಡಾ॥ ಡಿ.ಟಿ. ಬಸವರಾಜರವರ ಮಾರ್ಗದರ್ಶನದಲ್ಲಿ ಸಲ್ಲಿಸಿದ "ಮಂಡ್ಯ ಜಿಲ್ಲೆಯ ಶಾಸನಗಳ ಒಂದು ಅಧ್ಯಯನ" ಎನ್ನುವ ಪ್ರೌಢ ಪ್ರಬಂಧವನ್ನು ಅಂಗೀಕರಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು, ದಿನಾಂಕ: 23–7–2013ರಂದು ನಡೆದ ಘಟಿಕೋತ್ಸವದಲ್ಲಿ ಪಿಎಚ್‌ಡಿ ಪದವಿಯನ್ನು ಪ್ರಧಾನ ಮಾಡಿದೆ. ಒಟ್ಟು 1062 ಪುಟಗಳ ಎರಡು ಸಂಪುಟಗಳು ಹಾಗೂ ಸುಮಾರು 400 ಅಪರೂಪದ ಸ್ಮಾರಕಗಳ ಛಾಯಾಚಿತ್ರವನ್ನು ಒಳಗೊಂಡಿರುವ ಈ ಬೃಹತ್ ಮಹಾಪ್ರಬಂಧವನ್ನು ನಾಡಿನ ಪ್ರಮುಖ ಪತ್ರಿಕೆಗಳು ಶಾಸನ ವಿದ್ವಾಂಸರು ವಿಶ್ವವಿದ್ಯಾನಿಲಯಕ್ಕೆ

ಸಲ್ಲಿಸಲ್ಪಟಿರುವ ಪ್ರಬಂಧಗಳ ಪೈಕಿ ಅತ್ಯುತ್ತಮವಾದ ಮಹಾಪ್ರಬಂಧವೆಂದು ಗುರುತಿಸಿದ್ದಾರೆ. ನಮ್ಮ ವಿಧಾನ ಪರಿಷತ್ತಿನ ಸಚಿವಾಲಯದ ಉದ್ಯೋಗಿಯಾಗಿರುವ ಇವರ ಸಾಧನೆಯನ್ನು ಸದನವು ಶ್ಲಾಘಿಸುತ್ತದೆ ಹಾಗೂ ಅವರನ್ನು ಅಭಿನಂದಿಸುತ್ತದೆ.

**ಸಭಾಪತಿಯವರು:–** ಅಭಿನಂದನಾ ಪ್ರಸ್ತಾವವನ್ನು ಸದನವು ಸರ್ವಾನುಮತದಿಂದ ಅಂಗೀಕರಿಸಿದೆ.

**(ಅಭಿನಂದನಾ ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)**

## 6. ಶಾಸನ ರಚನೆ

### ಅ) ವಿಧೇಯಕದ ಮಂಡನೆ

### ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ "2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

## ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

## ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕ, 2013 ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು, ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಕಬ್ಬನ ಪಾರ್ಕ್ ವ್ಯಾಪ್ತಿಯಲ್ಲಿ ಯಾವುದೆ ಕಟ್ಟಡ ಕಾಮಗಾರಿ ನಡೆಯಬಾರದು ಎಂದು ನಿರ್ಣಯವಿರುವುದರಿಂದ, ನಮ್ಮ ವಿಧಾನಸೌಧ ಮತ್ತು ವಿಕಾಸಸೌಧದ 49 ಎಕರೆ 34 ಗುಂಟೆ ಭೂಮಿಯಲ್ಲಿ ಸ್ಥಾಪಿಸಿರುವಂತ ಪವಿತ್ರವಾದ ದೇಗುಲ ಏನು ಇದೆ ಇದನ್ನು ಕಬ್ಬನ್ ಪಾರ್ಕ್‌ನಿಂದ ಹೊರಗಿಡುವ ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. ಈ ದೇಶದ ಗೌರವ ಪ್ರಧಾನ ಮಂತ್ರಿಗಳಾಗಿದ್ದ ದಿ: ಲಾಲ ಬಹದ್ದೂರ ಶಾಸ್ತ್ರಿಯವರ ಪುತ್ಥಳಿಯು ಕೂಡ ಅನಾವರಣಗೊಳ್ಳದೆ ಹಾಗೆ ಇದೆ. ನನಗನ್ನಿಸುತ್ತದೆ. ಇದು ಒಂದು ರೀತಿಯಾಗಿ ಅನಮಾನಕರವಾದಂತಹ ಘಟನೆ ಎಂದು ನಾನು ಭಾವಿಸುತ್ತಿದ್ದೇನೆ. ಈ ಕಾನೂನು ಇದುದ್ದರಿಂದ ಈ ಪುತ್ಥಳಿಕೆ ಅನಾವರಣಗೊಳಿಸಲು ಸಾಧ್ಯವಾಗಿಲ್ಲ. ಈ ದೇಶ ಕಂಡಂತಹ ಅತ್ಯಂತ ಅಪರೂಪದ ಪ್ರಧಾನ ಮಂತ್ರಿಗಳಾಗಿದ್ದರು. ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ, ಬದ್ಧತೆಗೆ ಹೆಸರುವಾಸಿಯಾದಂತಹ ಪ್ರಧಾನ ಮಂತ್ರಿಗಳ ಪುತ್ಥಳಿಕೆಯನ್ನೇ ಅನಾವರಣ ಮಾಡಲು ತೊಂದರೆಯಾಗುವಂತಹ ಸಂದರ್ಭ ಮತ್ತು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ರಾಷ್ಟ್ರಪೀತ ಮಹಾತ್ಮ ಗಾಂಧಿಯವರ ಪುತ್ಥಳಿಯನ್ನು ಕೂಡ ಇವತ್ತು ಸ್ಥಾಪನೆ

ಮಾಡುವುದಕ್ಕೂ ಕೂಡ ತೊಂದರೆಯಾಗಿದೆ. ಸ್ವಾತಂತ್ರ ಸಂಗ್ರಾಮದ ನೇತೃತ್ವವನ್ನು ವಹಿಸಿ ಅತ್ಯಂತ ಬಲಿಷ್ಠ ಬ್ರಿಟಿಷರು, ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂತಹ ಬ್ರಿಟೀಷರನ್ನು ಭಾರತ ದೇಶದಿಂದ ಹೊಡೆದೋಡಿಸಿ ಭಾರತಾಂಬೆಯನ್ನು ಭಾಷಾ ಸಂಕೋಲೆಯಿಂದ ಬಿಡುಗಡೆ ಮಾಡುವುದಕ್ಕೆ ದೊಡ್ಡ ಹೋರಾಟ ಮಾಡಿದಂತಹ, ರಾಷ್ಟ್ರದ ತಂದೆ ಎಂದೆನಿಸಿಕೊಳ್ಳುವಂತಹ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪುತ್ಥಳಿಕೆಯನ್ನೂ ಕೂಡ ವಿಧಾನಸೌಧ ಮತ್ತು ವಿಕಾಸಸೌಧ ಮಧ್ಯದಲ್ಲಿ ಸ್ಥಾಪನೆ ಮಾಡಬೇಕೆಂದು ತಮ್ಮ ಅಧ್ಯಕ್ಷತೆಯಲ್ಲಿ ಅನೇಕ ಸಭೆಗಳು ನಡೆದಿದೆ. ಆ ದೃಷ್ಠಿಯಿಂದ ನಾವು ಇಲ್ಲಿ ಏನಾದರೂ ಕಟ್ಟಡ ಕಾಮಗಾರಿಯನ್ನು ಮಾಡಬೇಕೆಂಬ ದುರದ್ದೇಶ ನಮಗಿಲ್ಲ. ಆದರೆ ಇಂತಹ ರಾಷ್ಟ್ರೀಯ ನಾಯಕರುಗಳ ಪುತ್ಥಳಿಕೆಗಳನ್ನು ಸ್ಥಾಪನೆ ಮಾಡುವುದಕ್ಕೂ ಕೂಡ ನಮಗೆ ತೊಂದರೆಯಾಗಿರುವುದರಿಂದ ಇವತ್ತು ಈ ಒಂದು ವಿಧೇಯಕವನ್ನು ಮಂಡಿಸುವಂತಹ ಅವಶ್ಯಕತೆ ಇದೆ. ಆ ದೃಷ್ಟಿಯಿಂದ ಏನು 49 ಎಕರೆ 34 ಗುಂಟೆಯಷ್ಟು ಕ್ಷೇತ್ರ ಈ ನಾಡಿನ ಶಾಸನ ಸಭೆಯ ದೇಗುಲ ಎನಿಸಿಕೊಳ್ಳುವಂತಹ ಈ ಸ್ಥಳವನ್ನು ಕಬ್ಬನ್ ಪಾರ್ಕ್‌ನಿಂದ ಹೊರ ತರುವಂತಹ ಉದ್ದೇಶದಿಂದ ಈ ವಿಧೇಯಕವನ್ನು ಮಂಡಿಸುತ್ತಿದ್ದೇವೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಮ್ಮದು ಏನು ವಿರೋಧ ಇಲ್ಲ. ಆದರೆ ಆಗಾಗ ಕಾಲ ಕಾಲದಲ್ಲಿ ಹಿಂದೆ ವಿಧಾನಸಭೆಯೊಳಗೆ, ವಿಧಾನ ಪರಿಷತ್ತಿನೊಳಗೂ ಕೂಡ ಇದರ ಬಗ್ಗೆ ಬರೀ ಚರ್ಚೆಗಳು ನಡೆದಿರುವಂಥದ್ದನ್ನು ತಾವು ನೋಡಿದ್ದೀರಿ. ಬೇರೆ ಬೇರೆ ಹಂತಗಳಲ್ಲಿ ಎಲ್ಲಿಯೋ ಒಂದು ಕಡೆ ಇಂತಹ ಸಂದರ್ಭಗಳು ಒಳ್ಳೆಯದು ಎಂದಾದರೂ ಕೂಡ ಅದನ್ನು ಬೇರೆ ಬೇರೆ ಸಂದರ್ಭದಲ್ಲಿ ಅದರ ವ್ಯಾಪ್ತಿ ಬಿಟ್ಟು ಹೋಗುವಂತಹ ಸಂದರ್ಭಗಳು ನಡೆದಿರುವಂಥದ್ದು. ಹಿಂದೆ ಹೈಕೋರ್ಟ್‌ನ ತೀರ್ಪುಗಳು, ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಹೇಳಿದಂತಹ ಹೇಳಿಕೆಗಳು ಇದರ ಬಗ್ಗೆ ಎಲ್ಲಾ ಸದನದಲ್ಲಿ ಬರೀ ಚರ್ಚೆ ನಡೆದಿರುವುದನ್ನು ತಾವು ನೋಡಿದ್ದೀರಿ. ಖಂಡಿತವಾಗಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಪುತ್ಥಳಿಕೆ ಅನಾವರಣವಾಗಲೇಬೇಕು. ಇಲ್ಲದೇ ಹೋದರೆ ಅದು

ಇಡೀ ದೇಶಕ್ಕೆ ಅಪಮಾನ. ಅದರಲ್ಲಿಯೂ ಕೂಡ ನಮ್ಮ ಕರ್ನಾಟಕ ರಾಜ್ಯದ ಈ ಜಾಗದಲ್ಲಿ ಪುತ್ಥಳಿಕೆಯನ್ನು ತಯಾರು ಮಾಡಿ ಫಿಕ್ಸ್ ಮಾಡಿದ್ದರೂ ಕೂಡ ಅದನ್ನು ಮುಚ್ಚಿರುವಂಥದ್ದು ಖಂಡಿತವಾಗಿ ಸೂಕ್ತವಲ್ಲ. ಅದೇ ರೀತಿಯಲ್ಲಿ ಮಹಾತ್ಮ ಗಾಂಧಿಯವರ ಪ್ರತಿಮೆಯನ್ನು ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯೆದಲ್ಲಿ ಸ್ಥಾಪನೆ ಮಾಡಬೇಕೆಂದು ಹೇಳುವಂಥದ್ದು ಸರಿ. ಆದರೆ ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ, ಈ ವಿಧೇಯಕವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಎಲ್ಲಿಯೋ ನಾವು ಬಹಳ ಜಾಗ್ರತೆಯಾಗಿ, ಸೂಕ್ಷ್ಮತೆಯಿಂದ ಇದನ್ನು ಮುಂದಿನ ದಿನಗಳಲ್ಲಿ ಕೂಡ ಉಪಯೋಗ ಮಾಡಿಕೊಳ್ಳಬೇಕು. ಇಲ್ಲದೇ ಹೋದರೆ ಖಂಡಿತವಾಗಿ ಎಲ್ಲಿಯೋ ಒಂದು ಹಂತದಲ್ಲಿ ಏನಾಗುತ್ತದೆಂದರೆ, ಬೇರೆ ಬೇರೆ ರೀತಿಯ ಚರ್ಚೆಗಳು ಬರುತ್ತದೆ. ಇವತ್ತು ಎರಡು ಪುತ್ಥಳಿಕೆಗಳಾಯಿತು, ಇನ್ನು ಮುಂದೆ ಇನ್ನು ಯಾರ್‍ಯಾರ ಹೆಸರಿನ ಪುತ್ಥಳಿಕೆಗಳು ಉದ್ಭವವಾಗುತ್ತಿರುವುದನ್ನು ನಾವು ನೋಡುತ್ತೇವೆ. ಈ ರೀತಿ ಅವಕಾಶ ಇದೆ ಎಂದು ಹೇಳಿ, ಯಾವುದೋ ಒಂದು ರೀತಿಯಲ್ಲಿ ಪುತ್ಥಳಿಕೆಗಳನ್ನು ಕೂಡ ಇಲ್ಲಿ ತಂದು ನಿಲ್ಲಿಸಬಾರದು. ಅಪ್ಪನದು, ಮಗನದು, ಮೊಮ್ಮಗನದು ಇಂತಹ ಪುತ್ಥಳಿಕೆಗಳೆಲ್ಲಾ ಬರಬಾರದು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಯಾರದು ಎಂದು ಹೇಳಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಬೇಡ. ನಾನು ಸಾಧಾರಣವಾಗಿ ಅರ್ಥವಾಗುವಂತಹ ಭಾಷೆಯಲ್ಲಿ ಮಾತನಾಡುತ್ತೇನೆ. ಅದನ್ನು ಅರ್ಥ ಮಾಡಿಕೊಳ್ಳುವಂತಹ ಸೌಜನ್ಯತೆ, ಹೃದಯ ವೈಶಾಲ್ಯತೆ ನಿಮ್ಮಗಳಲ್ಲಿರಬೇಕು ಅಷ್ಟೇ. ನನಗೇನು ಅದಕ್ಕಿಂತಲೂ ಹೆಚ್ಚಿನ ಅವಶ್ಯಕತೆಗಳಿಲ್ಲ. ನಾನು ಹೇಳುವಂಥದ್ದು ಏನೆಂದರೆ ಈಗ ಈ ವಿಧೇಯಕವನ್ನು ಒಪ್ಪಿಕೊಳ್ಳುತ್ತೇವೆ. ಕೆಲಸ ಕಾರ್ಯಗಳು ಆಗಬೇಕಾಗಿದೆ. ಆದರೆ ಯಾವುದೇ ಸರ್ಕಾರಗಳು ಮುಂದಿನ ದಿನಗಳಲ್ಲಿ ಜಾಗ್ರತೆಯನ್ನು ವಹಿಸಲಿ. ಈ ವಿಧೇಯಕದ ಬಗ್ಗೆ ಗಮನ ಹರಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಈ ತಿದ್ದುಪಡಿ ವಿಧೇಯಕ ಬಹಳ ಸರಳವಾಗಿದೆ. ವಿಧಾನಸೌಧವನ್ನು ಕಬ್ಬನ್ ಪಾರ್ಕ್ ವ್ಯಾಪ್ತಿಯಿಂದ ಹೊರಗಡೆ ತೆಗೆದುಕೊಂಡು ಬಂದರೆ ಸರ್ಕಾರದ ಕೈಗೆ ಬರುತ್ತದೆ. ಬೇರೆ ಏನು ಇಲ್ಲ. ಜೊತೆಗೆ ವಿರೋಧ ಪಕ್ಷದ ನಾಯಕರು ಜಾಗ್ರತೆಯಿಂದಿರಬೇಕೆಂದು ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತಹ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತದೆ. ನಾನು host ಎಂದು ಹೇಳಿರುವುದಲ್ಲ. ವಿರೋಧ ಪಕ್ಷದ ನಾಯಕರೆ host ಎಂದು ಹೇಳಿದ್ದಾರೆ.

**ಸಭಾಪತಿಯವರು:–** ವಿಧಾನಸೌಧದ ವ್ಯಾಪ್ತಿಯನ್ನು ಕಬ್ಬನ್ ಪಾರ್ಕ್ ವ್ಯಾಪ್ತಿಯಿಂದ ಹೊರಗೆ ತಂದು ಸರ್ಕಾರದ ವಶಕ್ಕೆ ಇದನ್ನು ತೆಗೆದುಕೊಂಡು ಬರಲಾಗುತ್ತಿದೆ ಎಂದಷ್ಟೇ ಇರುವುದು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಇದನ್ನು ನಾವು ಒಪ್ಪಿಕೊಂಡಿದ್ದೇವೆ. ಅಂಗೀಕರಿಸಬಹುದು.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, . . .

**ಸಭಾಪತಿಯವರು:–** ಈಗ ಬೇಡಿ. ಇದು ಲಾಲ್ ಬಹದ್ದೂರ್ ಶಾಸ್ತ್ರಿಯವರ ಪ್ರತಿಮೆ ಬಗ್ಗೆ ಚರ್ಚೆಯಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಈ ಪ್ರತಿಮೆಯನ್ನು ಬಾಂಬೆಯಲ್ಲಿ ತಯಾರು ಮಾಡಿ ಅಲ್ಲಿಯೇ ಎರಡುವರೆ ವರ್ಷಗಳಿತ್ತು. ಅದನ್ನು ಈಗಾಗಲಾದರು ತರಿಸಿ ಅದನ್ನು ಪ್ರತಿಸ್ಥಾಪನೆ ಮಾಡುತ್ತಿರುವುದಕ್ಕೆ ಸರ್ಕಾರಕ್ಕೆ ಧನ್ಯವಾದಗಳು. ಇದರ ಬಗ್ಗೆ ನಾನು ಎರಡು ಸಾರಿ ಮಾತನಾಡುವುದಕ್ಕೆ ನೋಟೀಸ್ ಕೊಟ್ಟಿದ್ದೆ.

**ಸಭಾಪತಿಯವರು:–** ವಿಧಾನಸೌಧದ ವ್ಯಾಪ್ತಿಯ ವಿಷಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿತ್ತು. ಈಗ ಸದನ ಈ ತಿದ್ದುಪಡಿ ವಿಧೇಯಕ್ಕೆ ಒಪ್ಪಿಗೆ

ಕೊಟ್ಟರೆ ಕಬ್ಬನ್ ಪಾರ್ಕ್ ಏರಿಯಾದಿಂದ ವಿಧಾನಸೌಧ ಏರಿಯಾ ಬಿಡುಗಡೆಯಾಗುತ್ತದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಪುತ್ಥಳಿಕೆ ಎರಡುವರ್ಷಗಳ ಹಿಂದೆ ಬಾಂಬೆಯಲ್ಲಿ ಬಿದ್ದಿತ್ತು. ಆ ಪುತ್ಥಳಿಕೆ ಮಾಡುವಂತಹ ಸಂದರ್ಭದಲ್ಲಿ ಸರ್ಕಾರ ಅಬ್ಜಕ್ಷನ್ ಮಾಡಲಿಲ್ಲ. pedestal ಕಟ್ಟಿದಾಗ ಕೂಡ ಏನು ಆಗಲಿಲ್ಲ. ಅದನ್ನು ತರಿಸುವುದಕ್ಕೆ ಯಾವ ಇಲಾಖೆ ಹಣವನ್ನು ಕಟ್ಟಬೇಕೆಂದು ಗೊತ್ತಿಲ್ಲ. ಕೊನೆಗೆ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ ಮಗ ಶ್ರೀ ಎಂ.ವಿ. ಶಾಸ್ತ್ರಿಯವರು ಮತ್ತು ನಾನು ಹಾಗೂ ನಮ್ಮ ಆತ್ಮೀಯ ಸ್ನೇಹಿತರಾದ ಶ್ರೀ ಎಂ.ವಿ. ರಾಜಶೇಖರನ್‌ರವರು, (ಇವತ್ತು ಸದನದಲ್ಲಿ ಅವರು ಇಲ್ಲ) ನಾವೆಲ್ಲರೂ ಒಂದೇ ರೀತಿಯಲ್ಲಿ ಇದ್ದವರು. ಆದ್ದರಿಂದ ನಾನು ಅವರಿಗೆ ವಿನಂತಿಯನ್ನು ಮಾಡಿ ಆ ಪ್ರತಿಮೆ ಎಲ್ಲಿದೆ ಎಂದು ಹುಡುಕಿಸಿ, ಶ್ರೀ ಬಿ.ಎಸ್. ಯಡಿಯೂರಪ್ಪ ನವರು ಮುಖ್ಯಮಂತ್ರಿಗಳಾಗಿದ್ದಾಗ MUDAದಿಂದ ಹಣವನ್ನು Payment ಮಾಡಿಸಿದೆವು. ಆ ಪುತ್ಥಳಿಕೆಯನ್ನು ತಂದು ಇನ್‌ಸ್ಟಾಲ್ ಮಾಡಿಸಿದೆವು. ಅದನ್ನು ಮಾಡಿ ಎರಡು ವರ್ಷಗಳಾಗಿದೆ. ಇದರ ಬಗ್ಗೆ ಈ ಸದನದಲ್ಲಿಯೇ ಪ್ರಸ್ತಾಪ ಮಾಡಿದ್ದೇನೆ. ಇವತ್ತಾದರೂ ಕೂಡ ಈ ವಿಧೇಯಕವನ್ನು ತಂದು ಆ ಪುತ್ಥಳಿಕೆಯನ್ನು ಅನಾವರಣಗೊಳಿಸುವುದಕ್ಕೆ ಅನುಕೂಲ ಮಾಡುತ್ತಿರುವುದಕ್ಕೆ ಸರ್ಕಾರಕ್ಕೆ ತುಂಬಾ ಧನ್ಯವಾದಗಳು. ಅಂತಹ ಮಹಾತ್ಮನ ಪ್ರತಿಮೆಯನ್ನು ನಾವು ನೋಡುವಂತಹ ಭಾಗ್ಯ ಕೊಡುತ್ತಿದ್ದೀರಿ. ಹಾಗೆಯೇ ನಮ್ಮ ನಾಯಕರು ಹೇಳಿದ ಹಾಗೆ ಬೇರೆ ಎಲ್ಲರ ಪ್ರತಿಮೆಗಳು ಬಂದು ಬಿಟ್ಟರೆ ಸ್ಮಶಾನವಾಗುತ್ತದೆ. ರಾಷ್ಟ್ರೀಯ ನಾಯಕರಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪುತ್ಥಳಿಕೆಯಾಯಿತು. ಸಾಕು. ಶ್ರೀ ರಾಮಕೃಷ್ಣ ಹೆಗಡೆಯವರು ಇಲ್ಲಿ ಪ್ರತಿಮೆಗಳನ್ನು ಹಾಕಿ ಸ್ಮಶಾನ ಮಾಡಬೇಡಿ ಎಂದು ಹೇಳಿದ್ದರು. ಆಗ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿರುವಂಥದ್ದು. ಈಗ ಲಾಲ್ ಬಹದ್ದೂರ್ ಶಾಸ್ತ್ರಿಯವರ ಪ್ರತಿಮೆಯನ್ನು ಹಾಕಲಾಗಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧಿಯದು ಆಗಲಿ. ದಯವಿಟ್ಟು ಇದನ್ನು ಇಲ್ಲಿಗೆ ನಿಲ್ಲಿಸಿ. ಅವೆರಡನ್ನೂ ಬೇಗ ಓಪನ್ ಮಾಡಿಬಿಟ್ಟರೆ ಅನುಕೂಲವಾಗುತ್ತದೆ.

## ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕ, 2013 ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

## ಕರ್ನಾಟಕ ಸರ್ಕಾರಿ ಉದ್ಯಾನವನಗಳ(ಸಂರಕ್ಷಣೆ)(ತಿದ್ದುಪಡಿ) ವಿಧೇಯಕ, 2013 ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:– "ಖಂಡ 2 ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

> "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪಿಠಿಕೆ ಮತ್ತು ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, 2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2013ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ)(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**7. ವರದಿಯನ್ನೊಪ್ಪಿಸುವುದು.**

**ಶ್ರೀ ಎಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆ ಸಮಿತಿಯ ಅಧ್ಯಕ್ಷನಾದ ನಾನು 2011–12 ಮತ್ತು 2012–13ನೇ ಸಾಲಿನ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು. ಧನ್ಯವಾದಗಳು ಈಗ ಸದನವನ್ನು ಮಧ್ಯಾಹ್ನ 3 ಗಂಟೆ 15 ನಿಮಿಷದ ವರೆಗೆ ಮುಂದೂಡಲಾಗಿದೆ.

**(1–58 ಕ್ಕೆ ಮುಂದೂಡಲಾಯಿತು)**

**3–30 ಗಂಟೆ**

**(ಸದನವು ಭೋಜನ ವಿರಾಮಕ್ಕೆಂದು ಮಧ್ಯಾಹ್ನ 1 ಗಂಟೆ 58 ನಿಮಿಷಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

## 8. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗು ನಡವಳಿಕೆ 104 ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:31/7/2013ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2013

2) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕ, 2013

3) ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ ಉತ್ಪಾದನೆ ಮತ್ತು ಸಂಸ್ಕರಣೆ ನಿಯಂತ್ರಣ) ವಿಧೇಯಕ, 2013.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾವು ಶೂನ್ಯವೇಳೆಯಲ್ಲಿ ಕೇಳಿದಂತಹ ಪ್ರಶ್ನೆಗಳಿಗೆ ಸರ್ಕಾರದ ಕಡೆಯಿಂದ ಉತ್ತರ ರೆಡಿ ಇದೆಯೇ?

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳೇ ಬಂದು ಉತ್ತರ ಕೊಡಬೇಕೆಂದು ಹೇಳಿದ್ದರು, ಆದಕಾರಣ ಅವರು ಬಂದಮೇಲೆ ಉತ್ತರ ಕೊಡುತ್ತಾರೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆಯೇ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳೇ ಬಂದು ಉತ್ತರ

ಕೊಡಬೇಕೆಂದು ಹೇಳಿದ್ದಕ್ಕೆ ನಿನ್ನೆಯಿಂದ ಆ ಉತ್ತರಗಳು ಮುಂದಕ್ಕೆ ಹೋಗುತ್ತಿದೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳೂ ಬರದೆ, ಕಡೆಗೆ ನೀವೂ ಆ ಉತ್ತರವನ್ನೂ ಓದದೆ ಕಡೆಗೆ Love's Labour's Lost ಎಂದು ಆಗುವಂತಹ ಪರಿಸ್ಥಿತಿ ಬೇಡ. ನೋಡೋಣ ಇನ್ನು ಅರ್ಧ ಗಂಟೆ ಕಾಯೋಣ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಟೇಬಲ್ ಮಾಡಿ ಎಂದರೆ ಮಾಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:-** ಟೇಬಲ್ ಮಾಡುವುದು ಬೇಡ. ಅದನ್ನು ಓದಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, 13 ಪುಟಗಳಷ್ಟು ಉತ್ತರ ಇದೆ.

**ಶ್ರೀ ಎಂ.ಸಿ. ನಾಣಯ್ಯ:-** ಸರಿ ಅದನ್ನು ಓದಿದಂತೆ ಮಾಡಿ ಕೊಡಿ, ಇದರ ಬಗ್ಗೆ ಯಾವಾಗಲಾದರು ಒಮ್ಮೆ ಕೇಳುತ್ತೇನೆ.

**ಸಭಾಪತಿಯವರು:-** ನಾನು ಲಿಸ್ಟ್ ಮಾಡಿರುವಂತಹ ಗಮನ ಸೆಳೆಯುವ ಸೂಚನೆ ಅಥವಾ ನಿಯಮ 330ಕ್ಕೆ ಉತ್ತರ ಕೊಡುವಂತಹ ಗೌರವಾನ್ವಿತ ಸಚಿವರು ಯಾರೂ ಕಾಣಿಸುತ್ತಿಲ್ಲ. ಇದಕ್ಕೆ ಬೇಕಾದರೆ ಮಾನ್ಯ ಸಭಾ ನಾಯಕರು ಕೇಳುವಂತಹ ವಿಷಯ ಸಂಕ್ಷಿಪ್ತವಾಗಿದ್ದರೆ ಅದಕ್ಕೆ ಬೇಕಾದರೆ ಉತ್ತರ ಕೊಡುತ್ತಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಯಾರು ಇಲ್ಲವೆಂದು ಹೇಳುವುದಾದರೆ ಪೂರಾ ಮುಗಿಸಿಬಿಡಿ.

**ಸಭಾಪತಿಯವರು:-** ಪೂರಾ ಮುಗಿಸುವುದಕ್ಕೆ ಆಗುವುದಿಲ್ಲ. ನಾನು ಈಗ ಕೆಳಮನೆಯಿಂದ ಬಂದಿರುವಂತಹ ಒಂದು Finance Bill ನ್ನು announce ಮಾಡಿದ್ದೇನೆ. ಅದನ್ನು ಬೇಕಾದರೆ ಚರ್ಚೆಗೆ

ತೆಗೆದುಕೊಳ್ಳಬಹುದಾಗಿತ್ತು ಆದರೆ ಅದಕ್ಕೆ ಪ್ರಶ್ನೆ ಕೇಳಿದರೆ ಉತ್ತರ ಹೇಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಈಗ ಸದನ ಒಪ್ಪುವುದಾದರೆ ನಾವು ಲಿಸ್ಟ್ ಮಾಡಿರುವಂಥದ್ದು ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮಾನ್ಯ ನಾಣಯ್ಯನವರು ನಿಲುವಳಿ ಸೂಚನೆಗೆ ಕೊಟ್ಟಿದ್ದರು ಅದನ್ನು ನಿಯಮ 68ಕ್ಕೆ ಪರಿವರ್ತಿಸಲಾಗಿತ್ತು. ಅದರ ಮೇಲೆ ಅವರು ಸ್ವಲ್ಪ ಸಮಯ ಮಾತನಾಡಲಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡಲು ತಯಾರಿದ್ದೇವೆ.

**ಸಭಾಪತಿಯವರು:–** ಆಗಿದ್ದರೆ ತೆಗೆದುಕೊಳ್ಳಬಹುದು.

## 9. ಗಮನ ಸೆಳೆಯುವ ಸೂಚನೆ

**ವಿಷಯ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ನೆಲಮಂಗಲ ತಾಲ್ಲೂಕಿನ ಸೊಂಪುರ ಹಾಗೂ ಯಡೇಹಳ್ಳಿ ಗ್ರಾಮಗಳ ಸುಮಾರು 149 ಎಕರೆ ಜಮೀನನ್ನು ರೈತರಿಂದ ಭೂಸ್ವಾಧೀನ ಮಾಡಿಕೊಂಡು, ಆ ಜಮೀನನ್ನು ಬಿ.ಪಿ.ಎಲ್. ಕಾರ್ಖಾನೆಗೆ ಕಾನೂನು ಬಾಹಿರವಾಗಿ ಮಾರಾಟ ಮಾಡಿರುವ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ನೆಲಮಂಗಲ ತಾಲ್ಲೂಕಿನ ಸೊಂಪುರ ಹಾಗೂ ಯಡೇಹಳ್ಳಿ ಗ್ರಾಮಗಳ ಸುಮಾರು 149 ಎಕರೆ ಜಮೀನನ್ನು ರೈತರಿಂದ ಭೂಸ್ವಾಧೀನ ಮಾಡಿಕೊಂಡು, ಆ ಜಮೀನನ್ನು ಬಿ.ಪಿ.ಎಲ್. ಕಾರ್ಖಾನೆ ಕಾನೂನು ಬಾಹಿರವಾಗಿ ಮಾರಾಟ ಮಾಡಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ,

## ಉತ್ತರ

ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಎಡೆಹಳ್ಳಿ ಗ್ರಾಮಗಳಲ್ಲಿನ ಒಟ್ಟು 300–17 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 19.12.1991ರಂದು ಕೆಐಎಡಿ ಕಾಯ್ದೆಯಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಈ ಪೈಕಿ ಒಟ್ಟು 276–22 ಎಕರೆ ಜಮೀನಿಗೆ ದಿನಾಂಕ: 12.11.1992ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ದಿನಾಂಕ: 24.01.1995ರಂದು ಜರುಗಿದ 25ನೇ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮೆ. ಬಿ.ಪಿ.ಎಲ್. ಲಿಮಿಟೆಡ್ ರವರ ಕಲರ್ ಟೆಲಿವಿಜನ್ ಪಿಕ್ಚರ್ ಟ್ಯೂಬ್ಸ್. ತಯಾರಿಕಾ ಘಟಕ ಸ್ಥಾಪಿಸಲು ಯೋಜನೆ ಮಂಜೂರಾಗಿದ್ದು, ದಿನಾಂಕ: 16.05.1995ರಂದು ರಾಜ್ಯ ಸರ್ಕಾರವು ಆದೇಶ ಹೊರಡಿಸಿ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ 220 ಎಕರೆ ಜಮೀನನ್ನು ಹಂಚಿಕೆ ಮಾಡಲು ಅನುಮೋದನೆ ನೀಡಿರುತ್ತದೆ.

ಮಂಡಳಿಯು ಮೆ: ಬಿ.ಪಿ.ಎಲ್. ಲಿಮಿಟೆಡ್‌ರವರಿಗೆ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ಮತ್ತು 2–ಪಿ ರಲ್ಲಿ ಎಕರೆಯೊಂದಕ್ಕೆ ₹ 3.50 ಲಕ್ಷಗಳ ದರದಲ್ಲಿ ಹಂಚಿಕೆ ಮಾಡಿ, ದಿನಾಂಕ: 23.05.1995ರ ಸ್ವಾಧೀನ ಪತ್ರದ ಮೂಲಕ ಒಟ್ಟು 149 ಎಕರೆ 5.5 ಗುಂಟೆ (ಏಕಘಟಕ ಸಂಕೀರ್ಣ) ಜಮೀನು ಕಬ್ಜೆ ನೀಡಿರುತ್ತದೆ. ದಿನಾಂಕ: 12.04.1996ರಂದು ಗುತ್ತಿಗೆ ಕರಾರು ಪತ್ರ ನೆರವೇರಿಸಲಾಗಿರುತ್ತದೆ.

ಶ್ರೀ ಎಸ್.ಪಿ. ಗುರುರಾಜ್ ಮತ್ತು ಇತರರು Public Interest Litigation (ಪಿ.ಐ.ಎಲ್.) W.P. NO: 30965/1996ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 14.07.1997ರ ಆದೇಶದಲ್ಲಿ ಸದರಿ ಹಂಚಿಕೆಯನ್ನು ರದ್ದುಪಡಿಸಿತು. ಸದರಿ ರದ್ಧತಿ ಆದೇಶದ ವಿರುದ್ಧ ಕೆ.ಐ.ಎ.ಡಿ.ಬಿ. ಹಾಗೂ ಕಂಪನಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ C.A. No: 2166/1998 ಮತ್ತು C.A. No: 2167/1998 ಅಪೀಲು ಹೋಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 13.10.2003ರಂದು ಇತ್ಯರ್ಥಗೊಳಿಸಿ,

ಅಪೀಲುಗಳಿಗೆ ಅನುಮತಿ ನೀಡಿ ರಾಜ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿತು. ಈ ಕಾರಣದಿಂದ ಕಂಪನಿಯು ತಮ್ಮ 2ನೇ ಮತ್ತು 3ನೇ ಹಂತದ ಯೋಜನೆಯ ಅನುಷ್ಠಾನವನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ.

ದಿನಾಂಕ: 04.07.2005ರಂದು ಮೆ: ಬಿ.ಪಿ.ಎಲ್. ಲಿಮಿಟೆಡ್‌ರವರು ಶುದ್ಧ ಕ್ರಯ ಪತ್ರವನ್ನು ನೀಡಲು ಮನವಿ ಸಲ್ಲಿಸಿದರು, ಈ ಹಿನ್ನಲೆಯಲ್ಲಿ ಶುದ್ಧ ಕ್ರಯ ಪತ್ರ ನೀಡುವ ಬಗ್ಗೆ ಮಂಡಳಿಯ ಅಭಿವೃದ್ಧಿ ಅಧಿಕಾರಿಯವರ ವರದಿಯಲ್ಲಿ ಮೆ: ಬಿ.ಪಿ.ಎಲ್. ಲಿಮಿಟೆಡ್‌ರವರು ಕೈಗಾರಿಕೆಯನ್ನು ನಡೆಸುತ್ತಿರುವರೆಂದೂ ಒಟ್ಟು ಜಮೀನಿನ ಪೈಕಿ ಶೇಕಡಾ 5.12 ಜಮೀನನ್ನು ಮಾತ್ರ ಬಳಕೆ ಮಾಡಿರುತ್ತಾರೆಂದೂ ವರದಿ ನೀಡಿದ್ದರ ಮೇರೆಗೆ ಕಂಪನಿಯ ಮನವಿಯನ್ನು ಮಂಡಳಿಯು ನಿರಾಕರಿಸಿ ದಿನಾಂಕ: 30.11.2005ರಂದು ಕಂಪನಿಗೆ ನೋಟೀಸ್ ನೀಡಿತು.

ಮೆ: ಬಿ.ಪಿ.ಎಲ್. ಲಿಮಿಟೆಡ್‌ರವರು ದಿನಾಂಕ: 14.09.2006 ತಮ್ಮ ಮನವಿ ಪತ್ರ ಮೂಲಕ ಅಂದಿನ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ ಇವರಿಗೆ ದಾಬಸ್ ಪೇಟೆ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ಮತ್ತು 2–ಪಿ(ಭಾಗ) ರಲ್ಲಿ ಬರುವ 149 ಎಕರೆ 5.5 ಗುಂಟೆ ಜಮೀನನ್ನು ಹಂಚಿಕೆ ಪಡೆದ ಮೇಲೆ ತಾವು ಅನುಭವಿಸಿದ ತೊಡಕುಗಳು ನ್ಯಾಯಾಲಯಗಳಲ್ಲಿ ಇದ್ದ ತಕರಾರುಗಳು ಇವುಗಳಿಂದ ತಮ್ಮ ಯೋಜನೆ ಅನುಷ್ಠಾನಗೊಳ್ಳದಿದ್ದು, ಮಂಡಳಿಯು ಶುದ್ಧ ಕ್ರಯ ಪತ್ರವನ್ನು ನೀಡಲು ನಿರಾಕರಿಸಿರುವ ಬಗ್ಗೆ ಮನವಿ ಸಲ್ಲಿಸಿತು. ಸದರಿ ಮನವಿಯ ಮೇಲೆ ಅಂದಿನ ಮಾನ್ಯ ಬೃಹತ್ ಮತ್ತು ಕೈಗಾರಿಕಾ ಸಚಿವರಿಗೆ ದಿನಾಂಕ: 21.10.2006ರಂದು ವಿವರವಾದ ಟಿಪ್ಪಣಿಯನ್ನು ಮಂಡಳಿಯು ಸಲ್ಲಿಸಿದ್ದು ಮಾನ್ಯ ಸಚಿವರು ರಾಜ್ಯ ಉಚ್ಚ ನ್ಯಾಯಾಲಯದ ಆದೇಶ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಅಂತಿಮ ಮತ್ತು ಕಟ್ಟುಬದ್ದು ಎಂದು ಪರಿಗಣಿಸಿ, ಮೆ: ಬಿ.ಪಿ.ಎಲ್. ಲಿಮಿಟೆಡ್ ಕಂಪನಿಯು ರಾಜ್ಯಕ್ಕೆ ನೀಡಿರುವ ಸೇವೆ ಮತ್ತು ಕೊಡುಗೆ ಪರಿಗಣಿಸಿ, ಸದರಿ ಕಂಪನಿ ಶುದ್ಧ ಕ್ರಯ ಪತ್ರ ನೀಡಲು ಮಂಡಳಿಗೆ ನಿರ್ದೇಶನ ನೀಡಿರುತ್ತಾರೆ. ಕೆ.ಐ.ಎ.ಡಿ. ಕಾಯ್ದೆ 17ರನ್ವಯ ರಾಜ್ಯ ಸರ್ಕಾರವು

ಮಂಡಳಿಗೆ ಸಾಮಾನ್ಯ ಮತ್ತು ಸಹಜ ನಿರ್ದೇಶನಗಳನ್ನು ನೀಡಲು ಅಧಿಕಾರ ಹೊಂದಿದ್ದು, ಸರ್ಕಾರದ ಆದೇಶದನ್ವಯ ಮಂಡಳಿಯು ದಿನಾಂಕ: 28.11.2006ರಂದು ಶುದ್ಧ ಕ್ರಯ ಪತ್ರ ನೆರವೇರಿಸಿರುತ್ತದೆ.

ಬಿಪಿಎಲ್‌ಗೆ ಹಂಚಿಕೆಯಾಗಿರುವ 149 ಎಕರೆ 5.5 ಗುಂಟೆ ಜಮೀನಿಗೆ ಶುದ್ಧ ಕ್ರಯ ಪತ್ರ ನೆರವೇರಿಸಿರುವುದರಿಂದ ಆ ಕಂಪನಿಯು ಬೇರೆ ಮೂರು ಕಂಪನಿಗಳಿಗೆ ಮಾರಾಟ ಮಾಡಿರುವುದನ್ನು ಈ ಹಂತದಲ್ಲಿ ಪ್ರಶ್ನಿಸಲು ಅಥವಾ ರದ್ದುಪಡಿಸಲು ಮಂಡಳಿ/ಸರ್ಕಾರಕ್ಕೆ ಅಧಿಕಾರ ಇರುವುದಿಲ್ಲ.

ಈ ಪ್ರಕರಣದಲ್ಲಿ ದಿನಾಂಕ: 20.11.1993 ರಂದು ಜರುಗಿದ ಭೂ ದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಈ ಜಮೀನಿಗೆ ಎಕರೆ ಒಂದಕ್ಕೆ ₹ 1.10 ಲಕ್ಷದಂತೆ ಒಪ್ಪಂದದ ದರ ನಿಗದಿಪಡಿಸಿದ್ದು, ಇದನ್ನು ದಿನಾಂಕ: 29.12.1993ರ ಮಂಡಳಿಯ 167ನೇ ಸಭೆಯಲ್ಲಿ ಅನುಮೋದಿಸಲಾಗಿದೆ. ಹೀಗೆ ನಿಗದಿಪಡಿಸಿರುವ ಒಪ್ಪಂದದ ದರದಲ್ಲಿ ಪರಿಹಾರ ಪಡೆಯಲಿಚ್ಛಿಸದ ಭೂಮಾಲೀಕರ ಜಮೀನಿಗೆ ಭೂಸ್ವಾಧೀನ ಕಾಯ್ದೆ 1894ರಡಿ ನಿಯಮಾನುಸಾರ ಅವಾರ್ಡ್ ರಚಿಸಿ ಪರಿಹಾರ ಪಾವತಿಸಿದೆ. ಪ್ರಸ್ತಾವಿತ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣವಾಗಿ ಮುಕ್ತಾಯಗೊಂಡಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಈ ಹಂತದಲ್ಲಿ ರೈತರಿಗೆ ಅನ್ಯಾಯವಾಗಿದೆ ಎಂದು ಹೇಳಲಾಗುವುದಿಲ್ಲ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಸರ್ಕಾರ ಯಥಾವತ್ತಾಗಿ ಇಲಾಖೆ ನೀಡಿರುವ ಮಾಹಿತಿಯನ್ನು ಹೇಳಿದೆ. ಅದರಲ್ಲಿ ಸದರಿ ಸಂಸ್ಥೆ ರಾಜ್ಯಕ್ಕೆ ನೀಡಿರುವ ಸೇವೆಯನ್ನು ಆಧರಿಸಿ ಈ ಜಾಗವನ್ನು ನೀಡಿರುವುದಾಗಿ ಹೇಳಿದ್ದಾರೆ. ಅದರಲ್ಲಿಯೂ ನಮ್ಮ ಸಭಾನಾಯಕರು ಈ ಪದವನ್ನು ಉಚ್ಛಾರ ಮಾಡಿದ್ದು ನಮಗೆ ನಿಜವಾಗಿಯೂ ವಿಷಾದನೀಯ ಎಂದೆನಿಸುತ್ತದೆ. ಬಿಪಿಎಲ್ ಸಂಸ್ಥೆಯವರು ಅಂದಿನ ಕಾಲಕ್ಕೆ KIADB ಗೆ ಒಂದು ಅರ್ಜಿಯನ್ನು ನೀಡುತ್ತಾರೆ. ಬಿಪಿಎಲ್ ಫ್ಯಾಕ್ಟರಿಯಲ್ಲಿ ಕಲರ್ ಟಿವಿ . . . . . .

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಕೃಷ್ಣಪ್ಪನವರು ನಾನು ಈ ಪದಗಳನ್ನು ಉಚ್ಚಾರ ಮಾಡಿದ್ದೇನೆ ಎನ್ನುವ ಮಾತನ್ನು ಹೇಳಿದರು. ಆದರೆ ಇದು ಹಿಂದಿನ ಸರ್ಕಾರ ಮತ್ತು ಹಿಂದಿನ ಕೈಗಾರಿಕಾ ಸಚಿವರು ಕೈಗೊಂಡಿರುವ ನಿರ್ಧಾರ, ಹಾಗೂ ಇವು ಅವರ ಮಾತುಗಳು. ನಮ್ಮ ಸರ್ಕಾರ ಹಾಗೂ ನನ್ನ ಬಾಯಿಯಿಂದ ಇಂತಹ ಮಾತುಗಳು ಬರುತ್ತವೆ ಎನ್ನುವ ನಿರೀಕ್ಷೆ ಮಾಡುವುದು ಬೇಡ.

**ಶ್ರೀ ಇ. ಕೃಷ್ಣಪ್ಪ:–** ಆ ದಿವಸ ಬಿಪಿಎಲ್ ಕಂಪನಿಯವರು 9–2–1995ರಲ್ಲಿ 175 ಎಕರೆ ಜಮೀನು ಬೇಕೆಂದು KIADB ಗೆ ಒಂದು ಅರ್ಜಿಯನ್ನು ನೀಡುತ್ತಾರೆ. ಆಗ 20–4–1995ರಲ್ಲಿ ಅವರಿಗೆ 149 ಎಕರೆ ಮತ್ತು 5.5 ಕುಂಟೆ ಜಮೀನನ್ನು ಮಂಜೂರು ಮಾಡುತ್ತಾರೆ. ಅಂದಿನ ಬೆಲೆ ಮೂರುವರೆ ಲಕ್ಷದ ಹಾಗೆ KIADB ಯವರು ಹಣವನ್ನು ಕಟ್ಟಿಸಿಕೊಂಡು ಈ ಜಮೀನನ್ನು ಅವರಿಗೆ ನೀಡುತ್ತಾರೆ. ಸರ್ಕಾರ ನೀಡಿರುವ ಮಾಹಿತಿಯ ಪ್ರಕಾರ KIADB ಯವರು ನೀಡಿದ ಭೂಮಿಯಲ್ಲಿ ಶೇಕಡ 3ರಷ್ಟು ಅಂದರೆ 149 ಎಕರೆ ಮತ್ತು 5.5 ಕುಂಟೆಯಲ್ಲಿ 5.12 ಗುಂಟೆಯಲ್ಲಿ ಗೃಹಪಯೋಗಿ ವಸ್ತುಗಳ ತಯಾರಿಕೆಗೆ ಬಳಕೆಯನ್ನು ಮಾಡಿದ್ದಾರೆ. ಅದರಲ್ಲಿ 145 ಎಕರೆ ಇವತ್ತಿಗೂ ಸಹ ಖಾಲಿಯಿದೆ. ಈ ಬಗ್ಗೆ KIADB ಯವರು ತಾವು ಜಮೀನು ಪಡೆದ ಉದ್ದೇಶದ ಬಳಕೆ ಆಗುತ್ತಿಲ್ಲ ನಿಮಗೆ ಈ ಭೂಮಿಯನ್ನು ಏಕೆ ಕೊಡಬೇಕು ಏನ್ನುವ ಒಂದು objection ಹಾಕುತ್ತಾರೆ. ನಾನು ಇಲ್ಲಿ ಯಾರದೇ ಹೆಸರು ಅಥವಾ ಯಾವುದೇ ಸರ್ಕಾರದ ಹೆಸರು ಹೇಳಲು ಇಷ್ಟಪಡುವುದಿಲ್ಲ. ಆದರೆ ಆ ಸಂದರ್ಭದಲ್ಲಿ ಅಂದಿನ ಸರ್ಕಾರದ ಒಬ್ಬ ಮಂತ್ರಿ ಬಿಪಿಎಲ್ ಸಂಸ್ಥೆ ರಾಜ್ಯಕ್ಕೆ ಸಾಕಷ್ಟು ಸಹಾಯಕಾರಿ ಆಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಹಾಗಾದರೆ ಸರ್ಕಾರಗಳು ಯಾರ್‍ಯಾರು ಉಚಿತ ಸೇವೆಯನ್ನು ಮಾಡುತ್ತಾರೋ ಅವರಿಗೆಲ್ಲ ನೂರು ಎಕರೆ ಜಮೀನನ್ನು ಬರೆದು ಕೊಡಬಹುದಲ್ಲವೇ? ಇನ್ನೂ ಕಾನೂನಿನ ವ್ಯಾಪ್ತಿಯಲ್ಲಿ ನಾವು ಮಾತನಾಡುವುದಾದರೆ ಎಲ್ಲೋ ಒಂದು ಕಡೆ ಸರ್ಕಾರ ಮತ್ತು ಅಧಿಕಾರಿಗಳು ಇದರಿಂದ ಬಹು ದೊಡ್ಡ ನಿಧಿ ಸಂಗ್ರಹಣೆ ಮಾಡಿರಬಹುದೆಂದು ನನಗೆ ಅನಿಸುತ್ತಿದೆ. ಆಗ ಚುನಾವಣೆಗಳು ಬಂದಿವೆ,

ಹೀಗೆಯೇ ಮಾಡಿದ್ದಾರೆ. ಹಾಗಾಗಿ ಇದರ ಬಗ್ಗೆ ತನಿಖೆ ಆಗಬೇಕು. ಇವತ್ತು ಮುಖ್ಯಮಂತ್ರಿಗಳು ಆಡಳಿತಕ್ಕೆ ಚುರುಕು ಮುಟ್ಟಿಸುವ ಮಾತುಗಳನ್ನು ಹೇಳುತ್ತಾರೆ, ಈ ನಿಟ್ಟಿನಲ್ಲಿ ಇದರ ಬಗ್ಗೆ ತನಿಖೆ ಆಗಬೇಕು. 149 ಎಕರೆಯಲ್ಲಿ ಕೆಲವು 5 ಎಕರೆ ಭೂಮಿಯಲ್ಲಿ ಕೈಗಾರಿಕಾಭಿವೃದ್ಧಿಯನ್ನು ಮಾಡಿ, ಅವರಿಗೆ allot ಆಗಿ ಹತ್ತು ವರ್ಷಗಳ ಅವಧಿ ಮುಗಿಯುವುದರೊಳಗಾಗಿಯೇ ಅದನ್ನು ನೋದಣಿ ಮಾಡುವಂತೆ ಸರ್ಕಾರಕ್ಕೆ ಒತ್ತಾಯ ಮಾಡುವುದಾದರೆ ಇದು ಯಾರು ಏನು ಎನ್ನುವುದರ ಬಗ್ಗೆ ತನಿಖೆ ಆಗಬೇಕು. ಎಲ್ಲೋ ಒಂದು ಕಡೆ ಇದು ನಮ್ಮ ವ್ಯಾಪ್ತಿಗೆ ಬರಲ್ಲ, ನೋಂದಣಿ ಮಾಡಿಕೊಡಿ ಎಂದು ಕೇಳಿದ್ದಾರೆ. ರೈತನಿಂದ ಕೇವಲ 1,10,000 ರೂಪಾಯಿಗಳಿಗೆ ಈ ಭೂಮಿಯನ್ನು ಪಡೆದು ಅದನ್ನು ಸರ್ಕಾರ ವಶಪಡಿಸಿಕೊಂಡು ಅದನ್ನು ಇವತ್ತು 1 ಕೋಟಿ 30 ಲಕ್ಷ ರೂಪಾಯಿಗಳಿಗೆ ಬೇರೆಯವರಿಗೆ ಪರಭಾರೆಯನ್ನು ಮಾಡಿದ್ದಾರೆ. ಈ ಸರ್ಕಾರಗಳ ನಿರ್ಲಕ್ಷ್ಯತೆ ಎಷ್ಟಿದೆ ಎಂದರೆ ಯಾವುದೇ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಮಾಡಿದಲ್ಲಿ ಅಲ್ಲಿನ ಸ್ಥಳೀಯ ಸಂಸ್ಥೆಗಳಿಂದ plan approval ಪಡೆಯಬೇಕು. ವರ್ಷ ವರ್ಷ ತೆರಿಗೆಯನ್ನು ಕಟ್ಟಬೇಕು. ಬಿಪಿಎಲ್ ಸಂಸ್ಥೆ 149 ಎಕರೆ ಭೂಮಿಗೆ ಸೋಮಪುರ ಗ್ರಾಮಪಂಚಾಯಿತಿಗೆ ಇದುವರೆವಿಗೂ ಒಂದು ರೂಪಾಯಿ ತೆರಿಗೆಯನ್ನು ಕಟ್ಟಿಲ್ಲ. ಸರ್ಕಾರದ ನಿಯಮದ ಪ್ರಕಾರ ಖಾಲಿ ಜಾಗಕ್ಕೆ ಒಂದು ಚದರ ಮೀಟರ್‌ಗೆ ಒಂದು ವರ್ಷಕ್ಕೆ 1 ರೂಪಾಯಿ 60 ಪೈಸೆಗಳ ತೆರಿಗೆಯನ್ನು ಕಟ್ಟಬೇಕು. ಕಳೆದ 19 ವರ್ಷಗಳಿಂದಲೂ ಸಹ ಈ ಸಂಸ್ಥೆ 1 ರೂಪಾಯಿಯ ತೆರಿಗೆಯನ್ನು ಕಟ್ಟಿಲ್ಲ. ಈಗಾಗಲೇ ಕಟ್ಟಿರುವ ಕಟ್ಟಡಕ್ಕೆ ಒಂದು ಚದರ ಮೀಟರ್ 40 ರೂಪಾಯಿಗಳ ತೆರಿಗೆ ನೀಡಬೇಕೆನ್ನುವ ಒಂದು ಮಾನದಂಡವಿದೆ. ಅದನ್ನು ಸಹ ಅವರು ಕಟ್ಟಿಲ್ಲ. ಇವತ್ತು ಆ ಆಸ್ತಿ ಅವರ ಸ್ವಾಧೀನದಲ್ಲಿಯೇ ಇದ್ದು, ಅಲ್ಲಿಂದ ಇಲ್ಲಿಯವರೆಗೆ ತೆರಿಗೆಯನ್ನು ಪಾವತಿಸಬೇಕಾದಲ್ಲಿ 3 ಕೋಟಿ 20 ಲಕ್ಷ ರೂಪಾಯಿಗಳ ತೆರಿಗೆಯನ್ನು ಆ ಪಂಚಾಯಿತಿಗೆ ಸಂಸ್ಥೆಯವರು ನೀಡಬೇಕಾಗಿತ್ತು. ಆದರೆ ಪಂಚಾಯಿತಿಯವರು ಅವರನ್ನು ಹುಡುಕಲಿಕ್ಕೆ ಅವರ ಅಸ್ತಿತ್ವವೇ ಅಲ್ಲಿಲ್ಲ.

ಮತ್ತೊಂದು ಪ್ರಮುಖ ವಿಚಾರವೇನೆಂದರೆ 28–11–2006ರಲ್ಲಿ KIADB ಯವರು ಈ ಬಿಪಿಎಲ್ ಸಂಸ್ಥೆಯ ಹೆಸರಿನಲ್ಲಿ ಈ ಜಾಗವನ್ನು ನೋಂದಣಿ ಮಾಡಿಕೊಟ್ಟಿದ್ದಾರೆ. ಹತ್ತು ವರ್ಷ ಆಯಿತೆಂದು 149 ಎಕರೆ 5.5 ಗುಂಟೆ ಜಮೀನನ್ನು ಈ ಸಂಸ್ಥೆಯ ಹೆಸರಿಗೆ ನೋಂದಾಯಿಸಿದ್ದಾರೆ. ಆನಂತರ ಅವರು ಈ ಭೂಮಿಯನ್ನು ಪರಭಾರೆ ಮಾಡಲು ಮುಂದಾಗಿದ್ದಾರೆ. ಆ ಸಂದರ್ಭದಲ್ಲಿ ಸರ್ವೆ ನಂಬರ್ 69ರಲ್ಲಿ 5 ಎಕರೆ 7 ಗುಂಟೆ, ಸರ್ವೆ ನಂಬರ್ 70 P, ಸರ್ವೆ ನಂಬರ್ 71 F, ಸರ್ವೆ ನಂಬರ್ 104 P ಇಲ್ಲಿ 5 ಎಕರೆ 7 ಗುಂಟೆ ಜಮೀನು ಮಧ್ಯ ಭಾಗದಲ್ಲಿ ಸೇರಿಕೊಂಡಿರುತ್ತದೆ. ಹೀಗೆ ಒಟ್ಟು 10 ಎಕರೆ 16 ಗುಂಟೆ ಜಮೀನನ್ನು ಅಂದಿನ ಸರ್ಕಾರ ಯಾರು ಇದಕ್ಕೆ ಒತ್ತು ನೀಡಿದ್ದರೋ ಅವರೇ ಸ್ಥಳ ಬದಲಾವಣೆಗೆಂದು 2008ರಲ್ಲಿ 19 ಲಕ್ಷ ರೂಪಾಯಿಗಳಿಗೆ 10 ಎಕರೆ 14 ಗುಂಟೆ ಜಮೀನನ್ನು ಮಾರಿದ್ದಾರೆ. ಇದರ ದಾಖಲೆಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಕ್ರಯಪತ್ರವನ್ನು ಸಹ ತಮಗೆ ಕಳುಹಿಸಿಕೊಡುತ್ತೇನೆ. ಅದಕ್ಕೆ sketch ಕೂಡ ಮಾಡಿದ್ದಾರೆ, 149 ಎಕರೆಗೆ ಬೌಂಡರಿಯನ್ನು ಹಾಕಿಕೊಂಡು ಉಳಿಕೆ ಜಮೀನನ್ನು register ಮಾಡಿ ಕೊಟ್ಟಿದ್ದಾರೆ. ಈ ಜಾಗ ಇಲ್ಲಿ ಮಧ್ಯಭಾಗದಲ್ಲಿ ಇರುವುದರಿಂದ change of land ಮಾಡಿದ್ದೇವೆಂದು ಹೇಳಿದ್ದಾರೆ. ಇದು ಸರ್ಕಾರಕ್ಕೆ ಎಲ್ಲೋ ಒಂದು ಕಡೆ ಮೋಸ ಮಾಡುವ ಸಲುವಾಗಿ ಇಲಾಖೆ ಆಡಳಿತ ಈ ಕೆಲಸ ಮಾಡಿದೆ. ಈ ಭೂಮಿಯನ್ನು ಪರಭಾರೆ ಮಾಡಿರುವುದಕ್ಕ sketch ಇದೆ, ಆದರೆ ಬದಲಿ ಜಾಗವನ್ನು ಪಡೆದಿರುವುದಕ್ಕೆ ಯಾವುದೇ ದಾಖಲೆ ಇಲ್ಲ. Change of land ಮಾಡುವುದಾಗಿದ್ದಾರೆ ಅವರಿಂದ 19.27 ಲಕ್ಷ ರೂಪಾಯಿಗಳನ್ನು ಪಡೆಯುವಂತಹ ಅವಶ್ಯಕತೆ ಇರಲಿಲ್ಲ. ಯಾವ ಕಾರಣಕ್ಕಾಗಿ ಸ್ಥಳ ಬದಲಾವಣೆಯನ್ನು ಮಾಡಿದ್ದಾರೆ? 149 ಎಕರೆ 5.5 ಗುಂಟೆಯಲ್ಲಿ ಇಷ್ಟು ಜಾಗ ಮಧ್ಯದಲ್ಲಿ ಸೇರಿದೆ, ಪಡೆಯುವವರಿಗೆ ಇದು ತೊಂದರೆ ಆಗುತ್ತದೆ ಎಂದು ಅಂದಿನ ಅಧಿಕಾರಿಗಳು ಅಥವಾ ಸರ್ಕಾರ ಈ ಕಂಪನಿ ರಾಜ್ಯಕ್ಕೆ ಸಾಕಷ್ಟು ಸೇವೆಯನ್ನು ಸಲ್ಲಿಸಿದೆ ಎಂದು ಈ ಜಾಗವನ್ನು ಬಳುವಳಿಯಾಗಿ ಕೊಟ್ಟಿದ್ದಾರೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು.

ಕ್ರಯಪತ್ರ ಮಾಡಿಕೊಟ್ಟಿರುವುದನ್ನು 2008ರಲ್ಲಿ ಯಾವ ಕಾರಣಕ್ಕಾಗಿ KIADB ಯವರು ಈ ಮಧ್ಯ ಇದ್ದ 10 ಎಕರೆ 14 ಗುಂಟೆ ಜಮೀನನ್ನು ಪರಭಾರೆ ಮಾಡಿದರು ಎನ್ನುವುದನ್ನು ಕೂಲಂಕಷವಾಗಿ ತನಿಖೆ ಮಾಡಿಸಬೇಕು. ಅವತ್ತಿನ KIADB ಯವರು ಹೇಳಿದ್ದಾರೆ, ಇದು ಮಾಡಲು ಬರುವುದಿಲ್ಲ ಒಟ್ಟು ನೂರಾ ನಲ್ವತ್ತೊಂಬತ್ತು ಪಾಯಿಂಟ್ ಐದುವರೆ ಗುಂಟೆ ಜಾಗದಲ್ಲಿ ಕೇವಲ ಐದು ಎಕರೆ 12 ಗುಂಟೆ ಮಾತ್ರ ಅಂದರೆ ಕೇವಲ 3% ಮಾತ್ರ ಬಳಕೆ ಮಾಡಿದ್ದೀರಿ, ಅದಕ್ಕಾಗಿ ಬಾಕಿಯದನ್ನು ನಾವು ಮಾಡಲು ಆಗುವುದಿಲ್ಲ ಎಂದು ಹೇಳಿದಾಗ, ಮತ್ತೆ ಪುನರ್ ಅರ್ಜಿಯನ್ನು ಪಡೆದು ಯಾರು ಅದನ್ನು registration ಮಾಡಲು ಒತ್ತಾಯ ಮಾಡಿದರು, ಯಾವ ಮಾನದಂಡವನ್ನು ಅಲ್ಲಿ ಬಳಸಲಾಗಿದೆ ಎನ್ನುವುದನ್ನು ಕೂಲಂಕಷವಾಗಿ ತನಿಖೆ ಮಾಡಿಸಬೇಕು. ರೈತರಿಗೆ ಅವತ್ತು ಕೇವಲ ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳ ಪರಿಹಾರ ಕೊಟ್ಟಾಗ, ನಿಮ್ಮ ಮಕ್ಕಳಿಗೆ ನಮ್ಮ ಕಂಪನಿಯಲ್ಲಿ ಉದ್ಯೋಗ ಕೊಡುತ್ತೇವೆ, ನಿಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸುತ್ತೇವೆ ಎಂದು ಬಿಪಿಎಲ್ ಕಂಪನಿಯವರು ಪೊಳ್ಳು ಭರವಸೆಗಳನ್ನು ರೈತರಿಗೆ ಕೊಟ್ಟಿದ್ದರು. ಆದರೆ ಇವತ್ತು ಅವರು ಕಾಂಪೌಂಡ ಹಾಕಿಕೊಂಡು ರಿಯಲ್‌ಎಸ್ಟೇಟ್ ದಂಧೆ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಅತ್ಯಂತ ಮುತುರ್ವಜಿಯನ್ನು ವಹಿಸಬೇಕು. ಸರ್ಕಾರದಲ್ಲಿ ದಾಖಲೆಗಳು ಇವೆ. ಇಲ್ಲ ಎಂದರೆ ನಾನು ಕೊಡುತ್ತೇನೆ. 2008ರಲ್ಲಿ 10 ಎಕರೆ 14 ಗಂಟೆ ಜಾಗವನ್ನು ಸಂಬಂಧವಿಲ್ಲದ ಅವರಿಗೆ ಏಕೆ ರಜಿಸ್ಟರ್ ಮಾಡಿಕೊಟ್ಟಿದ್ದಾರೆ ಮತ್ತು ಇವರು ಉಪಯೋಗ ಮಾಡಿರುವುದು ಕೇವಲ 3% ಉಳಿದ 144 ಎಕರೆ ಭೂಮಿಯನ್ನು ಮಾರಲು ಅನುಮತಿ ಕೊಟ್ಟವರು ಯಾರು? ಏತಕ್ಕಾಗಿ ಕೊಟ್ಟಿದ್ದಾರೆ? ಸರ್ಕಾರದ ನೀತಿ ಇದೆನಾ? ರೈತರ ಪರವಾಗಿದೆ ಎಂದು ಸರ್ಕಾರ ಎಂದು ದಿನಗಟ್ಟಲೆ ಇಲ್ಲಿ ಭಾಷಣವನ್ನು ಮಾಡುತ್ತೇವೆ. ಆದರೆ KIADB ಎಂದು, Housing Board ಎಂದು ಹೇಳಿ ರೈತರ ಮೇಲೆ ಒತ್ತಡವನ್ನು ಹೇರಿ ಅವರ ಆಸ್ತಿಯನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಮುಂದೆ ನಾನು ಇನ್ನೊಂದು ನಿವೇದನೆಯನ್ನು ಹೇಳಿಕೊಳ್ಳುತ್ತೇನೆ. ಈ

ಜಮೀನಿನ 3 ಕಿ.ಮೀ ದೂರದಲ್ಲಿ ಇದೇ ಹೌಸಿಂಗ್ ಬೋರ್ಡ್... ಬಿಪಿಎಲ್ (ಇಂಡಿಯಾ) ಲಿಮಿಟೆಡ್ ಕಂಪನಿಯವರು ಈ ಆಸ್ತಿಯನ್ನು ಏತಕ್ಕಾಗಿ ಪಡೆದರು. ಈ ಕಂಪನಿ 2006ರಲ್ಲಿ register ಮಾಡುವಷ್ಟರಲ್ಲಿ, 1996ರಲ್ಲಿ prossession ತೆಗೆದುಕೊಳ್ಳುತ್ತಾರೆ. ಮೂರು ವರ್ಷ ಮಾತ್ರ ಒಂದು godown ಮಾಡಿ ಹಳೆಯ ಟ್ಯೂಬ್‌ಗಳನ್ನು ತರುತ್ತಿದರು ನಂತರ 2006ರಲ್ಲಿ ಅದು ನಿಂತು ಹೋಯಿತು. ಕೇವಲ 2–3 ಎಕರೆ ಜಮೀನಿನಲ್ಲಿ godown ಕಟ್ಟಿ ನಡೆಸಿದರೆ ವಿನಃ ಯಾವುದೇ ಕಂಪನಿಯನ್ನು ಅಲ್ಲಿ ಪ್ರಾರಂಭ ಮಾಡಲಿಲ್ಲ. 2006ರಲ್ಲಿ ನಾವು ಕಂಪನಿ ಮಾಡುತ್ತೇವೆ ಎಂದು ಜಮೀನನ್ನು register ಮಾಡಿಕೊಂಡಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು? ಏತಕ್ಕಾಗಿ ಕೊಟ್ಟರು? ಜಮೀನನ್ನು ತೆಗೆದುಕೊಳ್ಳಬೇಕಾದರೆ ಅದರಲ್ಲಿ ಏನೇನು ಮಾಡುತ್ತೇವೆ ಎಂದು ಅವರು ಹೇಳಬೇಕಾಗುತ್ತದೆ. ಅದಕ್ಕೆ ಮಾನದಂಡಗಳು ಇರುತ್ತವೆ. ಇಂತಿಂತ ಕೆಲಸವನ್ನು ಮಾಡುತ್ತೇವೆ, ಕೈಗಾರಿಕೆಯನ್ನು ಬೆಳೆಸುತ್ತೇವೆ, ಕಾರ್ಮಿಕರಿಗೆ ಕೆಲಸವನ್ನು ಕೊಡುತ್ತೇವೆ ಎಂದು ಹೇಳಿದಾಗಿನಿಂದಲೂ ಅಲ್ಲಿ ಯಾವುದೇ ರೀತಿಯ ಕೆಲಸವು ನಡೆದಿರುವುದಿಲ್ಲ. ಅವರು ಕೇಲವು ರಿಯಲ್ ಎಸ್ಟೇಟ್ ಮಾಡಲು ಸರ್ಕಾರ, KIADB ಮತ್ತು ಅವತ್ತಿನ ಅಧಿಕಾರಿಗಳು ಇದಕ್ಕೆ favour ಮಾಡಿದ್ದಾರೆ ಎಂದು ಹೇಳುತ್ತೇನೆ. ಆದ್ದರಿಂದ ಇದನ್ನು ತಾವು ತನಿಖೆಗೆ ಒಳಪಡಿಸಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಆದ ಅನ್ಯಾಯವನ್ನು ಸರಿಪಡಿಸಬೇಕು. ಆ ರೈತರಿಗೆ 1.10,000 ರೂಗಳನ್ನು ಕೊಡಲು ಆಗುವುದಿಲ್ಲ ಎಂದು ಸರ್ಕಾರ ಏನು ಉತ್ತರದಲ್ಲಿ ಕೊಟ್ಟಿದೆ. ಆದರೆ ಅವತ್ತು ಸ್ಥಳೀಯರನ್ನು ಕರೆದು, D.C., ಯವರನ್ನು ಕರೆದು, ನಿಮಗೆ ನಮ್ಮ ಕಂಪನಿಯಲ್ಲಿ ಕೆಲಸವನ್ನು ಕೊಡುತ್ತೇವೆ, ನಿಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸುತ್ತೇವೆ ಎಂದು ಹೇಳಿದರು. ಆದರೆ ಇವತ್ತು ಯಾವುದೇ ಕೈಗಾರಿಕೆಯನ್ನು ಅಲ್ಲಿ ಸ್ಥಾಪನೆ ಮಾಡದೆ, ಆ ರೈತರ ಕಣ್ಣ ಮುಂದೆಯೇ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳಿಗೆ ಬೇರೆಯವರಿಗೆ ಮಾರಿದಾಗ ಆ ರೈತರ ಪರಿಸ್ಥಿತಿ ಏನಾಗಬೇಕು? ಇದೆಲ್ಲವನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ಸಭಾಪತಿಗಳಿಗೆ ಈ ಎಲ್ಲಾ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ.

ಇದೆಲ್ಲವನ್ನು ಪರಿಶೀಲನೆ ಮಾಡಬೇಕು. 10 ಎಕರೆ 14 ಗುಂಟೆ ಜಾಗವನ್ನು ಹೇಗೆ 'change of land' ಮಾಡಿದರು, ಎಲ್ಲಿ ಪಡೆದಿದ್ದಾರೆ ಎನ್ನುವುದಕ್ಕೆ ದಾಖಲೆ ಇಲ್ಲ ಅಲ್ಲಿ. ಕೊಟ್ಟಿರುವುದನ್ನು ಮಾತ್ರ sketch ಮಾಡಿ register ಮಾಡಿಕೊಟ್ಟಿದ್ದಾರೆ. ಅವರಿಗೆ register ಮಾಡಿಕೊಟ್ಟಾಗ 19.25,000 ರೂಪಾಯಿಗಳ ಹಣ ಪಡೆಯುವ ಪ್ರಮೇಯೆ ಇರಲಿಲ್ಲ. ಸ್ಥಳ ಬದಲಾವಣೆ ಮಾಡಬೇಕಾದರೆ, ಈ ಸರ್ವೇ ನಂಬರಿನ 10 ಎಕರೆ 14 ಗುಂಟೆ ಜಮೀನನ್ನು ಇಲ್ಲಿ ಪಡೆದು, ಇನ್ನೊಂದು ಸರ್ವೇ ನಂಬರಲ್ಲಿ ಕೊಟ್ಟಿದ್ದೇವೆ ಎಂದು ಒಂದು ಪೇಪರ್‌ನಲ್ಲಿ ಬರೆದಿದ್ದರೆ ಸಾಕಾಗಿತ್ತು. ಕ್ರಯ ಪತ್ರದಲ್ಲಿ ಮಾತ್ರ 'change of land' ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ತನಿಖೆಗೆ ಒಳಪಡಿಸಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬಹಳ ಕಾಳಜಿವುಳ್ಳವರಾಗಿದ್ದಾರೆ. ಇದು ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯಾಗಿದ್ದರಿಂದ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ನನ್ನ ಕೋರಿಕೆಯನ್ನು ತಮ್ಮ ಮೂಲಕ ಸಲ್ಲಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೆ, ಮಾನ್ಯ ಕೃಷ್ಣಪ್ಪನವರು ತಮ್ಮ ಎರಡು ಬೇಡಿಕೆಗಳನ್ನು ಬಗ್ಗೆ ಹೇಳಿದ್ದಾರೆ. ಅವುಗಳನ್ನು ಬಿಟ್ಟು ತಮ್ಮ ಬೇಡಿಕೆ ಇದ್ದರೆ ಅದನ್ನು ಹೇಳಿಬಿಡಿ. ಹೆಚ್ಚು ಮಾತನಾಡುವುದು ಬೇಡ. ಇದು ಬಜೆಟ್ ಮೇಲಿನ ಚರ್ಚೆಯಲ್ಲ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಗಳೆ,** ಈ ಸದನದಲ್ಲಿ ನಾವು-ನೀವು ಎಲ್ಲರೂ ಯಾವಾಗಲು ರೈತ ಪರ ಮಾತನಾಡುತ್ತೇವೆ. ರೈತರ ಹಿತವೇ ನಮಗೆ ಮುಖ್ಯ ಎನ್ನುವ ರೀತಿಯಲ್ಲಿ ಮಾತನಾಡುತ್ತೇವೆ.

**ಸಭಾಪತಿಯವರು:-** ಆ ಎಲ್ಲಾ ವಿಚಾರ ಬೇಡ, ಈ 149 ಎಕರೆ ಜಮೀನಿನ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಗಳೆ,** ಸೋಂಪುರ ಹತ್ತಿರ, ಎಡಹಳ್ಳಿ ಹತ್ತಿರ ಇರುವ 149 ಎಕರೆ ಜಮೀನನ್ನು

ಸ್ವಾಧೀನಪಡಿಸಿಕೊಂಡು ದಲ್ಲಾಳಿಗಳ ತರಹ ನಡೆದುಕೊಂಡಿದೆ KIADB. ಇವತ್ತು KIADB ಎಂದರೆ ರಿಯಲ್ ಎಸ್ಟೇಟ್ ಕಂಪನಿಯಾಗಿದೆ. ಬಿಪಿಎಲ್ (ಇಂಡಿಯಾ) ಲಿಮಿಟೆಡ್ ಕಂಪನಿಯು ಒಂದು habitual offender company. ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ದಯಮಾಡಿ ತಾವು ಕೆಐಡಿಬಿ ಯ ದಾಖಲೆಗಳನ್ನು ತೆಗೆದು ನೋಡಬೇಕು, ಎಷ್ಟು ಭೂಮಿಯನ್ನು ಯಾವ-ಯಾವ ಏರಿಯಾದಲ್ಲಿ ಬಿಪಿಎಲ್ ಕಂಪನಿ ತೆಗೆದುಕೊಂಡಿದೆ ಎನ್ನುವುದನ್ನು ತನಿಖೆ ಮಾಡಬೇಕು. ಏಕೆಂದರೆ ನನ್ನ ಮಾಹಿತಿ ಪ್ರಕಾರ ಹೊಸೂರು ರೋಡ್‌ನಲ್ಲಿ KIADB ಮುಖಾಂತರ ಜಮೀನನ್ನು ತೆಗೆದುಕೊಂಡಿದ್ದಾರೆ. ಹೊಸಕೋಟೆ ಹತ್ತಿರ ಕೆಐಡಿಬಿ KIADB ಮುಖಾಂತರ ಜಮೀನನ್ನು ತೆಗೆದುಕೊಂಡಿದ್ದಾರೆ. ತುಮಕೂರು ರೋಡ್‌ನಲ್ಲಿ, ಸೋಮನಹಳ್ಳಿ, ಮೈಸೂರಿನಲ್ಲಿ ಮತ್ತು ದೊಡ್ಡಬಳ್ಳಾಪುರದಲ್ಲಿ ಜಮೀನು ತೆಗೆದುಕೊಂಡಿದ್ದಾರೆ. Growth ಯಾವ ಕಡೆ ಇದೆ ಅಲ್ಲಿ ಒಂದು application ಹಾಕುವುದು ಜಮೀನನ್ನು allot ಮಾಡಿಸಿಕೊಳ್ಳುವುದು, ಅಲ್ಲಿ ಒಂದು ಸಣ್ಣ shed ಕಟ್ಟಿ ಅಲ್ಲಿ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದೇವೆ ಎಂದು misguide ಮಾಡುವುದು. ನಂತರ ಅದನ್ನು ರಿಯಲ್ ಎಸ್ಟೇಟ್ ಆಗಿ covert ಮಾಡಿ ಮಾರುವುದು. ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವ ಹಾಗೆ ರೈತರ ಮೂಗಿಗೆ ತುಪ್ಪ ಸವರಿ ಬಿಡುವುದು ಅಷ್ಟೆ ಇವರ ಕೆಲಸ. 1.10,000 ರೂಗಳ ಪರಿಹಾರವನ್ನು ಕೊಟ್ಟು, ಅದನ್ನು ಎಕರೆಗೆ 1.20 ಲಕ್ಷ ರೂಗಳಿಗೆ ಮಾರಿದ್ದಾರೆ. ಇದಕ್ಕೆ ಯಾರು ಅನುಮತಿಯನ್ನು ಕೊಟ್ಟರು? KIADB Act ನಲ್ಲಿ ಅವರಿಗೇನು ಲಂಗು-ಲಗಾಮು ಇಲ್ಲವೆ? KIADB ಯವರು ಬರಿ ರೈತರ ತಲೆ ಮೇಲೆ ಮಣ್ಣು ಹಾಕಿ ಅವರ ಜಮೀನನ್ನು ಸ್ವಾಧೀನಪಡಿಸಕೊಂಡು ಈ ರೀತಿ ಮಾಡುವುದೇ ಇವರ ಕೆಲಸವೇ? ಇದರಲ್ಲಿ ಬಹಳ ಪ್ರಭಾವಿ ವ್ಯಕ್ತಿಗಳಿದ್ದಾರೆ. ನನ್ನ ಮಾಹಿತಿ ಪ್ರಕಾರ ಬಿಪಿಎಲ್ ಕಂಪನಿಯಲ್ಲಿ ರಾಜ್ಯಸಭಾ ಸದಸ್ಯರೊಬ್ಬರು ಇದ್ದಾರೆ. ಆದ್ದರಿಂದ ಇದು ಅವ್ಯಾಹತವಾಗಿ ನಡೆಯುತ್ತಿದೆ. ನಾಲ್ಕೈದು ರೋಡ್‌ಗಳಲ್ಲಿ ಜಮೀನನ್ನು ತೆಗೆದುಕೊಂಡು ಅದನ್ನು ರಿಯಲ್ ಎಸ್ಟೇಟ್ ಆಗಿ convert ಮಾಡಿ ಸಾವಿರಾರು ಕೋಟಿ ರೂಗಳ ಆಸ್ತಿಯನ್ನು ಮಾಡಿದ್ದಾರೆ

ಎನ್ನುವ ಮಾಹಿತಿ ನಮ್ಮ ಹತ್ತಿರ ಇದೆ. ಇದರಿಂದ ultimate ಆಗಿ ತೊಂದರೆಯಾಗುವುದು ರೈತರಿಗೆ. Ultimate sufferer ಆಗುವವನು ರೈತ. ರೈತರಿಗೆ ನ್ಯಾಯ ಕೊಡಿಸಬೇಕಾಗುತ್ತದೆ. ನಾವು-ನೀವು ಯಾವಾಗಲೂ ರೈತರ ಬಗ್ಗೆ ಮಾತನಾಡುತ್ತೇವೆ. KIADB ಯವರು ಸ್ವಾಧೀನಪಡಿಸಿಕೊಂಡಿರುವುದು ನಿಜ. ನಂತರ ಅದನ್ನು ಬಿಪಿಎಲ್ ಕಂಪನಿಗೆ ಕೊಟ್ಟಿದ್ದಾರೆ. 1.10,000 ರೂ.ಗಳ ಪರಿಹಾರವನ್ನು ರೈತರಿಗೆ ಕೊಟ್ಟಿದ್ದಾರೆ. ಆದರೆ ಕಂಪನಿಯನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲೇ ಬರಿ 3% ಜಾಗವನ್ನು ಉಪಯೋಗ ಮಾಡಿಕೊಂಡು ಅದನ್ನು convert ಮಾಡಿಕೊಂಡು political pressure ತಂದು ಕ್ರಯಪತ್ರ ಮಾಡಿಕೊಂಡು ಅದನ್ನು 1.10 ಲಕ್ಷ ರೂ.ಗಳಿಗೆ ಬೇರೆ ಯಾರಿಗೋ ಸಾರಾಸಗಟಾಗಿ ಮಾರಾಟ ಮಾಡಿದ್ದಾರೆ. Suzuki ಯವರಿಗೆ, Jindal ದವರಿಗೆ ಮತ್ತು IOC ಮುಂತಾದವರಿಗೆ ಮಾರಿದ್ದಾರೆ. ಮಾರಲು ಎಲ್ಲಿ provision ಇದೆ? KIADB Act ಇಲ್ಲವೆ? ಆ ಕಾನೂನು ಪ್ರಕಾರ ಮಾರಲು provision ಇದೆಯೇ? ಯಾರಾದರು ಒಂದೊ-ಎರಡೊ ಎಕರೆ ಜಮೀನನ್ನು allot ಮಾಡಿಕೊಂಡಿದ್ದರೆ ನೀವೆ ಹೇಳುತ್ತಿರಿ, unless you start the unit, unless you take the power connection, unless we start the production, you will not get the Sale Deed. ಅಲ್ಲಿಯವರೆಗೆ ಶುದ್ಧ ಕ್ರಯಪತ್ರವನ್ನು ಕೊಡುವುದಿಲ್ಲ. ಹೀಗೆ ಇರುವಾಗ ಇವರಿಗೆ ಹತ್ತಾರು ವರ್ಷಗಳಲ್ಲಿ ಕ್ರಯ ಮಾಡಿ 149 ಎಕರೆಯನ್ನು 200 ಕೋಟಿ ರೂಪಾಯಿಗಳಿಗೆ ಮಾರಲು ಬಿಡುತ್ತಾರೆ. ಆದರೆ ಇವರು ರೈತರಿಗೆ ಕೊಟ್ಟಿರುವುದು 2 ಕೋಟಿ ರೂಪಾಯಿಗಳು. 200 ಕೋಟಿ ರೂಪಾಯಿಗಳನ್ನು ಮಧ್ಯವರ್ತಿಗಳಿಗೆ ಕೊಡುತ್ತೀರಾ ನೀವು? ಸರ್ಕಾರ ಹೇಳಬೇಕು ಇದು ನ್ಯಾಯವೆ? ಕೆಐಡಿಬಿ ಮಾಡಿರುವುದು ಸರಿಯೇ?

**ಶ್ರೀ ಕೆ. ಗೋವಿಂದರಾಜ್:-** ಹಿಂದೆ ಆಗಿರುವುದು ಇದು.

**ಶ್ರೀ ಈ. ಕೃಷ್ಣಪ್ಪ:-** ಅವರು ತಪ್ಪು ಮಾಡಿದ್ದಾರೆ. ಅದನ್ನು ನೀವು ಸರಿಪಡಿಸಲು ಈ ಸರ್ಕಾರಕ್ಕೆ ಆಗುತ್ತದೊ ಇಲ್ಲವೋ?

**ಶ್ರೀ ದಿನೇಶ್ ಗುಂಡುರಾವ್:-** ಆ ಸರ್ಕಾರ ಈ ಸರ್ಕಾರ ಎನ್ನುವುದು ಬೇಡ. ವಿಷಯ ಎಲ್ಲರಿಗೂ ಗೊತ್ತಾಗಬೇಕು ಅಷ್ಟೆ.

**ಸಭಾಪತಿಯವರು:-** ಚರ್ಚೆ ದಾರಿ ತಪ್ಪುತ್ತಿದೆ. ಇಬ್ಬರು ನಿಂತು ಮಾತನಾಡಿದರೆ ಹೇಗೆ. ಒಬ್ಬರು ಕುಳಿತುಕೊಳ್ಳಿ. ಇಬ್ಬರು ಮಾತನಾಡಿದರೆ ವಿಷಯ ರೆಕಾರ್ಡ್‌ಗೆ ಹೋಗುವುದಿಲ್ಲ. ಇದು ತಪ್ಪಾಗಿದೆ ಎಂದು ಅವರು ನೇರವಾಗಿ ಆಪಾದನೆ ಮಾಡಿದರು, ಅದನ್ನು ತನಿಖೆ ಮಾಡಬೇಕು ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು ಎಂದು ಹೇಳಿದರು. ಇದನ್ನು ಬೇರೆ angle ನಿಂದ ಚರ್ಚೆ ಮಾಡಿದರೆ ಅದು ಮುಗಿಯುವುದೇ ಇಲ್ಲ. ಅವರು ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆ. ನಿಮ್ಮ ಹೊಸ ಬೇಡಿಕೆ ಏನಾದರು ಇದ್ದರೆ ಅದನ್ನು ಇಡಿ.

4-00 ಗಂಟೆ

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, BPL company credibility ಬಗ್ಗೆ ತನಿಖೆಯಾಗಬೇಕು, ಯಾವ ಯಾವ ಬಿಪಿಎಲ್ ಕಂಪನಿಗಳ ಸ್ವಾಧೀನದಲ್ಲಿರುವ ಸರ್ಕಾರಿ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. 149 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಕೇವಲ 1.10 ಲಕ್ಷ ನೀಡಿ, 1.10 ಕೋಟಿ ರೂಪಾಯಿಗಳಿಗೆ ಮಾರಿ ಹಣ ಮಾಡಿಕೊಂಡಿದ್ದಾರೆ, ಆ ಹಣವನ್ನು ವಸೂಲು ಮಾಡಬೇಕು. ರೈತರಿಗೆ ಪರಿಹಾರವನ್ನು ಜಾಸ್ತಿ ಕೊಡಿಸಬೇಕು. ಇನ್ನು ಮುಂದೆ ಇಂತಹ ಅಚಾತುರ್ಯಗಳು ನಡೆಯಬಾರದು ಹಾಗು real estate company ಯಂತೆ K.I.A.D.B. ನಡೆಯಬಾರದೆಂದು ಆಗ್ರಹ ಮಾಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು legal angale ಬಗ್ಗೆ ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಇವತ್ತು ಕೈಗಾರಿಕಾ ಸಚಿವರಾಗಿದ್ದು, ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಕಾರಣಕರ್ತರಲ್ಲ. ಇವರ ಸರ್ಕಾರವೇ ಇದಕ್ಕೆ ಕಾರಣ ಎಂದು ನಾನು ಹೇಳಿಲ್ಲ ಮತ್ತು ಅವರು ಹೇಳಿಲ್ಲ. ಈ ಘಟನೆಯು

2006ನೇ ಇಸವಿಯಲ್ಲಿ ನಡೆದಿದೆ. ಈಗ ನೀಡಿರುವ ಉತ್ತರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಒಂದು ಸಹಿ ಹಾಕಿಸಿಬಿಟ್ಟಿದ್ದಾರೆ. ದಯವಿಟ್ಟು ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಲೇಬೇಕು. ಕಾರಣವೇನೆಂದರೆ K.I.A.D.B. ಕೈಗಾರಿಕೆಯನ್ನು ಸ್ಥಾಪನೆ ಮಾಡಲು 220 ಎಕರೆ ಭೂಮಿ ಬೇಕೆಂದು acquire ಮಾಡಿದರು. ಈ ಭೂಮಿಯನ್ನು ರೈತರ ಹಿತಕ್ಕೆ ವಿರುದ್ಧವಾಗಿ acquire ಮಾಡಿದರು ಎಂದು ಒಂದು P.I.L. ಅನ್ನು ಹೈಕೋರ್ಟ್‌ನಲ್ಲಿ ದಾಖಲು ಮಾಡಿದ್ದಾರೆ. ನಂತರ ಉಚ್ಚ ನ್ಯಾಯಾಲಯದವರು ರೈತರ ವಿರುದ್ಧವಾಗಿ ಮಾಡಿದ್ದಾರೆ ಎಂದು acquisition ಅನ್ನು ರದ್ದು ಮಾಡುತ್ತಾರೆ. ಬಹುಶಃ ಹಿಂದಿನ ಸರ್ಕಾರದ ಹಿಂದಿನ ಮಂತ್ರಿ ಮಾಡಿರುವ ಲೋಪ ಮತ್ತು ಅದರ ಹಿನ್ನೆಲೆಯಲ್ಲಿರುವ ದೊಡ್ಡ ಪ್ರಮಾಣದ...... ಅದನ್ನು ಏನೆಂದು ಬೇಕಾದರೂ ಕರೆಯಿರಿ. ಅದರ ಬಗ್ಗೆ ಚರ್ಚೆ ಮಾಡೋಣ. ಏಕೆಂದರೆ ಈಗಿನ ಸರ್ಕಾರವು ತನಿಖೆ ಮಾಡಬೇಕಾಗುತ್ತದೆ. ಈಗ ಅವರ ಸರ್ಕಾರ ಇರುವುದರಿಂದ ಅಷ್ಟಕ್ಕೆ ಸಂಬಂಧಪಟ್ಟಂತೆ ನಾನು ಹೇಳುತ್ತಿದ್ದೇನೆ. ಇದಾದ ನಂತರ K.I.A.D.B. ನವರು ಸರ್ವೋಚ್ಚ ನ್ಯಾಯಾಲಯಕ್ಕೆ ಹೈಕೋರ್ಟ್‌ನವರು ರದ್ದು ಮಾಡಿರುವುದು ತಪ್ಪು, K.I.A.D.B. ನವರೇ ಇದನ್ನು ವಶಪಡಿಸಿಕೊಂಡು ಕಾರ್ಖಾನೆ ಸ್ಥಾಪನೆ ಮಾಡಿ ಬೇಕಾದಷ್ಟು ಜನರಿಗೆ ಉದ್ಯೋಗ ಕೊಡಬೇಕಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಮಾಡಿದ್ದೇವೆ ಎಂದು ಅಪೀಲು ಹಾಕುತ್ತಾರೆ. ಬಹುಶಃ ಆ ಸಂದರ್ಭದಲ್ಲಿ ರಾಜ್ಯ ಸರ್ಕಾರದವರು ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿ, ಇದರಿಂದ ಬಹಳಷ್ಟು ಜನರಿಗೆ ಉದ್ಯೋಗ ಸಿಗುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡರು. K.I.A.D.B. ನವರು ಕಾರ್ಖಾನೆಗೆ ಅನುಕೂಲ ಮಾಡಿಕೊಟ್ಟು, ರಾಜ್ಯ ಮತ್ತು ದೇಶದ ಬೆಳವಣಿಗೆ ಹಾಗೂ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಅಲ್ಲವೇ ಸುಪ್ರೀಂಕೋರ್ಟ್‌ಗೆ ಹೋಗಿರುವುದು? ನಂತರ ಸುಪ್ರೀಂಕೋರ್ಟ್‌ನವರು ಇವರ ವಾದವನ್ನು ಒಪ್ಪಿ, ಕೈಗಾರಿಕೆ ಸ್ಥಾಪನೆ ಮಾಡಲು ಹಾಗೂ ಬೇಕಾದಷ್ಟು ಜನರಿಗೆ ಉದ್ಯೋಗ ಕೊಡುವ ಉದ್ದೇಶ ಇದ್ದು, ಬೇಕಾದಷ್ಟು ಜನರಿಗೆ ಉದ್ಯೋಗ ಕೊಡುವ

ಪರಿಸ್ಥಿತಿ ಅವರಿಗೆ ನಿರ್ಮಾಣವಾಗಿದೆ ಎಂದು ಸಾರ್ವಜನಿಕ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಒಪ್ಪಿದರು. ಒಪ್ಪಿ ಆದ ಮೇಲೆ ಸುಪ್ರೀಂಕೋರ್ಟ್‌ನಿಂದ ಬಂದ ನಂತರ 149 ಎಕರೆ ಜಮೀನನ್ನು ಈ ಬಿಪಿಎಲ್ ಕಂಪನಿಯವರಿಗೆ ಟಿವಿಯಲ್ಲಿ ಬರುವ ಕಲರ್ ಟ್ಯೂಬ್‌ಗಳನ್ನು ತಯಾರು ಮಾಡಲು 1996ನೇ ಇಸವಿಯಲ್ಲಿ ಗುತ್ತಿಗೆ ಕರಾರು ಮೇಲೆ ಕೊಟ್ಟಿದ್ದಾರೆ. ಕೆಲವು ವರ್ಷಗಳು ಕಳೆದ ನಂತರ ಅದನ್ನು ಕ್ರಯಪತ್ರ ಮಾಡಿಕೊಡಿ ಎಂದು ಕೇಳಿದರು. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಈ ಉತ್ತರಕ್ಕೆ ಸಹಿ ಹಾಕಿಬಿಟ್ಟಿದ್ದಾರೆ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, $149.5^{1/2}$ ಎಕರೆ ಪೈಕಿ 5 ಎಕರೆ ಕಾಂಪೌಂಡ್ ಮಾಡಿಕೊಂಡರು, ಅದನ್ನು ಗೋಡೌನ್ ಮಾಡಿದ್ದಾರೆಯೇ ಹೊರತು ಒಂದೇ ಒಂದು ಟ್ಯೂಬ್ ಸಹ ತಯಾರು ಮಾಡಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ನಾನು ಆ angle ಗೆ ಹೋಗುವುದಿಲ್ಲ. ನಾನು ಕ್ರಯಪತ್ರದ ಬಗ್ಗೆ ಬರುತ್ತಿದ್ದೇನೆ. I don’t go for that angle now. ಆ ಸಂದರ್ಭದಲ್ಲಿ ಇದನ್ನು ಕ್ರಯಪತ್ರ ಮಾಡಬೇಕೆಂದಾಗ K.I.A.D.B. ಅಧಿಕಾರಿಗಳು 149 ಎಕರೆ ಜಮೀನಿನಲ್ಲಿ ಏನು ಮಾಡಿದ್ದಾರೆ ಎಂದು ಹೋಗಿ ನೋಡುತ್ತಾರೆ. ಅಧಿಕಾರಿಗಳು ಅಲ್ಲಿಗೆ ಹೋದಾಗ ಆ ಭಾಗದಲ್ಲಿ ಕೇವಲ ಒಂದು ಶೆಡ್ ಹಾಕಿಕೊಂಡಿದ್ದು, ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಮಾಡಿಲ್ಲ. ಯಾವ ಉದ್ದೇಶಕ್ಕೆ ತೆಗೆದುಕೊಂಡಿದ್ದರೋ, ಆ ಕೆಲಸವೂ ಆಗಿಲ್ಲ. ಕೇವಲ 5 ಎಕರೆ ಪ್ರದೇಶವನ್ನು ಮಾತ್ರ ಬಳಸಿಕೊಂಡಿದ್ದು, ಬಾಕಿ ಎಲ್ಲವೂ ಖಾಲಿ ಎಂದು ಹೇಳುತ್ತಾರೆ. ಇದನ್ನು K.I.A.D.B. ಅಧಿಕಾರಿಗಳೇ ಹೇಳಿದ್ದಾರೆ. ನಂತರ ಇದರ ಬಗ್ಗೆ ಕ್ರಯಪತ್ರ ಮಾಡಲು ನಿರಾಕರಿಸುವ ಬಗ್ಗೆ ಹೇಳಿದ್ದಾರೆ. ನಿರಾಕರಿಸಿದ ನಂತರ ಅದು ನೆನೆಗುದಿಗೆ ಬಿತ್ತು. ನಂತರ ಅವರು 2006ರಲ್ಲಿ ಒಂದು ಮನವಿಯನ್ನು ಸಲ್ಲಿಸಿ, ಸುಪ್ರೀಂಕೋರ್ಟ್‌ಗೆ ಕೇಸ್ ಹೋಗಿ ಸುಮಾರು ವರ್ಷಗಳ ಕಾಲ ನೆನೆಗುದಿಗೆ ಬಿದ್ದದ್ದರಿಂದ ಈ ರೀತಿ ಆಯಿತು, ಸುಪ್ರೀಕೋರ್ಟ್‌ನವರು ಕೈಗಾರಿಕೆ ಸ್ಥಾಪನೆ ಮಾಡಿ ಎಂದು ಹೇಳಿದರು, ಇಂತಹ ಪರಿಸ್ಥಿತಿ ಬಂದಿದ್ದರಿಂದ ಸುಮಾರು ವರ್ಷಗಳ ಕಾಲ ಕೈಗಾರಿಕೆ

ಸ್ಥಾಪನೆ ಮಾಡಲು ಆಗಲಿಲ್ಲ, ಇದೆಲ್ಲದ್ದರಿಂದ ಬಹಳ ಕಷ್ಟ ಆಗಿ 149 ಎಕರೆಯಲ್ಲಿ 144 ಎಕರೆಯಲ್ಲಿ ಏನೂ ಮಾಡಲು ಆಗಿಲಿಲ್ಲ, ಕೇವಲ 5 ಎಕರೆಯಲ್ಲಿ ಮಾಡಿದ್ದೇವೆ. ಆದ್ದರಿಂದ ಏನಾದರೂ ಮಾಡಿ ದಯವಿಟ್ಟು ಕ್ರಯಪತ್ರ ಕೊಡಿ ಎಂದು ಅಂದಿನ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸುತ್ತಾರೆ. ನಂತರ ಆ ಮಂತ್ರಿ 149 ಎಕರೆಯಲ್ಲಿ ಸುಪ್ರಿಂಕೋರ್ಟ್‌ನಲ್ಲಿ ಕೇಸ್ ಇದ್ದಿದ್ದರಿಂದ 144 ಎಕರೆಯಲ್ಲಿ ಏನೂ ಮಾಡಲು ಆಗಲಿಲ್ಲ. ಆದರೆ ಆ ಕಂಪನಿಯವರು ರಾಜ್ಯಕ್ಕೆ ಬಹಳ ದೊಡ್ಡ ಸೇವೆಯನ್ನು ಮಾಡಿರುವ ಹಿನ್ನೆಲೆಯಲ್ಲಿ, ಅವರ ಸೇವೆಯನ್ನು ಗಣನೆಗೆ ತೆಗೆದುಕೊಂಡು....... ಮಾನ್ಯ ಮುಖ್ಯಮಂತ್ರಿಯವರು ಉತ್ತರದಲ್ಲಿ ಇದನ್ನು ಹೇಳಿಬಿಟ್ಟಿದ್ದಾರೆ, ಅದನ್ನು ಏಕೆ ಹೇಳಿದರೋ, ಅದನ್ನು ಇವರು ಬರೆದರೋ ಏನೋ ಗೊತ್ತಿಲ್ಲ. ದಿನಾಂಕ 14/9/2006ರಲ್ಲಿ ಈ ಸರ್ಕಾರ ಇರಲಿಲ್ಲ, ಆಗ ಈ ಮುಖ್ಯಮಂತ್ರಿಗಳು ಇರಲಿಲ್ಲ, ಸರ್ಕಾರವು ಯಾರಾದ್ದಾದರೂ ಇದ್ದುಕೊಳ್ಳಲಿ. 2006ರ ಸರ್ಕಾರ ಯಾರು ಎಂದು ಎಲ್ಲರಿಗೂ ಗೊತ್ತು.

**ಶ್ರೀ ಕೆ.ಬಿ. ಶಾಣಪ್ಪ:–** ಆಗ ಸಮ್ಮಿಶ್ರ ಸರ್ಕಾರ ಇತ್ತು.

**ಶ್ರೀ ಎಂ.ಸಿ. ನಾಣಯ್ಯ:–** ಆಗ 20:20 ಸರ್ಕಾರ ಇತ್ತು. ಆಗ ನಾನು ಯಾವುದರಲ್ಲಿಯೂ ಇರಲಿಲ್ಲ. ನಾನು neutral ಆಗಿ ಇದ್ದೆನು. ನನ್ನದು original ಜನತಾದಳ ಆಗಿತ್ತು. ನಾನು facts ಅನ್ನು ಹೇಳುತ್ತಿದ್ದೇನೆ.

**ಶ್ರೀ ಗೋ. ಮಧುಸೂದನ್:–** ಆಗ original ಜನತಾದಳ ಇದ್ದು, ಈಗ ಇರುವುದು ಯಾವುದು?

**ಶ್ರೀ ಎಂ.ಸಿ. ನಾಣಯ್ಯ:–** ಕರ್ನಾಟಕದಲ್ಲಿ ಅದೊಂದೆ original ಜನತಾದಳ ಇರುವುದು, ಇನ್ಯಾವುದೂ ಇಲ್ಲ. ಆದ್ದರಿಂದ ನಾನು ಅದರಲ್ಲಿ ಇದ್ದೇನೆ. ಅದರಲ್ಲಿ ತಪ್ಪೇನು? ಈಗ ನಿಮ್ಮದು ಯಾವುದು ಎಂದು ನಾನು ಮಾನ್ಯ ಸದಸ್ಯರನ್ನು ಕೇಳುತ್ತೇನೆ. ಇರಲಿ ಬಿಡಿ. I am not going to dilute this. ಉತ್ತರದಲ್ಲಿ "ಬಿಪಿಎಲ್ ಲಿಮಿಟೆಡ್‌ನವರು ದಿನಾಂಕ 4/7/2005ರಂದು ಶುದ್ಧಕ್ರಯ ಪತ್ರವನ್ನು ನೀಡಲು ಮನವಿ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಶುದ್ಧ

ಕ್ರಯಪತ್ರ ನೀಡುವ ಬಗ್ಗೆ ಮಂಡಳಿಯ ಅಭಿವೃದ್ಧಿ ಅಧಿಕಾರಿಯವರ ವರದಿಯಲ್ಲಿ ಮೆ: ಬಿಪಿಎಲ್ ಲಿಮಿಟೆಡ್‌ನವರು ಕೈಗಾರಿಕೆಯನ್ನು ನಡೆಸುತ್ತಿರುವರೆಂದು, ಒಟ್ಟು ಜಮೀನಿನ ಪೈಕಿ ಶೇಕಡ 5.12ರಷ್ಟು ಜಮೀನನ್ನು ಮಾತ್ರ ಬಳಕೆ ಮಾಡಿರುತ್ತಾರೆಂದು ವರದಿ ನೀಡಿದ್ದರ ಮೇರೆಗೆ ಕಂಪನಿಯ ಮನವಿಯನ್ನು ಮಂಡಳಿಯು ನಿರಾಕರಿಸಿ ದಿನಾಂಕ 30/10/2005ರಂದು ಕಂಪನಿಗೆ ನೋಟೀಸ್ ನೀಡಿತು" ಎಂದಿದೆ. ಅಂದರೆ ಇದನ್ನು ಏಕೆ ಹಿಂದಕ್ಕೆ ಪಡೆಯಬಾರದೆಂದು ಕಂಪನಿಗೆ ನೋಟೀಸ್ ಕೊಟ್ಟಿದ್ದಾರೆ. K.I.A.D.B. ನವರು ಅಲ್ಲಿ ಏನೂ ಮಾಡಲೇ ಇಲ್ಲ, ಉಪಯೋಗವನ್ನು ಮಾಡದೇ ಕ್ರಯಪತ್ರ ಕೊಡುವ ಬಗ್ಗೆ ಕೇಳುತ್ತಿದ್ದಾರೆ, ಆದ್ದರಿಂದ ಇದನ್ನು ಹಿಂದಕ್ಕೆ ಪಡೆಯುವ ಅಥವಾ ರದ್ದು ಮಾಡುವ ಬಗ್ಗೆ ಮಂಡಳಿಯು ನೋಟೀಸ್ ಕೊಟ್ಟಿದೆ. ಮಂಡಳಿಯು ನೋಟೀಸ್ ಕೊಟ್ಟ ಮೇಲೆ 2006ಕ್ಕೆ ಒಂದು ಸರ್ಕಾರ ಬರುತ್ತದೆ. ಆಗ ಅಲ್ಲಿನ ಒಬ್ಬ ಮಂತ್ರಿಯವರ ಹತ್ತಿರ ನೇರವಾಗಿ ಅವರು ಮನವಿ ಸಲ್ಲಿಸುತ್ತಾರೆ. ಈ ಹಿಂದೆ ಮಾನ್ಯ ಮಂತ್ರಿಗಳಿಂದ ಡೀನೋಟಿಫಿಕೇಷನ್ ಆಗಿಲ್ಲವೇ? ಅದೇ ರೀತಿ ಇದೊಂದು ಮನವಿಯನ್ನು ಸಲ್ಲಿಸುತ್ತಾರೆ. ಜಮೀನನ್ನು ಏಕೆ ಹಿಂದಕ್ಕೆ ಪಡೆಯಬಾರದೆಂದು ನೋಟೀಸ್ ಕೊಟ್ಟಿದ್ದಾರೆ. ನಂತರ ಉತ್ತರದಲ್ಲಿ ಮುಂದುವರೆದು "ಮೆ: ಬಿಪಿಎಲ್ ಲಿಮಿಟೆಡ್‌ರವರು ದಿನಾಂಕ 14/9/2009ರಲ್ಲಿ ತಮ್ಮ ಮನವಿ ಪತ್ರ ಮೂಲಕ ಅಂದಿನ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಕರ್ನಾಟಕ ಸರ್ಕಾರ, ಇವರಿಗೆ ದಾಬಸ್ ಪೇಟೆ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ಮತ್ತು 2–ಪಿ (ಭಾಗ)ರಲ್ಲಿ ಬರುವ 149 ಎಕರೆ 5.5 ಗುಂಟೆ ಜಮೀನನ್ನು ಹಂಚಿಕೆ ಪಡೆದ ಮೇಲೆ ತಾವು ಅನುಭವಿಸಿದ ತೊಡಕುಗಳು ನ್ಯಾಯಾಲಯಗಳಲ್ಲಿ ಇದ್ದ ತಕರಾರುಗಳು, ಇವುಗಳಿಂದ ತಮ್ಮ ಯೋಜನೆ ಅನುಷ್ಠಾನಗೊಳ್ಳದಿದ್ದು, ಮಂಡಳಿಯು ಶುದ್ಧ ಕ್ರಯ ಪತ್ರವನ್ನು ನೀಡಲು ನಿರಾಕರಿಸಿರುವ ಬಗ್ಗೆ ಮನವಿ ಸಲ್ಲಿಸಿತು" ಅಂದರೆ ಅವರೇ ಅನುಷ್ಠಾನಗೊಳ್ಳಲು ಆಗಲಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಸನ್ಮಾನ್ಯ ಸಭಾಪತಿಯವರೇ, ನಮ್ಮ ಯೋಜನೆಗಳು ಅನುಷ್ಠಾನಗೊಳ್ಳಲಿಲ್ಲ ಎಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಈ ಜಮೀನನ್ನು

ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಾಗಲಿಲ್ಲವೆಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. "ಮಂಡಳಿಯು ಶುದ್ಧ ಕ್ರಯಪತ್ರ ನೀಡಲು ನಿರಾಕರಿಸಿರುವ ಬಗ್ಗೆ ಮನವಿ ಸಲ್ಲಿಸಿತು." ಮಂಡಳಿಯವರು ಬೇಡವೆಂದು ನಿರಾಕರಣೆ ಮಾಡುತ್ತಾರೆ. ನಂತರ ಇದು ಮಂತ್ರಿಗಳ ಹತ್ತಿರ ನೇರವಾಗಿ ಬರುತ್ತದೆ. ಆಗ ಯಾರು ಮಂತ್ರಿಗಳಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ.

**ಸಭಾಪತಿಯವರು:–** ಅವರ ಹೆಸರನ್ನು ಹೇಳುವುದು ಬೇಡ. ದಿನಾಂಕವನ್ನು ಹೇಳಿದರೆ ಸಾಕು. ಎಲ್ಲರಿಗೂ ಗೊತ್ತಿರುವುದರ ಬಗ್ಗೆ ಚರ್ಚೆ ಯಾಕೆ?

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾನು 2006ರಲ್ಲಿ ಇಲ್ಲಿ ಇರಲಿಲ್ಲ ಅದಕ್ಕಾಗಿ ಕೇಳುತ್ತಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಹೊರಗಡೆ ಇದ್ದರೂ ಸಹ ಅವರಿಗೆ ಎಲ್ಲವೂ ಗೊತ್ತಿರುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಪ್ರಾಮಾಣಿಕವಾಗಿ ಹೇಳುತ್ತೇನೆ. ಅದರ ಬಗ್ಗೆ ನನಗೆ ಗೊತ್ತಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಆಗ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಇತ್ತು.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರ ಈ ರೀತಿ ಇದ್ದರೆ, ಈ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಕಡತಗಳನ್ನು ಅವರು ಸದನದಲ್ಲಿ ಮಂಡಿಸಬೇಕಾಗುತ್ತದೆ. You need have to place the entire records on the floor of the House. ಮಾನ್ಯ ಮುಖ್ಯಮಂತ್ರಿಗಳೇ, I demand, better you place it on the floor of the House. ಈ ದೇಶದ ಮತ್ತು ಈ ರಾಜ್ಯದ ಜನತೆಗೆ ಅಲ್ಲಿ ಏನು ನಡೆದಿದೆ ಎನ್ನುವುದು ಗೊತ್ತಾಗಬೇಕಾಗಿದೆ. ಶುದ್ಧ ಕ್ರಯ ಪತ್ರಕ್ಕೆ ಮಂಡಳಿಯವರು ನಿರಾಕರಿಸುತ್ತಾರೆ. The K.I.A.D.B. is the authority. ಕೆ.ಐ.ಎ.ಡಿ.ಬಿ.ಯ

ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿದರೆ, ಜಮೀನು ಖಾಲಿ ಬಿದ್ದಿದೆ, ಅಲ್ಲಿ ಯಾವುದೇ ಕೈಗಾರಿಕೆ ಇರುವುದಿಲ್ಲ. ಆದ್ದರಿಂದ ಆ ಜಮೀನನ್ನು ಹಿಂದಕ್ಕೆ ಪಡೆಯಬೇಕೆಂದು ನೋಟೀಸ್ ಕಳುಹಿಸುತ್ತಾರೆ. ಅದು ಆದ ಮೇಲೆ ಮೇಲ್ಮನವಿ ಸಲ್ಲಿಸಲಾಗುತ್ತದೆ. ಮೇಲ್ಮನವಿ ಎಂದರೆ, ಏಕ ಸದಸ್ಯ ಪೀಠದಿಂದ Division Bench, ಅಲ್ಲಿಂದ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದೆ. ಸಾಧಾರಣವಾಗಿ ನಮ್ಮ ಆಡಳಿತದ ನಿರ್ವಹಣೆಯಲ್ಲಿ ಮಂಡಳಿಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರಕ್ಕೆ ಅಥವಾ ಮಂತ್ರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸಿದರೆ, "Well I think they have taken the right decision. I am not going to interfere" ಎಂದು ಹೇಳುವುದು that should be the ordinary conduct of a minister. ಅದನ್ನು ಬಿಟ್ಟು ಇವರು, "ಸದರಿ ಮನವಿಯ ಮೇಲೆ ಅಂದಿನ ಮಾನ್ಯ ಬೃಹತ್ ಮತ್ತು ಕೈಗಾರಿಕಾ ಸಚಿವರಿಗೆ ದಿನಾಂಕ:21.10.2006ರಂದು ವಿವರವಾದ ಟಿಪ್ಪಣಿಯನ್ನು ಮಂಡಳಿಯು ಸಲ್ಲಿಸಿದ್ದು ಮಾನ್ಯ ಸಚಿವರು ರಾಜ್ಯ ಉಚ್ಚ ನ್ಯಾಯಾಲಯದ ಆದೇಶ,............" ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಲಾಗಿದೆ. ಅಲ್ಲಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವೇ ಅಂತಿಮ ಎಂದು ಪರಿಗಣಿಸಿ ಎಂದಿದ್ದಾರೆ. ಸರ್ವೋಚ್ಚ ನ್ಯಾಯಾಲಯ, 'ಕೆ.ಐ.ಎ.ಡಿ.ಬಿ. ಕೈಗಾರಿಕೆಗಳನ್ನು ನಡೆಸಬೇಕು' ಎಂದು ಹೇಳಿದೆ. ನಾವು ಜನರಿಗೆ ಉದ್ಯೋಗ ಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯ ಅದನ್ನು ರದ್ದು ಮಾಡಿದೆ. "ರದ್ದು ಮಾಡಿರುವುದನ್ನು ಕಿತ್ತು ಹಾಕಿ ನಮಗೆ ಕೈಗಾರಿಕೆ ನಡೆಸುವುದಕ್ಕೆ ಅನುಮತಿಯನ್ನು ಕೊಡಿ' ಎಂದು ಕೆ.ಐ.ಎ.ಡಿ.ಬಿ.ಯವರು ಕೇಳಿದ್ದಾರೆ. ಆದರೆ, ಇವರು ಏನು ಬರೆಯುತ್ತಾರೆ ಎಂದರೆ, "ಸರ್ವೋಚ್ಚ ನ್ಯಾಯಾಲಯದ ತೀರ್ಪು ಅಂತಿಮ ಮತ್ತು ಕಟಿಬದ್ಧ ಎಂದು ಪರಿಗಣಿಸಿ ಬಿ.ಪಿ.ಎಲ್ ಕಂಪನಿಯು ರಾಜ್ಯಕ್ಕೆ ನೀಡಿರುವ ಸೇವೆ ಮತ್ತು ಕೊಡುಗೆಯನ್ನು ಪರಿಗಣಿಸಿ........." ಎಂದು ಇದೆ. ಇದು ಯಾರಿಗೆ ಮಾಡಿರುವ ಸೇವೆ? ರಾಜ್ಯಕ್ಕೆ ಮಾಡಿರುವ ಸೇವೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಮಂತ್ರಿಗಳು

ಇದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು, ರಾಜ್ಯಕ್ಕೆ ಮಾಡಿರುವ ಸೇವೆ ನನಗೆ ಮಾಡಿರುವ ಸೇವೆ ಎಂದು ಪರಿಗಣಿಸಿರಬಹುದು. "ಸದರಿ ಕಂಪನಿಗೆ ಶುದ್ಧ ಕ್ರಯ ಪತ್ರ ನೀಡಲು ಮಂಡಳಿಗೆ ನಿರ್ದೇಶನ ನೀಡಿರುತ್ತಾರೆ." Sir, this is a

fraud on the Government. A Government land… A private land acquired by the K.I.A.D.B… ಹೈಕೋರ್ಟಿಗೆ ಹೋಗುತ್ತಾರೆ. ಹೈಕೋರ್ಟ್ ರದ್ದು ಮಾಡುತ್ತದೆ. ಕೆ.ಐ.ಎ.ಡಿ.ಬಿ.ಯವರು ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ. ಅಲ್ಲಿ ಕೈಗಾರಿಕೆ ನಡೆಸುವುದಕ್ಕೆ ಅನುಮತಿಯನ್ನು ಕೊಡುತ್ತಾರೆ. ಆದರೆ ಬಿ.ಪಿ.ಎಲ್. ಕಂಪನಿಯವರು, 'ನಮಗೆ ಕೈಗಾರಿಕೆ ಮಾಡುವುದಕ್ಕೆ ತೊಡಕುಗಳಿರುವುದರಿಂದ ನಾವು ಕೈಗಾರಿಕೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ಜಮೀನು ಪಾಳು ಬಿದ್ದಿದೆ. ಆದ್ದರಿಂದ ಶುದ್ಧ ಕ್ರಯಪತ್ರದ ಮೂಲಕ ನಮಗೆ ಕೊಟ್ಟು ಬಿಡಿ' ಎಂದು ಕೇಳುತ್ತಾರೆ. ಈ ರೀತಿ ಕ್ರಯಪತ್ರವನ್ನು ನೀಡುವುದಕ್ಕೆ ಯಾವ ರಾಜ್ಯ ಸರ್ಕಾರ ಮತ್ತು ಯಾವ ಮಂತ್ರಿ ಆದೇಶ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ದಯವಿಟ್ಟು ತಾವು ಹೇಳಬೇಕಾಗಿದೆ. Is it ever possible? Are you giving a charity? ಮುಂದುವರೆದು "ಕೆ.ಐ.ಎ.ಡಿ.ಬಿ ಕಾಯ್ದೆ 17ರನ್ವಯ ರಾಜ್ಯ ಸರ್ಕಾರವು ಮಂಡಳಿಗೆ ಸಾಮಾನ್ಯ ಮತ್ತು ಸಹಜ ನಿರ್ದೇಶನಗಳನ್ನು ನೀಡಲು ಅಧಿಕಾರ ಹೊಂದಿದ್ದು" ಎಂದು ಹೇಳಿದ್ದಾರೆ. ಇದರ ಅರ್ಥವೇನು? ಕೆ.ಐ.ಎ.ಡಿ.ಬಿ.ಯವರು ಮಾಡುವ ಕೆಲಸಕ್ಕೆ ಸಂಬಂಧಪಟ್ಟಂತೆ, ಕೈಗಾರಿಕೆ ಸ್ಥಾಪನೆಗೆ ಸಂಬಂಧಪಟ್ಟಂತೆ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಸಂಬಂಧಪಟ್ಟ ಹಾಗೆ ಯಾವ ರೀತಿ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಬೆಳೆಯಬೇಕು ಮತ್ತು ಜನರಿಗೆ ಉದ್ಯೋಗ ದೊರೆಯಬೇಕು ಎನ್ನುವುದರ ಬಗ್ಗೆ ರಾಜ್ಯ ಸರ್ಕಾರ ಮಂಡಳಿಗೆ ಆಗಾಗ ಕೆಲವು ಮಾರ್ಗದರ್ಶನಗಳನ್ನು ನೀಡುವಂತಹ ಅಧಿಕಾರ ಇರುತ್ತದೆ. ಆದರೆ, ಆ ಅಧಿಕಾರದ ಅಡಿಯಲ್ಲಿ ಇವರು ಏನು ಮಾಡುತ್ತಾರೆಂದರೆ, 'ಶುದ್ಧ ಕ್ರಯಪತ್ರ ಕೊಡಿ' ಎಂದು ಮಂತ್ರಿಗಳು ಮಾಡಿರುವ ಆದೇಶವನ್ನು ಸಹ ಇದರೊಳಗೆ ಸೇರಿಸಿಕೊಂಡು ಸರ್ಕಾರಕ್ಕೆ ಈ ಅಧಿಕಾರ ಇರುತ್ತದೆ ಎಂದು ಅವರು ಈ ಉತ್ತರದ ಮೂಲಕ

ನಮಗೆ ತಿಳಿಸಿದ್ದಾರೆ. ಈ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪುತ್ತಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ವಾಸ್ತವ ಸ್ಥಿತಿಯನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಆ ಮೇಲೆ ಚರ್ಚೆ ಮಾಡುತ್ತೇವೆ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, I am only trying to tell the Government. ಏನಾಗುತ್ತದೆ ಎಂದರೆ, ಈ ರೀತಿ ಬಹಳಷ್ಟು ಬರುತ್ತವೆ, ಅಧಿಕಾರಿಗಳು ಅದನ್ನು ತಂದು ನಮ್ಮಗಳ ಕೈಗೆ ಕೊಟ್ಟು ಬಿಡುತ್ತಾರೆ. ಕೆಲವು ವಿಚಾರಗಳನ್ನು ಹೇಳಿಬಿಡುತ್ತಾರೆ. ನನ್ನ ಕಡೆಯಿಂದ ಸಹಿ ಹಾಕಿಸಿಕೊಂಡು ಸದನದಲ್ಲಿ ಕೊಟ್ಟು ಬಿಡುತ್ತಾರೆ. ಆ ಮೂಲಕ ಅವರ ಮೇಲೆ ಇರುವಂತಹ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳುವುದು ಮತ್ತು ನಮ್ಮ ತಲೆಯ ಮೇಲೆ ಟೋಪಿ ಹಾಕುವಂತಹ ಕೆಲಸ ನಡೆದಿದೆ. ನಿರ್ದಿಷ್ಟವಾಗಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಹೇಳುತ್ತಿದ್ದೇನೆ, I think our Chief Minister… Sir, let me tell you with all respects to you, you should have gone into the whole records before putting your signature. I am sorry; I do feel that the Chief Minister has been totally misled. I do honestly feel that he has been misled.

**ಸಭಾಪತಿಯವರು:–** ಸರ್ಕಾರದವರು ಏನು ಹೇಳುತ್ತಾರೆ ಎನ್ನುವುದನ್ನು ನೋಡೋಣ. ನಿಮ್ಮ ಬೇಡಿಕೆ ಏನು ಎನ್ನುವುದನ್ನು ತಿಳಿಸಿ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, "ಸರ್ಕಾರದ ಆದೇಶದನ್ವಯ ಮಂಡಳಿಯು ದಿನಾಂಕ:28.11.2006ರಂದು ಶುದ್ಧ ಕ್ರಯಪತ್ರ ನೆರವೇರಿಸುತ್ತದೆ. ಬಿ.ಪಿ.ಎಲ್ ಕಂಪನಿಗೆ ಹಂಚಿಕೆಯಾಗಿರುವ 149 ಎಕರೆ 5.5 ಗುಂಟೆ ಜಮೀನಿಗೆ ಶುದ್ಧ ಕ್ರಯಪತ್ರ ನೆರವೇರಿಸಿರುವುದರಿಂದ ಆ ಕಂಪನಿಯು ಅದೇ ಜಮೀನನ್ನು ಬೇರೆ ಮೂರು ಕಂಪನಿಗಳಿಗೆ ಮಾರಾಟ ಮಾಡಿರುವುದನ್ನು............" ಅವರು ಈ ಜಮೀನನ್ನು ತೆಗೆದುಕೊಂಡ ಮೇಲೆ ಬೇರೆ ಮೂರು ಕಂಪನಿಗಳಿಗೆ ಅದೇ ಜಮೀನನ್ನು ಮಾರಾಟ ಮಾಡಿಬಿಡುತ್ತಾರೆ.

ಇಲ್ಲಿ ನಿಜವಾಗಿಯೂ real estate ದಂಧೆ ನಡೆದಿದೆ. What may be the amount involved, please tell me. 1996ರಲ್ಲಿ ಈ ಜಮೀನನ್ನು ಅವರು 1.10 ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಿದ್ದಾರೆ. The cost of land per acre at that place is as high as about 5-10 crores of rupees today. It is more that about ₹ 700-800 crore. I want to know whether the Government is entering into a real estate transaction. ಈ ಸರ್ಕಾರದವರು ಅಲ್ಲ, ಅಂದಿನ ಸರ್ಕಾರದ ಬಗ್ಗೆ ನಾನು ಹೇಳುತ್ತಿದ್ದೇನೆ. Absolutely, they have entered into a real estate transaction and there appears to be very very big kickback in this very very shady transaction. ಉತ್ತರದ ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ "ಈ ಪ್ರಕರಣದಲ್ಲಿ ದಿನಾಂಕ:20.11.1993ರಂದು ಜರುಗಿದ ಭೂ ದರ ನಿರ್ಧಾರಣಾ ಸಲಹಾ ಸಮಿತಿ ಸಭೆಯಲ್ಲಿ ಈ ಜಮೀನಿಗೆ ಎಕರೆ ಒಂದಕ್ಕೆ 1 ಲಕ್ಷ 10 ಸಾವಿರ ರೂಪಾಯಿ ಒಪ್ಪಂದದ ದರವನ್ನು ನಿಗದಿಪಡಿಸಿದ್ದು, ಇದನ್ನು ದಿನಾಂಕ:29.12.1993ರ ಮಂಡಳಿಯ 167ನೇ ಸಭೆಯಲ್ಲಿ ಅನುಮೋದಿಸಲಾಗಿದೆ. ಹೀಗೆ ನಿಗದಿಪಡಿಸಿರುವ ಒಪ್ಪಂದದ ದರದಲ್ಲಿ ಪರಿಹಾರ ಪಡೆಯಲಿಚ್ಛಿಸದ ಭೂ ಮಾಲೀಕರ ಜಮೀನಿಗೆ ಭೂಸ್ವಾಧೀನ ಕಾಯ್ದೆ 1894ರ ನಿಯಮಾನುಸಾರ award ರಚಿಸಿ......." ಪಾಪ ಅವರು ಪರಿಹಾರವನ್ನು ಪಡೆಯಲು ಒಪ್ಪಲಿಲ್ಲ. ಆದರೆ, ಇವರು ಅವರ ಮೇಲೆ ಒತ್ತಡವನ್ನು ತಂದು ಕಡೆಗೆ ಭೂಸ್ವಾಧೀನ ಕಾಯಿದೆಯ ಪ್ರಕಾರ ಪರಿಹಾರವನ್ನು 1993ರಲ್ಲಿ ನೀಡಲಾಗಿದೆ. "ಪ್ರಸ್ತಾವಿತ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣವಾಗಿ ಮುಕ್ತಾಗೊಂಡಿದೆ." ಎಂದು ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಸಿದ್ದಾರೆ. ಇದರಲ್ಲಿ ನಡೆದಿರುವಂತಹ ಮೋಸ, ಅನ್ಯಾಯ, ಸರ್ಕಾರ ಮತ್ತು ಕೆ.ಐ.ಎ.ಡಿ.ಬಿ.ಯವರು ಆ ಸಂದರ್ಭದಲ್ಲಿ ಮಾಡಿರುವಂತಹ ಕೆಲಸಕ್ಕೆ ಸಂಬಂಧಪಟ್ಟಂತೆ ಇರುವಂತಹ ಕಡತವನ್ನು ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದರೆ, ಖಂಡಿತವಾಗಿಯೂ ನಾನು ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳಾಗಿರುವಂತಹ ಶ್ರೀ ಸಿದ್ದರಾಮಯ್ಯ-ನವರು ಈ ಹೇಳಿಕೆಗೆ ಸಹಿ ಹಾಕುತ್ತಿರಲಿಲ್ಲ. He would have certainly taken

time. He would not have come before this House. ಆದರೆ, ಈ ಹೇಳಿಕೆಯನ್ನು ಮಾನ್ಯ ಸಭಾ ನಾಯಕರು ಅವರ ಪರವಾಗಿ ಓದಿಬಿಟ್ಟಿದ್ದಾರೆ. Whatever it may be, it is on behalf of the Government. I am realy very sorry Mr. Chief Minister. You should not have been misled and probably, you had signed it after believing your officers. I do feel now…

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅವರು ಚರ್ಚೆ ಮಾಡಿರುವ ಅಂಶಗಳಿಗೆ ನಾವು ಉತ್ತರವನ್ನು ಕೊಡುತ್ತೇವೆ.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, the Government can defend it 100 times.

**Sri S.R. PATIL:-** We will never defend it. How do you say that we are going to defend it? How can you imagine?

**Sri M.C. NANAIH:-** I don't know.

**Sri S.R. PATIL:-** How can you imagine? ನಮ್ಮ ಪಾಪದ ಕೂಸಲ್ಲ ಇದು. ನಾವು ಯಾಕೆ ಇದನ್ನು ನಮ್ಮ ತಲೆಯ ಮೇಲೆ ಹಾಕಿಕೊಳ್ಳಬೇಕು.

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಅವರ ಪಾಪದ ಕೂಸಲ್ಲ. ಆದ್ದರಿಂದಲ್ಲೇ ಅವರು ಇದನ್ನು ತಮ್ಮ ತಲೆಯ ಮೇಲೆ ಹಾಕಿಕೊಳ್ಳುವುದು ಬೇಡವೆಂದು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಈ ಚರ್ಚೆಯನ್ನು ಮುಗಿಸಬೇಕಲ್ಲವೆ?

**ಶ್ರೀ ಎಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಹಿನ್ನಲೆಯಲ್ಲಿ ಈ ಹಂತದಲ್ಲಿ ರೈತರಿಗೆ ಅನ್ಯಾಯವಾಗಿದೆ ಎಂದು ಹೇಳಲಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳೆ, only I am requesting you. It is in your interest, in the interest of the

State, in the interest of the farmers this particular transaction which was done by the then Minister and the direction issued by the then Government to the KIADB to execute the sale deed, it is absolutely very shady and very big kickback was involved in it. ನಾನು ನಿಮ್ಮನ್ನು ಪುನಃ ಕೇಳುತ್ತಿದ್ದೇನೆ, it is my only request to the Hon'ble Chief Minister after giving all these things. ನೀವು ಇದರ ಬಗ್ಗೆ ತನಿಖೆ ಮಾಡಿಸಬೇಕು. Factual things ನೀವು ಹೇಳಿದ್ದೇವೆ ಎಂದು ಹೇಳಿದ್ದೀರಿ. ಆದರೂ ಕೂಡ ನಾನು ಹೇಳುತ್ತೇನೆ, factual things ಅನ್ನು ಈ ರೀತಿಯ ಒಕ್ಕಣೆಯಲ್ಲಿ ಈ ಸದನದ ಮುಂದೆ ಇಡಬೇಕಾದಂತಹ ಪರಿಸ್ಥಿತಿ ಇರಲಿಲ್ಲ. It could have been said in a very better and definite manner. The language could have been very different. ಆದರೆ ಆ ರೀತಿ ಮಾಡಲಿಲ್ಲ. I do feel Sir, you have been totally misled. ಆದುದರಿಂದ ನೀವು ಇದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ or such of the officers, the Minister, the KIADB then and the Government who are responsible for that, even now it is not too late to refer this matter to the Lokayukta, let them hold an enquiry and a detailed enquiry report should come out. ಯಾರ್ಯಾರು ಇದರಲ್ಲಿ ಭಾಗಿಗಳಾಗಿದ್ದಾರೆಂದು ಗೊತ್ತಾಗುತ್ತದೆ. This is only a tip of the iceberg. ಮಾನ್ಯ ಮುಖ್ಯಮಂತ್ರಿಗಳೆ ಆ ಕಾಲದಲ್ಲಿ ಇಂತಹ ಘಟನೆಗಳೆಲ್ಲಾ ನಡೆದಿರುವುದೆಲ್ಲಾ tip of the iceberg ಅಷ್ಟೆ. ಇಂತಹ ಹಲವಾರು ಘಟನೆಗಳು ನಡೆದಿರುವಂಥದ್ದು ಇಲ್ಲಿರುವಂತಹ ಎಲ್ಲರಿಗೂ ತಿಳಿದಿದೆ. ಮಾನ್ಯ ಸಭಾ ನಾಯಕರೆ, ಅದರ ಪರಿಣಾಮ ಏನಾಯಿತು ಎಂದು ನಿಮಗೂ ತಿಳಿದಿದೆ, ನಮಗೂ ತಿಳಿದಿದೆ. ಆದುದರಿಂದ ನಾನು ಹೇಳುತ್ತಿದ್ದೇನೆ, kindly open the whole file now, in the interest of the Government. ಈ ವಿಷಯ ಮುಕ್ತಾಯಗೊಂಡಿದೆ ಎಂದು ಹೇಳಿ, don't give a decent burial. Take the file, hold an enquiry, keep it alive and punish those people who are guilty. ನಿಮ್ಮ ಮೇಲೆ ಜವಾಬ್ದಾರಿಕೆ ಇದೆ. I am not prepared to say

anything as for as this Government is concerned. ಏಕೆಂದರೆ ಕೈಗಾರಿಕಾ ಸಚಿವರೂ ಆಗಿರುವಂತಹ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಜವಾಬ್ದಾರರಾಗುತ್ತಾರಾ? ಆದರೆ ಈ ಉತ್ತರವನ್ನು ಕೊಡುವಾಗ ಮಾತ್ರ ಪದಗಳ ಬಳಕೆ ಏನಿದೆ, it should have been couched in a better language in a different language. ಈ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯದೆ ಹೋದರೆ ಇದಕ್ಕೆ ಕಾರಣಕರ್ತರಾಗಿರುವಂತವರಿಗೆ ಶಿಕ್ಷೆ ಕೊಡದೆ ಹೋದರೆ ನೀವು ಕೂಡ ಆ ಪಾಪದ ಕೂಸಿನ ಕೊಡವನ್ನು ನೀವು ನಿಮ್ಮ ತಲೆಯ ಮೇಲೆ ಹೊತ್ತಿಕೊಂಡು ಅದಕ್ಕೆ ರಕ್ಷಣೆ ಕೊಡುವಂತಹ ಜವಾಬ್ದಾರಿಕೆ ನಿಮ್ಮ ಮೇಲೆ ಬರುತ್ತದೆ ಎಂಬ ವಿಷಯವನ್ನು ತಾವು ಮರೆಯಬೇಡಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಕಡೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಮಾನ್ಯ ನಾರಾಯಣಸ್ವಾಮಿ, ಮಾನ್ಯ ಇ. ಕೃಷ್ಣಪ್ಪ, ಹಾಗೂ ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರು ಈ ವಿಷಯದ ಬಗ್ಗೆ ಮಾತನಾಡುವಾಗ ಈ ಸರ್ಕಾರ ರೈತರ ಪರ ಇದೆಯೇ ಇಲ್ಲವೆ ಎಂಬ ಅನುಮಾನ ಜನರಲ್ಲಿ ಮೂಡುವಂತೆ ಮಾಡಿದೆ ಎಂಬ ಅವರ ಮಾತುಗಳು ದಾಖಲೆಗೆ ಹೋಗಿದೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ಜೂನ್ 17ನೇ ತಾರೀಖಿನಿಂದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಂತ High Level Clearance Committee ಯಲ್ಲಿ ನಾನೂ ಕೂಡ ಭಾಗವಹಿಸಿದ್ದೆ. ನಾನೂ ಕೂಡ ಅದರ ಸದಸ್ಯನಾಗಿದ್ದೇನೆ. ನನಗೆ ಈ ಸಂದರ್ಭದಲ್ಲಿ ಮೋಕ್ಷಗುಡಂ ಡಾ॥ ವಿಶ್ವೇಶ್ವರಯ್ಯನವರು ಹೇಳಿದಂತಹ 'Industrialise or Perish' ಎಂಬ ಒಂದು ಮಾತು ನೆನಪಿಗೆ ಬರುತ್ತಿದೆ. "ಔದ್ಯಮೀಕರಣ ಮಾಡಿ ಇಲ್ಲಾ ನಶಿಸಿ ಹೋಗಿ" ಎಂಬ ಮಾತನ್ನು ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯನವರು ಹೇಳಿದ್ದಾರೆ. ಇವರ ಮಾತಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಈಗಿನ ಸರ್ಕಾರ ಕಟಿಬದ್ಧವಿದೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ High Level Clearance Committee ಯಲ್ಲಿ land allotment ಮಾಡುವಂತಹ ಪ್ರಶ್ನೆ

ಬಂದಾಗ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಂತಹ ನಿಲುವನ್ನು ನೀವು ನಿಜವಾಗಿಯೂ ಅಭಿನಂದಿಸಬೇಕು. ಅವರು ಆ ಸಂದರ್ಭದಲ್ಲಿ ಏನು ನಿಲುವು ತೆಗೆದುಕೊಂಡರು ಎಂದರೆ, ಈ ವಿಷಯ ನಮ್ಮ High Level Clearance Committee ಬರುವುದಕ್ಕಿಂತ ಮೊದಲು ನೀವು Land's Audit Committee ಎಂದು ಇದೆ. ಅದರ ಮುಖಾಂತರ ನೀವು ಯಾವ ಇಂಡಸ್ಟ್ರಿಗೆ ಎಷ್ಟು ಕ್ಷೇತ್ರ ಬೇಕು ಎಂಬುದು ನಿಗದಿ ಪಡಿಸಲಾಗಿದೆಯೆ ಎಂದು ಕೇಳಿದರು. ಆಗ ಅಧಿಕಾರಿಗಳು ನಿರುತ್ತರಾದರು. ಈಗ ಕೈಗಾರಿಕೆಗೋಸ್ಕರ ಕೆಲವರು 200 ಎಕರೆ, ಇನ್ನು ಕೆಲವರು 400 ಎಕರೆ, ಇನ್ನು ಕೆಲವರು 1000 ಎಕರೆ ಭೂಮಿ ಬೇಕೆಂದು ಕೇಳುತ್ತಾರೆ. ಅವರು ಎಷ್ಟು ಭೂಮಿ ಬೇಕು ಎಂದು ಕೇಳುತ್ತಾರೆ ಅಷ್ಟು ಭೂಮಿಯನ್ನು High Level Clearance Committee ಯಲ್ಲಿ ಕ್ಲಿಯರ್ ಮಾಡಿದ ಮೇಲೆ ಅದು Land's Audit Committee ಗೆ ಹೋಗುವುದು ತಪ್ಪು, ಈ ರೀತಿ ಮಾಡಬಾರದು. ಆದುದರಿಂದ ನೀವು Land's Audit Committee ಯಲ್ಲಿ ಯಾವ ಉದ್ಯಮಕ್ಕೆ ಎಷ್ಟು ಕ್ಷೇತ್ರ ಬೇಕು ಎಂಬುದನ್ನು ನಿಗದಿಪಡಿಸಿ, ಆಮೇಲೆ ಅದನ್ನು High Level Clearance Committee ಮುಂದೆ ತನ್ನಿ. ರೈತರ ಭೂಮಿ ಎಂದರೆ ಪುಕ್ಕಟೆ ಅಲ್ಲ. ರೈತರಿಗೆ ಭೂಮಿ ಎಂದರೆ ತಾಯಿಯ ಸಮಾನ ಇದ್ದಂತೆ ಎನ್ನುವಂತಹ ಚರ್ಚೆ ಕೂಡ ನಡೆಯಿತು. ಭೂಮಿಯನ್ನು ಕಳೆದುಕೊಂಡರೆ ರೈತ ಅನಾಥನಾಗುತ್ತಾನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಆದೇಶವನ್ನು ಮಾಡಿದ್ದಾರೆ. ಆದುದರಿಂದ ದಯಮಾಡಿ ಈ ಸರ್ಕಾರ ರೈತರ ಪರ ಇದೆ, ಆದರೆ ಕೈಗಾರಿಕೆಗಳು ಬರಬಾರದು ಎಂಬ ಉದ್ದೇಶವಿಲ್ಲ. ಕೈಗಾರಿಕೆಗಳು ಆಗಬೇಕು. ಆದರೆ industry ಗಳಿಗೆ real estate ಮಾಡುವುದಕ್ಕೆ ಈ ಸರ್ಕಾರ ಅವಕಾಶ ಮಾಡಿಕೊಡುವುದಿಲ್ಲ ಎಂಬ ಸಂದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ಕಳಿಸಿದ್ದಾರೆ. ಆ ಸಭೆಯಲ್ಲಿ ಬಹಳಷ್ಟು ಸುಧೀರ್ಘವಾದಂತಹ ಚರ್ಚೆ ಆದನಂತರ allotment ಮಾಡಲಿಲ್ಲ. ನಂತರ Land's Audit Committee ಯಲ್ಲಿ ಕೈಗಾರಿಕೆಗೆ ಬಂಜರ ಭೂಮಿ, ಖುಷ್ಕಿ ಭೂಮಿ ಅಥವಾ ಒಂದೇ ಬೆಳೆ ಬೆಳೆಯುವಂತಹ ಭೂಮಿಯನ್ನು ಪಡೆಯಬೇಕು ಎನ್ನುವಂತಹ ಆದೇಶವಿದೆ. Land's Audit Committee ಯಲ್ಲಿ

ಏನಿದೆಯೆಂದರೆ agricultural experts ಗಳನ್ನು involve ಮಾಡಿಕೊಳ್ಳಬೇಕು, ಕೃಷಿಇಲಾಖೆಯವರಾಗಲಿ, ಕೃಷಿವಿಶ್ವವಿದ್ಯಾನಿಲಯದ ಪರಿಣಿತರನ್ನು Land's Audit Committee ಯಲ್ಲಿ ನೇಮಕ ಮಾಡಿಕೊಳ್ಳಬೇಕು. ಏಕೆಂದರೆ whether it is a fertile land or barren land? ಯಾವ ಭೂಮಿ ಎಂದು decide ಮಾಡುವುದಕ್ಕೆ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ ಎನ್ನುವಂತಹ ವಿಚಾರವನ್ನು ಸಹ ನಾವು ಚರ್ಚೆ ಮಾಡಿದೆವು. Land's Audit Committee ಯಲ್ಲಿ you should take the assistance of the agricultural experts, they may be from Agricultural Department or Agricultural University ಎನ್ನುವಂತಹ ಮಾತನ್ನು ನಿಮಗೆ ಹೇಳಿದರು. ಅಂದರೆ ನಮ್ಮ ಸರ್ಕಾರದ ಉದ್ದೇಶವೇನೆಂದರೆ, ಕೈಗಾರಿಕೋದ್ಯಮಿಗಳು ನಮ್ಮ ರೈತ ಜಮೀನನ್ನು ಪುಕ್ಕಟೆಯಾಗಿ ತೆಗೆದುಕೊಂಡು ಅದನ್ನು ರಿಯಲ್ ಎಸ್ಟೇಟ್ ಮಾಡುವುದಕ್ಕೆ ಅವಕಾಶ ಕಲ್ಪಿಸುವುದಿಲ್ಲ ಎನ್ನುವಂತಹ ಮಾತನ್ನು ಖಡಾಖಂಡಿತವಾಗಿ ಹೇಳಿ ಆ ದಿವಸ ಒಂದು ಗುಂಟೆ ಜಮೀನನ್ನು ಸಹ ಅಲಾಟ್ ಮಾಡಲಿಲ್ಲ. ಆದುದರಿಂದ ತಮಗೆ ತಿಳಿಸುವುದೇನೆಂದರೆ, ನಮ್ಮ ಸರ್ಕಾರ ಯಾವಾಗಲೂ ರೈತರ ಪರವಾಗಿರುವಂತಹ ಸರ್ಕಾರವೆಂದು ತಿಳಿಸಲಿಚ್ಛಿಸುತ್ತೇನೆ. ಕೈಗಾರಿಕೆಗಳು ಬರಬೇಕು, ಆದರೆ ಎಂಥ ಭೂಮಿಯಲ್ಲಿ ಬರಬೇಕು? ಬಂಜರು ಭೂಮಿಯಲ್ಲಿ ಕೈಗಾರಿಕೆಗಳು ಬರಬೇಕು non-cultivable lands ನಲ್ಲಿ ಬರಬೇಕು. ಅದು ಎಷ್ಟು ಬೇಕಾಗಿದೆ ಎನ್ನುವಂಥದ್ದನ್ನು ಕೂಡ ನಿಗದಿತವಾಗಿ, ನಿರ್ಧಿಷ್ಟವಾಗಿ Land's Audit Committee ಯವರು ನಮ್ಮ ಮುಂದೆ place ಮಾಡಿದಾಗ High Level Clearance Committee ಯಲ್ಲಿ ನಾನು ಅವಕಾಶ ಕಲ್ಪಿಸಿಕೊಡುತ್ತೇನೆಂದು ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿದ್ದಾರೆ. ನನ್ನ ಪಕ್ಕದಲ್ಲಿ ಕುಳಿತುಕೊಂಡಿದ್ದಾರೆ, ಅವರ ಎದುರಿಗೆ ಈ ಮಾತುಗಳನ್ನು ಹೇಳಬಾರದು, ಆದರೂ ಕೂಡ ಅನಿವಾರ್ಯವಾಗಿ ಈ ಚರ್ಚೆ ಆಯಿತು ಎನ್ನುವ ಸಲುವಾಗಿ ಈ ಮಾತನ್ನು ಹೇಳಬಯಸುತ್ತಿದ್ದೇನೆ. ಆ ದೃಷ್ಟಿಯಿಂದ ನಾವು ಹೇಳಿದಂತಹ ವಿಚಾರಗಳಿಗೆ ನಮ್ಮದೇನು ವ್ಯತಿರಿಕ್ತವಿಲ್ಲ. ಇದು ನಮ್ಮ ಪಾಪದ ಕೂಸು ಅಲ್ಲವೆಂದು ನೀವು ಹೇಳಿದ್ದೀರಿ, ನಾವು ಹೇಳಿದ್ದೇವೆ, ಮಾನ್ಯ

ಸದಸ್ಯರು ಸಹ ನಮ್ಮದು ಎಂದು ಹೇಳಿಲ್ಲ. ಆದರೆ ರೈತರ ಪರ ನಮ್ಮ ಚಿಂತನೆ ಇದೆ ಎನ್ನುವ ಬಗ್ಗೆ ಹೇಳಿದೆ. ಮಾನ್ಯ ಸಭಾಪತಿಯವರೇ, ಇವತ್ತೇನು 25 ಎಕರೆ $5^{1/2}$ ಗುಂಟೆ lease cum sale deed ಮಾಡಿದರು. ಆ lease cum sale deed ಮಾಡಿ ಮುಂದೆ absolute sale deed ಮಾಡಿಕೊಟ್ಟಿದ್ದಾರೆ. ಹಿಂದಿನ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ದಿನಾಂಕ 4/11/2006ರಂದು ಒಂದು ಆದೇಶ ಮಾಡಿದ್ದಾರೆ. ಆ ಆದೇಶದಲ್ಲಿ ಏನು ಹೇಳಿದ್ದಾರೆ ಎಂದರೆ; "Hon'ble Minister for Medium & Large Scale Industry, Government of Karnataka, while considering the judgment of the Hon'ble High Court of Karnataka and the Hon'ble Supreme Court of India directed both to execute a sale deed in favor of BPL Ltd., stating order of the Supreme Court is final and binding….." ಎಂದು ಹೇಳಿದ್ದಾರೆ. The Hon'ble Minister for Medium & Large Scale Industry has odered the KIADB to execute the sale deed. Absolute sale deed ಮಾಡುವುದಕ್ಕೆ ಅವರಿಗೆ ಡೈರೆಕ್ಷನ್ ಕೊಟ್ಟಿದ್ದಾರೆ, ನಂತರ ದಿನಾಂಕ:28/11/2006ರಂದು M/s. BPL Ltd., ಪರವಾಗಿ ಆಗಿನ ಮಂಡಳಿಯವರು execute ಮಾಡಿಕೊಟ್ಟಿದ್ದಾರೆ. Absolute sale deed ಮಾಡಬೇಕಾದರೆ ಏನು ಕಂಡೀಷನ್ ಇದೆ ಎಂದರೆ ಆದನಂತರ ಹತ್ತು ವರ್ಷಗಳ ಕಾಲ ಅವಧಿ ಇದೆ. ಅದರೊಳಗೆ absolute sale deed ಮಾಡುವುದಕ್ಕೆ ಬರುವುದಿಲ್ಲ. ಆದರೆ ಅದರ ಜೊತೆಗೆ ಇನ್ನೊಂದು ಕಂಡೀಷನ್ ಇದೆ. Minimum 51% of the land allotted must be utilized. ಈಗ ನೂರು ಎಕರೆ ಜಾಗವನ್ನು ಮಂಜೂರು ಮಾಡಿದರೆ ಅದರಲ್ಲಿ 50 ಎಕರೆಯಲ್ಲಿ ಇಂಡಸ್ಟ್ರಿ ಬಂದಿರಬೇಕು. ಆದರೆ ಇಲ್ಲಿ ಇಂಡಸ್ಟ್ರಿ ಬಂದಿದ್ದು ಕೇವಲ 5.1 ಎಕರೆಗಳು ಅಂದರೆ ಕೇವಲ ಒಂದೆರಡು ಪರ್ಸೆಂಟ್ ಮಾತ್ರ utilization ಆಗಿದೆ.

**ಶ್ರೀ ಎಂ.ಸಿ. ನಾಣಯ್ಯ:-** ಈ ವಿಷಯವೆಲ್ಲಾ ನಮಗೆ ತಿಳಿದಿರುವುದರಿಂದಲೇ ನಾವು ನಿಮ್ಮನ್ನು ಕೇಳುತ್ತಿರುವುದು ಇದರಲ್ಲಿ ಯಾರು ಕಳ್ಳತನ ಮಾಡಿದ್ದಾರೆ, ಹಣ ಹೊಡೆದಿದ್ದಾರೆ ಎಂದು ನಾವು ಕೇಳುತ್ತಿರುವುದು.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಆ ಬಿ.ಪಿ.ಎಲ್. ಕಂಪನಿಯ ಪರಿಸ್ಥಿತಿ ಹೇಳಿ ಎಂದರೆ ಹೇಳುತ್ತೇನೆ.

**ಸಭಾಪತಿಯವರು:-** ಆ ವಿಷಯವೆಲ್ಲಾ ಈಗ ಬೇಡ.

**ಶ್ರೀ ಎಸ್.ಆರ್. ಪಾಟೀಲ್:-** ಅವರು absolute sale deed ಮಾಡಿಲ್ಲ, and the Government will have no power to exercise. ಒಮ್ಮೆ ನಾವು ಪೂರ್ತಿಯಾಗಿ ಕ್ರಯಪತ್ರ ಮಾಡಿಕೊಟ್ಟ ನಂತರ ಸರ್ಕಾರ ತನ್ನ ಅಧಿಕಾರವನ್ನು ಕಳೆದುಕೊಂಡುಬಿಡುತ್ತದೆ. ಆಗ ಅವರು ಏನು ಮಾಡಿದ್ದಾರೆಂದರೆ, Absolute sale deed ಮಾಡಿಕೊಂಡ ತಕ್ಷಣವೆ Jindal Aluminium ರವರಿಗೆ 25 ಎಕರೆ $5^{1/2}$ ಗುಂಟೆ ಮಾರಾಟ ಮಾಡಿದ್ದಾರೆ.

4.30 ಗಂಟೆ

ಅದೇ ರೀತಿ British Oxygen Company ಗೆ 3.8 ಗುಂಟೆ ಮಾರಾಟ ಮಾಡಿದ್ದಾರೆ. ಮಾರುತಿ ಸುಜುಕಿ ಕಂಪನಿಗೆ 33 ಎಕರೆ 14 ಗುಂಟೆ ಮಾರಾಟ ಮಾಡಿದ್ದಾರೆ. ಒಟ್ಟು 62 ಎಕರೆ 16 ಗುಂಟೆ ಜಮೀನನ್ನು ಮೂರು ಕಂಪನಿಗಳಿಗೆ ಮಾರಾಟ ಮಾಡಿದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:-** ಜಮೀನು ತೆಗೆದುಕೊಂಡು ಮತ್ತೊಬ್ಬರಿಗೆ ಸಬ್‌ಡೀಲ್ ಮಾಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಜಮೀನು ಮಾರಿಬಿಟ್ಟಿದ್ದಾರೆ. ನಂತರ 87 ಎಕರೆ 37 ಗುಂಟೆ ಜಮೀನು ಬಿಪಿಎಲ್ ಕಂಪನಿಯಲ್ಲಿ ಉಳಿದಿದ್ದು, ಇವರಿಗೆ ನೀಡಿದ್ದ ಸಾಲ ವಸೂಲಾತಿಯಾಗದಿದ್ದರಿಂದ ನ್ಯಾಯಾಲಯಕ್ಕೆ ಹೋಗಿ, ಅಲ್ಲಿ Assessment Recovery Tribunal ಎಂದು ಇದ್ದು, ಈ ಜಮೀನನ್ನು ಅಲ್ಲಿ auction ಮಾಡಿದಾಗ ಮಾರುತಿ ಸುಜುಕಿ ಕಂಪನಿಯವರು ಖರೀದಿ ಮಾಡಿದ್ದಾರೆ. ಈಗ ಒಂದು ಗುಂಟೆ ಜಮೀನು ಕೂಡ ಬಿಪಿಎಲ್ ಕಂಪನಿಯಲ್ಲಿ ಉಳಿದಿಲ್ಲ.

**ಶ್ರೀ ಇ. ಕೃಷ್ಣಪ್ಪ:–** ಬೇರೆ ಕಂಪನಿಯಲ್ಲಿ ಸಾಲ ಉಳಿದಿದ್ದರಿಂದ attachment ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಿದೆ, ಅವರ ಆಸ್ತಿಯನ್ನು attach ಮಾಡಿ ತೆಗೆದುಕೊಂಡಿದ್ದಾರೆ.

**Sri S.R. PATIL:-** Assessment Recovery Tribunal ನವರು attachment ಮಾಡಿ ಸಾಲ ತೀರಿಸಲು ಮಾರಾಟ ಮಾಡಬೇಕಲ್ಲವೇ? 87 ಎಕರೆ 37 ಗುಂಟೆ ಜಮೀನು ಮಾರುತಿ ಸುಜುಕಿ ಕಂಪನಿಯವರು ಖರೀದಿ ಮಾಡಿದ್ದಾರೆ. ಈಗ ಒಂದು ಇಂಚು ಭೂಮಿ ಉಳಿದಿಲ್ಲ. ಇದು ವಸ್ತುಸ್ಥಿತಿ. ನಾನು ಸರ್ಕಾರ ಮತ್ತು ವ್ಯಕ್ತಿ ಬಗ್ಗೆ ಮಾತನಾಡುವುದಿಲ್ಲ. ಅವರು ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳ ನಿರ್ಣವಾಗಿದ್ದು, it is binding on us ಎಂದು ಹೇಳಿದ್ದಾರೆ. ಇದು ಯಾವುದರ ಬಗ್ಗೆ ಆದೇಶವಾಗಿದೆ? ಶ್ರೀ ಎಸ್.ಪಿ. ಗುರುರಾಜ್ ಮತ್ತು ಇತರರು Public Interest Litigation ಹಾಕಿದಾಗ ಉಚ್ಛ ನ್ಯಾಯಾಲಯ allotment ರದ್ದು ಮಾಡಿದ್ದಾರೆ. ಮುಂದೆ ಸರ್ವೋಚ್ಛ ನ್ಯಾಯಾಲಯಕ್ಕೆ KIADB ನವರು ಒಬ್ಬರೇ ಹೋಗಿರದೇ ಕಂಪನಿಯವರು ಜೊತೆಯಾಗಿ ಹೋಗಿದ್ದಾರೆ. ಇದು ಉತ್ತರದಲ್ಲಿ ಇದೆ. ವಸ್ತುಸ್ಥಿತಿ ಇರುವುದನ್ನು ನಾನು ಹೇಳುತ್ತಿದ್ದೇನೆ.

**Sri M.C. NANAIH:-** Living together ನಂತೆ ಹೋಗಿದ್ದಾರೆ.

**Sri S.R. PATIL:-** Living together, not married. ಇದೊಂದು ಹೊಸ ಪರಿಕಲ್ಪನೆ. 149 ಎಕರೆ 5.5 ಗುಂಟೆ PGL (Public Interest Litigation) ಮುಖಾಂತರ ಚಾಲೆಂಜ್ ಮಾಡಿದಾಗ ಸರ್ವೋಚ್ಛ ನ್ಯಾಯಾಲಯವು ಕೈಗಾರಿಕೆ ಬರಬೇಕು ಮತ್ತು ಉದ್ಯೋಗವಕಾಶಗಳು ಕಲ್ಪನೆಯಾಗಬೇಕೆಂಬ ಉದ್ದೇಶದಿಂದ ಉಚ್ಛ ನ್ಯಾಯಾಲಯದ ಆದೇಶವನ್ನು ರದ್ದು ಮಾಡಿ, KIADB allotment ಮಾಡಿರುವ lease cum allotment ಅನ್ನು ಎತ್ತಿ ಹಿಡಿದಿದೆ. ಅದನ್ನು ಸರ್ವೋಚ್ಛ ನ್ಯಾಯಾಲಯ absolute sale deed ಮಾಡುವುದಕ್ಕೆ ಕೊಟ್ಟಿದ್ದಾರೆ ಎನ್ನುವ ಭಾವನೆಯಿಂದ ಬರೆದಿದ್ದಾರೆ. ಆಗಿನ

ಮಂತ್ರಿಗಳು ಮಾಡಿದ್ದನ್ನು KIADB execute ಮಾಡಬಾರದಾಗಿತ್ತು. Officers would not have obeyed the orders of then Minister. It was an illegal order. If any Minister says to execute any illegal order, bureaucrats are not supposed to obey it. If at all Cabinet takes the decision, it is binding on all the bureaucrats of the State. ಮಂತ್ರಿಗಳು ಕಾನೂನು ಬಾಹಿರವಾಗಿ ವಿಧಾನ ಸೌಧವನ್ನು ಮಾರಬೇಕೆಂದು ಆದೇಶ ಮಾಡಿದರೆ ಮಾರಾಟ ಮಾಡುವುದಕ್ಕೆ ಆಗುತ್ತದೆಯೇ? ಮೊದಲು KIADB ಯವರು, ಪ್ರಧಾನ ಕಾರ್ಯದರ್ಶಿಯವರು clear cut ಆಗಿ note ಬರೆದಿದ್ದಾರೆ, absolute sale deed ಮಾಡುವುದಕ್ಕೆ ಬರುವುದಿಲ್ಲ, ಇದು ಕಾನೂನು ಬಾಹಿರ, ಶೇಕಡ 51ರಷ್ಟು utilization ಆಗಿಲ್ಲ.

**ಶ್ರೀ ಗೋ. ಮಧುಸೂದನ್:-** ಜಕ್ಕೂರು Aerodrome ಮಾರಲು ಅಧಿಕಾರಿಗಳು ಪ್ರಯತ್ನ ಪಟ್ಟರೆ ಹೇಗೆ?

**Sri S.R. PATIL:-** Our Government is very crystal clear.

**ಶ್ರೀ ಗೋ. ಮಧುಸೂದನ್:-** ಅಂತಹವರನ್ನು ಕ್ಯಾಬಿನೆಟ್‌ನಲ್ಲಿ ನಿರ್ದೋಷಿಗಳು ಎಂದು ಹೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಅವರು ಆ ಚಿಂತನೆಯನ್ನು ಮಾಡಬೇಕು. Am I defending? ನಾನು defend ಮಾಡುವುದಾಗಿದ್ದರೆ I would not have revealed all these facts before this August House.

**ಶ್ರೀ ಗೋ. ಮಧುಸೂದನ್:-** ಅವರು defend ಮಾಡುತ್ತಿಲ್ಲ, ಆದರೆ ಅಂತಹದ್ದನ್ನು defend ಮಾಡಿಕೊಂಡಿದ್ದಾರೆ ಎನ್ನುವ ಉದಾಹರಣೆಯನ್ನು ನೆನಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸದಸ್ಯರು ಆದಷ್ಟು ಸುಮ್ಮನೆ ಇದ್ದರೆ ಬಹಳ ಒಳ್ಳೆಯದು.

**ಶ್ರೀ ಗೋ. ಮಧುಸೂದನ್:-** ನಾನು ಸಹಾಯ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಅವರು ಸಹಾಯ ಮಾಡುತ್ತಿದ್ದಾರೋ, ಏನೋ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತು, ಅವರಿಗೆ ಗೊತ್ತು. ಸರ್ವೋಚ್ಚ ನ್ಯಾಯಾಲಯದ ಕಟ್ಟುನಿಟ್ಟಿನ ಆದೇಶವಾಗಿದೆ, it is binding on Governments, so you execute the sale deed ಎಂದಾಗ ಆಗಿನ ಅಧಿಕಾರಿ execute ಮಾಡಿದ್ದಾರಲ್ಲಾ, that itself is illegal. ಶೇಕಡ 51ರಷ್ಟು utilization ಆಗದೇ ಬಿಪಿಎಲ್ ಕಂಪನಿಗೆ absolute sale deed ಮಾಡಿ ಎಂದು ಸಚಿವರ ಆದೇಶ, that is illegal and obeying the order of the Minister for executing the absolute sale deed by a bureaucrat that is also a wrong and illegal thing. That much I can tell, this is the facts of the case and I have revealed everything. The Hon'ble Chief Minister is sitting by the side of me.

**Sri M.C. NANAIH:-** It is absolutely naked transparent attitude.

**Sri S.R. PATIL:-** No, the Government is transparent. ಈ ರಾಜ್ಯದ ಜನರಿಗೆ ಭ್ರಷ್ಟಾಚಾರ ಮುಕ್ತ ಹಾಗೂ ಪಾರದರ್ಶಕವಾದ ಆಡಳಿತ ನೀಡುತ್ತೇವೆ ಎಂದು ಇಲ್ಲಿ ಬಂದು ಕುಳಿತಿದ್ದೇವೆ. ಅದಕ್ಕೆ we are going to adhere with it. ನಮ್ಮದು ನುಡಿದಂತೆ ನಡೆಯುವ ಸರ್ಕಾರವಾಗಿದ್ದು, ಆ ಬದ್ಧತೆ, ಪ್ರಾಮಾಣಿಕತೆ ಮತ್ತು ನಿಷ್ಠೆ ಇದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಆ ಬಗ್ಗೆ ಬೆಳಕು ಚೆಲ್ಲುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಆ ದೃಷ್ಟಿಯಿಂದ ಇದು ವಸ್ತುಸ್ಥಿತಿಯಾಗಿದ್ದು, ಆಗಿನ ಮಂತ್ರಿಗಳು ಕಾನೂನು ಬಾಹಿರವಾಗಿ ಮಾಡಿದ್ದು, ಆ ಆದೇಶವನ್ನು ಪಾಲನೆ ಮಾಡಿದ KIADB ಅಧಿಕಾರಿಗಳು ಕಾನೂನು ಬಾಹಿರವಾಗಿ ಕೆಲಸ ಮಾಡಿದ್ದಾರೆ. I will leave this matter to the Hon'ble Chief Minister.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿರುವುದು ಸರಿಯಿದೆ. 149 ಎಕರೆ 5.5 ಗುಂಟೆ ಜಮೀನನ್ನು KIADB ನಿಂದ ಬಿಪಿಎಲ್‌ನವರು ಪಡೆದುಕೊಂಡಿದ್ದು, ನಂತರ ಕಾರ್ಖಾನೆ ಮಾಡಬೇಕಾಗಿತ್ತು. ರೈತರಿಂದ ಯಾವ ಉದ್ದೇಶಕ್ಕೆ acquire ಮಾಡಿಕೊಂಡಿದ್ದರೋ, ಆ ಉದ್ದೇಶದಂತೆ ಜಮೀನು ಪಡೆದುಕೊಂಡಿರುವವರು ಬಳಸಬೇಕಾಗಿತ್ತು. ಆದರೆ ಅವರು ಉಪಯೋಗಿಸಲಿಲ್ಲ. ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗೆ ಹೋಗಿರುವುದು ನಿಜ. ನಂತರ ಅಲ್ಲಿಂದ ಬಂದ ಮೇಲೆ ಕಾರ್ಖಾನೆ ಮಾಡದೇ ಸ್ವಲ್ಪ ಜಾಗದಲ್ಲಿ ಶೆಡ್ ಹಾಕಿಕೊಂಡು ನಂತರ KIADB ನವರು ತಿರಸ್ಕಾರ ಮಾಡಿದ್ದಾರೆ. ಆದರೆ 2006ರಲ್ಲಿ ಮಂತ್ರಿಗಳು ಬಿಪಿಎಲ್‌ನವರು ದೊಡ್ಡ ಸೇವೆ ಮಾಡಿರುವುದರಿಂದ ಕ್ರಯ ಮಾಡಬಹುದೆಂದು ಆದೇಶ ಮಾಡಿಬಿಟ್ಟಿದ್ದಾರೆ. ಅವರು ಮಾನವೀಯತೆ ದೃಷ್ಟಿಯಿಂದ ಮಾಡಿಬಿಟ್ಟಿದ್ದಾರೆ. ಇದು 2006ರಲ್ಲಿ ಆಗಿದ್ದು, ಆಗ ಸಮ್ಮಿಶ್ರ ಸರ್ಕಾರ ಇತ್ತು. ಆ ಸಚಿವರ ಹೆಸರು ಎಲ್ಲರಿಗೂ ಗೊತ್ತಿದ್ದು, ನಾನು ಹೇಳಬೇಕಾದ ಅಗತ್ಯ ಇದೆ. ಮಾನ್ಯ ಮಧುಸೂದನ್‌ರವರಿಗೂ ಗೊತ್ತಿದೆ. ಇದು ಎಲ್ಲರಿಗೂ ಗೊತ್ತಿರುವುದಾಗಿದೆ.

**ಶ್ರೀ ಗೋ. ಮಧುಸೂದನ್:-** ನಾನು ಆ ಸಮಯದಲ್ಲಿ ಸದನದ ಸದಸ್ಯನಾಗಿರಲಿಲ್ಲ.

**ಶ್ರೀ ಸಿದ್ದರಾಮಯ್ಯ:-** ಆಯಿತು ಬಿಡಿ, you are an innocent.. You are an ignorant. Innocent ಬೇರೆ, Ignorant ಬೇರೆ.

**ಶ್ರೀ ಗೋ. ಮಧುಸೂದನ್:-** ನಾನು ಎರಡೂ ಆಗಿದ್ದೇನೆ.

**Sri SIDDARAMAIAH:-** You are not both. 2006ರಲ್ಲಿ ಇದನ್ನು ಮಾಡಿದ್ದು, ಕಾನೂನು ರೀತಿಯಾಗಿ ಮಾಡಿಲ್ಲದೇ ಇರುವುದು ತಪ್ಪು. ಇದನ್ನು ಮಾಡಿ 5 ವರ್ಷಗಳು ಕಳೆದಿವೆ. ಅವರು ಯಾರ್ಯಾರೋ ಬೇರೆ ಬೇರೆ ಕಂಪನಿಗಳಿಗೆಲ್ಲಾ ಕೊಟ್ಟುಬಿಟ್ಟಿದ್ದಾರೆ. ಉಳಿದಿರುವುದು ಜಪ್ತಿಯಾಗಿರುವುದು ಅಟ್ಯಾಚ್ ಆಗಿಬಿಟ್ಟಿದೆ. ಈಗ ಬಿ.ಪಿ.ಎಲ್.ರವರ ಹತ್ತಿರ ಏನು ಇಲ್ಲ. ಬೇರೆ

ಬೇರೆ ಕಂಪನಿಯವರು, ಜಿಂದಾಲ್‌ರವರು ಫ್ಯಾಕ್ಟರಿ ಕಟ್ಟಿಕೊಂಡಿದ್ದಾರೆ. ಮಾರುತಿ ಸುಜುಕಿಯವರು ಪಾರ್ಕಿಂಗ್ ಮಾಡಿಕೊಂಡಿದ್ದಾರಂತೆ.

**ಶ್ರೀ ಇ. ಕೃಷ್ಣಪ್ಪ:–** ಖಾಲಿ ಇರುವುದನ್ನು ಪಾರ್ಕಿಂಗ್ ಮಾಡಿಕೊಂಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಕೃಷ್ಣಪ್ಪನವರೇ, ನಾವೇನು ಇದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ನಮಗೂ ಇದಕ್ಕೂ ಸಂಬಂಧವೇ ಇಲ್ಲ. ಇದು ಹಿಂದೆ ಮಾಡಿದಂತಹ ಪಾಪದ ಕೆಲಸ. ಮಾನ್ಯ ಬಸವರಾಜ ಹೊರಟ್ಟಿಯವರೇ, ನೀವು ಆಗ ಮಂತ್ರಿಗಳಾಗಿದ್ದೀರೋ ಏನೋ ನನಗೆ ಗೊತ್ತಿಲ್ಲ. ನೀವು ಮಂತ್ರಿಯಾಗಿದ್ದೀರಿ ಎಂದು ಕಾಣಿಸುತ್ತದೆ. ಇದು ಸಮ್ಮಿಶ್ರ ಸರ್ಕಾರದಲ್ಲಿ ನಡೆದಿರುವಂಥದ್ದು. ನಾನು ಮಾನ್ಯ ನಾಣಯ್ಯನವರು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. ಇದನ್ನು ಮಾಡಿರುವುದು ನೂರಕ್ಕೆ ನೂರರಷ್ಟು ತಪ್ಪು. ಈ ತಪ್ಪಿಗೂ ನಮಗೂ ಯಾವುದೇ ಸಂಬಂಧ ಇಲ್ಲ. ನಾವು ನಮ್ಮ statementನಲ್ಲಿ what has happened ಎನ್ನುವುದಷ್ಟೆ narrate ಮಾಡಿದ್ದೇವೆ. It is only a statement narrating the facts. ಅಷ್ಟು ಹೇಳಿದ್ದೇವೆ ಅಷ್ಟೆ. ಇದಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ. ಇದು 2006ರಲ್ಲಿ ಆಗಿರುವುದು. ಈಗಾಗಲೇ ನಾವು 2013 ರಲ್ಲಿ ಇದ್ದೇವೆ. 6–7 ವರ್ಷ ಆಗಿಬಿಟ್ಟಿದೆ. ನಾನು ಈ ಹಂತದಲ್ಲಿ ಇದನ್ನು ಯಾವ ರೀತಿ ತನಿಖೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಆ ಕಡತ ತರಿಸಿ ಕಾನೂನು ವಿಚಾರಣೆ ಮಾಡಿ, ಕಾನೂನು ರೀತಿಯಲ್ಲಿ ಬರುತ್ತದೆಯೇ ಎಂಬುದನ್ನು ನೋಡುತ್ತೇನೆ. ಮಾನ್ಯ ನಾಣಯ್ಯನವರೇ, ನಮಗೇನು ಯಾರನ್ನೂ ರಕ್ಷಣೆ ಮಾಡಬೇಕಾದ ಅಗತ್ಯ ಇಲ್ಲ. ಯಾರನ್ನೂ ಡಿಫೆಂಡ್ ಮಾಡಿಕೊಳ್ಳಬೇಕಾದ ಅಗತ್ಯವೂ ನಮಗೆ ಇಲ್ಲ. ಕಾನೂನಿನಲ್ಲಿ ಅವಕಾಶ ಇದ್ದು ತನಿಖೆ ಮಾಡುವುದಕ್ಕೆ ಅವಕಾಶ ಇದ್ದರೆ ಮಾಡುತ್ತೇವೆ. ಈ ರೀತಿ ಮಾಡಬಾರದಾಗಿತ್ತು ಎಂದು ನಮಗೂ ಅನಿಸುತ್ತದೆ. ಏಕೆಂದರೆ, 149 ಎಕರೆ ಎಂದರೆ ಈಗ ಅಲ್ಲಿ ಹೆಚ್ಚು ಬೆಲೆ ಬಾಳತಕ್ಕಂಥ ಜಮೀನು ಆಗಿದೆ. ಅಂತಹ ಜಮೀನನ್ನು ರೈತರಿಂದ ಕಿತ್ತುಕೊಂಡು ಯಾರೋ ಹಣ ಸಂಪಾದನೆ ಮಾಡಿಕೊಳ್ಳುವುದಕೋಸ್ಕರ

ಮಾಡಿಕೊಡುವುದು ಇದೆಯಲ್ಲಾ, this is totally wrong, totally illegal. It should not have been happened. ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಸಮ್ಮಿಶ್ರ ಸರ್ಕಾರ ಇರುವಾಗ ಮಾಡಿಬಿಟ್ಟಿರುವಂಥದ್ದು. ಇದು ನಿಮಗೂ ಗೊತ್ತಿಲ್ಲ. ಇಂಥದ್ದೂ ಬೇಕಾದಷ್ಟು ಆಗಿರಬಹುದು, ನನಗೆ ಗೊತ್ತಿಲ್ಲ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** 2009 ರಲ್ಲಿ sale deed ಆಗಿದೆ.

**ಶ್ರೀ ಸಿದ್ದರಾಮಯ್ಯ:–** 2006 ರಲ್ಲಿಯೇ ಆಗಿಬಿಟ್ಟಿದೆ.

**ಶ್ರೀ ಇ. ಕೃಷ್ಣಪ್ಪ:–** 2006 ರಲ್ಲಿ 149 ಎಕರೆ ಐದುವರೆ ಗುಂಟೆ ಆಗಿದೆ. ಮತ್ತೆ change of land ಮಾಡುತ್ತೇವೆ ಎಂದು KIADB (Karnataka Industrial Areas Development Board) ಯವರು ಎರಡು ಸರ್ವೆ ನಂಬರ್ 69 ಮತ್ತು 71 ಅನ್ನು 5 ಎಕರೆ 7 ಗುಂಟೆ, 5 ಎಕರೆ 7 ಗುಂಟೆಯನ್ನು 2008 ರಲ್ಲಿ ಮಾಡಿಕೊಂಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಕೃಷ್ಣಪ್ಪನವರೇ, ಅವರೇನಾದರೂ ಮಾಡಿಕೊಂಡಿರಲಿ. ಮಾನ್ಯ ನಾಣಯ್ಯನವರೇ, ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಆ ಕಡತವನ್ನೆಲ್ಲಾ ನೋಡಿ ಕಾನೂನಿನ ಅಭಿಪ್ರಾಯವನ್ನು ತೆಗೆದುಕೊಂಡು ಲೋಕಾಯುಕ್ತಕ್ಕೆ ಕೊಡುವುದಕ್ಕಾಗುತ್ತದೆಯೇ ಎಂಬುದನ್ನು ನೋಡೋಣ. ಅದನ್ನು explore ಮಾಡಿಸೋಣ.

**ಶ್ರೀ ಎಂ.ಸಿ. ನಾಣಯ್ಯ:–** ಲೋಕಾಯುಕ್ತಕ್ಕೆ ಕೊಡುವುದಕ್ಕೆ ನಾನು ಹೇಳುತ್ತೇನೆ, absolutely there is no legal bar.

**ಶ್ರೀ ಸಿದ್ದರಾಮಯ್ಯ:–** ನಾನು ಕಾನೂನು ಪ್ರಕಾರವಾಗಿ ನೋಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:–** ನೋಡಿಬಿಟ್ಟು... ದಯವಿಟ್ಟು I think let the message go.

**ಶ್ರೀ ಸಿದ್ದರಾಮಯ್ಯ:–** ಈ ರೀತಿ ಆಗಬಾರದು ಎಂದು ಮೆಸೇಜ್ ಹೋಗಬೇಕು. ಇಂಥದ್ದೆಲ್ಲಾ ಆಗಬಾರದು ಎನ್ನುವುದೇ ನಮ್ಮ ಉದ್ದೇಶವಾಗಿದೆ. Because we want to give a clean and transparent administration and

clean Government. We do not want to defend or support or protect anybody. ಇದರಲ್ಲಿ ಯಾವುದೇ ಮುಲಾಜು ಇಲ್ಲ. ಯಾರಿಗೂ ರಕ್ಷಣೆ ಕೊಡುವಂತಹ ಪ್ರಶ್ನೆಯೇ ಇಲ್ಲ. ಅವರು ಯಾರಾದರೂ ಇರಲಿ. ಉಪ್ಪು ತಿಂದವರು ನೀರು ಕುಡಿಯಬೇಕು.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ನೀವು ನನ್ನನ್ನು ಕೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ನಾನು ನಿಮ್ಮನ್ನು ಕೇಳಲಿಲ್ಲ. ನಾನು ನಿಮ್ಮ ಗಮನಕ್ಕೆ ತಂದಿದ್ದೇನೆ, ಅಷ್ಟೆ. ನಿಮಗೂ ಅದಕ್ಕೂ ಏನು ಸಂಬಂಧ?

**ಶ್ರೀ ಡಿ.ವಿ. ಸದಾನಂದಗೌಡ:–** ನನಗೆ ಸಂಬಂಧ ಇಲ್ಲ. ಆದರೂ ಕೂಡ ಮೇಲ್ನೋಟಕ್ಕೆ ಒಂದಷ್ಟು ಇದರಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆದಿದೆ ಎನ್ನುವಂಥದ್ದು ಇವತ್ತಿನ ವಾದದಲ್ಲಿ, ಮತ್ತೊಂದರಲ್ಲಿ ನಮಗೆ ಗೊತ್ತಾಗಿದೆ. ಆದಕಾರಣ ನೀವು ಹೇಳುವಂಥದ್ದು ಸರಿಯಾಗಿದೆ. ಕಾನೂನು ಚೌಕಟ್ಟಿನಲ್ಲಿ ಏನು ಎಂಬುದನ್ನು ನೋಡಿ ಅದರಲ್ಲಿ ಕ್ರಮ ಜರುಗಿಸಬೇಕಾದ ಅವಶ್ಯಕತೆ ಇದೆ ಮತ್ತು ತನಿಖೆ ಮಾಡುವಂಥ ಅವಶ್ಯಕತೆ ಇದೆ. ಇವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮ ತೆಗೆದುಕೊಳ್ಳಿ. ಏಕೆಂದರೆ, ಯಾವುದೇ ಭ್ರಷ್ಟರನ್ನು ಮತ್ತೊಬ್ಬರನ್ನು ಯಾರ ಜೊತೆಯಲ್ಲಿ ಇದ್ದರೂ ಕೂಡ ರಕ್ಷಣೆ ಮಾಡುವುದಕ್ಕೆ ನಮ್ಮ ಸಹಕಾರಗಳಿಲ್ಲ. ಇವತ್ತು ಕದ್ದು ಮುಚ್ಚಿ ನೂರಾರು ಕೆಲಸಗಳು ನಡೆದಿರಬಹುದು. ಅದು ಒಂದೊಂದಾಗಿ ಹೊರಗೆ ಬರುವಂತಹ ಸಂದರ್ಭದಲ್ಲಿ ಎಲ್ಲವನ್ನು defend ಮಾಡಿಕೊಂಡು ಕುಳಿತುಕೊಳ್ಳುವಂತಹ ಜಾಯಮಾನ ನಮ್ಮಲ್ಲಿ ಇಲ್ಲ. ನಾವೂ ಕೂಡ ಭ್ರಷ್ಟಾಚಾರ ರಹಿತವಾದಂತಹ ಆಡಳಿತ ಬರಬೇಕು ಎನ್ನುವುದು ನಮ್ಮ ಅಪೇಕ್ಷೆ ಇದೆ. ಆದಕಾರಣ ಇದರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಏನು ಮಾಡಬಹುದು ಎಂಬುದನ್ನು ನೋಡಬೇಕಾಗುತ್ತದೆ. 2006 ರಲ್ಲಿ ಆಗಿದ್ದರೂ ಕೂಡ ಅದರ ಮೇಲೆ ಕಾರ್ಯಚರಣೆ ಮಾಡಬಾರದು ಎಂದೇನೂ ಇಲ್ಲ. ಇವತ್ತು ಮಾನ್ಯ ನಾರಾಯಣಸ್ವಾಮಿಯವರು ಇದನ್ನು ಪ್ರಸ್ತಾಪ ಮಾಡಿರುವುದು ಏಕೆಂದರೆ,

‘ನಮಗೆ ಅನ್ಯಾಯ ಆಗಿದೆ ಸರ್’ ಎಂದು ನೂರು ಜನ ರೈತರ ದೊಡ್ಡ ಗುಂಪು ನನ್ನ ಹತ್ತಿರ ಬಂದಿತ್ತು. ನಮ್ಮಿಂದ ಈ ರೀತಿ ತೆಗೆದುಕೊಂಡು ರಿಯಲ್ ಎಸ್ಟೇಟ್ ಮಾಡಿ ಹೀಗೀಗೆ ಮಾಡಿದ್ದಾರೆ ಎಂದು ಆ ರೈತರು ಹೇಳಿದರು. ಇದರ ಸತ್ಯಾಸತ್ಯೆತೆ ಬಗ್ಗೆ ನಾನೇನು in depth ಹೋಗಲಿಲ್ಲ. ಆದಕಾರಣ ಆ ರೈತರಿಗೆ ಅನ್ಯಾಯ ಆಗಬಾರದು, ಈ ಸರ್ಕಾರದಲ್ಲಿ ಅವರಿಗೆ ನ್ಯಾಯ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ನಾರಾಯಣಸ್ವಾಮಿಯವರು ಸದನದಲ್ಲಿ ಪ್ರಸ್ತಾಪ ಮಾಡುವ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಆದರೆ, ಇದರಲ್ಲಿ ದೊಡ್ಡ ದೊಡ್ಡ ಹೆಗ್ಗಣಗಳಿವೆ, ಅದು ಬಹಳ ದೂರಕ್ಕೆ ಸುರಂಗಗಳೆಲ್ಲಾ ಕೊರೆದಿದೆ ಎಂಬುದು ನಮಗೇನು ಗೊತ್ತಿರಲಿಲ್ಲ. ಈಗ ಅದು ಗೊತ್ತಾಗಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನೂ ಕೂಡ ಹೇಳುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ಬಹಳ ಸಂತೋಷ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಕ್ರಮ ತೆಗೆದುಕೊಳ್ಳುವುದಷ್ಟೇ ಅಲ್ಲ, ರೈತರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವುದು ನಮ್ಮ ಉದ್ದೇಶ.

**ಸಭಾಪತಿಯವರು:–** ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಕಾನೂನಿನ ಚೌಕಟ್ಟಿನೊಳಗೆ ನಾವು ಮಾಡಬೇಕಾಗುತ್ತದೆ. ಏಕೆಂದರೆ, ಲೋಕಾಯುಕ್ತ ಆಕ್ಟ್‌ನಲ್ಲಿ ಯಾವುದೇ ದೂರು ಐದು ವರ್ಷ ಹಳೆಯದಾಗಿಬಿಟ್ಟಿದ್ದರೆ ಆ ದೂರನ್ನು ತನಿಖೆ ಮಾಡುವುದಕ್ಕಾಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಬೇಕಲ್ಲವೆ? ಆ ಕಾರಣದಿಂದ ನಾವು ಇದನ್ನು ಕಾನೂನಿನ ಚೌಕಟ್ಟಿನಲ್ಲಿ ಲೋಕಾಯುಕ್ತಕ್ಕೆ ರೆಫರ್ ಮಾಡುವುದಕ್ಕೆ ಬರುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡುತ್ತೇವೆ. ಮಾಡುವುದಕ್ಕಾದರೆ ಮಾಡುತ್ತೇವೆ. ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇದ್ದರೆ ನೂರಕ್ಕೆ ನೂರು ಇದನ್ನು ಲೋಕಾಯುಕ್ತ ತನಿಖೆಗೆ ವಹಿಸುತ್ತೇವೆ. ಇದರ ಬಗ್ಗೆ ನಾವು ಯಾವುದೇ ಮುಚ್ಚುಮರೆ ಮಾಡುವಂತಹ ಕೆಲಸ ಇಲ್ಲವೇ ಇಲ್ಲ. ಅದಕ್ಕೆ ಸಭಾನಾಯಕರಾದ ಮಾನ್ಯ

ಎಸ್.ಆರ್. ಪಾಟೀಲ್‌ರವರು ಎಲ್ಲಾ factsನ್ನು disclose ಮಾಡಿದ್ದಾರೆ. ಈಗ ಏನೇನು ಸಂಬಂಧಪಟ್ಟ ಮಾಹಿತಿ ಬೇಕು ಅದನ್ನೆಲ್ಲಾ ಸದನದ ಮುಂದೆ ಇಟ್ಟಿದ್ದಾರೆ. ನಾನು ಇಷ್ಟೆ ಹೇಳುತ್ತೇನೆ, ಅದನ್ನು ಮತ್ತೆ ಆ ಸಂಬಂಧಪಟ್ಟ ಕಡತಗಳನ್ನೆಲ್ಲಾ ತರಿಸಿ ಕಾನೂನು ಪ್ರಕಾರವಾಗಿ ನೋಡಿ ಕಾನೂನಿನ ಚೌಕಟ್ಟಿನೊಳಗೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

## 10. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

01. ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2013
02. ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣೆ ನಿಯಂತ್ರಣ) ವಿಧೇಯಕ, 2013.
03. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಮತ್ತು ಅಭಿವೃದ್ಧಿ ವಿಧೇಯಕ, 2013

## 11. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

### ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕ, 2013
### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಎರಡು ಸದನಗಳಲ್ಲಿ ಒಪ್ಪಿಗೆಯಾಗಿರುವ grants ಇದೆಯಲ್ಲಾ, ಅದಕ್ಕಿಂತ excess ಆಗಿ ಮಾಡಿರತಕ್ಕಂಥ ಖರ್ಚು ಅನ್ನು ಸಕ್ರಮ ಮಾಡುವುದಕ್ಕೋಸ್ಕರವಾಗಿ ತಂದಿರುವಂತಹ ವಿಧೇಯಕ. It is very simple. ಈ ವಿಧೇಯಕಕ್ಕೆ ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ. ಇದನ್ನು Public Accounts Committee ಯವರು ಮಾಡಿ ಕಳುಹಿಸಿರತಕ್ಕಂಥದ್ದು.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3 ರ ವರೆಗೆ**

**ಸಭಾಪತಿಯವರು:–** "ಖಂಡ 2 ಮತ್ತು 3 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣೆ ನಿಯಂತ್ರಣ) ವಿಧೇಯಕ 2013.**

**ಸಭಾಪತಿಯವರು:–** ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕಾ ಸಚಿವರು ಈ ವಿಧೇಯಕವನ್ನು 2013ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಈ ವಿಧೇಯಕದ ಬಗ್ಗೆ ಬಹಳ ಸುಧೀರ್ಘವಾದಂತಹ ಚರ್ಚೆಯಾಗಬೇಕಾಗಿದೆ.

ಇದರಲ್ಲಿ ಕೇವಲ ಸಣ್ಣ ಸಂಗತಿಗಳು ಮಾತ್ರವಲ್ಲ. ಇಡೀ ರಾಷ್ಟ್ರದಲ್ಲಿ ನಡೆಯುವ ವಿದ್ಯಮಾನಗಳನ್ನು ಒಳಗೊಂಡಂತಹ ಸಂಗತಿಗಳೆಲ್ಲವೂ ಈ ವಿಧೇಯಕದ ಒಳಗೆ ಬಂದಿದೆ ಎಂದು ಮೇಲ್ನೋಟಕ್ಕೆ ನೋಡಿದಾಗ ಕಂಡುಕೊಂಡಿದ್ದೇವೆ. ಆದುದರಿಂದ ಇದರ ಬಗ್ಗೆ ಸುಧೀರ್ಘವಾಗಿ ಚರ್ಚೆ ಆಗಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೇವಲ ಅರ್ಧ ದಿನದಲ್ಲಿ ಒಂದು ದಿನದಲ್ಲಿ ಚರ್ಚೆಯಾಗುವ ಸಂಗತಿಗಳು ಅಲ್ಲ. ಆದುದರಿಂದ ಈ ವಿಧೇಯಕವನ್ನು ಮುಂದಿನ ವಿಧಾನ ಮಂಡಲದ ಸಭೆಯಲ್ಲಿ ತನ್ನಿ. ಎ.ಪಿ.ಎಂ.ಸಿ.ಗೆ ಕೆಲವು ತಿದ್ದುಪಡಿಗಳನ್ನು ತರುತ್ತಿದ್ದಾರೆ. ಇದು ಕೇವಲ ಇಲ್ಲಿಗೆ ಮಾತ್ರ ಸಂಬಂಧಪಟ್ಟಂತೆ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರೀಯ ಆರ್ಥಿಕ ನೀತಿಗಳನ್ನು ಒಳಗೊಂಡಂತ ರೀತಿಯಲ್ಲಿ ಎಫ್.ಸಿ.ಐ. ಗೆ ನೇರ ಪ್ರವೇಶ ಆಗುವಂಥಾದ್ದು ಮೇಲ್ನೋಟಕ್ಕೆ ಕಾಣುತ್ತಿದೆ. ನಾನು ಪೂರ್ಣ ವಿವರವಾಗಿ ನೋಡಿಲ್ಲ. ಇದರ ಬಗ್ಗೆ ಚರ್ಚೆ ಮಾಡಬೇಕಾದಂತಹ ಅವಶ್ಯಕತೆ ಇರುವಂತಹ ಹಿನ್ನೆಲೆಯಲ್ಲಿ ಸುಧೀರ್ಘವಾದಂತಹ ಚರ್ಚೆಗಳನ್ನು ಮಾಡೋಣ. ಇದರ ಪರಿಣಾಮ ನೇರವಾಗಿ ನಮ್ಮ ರೈತರ ಮೇಲೆ ಆಗುತ್ತದೆ. ಅದೂ ಕೂಡ ನಮ್ಮ ಪೆಟ್ಟಿ ಶಾಪ್ ಓನರ್ಸ್‌ಗಳ ಮೇಲೆ ನೇರವಾಗಿ ಪರಿಣಾಮವಾಗುತ್ತದೆ. ಮತ್ತು ಎ.ಪಿ.ಎಂ.ಸಿ. ವ್ಯಾಪ್ತಿಯನ್ನು ಎಲ್ಲೆಲ್ಲಿ ವಿಸ್ತರಿಸಬೇಕು ಎಂಬೆಲ್ಲಾ ನೀತಿಯ ವಿಚಾರಗಳು ಇದರಲ್ಲಿ ಒಳಗೊಂಡಿದೆ. ಈ ವಿಧೇಯಕವನ್ನು ಮುಂದಿನ ಅಧಿವೇಶನದಲ್ಲಿ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಿ ನಂತರ ಪಾಸ್ ಮಾಡೋಣ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರುಣ್ ಶಹಾಪುರ:–** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಮುಖವಾದ ವಿಧೇಯಕವಾಗಿದೆ. ಹೆಚ್ಚೂ ಕಡಿಮೆ ಇದು ಎ.ಪಿ.ಎಂ.ಸಿ.ಗಳ ಪಾಲಿಗೆ ಹಣೆಬರಹವನ್ನು ಬರೆಯುತ್ತದೆ. ಇದರಲ್ಲಿ ಖಾಸಗೀ ಮಾರುಕಟ್ಟೆಗಳಲ್ಲಿ ವ್ಯಾಪಾರಿಯಾಗಿ ಕಾರ್ಯ ನಿರ್ವಹಿಸಲು licence ಇರುವಂಥಾದ್ದು ಕೂಡ ಇದೆ. ಎ.ಪಿ.ಎಂ.ಸಿ. ಗೆ ಇದು ಮರಣಶಾಸನವಾಗಬಹುದು. ಆದುದರಿಂದ ಇದನ್ನು ತರಾತುರಿಯಿಂದ ತರುವುದು ಬೇಡವೆಂದು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಹೆಚ್. ವಿಜಯಶಂಕರ್:–** ನಮ್ಮ ವಿರೋಧ ಪಕ್ಷದ ನಾಯಕರು ಏನು ಅಭಿಪ್ರಾಯವನ್ನು ವ್ಯಕ್ತ ಮಾಡಿದರು ಅದಕ್ಕೆ ನಾನು ಸಹಮತವನ್ನು ವ್ಯಕ್ತ ಮಾಡುತ್ತಿದ್ದೇನೆ. ಎ.ಪಿ.ಎಂ.ಸಿ. ಬಹಳ ದೊಡ್ಡ ಆಸ್ತಿಯಾಗಿ ಪರಿಣಮಿಸಿದೆ. ಖಾಸಗಿಯವರಿಗೆ ಆಹ್ವಾನ ಕೊಟ್ಟು ಅವರಿಗೆ licence ಕೊಟ್ಟು, ಅವರಿಗೆ ಈ ಆಸ್ತಿ ಮೇಲೆ ಸ್ವಾಧೀನವನ್ನು ಕೊಟ್ಟು, ವ್ಯವಹಾರ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುವ ಈ ನಿಯಮ ಏನು ಇದೆ, ಇದು ಎ.ಪಿ.ಎಂ.ಸಿ.ಗೆ ಬಹಳ ದೊಡ್ಡ ಧಕ್ಕೆ ತರುವ ವಾತಾವರಣವನ್ನು ಕಾಣುತ್ತಿದ್ದೇವೆ. ಖಾಸಗಿಯವರ ಸಹಭಾಗಿತ್ವವನ್ನು ನಾವು ಆಹ್ವಾನ ಮಾಡುವಾಗ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ನಾವು ಈ ಸಂದರ್ಭದಲ್ಲಿ ಕೆ.ಐ.ಎ.ಡಿ.ಬಿ. ಬಗ್ಗೆ ಚರ್ಚೆ ಮಾಡಿದ್ದೇವೆ ಆ ರೀತಿಯಾಗಿ ನೂರಾರು ಹಗರಣಗಳು ಬರುವಂತಹ ಸನ್ನಿವೇಶಗಳು ಮುಂದೆ ಬರಬಹುದು. ಆ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇದರ ಬಗ್ಗೆ ಸುಧೀರ್ಘವಾಗಿ ಚರ್ಚೆಗಳನ್ನು ನಡೆಸುವ ಸಲುವಾಗಿ ಈ ವಿಧೇಯಕವನ್ನು ಮುಂದಿನ ಅಧಿವೇಶನದಲ್ಲಿ ತರಬೇಕು ತ್ತು ಅಲ್ಲಿಯವರೆಗೆ ಈ ವಿಧೇಯಕವನ್ನು ತಡೆಹಿಡಿಯಬೇಕೆಂದು ತಮ್ಮಲ್ಲಿ ಏನು ಮನವಿ ಮಾಡಿದ್ದಾರೆ ಆ ಮನವಿಯನ್ನು ತಾವು ಮತ್ತು ಸರ್ಕಾರ ಒಪ್ಪಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ನಾಣಯ್ಯನವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಚಾರಕ್ಕೆ ಹೇಳಿಕೆ ರೆಡಿ ಇದೆ ಬಹಳ ಉದ್ದ ಉತ್ತರ ಇದೆ 5 ನಿಮಿಷ ಆಗಬಹುದು ಅದನ್ನು ಓದಿಬಿಡುತ್ತೇನೆ. ಇದು ಪದ್ಧತಿ.

**ಸಭಾಪತಿಯವರು:–** ಒಳ್ಳೆಯದು. ಈ ವಿಧೇಯಕದ ಮೇಲಿನ ಚರ್ಚೆಯನ್ನು ತಡೆಹಿಡಿದಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಶೂನ್ಯವೇಳೆಯ ಬಗೆಗಿನ ಪ್ರಸ್ತಾಪಕ್ಕೆ ಉತ್ತರವನ್ನು ನೀಡಿದ ನಂತರ ಅದನ್ನು ಮುಂದಕ್ಕೆ ತೆಗೆದುಕೊಳ್ಳೋಣ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ,

**ವಿಷಯ:**

ಅರ್ಕಾವತಿ ಬಡಾವಣೆ ನಿರ್ಮಿಸಲು ಸ್ವಾಧೀನಪಡಿಸಿಕೊಂಡಿದ್ದ ಜಮೀನನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನೆಪ ಮಾಡಿಕೊಂಡು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ತಾರೀಖು 12-2-2013ರ ನಡವಳಿ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ನೀಡಿರುವ ಆರು ಮಾರ್ಗಸೂಚಿಗಳನ್ನು ತಮ್ಮ ಅನುಕೂಲತೆಗೆ ತಕ್ಕಂತೆ ಉಪಯೋಗಿಸಿಕೊಂಡು, ವಿಶೇಷ ಭೂಸ್ವಾಧೀನಾಧಿಕಾರಿಗಳ ಮುಖಾಂತರ ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಯನ್ವಯ ಆಯ್ದ ಭೂಮಿಗಳನ್ನು ಭೂ ಮಾಲೀಕರಿಗೆ ಹಿಂತಿರುಗಿಸಲು ಶಿಫಾರಸ್ಸು ಮಾಡುವ ಮುಖಾಂತರ ಅಂತಹ ಜಮೀನುಗಳನ್ನು ಕಾನೂನು ಬಾಹಿರವಾಗಿ ಭೂ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಆದೇಶವನ್ನು ಹೊರಡಿಸುವುದರ ಮುಖಾಂತರ, ಈಗಾಗಲೇ ಸುಮಾರು 433 ಎಕರೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿರುವುದು ಈ ಹಿಂದಿನ ಆಡಳಿತ ಬಹಳ ದೊಡ್ಡ ಪ್ರಮಾಣದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಡಿ-ನೋಟಿಫೈ ಮಾಡಿರುವ ಕ್ರಮಕ್ಕೆ ಸರಿಸಮಾನವಾದಂತಹ ಕಾನೂನು ಬಾಹಿರವಾಗಿರುವುದು ಮತ್ತು ಈ ಒಂದು ಕಾರ್ಯಕ್ರಮದಲ್ಲಿ ಬಹಳ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿರುವುದು ಮತ್ತು ಇನ್ನು ಮುಂದೆಯೂ ಇಂತಹ ಆದೇಶಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮುಖಾಂತರ ಹೊರ ಬರುತ್ತಿರುವುದು, ಕಾನೂನು ಬಾಹಿರ ಡಿ-ನೋಟಿಫಿಕೇಷನ್ ಇನ್ನೂ ಕೂಡ ಮುಂದುವರೆಯುತ್ತಿರುವುದರ ಸಂಕೇತ ಮತ್ತು ಈ ಒಂದು ವ್ಯವಸ್ಥಿತ ಯೋಜನೆ, ಅತಿ ದೊಡ್ಡ ಭ್ರಷ್ಟಾಚಾರ ಸಂಕೇತವೂ ಹೌದು. ಇಂತಹ ಭೂ ಸ್ವಾಧೀನದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ರಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು

ದಿನಾಂಕ 14–5–2013ರಂದು ಹೊರಡಿಸಿರುವ ಹಿಂಬರಹದ ಒಂದು ಪ್ರತಿಯನ್ನು ಈ ನೋಟಿಸಿನ ಪ್ರತಿಯಲ್ಲಿ ಲಗತ್ತಿಸಿರುತ್ತೇನೆ.

**ಉತ್ತರ:**

1. ಅರ್ಕಾವತಿ ಬಡಾವಣೆ ಯೋಜನೆಗಾಗಿ ದಿನಾಂಕ: 03/02/2003 ರಂದು ಒಟ್ಟು 3,839 ಎಕರೆ 12 ಗುಂಟೆ ವಿಸ್ತೀರ್ಣದ ಜಮೀನನ್ನು 16 ಗ್ರಾಮಗಳಿಂದ ಭೂಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆ ಹೊರಡಿಸಲಾಗಿತ್ತು.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/193/ಎಂಎನ್‌ಎಕ್ಸ್/ 2004, ದಿನಾಂಕ: 23/02/2004 ರಂತೆ ಅರ್ಕಾವತಿ ಬಡಾವಣೆಗೆ ಒಟ್ಟು 2750–00 ಎಕರೆ ವಿಸ್ತೀರ್ಣದ ಜಮೀನನ್ನು 16 ಗ್ರಾಮಗಳಿಂದ ಭೂಸ್ವಾಧೀನಪಡಿಸಿಕೊಳ್ಳುವಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು.
3. ಅರ್ಕಾವತಿ ಬಡಾವಣೆಯನ್ನು ಸಂಖ್ಯೆ: ಬೆಂಅಪ್ರಾ/ಆಡಳಿತ/ಹಂಚಿಕೆ/ ಕಾರ್ಯದರ್ಶಿ/196/2003–04, ದಿನಾಂಕ: 21/02/2004 ರಂದು ನಿವೇಶನ ಹಂಚಿಕೆಗೆ ಅಧಿಸೂಚನೆ ಹೊರಡಿಸಲಾಗಿದೆ.
4. ದಿನಾಂಕ: 04/05/2007 ರಿಂದ ದಿನಾಂಕ: 29/09/2010 ರವರೆಗೆ ಒಟ್ಟು 206 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನನ್ನು 48(1) ರಡಿಯಲ್ಲಿ ಸರ್ಕಾರದ ಆದೇಶದನ್ವಯ ಭೂಸ್ವಾಧೀನದಿಂದ ಕೈಬಿಡಲಾಗಿದೆ.
5. ಭೂಮಾಲೀಕರು ಸಲ್ಲಿಸಿದ ರಿಟ್ ಪಿಟಿಷನ್ ಸಂಖ್ಯೆ: 26601–04/2005 ರಲ್ಲಿ ದಿನಾಂಕ: 15/04/2005 ರಂದು ಮಾನ್ಯ ಉಚ್ಛ ನ್ಯಾಯಾಲಯವು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತಾರತಮ್ಯ ಎಸಗಿರುವುದರಿಂದ ಪ್ರಾಥಮಿಕ ಅಧಿಸೂಚನೆಯನ್ನು ಹಾಗೂ ಅಂತಿಮ ಅಧಿಸೂಚನೆಯನ್ನು ರದ್ದುಗೊಳಿಸಿರುತ್ತದೆ.

6. ಈ ಆದೇಶದ ವಿರುದ್ಧ ಪ್ರಾಧಿಕಾರವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲ್ ಸಂಖ್ಯೆ: 2624/2005 ನ್ನು ಸಲ್ಲಿಸಿದ್ದು, ಸದರಿ ರಿಟ್ ಅಪೀಲ್‌ನಲ್ಲಿ ಪ್ರಾಧಿಕಾರವು ಸಲ್ಲಿಸಿದ ಮೆಮೊನ್ನು ಪರಿಗಣನೆಗೆ ತೆಗೆದುಕೊಂಡು ಈ ಕೆಳಗಿನ 6 ಮಾರ್ಗಸೂಚಿಗಳನ್ವಯ ಭೂಮಾಲೀಕರ ಜಮೀನುಗಳಿದ್ದಲ್ಲಿ ಪ್ರಾಧಿಕಾರವು ಅವುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬೇಕೆಂದು ಆದೇಶಿಸಿದೆ.

a) Their lands are situated within green belt area.

b) They are totally built up.

c) Properties wherein there are buildings constructed by charitable, educational and/or religious institution.

d) Nursery lands

e) Who have set-up factories.

f) Their lands are similar to the lands which are adjoining their lands but not notified for acquisition at all.

7. ರಿಟ್ ಅಪೀಲ್‌ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸಿದೆ.

102. Though the learned single Judge may be justified in holding that there is discrimination and arbitrariness in acquiring the land of the petitioners in W P No. 28087/2004, after referring to the pleadings in para 5 if the Writ Petition, which was not rebutted by the BDA or the Government in

their statement of objections, he should have confined the relief only to those petitioners who have proved their case. On that ground he could not have quashed the entire acquisition relating 2,750 acres. We are also satisfied that the plea if discrimination taken by some of the land oweners is “well founded”. However, it is a dispute fact, which cannot be gone into in these appeals, without there being enough material on record. In fact the BDA and Government have not traversed those allegations of discrimination specifically. Under these circumstances and in the light of the aforesaid memo, we deem it proper to give an opportunity to all those land oweners (excluding site owners) who have taken the plea of discrimination to file and appropriate application before the BDA for deletion of their lands from acquisition, and to substantiate their contention by producing such evidence which are available with them. On such application being filed and after holding an enquiry, the BDA shall consider their requests. If they are able to establish that their lands are similarly situated as that of the other land oweners, whose land was not at all notified for acquisition, or having been notified under Section 17(1) of the BDA Act, excluded from acquisition after upholding the objection, the said lands shall be excluded from acquisition. On receipt of such a report, the scheme already sanctioned by the Government shall stand amended accordingly, and the Government shall pass appropriate orders in this regard.

8. ಮುಂದುವರೆದಂತೆ, ಈ ಮಾರ್ಗಸೂಚಿಗಳಲ್ಲಿ ಬರುವ ಜಮೀನುಗಳನ್ನು ಭೂಸ್ವಾಧೀನ ಕ್ರಮದಿಂದ ಹೊರತುಪಡಿಸುವ ಜವಾಬ್ದಾರಿಯನ್ನು ಬಿಡಿಎಗೆ ನಿಗದಿಪಡಿಸಿ, ಈ ಪ್ರಕ್ರಿಯೆ ಮುಗಿದ ನಂತರ, ಬಿಡಿಎ ಈ ರೀತಿ ಭೂಸ್ವಾಧೀನ ಕ್ರಮದಿಂದ ಹೊರತುಪಡಿಸಿರುವ ಜಮೀನುಗಳನ್ನು ಬಿಟ್ಟು ಉಳಿಕೆ ಜಮೀನುಗಳ ಬಗ್ಗೆ ಪರಿಷ್ಕೃತ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಬೇಕೆಂದು ಹಾಗೂ ಸದರಿ ವರದಿಯನ್ನು ಸ್ವೀಕರಿಸಿದ ನಂತರ ಆ ಪ್ರಕಾರ ಈಗಾಗಲೇ ಅನುಮೋದಿಸಿರುವ ಯೋಜನೆಯು ತಿದ್ದುಪಡಿಗೊಳ್ಳುವುದೆಂದು ಮತ್ತು ಸರ್ಕಾರವು ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸಬೇಕೆಂದು ಆದೇಶಿಸಿದೆ.

9. ಈ ಎಲ್ಲಾ ಮೊಕದ್ದಮೆಗಳಲ್ಲಿ ಬಿಡಿಎ ಜೊತೆ ಸರ್ಕಾರವು ಸಹ ವಾದಿ/ ಪ್ರತಿವಾದಿಯಾಗಿರುತ್ತಾರೆ.

10. ಈ ನಿರ್ಣಯದಂತೆ ಪ್ರಾಧಿಕಾರವು ವಿಷಯ ಸಂಖ್ಯೆ: 92/06, ದಿನಾಂಕ: 31/05/2006 ರಂದು 140 ಎಕರೆ 32 ಗುಂಟೆ ಜಮೀನನ್ನು ಭೂಸ್ವಾಧೀನ ಕ್ರಮದಿಂದ ಹೊರತುಪಡಿಸಿ, ಪ್ರಾಧಿಕಾರದಲ್ಲಿ ನಿರ್ಣಯಿಸಿ, ಸಂಬಂಧಿತ ಭೂಮಾಲೀಕರಿಗೆ ಹಿಂಬರಹ ನೀಡಿರುತ್ತದೆ.

11. ಉಳಿಕೆ ಭೂಮಾಲೀಕರಿಗೆ ಯಾವುದೇ ಕಾರಣ ನೀಡದೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅವರ ಜಮೀನುಗಳ ಭೂಸ್ವಾಧೀನದಿಂದ ಹೊರತುಪಡಿಸಲು ಯೋಗ್ಯವಲ್ಲವೆಂದು ಅಭಿಪ್ರಾಯಿಸಿ ಹಿಂಬರಹ ನೀಡಿರುತ್ತದೆ.

12. ಸದರಿ ಹಿಂಬರಹಗಳನ್ನು ಪ್ರಶ್ನಿಸಿ, ಸಂಬಂಧಿತ ಭೂಮಾಲೀಕರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 9232/ 2006 ರಲ್ಲಿ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ದಿನಾಂಕ: 25/08/2006 ರಂದು ಮಾನ್ಯ ಉಚ್ಛ ನ್ಯಾಯಾಲಯವು ಮರು

ವಿಚಾರಣೆ ನಡೆಸುವಾಗ ಅನುಸರಿಸಬೇಕಾದ ಕ್ರಮವನ್ನು ನಿಗದಿ ಪಡಿಸಿ, ಮೇಲ್ಕಾಣಿಸಿದ ಬಿಡಿಎ ನೀಡಿರುವ ಹಿಂಬರಹಗಳನ್ನು ರದ್ದುಪಡಿಸಿ ಆದೇಶಿಸಿದೆ.

13. ಪ್ರಾಧಿಕಾರವು ವಿಷಯ ಸಂಖ್ಯೆ: 15/07, ದಿನಾಂಕ: 03/09/2007 ರಂದು 16 ಎಕರೆ 22 ಗುಂಟೆ ಜಮೀನುಗಳು ನ್ಯಾಯಾಲಯದ ಮಾರ್ಗಸೂಚಿಗಳಡಿಯಲ್ಲಿ ಬರುವ ಕಾರಣ, ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿ ಭೂಮಾಲೀಕರುಗಳಿಗೆ ಹಿಂಬರಹವನ್ನು ನೀಡಲಾಗಿದೆ.

14. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ: 2624/2005 ರಲ್ಲಿ ನೀಡಿರುವ ಆದೇಶವನ್ನು ಪ್ರಶ್ನಿಸಿ, ಭೂಮಾಲೀಕರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಎಲ್ ಅಪೀಲ್ ಸಂಖ್ಯೆ: 4097/2010 ರನ್ನು ದಾಖಲಿಸಿರುತ್ತಾರೆ. ದಿನಾಂಕ: 05/05/2010 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶವನ್ನು ಪುನರ್ ಉಚ್ಚರಿಸಿರುತ್ತದೆ ಹಾಗೂ ಮುಂದುವರೆದಂತೆ, ಮಾನ್ಯ ಉಚ್ಚ ನ್ಯಾಯಾಲಯವು ವಿಧಿಸಿರುವ ಆರು ಮಾರ್ಗಸೂಚಿಗಳಡಿಯಲ್ಲಿ ಅರ್ಕಾವತಿ ಬಡಾವಣೆ ಭೂಸ್ವಾಧೀನವಾಗಿರುವ ಸಂಬಂಧಿತ ಜಮೀನುಗಳು ಇದ್ದಲ್ಲಿಗೆ ಅವುಗಳನ್ನು ಭೂಸ್ವಾಧೀನ ಕ್ರಮದಿಂದ ಹೊರತುಪಡಿಸಬೇಕೆಂದು, ಒಂದು ವೇಳೆ ಆ ಜಮೀನುಗಳಲ್ಲಿ "Any allotment made by BDA, either by forming layouts or by way of bulk allotments, will be subject to the above" ಎಂದು ಆದೇಶಿಸಿರುತ್ತದೆ.

15. ಈ ರೀತಿಯಾಗಿ ಮಾನ್ಯ ಉಚ್ಚ ನ್ಯಾಯಾಲಯವು ಆದೇಶಿಸಿರುವ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪುನರ್ ಉಚ್ಚರಿಸಿರುವಂತೆ, ಭೂಮಾಲೀಕರ ತಕರಾರು ಅರ್ಜಿಗಳನ್ನು ಮರು

ವಿಚಾರಣೆ ನಡೆಸಿ, ನ್ಯಾಯಾಲಯವು ನಿಗದಿಪಡಿಸಿರುವ ಆರು ಮಾರ್ಗಸೂಚಿಗಳನ್ವಯ ಸಂಬಂಧಿತ ಜಮೀನುಗಳು ಇದ್ದಲ್ಲಿ ಅಂತಹ ಜಮೀನುಗಳನ್ನು ಭೂಸ್ವಾಧೀನ ಕ್ರಮದಿಂದ ಹೊರತುಪಡಿಸಿ, ಆದೇಶಿಸಲು ಸರ್ಕಾರವು ದಿನಾಂಕ: 04/06/2010 ರಂದು ಅಧಿಸೂಚನೆ ಸಂಖ್ಯೆ: ಯುಡಿಡಿ 174 ಎಂಎನ್‌ಜೆ 2010 ರಂತೆ ನಾಲ್ಕು ಜನ ಭೂಸ್ವಾಧೀನಾಧಿಕಾರಿಗಳಿಗೆ ತಲಾ ನಾಲ್ಕು ಗ್ರಾಮಗಳನ್ನು ಹಂಚಿ ದತ್ತವಾದ ಅಧಿಕಾರವನ್ನು ನೀಡಿದೆ. (ಪ್ರತಿ ಲಗತ್ತಿಸಿದೆ)

16. ದತ್ತವಾದ ಅಧಿಕಾರದ ಮೇರೆಗೆ ಈ ನಾಲ್ಕು ಜನ ಭೂಸ್ವಾಧೀನಾಧಿಕಾರಿಗಳು ಭೂಮಾಲೀಕರ ತಕರಾರು ಅರ್ಜಿಗಳನ್ನು ಆಲಿಸಿ, ತಕರಾರನ್ನು ಪುರಸ್ಕರಿಸಿ, ಸದರಿ ಜಮೀನುಗಳನ್ನು ಭೂಸ್ವಾಧೀನ ಕ್ರಮದಿಂದ ಹೊರತುಪಡಿಸಿ ಆದೇಶವನ್ನು ಮಾಡಿರುತ್ತಾರೆ.

17. ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 228/12, ದಿನಾಂಕ: 02/11/2012 ರಲ್ಲಿ ಈ ಬಗ್ಗೆ ಯಾವ ರೀತಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು, ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆಯಬೇಕೆಂದು ನಿರ್ಣಯಿಸಲಾಗಿದೆ.

18. ದಿನಾಂಕ: 21/01/2013 ರ ಪತ್ರದಲ್ಲಿ ಈ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಮುಂದಿನ ಅಗತ್ಯ ಕ್ರಮಗಳ ಬಗ್ಗೆ ಅಭಿಪ್ರಾಯವನ್ನು ಕೋರಲಾಗಿ, ಮಾನ್ಯ ಅಡ್ವೋಕೇಟ್ ಜನರಲ್‌ರವರು ದಿನಾಂಕ: 01/03/2013 ರ ಪತ್ರದಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡಿರುತ್ತಾರೆ. (ಪ್ರತಿ ಲಗತ್ತಿಸಿದೆ)

19. ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಅಪೀಲ್ ಸಂಖ್ಯೆ: 2624/2005, ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 4097/2010, ದಿನಾಂಕ: 05/05/2010, ರಿಟ್ ಪಿಟಿಷನ್ ಸಂಖ್ಯೆ:

9232/2006, ದಿನಾಂಕ: 25/08/2006, ಸರ್ಕಾರಿ ಅಧಿಸೂಚನೆ ಸಂಖ್ಯೆ: ಯುಡಿಡಿ/174/ಎಂಎನ್‌ಜೆ/2010, ದಿನಾಂಕ: 04/06/2010 ರ ಆದೇಶಗಳಂತೆ, ಪ್ರಾಧಿಕಾರದ ವಿಷಯ ಸಂಖ್ಯೆ: 79/2013, ದಿನಾಂಕ 12/02/2013 ರಂತೆ 423 ಎಕರೆ 13 ಗುಂಟೆ ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿರುವ ಜಮೀನಿನ ಬಗ್ಗೆ ಅಗತ್ಯ ಕ್ರಮವನ್ನು ಕೈಗೊಳ್ಳಲು ನಿರ್ಣಯಿಸಲಾಗಿದೆ

20. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮೊದಲಿನಿಂದಲೂ ಭೂಸ್ವಾಧೀನದ ಬಗ್ಗೆಯಾಗಲೀ ಅಥವಾ ಪ್ರಾಧಿಕಾರಕ್ಕೆ ಸಂಬಂಧಿಸಿದ ಯಾವುದೇ ವಿಚಾರದ ಬಗ್ಗೆಯಾಗಲೀ ಯಾರಾದರೂ ಅರ್ಜಿ ಸಲ್ಲಿಸಿದರೆ ಆ ಪ್ರಕರಣದಲ್ಲಿ ಹಾಲಿ ಇರುವ ಸ್ಥಿತಿಯ ಬಗ್ಗೆ ಪ್ರಸ್ತಾವಿಸಿ ಹಿಂಬರಹ ನೀಡುವ ಪದ್ಧತಿಯು ಚಾಲ್ತಿಯಲ್ಲಿದೆ.

21. ಮೇಲ್ಕಂಡ ನಿರ್ಣಯವನ್ನು ಮಂಡಳಿಯ ಸಭೆಯಲ್ಲಿ ಕೈಗೊಂಡ ನಂತರ ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿರುವ ಜಮೀನುಗಳ ಬಗ್ಗೆ ದಿನಾಂಕ: 27/02/2013 ರ ನಂತರ ವಿವಿಧ ದಿನಾಂಕಗಳಲ್ಲಿ ಹಿಂಬರಹಗಳನ್ನು ನೀಡಲಾಗಿದೆ.

22. ಈ ಎಲ್ಲಾ ಪ್ರಕ್ರಿಯೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಸಲ್ಲಿಸಿರುವ ವರದಿಗಳನ್ನಾಧರಿಸಿ, ಕಾನೂನು ಅಭಿಪ್ರಾಯವನ್ನು ಮಾನ್ಯ ಅಡ್ವೊಕೇಟ್ ಜನರಲ್‌ರವರಿಂದ ಪಡೆದು, ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಎಲ್ಲಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂಡಳಿಯ ಸದಸ್ಯರ ಸಮಕ್ಷಮ ನಡೆದಿರುವ ಮಂಡಳಿಯ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಿ, ಆ ಪ್ರಸ್ತಾವನೆಗನುಗುಣವಾಗಿ ಮಾಡಿರುವ ನಿರ್ಣಯದ ಠರಾವಿನಂತೆ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದೆ. (ಪ್ರತಿ ಲಗತ್ತಿಸಿದೆ)

23. ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯದನುಸಾರ ಹಾಗೂ ಪ್ರಾಧಿಕಾರದ ಮಂಡಳಿಯ ನಿರ್ಣಯದನುಸಾರ ಅರ್ಕಾವತಿ ಬಡಾವಣೆಯಲ್ಲಿ ಮಾನ್ಯ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದ ಆದೇಶದನ್ವಯ, ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿರುವ ಜಮೀನುಗಳ ಪಟ್ಟಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಅರ್ಕಾವತಿ ಬಡಾವಣೆಯ ಪರಿಷ್ಕೃತ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು

24. ಮಾನ್ಯ ಉಚ್ಚ ನ್ಯಾಯಾಲಯದ W.P. No. 17278-85/2013 (LA-BDA) ರಲ್ಲಿ ದಿನಾಂಕ:12/02/2013 ರಂದು ನಡೆದ ಪ್ರಾಧಿಕಾರದ ಸಭೆಯ ನಡವಳಿಯ ವಿಷಯ ಸಂಖ್ಯೆ: 79/13 ರಲ್ಲಿ ತೆಗೆದುಕೊಂಡ ನಿರ್ಣಯದಂತೆ, ಪ್ರಾಧಿಕಾರವು ಸರ್ಕಾರಕ್ಕೆ ಪ್ರಸ್ತಾವನೆಯನ್ನು ನಾಲ್ಕು ವಾರಗಳೊಳಗಾಗಿ ಸಲ್ಲಿಸುವಂತೆ ಹಾಗೂ ಸರ್ಕಾರವು ಸದರಿ ವರದಿಯ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ಆದೇಶಗಳಂತೆ ಪ್ರಾಧಿಕಾರದ ನಡವಳಿಯನ್ನು ಸ್ವೀಕರಿಸಿದ ಎರಡು ವಾರಗಳೊಳಗಾಗಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಆದೇಶವನ್ನಿತ್ತಿದೆ.

25. ನ್ಯಾಯಾಂಗ ನಿಂಧನಾ ಪ್ರಕರಣ ಸಂಖ್ಯೆ CCC No. 605/82013, ದಿನಾಂಕ: 22/04/2013 ಪ್ರಕರಣ ದಾಖಲಾದ ಕಾರಣ ನ್ಯಾಯಾಲಯಕ್ಕೆ ಅರ್ಕಾವತಿ ಬಡಾವಣೆಯ ಪರಿಷ್ಕೃತ ಯೋಜನೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿ ಹಾಗೂ ಹಿಂಬರಹಗಳ ಪ್ರತಿಗಳನ್ನು ಸಲ್ಲಿಸಲಾಗಿದೆ.

26. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P. No. 17278-85/2013 (LA-BDA) ರಲ್ಲಿ ಇತ್ತೀಚಿನ ವಿಚಾರಣೆಯ ದಿನಾಂಕದಂದು ನ್ಯಾಯಾಲಯಗಳ ಆದೇಶಗಳ ಹಿನ್ನಲೆಯಲ್ಲಿ ಈ

ಎಲ್ಲಾ ಪ್ರಕ್ರಿಯೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಸರ್ಕಾರಕ್ಕೆ ಸಲ್ಲಿಸಲಿರುವ ಪರಿಷ್ಕೃತ ಯೋಜನೆಯ ಪ್ರಸ್ತಾವನೆಯ ಬಗ್ಗೆ, ಸಂಬಂಧಿತ ಭೂಮಾಲೀಕರಿಗೆ ನೀಡಿರುವ ಪರಿಷ್ಕೃತ ಯೋಜನೆಯ ಪ್ರಸ್ತಾವನೆಯ ಬಗ್ಗೆ, ಸಂಬಂಧಿತ ಭೂಮಾಲೀಕರಿಗೆ ನೀಡಿರುವ ಹಿಂಬರಹದ ಬಗ್ಗೆ ಪ್ರಸ್ತಾವಿಸಿ, ಎಲ್ಲಾ ಅಡಕಗಳನ್ನೊಳಗೊಂಡಂತೆ ಸಂಪೂರ್ಣ ಮಾಹಿತಿಯನ್ನು ನ್ಯಾಯಾಲಯದ ಗಮನಕ್ಕೆ ತಂದು, ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದನ್ವಯ ಬಿಡಿಎ ತನ್ನ ಕರ್ತವ್ಯವನ್ನು ನಿರ್ವಹಿಸಿರುತ್ತದೆ.

5–00 ಗಂಟೆ

**(ಹೇಳಿಕೆ ಮುಂದುವರೆದಿದ್ದ ಹೇಳಿಕೆ ಮಧ್ಯದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಾಲಂಕರಿಸಿದರು)**

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ನಾನು ಸದರಿ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದೆ. ಅದಕ್ಕೆ ಈಗ ತಾವು ಉತ್ತರವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಸ್ವಲ್ಪಮಟ್ಟಿಗೆ ವಿಸ್ತ್ರತವಾದಂಥ ಚರ್ಚೆ ಆಗಲೇಬೇಕಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ನನ್ನ ಕೈಯಲ್ಲಿಯೇ ಇದೆ. ಅದರಲ್ಲಿ ಆರು ಮಾರ್ಗ ಸೂಚಿಗಳನ್ನು ಕೊಟ್ಟಿದ್ದಾರೆ. ಆ ಮಾರ್ಗ ಸೂಚಿಗಳಿಗನುಗುಣವಾಗಿ ಕೆಲಸ ಆಗಿದೆಯೋ ಇಲ್ಲವೋ ಎಂಬುದು ನನ್ನ ಪ್ರಶ್ನೆ ಇದೆ. ಬಹುಶಃ ನನಗೆ ಸಿಕ್ಕಿರತಕ್ಕಂಥ ಮಾಹಿತಿಯನ್ನು ತಮಗೆ ಪತ್ರ ಬರೆಯುವುದರ ಮುಖಾಂತರ ತಿಳಿಸಿ ಅದಾದ ಮೇಲೆ ಮುಂದಿನ ಅಧಿವೇಶನದಲ್ಲಿ ಇದನ್ನು ಬೇರೆ ನಿಯಮಾವಳಿಗಳ ರೂಪದಲ್ಲಿ ತೆಗೆದುಕೊಂಡು ಬರುತ್ತೇನೆ. ಆ ಸಂದರ್ಭದಲ್ಲಿ ನಾವು ವಿಸ್ತ್ರತವಾದಂಥ ಚರ್ಚೆಯನ್ನು ಮಾಡೋಣ.

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಯವರೆ, ಆಗಬಹುದು.

**ಉಪಸಭಾಪತಿಯವರು:–** ಈಗ ಬಿಲ್ ಚರ್ಚೆಯನ್ನು ಪ್ರಾರಂಭ ಮಾಡೋಣ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ) ವಿಧೇಯಕ, 2013 ಇದೊಂದು ಸಿಂಪಲ್ ಬಿಲ್ ಇದೆ. ದಯಮಾಡಿ ಅದನ್ನು ಪಾಸ್ ಮಾಡಿ ಕೊಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಇದು ಸಿಂಪಲ್ ಬಿಲ್ ಅಲ್ಲ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರ consequential Bill ಗಳನ್ನೆಲ್ಲಾ ಪಾಸ್ ಮಾಡಿ ಕೊಡುತ್ತೇವೆ. Well will never come in the way of your economic affairs. ನಿಮ್ಮನ್ನು ಸಂಪೂರ್ಣ ರಕ್ಷಣೆ ಮಾಡುತ್ತೇವೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ತಾವು ಕೆಳಗಿನ ಮನೆಯಲ್ಲಿ ಏನಾದರು ಪಾಸ್ ಮಾಡಿಕೊಳ್ಳುತ್ತೀರಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, ಅಲ್ಲಿ ಕೂಡ ಏನೂ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯೂ ಕೂಡ ಕಾನೂನು ಪ್ರಕಾರವೇ ಮಾಡಬೇಕು. ಅಲ್ಲಿಯೂ ಕೂಡ ನಿಯಮಾವಳಿಗಳ ಪ್ರಕಾರವೇ ಮಾಡಬೇಕು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಅಲ್ಲಿ ಚರ್ಚೆಗೂ ಕೂಡ ಭಾರಿ ಅವಕಾಶಗಳು ಆಗಿಲ್ಲ ಎಂದು ಇದೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, ಅಲ್ಲಿಯೂ ಕೂಡ ಬಹಳ ದೀರ್ಘವಾಗಿ ಚರ್ಚೆಯಾಗಿದೆ. ಅಲ್ಲಿ ಸುದೀರ್ಘವಾಗಿ ಎರಡು ಗಂಟೆ ಚರ್ಚೆ ನಡೆದಿದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಇವೊತ್ತು ಅದನ್ನು ತೆಗೆದುಕೊಳ್ಳುವುದು ಬೇಡ. ಮುಂದೆ ತೆಗೆದುಕೊಳ್ಳೋಣ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಮೊನ್ನೆಯಷ್ಟೆ ಬಿ.ಎ.ಸಿ. ಮೀಟಿಂಗ್‌ನಲ್ಲಿ ತಾವು, ಸಭಾನಾಯಕರು ಹಾಗೂ

ಮುಖ್ಯಮಂತ್ರಿಗಳು ಇದ್ದರು. ಅಲ್ಲಿ ಬಿಲ್‌ಗಳ ಬಗ್ಗೆ ಸುದೀರ್ಘ ಚರ್ಚೆಯಾಗಿದೆ. ಅಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಆ ತರಹ ಮಾಡುವುದಿಲ್ಲ, ಬಿಲ್‌ಗಳ ಬಗ್ಗೆ ವಿಸ್ತ್ರತ ಚರ್ಚೆಯಾಗಬೇಕು, ಸದನದಲ್ಲಿ ನಾವು ಬರುವುದೇ ಮಸೂದೆಗಳನ್ನು ಮಾಡಲಿಕ್ಕೆ ಹಾಗಾಗಿ ಕನಿಷ್ಠ ಮೂರು ದಿನಗಳ ಮುಂಚೆಯಾದರು ಬಿಲ್‌ಗಳನ್ನು ಕೊಡುತ್ತೇವೆಂದು ಹೇಳಿದ್ದರು. ಇವೊತ್ತು ಸದನದ ಕೊನೆಯ ದಿನ ಈಗ 5 ಗಂಟೆಯಾಗಿದೆ. ಆದರೆ ಬಹಳ ಪ್ರಮುಖವಾದ ಬಿಲ್ ಬಂದಿದೆ. ನಾವು ಬಿ.ಎ.ಸಿ.ಯಲ್ಲಿ ಮೂರು ದಿನಗಳ ಮುಂಚೆಯಾದರು ಬಿಲ್‌ಗಳನ್ನು ಕೊಡುತ್ತೇವೆಂದು ಹೇಳಿ ಇವೊತ್ತು ಕೊನೆ ಗಳಿಗೆಯಲ್ಲಿ ಬಿಲ್ ಅನ್ನು ತೆಗೆದುಕೊಂಡು ಬಂದಿದ್ದಾರೆ. ನಮಗೆ ಈ ಬಿಲ್ ಅನ್ನು ಪೂರ್ಣವಾಗಿ ಓದಲಿಕ್ಕೂ ಕೂಡ ಆಗಿಲ್ಲ. ಆದ್ದರಿಂದ ಬಿ.ಎ.ಸಿ. ನಿರ್ಣಯದಂತೆ ನಮಗೆ ಸಾಕಷ್ಟು ಅವಕಾಶ ಕೊಟ್ಟು ಈ ಬಿಲ್ ಬಗ್ಗೆ ಸಮಯ ಕೊಡಬೇಕು. ಮತ್ತು ಮುಂದಿನ ದಿನಗಳಲ್ಲಿ ಈ ಬಿಲ್ ಅನ್ನು ತೆಗೆದುಕೊಳ್ಳೋಣ ಎಂದು ವಿನಂತಿ ಮಾಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಬಹುಶಃ ಎಲ್ಲಿಯಾದರೂ ಈ ವಿಧೇಯಕವನ್ನು ಇವೊತ್ತು ಪಾಸ್ ಮಾಡದೆ ಹೋದರೆ ರಾಜ್ಯ ಸರ್ಕಾರ ಬಹಳ ದೊಡ್ಡ ಪ್ರಮಾಣದ ನಷ್ಟವನ್ನು ಅನುಭವಿಸತಕ್ಕಂಥ ಪರಿಸ್ಥಿತಿ ಏನಾದರು ನಿರ್ಮಾಣ ಆಗಿಬಿಟ್ಟರೆ ಅಥವಾ ಈ ಬಿಲ್ ಅನ್ನು ನಾವು ಎಲ್ಲಿಯಾದರು ಅಂಗೀಕಾರ ಮಾಡದೆ ಹೋದರೆ ನಮ್ಮ ಈ ಎ.ಪಿ.ಎಂ.ಸಿ. ಕಟ್ಟಳೆಗಳಿಗೆ ಸಿಕ್ಕಿ ಹಾಕಿಕೊಂಡ ಬೆಳೆಗಾರರು ಯಾರು ಇದ್ದಾರೆ ಅವರು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತಾರೆಂದರೆ ಇದನ್ನು ಪಾಸ್ ಮಾಡಿ ಕೊಡೋಣ. ಆದರೆ ಹಾಗೆ ಇಲ್ಲ. ನಾನು ಎ.ಪಿ.ಎಂ.ಸಿ.ಯ ಬಗ್ಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಅದನ್ನು ಇತರ ಸದಸ್ಯರು ಕೂಡ ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ Agricultural Produce Marketing Committee (APMC) ಏನಿದೆ ಇದು ರೈತರಿಗೆ ಉಪಯೋಗ ಆಗಲಿಕ್ಕೆ ಅವರ ಸಾಮಾನುಗಳನ್ನು ತಂದು ಅಲ್ಲಿ ಪಾರದರ್ಶಕತೆಯಿಂದ ಅಲ್ಲಿ ಮಾರಾಟ ಮಾಡಲಿಕ್ಕಿರತಕ್ಕಂಥ ವ್ಯವಸ್ಥೆಯನ್ನು ಮಾಡಿ ದಲ್ಲಾಳಿಗಳನ್ನು

ಹೊರತರಲಿಕ್ಕಿರತಕ್ಕಂಥ ವಿಧೇಯಕ ತಾನೆ. ಇವೊತ್ತು ಎ.ಪಿ.ಎಂ.ಸಿ. ಎಂದು ಹೇಳತಕ್ಕಂಥದ್ದೆ ಒಂದು ದಲ್ಲಾಳಿ ಸಂಸ್ಥೆ. ಯಾರೂ ಇದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಭಾನಾಯಕರೆ ನೀವು ಈಗ ಆಡಳಿತ ಪಕ್ಷದಲ್ಲಿದ್ದೀರಿ. ನೀವು ನೇರ ಇದು ದಲ್ಲಾಳಿ ಸಂಸ್ಥೆ ಎಂದು ಆಗಲೇ ಹೇಳಿದ್ದೀರಲ್ಲ. ಆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹಿಂದೆ ಸಭಾ ನಾಯಕರು ಹೇಳಿದ್ದರು. ಆದರೆ ಈಗ ಆಡಳಿತ ಪಕ್ಷದಲ್ಲಿರುವುದಲ್ಲಿರುವುದರಿಂದ ಅದನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇನ್ನು ಎರಡು ತಿಂಗಳುಗಳಲ್ಲಿ ನಾವು ಮತ್ತೆ ಸದನ ಸೇರುತ್ತೇವೆ, ಆ ಸಂದರ್ಭದಲ್ಲಿ ಎ.ಪಿ.ಎಂ.ಸಿ.ಯನ್ನು ಸರ್ಕಾರ ಉಳಿಸಿಕೊಳ್ಳಬೇಕೆಂದು ಬಯಸಿದರೆ ಇದು ದಳ್ಳಾಳಿ ಸಂಸ್ಥೆಯಲ್ಲ, ಇದು ರೈತರ ಪರ ಸಂಸ್ಥೆ ಎನ್ನುವಂಥದ್ದು ಸರ್ಕಾರದ ಚಿಂತನೆಯಾದರೆ ನಮ್ಮ ಸಲಹೆಯನ್ನು ಸರ್ಕಾರಕ್ಕೆ ಕೊಡುವುದರ ಮುಖಾಂತರ ಬಹಳ ಸಮಗ್ರವಾಗಿರತಕ್ಕಂತಹ ಕೆಲವು ತಿದ್ದುಪಡಿಯನ್ನು ಎ.ಪಿ.ಎಂ.ಸಿ.ಗೆ ತೆಗೆದುಕೊಂಡು ಬರಬೇಕಾಗುತ್ತದೆ. ಆ ಸಮಯದಲ್ಲಿ ಸರ್ಕಾರದ ಜೊತೆಯಲ್ಲಿ ನಾವು ಕೂಡ ಸಹಕಾರವನ್ನು ಮಾಡುತ್ತೇವೆ. ರೈತರಿಗೆ ಸಂಬಂಧಪಟ್ಟ ಹಾಗೆ ಸರ್ಕಾರ ಮತ್ತು ನಾವು ಒಟ್ಟಾರೆ ಸೇರಿ ಹೋಗೋಣ. ಈ ಹಿನ್ನಲೆಯಲ್ಲಿ ಮುಂದೆ ಅಧಿವೇಶನ ಬರುತ್ತಿರುವುದರಿಂದ ಆ ಸಮಯದಲ್ಲಿ ಈ ತಿದ್ದುಪಡಿ ವಿಧೇಯಕದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡೋಣ. ಇವತ್ತು ಈಗ ಈ ತಿದ್ದುಪಡಿ ವಿಧೇಯಕದ ಕರಡು ಪ್ರತಿಯನ್ನು ಕೊಡಲಾಗಿದೆ. ನಾವು ಇದನ್ನು ತರಾತುರಿಯಲ್ಲಿ ಓದಿಕೊಳ್ಳಬೇಕೇ? ಹಿಂದೆ ಇದೇ ರೀತಿಯಲ್ಲಿ 8–10 ತಿದ್ದುಪಡಿ ವಿಧೇಯಕಗಳು ಬಂದಾಗ ಸಭಾ ನಾಯಕರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಎಷ್ಟು ಹೋರಾಟವನ್ನು ಮಾಡಲಾಯಿತು ಎನ್ನುವುದು ಸಭಾ ನಾಯಕರಿಗೆ ನೆನಪು ಇಲ್ಲವೇ? ನಾವು ಅವರು ಒಟ್ಟಿಗೆ ಧರಣಿ ಕುಳಿತುಕೊಂಡಿದ್ದೆವು. ಆ ಸಂದರ್ಭದಲ್ಲಿ ನಮ್ಮ ಧರಣಿಯನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಹೋಗ್ರೀ ನೀವು ಧರಣಿಯಾದರೂ ಮಾಡಿಕೊಂಡು ಸಾಯಿರಿ ಎಂದು ಕೈ ಎತ್ತಿ ಪಾಸ್ ಮಾಡಿಕೊಂಡು ಬಿಟ್ಟರು. ಅದೇ ರೀತಿ ಈ ಸರ್ಕಾರ ಅದನ್ನು ಮಾಡುವುದಕ್ಕೆ ಏನಾದರು ಹೊರಟರೆ ಸಮಯ ಕೊಡದೇ, ಚರ್ಚೆ ಮಾಡದೇ, ಬಿಲ್‌ನ್ನು

ಏನು ಎಂದೂ ಕೂಡ ನೋಡದೇ ಸರ್ಕಾರ ಕೂಡ ಇದನ್ನು ಪಾಸ್ ಮಾಡಿಕೊಡಬೇಕೆಂದರೆ ನಿಮಗೂ ಮತ್ತು ಅವರಿಗೂ ಏನು ವ್ಯತ್ಯಾಸ. Don't get into the footsteps of those people. ಸಭಾ ನಾಯಕರು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡುವುದಕ್ಕೆ ಬಯಸಿದ್ದಾರೆ. Sir, give us sometime. ದಯವಿಟ್ಟು ಇದರ ಬಗ್ಗೆ ಓದುವುದಕ್ಕೆ ಅಧ್ಯಯನ ಮಾಡುವುದಕ್ಕೆ ಟೈಮ್ ಕೊಡಬೇಕಾಗುತ್ತದೆ. ಮುಂದಿನ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ನನ್ನ ಮಿತ್ರರುಗಳು ಹೇಳಿದ ಹಾಗೆ ಸರ್ಕಾರದ ಜೊತೆಯಲ್ಲಿಯೇ ಚರ್ಚೆ ಮಾಡಿ ಸಮಗ್ರವಾಗಿರತಕ್ಕಂತಹ ಕೆಲವು ತಿದ್ದುಪಡಿಗಳನ್ನು ಸರ್ಕಾರದ ಜೊತೆಯಲ್ಲಿಯೇ ಮಾಡೋಣ. ಆ ಎ.ಪಿ.ಎಂ.ಸಿ.ಯಲ್ಲಿ ಕೆಲಸವನ್ನು ಮಾಡುವಂತಹ ಪ್ರತಿಯೊಬ್ಬರೂ ಕೂಡ ದಳ್ಳಾಳಿಗಳೆ. ಈ ಹಿಂದೆ ಮಂತ್ರಿಗಳಿಗೂ ಕೂಡ ಹೇಳಿ ಬಿಟ್ಟಿದ್ದೇನೆ. . . .

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಅನೇಕ ಬಾರಿ ಶ್ರೀ ಎಂ.ಸಿ. ನಾಣಯ್ಯನವರ ಮಾತುಗಳನ್ನು ಕೇಳಿ ಯಶಸ್ವಿ ಕೂಡ ಆಗಿದ್ದೀರಿ. ಆ ಕಾರಣಕ್ಕೋಸ್ಕರವಾಗಿ ಈಗಲೂ ಕೂಡ ಶ್ರೀ ಎಂ.ಸಿ. ನಾಣಯ್ಯನವರ ಮಾರ್ಗದರ್ಶನವನ್ನು ಸ್ವೀಕಾರ ಮಾಡಬೇಕು. ಅವರು ಹೇಳಿದ್ದನ್ನು ಒಪ್ಪಿಕೊಂಡು ಈ ತಿದ್ದುಪಡಿ ವಿಧೇಯಕವನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೆಂದು ನಾನು ಶ್ರೀ ಎಂ.ಸಿ. ನಾಣಯ್ಯನವರನ್ನೂ ಕೂಡ ಒಳಗೊಂಡಂತೆ ನಿಮ್ಮ ಹತ್ತಿರ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಗೋ. ಮಧುಸೂಧನ್‌ರವರೆ, ಕಳೆದ ಸಂದರ್ಭದಲ್ಲಿ ನಿಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ ನಿಮಗೂ ಕೂಡ ಹೇಳಿದೆ. ದಯವಿಟ್ಟು ಕೇಳಿ, ಕೇಳಿ ಎಂದು ಹೇಳಿದೆ. ಆದರೆ ನನ್ನ ಮಾತುಗಳನ್ನು ಕೇಳಲಿಲ್ಲ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ನಾವು ಶ್ರೀ ಎಂ.ಸಿ. ನಾಣಯ್ಯನವರ ಮಾತುಗಳನ್ನು ಕೇಳಲಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಕೇಳದೇ ಇದುದ್ದರಿಂದ ಈಗ ಪರಿಸ್ಥಿತಿ ಏನಾಯಿತು? ಅದುದರಿಂದ ಅಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಡಿ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಹಿಂದೆ ಶ್ರೀ ಎಂ.ಸಿ. ನಾಣಯ್ಯನವರು ಮಂತ್ರಿಗಳಾಗಿದ್ದಾಗ ಎಷ್ಟೋ ಸಾರಿ ವಿಧಾನ ಪರಿಷತ್ತಿನಲ್ಲಿ ಬಿಲ್‌ಗಳ ಪ್ರತಿ ಇಲ್ಲದೇ ನಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಾಸ್ ಮಾಡಿಕೊಂಡಿದ್ದಾರೆ. ಅಂದರೆ ಕೆಳ ಮನೆಯ ಬಿಲ್ ಪ್ರತಿಯನ್ನು ತಂದು ವಿಧಾನ ಪರಿಷತ್ತಿನಲ್ಲಿ ಪಾಸ್ ಮಾಡಿಸಿಕೊಂಡಿದ್ದಾರೆ.

**Sri M.C. Nanaiah:-** No. At no point of time I have done that. ನಾನು ಒಂದನ್ನು ಹೇಳುತ್ತೇನೆ. ಕೆಲವು ಸಂದರ್ಭದಲ್ಲಿ ಬಹಳ ಪ್ರಮುಖವಾದಂತಹ ವಿಧೇಯಕಗಳನ್ನು, ಹೈಕೋರ್ಟ್‌ನ ಆದೇಶದ ಹಿನ್ನಲೆಯಲ್ಲಿ ತಂದಿರುವಂತಹ ವಿಧೇಯಕಗಳನ್ನು ತೆಗೆದುಕೊಂಡು ಬಂದಾಗ ವಿರೋಧ ಪಕ್ಷದವರ ಜೊತೆಗೆ ಬಂದು ಮಾತುಕತೆ ಮಾಡಿ, ನಿಮ್ಮಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ವಾನುಮತದಿಂದ ಪಾಸ್ ಮಾಡಿಸಿಕೊಂಡು ಹೋಗಿರುವುದು ಉಂಟು. ಆದರೆ ನೀವುಗಳು ಬೇಡ ಎಂದು ಹೇಳಿದಾಗ ನಾನು ವಿಧೇಯಕವನ್ನು ತೆಗೆದುಕೊಂಡು ಬಂದಿಲ್ಲ. ವಿರೋಧ ಪಕ್ಷದವರು ಬೇಡ ಎಂದಾಗ ಯಾವ ಸಂದರ್ಭದಲ್ಲಿ ಬಿಲ್‌ನ್ನು ತೆಗೆದುಕೊಂಡು ಬಂದಿಲ್ಲ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಎ.ಹೆಚ್. ಶಿವಯೋಗಿಸ್ವಾಮಿಯವರು ತಾಂತ್ರಿಕವಾಗಿ ಹೇಳಿದ್ದು ಏನೆಂದರೆ ಕೆಳಗಿನ ಮನೆಯಲ್ಲಿ ಕರ್ನಾಟಕ ವಿಧಾನಸಭೆ ಎಂದು ಪ್ರಿಂಟ್ ಆಗಿರುವಂತಹ ವಿಧೇಯಕದ ಪ್ರತಿಯನ್ನು ತೆಗೆದುಕೊಂಡು ಬಂದು, ಕರ್ನಾಟಕ ವಿಧಾನ ಪರಿಷತ್ತು ಎಂದು ಕೂಡ ಹೊಸದಾಗಿ ಪ್ರಿಂಟ್ ಮಾಡಿಸದೇ ಅದೇ ಬಿಲ್‌ನ್ನು ತೆಗೆದುಕೊಂಡು ಬಂದು ಪಾಸ್ ಮಾಡಿಸಿದ್ದಾರೆಂದು ಹೇಳಿದ್ದು.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಹೌದು.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ನಮ್ಮನ್ನು ಬಹಳ ಪ್ರೀತಿಯಿಂದ ನಡೆಸಿಕೊಂಡಿದ್ದೀರಿ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನಸಭೆ ಎನ್ನುವುದೊಂದನ್ನು ಮಾತ್ರ ಬದಲಾವಣೆ ಮಾಡಿ ಅಲ್ಲಿ ವಿಧಾನ ಪರಿಷತ್ತು ಎಂದಾಗುತ್ತದೆ. ವಿಧಾನ ಸಭೆಯಿಂದ ಅಂಗೀಕೃತವಾದಂತಹ ಎನ್ನುವ ಒಂದು ವಾಕ್ಯವನ್ನು ಮಾತ್ರ ಸೇರಿಸಲಾಗುತ್ತದೆ. ಬಾಕಿ ಎಲ್ಲಾ ಅದೇ ಇರುತ್ತದೆ. ಆದರೆ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ನಾನು ಯಾವತ್ತು ಮಾಡಿಲ್ಲ. ಮಾನ್ಯ ಸಭಾ ನಾಯಕರೆ ದಯವಿಟ್ಟು ಈಗ ಈ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ.

**ಡಾ|| ಶ್ಯಾಮನೂರು ಶಿವಶಂಕರಪ್ಪ:–** ಮಾನ್ಯ ಸಭಾಪತಿಯವರೆ, ಇದು ರೈತರ ಪರವಾಗಿದೆ. ದಯವಿಟ್ಟು ಈ ತಿದ್ದುಪಡಿ ವಿಧೇಯಕವನ್ನು ಪಾಸ್ ಮಾಡಿಕೊಡಿ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಶ್ಯಾಮನೂರು ಶಿವಶಂಕರಪ್ಪನವರೆ, ನೀವು ನಮ್ಮನ್ನು ವಿರೋಧ ಮಾಡಿದರೂ ಕೂಡ ನಾವು ನಿಮ್ಮ ಪರವಾಗಿಯೇ ಇದ್ದೇವೆ.

**ಡಾ|| ಶ್ಯಾಮನೂರು ಶಿವಶಂಕರಪ್ಪ:–** ಮಾನ್ಯ ಸಭಾಪತಿಯವರೆ, ನೀವುಗಳೆಲ್ಲರೂ ನನ್ನ ಪರವಾಗಿದ್ದರೆ ದಯವಿಟ್ಟು ಈ ತಿದ್ದುಪಡಿ ವಿಧೇಯಕವನ್ನು ಪಾಸ್ ಮಾಡಿಕೊಡಿ. ಇದರಲ್ಲಿ ಅನ್ಯಾಯ ಮಾಡುವಂಥದ್ದನ್ನು ಏನೂ ಸೇರಿಸಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಸರ್ಕಾರ ಹೇಗಿದ್ದರೂ ಮುಂದಿನ ಅಧಿವೇಶನವನ್ನು ಬೆಳಗಾವಿಯಲ್ಲಿ ಮಾಡುತ್ತಾರೆ. ಅಲ್ಲಿ ಪಾಸ್ ಮಾಡಿಕೊಡೋಣ ಬಿಡಿ.

**ಡಾ|| ಶ್ಯಾಮನೂರು ಶಿವಶಂಕರಪ್ಪ:–** ಮಾನ್ಯ ಸಭಾಪತಿಯವರೆ, ಈ ತಿದ್ದುಪಡಿ ವಿಧೇಯಕದಲ್ಲಿ ರೈತರಿಗೆ ಅನುಕೂಲವಾಗುವಂತಹ ವಿಚಾರಗಳನ್ನು ಒಳಗೊಂಡಿದೆ. ರೈತರು ಬೆಳೆದಂತಹ ಪದಾರ್ಥಗಳಿಗೆ ಪಾರದರ್ಶಕವಾಗಿ ಒಳ್ಳೆಯ ದರ ಸಿಗಬೇಕು. ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿ ವಿಧೇಯಕವನ್ನು ತೆಗೆದುಕೊಂಡು ಬರಲಾಗಿದೆ. ನಾವು ಈ ತಿದ್ದುಪಡಿ ವಿಧೇಯಕದ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ಹೇಳುವುದಿಲ್ಲ. ದಳ್ಳಾಳಿಗಳ ಪಾತ್ರವನ್ನು ಈ ತಿದ್ದುಪಡಿ ವಿಧೇಯಕದಿಂದ ತೆಗೆದು ಹಾಕುತ್ತಿದ್ದೇವೆ. ನೇರವಾಗಿ ರೈತ ಮತ್ತು ಖರೀದಿದಾರ ಇರುತ್ತಾನೆ. ಮತ್ತೆ ರೈತರಿಗೆ ನೇರವಾಗಿ ಹಣ ಚೆಕ್ ಮುಖಾಂತರ ಸಂದಾಯವಾಗಬೇಕು. ಇದೆಲ್ಲವೂ ಕೂಡ ಈ ತಿದ್ದುಪಡಿ ವಿಧೇಯಕದಲ್ಲಿ ಅಡಕವಾಗಿದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಈಗ ಈ ತಿದ್ದುಪಡಿ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಈಗ ಆ ತಿದ್ದುಪಡಿ ವಿಧೇಯಕದ ವಿವರಗಳನ್ನು ಹೇಳುವುದು ಬೇಡ. ಏಕೆಂದರೆ, ನಾನು ಇದನ್ನು ಓದಬೇಕೆಂದರೆ ಓದುತ್ತೇನೆ. ಓದುವುದಿಲ್ಲವೆಂದು ಹೇಳುವುದಿಲ್ಲ. ಆದರೆ ಇದರ ಮೆರಿಟ್ ಬಗ್ಗೆ ನಾನು ಇಷ್ಟು ಹೊತ್ತಿನವರೆಗೆ ಹೇಳಿಲ್ಲ. ಆದರೆ ಮೇಲ್ನೋಟಕ್ಕೆ private sector ನ್ನು ಎ.ಪಿ.ಎಂ.ಸಿ.ಯ ಒಳಗಡೆ ಸೇರಿಸುವಂತಹ ಎಲ್ಲಾ ಕೆಲಸ ಕಾರ್ಯಗಳು ಇದರಲ್ಲಿ ನಡೆಯುತ್ತಿದೆ. ಇದನ್ನೆಲ್ಲಾ ನಾವು ವಿಶ್ಲೇಷಣೆ ಮಾಡಿ ಸರ್ಕಾರಕ್ಕೆ ಹೇಳಬೇಕಾದರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸುದೀರ್ಘವಾದಂತಹ ಸಮಯ ಬೇಕಾಗುತ್ತದೆ. ಮತ್ತೆ ಖಾಸಗಿಯವರನ್ನೂ ಕೂಡ ಎ.ಪಿ.ಎಂ.ಸಿ. ಒಳಗೆ ಪ್ರವೇಶ ಮಾಡುವುದಕ್ಕೆ ಈ ತಿದ್ದುಪಡಿ ವಿಧೇಯಕ ಪಾಸ್ ಆದ ನಂತರ ಬಿಡಲಾಗುತ್ತದೆ. ಇದರಿಂದ ಬಹಳ ಗಂಭೀರವಾದಂತಹ ಪರಿಣಾಮಗಳಾಗುತ್ತದೆ. ಆದಕಾರಣ ಇದರ ಬಗ್ಗೆ ಚರ್ಚೆಗಳನ್ನು ಮಾಡೋಣ. ಚರ್ಚೆಗಳನ್ನು ಮಾಡಿದ ಮೇಲೆ ಇದರ ಸಾಧಕ ಬಾಧಕಗಳ ಬಗ್ಗೆ ಇನ್ನಷ್ಟು ಬೆಳಕನ್ನು ಚೆಲ್ಲಿದ ಮೇಲೆ ನಿಮ್ಮ ಮನಸ್ಸಿಗೆ ಒಪ್ಪುವಂತೆ ಮಾಡೋಣ. ಆದರೆ ಇವತ್ತು ಒಂದೆರಡು ದಿನಗಳಲ್ಲಿ ದೊಡ್ಡ ಸಂಗತಿಗಳಾಗುವುದಿಲ್ಲ.

**(ಈ ಹಂತದಲ್ಲಿ ಸಭಾಪತಿಗಳಾದ ಶ್ರೀ ಡಿ.ಹೆಚ್. ಶಂಕರಮೂರ್ತಿರವರು ಪೀಠವನ್ನು ಆಲಂಕರಿಸಿದರು)**

ಇವತ್ತು ನಾವು ನಮ್ಮ ಸಭಾ ನಾಯಕರಾದ ಶ್ರೀ ಎಸ್.ಆರ್. ಪಾಟೀಲ್‌ರವರ ಹುಟ್ಟು ಹಬ್ಬದ ಆಚರಣೆಗೆ ಆರು ಗಂಟೆಗೆ ಹೋಗಬೇಕಾಗಿದೆ.

**ಶ್ರೀ ಅಲ್ಲಮ್ಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ತಿದ್ದುಪಡಿ ವಿಧೇಯಕ ವಿಧಾನಸಭೆಯಲ್ಲಿ ಪಾಸ್ ಆಗಿ ಇಲ್ಲಿ ಬಂದಿದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಈ ತಿದ್ದುಪಡಿ ವಿಧೇಯಕ ರೈತರಿಂದ ವ್ಯಾಪಾರಿಗಳು ಕೊಂಡುಕೊಳ್ಳುವಂಥದ್ದರ ಬಗ್ಗೆ ಇದೆ. ಪೂರ್ಣ ಖಾಸಗೀಕರಣವಾಗುವಂಥದ್ದು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಇದು ಎಲ್ಲಿಯೋ ಒಂದು ಹಂತಕ್ಕೆ ಮುಟ್ಟಿದೆ ಎಂದರೆ, ತಾವೇ ಒಂದು ಆದೇಶವನ್ನು ಮಾಡಬೇಕಾಗಿದೆ. ಏಕೆಂದರೆ ಮೊನ್ನೆಯ ದಿವಸ ನಡೆದಂತಹ Business Advisory Committee ಯಲ್ಲಿ ನಾವು ಬಹಳ ಚೆನ್ನಾಗಿ ಚರ್ಚೆಯನ್ನು ಮಾಡಿದ್ದೇವೆ. ವಿಧೇಯಕಗಳನ್ನು ತೆಗೆದುಕೊಂಡು ಬಂದಾಗ ಅದರ ಕರಡು ಪ್ರತಿಯನ್ನು ಮೂರು ದಿವಸಗಳ ಮುಂಚಿತವಾಗಿ ಎಲ್ಲಾ ಸದಸ್ಯರುಗಳಿಗೆ ಕೊಡಬೇಕೆಂದು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಈ ಅಧಿವೇಶನದಲ್ಲಿ ನಮ್ಮ Business Advisory Committee ತೀರ್ಮಾನಕ್ಕೆ ವಿರುದ್ಧವಾಗಿ ಸರ್ಕಾರದವರು ಕಾರ್ಯಾಚಾರಣೆಯನ್ನು ಪ್ರಾರಂಭ ಮಾಡಿದರೆ, ಇದು ಎಷ್ಟರಮಟ್ಟಿಗೆ ಸರಿ ಎಂದು ಇದರ ಔಚಿತ್ಯವನ್ನು ಪ್ರಶ್ನೆ ಮಾಡುತ್ತೇನೆ. ಮುಂದಿನ ಅಧಿವೇಶನದಲ್ಲಿ ಆಗಿದ್ದರೆ ತೊಂದರೆ ಇಲ್ಲ. ನಾವು ಖಂಡಿತವಾಗಿ ಆ ಸ್ಥಾನದ ಬಗ್ಗೆ ಹೇಳುವುದಿಲ್ಲ. ನಾವೆಲ್ಲರೂ ಸೇರಿಕೊಂಡು Business Advisory Committee ಯಲ್ಲಿ ಮೂರು ದಿನಗಳ ಮುಂಚಿತವಾಗಿ ವಿಧೇಯಕ ಕರಡು ಪ್ರತಿಯನ್ನು ಕೊಡುತ್ತೇವೆ, ಅದನ್ನು ಕೊಡಲೇಬೇಕೆಂದು ಎಲ್ಲಾ ಮಾಡಿಕೊಂಡ ಮೇಲೆಯೂ ಕೂಡ ಸರ್ಕಾರ ಈಗ ವಿಧೇಯಕದ ಕರಡು

ಪ್ರತಿಯನ್ನು ಕೊಟ್ಟು ಈಗ ಪಾಸ್ ಮಾಡಿಕೊಡಿ ಎಂದು ಮಾಡಿದರೆ ಹೇಗೆ? ಸಣ್ಣ ಪುಟ್ಟದ್ದನ್ನು ಬೇಕಾದರೆ ಮಾಡಿಕೊಳ್ಳೋಣ ಅದಕ್ಕೆ ನಾವು ಏನು objection ಮಾಡಲ್ಲ. ಆದರೆ ಇದೊಂದು major ತಿದ್ದುಪಡಿ ವಿಧೇಯಕವಾಗಿದೆ. ಇವತ್ತು ಪರ್ಯಾಲೋಚನೆಗೆ ತೆಗೆದುಕೊಂಡರೆ ಇದರ ಬಗ್ಗೆ ಚರ್ಚೆ ಮಾಡಿ ಪಾಸ್ ಮಾಡುವುದಕ್ಕಾಗುವುದಿಲ್ಲ. ಇವತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇಫ್ತಾರ್ ಕೂಟವನ್ನು ಏರ್ಪಡಿಸಿದ್ದಾರೆ. ಅದಕ್ಕೂ ಕೂಡ ನಾವು ಹೋಗಬೇಕು.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ನಾನು ಆ ಇಫ್ತಾರ್ ಕೂಟಕ್ಕೆ ಹೋಗಬೇಕಾಗಿದೆ. ಇವತ್ತಿನ ದಿವಸ ಈ ತಿದ್ದುಪಡಿ ವಿಧೇಯಕವನ್ನು ಓದುವುದಕ್ಕೆ ಅವಕಾಶ ಕೊಡಿ ಇದನ್ನು ಚೆನ್ನಾಗಿ ಓದಿಕೊಂಡು ಬರುತ್ತೇವೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಸಹಕಾರ ಸಂಘಗಳಿಂದ ಎ.ಪಿ.ಎಂ.ಸಿ ಯನ್ನು ಖಾಸಗೀಕರಣ ಮಾಡತಕ್ಕಂಥದ್ದು. ಖಾಸಗೀಕರಣ ಮಾಡುವುದಾದರೆ ಮತ್ತೆ ಏಕೆ ಸಹಕಾರ ಸಂಘಗಳು ಬೇಕು? ಸರ್ಕಾರ ಏಕೆ ಇರಬೇಕು. ಏನೇ dispute ಬಂದರೆ ಅಧಿಕಾರಿ ಏನು ಬೇಕಾದರೂ ತೀರ್ಮಾನವನ್ನು ತೆಗೆದುಕೊಳ್ಳಬಹುದು. ಅಧಿಕಾರಿ ಮತ್ತು ವ್ಯಾಪಾರಿ ಇಬ್ಬರು ಜೊತೆಯಾದರೆ ರೈತರ ಕಥೆ ಮುಗಿಯಿತು. ಅದು ಈ ತಿದ್ದುಪಡಿ ವಿಧೇಯಕದಲ್ಲಿ ಮುಖ್ಯವಾಗಿ ಇರುವಂಥದ್ದು. ದಯವಿಟ್ಟು ಸಭಾ ನಾಯಕರು ಮತ್ತು ಮಂತ್ರಿಗಳು ಇದನ್ನು ಓದಿ ನೋಡಬೇಕು. ಪಾಪ ಮಾನ್ಯ ಸಚಿವರಾದ ಶ್ಯಾಮನೂರ ಶಿವಶಂಕರಪ್ಪನವರು ಅಷ್ಟು ಓದುವುದಕ್ಕೆ ಕಷ್ಟವಾಗುತ್ತದೆ.

**ಸಭಾಪತಿಯವರು:–** ಈಗ ಸಭೆಯ ಮುಂದಿರುವಂತಹ ವಿಷಯ ಏನೆಂದರೆ ಈ ಬಿಲ್‌ನ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ ಏಕೆಂದರೆ ಈ ಬಿಲ್ ಇನ್ನು introduce ಆಗಿಲ್ಲ. Bill introduce ಮಾಡಬೇಕೆಂದು ಸಚಿವರು ಪ್ರಯತ್ನ ಮಾಡಿದಾಗ ವಿರೋಧ ಪಕ್ಷದ

ನಾಯಕರು ಮತ್ತು ಹಿರಿಯ ಸದಸ್ಯರಾದಂತಹ ಶ್ರೀ ಎಂ.ಸಿ. ನಾಣಯ್ಯನವರು ಮತ್ತು ಬಹಳಷ್ಟು ಜನ ಸದಸ್ಯರು ಈಗ ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದು ಬೇಡ ಎಂದು ಹೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಏನು ಹೇಳುತ್ತದೆ. ಕೇಳೋಣ. ಆಮೇಲೆ ಮುಂದೆ ಏನು ಮಾಡಬೇಕೆಂದು ನಿರ್ಣಯ ಮಾಡೋಣ. ಅದನ್ನು ಬಿಟ್ಟು ವಿಧೇಯಕದ merits ಮತ್ತು de-merits ಬಗ್ಗೆ ಚರ್ಚೆ ನೀವು ಪ್ರಾರಂಭ ಮಾಡಿದರೆ, ನಾನು ಏನೆಂದು ತೀರ್ಮಾನ ಮಾಡಬೇಕು. ಈ ಬಿಲ್‌ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬಾರದೆಂದು ಹೇಳಿರುವುದರಿಂದ ಈ ವಿಧೇಯಕವನ್ನು ಇನ್ನು ಮಂಡನೆಯನ್ನೇ ಮಾಡಿಲ್ಲ. ಸಭೆಯ ಮುಂದೆ ಇಡಲಾದ ಕಾಗದ ಪತ್ರಗಳ ಮುಖಾಂತರ ಮಾನ್ಯ ಕಾರ್ಯದರ್ಶಿಯವರು ತಿದ್ದುಪಡಿ ವಿಧೇಯಕದ ಕರಡು ಪ್ರತಿಗಳನ್ನು ಎಲ್ಲಾ ಸದಸ್ಯರುಗಳಿಗೆ ಕೊಟ್ಟಿದ್ದಾರೆ. ಈಗ ತಿದ್ದುಪಡಿ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಬೇಡ ಎಂದು ಹೇಳುತ್ತಿದ್ದಾರೆ. ಅದನ್ನು ಮಂಡನೆ ಮಾಡಬೇಕೋ, ಬೇಡವೋ, ಅದನ್ನು ಮಂಡನೆ ಮಾಡಿದರೂ ಕೂಡ ಅದನ್ನು ಪರ್ಯಾಲೋಚನೆಗೆ ಈಗ ತೆಗೆದುಕೊಳ್ಳಬೇಕೋ ಇಲ್ಲ ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರದ ಪರವಾಗಿರುವಂತಹ ನಿಲುವುವನ್ನು ಸಭಾ ನಾಯಕರು ಏನಾದರು ಹೇಳಿದರೆ ನಾನು ಅಲ್ಲಿಂದ ನಿರ್ಣಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರ ಏನಾದರು ತಮ್ಮ ಮಾತಿಗೆ ಸ್ಪಂದಿಸಿ ಬೇರೆ ರೀತಿಯ ನಿರ್ಣಯವನ್ನು ತೆಗೆದುಕೊಂಡರೆ ಅದನ್ನೂ ಕೂಡ ಹೇಳಬೇಕಾಗುತ್ತದೆ. ಅದನ್ನು ನಾನು ನೋಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೆ, ಕಳೆದ ಎರಡು ದಿವಸಗಳ ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರು ಒಂದು ತಿದ್ದುಪಡಿ ವಿಧೇಯಕವನ್ನು ತೆಗೆದುಕೊಂಡು ಬಂದಾಗ ಬಹುಶಃ ಅದಕ್ಕೆ ನಾವು ಸ್ವಲ್ಪ ಮಟ್ಟಿಗೆ ತಿಳಿ ಹೇಳಿದಾಗ ಮಾನ್ಯ ಸಭಾಪತಿಯವರ ಕೊಠಡಿಯಲ್ಲಿ ಚರ್ಚೆಯಾಗಿ ಒಪ್ಪಿಯಾದ ಮೇಲೆ ಬಹಳ ಸೌಹಾರ್ದಯುತವಾಗಿ ಇತ್ಯರ್ಥವಾಯಿತು. ನಾನು ಇವತ್ತು ಕೂಡ

ಹೇಳುತ್ತಿದ್ದೇನೆ. ದಯವಿಟ್ಟು ಈ ವಿಧೇಯಕದ ಮೇಲೆ ಪರ್ಯಾಲೋಚನೆಗೆ ಮಾಡುವುದು ಬೇಡ. Let the Bill lie over. Subject to the condition ಅವರು ಒಪ್ಪಿದರೆ ಮಾತ್ರ. ಬಹುಶಃ ನಾವು ಹೇಳಿರತಕ್ಕಂಥದ್ದನ್ನು ಅವರು ಒಪ್ಪದೆ ಹೋದರೆ, ಈ ವಿಧೇಯಕವನ್ನು ಮಂಡಿಸುವುದಕ್ಕೆ ಇರುವಂತಹ ಸಂದರ್ಭದಲ್ಲಿ ಕೂಡ ನಾವು ನಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡಲು ಅವಕಾಶವಿರುವುದರಿಂದ ನಾವು ನಮ್ಮ ವಿಚಾರಗಳನ್ನು ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡಿಬಿಡುತ್ತೇವೆ, then you can’t even introduce the Bill. ನೀವು ವಿಧೇಯಕವನ್ನು ಮಂಡಿಸುವುದಕ್ಕಾಗುವುದೇ ಇಲ್ಲ. ಆದರೆ ಸರ್ಕಾರದವರು ಚರ್ಚೆಗೆ ಒಪ್ಪುವುದಾದರೆ ಮುಂದಿನ ಅಧಿವೇಶನದಲ್ಲಿ we will allow you to introduce the Bill. Let it lie over. ಬೇಕಾದರೆ ಇನ್ನೊಂದು Session ನಲ್ಲಿ ಇದನ್ನು ತೆಗೆದುಕೊಳ್ಳೋಣ. ಇಲ್ಲ, ಮಂಡಿಸುವಾಗಲೇ ನಾವು ಹೇಳುವುದನ್ನು ತಾವು ಒಪ್ಪುವುದಿಲ್ಲ ಎನ್ನುವುದಾದರೆ we will allow the Bill to be introduced on the floor of the House. Let me make it very clear to you, because that is the procedure. ಈ ವಿಧೇಯಕದ ಬಗ್ಗೆ ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ ಎಂದು ದಯವಿಟ್ಟು ನಮಗೆ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು. ಹಾಗಿದ್ದರೆ ಈಗ ವಿಧೇಯಕವನ್ನು ಮಂಡಿಸಲಿ, let the Bill lie over. ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಅತ್ಯಂತ ಹಿರಿಯರಾಗಿದ್ದು ಸಾಕಷ್ಟು ಅನುಭವಿಗಳಿದ್ದಾರೆ. ಈ ವಿಧೇಯಕದ ಬಗ್ಗೆ ಸಾಕಷ್ಟು ಟಿಪ್ಪಣಿಗಳನ್ನೆಲ್ಲಾ ಮಾಡಿಕೊಂಡು ಬಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಇವೊತ್ತು ‘Birthday’ ಇದೆ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದರು, Birthday ಅತ್ಯಂತ ಸೌಹಾರ್ದಯುತವಾದಂತಹ ವಾತಾವರಣದಲ್ಲಿ ನಾವೆಲ್ಲರೂ ಸೇರಿ ಆಚರಿಸಿಕೊಂಡಿದ್ದಾಯಿತು. ತಾವೀಗ ಈ ವಿಧೇಯಕವೊಂದನ್ನು ಪಾಸ್ ಮಾಡಿಕೊಟ್ಟರೆ ಇದು Birthday gift ಆಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೆ, ನಮ್ಮ ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನಕ್ಕೂ ಸ್ವಲ್ಪ ಗೌರವ ನೀಡಬೇಕಲ್ಲವೇ? ನಾನು ಈ ವಿಚಾರದಲ್ಲಿ ಹೆಚ್ಚು ಖಾರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಹಾಗಿದ್ದರೆ ಕಾರ್ಯಕಲಾಪಗಳ ಸಲಹಾ ಸಮಿತಿಯ ಮೀಟಿಂಗ್‌ನಲ್ಲಿ ನಾವೇಲ್ಲಾ ಏಕೆ ಭಾಗವಹಿಸಬೇಕು? ಏಕೆ ನಿರ್ಣಯಗಳನ್ನು ತೆಗೆದುಕೊಳ್ಳಬೇಕು? ಅಂತಹ ತುರ್ತು ಅಗತ್ಯವಿದ್ದರೆ ಯಾವುದೋ ಒಂದು ವಿಶೇಷ ಪರಿಸ್ಥಿತಿಯಲ್ಲಾದರೆ ಆಯಿತು, ಇದು ಅನಿವಾರ್ಯ, ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಇದು ಅನಿವಾರ್ಯ ಎಂದು ಹೇಳಿದರೆ ನಮ್ಮ ತೀರ್ಮಾನಗಳನ್ನು ಸ್ವಲ್ಪಮಟ್ಟಿಗೆ ನಾವು ಉಲ್ಲಂಘನೆ ಮಾಡಿ ಅಥವಾ ಅದನ್ನು ಸ್ವಲ್ಪ ಬದಿಗೊತ್ತಿ ನಾವು ಸಹಕಾರ ಮಾಡುವಂಥದ್ದು ಸ್ವಾಭಾವಿಕ. ಈಗಾಗಲೇ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಇದನ್ನು ಸದನದಲ್ಲಿ ಮಂಡನೆ ಮಾಡಿದ್ದಾರೆ. ಹೀಗಾಗಿ ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಕಾರ್ಯದರ್ಶಿಯವರು ವಿಧೇಯಕವನ್ನು ಮಂಡನೆ ಮಾಡಿದ ಮೇಲೆ ಏನಾಯಿತು?

**Mr. CHAIRMAN:-** Now, it is the property of the House.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಹಾಗಿರುವಾಗ ಮಾನ್ಯ ಸಚಿವರು ಈಗ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೆ ಹೇಳಬೇಕೇ ಹೊರತು ಮತ್ತೇನು ಮಾಡಲಿಕ್ಕುಂಟು? ಆದಕಾರಣ ನಾನು ಹೇಳುವಂಥದ್ದು, ನಾವು ಮಾಡಿದಂತಹ ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನವನ್ನು ನಾವೇ overrule ಮಾಡಿಕೊಂಡು ಹೋಗುವಂಥದ್ದು ಖಂಡಿತವಾಗಿಯೂ ಒಳ್ಳೆಯ ಸಂಪ್ರದಾಯವಲ್ಲ. ಈ ರೀತಿ ಬಹಳ ದೊಡ್ಡ ತುರ್ತು ಸಂದರ್ಭವಿದ್ದಂತಹ ಸಂದರ್ಭದಲ್ಲಿ, ನೆರೆ ಬಂದಿದೆ, ಕಡಲ ಕೊರೆತ ಉಂಟಾಗಿ ಬಹಳ ತೊಂದರೆಗಳಾಗುತ್ತವೆ, ಇಂತಹ ವಿಚಾರಗಳನ್ನು ಮಂಡನೆ ಮಾಡುವುದಕ್ಕಾಗಿ ವಿಧೇಯಕವನ್ನು ತರುವಂತಿದ್ದರೆ ನಾವು ಸಹ ಅದನ್ನು ಒಪ್ಪಿಕೊಳ್ಳುತ್ತಿದ್ದೆವು.

ಆದರೆ ನಾವೇ ಮಾಡಿದಂತಹ ತೀರ್ಮಾನಗಳನ್ನು ನಾವು overtake ಮಾಡುವಂಥದ್ದು ಮತ್ತು ಹೀಗೆಯೇ ಆಗಬೇಕೆಂದು ಹೇಳುವಂಥದ್ದು ಸರಿಯಲ್ಲ. ನಾವು ಮಾತ್ರವಲ್ಲ, ವಿರೋಧ ಪಕ್ಷದವರೆಲ್ಲರೂ, ಜೆ.ಡಿ.ಎಸ್. ನಾಯಕರು ಎಲ್ಲರೂ ಎದ್ದುನಿಂತು ಈ ವಿಧೇಯಕದ ಬಗ್ಗೆ ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ ಎಂದು ಕೇಳುತ್ತಿದ್ದಾರೆ. ಆಗುವುದಿಲ್ಲ ಎನ್ನುವುದಾದರೆ, ನಮ್ಮ ಸಹಕಾರಗಳು ಬೇಡ ಎನ್ನುವಂತಹ ಅಪೇಕ್ಷೆ ಸರ್ಕಾರದವರಿಗಿದ್ದರೆ ನಡೆಯಲಿ, ಚರ್ಚೆಗೆ ತೆಗೆದುಕೊಳ್ಳಲಿ, ನಾವು ತಯಾರಿದ್ದೇವೆ, ಚರ್ಚೆ ಮಾಡುತ್ತೇವೆ. ಏನಾಗುತ್ತದೆಯೋ ನೋಡೋಣ. ನಾವು ಸಹ ಇದನ್ನು Logical end ಗೆ ತೆಗೆದುಕೊಂಡು ಹೋಗುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಆಡಳಿತ ಪಕ್ಷದವರಿಗೇ ಆಸಕ್ತಿ ಇಲ್ಲ, ಅಲ್ಲಿ ಎಷ್ಟು ಜನ ಮಾನ್ಯ ಸದಸ್ಯರಿದ್ದಾರೆ? ಸಂಬಂಧಪಟ್ಟ ಸಚಿವರ ಜೊತೆಗೆ ಮತ್ತೊಬ್ಬರು ಮಂತ್ರಿಗಳಿದ್ದಾರೆ. ಅವರಿಗೇ ಆಸಕ್ತಿ ಇಲ್ಲ ಎಂದರೆ ಮತ್ತೆ ಹೇಗೆ ಚರ್ಚೆ ಮಾಡಬೇಕು?

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಧೇಯಕಗಳು ಸರ್ಕಾರದ ಕಲಾಪವಾಗಿರುತ್ತದೆ, ಸರ್ಕಾರದ ಕಲಾಪಗಳ ಸಂದರ್ಭದಲ್ಲಿಯೇ ಸರ್ಕಾರದವರು ಇರುವುದಿಲ್ಲವೆಂದರೆ ಇನ್ನು ಬೇರೆ ಕಲಾಪಗಳ ಸಂದರ್ಭದಲ್ಲಿ ಎಲ್ಲಿರುತ್ತಾರೆ? ಮಾನ್ಯ ಶಾಮನೂರು ಶಿವಶಂಕರಪ್ಪನವರಿಗೆ ಉನ್ನತ ಶಿಕ್ಷಣ ಇಲಾಖೆಯ ಜವಾಬ್ದಾರಿಯನ್ನು ವಹಿಸಿದ್ದರೆ ಚೆನ್ನಾಗಿರುತ್ತಿತ್ತು.

**ಡಾ॥ ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳಿಗೆ ವರವಾಗಿರುವುದು ರೈತರಿಗೆ ಅಭಿಶಾಪವಾಗಿಬಿಡಬಹುದು. ಆದ್ದರಿಂದ ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆ ಮಾಡಬೇಕಾದ ಅಗತ್ಯವಿರುವುದರಿಂದ ಈಗ ಸಧ್ಯಕ್ಕೆ ಇದನ್ನು ತೆಗೆದುಕೊಳ್ಳುವುದು ಬೇಡವೆಂಬುದು ನನ್ನ ಅಭಿಪ್ರಾಯ ಕೂಡ ಆಗಿದೆ.

**ಶ್ರೀ ಅಲ್ಲಮ್ಮಪ್ರಭು ಪಾಟೀಲ್:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಮಾನ್ಯ ಶಾಮನೂರು ಶಿವಶಂಕರಪ್ಪನವರು ಅತ್ಯಂತ ಹಿರಿಯ ಸಚಿವರಾಗಿದ್ದು, ಈಗಾಗಲೇ ಅವರು ತಂದಿರುವಂತಹ ಈ ವಿಧೇಯಕ ಕೆಳಮನೆಯಲ್ಲಿ ಅನುಮೋದನೆಗೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ವಿಧೇಯಕವನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಹಿರಿಯ ನಾಗರಿಕರಿಗೆ ಎಲ್ಲಾ ಕಡೆ ವಿನಾಯಿತಿ ಇದೆ. ಆದ್ದರಿಂದ ತಾವು ಸಹ ಹಿರಿಯ ಸಚಿವರೆಂಬ ಕಾರಣದಿಂದ ಸ್ವಲ್ಪ ವಿನಾಯಿತಿ ಕೊಡಬೇಕೆಂಬುದು ನನ್ನ ವಿನಂತಿಯಾಗಿದೆ. ಅವರು ತಂದಿರುವಂತಹ ವಿಧೇಯಕದಿಂದ ಅಂತಹ ದೊಡ್ಡ ಅನಾಹುತ ಆಗುವುದಿಲ್ಲ. A.P.M.C., ಎಂದರೆ ಬಹಳ ದೊಡ್ಡ ದಳ್ಳಾಳಿ ಖಾತೆ ಎಂದು ಈಗಾಗಲೇ ಮಾನ್ಯ ನಾಣಯ್ಯನವರು ತಿಳಿಸಿದರು. ಆ ವಿಚಾರಗಳ ಬಗ್ಗೆ ಬೇರೆ ಸಂದರ್ಭಗಳಲ್ಲಿ ಚರ್ಚೆ ಮಾಡೋಣ. ಆದರೆ ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಹಿರಿಯ ನಾಗರೀಕರೆಂಬ ಕಾರಣಕ್ಕಾಗಿ ಸ್ವಲ್ಪ ವಿನಾಯಿತಿ ನೀಡಬೇಕೆಂಬುದು ನಮ್ಮ ಕಳಕಳಿಯಾಗಿದೆ.

(ಗೊಂದಲ)

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಿಗೆ ಇನ್ನೂ ಹೆಚ್ಚಿನ ಪದವಿಯನ್ನು ಕೊಡಿರಿ. ಆ ವಿಚಾರದಲ್ಲಿ ನಾವು ಸಂತೋಷ ಪಡುತ್ತೇವೆ. ಆದರೆ ಈ ವಿಧೇಯಕದ ಬಗ್ಗೆ ಹೆಚ್ಚಿನ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬುದು ನಮ್ಮ ವಿನಂತಿಯಾಗಿದೆ.

**ಸಭಾಪತಿಯವರು:-** ಈ ಬಗ್ಗೆ ಮಾನ್ಯ ಸಚಿವರೇನು ಹೇಳುತ್ತಾರೆಯೋ ಕೇಳೋಣ.

**ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿರುವಂತಹ ವಿಚಾರಗಳನ್ನೆಲ್ಲಾ ನಾವು ಗಮನಿಸಿದ್ದೇವೆ. ಈ ವಿಧೇಯಕದಲ್ಲಿ ಅವರು ಅನುಮಾನ ಪಡತಕ್ಕಂತಹ, ಶಂಕೆ ಪಡತಕ್ಕಂತಹ ವಿಚಾರಗಳು

ಯಾವುವೂ ಇಲ್ಲವೆಂಬುದನ್ನು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಏಕೆಂದರೆ ಇದು ಪಾರದರ್ಶಕವಾದ ವ್ಯವಹಾರವಾಗಿದ್ದು, ಬಹಳ ಪ್ರಮುಖವಾದಂತಹ ಈ ವಿಧೇಯಕವನ್ನು ನಾವು ಇಡೀ ರಾಷ್ಟ್ರದಲ್ಲಿಯೇ ಮೊದಲನೆಯದಾಗಿ ಮಂಡಿಸುತ್ತಿದ್ದೇವೆ. ಏಕೆಂದರೆ ಈ ವಿಧೇಯಕವನ್ನು ತರಬೇಕೆಂಬುದಾಗಿ ಉನ್ನತವಾದ ಸಮಿತಿಯವರು ತೀರ್ಮಾನ ಮಾಡಿ ದಳ್ಳಾಳಿಗಳು, ವ್ಯಾಪಾರಸ್ಥರು, ರೈತರು ಎಲ್ಲರನ್ನೂ ಸಂದರ್ಶನ ಮಾಡಿ ಆಗತಕ್ಕಂತಹ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಈ ವಿಧೇಯಕ ಇದೆಯೇ ಹೊರತು ವ್ಯಾಪಾರಸ್ಥರಿಗೆ ಅಥವಾ ದಳ್ಳಾಳಿಗಳಿಗೆ ಅನುಕೂಲ ಮಾಡತಕ್ಕಂತಹ ವಿಧೇಯಕ ಇದಲ್ಲ ಎನ್ನುವುದನ್ನು ನಾನು ಮತ್ತೊಮ್ಮೆ ತಮಗೆ ಹೇಳಬಯಸುತ್ತಿದ್ದೇನೆ. ಇದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ, ಸಾಗಾಣಿಕೆ ವೆಚ್ಚ ಕಡಿಮೆಯಾಗುತ್ತದೆ, ನಾವು ಎಲ್ಲ ಉಗ್ರಾಣಗಳನ್ನು ಕಟ್ಟುತ್ತೇವೆಯೋ ಅಲ್ಲಿ ರೈತರು ತಮ್ಮ ಮಾಲುಗಳನ್ನು ಶೇಖರಣೆ ಮಾಡಿಟ್ಟುಕೊಳ್ಳಬಹುದು, ಅವರಿಗೆ ನೀಡುವಂತಹ ಸರ್ಟಿಫಿಕೇಟ್ ಮೇಲೆ ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದು, ಒಳ್ಳೆಯ ದರ ಬಂದಾಗ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದು ಮತ್ತು ಚೆಕ್ ಮುಖಾಂತರ ಅವರ ವ್ಯವಹಾರ ಸುಗಮವಾಗಿ ಹಣ ಸಂದಾಯವಾಗುತ್ತದೆ. ಈ ಎಲ್ಲಾ ವಿಚಾರಗಳ ಬಗ್ಗೆ ಕೂಡ ಸಮಿತಿ ವಿಚಾರ ವಿನಿಯಮ ಮಾಡಿ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ದಯವಿಟ್ಟು ಎಲ್ಲರೂ ಸಹಕಾರ ಮಾಡಿ ಈ ವಿಧೇಯಕವನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ವಿರೋಧ ಪಕ್ಷದ ಸನ್ಮಾನ್ಯ ನಾಯಕರು, ಹಿರಿಯ ಸದಸ್ಯರೆಲ್ಲರ ಅಭಿಪ್ರಾಯ ಏನಿದೆ ಎಂದರೆ, ಈ ವಿಧೇಯಕದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ, ಆದರೆ ನಮಗೆ ಸಮಯ ಬೇಕು. ಆದರೆ ಈಗ ಸಮಯ ಇಲ್ಲದಿರುವುದರಿಂದ ಈ ವಿಧೇಯಕ ಈಗಾಗಲೇ ಏನು ಮಂಡನೆಯಾಗಿದೆ, ಇದು ಇಲ್ಲಿಯೇ ಇರಲಿ. ಮುಂದೆ ಅವಕಾಶ ಸಿಕ್ಕಾಗ ಇದರ ಬಗ್ಗೆ ಚರ್ಚೆ

ಮಾಡಿ ನಾವು ನಮ್ಮ ತೀರ್ಮಾನವನ್ನು ತಿಳಿಸುತ್ತೇವೆ. ಅದನ್ನು ಮಂಜೂರು ಮಾಡುವುದಕ್ಕಾಗುತ್ತದೆಯೋ-ಇಲ್ಲವೋ ಎಂಬುದನ್ನು ಆ ಸಂದರ್ಭದಲ್ಲಿ ತೀರ್ಮಾನ ಮಾಡೋಣ ಎಂಬುದು ಅವರ ಅಭಿಪ್ರಾಯ. ಹೀಗಿರುವಾಗ ಸರ್ಕಾರದ ಅಭಿಪ್ರಾಯ ಏನಿದೆ, ಇಲ್ಲ ಇದು ಈಗಲೇ ಆಗಬೇಕು, ಇದನ್ನು ಚರ್ಚೆ ಮಾಡಿ, ತೀರ್ಮಾನ ಮಾಡಿ ಪಾಸ್ ಮಾಡಿಕೊಡಬೇಕೆಂಬುದು ತಮ್ಮ ಅಭಿಪ್ರಾಯವೇ? ಅಥವಾ ಪರವಾಗಿಲ್ಲ, ಮುಂದಕ್ಕೆ ಹಾಕೋಣ ಎನ್ನುವುದು ತಮ್ಮ ಅಭಿಪ್ರಾಯವೇ?

**ಶ್ರೀ ಶಾಮನೂರು ಶಿವಶಂಕರಪ್ಪ:-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಿ ತೀರ್ಮಾನ ಮಾಡುವುದೇ ಒಳ್ಳೆಯದು ಎಂಬುದು ನಮ್ಮ ಅಭಿಪ್ರಾಯ ಕೂಡ ಆಗಿದೆ.

**ಸಭಾಪತಿಯವರು:-** ಚರ್ಚೆ ಮಾಡುವುದು ಒಳ್ಳೆಯದು ಹೌದು, ಆದರೆ ಸಮಯದ ಪ್ರಶ್ನೆ ಕೂಡ ಇದೆ. ಈಗಾಗಲೇ ಸಮಯ ಸಂಜೆ 5 ಗಂಟೆ 30 ನಿಮಿಷಗಳಾಗಿವೆ. ಈ ಮಸೂದೆಯ ಬಗ್ಗೆ ಚರ್ಚೆ ನಡೆಸಿದ ನಂತರ ಆ ಬಗ್ಗೆ ಸಭೆ ಏನು ತೀರ್ಮಾನ ಮಾಡುತ್ತದೆಯೋ ನನಗೆ ಗೊತ್ತಿಲ್ಲ. ಈ ವಿಧೇಯಕದ ವಿಚಾರದಲ್ಲಿ ಏನು ಮಾಡಬೇಕೆಂದು ಹೇಳಿ ಎಂಬುದಕ್ಕಾಗಿ ನಾನು ಸಭೆಯ ಮುಂದೆ ಇಡುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, it has to be discussed by the House. That is the process. By seeing the presence here, ನಾವು ಇದರ ಮೇಲೆ ಚರ್ಚೆ ಮಾಡೋಣ ಎನ್ನುವಂತಹ ಒಂದು ವಿನಂತಿಯನ್ನು ಮಾಡುತ್ತಿದ್ದೇವೆ. ಮಂತ್ರಿ-ಮಹೋದಯರ ವಿಚಾರದಲ್ಲಿ ನಮ್ಮ ವಿರೋಧವೇನೂ ಇಲ್ಲ, ಆದರೆ ಈ ವಿಧೇಯಕದ ವಿಚಾರದಲ್ಲಿ ನಾವು ಚರ್ಚೆ ಮಾಡಬೇಕಾಗಿದೆ. We are going to discuss about it. ಈಗಾಗಲೇ ಹಿರಿಯರೆಲ್ಲರೂ ಈ ವಿಚಾರವನ್ನು ತಿಳಿಸಿರುವುದರಿಂದ ದಯಮಾಡಿ ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ.

**ಶ್ರೀ ಶಾಮನೂರು ಶಿವಶಂಕರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚರ್ಚೆ ಮಾಡಲಿ, ನಾವು ಚರ್ಚೆ ಮಾಡುವುದು ಬೇಡವೆನ್ನುವುದಿಲ್ಲ. ಆದರೆ ಇದು ರೈತರಿಗೆ ಅನುಕೂಲವಾಗುವಂತಹ ವಿಧೇಯಕವೇ ಹೊರತು ರೈತರಿಗೆ ಅನ್ಯಾಯ ಮಾಡತಕ್ಕಂತಹ ವಿಧೇಯಕವಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಮತ್ತೊಮ್ಮೆ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವಂತಹ ವಿಚಾರವನ್ನು ನಾವು ತಿಳಿಸುತ್ತಿದ್ದೇವೆ. ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಕೂಡ ಸದನದ ಅನುಮತಿಯನ್ನು ಪಡೆಯಬೇಕಾಗುತ್ತದೆ. It becomes a part of the problem.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ ಈ ವಿಚಾರದಲ್ಲಿ ತಾವೇನಾದರೂ ಸಚಿವರ ಸಹಾಯಕ್ಕೆ ಬರುತ್ತೀರಾ?

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಒಂದು ಹೊಸ ಅಧ್ಯಾಯ ಪ್ರಾರಂಭವಾಗಬೇಕು ಎನ್ನುವುದು ನಮ್ಮ ಹಿರಿಯ ಸಚಿವರ ಅಭಿಪ್ರಾಯವಿದ್ದರೆ ನಾವು ಅದಕ್ಕೆ ತಯಾರಿದ್ದೇವೆ. ಹೊಸ ಸಂಪ್ರದಾಯ ಅದರೆ, ಮಂಡನೆ ಮಾಡುವಾಗಲೇ ಏನು ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಬೇಕೆನ್ನುವುದು ನಿಮ್ಮ ಅಪೇಕ್ಷೆಯಾಗಿದ್ದರೆ ಅದಕ್ಕೆ ವಿರೋಧ ಪಕ್ಷದ ನಾವೆಲ್ಲರೂ ಸಿದ್ಧರಿದ್ದೇವೆ, ಅಥವಾ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಾವಿದ್ದೇವೆ, ಆಡಳಿತ ಪಕ್ಷದಲ್ಲಿರುವುದು ಬೆರಳೆಣಿಕೆಯಷ್ಟು ಜನ ಮಾತ್ರ. ಇಷ್ಟು ಜನ ಈ ಸದನದಲ್ಲಿ ಇಷ್ಟು ದೊಡ್ಡ ಅಪೇಕ್ಷೆಗಳನ್ನು ವ್ಯಕ್ತಪಡಿಸಿದಾಗ ಕೂಡ ಆಡಳಿತ ಪಕ್ಷ ಅದಕ್ಕೆ ಮನ್ನಣೆ ನೀಡುವುದಿಲ್ಲ ಎನ್ನುವುದಾದರೆ ಅವರು ವಿಧೇಯಕವನ್ನು ಮಂಡನೆ ಮಾಡುವಾಗಲೇ ನಾವು ಏನು ಮಾಡಬೇಕು ಎಂಬುದನ್ನು ನೋಡುತ್ತೇವೆ. ಚರ್ಚೆ ಅನಂತರವಲ್ಲವೆ, ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಬಿಟ್ಟರೆ ತಾನೆ ಚರ್ಚೆ ಪ್ರಾರಂಭವಾಗುವುದು.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನಮ್ಮ ಸದನದಲ್ಲಿ wrong precedent ಆಗುವುದು ಬೇಡ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಮಂತ್ರಿಗಳೇ, ಈ ವಿಧೇಯಕದ ವಿಚಾರದಲ್ಲಿ ನೀವು ನಿಮ್ಮ ಜೊತೆಯಲ್ಲಿರುವಂತಹವರ ಜೊತೆಯಲ್ಲಿ ಪರ್ಯಾಲೋಚಿಸುವುದಕ್ಕಿಂತ ನಮ್ಮ ಜೊತೆಯಲ್ಲಿ ಚರ್ಚಿಸುವುದಾದರೆ ಅವರಿಗಿಂತಲೂ ಹೆಚ್ಚಾಗಿ ನಾವು ನಿಮ್ಮ ಪರವಾಗಿಯೇ ಮಾತನಾಡುತ್ತೇವೆ.

5–30 ಗಂಟೆ

ಏಕೆಂದರೆ ನಾಳೆ ಸರ್ಕಾರ ಈ ಬಿಲ್ಲನ್ನು ತರುವ ಸಂದರ್ಭದಲ್ಲಿ ನೀವು ಬಿಲ್ಲನ್ನು ಇನ್ನೂ ಮೂವ್ ಮಾಡಿಲ್ಲ. Your intention to move the Bill for consideration ಆಗಿಲ್ಲ, ಈ ಬಿಲ್ಲಿನ ಬಗ್ಗೆ ಚರ್ಚೆ ಮಾಡಿಲ್ಲ.

**Mr. CHAIRMAN:-** The Bill is laid on the floor of the House through the Secretary. ಅಲ್ಲಿಂದ ಮುಂದಕ್ಕೆ ಹೋಗಿಲ್ಲ. ಅವರು ಮಂಡಿಸುವುದಕ್ಕೆ ಪರ್ಮಿಶನ್ ಕೇಳಬೇಕು.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಕಾರ್ಯದರ್ಶಿಯವರು lay ಮಾಡಿದ್ದು ಅಷ್ಟೆ. ಮಾನ್ಯ ಸಚಿವರು ಮಂಡನೆ ಮಾಡಬೇಕಾದರೆ ಸದನದ ಅನುಮತಿ ಬೇಕು.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾ ನಾಯಕರೆ, kindly trust us. Kindly trust us and we also trust you. We will allow the Hon'ble Minister to move the Bill for consideration. Once it is done, it will lie over. Then the discussion part of it will take place later.

**Mr. CHAIRMAN:-** Whatever the House decides, I am with the House.

**ಶ್ರೀ ಎಂ.ಸಿ. ನಾಣಯ್ಯ:–** ಇಲ್ಲವೆಂದರೆ ಸುಮ್ಮನೆ difficulty arises.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾವು ವಿಧೇಯಕವನ್ನು ಪಾಸ್ ಮಾಡುವುದಿಲ್ಲವೆಂದು ಹೇಳುವುದಿಲ್ಲ, ನಮಗೆ ಚರ್ಚೆಗೆ ಅವಕಾಶ ಬೇಕು, ಸಮಯಾವಕಾಶ ಬೇಕೆಂದು ಕೇಳುತ್ತಿದ್ದೇವೆ. ಕೊನೇಘಳಿಗೆಯಲ್ಲಿ ವಿಧೇಯಕವನ್ನು introduce ಮಾಡುತ್ತಿದ್ದೀರಿ.

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:-** ನೀವು ಮೆಜಾರಿಟಿ ಇದೆ ಎಂದು ಈ ರೀತಿ ಮಾಡುತ್ತಿದ್ದೀರಾ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಖಂಡಿತ ಇಲ್ಲ.

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:-** ಇದರಲ್ಲಿ ಪ್ರತಿಷ್ಠೆ ಬೇಡ ಎಂದು ನಾವು ಹೇಳುತ್ತಿರುವುದು.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಇದು question of majority ಅಲ್ಲ. ತಾವು ಸಭಾಪತಿಯವರು, ತಾವು ಈ ಸದನದ ಗೌರವ ಹೆಚ್ಚಬೇಕೆಂದು ಈಗಾಗಲೇ ಬೇರೆ ಬೇರೆ ವೇದಿಕೆಗಳಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದನ್ನು ನಾನು ಹೇಳಬೇಕಾಗಿಲ್ಲ. ನಮ್ಮ ವಿಧಾನ ಪರಿಷತ್ತಿನ ನಡವಳಿಕೆಯಲ್ಲಿ ರೂಲ್ 78ರ ಪ್ರಕಾರ ಮಂಡನೆಗೆ ಅನುಮತಿ ಕೋರಿ ಪ್ರಸ್ತಾಪ ಮಾಡಬೇಕು. ಅದು ಈ ಕೆಳಕಂಡಂತೆ ಇದೆ:

> **"78.ಮಂಡನೆಗೆ ಅನುಮತಿ ಕೋರಿ ಪ್ರಸ್ತಾಪ:- ವಿಧೇಯಕವನ್ನು ಮಂಡಿಸುವ ಪ್ರಸ್ತಾವಕ್ಕೆ ಅನುಮತಿ ದೊರೆತ ನಂತರ, ಪ್ರಸ್ತಾವದ ಸಂಬಂಧದಲ್ಲಿ ವಿಧೇಯಕವನ್ನು ಮಂಡಿಸುವವರು ಸಂಕ್ಷಿಪ್ತ ವಿವರಣಾತ್ಮಕ ಹೇಳಿಕೆಯನ್ನು ಕೊಡಬಹುದು ಅದಕ್ಕೆ ವಿರೋಧ ಕಂಡು ಬಂದಲ್ಲಿ ಅದನ್ನು ವಿರೋಧಿಸುವ ಸದಸ್ಯರಿಗೆ ಸಂಕ್ಷಿಪ್ತ ವಿವರಣಾತ್ಮಕ ಹೇಳಿಕೆಯನ್ನು ನೀಡಲು ಹಾಗೂ ವಿಧೇಯಕವನ್ನು ಮಂಡಿಸಿದ ಸದಸ್ಯರಿಗೆ ಸಂಕ್ಷಿಪ್ತ ಉತ್ತರ ನೀಡಲು ಅನುಮತಿ ಕೊಡಬಹುದು ಮತ್ತು ಆ ತರುವಾಯ ಯಾವುದೇ ಚರ್ಚೆಗೆ ಅವಕಾಶವಿಲ್ಲದೆ ಆ ಕುರಿತು ಪ್ರಶ್ನೆ ಹಾಕತಕ್ಕದ್ದು:**

ಈ ರೀತಿ ರೂಲ್ ಇದೆ. ಅದನ್ನು ಪ್ರಯೋಗ ಮಾಡಬೇಕು ಎಂಬ ಅಪೇಕ್ಷೆ ಬಹುಶಃ ಅವರೆಲ್ಲರಿಗೂ ಇರಬೇಕು. ರೂಲಿಂಗ್ ಪಾರ್ಟಿಯವರಿಗೆ ಪ್ರಥಮ ಭಾರಿಗೆ ಇದರ ಒಂದು ಸ್ಯಾಂಪಲ್ ತೋರಿಸಬೇಕು ಎಂದು ಏನಾದರು ಮನಸ್ಸಿನಲ್ಲಿದ್ದರೆ ಮಾಡಿ ಸರ್.

**ಶ್ರೀ ದಿನೇಶ್ ಗುಂಡೂರಾವ್ (ಆಹಾರ ಹಾಗು ಗ್ರಾಹಕರ ವ್ಯವಹಾರಗಳ ನಾಗರೀಕ ಸರಬರಾಜು ರಾಜ್ಯ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ವಿಧೇಯಕ ಮಂಡನೆ ಆಗಲಿ, ಒಂದು ಗಂಟೆ ಕಾಲ ಈ ವಿಧೇಯಕದ ಬಗ್ಗೆ ಚರ್ಚೆ ಮಾಡೋಣ. ಚರ್ಚೆ ಆದಮೇಲೆ ಅದು ಅಂಗೀಕಾರ ಆಗಬೇಕೆ, ಬೇಡವೆ ಎಂಬುದನ್ನು ಈ ಸದನ ತೀರ್ಮಾನ ಮಾಡಲಿ. ಆಮೇಲೆ ಪರ್ಯಾಲೋಚನೆ ನಂತರ ಅಂಗೀಕಾರಕ್ಕೆ ಹೋಗೋಣ.

**ಶ್ರೀ ಡಿ.ವಿ. ಸದಾನಂದಗೌಡ:–** ಮುಂದಿನ ಅಧಿವೇಶನದಲ್ಲಿ ಮಂಡನೆ ಮಾಡಿ. ಏಕೆ ತರಾತುರಿ?

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ಸಭಾಪತಿಯವರೆ, ಈ ವಿಧೇಯಕ ಈಗಾಗಲೇ ಕೆಳಮನೆಯಲ್ಲಿ ಸಾಕಷ್ಟು ಚರ್ಚೆ ಮಾಡಿ ಅಂಗೀಕಾರವಾಗಿ ಬಂದಿದೆ. ಇದರಲ್ಲಿ ಏನಾದರು ಲೋಪದೋಷಗಳು ಇದ್ದರೆ ಹೇಳಿ, ಏನಾದರು ಅಮೆಂಡ್‌ಮೆಂಟ್ ಮಾಡಬೇಕೆಂದು ಇದ್ದರೆ ಅದನ್ನು ಹೇಳಿ, ನಂತರ ಅದರ ಬಗ್ಗೆ ತೀರ್ಮಾನ ಮಾಡೋಣ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ದಿನೇಶ್ ಗುಂಡೂರಾಯರೆ, ಮೊನ್ನೆ ಕೂಡ ಕೆಳಗಿನ ಮನೆಯಲ್ಲಿ ಒಂದು ವಿಧೇಯಕ ಮಂಡನೆ ಆಗಿತ್ತು. ಅದು ಯಾವುದಕ್ಕೆ ರೆಫರ್ ಆಗಿದೆ ಎಂಬುದು ನಿಮಗೆ ತಿಳಿದಿರಬಹುದಲ್ಲವೆ? ಗೊತ್ತಿದೆ ತಾನೆ?

**ಶ್ರೀ ದಿನೇಶ್ ಗುಂಡೂರಾವ್:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಮಗೆ ಮೆಜಾರಿಟಿ ಇದೆ ಎಂದು ಹೇಳಿ ಪ್ರತಿಯೊಂದು ಸಲ ಆ ರೀತಿ ಮಾಡುವುದು ಬೇಡ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಇದರಿಂದ ರೈತರಿಗೆ ಯಾವುದೇ ರೀತಿಯಾದಂತಹ ತೊಂದರೆ ಆಗುವುದಿಲ್ಲ ಎನ್ನುವುದಾದರೆ ಚರ್ಚೆ ಮಾಡಿ, ತಮ್ಮ ಮನಸ್ಸಿಗೆ ಒಪ್ಪುವುದಾದರೆ ಒಪ್ಪಿಗೆ ಕೊಡಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ನಾಣಯ್ಯನವರೆ, ಬಹಳ ಹೊತ್ತು ಈ ರೀತಿ fluid ಆಗಿ ಇರುವುದಕ್ಕೆ ಆಗುವುದಿಲ್ಲ. ಸಭಾ ನಾಯಕರು ಏನು ಹೇಳುತ್ತಾರೆ ಎಂದು ಕೇಳೋಣ, ನಂತರ ಮುಂದಕ್ಕೆ ಹೋಗೋಣ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೀವು ಪಾಸ್ ಮಾಡಿಕೊಡುತ್ತೀರಿ ಎನ್ನುವ ವಿಶ್ವಾಸದಿಂದ ನಾವು introduce ಮಾಡುತ್ತೇವೆ. ನಾವು ನಿಮಗೆ ಬೇಕಾದಷ್ಟು ಕಾಲಾವಕಾಶ ಕೊಡುತ್ತೇವೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, what you want us to do? ಏನು ಮಾಡಬೇಕು ಎಂಬುದನ್ನು ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಈಗ introduce ಮಾಡಲಿ.

**ಶ್ರೀ ಎಂ.ಸಿ. ನಾಣಯ್ಯ:–** ಹಾಗಾದರೆ ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣವೆ?

**ಶ್ರೀ ಎಸ್.ಆರ್. ಪಾಟೀಲ್:–** ನೀವು ಪಾಸ್ ಮಾಡಿಕೊಡುತ್ತೀರ ಎನ್ನುವ ಭರವಸೆ ನಮಗಿದೆ, ಇದಕ್ಕೆ ಬೇಕಾದಷ್ಟು ಕಾಲಾವಕಾಶವನ್ನು ತೆಗೆದುಕೊಳ್ಳಿ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, let them not go back.

**ಶ್ರೀ ಎಸ್.ಆರ್. ಪಾಟಿಲ್:-** ಸರ್ಕಾರ ಎಲ್ಲಾ ಸಮಯದಲ್ಲಿಯೂ ಸಹ ನಿಮ್ಮ ಜೊತೆಯಲ್ಲಿ ಸಹಕಾರ ನೀಡುತ್ತದೆ. ಬಹುತೇಕವಾಗಿ ಇಷ್ಟು ಸೌಹಾರ್ದಯುತವಾಗಿ ಅಧಿವೇಶನ ನಡೆದಿರುವುದು ಇದೇ ಮೊದಲ ಸಲ ಎಂದು ಕಾಣುತ್ತಿದೆ. ನಾನು ಶಾಸಕನಾಗಿ ಸುಮಾರು 16 ವರ್ಷಗಳು ಕಳೆದಿದೆ. ನಿಮ್ಮ ಟೀಕೆಗಳನ್ನು ಸ್ವಾಗತ ಮಾಡುತ್ತೇವೆ, ನಿಮ್ಮ ರಚನಾತ್ಮಕ ಸಲಹೆಗಳನ್ನು ಸ್ವಾಗತ ಮಾಡುತ್ತೇವೆ, ನೀವು ಹೇಳಿದಂತೆ ಬಹಳಷ್ಟು ಸಂದರ್ಭದಲ್ಲಿ ನಮ್ಮ ಸರ್ಕಾರದಲ್ಲಿ adamant nature ಏನಿಲ್ಲ. ನಾವು ಯಾವಾಗಲಾದರು adamant ಆಗಿ ವರ್ತನೆ ಮಾಡಿದ್ದೇವೆಯೇ ಹೇಳಿ. ಮಾನ್ಯ ಶಾಣಪ್ಪನವರೆ, ನಮ್ಮ ಸರ್ಕಾರ ಯಾವಾಗಲಾದರು adamant ಆಗಿ ವರ್ತನೆ ಮಾಡಿದ್ದೇವೆಯೇ? ಯರನ್ನಾದರು ಮೆಚ್ಚಿಸಬೇಕೆಂಬ ಭಾವನೆಯಿಂದ ಒಂದು ಮಾತನ್ನೇನಾದರು ಮಾತನಾಡಿದ್ದೇವೆಯೇ? ದಯಮಾಡಿ ಹೇಳಿ. ನಿಮ್ಮ ವಿಚಾರಗಳಿಗೆ, ನಿಮ್ಮ ಚರ್ಚೆಗಳಿಗೆ ಎಲ್ಲದಕ್ಕೂ ಬಹಳ ಗೌರವ ಕೊಟ್ಟಿದ್ದೇವೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಇಬ್ಬರೂ ಸೇರಿಕೊಂಡು ಈ ರಾಜ್ಯದ ಜನತೆಗೆ ಒಳ್ಳೆಯದು ಮಾಡಬೇಕು. ನೀವು ಅನೇಕ ಸಂದರ್ಭಗಳಲ್ಲಿ ಹೇಳುವಂತಹ ಟೀಕೆ ಟಿಪ್ಪಣಿಗಳು ಏನಿವೆ ಅವು ಅತ್ಯುತ್ತಮವಾದಂತಹ ಆಡಳಿತ ಕೊಡುವುದಕ್ಕೆ, ಜನಪರ ಆಡಳಿತ ಕೊಡುವುದಕ್ಕೆ ನಮಗೆ ಬಹಳಷ್ಟು ಸಹಾಯವಾಗುತ್ತದೆ. ನೀವು ಮೊಸರಿನಲ್ಲಿ ಕಲ್ಲು ಹುಡುಕುವಂತಹ ಕೆಲಸ ಮಾಡಿದ್ದೀರೆಂದು ನಾವು ಹೇಳಲಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:-** ಆದುದರಿಂದಲೇ ನಾವು ಹೇಳಿದ್ದು, ತಮಗೆ ಒಳ್ಳೆಯ ಸಲಹೆಗಳನ್ನು ಕೊಡಬೇಕೆಂದರೆ ಇದನ್ನು ಓದಿಕೊಂಡು ಬರುತ್ತೇವೆ, ಸ್ವಲ್ಪ ಕಾಲಾವಕಾಶ ಕೊಡಿ ಎಂದು ಕೇಳಿದ್ದೇವೆ.

**ಶ್ರೀ ಎಸ್.ಆರ್. ಪಾಟಿಲ್:-** ಹಾಗಾದರೆ introduce ಮಾಡಲಿ ಬಿಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೆ, it is already a property of the House. The Secretary has laid the papers before the House. At present, it is a property of the House.

**ಶ್ರೀ ಎಸ್.ಆರ್. ಪಾಟಿಲ್:-** ಸನ್ಮಾನ್ಯ ಸಭಾಪತಿಯವರೆ, introduce ಮಾಡುವುದರಿಂದ ಏನು ತಪ್ಪಾಗುತ್ತದೆ?

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೆ, introduce ಮಾಡಿದರೆ ಏನು ಸಾಧಿಸದಂತೆ ಆಗುತ್ತದೆ?

**ಶ್ರೀ ಎಸ್.ಆರ್. ಪಾಟಿಲ್:-** ಅಷ್ಟಾದರು ಆಗಲಿ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೆ, ನಾನು ಒಂದು ಮಾತನ್ನು ಹೇಳುತ್ತೇನೆ, ನೀವು introduce ಮಾಡುವಾಗ ಏನು ಹೇಳುತ್ತೇನೆ ಮಾನ್ಯ ಸಭಾಪತಿಯವರು, he will put it for voting of the House. The Bill will come up for considering his intention to move the Bill. This is the first part. Second part is, it should be taken up for consideration. ನಾವೇನು ಅದಕ್ಕೆ ವಿರೋಧಿಸುವುದಿಲ್ಲ, but, subject to the condition you agree that the discussion part of it and voting part of it will be taken up in the next Session. With that understanding, you kindly do that. Nothing to worry. ಅದನ್ನು ಮಾಡೋಣ ಬಿಡಿ, ಇದರ ಬಗ್ಗೆ ಏಕೆ ಚರ್ಚೆ ಮಾಡುತ್ತೀರಿ, ಏನು ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತೆ ಆಡುತ್ತಿದ್ದೀರಲ್ಲ.

**ಶ್ರೀ ಎಸ್.ಆರ್. ಪಾಟಿಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು introduce ಮಾಡಲಿ, it is a mutual trust.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಚರ್ಚೆಗೆ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಮಾನ್ಯ ಸಭಾನಾಯಕರು ಹೇಳಬೇಕು.

**ಶ್ರೀ ಎಸ್.ಆರ್. ಪಾಟಿಲ್:-** ಮಾನ್ಯ ಸಭಾಪತಿಯವರೇ, what do you mean by 'mutual trust'? ನಾನು ನನ್ನ ಬದುಕಿನಲ್ಲಿ ಇದೂವರೆವಿಗೂ, ಇವತ್ತು ನನ್ನ ಹುಟ್ಟಿದಹಬ್ಬ, mistrust ಎಂದೂ ಮಾಡಿಲ್ಲ. I will never eat

my words. It is my way of life. It is my style of functioning. ನೀವು ನನ್ನ ಬಗ್ಗೆ ಮಾತನಾಡಿದಂತಹ ಅಭಿಮಾನದ ಮಾತುಗಳು ಏನಿದೆ, ಅದನ್ನು ಅರಗಿಸಿಕೊಳ್ಳುವುದಕ್ಕೂ ಸಹ ಕಷ್ಟವಾಗುತ್ತಿದೆ. ನನ್ನನ್ನು ಬಹಳ ಎತ್ತರಕ್ಕೆ ಹೊಯ್ದ್ ನನ್ನ ಬಗ್ಗೆ ಮಾತನಾಡಿದಿರಿ. ನಿಮ್ಮ ಬಗ್ಗೆ ಅಪಾರವಾದಂತಹ ಗೌರವ ಇದೆ ಎಂದು ಅನೇಕ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರು ಹೇಳಿದ್ದಾರೆ, introduce ಮಾಡಲಿ. ನೀವು ಸಮಯ ತೆಗೆದುಕೊಂಡು ಸಾಕಷ್ಟು ಅಧ್ಯಯನ ಮಾಡಿ, ನಿಮಗೆ ಖಂಡಿತವಾಗಿಯೂ ಮನಃಪರಿವರ್ತನೆ ಆಗುತ್ತದೆ. ಮಾನ್ಯ ಶಾಣಪ್ಪನವರೆ ನೀವು ಸಮಯ ತೆಗೆದುಕೊಂಡರೆ ನಿಶ್ಚಿತವಾಗಿ ಎಲ್ಲರೂ ಬದಲಾವಣೆ ಆಗುತ್ತೀರಿ, ನಮ್ಮ ಪರ ಬರುತ್ತೀರಿ. Mr. Chairman Sir, let the Bill be introduced.

**ಸಭಾಪತಿಯವರು:-** ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣೆ ನಿಯಂತ್ರಣ) ವಿಧೇಯಕ 2013ನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

## ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

## ಕರ್ನಾಟಕ ಎಣ್ಣೆ ತಾಳೆ(ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ನಿಯಂತ್ರಣ) ವಿಧೇಯಕ, 2013

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013 ರ ಕರ್ನಾಟಕ ಎಣ್ಣೆ ತಾಳೆ(ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಈ ವಿಧೇಯಕವನ್ನು ಜಾರಿಗೆ ತರಲಾಗಿದೆ. ನಮ್ಮ ರಾಜ್ಯದಲ್ಲಿರುವ ತಾಳೆ ಬೆಳೆಗಾರರ ಹಿತಾಸಕ್ತಿಗಾಗಿ ಈ ವಿಧೇಯಕವನ್ನು ಜಾರಿಗೆ ತರಲಾಗುತ್ತಿದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಗಳೇ, ಈಗ ಕೃಷಿ ಮಾರುಕಟ್ಟೆ ಸಚಿವರು ಮಂಡನೆ ಮಾಡಿರತಕ್ಕ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ನಿಯಂತ್ರಣ) ವಿಧೇಯಕ ಬಗ್ಗೆ ನಮ್ಮ ಸಹಮತ ಇದೆ. ಇದನ್ನು pass ಮಾಡಲಿಕ್ಕೆ ಯಾವುದೇ ಅಭ್ಯಂತರವಿಲ್ಲ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಎಣ್ಣೆ ತಾಳೆ(ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 25ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 25ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 25ರವರೆಗೆ ಈ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013 ರ ಕರ್ನಾಟಕ ಎಣ್ಣೆ ತಾಳೆ(ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಕರ್ನಾಟಕ ಎಣ್ಣೆ ತಾಳೆ(ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ (ಎರಡನೇ ತಿದ್ದುಪಡಿ) ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಶಾಮನೂರು ಶಿವಶಂಕರಪ್ಪ (ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013 ರ **ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ**

**(ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ)** ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಈಗ ಸಚಿವರು **ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ಎರಡನೇ ತಿದ್ದುಪಡಿ)** ವಿಧೇಯಕವನ್ನು ಪರ್ಯಾಲೋಚನೆಗಾಗಿ ಮಂಡಿಸಿದ್ದಾರೆ. ಸಮಯದ ಅಭಾವ ಇರುವುದರಿಂದ ಇದರ ಬಗ್ಗೆ ಮುಂದೆ ಇದಕ್ಕಾಗಿ ಸಮಯಾವಕಾಶವನ್ನು ಮಾಡಿಕೊಂಡು ಚರ್ಚೆ ಮಾಡೋಣ. ಈಗ ಈ ನಿರ್ಣಯ it is on the floor of the House. ವಿದೇಯಕವನ್ನು ಸದನದಲ್ಲಿ ಮಂಡಿಸಲಾಗಿದೆ. ಇದರ ಬಗ್ಗೆ ಚರ್ಚೆಯನ್ನು ಮುಂದಿನ ದಿವಸಗಳಲ್ಲಿ ನಮಗೆ ಅನುಕೂಲ ಆದಾಗ ಸಮಯವನ್ನು ಹೊಂದಿಸಿಕೊಂಡು ವಿಧೇಯಕವನ್ನು ತೆಗೆದುಕೊಳ್ಳೋಣ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಗಮನ ಸೆಳೆಯುವ ಸೂಚನೆಗಳಿವೆ, ಅದಕ್ಕೆ ಉತ್ತರ ನೀಡಬೇಕು.

**ಶ್ರೀ ಎಸ್.ಆರ್. ಪಾಟಿಲ್:–** ಮಾನ್ಯ ಸಭಾಪತಿಗಳೇ, ಗಮನ ಸೆಳೆದಿರತಕ್ಕ ಎಲ್ಲಾ ಸದಸ್ಯರುಗಳಿಗೂ ಉತ್ತರವನ್ನು ಕಳುಹಿಸಿಕೊಡಲಾಗುವುದು.

**ಸಭಾಪತಿಯವರು:–** ಇವತ್ತು Agenda ದಲ್ಲಿ list ಆಗಿರುವ ಮತ್ತು ಈಗಾಗಲೇ ಅರ್ಜಿ ನೀಡಿರತಕ್ಕ ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮ 330 ಮೇರೆಗೆ ಚರ್ಚೆಗಳ ಉತ್ತರವನ್ನು ಸಂಬಂಧಪಟ್ಟ ಸಚಿವರುಗಳಿಂದ ಆಯಾ ಸದಸ್ಯರುಗಳಿಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೇ, ಈಗಾಗಲೇ ಅರ್ಜಿ ನೀಡಿರತಕ್ಕ ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮ 330

ಮೇರೆಗೆ ಚರ್ಚೆಗಳ ಉತ್ತರವನ್ನು ಸಂಬಂಧಪಟ್ಟ ಸಚಿವರುಗಳಿಂದ ಆಯಾ ಸದಸ್ಯರುಗಳಿಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಈಗಾಗಲೇ ಅರ್ಜಿ ನೀಡಿರತಕ್ಕ ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮ 330 ಮೇರೆಗೆ ಚರ್ಚೆಗಳ ಉತ್ತರವನ್ನು ಸಂಬಂಧಪಟ್ಟ ಸಚಿವರುಗಳಿಂದ ಆಯಾ ಸದಸ್ಯರುಗಳಿಗೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**ಸಾರಾಂಶ**

**ಮಾನ್ಯ ಸಭಾಪತಿಯವರು:**

ವಿಧಾನ ಪರಿಷತ್ತಿನ 122ನೇ ಅಧಿವೇಶನದ ಮುಂದುವರೆದ ಉಪವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಪೂರ್ವದಲ್ಲಿ ಈ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರಗಳನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನ ರಜಾ ದಿನಗಳನ್ನು ಹೊರತುಪಡಿಸಿ 14 ದಿವಸಗಳು ನಡೆಸಲಾಗಿರುತ್ತದೆ.

ದಿನಾಂಕ: 12.07.2013 ರಂದು ಮಧ್ಯಾಹ್ನ 12.15 ಗಂಟೆಗೆ ಕಾರ್ಯಕಲಾಪ ಪ್ರಾರಂಭಗೊಂಡಿತು. 2013–14ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ಮೃತರಾದ ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಐದನೇ ಹಾಗೂ ಆರನೇ ಪಟ್ಟಿಗಳು, ಅರ್ಜಿಗಳ ಸಮಿತಿಯ 22ನೇ ವರದಿ, ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ ಮೊದಲನೆಯ

ವರದಿ, ಭರವಸೆಗಳ ಸಮಿತಿಯ 43ನೇ ವರದಿ ಹಾಗೂ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 2ನೇ ವಿಶೇಷ ವರದಿ (ಭಾಗ–1)ಯನ್ನು ಸದನದಲ್ಲಿ ಮಂಡಿಸಲಾಯಿತು.

ಅರ್ಜಿಗಳ ಸಮಿತಿಯ ಹತ್ತು ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 2013ನೇ ಸಾಲಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆ ವರದಿ (ಸಂಖ್ಯೆ–7)ಯನ್ನು ಮಂಡಿಸಲಾಯಿತು.

ದಿನಾಂಕ: 17ನೇ ಜೂನ್, 2013ರಂದು ಉತ್ತರಾ ಖಂಡ ರಾಜ್ಯದ ಕೇದಾರನಾಥ, ಯಮುನೋತ್ರಿ ಹಾಗೂ ಗಂಗೋತ್ರಿ ಪುಣ್ಯ ಕ್ಷೇತ್ರಗಳಲ್ಲಿ ಪ್ರಕೃತಿ ವಿಕೋಪದಿಂದ ಸಂಭವಿಸಿದ ಜಲಪ್ರಳಯದಲ್ಲಿ ಸಿಲುಕಿದ್ದ ರಾಜ್ಯದ ಯಾತ್ರಿಕರನ್ನು ಸುರಕ್ಷಿತವಾಗಿ ರಕ್ಷಿಸಿ ರಾಜ್ಯಕ್ಕೆ ಕರೆತರಲು, ರಾಜ್ಯ ಸರ್ಕಾರವು ನಿಯೋಜಿಸಿದ್ದ ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ರಾಜ್ಯ ಸಚಿವರಾದ ಶ್ರೀ ಸಂತೋಷ್ ಲಾಡ್ ಅವರು ಈ ನಿಟ್ಟಿನಲ್ಲಿ ಸಲ್ಲಿಸಿರುವ ಸೇವೆಯು ಅತ್ಯಂತ ಶ್ಲಾಘನೀಯ ಹಾಗೂ ಅಭಿನಂದನೀಯ ಕಾರ್ಯಕ್ಕೆ ಈ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಿರುತ್ತದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ **“ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ”**ವೆಂದು ಮರು ನಾಮಕರಣ ಮಾಡಿರುವ ಕೇಂದ್ರ ಸರ್ಕಾರಕ್ಕೆ ಹಾಗೂ ಇದಕ್ಕಾಗಿ ಶ್ರಮಿಸಿದವರೆಲ್ಲರಿಗೂ ಸಹ ಈ ಸದನವು ಅಭಿನಂದನೆಯನ್ನು ಸಲ್ಲಿಸಿರುತ್ತದೆ.

ಕುಮಾರಿ ಅಶ್ವಿನಿ ಅಂಗಡಿಯವರು **“ಯುವಧ್ವನಿ”** ಸಂಘಟನೆಯ ಮೂಲಕ ಅಂಗವಿಕಲರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಅವರ ವಿಶಿಷ್ಟ ಸೇವೆಯನ್ನು ಗುರುತಿಸಿ ವಿಶ್ವ ಸಂಸ್ಥೆಯು ಜುಲೈ 12ರ ಮಲಾಲಾ

ದಿನಾಚರಣೆಯಂದು 'ಗಾರ್ಡನ್ ಬ್ರೇನ್' ಪ್ರಶಸ್ತಿ ನೀಡಿರುವುದನ್ನು ಈ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಿರುತ್ತದೆ.

ವಿಧಾನ ಪರಿಷತ್ತಿನ ಸಚಿವಾಲಯದ ಸಹಾಯಕ ಚರ್ಚಾ ಸಂಪಾದಕರಾದ ಶ್ರೀ ಎಸ್. ನಂಜುಡಸ್ವಾಮಿ ಅವರು "ಮಂಡ್ಯ ಜಿಲ್ಲೆಯ ಶಾಸನಗಳು–ಒಂದು ಅಧ್ಯಯನ" ಎಂಬ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪಿ.ಹೆಚ್.ಡಿ(ಡಾಕ್ಟರೇಟ್) ಪದವಿಯನ್ನು ಪ್ರಧಾನ ಮಾಡಿರುವುದಕ್ಕೆ ಈ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಿರುತ್ತದೆ.

ಭೂ ಒತ್ತುವರಿ ತೆರವುಗೊಳಿಸುವ ಸಮಿತಿಯ ಅಧ್ಯಕ್ಷರಾದ ಶ್ರೀ ಬಾಲಸುಬ್ರಮಣ್ಯರವರು ಪತ್ರಿಕೆಯೊಂದರ ಸಂದರ್ಶನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ವಿ. ಸದಾನಂದಗೌಡ ರವರ ಹೆಸರನ್ನು ಉಲ್ಲೇಖಿಸಿ ಆಪಾದನೆ ಮಾಡಿರುವ ವಿಷಯವನ್ನು ಪರಿಶೀಲನೆಗಾಗಿ ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 1172 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 210 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, 185 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಮತ್ತು 10 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು ಹಾಗೂ ಒಟ್ಟು 956 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ, 820 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

ಶೂನ್ಯವೇಳೆಯಲ್ಲಿ 54 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 40 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು.

ನಿಯಮ 72ರಡಿಯಲ್ಲಿ 165 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 20+ ಮತ್ತು 1 ಸೂಚನೆಗಳನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿರುತ್ತದೆ. ನಿಯಮ 330 ರಡಿಯಲ್ಲಿ 113 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 6 ಸೂಚನೆಗಳನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ ನಿಯಮ 59ರಡಿಯಲ್ಲಿ 2 ಸೂಚನೆಯನ್ನು ಸ್ವೀಕರಿಸಿದ್ದು, ಸದರಿ ಸೂಚನೆಗಳನ್ನು ನಿಯಮ 68ರಡಿಯಲ್ಲಿ ಚರ್ಚೆಗೆ ತೆಗೆದುಕೊಂಡು 1 ಸೂಚನೆಯನ್ನು ಸದನದಲ್ಲಿ ಚರ್ಚಿಸಿ ಉತ್ತರಿಸಲಾಗಿರುತ್ತದೆ.

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 07 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ ಹಾಗೂ ವಿಧಾನ ಪರಿಷತ್ತು 01 ವಿಧೇಯಕಕ್ಕೆ ಅಂಗೀಕಾರವನ್ನು ನೀಡಿರುತ್ತದೆ ಹಾಗೂ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ "ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ"ವನ್ನು ಜಂಟಿ ಪರಿಶೀಲನಾ ಸಮಿತಿಗೆ ವಹಿಸುವ ಪ್ರಸ್ತಾವನೆಗೆ ಸದನವು ಅಂಗೀಕಾರ ನೀಡಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ವರದಿಗಾರರಿಗೆ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರ ಮತ್ತು ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ ನೌಕರ ವರ್ಗದವರಿಗೆ, ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾಳೆಯಿಂದ ಏನು ಮಾಡುವುದು ಎನ್ನುವ ಆಲೋಚನೆ ಬರುವುದು ಪ್ರಾರಂಭವಾಗಿದೆ. ಕಳೆದ 14 ದಿನಗಳಲ್ಲಿ ಅತ್ಯಂತ ಯಶ್ವಸಿಯಾಗಿ, ಅತ್ಯಂತ ಉತ್ತಮ ರೀತಿಯಲ್ಲಿ ರಾಜ್ಯದ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಮತ್ತು ಅದಕ್ಕೆ ಒಳ್ಳೆಯ ರೀತಿಯ ಉತ್ತರಗಳನ್ನು ಪಡೆದುಕೊಳ್ಳುವಂತಹ ಕೆಲಸಕಾರ್ಯಗಳನ್ನು ನಾವೆಲ್ಲರೂ ಈ ಸದನದಲ್ಲಿ ಮಾಡಿದ್ದೇವೆ. ಇದಕ್ಕೆ ಪೂರ್ಣ ಕಾರಣಕರ್ತರು ತಾವು. ಈಗ ಕೊಟ್ಟಂತಹ ವರದಿಯಲ್ಲಿ ಅದರ

ಫಲಿತಾಂಶಗಳನ್ನು ನೋಡಿದರೆ striking rate ಸುಮಾರು 90%ಗಿಂತ ಮೇಲೆ ಇರುವುದು. ಶೂನ್ಯವೇಳೆ ಪ್ರಸ್ತಾವಗಳಿಗೆ ತಾವು 90% striking rate ಗಿಂತ ಹೆಚ್ಚು ಎಲ್ಲ ಉತ್ತರವನ್ನು ಕೊಡಿಸಿದ್ದೀರಿ. ಸರ್ಕಾರ ಉತ್ತರ ಕೊಡುತ್ತಿರಲಿಲ್ಲ ಎಂದು ನಾನೇನು ಹೇಳುತ್ತಿಲ್ಲ. ಆದರೆ ಅದಕ್ಕೊಬ್ಬ ಪ್ರೇರಕ ಬೇಕು, ಪ್ರಚೋದನೆ ಮಾಡುವವರು ಬೇಕು ಮತ್ತು ಅದನ್ನು motivate ಮಾಡುವಂತವರು ಬೇಕು. ಈ ಎಲ್ಲ ಕೆಲಸ ಕಾರ್ಯಗಳನ್ನು ಅತ್ಯಂತ ಸೂಕ್ತವಾಗಿ ಮಾಡಿ ವಿಶೇಷವಾಗಿ ವಿಪಕ್ಷದವರಿಗೆ ನಾವು ಅರ್ಥಪೂರ್ಣವಾದ ಕಲಾಪಗಳಲ್ಲಿ ಭಾಗವಹಿಸಿದ್ದೇವೆ ಎಂದು ಹೇಳಿಕೊಳ್ಳುವ ರೀತಿಯಲ್ಲಿ ಸದನ ನಡೆದಿದೆ. ಇದಕ್ಕೆ ಕಾರಣೀಕರ್ತರಾದ ತಮಗೆ ವಿಶೇಷವಾಗಿ ವಿಪಕ್ಷದ ಪರವಾಗಿ ಹೃತ್ಪೂರ್ವಕ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇನ್ನು ಸಭಾನಾಯಕರ ಬಗ್ಗೆ ಬೆಳಗ್ಗೆಯೇ ಹೇಳಿದ್ದೇನೆ, ಕ್ರಿಕೆಟ್ ತಂಡದಲ್ಲಿ batsman, bowler fielder ಎಂದು ಒಂದೊಂದರಲ್ಲಿ ಒಬ್ಬೊಬ್ಬರು ಪರಿಣಿತರು ಇರುತ್ತಾರೆ. ಆದರೆ ಇತ್ತೀಚೆಗೆ All-rounder ಗಳು ಬಹಳ ಕಡಿಮೆಯಾಗಿದ್ದಾರೆ. ಆದರೆ ನಮ್ಮ ಸದನದಲ್ಲಿ All-rounder ಆಗಿ ಮಾನ್ಯ ಎಸ್.ಆರ್. ಪಾಟೀಲ್‌ರವರು ಮೆರೆದಿರುವುದನ್ನು ನಾನು ಕಂಡಿದ್ದೇನೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇವತ್ತೆ Man of the Match ಕೊಡಲು ಆಗುವುದಿಲ್ಲ. ಮುಂದಿನ ದಿನಗಳಲ್ಲಿ ಅದನ್ನು ಅವರೆ ಪಡೆದುಕೊಳ್ಳುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ. ಅವರು ಇಡೀ ತಂಡವನ್ನು ನಿಭಾಯಿಸಿದ್ದಾರೆ. ಪ್ರತಿಪಕ್ಷಗಳಿಗೆ ಅವರು ಪ್ರತಿಪಕ್ಷದವರಾಗಿ ನಡೆದುಕೊಳ್ಳಲು ಏನೇನು ಸಹಕಾರವನ್ನು ಆಡಳಿತ ಪಕ್ಷದವರು ಕೊಡಬಹುದು ಎನ್ನುವುದಕ್ಕೆ ಅವರು ಮಾರ್ಗಸೂತ್ರಗಳನ್ನು ಹಾಕಿಕೊಂಡಿದ್ದಾರೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಅವರು ವಿರೋಧ ಪಕ್ಷದಲ್ಲಿ ಕುಳಿತ್ತಿದಾಗ ನಾನು ಅವರನ್ನು ನೋಡಿದ್ದೇನೆ. ಅವರು ಇಲ್ಲಿ ಕುಳಿತಾಗ ಸ್ವಲ್ಪ ಕಿರಿಕಿರಿಯನ್ನು ಮಾಡುತ್ತಿದ್ದರು. ಈಗ ಅಲ್ಲಿ ಹೋದ ಮೇಲೆ ಎಲ್ಲವನ್ನು ಬಿಟ್ಟಿದ್ದಾರೆ. ಇದು ಭಯಂಕರ ಆಶ್ಚರ್ಯವನ್ನು ಉಂಟು ಮಾಡಿದೆ. ಇಡೀ ಮಂತ್ರಿಮಂಡಲವನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಯಾವುದೇ ಪ್ರಶ್ನೆಗಾಗಲಿ ಚೆನ್ನಾಗಿಯೇ

ಉತ್ತರ ಕೊಟ್ಟಿದ್ದಾರೆ. ಅವರ ತಾಳ್ಮೆಯನ್ನು ಪರೀಕ್ಷೆ ಮಾಡುವಾಗ ನಾವೇ ವಿಫಲರಾಗಿದ್ದೇವೆಯೇ ಹೊರತು ಅವರು ಎಲ್ಲದರಲ್ಲಿಯು ಯಶಸ್ವಿಯಾಗಿದ್ದಾರೆ. ಹೊಸ ತಂಡ ಒಳ್ಳೆಯ ರೀತಿಯಲ್ಲಿ ಉತ್ತರವನ್ನು ಕೊಟ್ಟಿದೆ. ಅದಕ್ಕಾಗಿ ನಾನು ಅವರಿಗ ಅಭಿನಂದನೆಗಳನ್ನು ಸಲ್ಲಿಸಲು ಇಚ್ಚೆಪಡುತ್ತೇನೆ. ಪ್ರತಿಪಕ್ಷದವರ ಜೊತೆಯಲ್ಲಿರುವ ಜೆಡಿಎಸ್ ಮಿತ್ರರಾದ ಮಾನ್ಯ ನಾಣಯ್ಯನವರು, ಮಾನ್ಯ ಹೊರಟ್ಟಿಯವರು ಈ ಸಾರಿ collective ಆಗಿ ಒಮ್ಮೊಮ್ಮೆ ನಾಣಯ್ಯನವರು ಆಡಳಿತ ಪಕ್ಷದವರ ಪರವಾಗಿ ಹೋದರು ಕೂಡಾ ವಿರೋಧ ಪಕ್ಷವಾಗಿ ಕೆಲಸ ಮಾಡುವಾಗ ಅವರು ನಮಗೆ ತುಂಬಾ ಪ್ರೇರಣೆಯನ್ನು ಕೊಟ್ಟಿದ್ದಾರೆ. ಅವರ presentation ರೀತಿ ನಮಗೆ ವಿರೋಧ ಪಕ್ಷದಲ್ಲಿ ಕುಳಿತು ಇನ್ನು ಹೆಚ್ಚು ಕೆಲಸ ಕಾರ್ಯಗಳನ್ನು ಮಾಡಲು ಸಹಾಯವನ್ನು ನೀಡಿದ್ದಾರೆ. ಅದಕ್ಕಾಗಿ ಜೆಡಿಎಸ್ ನಾಯಕರಾದ ಮಾನ್ಯ ನಾಣಯ್ಯನವರಿಗೆ ಮತ್ತು ಅವರ ತಂಡದವರಿಗೆ ನಾನು ಕೃಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ಪಕ್ಷದ ಸದಸ್ಯರಂತು ಅದ್ಬುತ ಅದರ ಬಗ್ಗೆ ಎರಡು ಮಾತಿಲ್ಲ. ಏಕೆಂದರೆ ನಮ್ಮ ಸದಸ್ಯರ ಹಾಜರಾತಿಯನ್ನು ನೋಡಿ, ನಮ್ಮ ಹಾಜರಾತಿಯನ್ನು ನೋಡಿ ಆಡಳಿತ ಪಕ್ಷದವರಿಗೆ ಹೆದರಿಕೆಯಾಗುತ್ತಿದೆ, ಬಾಕಿ ವಿಷಯಕ್ಕೆ ಅಲ್ಲ, ವಿರೋಧ ಪಕ್ಷದ ತಂಡ ಅದ್ಬುತವಾಗಿ ಕೆಲಸ ಮಾಡಿದೆ. ಭಾರತೀಯ ಜನತಾ ಪಾರ್ಟಿಯ ಪ್ರತಿಯೊಬ್ಬ ಸದಸ್ಯರು ಮಾತನಾಡಿದ್ದಾರೆ ಇದು note ಮಾಡಿಕೊಳ್ಳುವಂತಹ ಸಂಗತಿ.

**ಪ್ರೊ: ಎಸ್.ಆರ್. ಲೀಲಾ:-** ಸದಸ್ಯರು ಹಾಗು ಸದಸ್ಯಣೀಯರು ಎಂದು ಹೇಳಬೇಕಾಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಸದಸ್ಯರು ಎಂದರೆ ಅದರಲ್ಲಿ ಸದಸ್ಯಣೀಯವರು ಇದ್ದಾರೆ ಎನ್ನುವುದು ನನ್ನ ಭಾವನೆ ಅವರು ಏಕೊ ಸ್ವಲ್ಪ ಪ್ರತ್ಯೇಕತಾವಾದವನ್ನು ಮಂಡಿಸುತ್ತಿದ್ದಾರೆ. ಅಧಿಕಾರಿ ವರ್ಗದವರು, ಮಾಧ್ಯಮ ಮಿತ್ರರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದರೆ ಮಾಧ್ಯಮ ಮಿತ್ರರು ಮೇಲ್ಮನೆಯ ಕಲಾಪಗಳನ್ನು ಸ್ವಲ್ಪ ಕಡಿಮೆ ತೋರಿಸುತ್ತಾರೆ, ಅದಕ್ಕೆ ನನಗೇನು ಬೇಜಾರಿಲ್ಲ. ಆದರೆ ಮಾಧ್ಯಮದವರು ಒಂದು ವಿಮರ್ಶೆಯನ್ನು ಬರೆಯಬೇಕು

ಎನ್ನುವುದು ನನ್ನ ಅಪೇಕ್ಷೆಯಾಗಿದೆ. ಈ ಮನೆಯ ಚರ್ಚೆ ಮತ್ತು ಕೆಳಮನೆಯ ಚರ್ಚೆಗಳನ್ನು ವಿಶ್ಲೇಷಣೆ ಮಾಡಿ ಎಲ್ಲ ಪತ್ರಕರ್ತರು ಒಂದು article ನ್ನು ತಯಾರು ಮಾಡಿದರೆ, ಅದು ಹೆಚ್ಚು ಸೂಕ್ತವಾಗುತ್ತದೆ ಎಂದು ನಾನು ಭಾವಿಸುತ್ತೇನೆ, ವಿಷಯಗಳ ಬಗ್ಗೆ, ಅದರ ಗಾಂಭೀರತೆ ಬಗ್ಗೆ ಬರೆಯಬೇಕು. ಪರ್ತಕರ್ತ ಮಿತ್ರರರಿಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸಲು ನಾನು ಬಯಸುತ್ತೇನೆ. ಗ್ಯಾಲರಿಯಲ್ಲಿ ಕುಳಿತ್ತಿರುವ ಅಧಿಕಾರಿಗಳನ್ನು ನಾವು ಆಗಾಗ ತರಾಟೆಗೆ ತೆಗೆದುಕೊಳ್ಳುವುದು ಜಾಸ್ತಿ. ಏಕೆಂದರೆ ಅವರನ್ನು ತರಾಟೆಗೆ ತೆಗೆದುಕೊಂಡಷ್ಟು ನಮಗೆ kick ಕೊಡುತ್ತದೆ. Kick ಎಂದರೆ ಸಾಯಂಕಾಲದ kick ಅಲ್ಲ. ಇನ್ನು ಸಿಬ್ಬಂದಿ ವರ್ಗದವರು, ಕಾರ್ಯದರ್ಶಿಯವರಿಂದ ಹಿಡಿದು ಅವರ ತಂಡ ನಾವು ಏನು ಕೇಳಿದರು, ಯಾವ ಸಮಯದಲ್ಲಿಯು ಕೇಳಿದರು ಬೇಸರಪಟ್ಟುಕೊಳ್ಳದೆ ನಮ್ಮ ಕೆಲಸವನ್ನು ಮಾಡಿದ್ದಾರೆ. ಆ ತಂಡ ನಮಗೆ ಸಹಕಾರವನ್ನು ಕೊಟ್ಟಿದೆ. ಈ ಕಲಾಪ ಅತ್ಯಂತ ಯಶ್ವಸಿಯಾಗಿದೆ ಎಂದು ನಾನು ಭಾವಿಸುತ್ತೇನೆ. ಉಪಸಭಾಪತಿಯವರ ಬಗ್ಗೆಯೇ ಹೇಳುವುದನ್ನು ಮರೆತಿದ್ದೇನೆ. ಕೆಲವು ಸಾರಿ ಪಕ್ಕದಲ್ಲಿರುವವರನ್ನೆ ಮರೆಯುತ್ತೇವೆ. ಆದರೆ ಇಷ್ಟು ದಪ್ಪ ಇರುವವರನ್ನು ಮರೆಯುತ್ತೇವೆ ಎಂದರೆ ಅದು ಅಕ್ಷಮ್ಯ ಅಪರಾಧ. ಆದರೆ ನಮ್ಮ ವಿಮಲಕ್ಕ ಕಲಾಪಗಳ ಬಗ್ಗೆ ಅಷ್ಟೆ ಅಲ್ಲ ಬೇರೆ ವಿಷಯಗಳಲ್ಲಿಯು ನನ್ನ ಪಕ್ಕದಲ್ಲಿ ಕುಳಿತು ಸಹಕಾರವನ್ನು ನೀಡಿದ್ದಾರೆ. ಕೆಲವು ಹೇಳಲಾರದ ಗುಟ್ಟಿನ ಸಂಗತಿಗಳು ಇವೆ. ಉಪಸಭಾಪತಿಗಳಾದ ನಮ್ಮ ವಿಮಲಕ್ಕನಿಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದು ಮನಮುಟ್ಟುವಂತಹ ಕಲಾಪವಾಗಿತ್ತು. ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವ ವಿಚಾರಗಳನ್ನು ವಿಮರ್ಶೆ ಮಾಡಿರುವಂತಹ ಕಲಾಪ ಇದಾಗಿದೆ. ಮತ್ತೊಮ್ಮೆ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಅಭಿನಂದನೆಗಳು.

**ಶ್ರೀ ಎಸ್.ಆರ್. ಪಾಟಿಲ್ (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಇದೇ ತಿಂಗಳ 12ನೇ ತಾರೀಖಿನಿಂದ ಪ್ರಾರಂಭವಾಗಿ ರಜಾ ದಿನಗಳನ್ನು ಹೊರತುಪಡಿಸಿ 14 ದಿನಗಳ ಕಾಲ ಅರ್ಥಪೂರ್ಣವಾದಂತಹ ಚರ್ಚೆಗಳು ಪ್ರಸಕ್ತ ಅಧಿವೇಶನದಲ್ಲಿ ನಡೆದಿವೆ ಎಂದು ಹೇಳಲು ನನಗೆ ಬಹಳ ಸಂತೋಷ

ಮತ್ತು ಅಭಿಮಾನವೆನ್ನಸುತ್ತದೆ. ನಾನು 15 ವರ್ಷಗಳಿಗಿಂತ ಹೆಚ್ಚು ಕಾಲ ಈ ಮನೆಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆ ಕಡೆಯು ಕುಳಿತು ಕೆಲಸ ಮಾಡಿದ್ದೇನೆ, ಈ ಕಡೆಯು ಕುಳಿತು ಕೆಲಸ ಮಾಡಿದ್ದೇನೆ. ಬಹಳಷ್ಟು ಅಧಿವೇಶನಗಳನ್ನು ನಾನು ನೋಡಿದ್ದೇನೆ. ಆದರೆ ಪ್ರಸಕ್ತ ಅಧಿವೇಶನದಲ್ಲಿ ನಿಜವಾಗಿಯು ಅರ್ಥಪೂರ್ಣವಾದ ಚರ್ಚೆಗಳು ಆಗಿವೆ. ಇದಕ್ಕೆ ಕಾರಣೀಭೂತರು ತಾವು ಎಂದು ಹೇಳಲು ನನಗೆ ಸಂತೋಷ ಮತ್ತು ಅಭಿಮಾನ ಎನ್ನಿಸುತ್ತದೆ. ಆ ಪೀಠದ ಘನತೆ–ಗೌರವಗಳನ್ನು ಹೆಚ್ಚಿಸುವುದರ ಜೊತೆಗೆ ಎಲ್ಲರನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಶತಮಾನದ ಇತಿಹಾಸವಿರುವ ಈ ಮೇಲ್ಮನೆಯ ಚಿಂತಕರ ಛಾವಡಿಯ ಗೌರವವನ್ನು ಹೆಚ್ಚಿಸಲು ತಾವು ಬಹುದೊಡ್ಡ ಕೊಡುಗೆಯನ್ನು ನೀಡಿದ್ದೀರಿ ಎಂದು ಹೇಳಲು ನನಗೆ ಬಹಳ ಸಂತೋಷವೆನ್ನುಸತ್ತದೆ. ತಾವು ಇಷ್ಟು ನಿಯಂತ್ರಣ ಮಾಡಿದ್ದರಿಂದ ಅರ್ಥಪೂರ್ಣವಾದ ಚರ್ಚೆಗಳು ಆಗಿವೆ. ಸರ್ಕಾರ ಕೆಲವು ಸಂದರ್ಭಗಳಲ್ಲಿ ಶೂನ್ಯವೇಳೆಯ ಪ್ರಸ್ತಾವಗಳಿಗೆ ಉತ್ತರವನ್ನು ಕೊಡಲು, ಲಿಖಿತ ಉತ್ತರಗಳನ್ನು ಒದಗಿಸಲು ನಮಗೂ ಸಹ ಆದೇಶವನ್ನು ಮಾಡಿ ಸರ್ಕಾರ ಸರಿಯಾದ ಸಮಯಕ್ಕೆ ಉತ್ತರವನ್ನು ಒದಗಿಸುವಂತೆ ನೋಡಿಕೊಂಡಿದ್ದೀರಿ. ಅಧಿವೇಶನದ ಅವಧಿಯಲ್ಲಿ ಯಾವ ರೀತಿಯ ಕೆಲಸ–ಕಾರ್ಯಗಳನ್ನು ಮಾಡಬೇಕು ಎನ್ನುವ ಬಗ್ಗೆ ಅತ್ಯುತ್ತಮವಾದ ಮಾರ್ಗದರ್ಶನ ನೀಡಿದ್ದೀರಿ. ಇದರಿಂದ ಇವತ್ತು ತಾವು ಆ ಪೀಠಕ್ಕಿಂತ ಎತ್ತರದಲ್ಲಿದ್ದೀರಿ ಎಂದು ಈ ಸಂದರ್ಭದಲ್ಲಿ ಹೇಳಲು ನನಗೆ ಬಹಳ ಅಭಿಮಾನವೆನ್ನಸುತ್ತದೆ.

6–00 ಗಂಟೆ

ಇನ್ನು ಅದರ ಜೊತೆಗೆ ಮಾನ್ಯ ಉಪಸಭಾಪತಿಯವರನ್ನೂ ಅಭಿನಂದಿಸಬೇಕಾಗಿದ್ದು, ಅವರು ಸಹ ಬಹಳಷ್ಟು ಕ್ರಿಯಾಶೀಲರಾಗಿದ್ದರು. ಮಾನ್ಯ ಸಭಾಪತಿಯವರಾದ ತಾವುಗಳ ಬಹಳಷ್ಟು ಸಂದರ್ಭದಲ್ಲಿ ಹೊರಗೆ ಹೋಗಿಲ್ಲ. ಅನೇಕ ಸಂದರ್ಭದಲ್ಲಿ ಮಾನ್ಯ ಉಪಸಭಾಪತಿಯವರು ಅತ್ಯುತ್ತಮವಾಗಿ ಪೀಠದ ಕಾರ್ಯ ನಿರ್ವಹಿಸಿರುವುದರಿಂದ ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಇನ್ನು ಪ್ರತಿಪಕ್ಷದ ನಾಯಕರಾದ ಶ್ರೀಯುತ ಸದಾನಂದಗೌಡರು ನಿಜವಾಗಲೂ ನಾಕಂಡ ಅಪರೂಪದ ವಿರೋಧ ಪಕ್ಷದ ನಾಯಕರೆಂದು ನಾನು ಭಾವಿಸುತ್ತೇನೆ ನಾನು ಆ ಕಡೆ ಕುಳಿತಾಗ ಕೆಲವು ಸಂದರ್ಭದಲ್ಲಿ ತಾಳ್ಮೆ ಕಳೆದುಕೊಂಡ ಉದಾಹರಣೆಗಳು ಇವೆ. ಆದರೆ ಮಾನ್ಯ ಸದಾನಂದಗೌಡರು ತಾಳ್ಮೆ ಕಳೆದುಕೊಳ್ಳದೇ ಸಮರ್ಥ ಪ್ರತಿಪಕ್ಷದ ನಾಯಕರಾಗಿ, ತಂಡದ ಜೊತೆ ಎಲ್ಲಾ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳುವುದಕ್ಕೆ ನನಗೆ ಸಂತೋಷವೆನಿಸುತ್ತಿದೆ. ನನ್ನ ದೃಷ್ಟಿಯಲ್ಲಿ ಆಳುವ ಪಕ್ಷವು ಮದ ಬಂದ ಆನೆಯ ರೀತಿ ಇದ್ದು, ಅದಕ್ಕೆ ಮಾವುತ ಅಂಕುಶವನ್ನು ಹಿಡಿದುಕೊಂಡು ಆನೆ ಯಾರಿಗೂ ಪ್ರಾಣಹಾನಿ, ಆಸ್ತಿ ಹಾನಿ ಮಾಡದಂತೆ ನೋಡಬೇಕು. ಈ ರೀತಿ ಸುಸಂಬದ್ಧವಾಗಿ ನಡೆಸಿಕೊಂಡು ಹೋಗಲು ಮಾವುತನ ಕೆಲಸವನ್ನು ಅರ್ಥಪೂರ್ಣವಾಗಿ ಮಾಡಿದ್ದಾರೆ. ಆಳುವ ಪಕ್ಷವು ಒಂದು ರೀತಿ ಪ್ರವಾಹ ಇದ್ದ ಹಾಗೆ ಇದ್ದು, ಅದನ್ನು ಹಾಗೆ ಬಿಟ್ಟರೆ ಎಲ್ಲಿ ಬೇಕಾದರೆ ಅಲ್ಲಿ ಹೋಗಬಹುದು, ಬೆಳೆ ಕೊಚ್ಚಿಕೊಂಡು ಹೋಗಿ ಹಾನಿ ಮಾಡಬಹುದು. ಅದಕ್ಕೆ embankment ಹಾಕಿ ಅತ್ಯಂತ ಸುಸಂಬದ್ಧವಾಗಿ ನೀರು ಹರಿಯಲು ಸಹಾಯ ಮಾಡುವ ರೀತಿಯಲ್ಲಿ ಪ್ರತಿಪಕ್ಷದ ಕಾರ್ಯವನ್ನು ಅತ್ಯಂತ ನಿರ್ವಂಚನೆಯಿಂದ ಮಾಡಿದ್ದಾರೆ. ಅನೇಕ ಸಂದರ್ಭದಲ್ಲಿ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮಾನ್ಯ ನಾಣಯ್ಯ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಪ್ರತಿಪಕ್ಷಗಳು ಮಾಡಿವೆ ಎಂದು ನಾನು ಹೇಳುವುದಿಲ್ಲ. ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು, ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷ ಮತ್ತು ಪ್ರತಿಪಕ್ಷಗಳು ಒಂದೇ ರಥದ ಎರಡು ಗಾಲಿಗಳು ಇದ್ದ ಹಾಗೆ. ಅವರು-ನಾವು ಜೊತೆಯಾಗಿ ಈ ನಾಡಿನ ಆರೂವರೆ ಕೋಟಿ ಜನರ ಕಲ್ಯಾಣಕ್ಕೆ ದುಡಿಯಬೇಕು. ಆಳುವ ಪಕ್ಷ ಎಂದಾಗ ಅಧಿಕಾರವನ್ನು ಮೀರಿ ನಡೆಯುವ ಸಂದರ್ಭದಲ್ಲಿ ತಪ್ಪು ಎಂದು ಕಂಡ ಬಂದಾಗ ಮಾನ್ಯ ಸದಾನಂದಗೌಡರ ಪಕ್ಷ ಹಾಗೂ ಮಾನ್ಯ ನಾಣಯ್ಯನವರ ಪಕ್ಷವು ರಚನಾತ್ಮಕವಾದ ಟೀಕೆಗಳನ್ನು ಮಾಡಿದೆ. ಟೀಕೆಗಳನ್ನು ಮಾಡಿದರೂ ಅವು constructive criticism ಆಗಿ

ಇರಬೇಕು, ಆದರೆ destructive criticism ಇರಬಾರದು. Destructive criticism ಗಳು ವಿರೋಧ ಪಕ್ಷಕ್ಕೆ ಭೂಷಣ ಅಲ್ಲ ಎಂದು ನಾನು ಭಾವಿಸುತ್ತೇನೆ. Destructive criticism ಏನೂ ಮಾಡಲಿಲ್ಲ. ಆ ರೀತಿ ಇದ್ದರೆ ನಾವು ಸುಸಂಬದ್ಧವಾದ, ಅತ್ಯುತ್ತಮ, ಪಾರದರ್ಶಕ ಹಾಗೂ ಅರ್ಥಪೂರ್ಣವಾದ ಆಡಳಿತ ಕೊಡಲು ತೊಂದರೆಯಾಗುತ್ತದೆ. Opposition Party's role is more important than Ruling Party. ನಮಗೆ ಇದ್ದಷ್ಟೆ ಜವಾಬ್ದಾರಿ ವಿರೋಧ ಪಕ್ಷಗಳಿಗೂ ಇದೆ. ಈ ನಾಡಿನ ಜನ ನಮ್ಮನ್ನು watch ಮಾಡಿದಂತೆ ಅವರನ್ನೂ watch ಮಾಡುತ್ತಿರುತ್ತಾರೆ. ನಾವು ನಡೆಯುವಾಗ ಎಡವುವುದು ಸಾಮಾನ್ಯ. ಆದರೆ ನಾವು ಎಡವುವ ಸಂದರ್ಭದಲ್ಲಿ ನಮಗೆ ಎಚ್ಚರಿಕೆ ಕೊಡುವ ಕೆಲಸ ಪ್ರತಿಪಕ್ಷದ್ದಾಗಿದೆ. ಮಾನ್ಯ ಸದಾನಂದಗೌಡರು ತಂಡದ ಜೊತೆ ಅತ್ಯುತ್ತಮವಾದ ಸಲಹೆ-ಸೂಚನೆಗಳು ಹಾಗೂ ರಚನಾತ್ಮಕವಾದ ವಿಚಾರಗಳನ್ನು ನೀಡಿ ಸರ್ಕಾರ ಉತ್ತಮವಾಗಿ ನಡೆಯಲು ಸಹಾಯಕವಾಗಿದ್ದಕ್ಕೆ ವಿಶೇಷವಾಗಿ ಗೌರವಪೂರ್ವಕವಾದ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**(ಈ ಹಂತದಲ್ಲಿ ಸದನ ಮೇಜು ಕುಟ್ಟಿ ಹರ್ಷ ವ್ಯಕ್ತಪಡಿಸಿತು)**

ಇನ್ನು ಮಾನ್ಯ ನಾಣಯ್ಯನವರು ಅತ್ಯಂತ ಹಿರಿಯರಾಗಿದ್ದು eminent Jurist ಆಗಿದ್ದಾರೆ. ಅವರು ವಾದ ಮಾಡಿದ ಕಡೆಯೇ ನಿರ್ಣಯ ಆಗುವಷ್ಟು ಮಟ್ಟಿಗೆ ಚರ್ಚೆ ಮಾಡುತ್ತಾರೆ. ಅವರಿಂದ ಕಲಿಯುವ ಬಹಳಷ್ಟು ವಿಚಾರಗಳು ಇವೆ.

**ಶ್ರೀ ಗೋ. ಮಧುಸೂದನ್:-** ಅವರು ಮಾತನಾಡುವಾಗ ಪ್ರತಿಯೊಬ್ಬರಿಗೂ ಅವರ ಕಡೆಯೇ ಮಾತನಾಡುತ್ತಿದ್ದಾರೆ ಎಂದೆನಿಸುತ್ತದೆ.

**Sri S.R. PATIL:-** He is an eminent Jurist, he may take bad case but he will argue in a good way and he will try to win the case. Most probably, he will win the case. Really, we are very proud to say this. ಅವರ ಹಿರಿತನ ಅನುಭವಕ್ಕೆ ಬಹಳಷ್ಟು ಗೌರವ ಸಲ್ಲಿಸಬೇಕು. ನಾನೊಬ್ಬ

ಸಭಾನಾಯಕನಾಗಿ ಅಪಾರವಾದ ಗೌರವ ಇದೆ. ಅದೇ ರೀತಿ ಮಾನ್ಯ ಹೊರಟ್ಟಿಯವರು ರಾಜ್ಯದಲ್ಲಿ ಮಾತ್ರವಲ್ಲದೇ ರಾಷ್ಟ್ರದಲ್ಲಿಯೇ ಅತ್ಯಂತ senior most MLC ಎಂದು ಭಾವಿಸಿದ್ದೇನೆ. Am I right?

**ಸಭಾಪತಿಯವರು:–** ಎಂಎಲ್‌ಸಿ ಎಂದು ಹೇಳಿದರು. ಸರಿಯಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಅವರಿಬ್ಬರ ಅನುಭವವು ಭಲೇಜೋಡಿ ಎನ್ನುವಂತೆ ಅತ್ಯುತ್ತಮವಾಗಿದ್ದು, ಜೆಡಿ(ಎಸ್) ಪಕ್ಷದಿಂದ ಬಹಳಷ್ಟು ಉಪಯುಕ್ತವಾದ ಸಲಹೆ–ಸೂಚನೆಗಳನ್ನು ನೀಡಿದ್ದಾರೆ. ಎಡವುವ ಸಂದರ್ಭದಲ್ಲಿ ಅವರು ಸರಿಯಾಗಿ ಮಾರ್ಗದರ್ಶನ ಮಾಡಿದ್ದಾರೆ. ಜೆಡಿ(ಎಸ್) ಪಕ್ಷದ ಎಲ್ಲ ಸದಸ್ಯರಿಗೂ ಸರ್ಕಾರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಇನ್ನು ದೃಶ್ಯ ಹಾಗೂ ಮುದ್ರಣ ಮಾಧ್ಯಮದ ಮಿತ್ರರು ಅತ್ಯುತ್ತಮವಾದ ಕೆಲಸ ಮಾಡಿದ್ದು, ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಪವಿತ್ರ ಚರ್ಚೆಯನ್ನು ಸಾಕ್ಷೀಕರಿಸಿ, ನಾಡಿನ ಜನರಿಗೆ ಭಿತ್ತರಿಸಿ, ನಮ್ಮ ಎಲ್ಲಾ ವಿಚಾರಗಳನ್ನು ತಿಳಿಸುವ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವಾಗಿ ಕೆಲಸ ಮಾಡಿದ್ದಾರೆ. It has done its work very beautifully and neatly. ಅದಕ್ಕೆ ಈ ಸಂದರ್ಭದಲ್ಲಿ ಮಾಧ್ಯಮದ ಗೌರವಾನ್ವಿತ ಮಿತ್ರರಿಗೂ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಇನ್ನು ನಮ್ಮ ಅಧಿಕಾರಿ ವರ್ಗದವರು ಸರ್ಕಾರಕ್ಕೆ ನಿಮಿಷ ನಿಮಿಷಕ್ಕೂ ಸರಿಯಾದ ಮಾಹಿತಿಗಳನ್ನು ಒದಗಿಸಿ, ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ಈ ದೃಷ್ಟಿಯಿಂದ ಪ್ರಾಮಾಣಿಕತೆ, ಬದ್ಧತೆ ಹಾಗೂ ನೀತಿಯುತವಾಗಿ ನಡೆಯುವಂತಹ ಅಧಿಕಾರಿ ಮಿತ್ರರನ್ನು ಹೊಂದಿದ್ದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.

ಇನ್ನು ವಿಶೇಷವಾಗಿ ನೂತನವಾಗಿ ಸಚಿವರಾಗಿರುವ ಯುವ ಸಚಿವರು ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ಪ್ರತಿ ಪಕ್ಷದ ಅನೇಕರು ನೂತನ ಯುವ ಸಚಿವರ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದಾರೆ. They have done a wonderfull job.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ॥ ಎಸ್.ಆರ್. ಲೀಲಾರವರು ತೆರಳಲು ಅನುವಾದಾಗ ಅವರ ಕಾಲಿಗೆ ವೈಯರ್ ಸಿಕ್ಕಿ ಎಡವಿದರು)**

**ಶ್ರೀ ಎಸ್.ಆರ್. ಪಾಟಿಲ್:–** ಏನಾಯಿತು.

**ಸಭಾಪತಿಯವರು:–** ವೈಯರ್ ಕಾಲಿಗೆ ಸಿಕ್ಕಿ ಎಡವಿದರು, ಅದನ್ನು ಸರಿಮಾಡಿಸುತ್ತೇನೆ. ಅದನ್ನು ಬದಲಾವಣೆ ಮಾಡಿ ಬೇರೆ ರೀತಿ ಮಾಡಿಸುತ್ತಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಬರುವ ಅಧಿವೇಶನದೊಳಗೆ ಇದನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಗೋ. ಮಧುಸೂದನ್:–** ಈಗ ಕಾರ್ಡ್‌ಲೆಸ್ ಬಂದಿದೆ.

**ಸಭಾಪತಿಯವರು:–** ಆಯಿತು, ಮಾಡೋಣ.

**ಶ್ರೀ ಎಸ್.ಆರ್. ಪಾಟಿಲ್:–** ಮಂತ್ರಿಮಂಡಲದ ಎಲ್ಲಾ ಸದಸ್ಯರು ಸೇರಿದಂತೆ ಯುವಕ ಮಂತ್ರಿಗಳು ನಿರೀಕ್ಷೆಗೂ ಮೀರಿ ಅದ್ಭುತವಾದ ಪ್ರತಿಭೆಯನ್ನು ವ್ಯಕ್ತಮಾಡಿ, ಸರ್ಕಾರವನ್ನು ಮುನ್ನೆಡೆಸಲು ಸಹಾಯ ಮಾಡುವುದರ ಜೊತೆಗೆ ಹಿರಿಯ ಸಚಿವರ ಅಪಾರ ಮಾರ್ಗದರ್ಶನದಲ್ಲಿ ಅತ್ಯುತ್ತಮವಾದ ಕೆಲಸ ಮಾಡಿದ್ದು, ಈ ಸಂದರ್ಭದಲ್ಲಿ ಹಿರಿಯ ಸಚಿವರು ಹಾಗೂ ಯುವ ಸಚಿವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕಡೆ ನಮ್ಮ ಸಂಖ್ಯೆ ಬಹಳ ಕಡಿಮೆ ಇದ್ದು, ಅವರದ್ದು ದೈತ್ಯ ಮೆಜಾರಿಟಿ ಇದ್ದು, ಕಡಿಮೆ ಸಂಖ್ಯೆಯಿದ್ದರೂ ನಮ್ಮ ಸದಸ್ಯರು ಬಹಳಷ್ಟು ಕ್ರಿಯಾಶೀಲತೆಯಿಂದ ಸದನದಲ್ಲಿ ಪಾಲ್ಗೊಳ್ಳುವುದರ ಮೂಲಕ ನಮ್ಮೆಲ್ಲರಿಗೂ ಮಾರ್ಗದರ್ಶನ ಕೊಟ್ಟಿದ್ದಾರೆ. ಇದಲ್ಲದೇ ಪ್ರತಿಪಕ್ಷದ ಸಚೇತಕರು ಹಾಗೂ ನಮ್ಮ ಸಚೇತಕರು ಇಬ್ಬರನ್ನೂ ಅಭಿನಂದಿಸಬೇಕು. ಅವರ ಕೆಲಸವು herculean task ಇದ್ದಂತೆ, it is not so easy job for you. ಅಧಿವೇಶನ ಮುಗಿದ ನಂತರ ಅವರಿಬ್ಬರು ಆರಾಮವಾಗಿರುತ್ತಾರೆ. ಇವರಿಬ್ಬರು ಅತ್ಯುತ್ತಮವಾದ ಕೆಲಸ–ಕಾರ್ಯಗಳನ್ನು

ಮಾಡಿ ಸದನಕ್ಕೆ ಸಹಾಯ–ಸಹಕಾರ ಮಾಡಿದ್ದು, ಅವರನ್ನು ಅಭಿನಂದಿಸುತ್ತೇನೆ.

ಇನ್ನು ಕಾರ್ಯದರ್ಶಿಯವರಾದ ಶ್ರೀ ಶ್ರೀಶ್‌ರವರ ನೇತೃತ್ವದ ಸಿಬ್ಬಂದಿ ವರ್ಗ ಬಹಳಷ್ಟು ಮಾಹಿತಿಗಳನ್ನು ಒಂದು ಕ್ಷಣ ತಡಮಾಡದೇ ಸಮಯಕ್ಕೆ ಸರಿಯಾಗಿ ಒದಗಿಸಿ, ಸುಸಂಬದ್ಧವಾಗಿ ಮತ್ತು ಅರ್ಥಪೂರ್ಣವಾದ ಕಲಾಪ ನಡೆಯಲು ಅನುಕೂಲ ಮಾಡಿರುವುದನ್ನು ನೆನಪಿಸಿಕೊಂಡು ಕೃತಜ್ಞತೆ ಅರ್ಪಿಸುತ್ತೇನೆ. ಸನ್ಮಾನ್ಯ ಸಭಾಪತಿಯವರೇ, ಈ ನಾಡಿನ ಗೌರವಾನ್ವಿತ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಸಿದ್ದರಾಮಯ್ಯನವರು ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ, ಸೇವಾ ಮನೋಭಾವ ಮತ್ತು ಕರ್ತವ್ಯ ಪ್ರಜ್ಞೆಗೆ ಮತ್ತೊಂದು ಹೆಸರು ಎಂದು ಹೇಳಬಹುದು. ಪಾರದರ್ಶಕವಾಗಿರುವ ಮತ್ತು ಇರುವುದನ್ನು ಇದ್ದ ಹಾಗೆ ಹೇಳುವ ಜಾಯಮಾನದ ಮುಖ್ಯಮಂತ್ರಿಗಳು ಎಂದರೆ ತಪ್ಪಾಗಲಾರದು. ನಮ್ಮ ಸರ್ಕಾರದ ಮುಖ್ಯಮಂತ್ರಿಗಳೆಂದು ನಾನು ಹೊಗಳುತ್ತಿಲ್ಲ. ನಮ್ಮ ಮುಖ್ಯಮಂತ್ರಿಗಳಿಗೆ ಮತ್ತು ಕಾನೂನು ಸಂಸದೀಯ ಸಚಿವರಾಗಿರುವಂತಹ ಮಾನ್ಯ ಜಯಚಂದ್ರರವರಿಗೆ ತಾವು ಎಷ್ಟೋ ಬಾರಿ ಹೇಳಿ ಕಳುಹಿಸಿದ್ದೀರಿ, 'ಮಾನ್ಯ ಸಭಾಪತಿಯವರ ಆದೇಶ ಬಂದಿದೆ ಅಥವಾ ಸಭಾಪತಿಯವರು ಹೇಳಿದ್ದಾರೆ ನೀವು ಬರಬೇಕು' ಎಂದು ಹೇಳಿದರೆ, ತಮ್ಮ ಮಾತಿಗೆ ಬಹಳಷ್ಟು ಗೌರವವನ್ನು ಕೊಟ್ಟು, ತಾವು ಯಾವಾಗ ಹೇಳಿದರೆ ಆಗ ಈ ಸದನಕ್ಕೆ ಹಾಜರಾಗಿದ್ದಾರೆ. ಅಷ್ಟೇ ಕ್ರಿಯಾಶೀಲವಾಗಿ ಈ ಸದನದಲ್ಲಿ ಪಾಲ್ಗೊಂಡು ಅಧಿವೇಶನ ಅರ್ಥಪೂರ್ಣವಾಗಿ ನಡೆಯುವುದಕ್ಕೆ ಸಹಕರಿಸಿದ್ದಾರೆ. ಅವರ ಸಹಾಯ ಮತ್ತು ಸಹಕಾರಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಟಿ.ಬಿ. ಜಯಚಂದ್ರರವರ ಮಾರ್ಗದರ್ಶನವೂ ನಮಗೆ ಬಹಳಷ್ಟು ಉಪಯುಕ್ತವಾಗಿದೆ ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಎಲ್ಲರಿಗೂ ಹೃದಯಪೂರ್ವಕವಾದ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನು ಒಂದು ಅಂಶವನ್ನು ಮರೆತಿದ್ದೆ. ನಮ್ಮ ಮುಖ್ಯಸಚೇತಕರು ಬೆಳಿಗ್ಗೆ ಎಲ್ಲರಿಗೂ ಫೋನ್ ಸದನದಲ್ಲಿ ನಮ್ಮಗಳ ಹಾಜರಾತಿಯ ಬಗ್ಗೆ ತಿಳಿಸುತ್ತಿದರು. ಇದರ ಜೊತೆಗೆ ಬಾಕಿ ಕೆಲಸಗಳನ್ನು ಮಾಡುತ್ತಿದ್ದರು. ನಾನು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅವರ ಹೆಸರನ್ನು ಪ್ರಸ್ತಾಪ ಮಾಡುವುದಕ್ಕೆ ಮರೆತುಬಿಟ್ಟಿದ್ದೆ, ಅವರಿಗೆ ನನ್ನ ಪರವಾಗಿ ವಿಶೇಷವಾಗಿರುವಂತಹ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಸಭಾನಾಯಕರು ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಆದರೆ, ನಮ್ಮವರಿಗೆ ನಾನು ಹೇಳಲಿಲ್ಲ ಎನ್ನುವ ಹಾಗೆ ಆಗಬಾರದೆನ್ನುವ ದೃಷ್ಟಿಯಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾ ನಾಯಕರಿಗೆ, ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲ ಮಂತ್ರಿವರ್ಗದವರಿಗೆ, ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ವರದಿಗಾರರಿಗೆ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ ಮತ್ತು ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ ನೌಕರ ವರ್ಗದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿರುವುದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(ಈ ಹಂತದಲ್ಲಿ ರಾಷ್ಟ್ರಗೀತೆಯೊಂದಿಗೆ ಸದನವನ್ನು ಸಂಜೆ 6 ಗಂಟೆ 13 ನಿಮಿಷಗಳಿಗೆ ಅನಿರ್ದಿಷ್ಟಾವಧಿಯವರೆಗೆ ಮುಂದೂಡಲಾಯಿತು.)**